ಇಷ್ಟೆಲ್ಲವನ್ನು ಕುರಿತು ಮೊದಲೇ ಧವಿಷ್ಯ ನೌಡವೆಂಬಂತೆ ಸೂಚಿಸಿದ್ದೆವು. ಆದರೂ ಕಮ್ಮಿಟಿಯಲ್ಲಿ ಯಾವುದಾರರೊಂದು ಶುಭಾಶಾಂಕ್ಷೆಯಂದ ಸ್ವಲ್ಪ ಮಟ್ಟಿನ ತಿದ್ದುಪಡಿಗಳು ಕಾಂಬಿಗಿ ಹೋಗೂ ಒಳ್ಳೆತೇ ಆಗಬಹುದೆಂಬ ಭಾವನೆಯು ಇದ್ದಿತು. ಹೈಲಿಯವರು ೧೦ ಕೋಟಿ ರೂಪ್ಯಾ ವ್ಯಯದ ವರೆಗೂ ಸಿದ್ಧವಾಗಿರದೆ ಫೆಡರೇಶನು ಸಾಧ್ಯವಿಲ್ಲ ಎಂಬ ಕಾರಣದಿಂದ, ಆ ವ್ಯಯವನ್ನು ಹೊರುವುದು ಬಡ ಪ್ರಜೆಗಳಿಗೆ. ಅಸಾಧ್ಯವಿದೆಯಾದ ದೆನೆಯಿಂದ, ಆರ್ಥಿಕ ದುರವಸೆಯು ಮೋಡಗಳು ಮಾಯವಾಗುವ ತನಕ ಫೆಡರೇಶನು ಎಷ್ಟೂದರೂ ಒಂದು ಕನಸಿನ ಗಂಜೇ ಮಾತ್ರ.

ವಾಸ್ತವ್ಯವೈ, ಆಶಾವಾದಿಗಳಲ್ಲಿ ಒಬ್ಬರಿಬ್ಬರು ಬಾಯಿ ಬಿಟ್ಟು, ತಾವು ನೋಡಿದ ದೃಶ್ಯವೆಲ್ಲ ಮಾಯೆಯೇ ಎಂದು ತಿಳಿದುದನ್ನು ವಿವರಿಸಿದ್ದಾರೆ. ಶ್ವೇತಪತ್ರದ ಅಕ್ಷರಗಳೊಂದನ್ನು ತಿದ್ದಲಾಂದೆ ನಿರಾಕರಿಸಿದ್ದಾರೆ. ಹೋರರು ಆ ಪತ್ರವನ್ನು ದೃಢೀಕರಿಸುವರೆ ಪ್ರಯತ್ನಿಸಿ, ಕಾಲಹರಿ ನಿಂತಿರುವರು. ನಮ್ಮ ಪ್ರತಿನಿಧಿ ಭಕ್ತರು, ಲಂಡನ್ನಿನಂದ ಕಾಲೆತ್ತಿ ಹೊರಡಲು ಉದ್ಯುಕ್ತರಾಗಿದ್ದಾರೆ. ಸಪ್ತಾಜಯಕರರೇ ಹೀಗಾದ ಮೇಲೆ ಉಳಿದವರ ಮಾತೇಕ?

ಹಿಂದೀ ಪ್ರತಿನಿಧಿಗಳಾಗಿ ತೆರಳಿದ ಈ ಮಹಾನುಭಾವರು ತಮ್ಮ ಹೃದಯಗಳನ್ನು ಒತ್ತೆ ಪರೀಕ್ಷಿಸಿದರೆ, ಸತ್ಯಧರ್ಮ ಬಲ್ಲವರಾಗಿದ್ದಲ್ಲಿ, ಕೂಡಲೆ ಹಿಂತಿರುಗಬಹುದೆಂದೇ ಹಲವರ ನೋಟೆಗಳಾಗಿವೆ. ಇವರು ಯಥಾರ್ಥ ವರ್ತನೆಯವರಾದರೆ ಹಿಂತಿರಳಿದಮ್ಮ ಸೊಗಸೇ ಆಗುವುದು. ಜಯಕರರು ನಿರ್ಧಾರ್ಕ್ಷ್ಯವಾಗಿ ಕಠೋರ ಕಂಬಿಯಿಂದ ಇಂಡಿಯದ ಜನರನ್ನು ಕಾಪಾಡಲು ಇನ್ನೂ ವಿಳಿಸಿಲ್ಲದ ಕೆರೆಯಲ್ಲಿ ಗಾಳ ಹಾಕುತ್ತಿದ್ದಾರೆ. ಇವರನ್ನು ಅಲ್ಲಿಂದ ಓಡಿಸುವ ತನಕ, ಇವರು ಹಿಂತಿರುಗರು. ನಾವ್ಯಾರೆಲ್ಲ ಒಬ್ಬನಂತೆ ಮಾತ್ರ ಒತ್ತ ತಂಗುವರಲ್ಲದೆ, ಉಳಿದವರು ಹಿಂತಿರುಗಿ ಹಿಂದೆ ಹೋಗುವವರಲ್ಲವೆಂದು ಹೇಳಿಕೆಯಿದೆ. ಇಲ್ಲೇ ಇದ್ದು ಜನರಲ್ಲಿ ಕಾರ್ಯ ಸಂಘಟನೆ ನಡೆಸಿ ಜೀವನದ ಕರ್ತವ್ಯವನ್ನು ಮಾಡುವ ಬದಲಾಗಿ ಇಲ್ಲಿ ನಿರುದ್ಯೋಗಿಗಳಾಗಿರುವವರೇ ಲಂಡನ್ನಿನಲ್ಲಿ ಈ ವಿನೋದ ನೋಡುತ್ತ ಕುಳಿತಿರಬಹುದು ಎಂದೇ ಈಗಣ ವಿದ್ಯಮಾನಗಳಿಂದ ತಿಳಿಯಬಹುದು. ತನ್ನ ಊರಲ್ಲಿ ಯಾವನೂ ಅಲ್ಲ ಎನ್ನುವವನು, ಪರವೂರಲ್ಲಿ ಮಹಾನುಭಾವನೆನಿಸಿಕೊಳ್ಳುವನಾದರೆ ಅವನೇಕ ಪರವೂರನ್ನು ಬಿಟ್ಟು ಹಿಂತಿರುಗುವನು? ಯಾರಿಗೂ ಈ ಶ್ವೇತಪತ್ರದಿಂದಲಾಗಲಿ ಕಮ್ಮಿಟಿ ವಿಚಾರಣೆಗಳಿಂದಾಗಲಿ ತೃಪ್ತಿಯಲ್ಲದಿರುವಾಗ, ಇಂಥವರಿಗಾದರೂ ಸ್ವಲ್ಪ ಸಂತೋಷ ವಾಗುವುದಾದರೆ, ನಾವೇಕೆ ಅದಕ್ಕೆ ಅಡ್ಡ ಬರಬೇಕು?

+ ++ +

Stop-Press.

ಲಂಡನ್ನಿಲ್ಲಿ ಜರಗಿದ ಜೈಂಟ್ ಸಿಲೆಕ್ಟ್ ಕಮಿಟಿಯಿಂದಾಗಿ ಹಿಂದೀಯರಿಗೆ ಬಿಕ್ಕಾಸಿನ ಫಲವಾಗಿಲ್ಲವೆಂದು ತಿಳಿದು ಬಂದಿದೆ. ಸರ್ ಸಪ್ತಾಜರವರು ಅಧ್ಯಕ್ಷರಿಗೆ ದೀರ್ಘ ಸ್ಟೇಟ್‌ಮೆಂಟ್ ಒಂದನ್ನು ಕೊಟ್ಟು ಹಿಂದಿರುಗಲಿರುವರು.

ಮಹಾತ್ಮರ ಮುಂದಿನ ಕಾರ್ಯಕ್ರಮವೇನೆಂದು ತಿಳಿದು ಬಂದಿರುವುದಿಲ್ಲ. ಇನ್ನೊಂದು ಆಮರಣಾಂತಿಕ ಉಪವಾಸವನ್ನು ಕೈಗೊಳ್ಳುವರೋ ಎಂದು ಕೆಲ ಪತ್ರಿಕೆಗಳು ಅಭಿಪ್ರಾಯಪಡುತ್ತಿವೆ.

ಗಾಂಧೀಜಿಯವರಿಗೆ ವೈಸರಾಯರು ಭೇಟಿ ಕೊಡದಿದ್ದುದಕ್ಕಾಗಿ ಸಪ್ತಾ ಜಯಕರರು ಒಂದು ಪ್ರಕಟನೆಯನ್ನು ಮಾಡಿ ಇವರ ಕುತ್ತ ಕಪ್ಪೆಂದಿರುವರು.

ಅಮೀರಿಕಾದಲ್ಲಿರುವ ಹೋರ ಪತ್ರಿಯನ್ನು ರಕ್ಷಿಕ್ಕೆ ಮಾಡುವರು.

ವಿಮಾನ ಓಟದಲ್ಲಿ ಕೀರ್ತಿಯುಕರಾದ ಮೊಲಿಸನ್ ಪತಿ ಪತ್ನಿಯರು ನ್ಯೂ ಯೋರ್ಕ್ ಬಳಿ ವಿಮಾನ ಮುರಿದು ಬಿದ್ದು ವಿಶೇಷ ಜಖಂ ಗೊಂಡಿರುವರು.

ದಿಲ್ಲಿಯ ಸ್ಯಾಡೆಂಟ್ಸ್ ಹರಿಜನ ಸರ್ವಿಸ್ ಲೀಗಿನ ಕಾರ್ಯದರ್ಶಿಯಾದ ೫ೇ ರತ್ನ ಪ್ರಕಾಶರೆಂಬವರು ೨೪ ಗಂಟೆಗಳೊಳಗೆ ದಿಲ್ಲಿಯಿಂದ ಹೊರ ಹೋಗಬೇಕೆಂದು ಆಜ್ಞೆಯಾಗಿದೆ

ಕಾನಾಪುರದಲ್ಲಿ ನಿರುದ್ಯೋಗದಿಂದಾಗಿ ಕೆಲವು ಗ್ರೇಜುವೇಟರು ಪಾದರಕ್ಷೆಯನ್ನು ತೊಡುವುದನ್ನು ಬಿಟ್ಟಿರುವರು. ಕೆಲವರು ರೈಲ್ವೇ ಸ್ಟೇಶನಿನಲ್ಲಿ ಕೂಲಿ ಕೆಲಸ ಮಾಡಲಿರುವರು.

ಜನೆವಾದಲ್ಲಿ ಕಸ್ತವಿನ್ಸಾಸ ಸಭೆಯು ಆಕ್ಟೋಬರ ತಿಂಗಳಿಗೆ ಬಂದಕ್ಕಿರಸಲ್ಪಟ್ಟಿತು.

ಕೊರೊಂಬೊದಲ್ಲಿ ಪ್ಲೇಗ್ ರೋಗವಿಲ್ಲದಂತೆ ಮಾಡಲು ಹೆಲ್ತ್ ಪಾತಿಯವರೂ ಸರಕಾರವೂ ಸಿದ್ಧತೆಗಳನ್ನು ಮಾಡಿರುತ್ತಾರೆ.

ಆಫಿಕದ ದರ್ಬಾನಿನಲ್ಲಿರುವ ಹಿಂದೀಯರು ಪ್ರತ್ಯೇಕ ವಸಾಹತು ನೆಲ್ಲರುವುದರಿತ್ಯಾಗಿ ವ್ಯವಸ್ಥೆಯೂ ಮಾತುಕತೆಗಳೂ ನಡೆಯುತ್ತವೆ

ೞೇ ಆಮಯರು ದೇಶದ ಎಲ್ಲಾ ಕೊಂಗ್ರೆಸ್ ಸಂಸ್ಥೆಗಳನ್ನೂ ಅಖಿಲಭಾರತ ಕೊಂಗ್ರೆಸ್ ಸಭೆಯನ್ನೂ ನಿವೃತ್ತಿಗೊಳಿಸಲು ಮಾಡಿದ ಪ್ರಯತ್ನಗಳಿಗೆ ಉತ್ತರವಾಗಿ ೞೇ ಸತ್ಯಮೂರ್ತಿಯವರು ಉತ್ತರ ಕೊಟ್ಟು ಅವು ಸರ್ವಥಾ ಕೂಡದೆಂದಿರುವರು.

ಒಳದೇಶ ವರ್ತಮಾನ

(ಸಾಹಿತ್ಯ ಸಂಘಟನೆಯಲ್ಲಿನ "ಹಬಿಮಾರ್" ಎಂಬ ಶಕ್ತಯುಕ್ತ ೞೇ ಕೆ. ಪಿ. ಪೂರ್ಣಚ ಬಳ್ಳಿಗರು ಬರೆದುದಾಗಿರುತ್ತದೆ.)

ಕೊಂಗ್ರೆಸ್ಸಿನ ಚಟುವಟಿಕೆಗಳು ಶಮನಿಯೊಗಲಿರುವುದರಿಂದ ತಮ್ಮ ಸ್ವರಾಜ್ಯದ ಸಂಘಟನೆಯ ಪುನರುಜ್ಜೀವನ ರಚನಾ ರೀತಿಯ ದೇಶ ನೇತೆ ತೊಗಬೇಕೆಂದು ೞೇ ಎನ್. ಸಿ. ಕೇಳ್ಕರರು ಆಲೋಚಿಸಿದುದರ ಸರ್ವ ಪಕ್ಷೀಯ ಸಮ್ಮೇಳನವೊಂದು ಬೇಗನೆ ಜರಗಲಿರುವುದು.

ಗಾಂಧೀಜಿಯವರು ಸಬರ್ಮತಿಯ ತನ್ನ ಆಶ್ರಮವನ್ನು ನಿವೃತ್ತಿ ಗೊಸಲಿರುವರೆಂದೂ, ಬೇಗನೇ ಇನ್ನೊಂದು ಪವಿತ್ರೋದ್ಯಮವಲ್ಲಿ ತಾನು ಸರ್ವಸ್ವವನ್ನೂ ತ್ಯಾಗಮಾಡಲು ಸಿದ್ಧವಾಗುತ್ತಿರುವೆನೆಂದೂ ಹೇಳಿರು ವರು. ೧೯ ವರ್ಷಗಳ ಮೊದಲು ಗಾಂಧೀಜಿಯವರು ಈ ಆಶ್ರಮವನ್ನು ಸ್ಥಾಪಿಸಿದ್ದು ಅಲ್ಲಿನ ಸುಮಾರು ೧೦೦ ಮಂದಿ ಆಶ್ರಮವಾಸಿಗಳಿಗೆ ಕೈಗಾರಿಕೆಗಳ ಸಂಬಂಧವಾದ ಜ್ಞಾನವೂ ಇನ್ನಿತರ ಆಧ್ಯಾತ್ಮಿಕ ಉನ್ನ ದೇಶವೂ ಕೊಡಲ್ಪಡುತ್ತಿತ್ತು. ಅಂತಹ ಆಶ್ರಮವನ್ನು ಗಾಂಧೀಜಿಯವರೆ ತನ್ನ ಸರ್ವಸ್ವವೆಂದು ತಿಳಿದಿದ್ದರು. ಈಗ ಅದನ್ನೂ ನಿವೃತ್ತಿ ಪಡಿಸಿ ಹಾಕಿ ಪವಿತ್ರಕಾರ್ಯಕ್ಕೆ ತೊಡಗಲಿದ್ದೇನೆಂದು ಹೇಳುತ್ತಿರುವುದನ್ನು ಕೇಳಿ ಎಲ್ಲರೂ ಕುತೂಹಲಿಗಳಾಗಿರುವರು.

ಲಾಹೋರಿನಲ್ಲಿ ಒಬ್ಬ ಕಬ್ಬಿಣದ ಕೆಲಸದವನು ಡಕಾಯಿತರಿಗೆ ಹತಾರುಗಳಗಳನ್ನು ತಯಾರಿಸಿ ಕೊಡುತ್ತಿದ್ದನು. ಅವನನ್ನು ಮೊನ್ನೆ ಪೋಲೀಸರು ಕೈದು ಮಾಡಿರುವರು.

ಜಿಲ್ಲಾ ಜಾತಿಯ ಬಡ ವಿದ್ಯಾರ್ಥಿಗಳಾಗಿದ್ದು ಕಿಲ್ಲಿದರ ಎಸೋಸಿಯೇಶನ್ನಿಂದ ನೇತನವನ್ನಪೇಕ್ಷಿಸುವವರು ಆಗೋಸ್ತು ತಾ ೧೪ ರಣ ಒಳಗೆ ತಮ್ಮ ಅರ್ಜಿಗಳನ್ನು ಯೋಗ್ಯತಾ ಶಿಫಾರಸುಗಳೊಂದಿಗೆ ಪಿ ಜಾರಲ್ ಸೆಕ್ರೆಟರಿ, ಬಿಲ್ಲವರ ಎಸೋಸಿಯೇಶನ್ C/o ದಸ್ಟಾರಿ ಫೆರ್ ಎಂಡ್ ದಿವಾನ್ ೧೬-೧೯, ಮೆಡೋ ಸ್ಟ್ರೀಟ್, ಫೋರ್ಟ್, ಮುಬಾಯಿ. ಇಲ್ಲಿಗೆ ಕಳುಹಿಸಬೇಕೆಂದು ತಿಳಿಸಲಾಗಿದೆ.

ಜಯಪುರದಲ್ಲಿ ಸೇಠ್ ಈಶ್ವರ್‌ಲಾಲ್ ಪರೋಗಿಯವರು ಹಿಂದ ಮುಸಲ್ಮಾನ ವಕ್ಫಸ್ಥಿತ್ಯಂದ ಅಲ್ಲಿಯ ಜುಮ್ಮಾಮಸೀದಿಗಾಗಿ ರೂ ೭೦೦೦ ಬೆಲೆಬಾಳುವ ಒಂದು ಮನೆಯನ್ನು ದಾನಶಾಸನಮಾಡಿಸುತ್ತಾರೆ. ಮು ಯು ಮನೆಯಿಂದ ಬಂದವರ ಬಗ್ಗೆ ವಿಶಾಯಾಗ್ರಹವಾಗಿ ಉಪಯೋಗ ಸಲ್ಪಡುತ್ತದೆ.

ಮೈಸೂರಿನ ವೃದ್ಧಸಿತಾಮಹ ಶ್ರೀ ಎಂ ವೆಂಕಟಕೃಷ್ಣಯ್ಯನವರ ೯೦ನೇ ವರ್ಧಂತಿಯ ದಿನ ಅವರಿಗೆ ಅಲ್ಲಿಯ ಪುರಜನರಾಗಿ ಮಾನಪತ್ರವನ್ನರ್ಪಿಸಲಿರುವರು

ಹರಿಜನ ಕಾರ್ಯಕ್ಕಾಗಿ ಆಹ್ವಾನಾದಿನ ಬಿಲ್ಲುಗಳ ಒ ಯರು ತನಗೆ ಸಹಾಯ ಮಾಡಬೇಕೆಂದು ಗಾಂಧೀಜಿಯವರು ಕೇಳಿ ದರು. ಬಿಲ್ಲುಗಳ ಮ್ಯಾಲಿಕರು ಹೇರಳ ದ್ರವ್ಯವನ್ನು ಕೊಡುವ ನಿರ್ಧ ಯನ್ನು ಮಾಡುತ್ತಿರುವರು.

ಮುಂಬಾಯಾಬಾದಿನಲ್ಲಿ ಬಿಲ್ಲುಗಳ ಕೆಲಸಗಾರರು ಕೂಲಿ ಕಡಿ ಯಾದುದಕ್ಕೆ ಪ್ರತಿಭಂಧ ಮುಷ್ಕರವನ್ನು ಪ್ರಾರಂಭಿಸಿರುತ್ತಾರೆ.

ತಲಚೇರಿ ರೈಲ್ವೆ ಸ್ಟೇಷನ್ನಿನ ಹತ್ತಿರ ರಸ್ತೆಯ ಬಳಿ ಒಂದು ಮರದ ಯಿಲ್ಲಿ ಕುರಾಳಾಕಣ್ಣ ಎಂಬ ಯುವಕನು ಈ ತಿಂಗಳಿರಳ್ಳದಿಂ ವಿಕೋ ಉಪವಾಸ ಮಾಡುತ್ತಿರುವನು.

ಅಹ್ಮದಾಬಾದಿನಲ್ಲಿ ಮಾನಪತ್ರವನ್ನು ಪಡೆದ ಗಾಂಧೀಜಿಯವರು ನಾನು ಒಬ್ಬ ಭಂಗಿ – (ಕಸಗುಡಿಸುವವ) ಎಂದು ಹೇಳಿದರು.

– ರಂಗೂನಿನ ಮಿಲಿಟರಿ ಸ್ಟೇಶನ್ನಿಗೆ ಒಂದು ಘೋರ ಸಿಡಿ ಬಡೆದು, ಒಂದು ಮೊಟ್ಟೆಯಷ್ಟು ಸುತ್ತಳತೆಯಂತೆ ಅಳವಾದ ಹೊ ಆಗಿರುತ್ತದೆಂದೂ ಅದನ್ನು ಅಗೆದು ಸಿಡಿಲನ್ನು ಕಾಷ್ಠು ಹಿಡಿಯು ರೆಂದೂ ತಿಳಿಯಲಾಗಿದೆ.

ರಂಗೂನಿನ ಮುನಿಸಿಪಾಲಿಟಿಯ ಅಧ್ಯಕ್ಷರನ್ನು ಮೇಯರರೆಂ ಕರೆಯಬೇಕೆಂದು ೞೇ ಗಂಗಾ ಪ್ರಸಾದಜಿ ಸಿಂಗರೆಂಬವರು ಒಂ ಕರಾರನ್ನು ತರಲಿರುವರು.

ಅಲ್ಮೋಡ ಟೌನ್ ಹೋಲಿನಲ್ಲಿ ೞೇ ಸೇನಗುಪ್ತರ ಸ್ಮಾರಕಾರ್ಥ ಸ್ಥಾಪಿಸುವುದಕ್ಕಾಗಿ ಬಿ ನೂರ್ ಅಹಮ್ಮದರವರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಕುಳಿತಲ್ಲಿಯೇ ರೂ. ೬೦೦೦ದ ವಾಗ್ದಾನವಾಯಿತು.

ಶ್ರೀ ಸೇನಗುಪ್ತರ ತಂದೆಯವರಾದ ಈಶ್ವರಚಂದ್ರ ಸೇನರವರ ಪ್ರ ನಿಂದಿರುವ ದೊಡ್ಡ ಹೋಳ್ ಒಂದರಲ್ಲಿ ಶ್ರೀ ಸೇನಗುಪ್ತರ ಪ್ರತಿಮೆ ನ್ನಿಡಬೇಕೆಂದು ನಿರ್ಧರಿಸಿರುತ್ತಾರೆ.

ಜಬ್ಬಲ್‌ಪುರದಲ್ಲಿ ಮೈಲ್‌ಚೀಲವನ್ನು ಹೊತ್ತುಕೊಂಡು ಓ ತ್ತಿದ್ದ ಟಪ್ಪಾಲು ರನ್ನರನನ್ನು ಕೊಂದು ಹಣವನ್ನು ಸೂರೆ ಮಾಡಿದು ಕ್ಕಾಗಿ ಕಾಶಾಧೀನ ಎಂಬವನಿಗೆ ಪಾತಿತಿಕ್ಷೆಯು ವಿಧಿಸಲ್ಪಟ್ಟಿದೆ.

ಗಾಂಧೀಜಿಯವರು ಸಬರ್ಮತಿ ಆಶ್ರಮವನ್ನು ಕೆಸೆಯುವರೆಂಬ ರಿಂದ ಅಶ್ಮದಾಬಾದಿನಲ್ಲಿ ಜನರು ವ್ಯವಸ್ಥೆಗಳಾಗಿಯರ್ ವಾಸಿಗಳು ಹೊರಡಲು ಸಿದ್ಧತೆ ಮಾಡುತ್ತಿರುವರು.

+ ++ +

ದಕ್ಷಿಣ ಕನ್ನಡ.

ಮಂಗಳೂರು: ಇದೇ ಕಳೆದ ತಾ. ೩೦ನೇ ಆದಿತ್ಯವಾರ ಸಾಯಂಕಾಲ ಇಲ್ಲಿಯ ಡಿ. ಸಿ. ಎಮ್ ವಿದ್ಯಾಲಯದಲ್ಲಿ ೫ನೇ ಲಕ್ಷ್ಮೀ ನಾರಾಯಣ ಪುಣಿಂಚತ್ತಾಯರು ತಾನು ಸ್ವತಹ ರಚಿಸಿದ "ಹರಿಜನ ಉದ್ಧಾರ" ಕೆಲ ಪದ್ಯಗಳನ್ನೂ, ಕಥಕರವಾಸ ವಿರಚಿತ "ಹರಿಭಕ್ತಿ ಸಾರದ ಕಥಾಸಂಗ್ರಹ"ವನ್ನೂ ಬೇರೆ ಬೇರೆ ರೀತಿಯಲ್ಲಿ ಸುಶ್ರಾವ್ಯವಾಗಿ ಹಾಡಿ ತೋರಿಸಿದರು. ಇದಲ್ಲದೆ ಶ್ರೀ ನಂದನಾರ್, ನಿಕೂಮುಹಾರ್ ಭೋಜನ ಬಳಿಕ ಕವಿತ್ವ ಮೊದಲಾದ ಸಮ್ಮರುಹರ ಗುಣ ಕಥನವನ್ನು ಸರಸವಾಗಿ ವಿವರಿಸಿದರು.

ಇಲ್ಲಿಯ ಪ್ರಸಿದ್ಧ ಡಾಕ್ಟರರಾದ ೫ನೇ ಕೆ ಆರ್ ಶಿನಯ್ಯನವರು ಇಲ್ಲಿಯ ಪೆಸ್ಟ್‌ರೋಲ್ ಅಸ್ಪತ್ರೆಯ ಸರ್ಜಿಕಲ್ ಡಿಪಾರ್ಟ್‌ಮೆಂಟಿನಲ್ಲಿ ಹೌಸ್ ಸರ್ಜರಿ ಅಸಿಸ್ಟಂಟ್ ಸರ್ಜನರಾಗಿ ನೇಮಕ ಹೊಂದಿರುತ್ತಾರಾಗಿ ತಿಳಿಸಲು ತುಂಬಾ ಸಂತೋಷಪಡುತ್ತೇವೆ.

ಹಿಂದೀ ಪ್ರಾಗ್ಧಾರಿಣಿ ಸಭಾ, ಮಂಗಳೂರು, ಇದರ ಕಳೆದ ಸಭೆಯು ಇದೇ ೨೪ನೇ ಆದಿತ್ಯವಾರ ೫ನೇ ಲಕ್ಷ್ಮಣ ದೇವ ವಿದ್ಯಾರ್ಥಿಯವರ ನೇತೃತ್ವದಲ್ಲಿ ಕೆನರಾ ಹೈಸ್ಕೂಲಿನಲ್ಲಿ ಜರಗಿತು. "ಅಂತರ್ಜಾತೀಯ ವಿವಾಹವು ಬೇಕೇ?" ಎಂಬ ವಿಚಾರಗೋಷ್ಠಿ ವಿಷಯದ ಪಕ್ಷವಾಗಿ ೫ನೇ ಪಾರ್ವತೀ ಬಾಯಿ, ರಾಷ್ಟ್ರಭಾಷಾ ವಿಶಾರದೆ, ೫ನೇ ಕೇಶವ ರಾವ್ ಮಾತಾಡಿದರೂ, ವಿರೋಧವಾಗಿ ೫ನೇ ಬಿ. ಡಿ. ಮೂಡಭ ಬಾಳಿಗ, ರಾಷ್ಟ್ರಭಾಷಾ ವಿಶಾರದ, ೫ನೇ, ವಿಠಾಬಾಯಿ ಇವರೂ ಮಾತಾಡಿದ ಬಳಿಕ ಅಧ್ಯಕ್ಷರು ಶಾಸ್ತ್ರಾಧಾರ ಪೂರ್ವಕವಾಗಿಯೂ, ವಿಜ್ಞಾನ ಗರ್ಭಿತ ನ್ಯಾಯವಿ, ಹಾಸ್ಯರಸ ಪ್ರಧಾನವಾಗಿಯೂ ಇದ್ದ ತಮ್ಮ ಭಾಷಣದಲ್ಲಿ ವಿವಾಹದ ನಿರ್ಣಾರ್ಥ, ಶ್ರಮಗಳನ್ನು ಬಿಚ್ಚಿ ಹೇಳಿ, ಪೂರ್ವಾತ್ಯ ಪಾಶ್ಚಿ ಮಾತ್ಯ ವಿವಾಹಗಳ ರೀತಿಗಳನ್ನು ವಿವರಿಸಿ ಪವಿತ್ರ ಪ್ರೇಮದಿಂದೊದಗುವ ವಿವಾಹವು ಜಾತಿಯ ಕಟ್ಟುಕಟ್ಟಳೆಗಳಿಗೊಗ್ಗಾಗಿಲ್ಲವೆಂದು ಒತ್ತಿ ಹೇಳಿದರು. ಅಂತರ್ಜಾತೀಯ ವಿವಾಹವು ಅವಶ್ಯಕವೆಂದು ಬಹು ಮತದ ಪ್ರಕಾರ ಮಂಜೂರಾಗಲು ಸಭೆಯು ಮುಕ್ತಾಯವಾಯಿತು

ದಯಾನಂದ ನಿರ್ವಾಣ ಅರ್ಧ ಶತಾಬ್ದಿ ಉತ್ಸವಕ್ಕೆ ಇದು ವರೆಗೆ ಧನಸಹಾಯ ಮಾಡಿದ ಮಹನೀಯರು –

ಪಡುಬಿದ್ರೆಯ ಮಹಾಜನರಿಂದ	೯–೮–೦
ಪುತ್ತೂರು ವಕೀಲ್ ಶಿವರಾಮ ಹೊಳ್ಳರಿಂದ	೫–೦–೦
,, ರಂಗಸ್ವಾಮಿ ಅಯ್ಯರ್	೧–೦–೦
,, ಕೆ ವಾಮನ ರಾಯರಿಂದ	೧–೦–೦
ಗೋಕಟ್ಟೆ ಬಜಾರು ಪುಂಡಲೀಕ ರಾವು ಪ್ರಭುಗಳಿಂದ	೧–೦–೦
,, ಬಿ ದಾಸಪ್ಪ ಶೆಟ್ಟಿಯವರಿಂದ	೧–೦–೦
ಜುಮ್ಲಾ	೧೯–೮–೦

ಈ ಎಲ್ಲ ಮಹನೀಯರಿಗೂ ಸದರಿ ಕಮಿಟಿಯ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇವೆ ಎಂದು ಬಿ ಲಕ್ಷ್ಮಣದೇವ ಸಿದ್ಧಾರ್ಥಿಯವರು ತಿಳಿಸುತ್ತಾರೆ

ಡಿಸ್ಟ್ರಿಕ್ಟ್ ಬೋರ್ಡಿನ ಮಾಜಿ ಅಧ್ಯಕ್ಷರುಗಳಾದ ದಿವಾನ್ ಬಹದ್ದೂರು ಎನ್ ಸುಬ್ಬರಾಯರು ಮತ್ತು ಎಂ ಮಹಾಬಲ ಜೆಡ್ಡಿ ಇವರ ತೈಲಚಿತ್ರಗಳ ಅನಾವರಣ ಸಮಾರಂಭವು ತಾ ೨೦ನೇ ದಿನ ಸಂಜೆ ಇಲ್ಲಿಯ ಟೌನ್‌ಹಾಲಿನಲ್ಲಿ ನಡೆಯಿತು

೫ನೇ ಕೃಷ್ಣ ಸಿನೆಮ ಮಂದಿರದಲ್ಲಿ ಈಗ ಪ್ರದರ್ಶಿಸಲ್ಪಡುತ್ತಿರುವ ಧ್ರುವ ಚರಿತ್ರೆಯು ತಾ ೨೯ರಲ್ಲಿ ಕೊನೆಗೊಂಡು ತಾ ೩೦ರಲ್ಲಿ ಪ್ರಚಂಡ ಜಲಪ್ರಳಯವನ್ನೊಳಗೊಂಡ ಕ್ರೌಡ್ ರೋರ್ಸ್ ಎಂಬ ಚಿತ್ರವನ್ನೂ ಆನಂತರ ನವಚೇತನ ಎಂಬ ಚಿತ್ರವನ್ನೂ ಪ್ರದರ್ಶಿಸಲಾಗುವುದು

ಕಳೆದ ವಾರದ ಮುನಿಸಿಪಾಲಿಟಿಯ ರಿಪೋರ್ಟಿನಿಂದ ತಿಳಿದು ಬಂದಂತೆ ೧೮ ಮರಣಗಳೂ ೭೫ ಜನನಗಳೂ ಆಗಿವೆಯೆಂದು ತಿಳಿದಿದೆ

ಇದೇ ತಾ ೩೦ನೇ ದಿನ ರಾತ್ರೆ ೯ ಘಂಟೆಗೆ ರಾ! ಪ್ರಸೆಲ್ ಕೃಷ್ಣ ನ್ಯಾಕರ ಜೌದಸ ಕೃಷ್ಣಯ್ಯರಾಮಚಂದ್ರ ನಾಯ್ಕರೆಂಬವರು ದೈವಾ ಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಕಳೆದ ಎರಡು ವಾರಗಳಿಂದ ಅಸ್ವಸ್ಥರಾಗಿದ್ದರು ಇವರು ತಮ್ಮ ವೀಲಿನಲ್ಲಿ ಇಲ್ಲಿಯ ಕೆನರಾ ಹೈಸ್ಕೂಲಿಗೆ ರೂ ೧೫೦೦೦ನ್ನು ದಾನವಾಗಿ ಶಾಸ್ತ್ರೀಕರಿಸಿದ್ದರುವರಾಗಿ ತಿಳಿದು ಬಂದಿದೆ

ಕಾರ್ಕಳ ಕಳೆದ ಜೂನ್ ತಿಂಗಳಿನಲ್ಲಿ ಗಣ ಗಣ್ಯರೇ ನಾರೀಕುಗಳಲ್ಲಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವರು ನಡಾಯ ಕೂರು ಕೇಂದ್ರದಲ್ಲಿ ನಡೆಯಿಸಿದ "ರಾಷ್ಟ್ರಭಾಷಾ ವಿಶಾರದ" ಪರೀಕ್ಷೆಯಲ್ಲಿ ಕಾರ್ಕಳದಿಂದ ೫ನೇಯತ ಕಟಪಾಡಿ ಶ್ರೀನಿವಾಸ ತೆಂಕಯವರು ಉತ್ತೀರ್ಣರಾಗಿರುವರೆಂದು ತಿಳಿಸಲು ಸಂತೋಷಪಡುತ್ತೇವೆ

ಕಾರ್ಕಳ ಸೋಮೇಶ್ವರ ಮಾರ್ಗದಲ್ಲಿ ಮುರೂರಿನ ಸಮೀಪ ರ್ಯೆಯು ಪುತ್ತು ತಿರುಗುವಲ್ಲಿ ಇಬ್ಬದಿಗಳಲ್ಲಿಯೂ ಜಲ್ಲಿ ಕಲ್ಲುಗಳ ರಾಶಿಗಳನ್ನು ಹಾಕಿದ್ದರಿಂದ ಇತ್ತಕಡೆಗಿಂದ ವೇಗವಾಗಿ ಬರುತ್ತಿದ್ದ ಲೋರಿ ಬಸ್ಸುಗಳೆರಡು ಜಗಳಾಡಿಕೊಂಡು. ಕಷ್ಟ ನಷ್ಟಗಳಿಗೆ ಗುರಿಯಾದುವೆಂದು ತಿಳಿದು ಬರುತ್ತದೆ ಇನ್ನಾದರೂ ಈ ರೀತಿ ಇಂಥ ಸ್ಥಳಗಳಲ್ಲಿ ಜಲ್ಲಿ ರಾಶಿಗಳನ್ನು ಹಾಕದಂತೆ ಸಂಬಂಧ ಪಟ್ಟವರು ಜಾಗ್ರತೆ ತೆಗೆದುಕೊಳ್ಳುವ ರೆಂಬಿ ನಂಬುತ್ತೇವೆ.

ಪಣಂಬೂರು ಇಲ್ಲಿಯ ಮೊಗವೀರ ಕೂಡುಕಟ್ಟು ನವರು ತಮಗೊಂದು ಸಭಾ ಮಂದಿರವಾಗಬೇಕೆಂದು ಬಹಳ ಸಮಯು ದಿಂದ ನೀಕ್ಷಿಸುತ್ತಿದ್ದರು ಸುಮಾರು ಮೂರು ಸಾವಿರ ರೂಪಾಯಿ ಗಳ ವೆಚ್ಚದಿಂದ ಅಂದಚೆ ದವಾಗಿ ನಿರ್ಮಿಸಿದ ಒಂದು ಮಂದಿರವು ಈಗ ಸಿದ್ಧವಾಗಿ ಕಳೆದ ೭-೮ನೇ ರಂದು ಪ್ರವೇಶೋತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತು ಅಂದು ಬ್ರಾಹ್ಮಣಾಲ ಶ್ರೀಯುತ ಮೋಹನಪ್ಪ ತಿಂಗಳಾಯರ ಪೌರೋಹಿತ್ಯದಿಂದ ದೃಷ್ಟಾರೋಹಣ ಪ ತಿಷ್ಠೆ ಉತ್ಸವಾದಿಗಳನ್ನು ನೆರವೇರಿಸಲಾಯಿತು. ಸಂಜೆ ಸಭಾ ಕಾರ್ಯಕ್ರಮಗಳು ಪ್ರಾರಂಭವಾಗಿ ಸಭಾಧ್ಯಕ್ಷರಾಗಿ ಶ್ರೀಯುತ ಕೆ ಕೃಷ್ಣ ಬಂಗೇರರವರು ಆಯ್ಕೆಯಾದರು. ಸಭಾ ಕಾರ್ಯಕ್ರಮಗಳಲ್ಲಿ ಶ್ರೀಯುತ ಕೆ ಕೃಷ್ಣ ಬಂಗೇರ, ಶ್ರೀಯುತ ಕೆ ಕೃಷ್ಣ ಸಾಲ್ಯಾನ್, ಶ್ರೀಯುತ ಕೆ ಕೃಷ್ಣ ಕರ್ಕೇರ, ಶ್ರೀಯುತ ಕೆ ಕೃಷ್ಣ ಪೂಜಾರಿ ಮೊದಲಾದವರು ಭಾಗವಹಿಸಿ ಭಾಷಣ ಮಾಡಿದರು. ಕೊನೆಯಲ್ಲಿ ಶ್ರೀಯುತ ಕೆ ಕೃಷ್ಣ ಪೂಜಾರಿಯವರು ವಂದನಾರ್ಪಣೆ ಮಾಡಿದರು. ಸಭೆಯು ಸಂತೋಷದಿಂದ ಮುಕ್ತಾಯವಾಯಿತು.

ಉಡುಪಿ: — ಮೂರುಬಿದ್ರೆ ಸಂಟರಿನ ಉಪಾಧ್ಯಾಯರ ಸಂಘದ ನಾಲ್ಕನೇಯ ಸಾಮಾನ್ಯ ಸಭೆಯು ಇದೇ ೨೨ನೇ ಶನಿವಾರ ೩ ಘಂಟೆಗೆ ಬೋರ್ಡು ಮೈನ್ ಶಾಲೆಯಲ್ಲಿ ದೆಳಪಾಯಿ ಬೋರ್ಡ್ ಶಾಲಾ ಮುಖ್ಯ ಅಧ್ಯಾಪಕರಾದ ಸು ರಾ ರಾ ಬಿ ಮಂಜುನಾಥಯ್ಯ ನವರ ಅಧ್ಯಕ್ಷತೆಯಲ್ಲಿ ಜರುಗಿತು ೧೩ ಶಾಲೆಗಳ ೨೫ ಮಂದಿ ಅಧ್ಯಾಪ ಕರು ಹಾಜರಿದ್ದರು ಅನೇಕರ ಅಪೇಕ್ಷೆಯ ಮೇರೆಗೆ ಬೋರ್ಡು ಹುಡು ಗರ ಶಾಲೆಯ ಮುಖ್ಯ ಉಪಾಧ್ಯಾಯರಾದ ಮು ರಾ ರಾ ಎಸ್ ನರ ಸಿಂಹ ಕಿನಯವರು ಮೂರನೇ ತರಗತಿಗೆ ಭಿನ್ನರಾಶಿಯ ಪ್ರಾರಂಭದ ಪ್ರಥಮ ಪಾಠವನ್ನು ಬಹು ಸೊಗಸಾಗಿ ಕೊಟ್ಟರುವರು.

ಆಜೆಕಾರ —ಇಲ್ಲಿಯ ಎಕ್ಸೈಜ್ ಸರ್ಕಲ್ ಇನ್ಸ್‌ಪೆಕ್ಟರ ರಾದ ಪಟ್ಟುಗಣಿ ಶ್ರೀ ಗೋಪಾಲಕೃಷ್ಣಯ್ಯರು ವರ್ಗಾವಣೆಯಿಂದ ಇದೇ ತಾ ೧೯– ೭–೩೩ನೇ ಬುಧವಾರ ರಾತ್ರೆ ಸ್ವರ್ಗಸ್ಥರಾದರೆಂಬ ವಿಷಯವು ಅತಿ ಮಃಖದಾಯಕವಾಗಿದೆ ವ್ಯಕ್ತರು ಸಾರ್ವಕ್ರ ಜನಾ ಯಪರೂ ಸಿಗುಣರೂ ಜನಪ್ರಿಯರೂ ಆಗಿದ್ದು ಪೆನ್ಷನ್ ಮೊದಲು ಸಂಭರ್ಮದಲ್ಲಿದ್ದರು ಶ್ರೀ ಪರಮಾತ್ಮನು ಅವರ ಆತ್ಮಕ್ಕೆ ಸುಖಶಾಂತಿ ಯನ್ನಿತ್ತಲಿ (ಸ್ವರೇಶಾಧಿಧರಾಯ ಜಂಬಾದಾರಭ್ಯೋ ಬ್ಬರನ್ನು ಕಳೆದುಕೊಂಡುದ್ದಕ್ಕಾಗಿ ವ್ಯಥಿಸುತ್ತಾಳೆ)

ಪ್ರಕಟಣೆ.

ಕಾಸರಗೋಡು ತಾಲೂಕು ಹೊಸದುರ್ಗ ಗ್ರಾಮದ ಲ್ಲಿರುವ ರಾಮಕೃಷ್ಣಯ್ಯನವರ ಎಂಗೆ ದಾವೆದಾರ ನೈ ಈ ಮೂಲಕ ಸರ್ವ ಜನರಿಗೆ ತಿಳಿಯವಡಿಸುವದೇನಂದರೆ –

ಹೊಸದುರ್ಗ ಕಸಬೆಯಲ್ಲಿ 'ರಾಮಕೃಷ್ಣ ನಾರಾಯಣ ಸೈ' "ರಾಮಕೃಷ್ಣ ನಾರಾಯಣ ಸೈ ಮತ್ತು ಸನ್ಸ್ "ಅನಂತ ರಾಮಕೃಷ್ಣ ಸೈ" ಮತ್ತು "ದಾಮೋದರ ರಾಮಕೃಷ್ಣ ಸೈ ಮತ್ತು ಬ್ರದರ್ಸ್" ಎಂಬ ಹೆಸರುಳ್ಳ ಖಾತೆಯಲ್ಲಿ ತಾರೀಕು 28—6—'88ರ ವರೆಗೆ ವ್ಯಾಪಾರ ವಹಿವಾಟು ನಡಿಸೋಣಾಗಿ ಸದರಿ ತಾರೀಕು 28—6—'88ರಲ್ಲು ಸದರಿ ಖಾತೆಯಲ್ಲಿ ಇದ್ದ ಮೆಂಬರರ ಪಾಲು ಅಗಲಿಕೆಯಿಂದ ಲೆಖ್ಖಾಚಾರವಾಗಿ ಬಾಕಿ ಮೆಂಬರರಿಗೆ ತಳ್ಳ ಪ್ರತಿಫಲವನ್ನು ಕೂಟ್ಟು ಖಾತೆ ವಹಿವಾಟು ಖುಲಾಸುವಟ್ಟಿ ಆ ಬಾಬಿನ ಹೊರ ಕುಳಿವಾರುಗಳ ಲೇವಾದೇವಿಯನ್ನು ಪೂರಾ ದಾಮೋ ಧರ ರಾಮಕೃಷ್ಣಸೈ ಆದ ನಾನು ತಾರೀಕು 28—6—'88ನೇ ರಿಜಿಸ್ಟ್ರಿ ರಿಲೀಸ ಪ್ರಕಾರ ವಹಿಸಿಕೊಂಡಿರುತ್ತೇನೆ. ಸದರಿ ರಿಲೀಸ ಪತ್ರದ ತಾರೀಕು ನಂತರ ರಾಮಕೃಷ್ಣ ನಾರಾಯಣ ಸೈ ಮತ್ತು ಅವರ ಮಕ್ಕಳು ಆದ ನಾನು ಕೂಡಾ ನಾವು ಒಂದೇ ಗ್ರಹಕೃತ್ಯದಲ್ಲಿರುವದಾದರೂ ಪ್ರತಿ ಮೆಂಬರನ ವ್ಯಾಪಾರ ವಹಿವಾಟು ಪ್ರತ್ಯೇಕವಾಗಿ ಅವರವರೇ ಸ್ವಂತ ನಡಿಸಿಕೊಂಡು ಬರುವದರಿಂದ ಅವರವರ ವಹಿವಾಟಿಗೆ ಅವರವರೇ ಸ್ವತಹಾ ಜವಾಬ್ದಾರರೆಂಕಲೂ ಈ ಮೂಲಕ ತಿಳಿಯ ತಿಳಿಯವಡಿಸೋಣಾಗುತ್ತದೆ.

ತಾ 16—7—'88. **H Damodhar Pai,**
Cloth Merchant, Hosdrug.

ಸ್ವೀಕಾರ

ದಕ್ಷಿಣ ಹಿಂದೂಸ್ಥಾನದಲ್ಲಿ ಮೊದಲನೆಯದಾಗಿ ಉಡುಪಿಯಲ್ಲಿ ತೆರೆಯಲ್ಪಟ್ಟಿರುವ ದಿ ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ ಇದರ ಕಾರ್ಖಾನೆಯಲ್ಲಿ ತಯಾರಾಗಿರುವ "ಕರ್ನಾಟಕ ಇಂಕ್" ಬಾಟ್ಲಿಯೊಂದು ಪ್ರಸ್ತುತವಾಗಿದೆ. ಶಾಯಿಯು ಇನ್ನಿತರ ವಿದೇಶಿ ಶಾಯಿಗಳನ್ನು ಹೋಲುತ್ತಿರುವುದು ಏಕೆ, ಮಿಕ್ಕಿ ಪ್ರಾಶಸ್ತ್ಯಗೆ ಬಂದಿರುವುದು ವಿಶೇಷವಾಗಿಯೂ ಸಂತೋಷಾಸ್ಪದ ಸಂಗತಿಯಿದೆ ದಕ್ಷಿಣ ಕನ್ನಡಿಗರು ಈಗಲೇ ಕೈಗಾರಿಕೆಗಳಲ್ಲಿ ಎ ಎಂದುಗಳಿಸುತ್ತಿರುವ ಈ ವಿಷಗಳಲ್ಲಿ "ಕರ್ನಾಟಕ ಶಾಯಿ"ಯು ಹೆಸರು ಗಳಿಸುವುದು ಅಭಿನಂದನೀಯವಿದೆ. ಈ ಕಾರ್ಖಾನೆಯು ಸರ್ವ ಜನಾದರಣೀಯವಾಗಲೆಂದು ಕೋರುವೆವು.

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

O P No 82/33

ಬೆಳ್ತಂ ಪೂಜಾರಿ ಮಾಲಿಂಗನ ಸೊಸೆ ನ ಜೋಯಿಷ್ಣಿ ಮಗಳು—ಕಾಸರಗೋಡು ತಾಲೂಕು ನೆಕ್ರಾಜೆ ಗ್ರಾಮದಲ್ಲಿ ರಿಂದವರು—ಅರ್ಜಿದಾರರ

ಕಾಸರಗೋಡು ತಾಲೂಕು ನೆಕ್ರಾಜೆ ಗ್ರಾಮದಲ್ಲಿ ಇತ್ತ ಲಾಗೆ ವ್ಯವಹಾರಪಟ್ಟ ಜೋಯಿ ಷ್ಣ ಎಂಬವರಿಗೆ ಒಂದಕ್ಕೆ ಸಾಲ ನಮೂಲು ಮಾಡಿದವರ ತನಗೆ ಸಕ್ಷೆಸ್ಸಿನ್ ಸರ್ಟಿಫಿಕೇಟು ಕೊಡ ಬೇಕಾಗಿ ಸದ್ರಿ ವ್ಯಕ್ತ ಮೇಲೆ ಹೆಸರು ಕಾಣಿಸಿದ ಅರ್ಜಿದಾರರು ಮೇಲ್ಕ್ಯಾನಿಸಿದ ಅರ್ಜಿದಾಖ್ಲು ಮಾಡಿರುತ್ತಾಳೆ ಆದ್ದರಿಂದ ಆ ವಿಷಯದಲ್ಲಿ ಆಕ್ಷೇಪ ಹೇಳತಕ್ಕವರ ತಮ್ಮ ಆಕ್ಷೇಪಣೆಗಳನ್ನು ಇದೇ ದಿನದ ಇಂದ ತಾ 12ನೇ ದಿವಸ 11-ಂಟೆಗೆ ತಮ್ಮ ಆಕ್ಷೇಪಣೆಗಳನ್ನು ಕೋರ್ಟಿನಲ್ಲಿ ಜ್ಞಾಪಿಸಲು ವಾಡಿಕೆಯಲ್ಲಿರಬಹ ದೆಂತ ಈ ವ ಖಲಾ ಎಲ್ಲಾ ಜನರಿಗೆ ತಿಳಿಸೋ ಣಾಗಿಯದೆ

Kasargode, 26 "—1933 } **S Lakshman Rao,**
Vakil for Petitioner

+–+ +–+

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದ ಕನ್ನಡ)

ಇವರಿಂದ ತಯಾರಿಸಲ್ಪಟ್ಟು, ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ನಡೆದ ಅಖಿಲ ಭಾರತ ವಸ್ತು ಪ್ರದರ್ಶನಗಳಲ್ಲಿ
ಸುವರ್ಣ ಪದಕಗಳನ್ನು ಪಡೆದಿರುವ "ಕರ್ನಾಟಕ"

ದ್ರಾಕ್ಷಾಸವ, ಬ್ರಿಲ್ಲೆಂಟೈನ್ ಇಂಕ್ಸ್,
ಟೈವನಪ್ರಾಶ, ಸ್ನೋ, ಸೋಪ್ಸ್,

ಇವುಗಳನ್ನೇ ಉಪಯೋಗಿಸಿರಿ

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ವಿಜಂಟರು.–

ಕರ್ನಾಟಕ ಪ್ರೊಡಕ್ಟ್ಸ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

Managing Director—**Venkatraya Annappa Baliga**

ಜೆ. ಎಂ. ಸೇನಗುಪ್ತರು ಪರಂಧಾಮವನ್ನೈ ದಿದರು!

ಲಕ್ಷೋಪಲಕ್ಷ ಜನರಿಂದೊಡಗೂಡಿದ ಮೆರವಣಿಗೆ!

ಅಖಿಲ ಹಿಂದೂಸ್ಥಾನವು ದುಃಖಕ್ಕೊಳಗಾಯಿತು!

ಶ್ರೀಯುತ ಜೆ. ಎಂ. ಸೇನಗುಪ್ತರವರು ಅದಿಷ್ಟವಶಾತ್ ನಿನ್ನೆ ಬೆಳಿಗ್ಗೆ ೧-೩೫ಕ್ಕೆ ರಾಂಚಿಯಲ್ಲಿ ಭೌತಿಕನಿಧನರಾದರು. ಮೊದಲಿನ ದಿನ, ಶನಿವಾರ, ಪೂರ್ವಾಹ್ನ, ಊಟವಾದ ನಂತರ ಅವರು ತಲೆ ನೋವಿನಿಂದ ಬಳಲಿತರಾದರು. ನೋವು ವಿಪರೀತವಾದುದರಿಂದ ಸಿವಿಲ್ ಸರ್ಜನರಾದ ಮೇಜರ್‌ವೈಟ್ ಎಂಬವರನ್ನು ಒಡನೆ ಬರಮಾಡಿಕೊಂಡರು. ಅವರು ಬರುವಷ್ಟರೊಳಗೆ ಶ್ರೀಯುತರು ಜ್ಞಾನಶೂನ್ಯರಾದರು. ಮಧ್ಯಾಹ್ನದಿಂದ ರಾತ್ರಿ ವರೆಗೂ ಎಂತೆಂತಹ ಶುಶ್ರೂಷೆ ನಡೆಸಿದರೂ ಅವರು ಗುಣಹೊಂದಲಿಲ್ಲ. ತನ್ನವ್ವೆ ಕೆಲವು ಸಂಬಂಧಿಕರೂ ಮಿತ್ರರೂ ಬಂಗಲೆಯಲ್ಲಿ ನೆರೆದರು.

ರಾಂಚಿಯಿಂದ ಅವರ ಮೃತ ಶರೀರವನ್ನು ಶೃಂಗರಿಸಿ ಕಲ್ಕತ್ತಕ್ಕೆ ಒಯ್ಯಲು ಸಿದ್ಧತೆಯಾಯಿತು. ರಾಂಚಿಪಟ್ಟಣದ ಮಾರ್ಗವಾಗಿ ಬರುತ್ತಲೇ, ಸಾವಿರಾರು ಜನಸಂದಣಿಯು ಮೆರವಣಿಗೆಯಲ್ಲಿ ಸೇರಿಕೊಂಡಿತು. ಸ್ತ್ರೀಪುರುಷ ಬಾಲರಾದಿಗಳು ಶವಕ್ಕೆ ಹೂಮಾಲೆಗಳನ್ನೂ ಗಂಧವನ್ನೂ ಘರ್ಷಿಸಿದರು. ಹಿರಿ ಜನರ ತಂತಿಗಳೂ ಮೆರವಣಿಗೆಯಲ್ಲಿ ಸೇರಿಕೊಂಡಿದ್ದುವು. ಎಲ್ಲೆಲ್ಲೂ "ಸೇನಗುಪ್ತಕೀ ಜೈ!" ಎಂಬ ಜಯಕಾರವು ಆಕಾಶವನ್ನು ಭೇದಿಸಿ ನಡೆಯಿತು. ರೈಲ್ವೆಸ್ಟೇಶನಿಗೆ ತಲುಪುತ್ತಲೇ ಕಳೇಬರದ ಮುಖವನ್ನು ಜನಸಂದಣಿಗೆ ತೋರಿಸಿ ಅದನ್ನು ರೈಲಿನಲ್ಲಿರಿಸಲಾಯಿತು. ಶ್ರೀಮತಿ ಸೇನಗುಪ್ತರೂ ಅವರ ಮೊಮ್ಮಗಳೂ ಕಳೇಬರದೊಡನೆ ಕುಳಿತರು.

ರಾಂಚಿಯಲ್ಲಿನ ಘನ ಸರಕಾರೀ ಉದ್ಯೋಗಸ್ಥರೊಬ್ಬರು ಹೇಳುವಂತೆ, ಸ್ವರ್ಗವಾಸಿ ಮಹಾಶಯರಿಗೆ ರಾಂಚಿಯಲ್ಲಿ ದೊರೆತ ಅಂತ್ಯಗೌರವವು ಚಕ್ರವರ್ತಿಗಳಿಗೆ ಸರಿಸಮಾನವಾದುದೆಂದು ತಿಳಿದುಬರುತ್ತದೆ.

ರೈಲು ಕಲ್ಕತ್ತಕ್ಕೆ ತಲುಪುತ್ತಲೇ ಸ್ಟೇಶನಿನಿಂದ ಪಟ್ಟಣದ ಮಾರ್ಗಗಳ ವರೆಗೂ ಸಾಲಿನಲ್ಲಿ ಲಕ್ಷೋಪಲಕ್ಷ ಜನರು ನಿಂತು ಗಂಭೀರ ಮುಖ ಮುದ್ರೆಯುಳ್ಳವರಾಗಿ ಪರಂಧಾಮ ವಾಸಿಗಳಾದ ಶ್ರೀ. ಜೆ. ಎಂ. ಸೇನಗುಪ್ತರ ಅಂತ್ಯದರ್ಶನವನ್ನು ಮಾಡಲು ತವಕಗೊಳ್ಳುತ್ತಿದ್ದರು. ಶ್ರೀಯುತರ ಶವವನ್ನು ನೋಡಲು ಆ ಬಾಲ ವೃದ್ಧರೊಬ್ಬರೂ ಮರೆಯಲಿಲ್ಲ. ಶ್ರೀಯುತರು ಮೃತ ರಾಗಿದ್ದರೂ ಅವರ ಮುಖದಲ್ಲಿ ಮಂದಹಾಸವು ಒಡೆದು ಕಾಣುತ್ತಿತ್ತು. ರಾಂಚಿಯಿಂದ ಮುರಿಯೆಂಬಲ್ಲಿಯ ವರೆಗೆ ಪ್ರತಿಯೊಂದು ಸ್ಟೇಶನಿನಲ್ಲಿಯೂ ಜನಗಳಾ ಜನರು ಪುಷ್ಪಹಾರಗಳನ್ನು ಶವಕ್ಕೆ ತೊಡಿಸಿದರು. ೩೬ ವೈಲುಗಳನ್ನು ದಾಟುತ್ತಲೇ ರೈಲಿನ ಒಂದು ಕೋಣೆ ತುಂಬಾ ಹೂಮಾಲೆಗಳು ರಾಶಿ ಬಿದ್ದುವು. ತಾತಾ ನಗರದಲ್ಲಿ ಸುಮಾರು ಗಂಟೆಂಂ ಸಾವಿರ ಜನರು ಶವ ವನ್ನುಬೀಳ್ಕೊಟ್ಟರು. ಹೌರಾದಲ್ಲಿ ರೈಲನ್ನು ಸಾವಿರಾರು ಜನರು ಹತ್ತಿ ಕುಳಿತು ಕಲ್ಕತ್ತಕ್ಕೆ ಬಂದರು. ಹೌರಾ ಸ್ಟೇಶನಿನಲ್ಲಿ ದೇಶಾಭಿ ಸಮಯದಲ್ಲೂ ಅಷ್ಟು ಜನಸಂದಣಿಯು ರೈಲು ಹತ್ತಿರಲಿಕ್ಕಿಲ್ಲ. ಎಲ್ಲೆಲ್ಲೂ ದಿಗಂತವು "ವಂದೇ ಮಾತರಂ" ಮತ್ತು "ಸೇನಗುಪ್ತಕೀ ಜೈ!" ಎಂಬ ಜಯಜಯಕಾರದಿಂದ ತುಂಬಿಹೋಯಿತು. ರಾಮಕೃಷ್ಣತಲದಲ್ಲಿ ಎರಡು ಲಕ್ಷ ಕ್ಕೆಂತಲೂ ಹೆಚ್ಚು ಜನರು ಸ್ಟೇಶನಿನಲ್ಲೂ ಬೀದಿಗಳಲ್ಲೂ ನೆರೆದು ಶವವನ್ನು ಕಾಣಲು ಕೂತಹಲಿಗಳಾಗಿದ್ದರು. ಪ್ರತಿಯೊಂದು ಅಂಗುಲ ಸ್ಥಳವೂ ಜನದಿಂದ ತುಂಬಿಕೊಂಡಿತ್ತು. ಕಲ್ಕತ್ತದ ಮೇಯರರಾದ ಶ್ರೀ. ಸಂತೋಷ ಕುಮಾರರು ಅಶ್ರುಪೂರಿತ ರಾಗಿ ದಿವಂಗತರ ಶವವನ್ನು ಗೌರವಿಸಿದರು. ಡಾ। ಬಿಧನ್ ಚಂದ್ರರೋಯ್ ಶ್ರೀ. ನಳಿನಿ ರಾಜನ್ ಸರ್ಕಾರ್, ಶ್ರೀ. ಜಿ. ಸಿ. ಗುಪ್ತ ಮೊದಲಾದ ಅನೇಕ ದೊಡ್ಡ ದೊಡ್ಡ ವ್ಯಕ್ತಿಗಳು ಶ್ರೀ. ಸೇನಗುಪ್ತರನ್ನು ಮಾನಿಸಿದರು. ಮೆರವಣಿಗೆಯನ್ನು ಮುಂದೆ ನಡೆಸಬೇಕಾದರೆ ವೋಲೀಸರಿಗೂ ಸ್ವಯಂಸೇವಕರಿಗೂ ದುಃಸ್ಸಾಧ್ಯ ಕೆಲಸವಾಗಿ ಪರಿಣಮಿಸಿತು—ಜನರ ಒತ್ತಾಟವು ವಿಪರೀತವಾಗಿತ್ತು. ಹೌರಾದಿಂದ ಹೊರಡುವಾಗ ಶವದ ಗಾಡಿಯಿಂದ ಎರಡು ಮೈಲುಗಳ ವರೆಗಿನ ದಾರಿಯುದ್ದಕ್ಕೂ ಸುಮಾರು ೬ ಲಕ್ಷ ಜನರು ನಿಂತಿದ್ದು ಕಾಯುತ್ತಿದ್ದರು. ಹೌರಾದಲ್ಲಿ ಮೆರವಣಿಗೆಯು ಸಂಕವನ್ನು ದಾಟಲು ಒಂದು ಘಂಟೆಗಿಂತಲೂ ಹೆಚ್ಚು ಸಮಯವು ಬೇಕಾಯಿತು. ಈ ಸಂಕ ವನ್ನು ಕಟ್ಟಿ ನೂರು ವರ್ಷಗಳು ದಾಟಿದರೂ ಇಷ್ಟು ಜನರ ಜನರು ಒಂದೇ [illegible] ಅದರ ಮೇಲೆ ನಡೆದಿರುವುದಿಲ್ಲ. ಸಂಕವು ಭಾರದಿಂದ ಎಲ್ಲಿ ಬೀಳುವುದೋ ಎಂದು ಪೋರ್ಟ್ ಟ್ರಸ್ಟ್ ಆಫೀಸರರಿಗೆ ಭಯವಿಲ್ಲದಿರಲಿಲ್ಲ. ಹೌರಿಸನ್ ರೋಡ್ ನಲ್ಲಿ ಎರಡು ಫರ್ಲಂಗುಗಳ ವರೆಗೆ ಜನಸಂದಣಿಯು ಎಳ್ಳಷ್ಟು ಸ್ಥಳವಿಲ್ಲದೆ ಬಳಲಿತು. ಚಾಪಜಾರ್‌ನಲ್ಲಿ ಸಾವಿರಗಟ್ಟಲೆ ಜನರು ತಮ್ಮ ಪುಷ್ಪಹಾರಗಳನ್ನು ಶವದ ಗಾಡಿಗೆರೆದರು.

ಮಹಾತ್ಮಾ ಗಾಂಧಿಯವರು ಈ ಮರಣ ವಾರ್ತೆಯನ್ನು ಕೇಳಿ ಶ್ರೀಮತಿ ಸೇನಗುಪ್ತರಿಗೆ ಒಡನೆ "ಶ್ರೀ. ಸೇನಗುಪ್ತರ ಮರಣ ವಾರ್ತೆಯನ್ನು ಈಗ ಕೇಳಿದೆನು. ನಿಮಗಾದ ನಷ್ಟವು ರಾಷ್ಟ್ರದ್ದೂ ಆಗಿರುತ್ತದೆ. ನಮ್ಮ ದುಃಖದಲ್ಲಿ ಧೈರ್ಯವಹಿಸುವ ಅಸಂಖ್ಯಾತ ಜನರಲ್ಲಿ ನನ್ನನ್ನೂ ಒಬ್ಬನೆಂದು ತಿಳಿಯಿರಿ" ಎಂದು ತಂತಿಕೊಟ್ಟರು. ಪಂಡಿತ ಮಾಲವೀಯ, ಶ್ರೀ. ಭೂಲಾಭಾಯಿ ದೇಸಾಯಿ, ಶ್ರೀ. ಎಸ್ ಸಿ. ಕೇಳ್ಕರ್, ಶ್ರೀ. ಜೆ. ಎನ್ ಬಾಸು, ಶ್ರೀ. ಟಿ. ಸಿ. ಗೋಸ್ವಾಮಿ, ಮಿ। ಫೆಜಲ್ ಹಕ್, ಸರ್ ಎ. ಶುಹರವಾರ್ದಿ ಶ್ರೀ. ಬಿ. ಕೆ. ಬಾಸು, ಸರ್. ಎ. ಕೆ. ಫಜಲ್ ನಾವಿ, ಉಧ್ಯಾನಿನ ಮಹಾರಾಜಾಧಿರಾಜರು, ಮಿನಿಸ್ಟರರಾದ ಸರ್ ಬಿಜೋಯ್ ಪ್ರಸಾದ ಸಿಂಘರೊಯ್ ಮೊದಲಾದ ಮುಖಂಡರೂ ಇನ್ನನೇಕ ಅಸಂಖ್ಯಾತರೂ ಶ್ರೀ. ಸೇನಗುಪ್ತರ ಮರಣಕ್ಕಾಗಿ ಬಹುವಾಗಿ ಶೋಕಿಸಿರುವರು. ಬಂಗಾಳವು ತನ್ನ ಸುಪುತ್ರ ನನ್ನು ಅಕಾಲವಶಾತ್ ಕಳಕೊಂಡಿತೆಂದೂ, ಧರಿತವರ್ಷವು ಅದರ ಧೀರವೀರರುಗಳಲ್ಲಿ ಒಬ್ಬೊಬ್ಬರನ್ನೇ ಈ ಸಂದಿಗ್ಧ ಸಮಯ ದಲ್ಲಿ ಕಳಕೊಳ್ಳುವುದು ದುರ್ದೈವವೆಂದೂ ಪ್ರತಿಯೊಬ್ಬರ ಮತ. ಶ್ರೀ. ಸೇನಗುಪ್ತರು ಮಾನವವರ್ಗದವರಲ್ಲಿ ರಾಜ ಕುಮಾರ ರೆಂದೂ, ಕಿರೀಟರಹಿತ ಅರಸನೆಂದೂ ಒಂಗಳಿ ಮುಖಂಡರ ಅಭಿಪ್ರಾಯ. ಶ್ರೀ. ದೇಶಬಂಧು ಸಿ. ಆರ್ ದಾಸರ ಯೋಗ್ಯ ಶಿಷ್ಯರೆಂದರೆ ಶ್ರೀ. ಸೇನಗುಪ್ತರೆಂದೂ ಅವರ ಮರಣದಿಂದ ಅಖಿಲ ಹಿಂದೂಸ್ಥಾನದ ಎಲ್ಲಾ ಮತಸ್ಥರು ದುಃಖತಪ್ತರಾಗಿ ದಿರರೆಂದೂ ಪಂಡಿತ ಮಾಲವೀಯರು ಹೇಳಿರುವರು.

ಕಲ್ಕತ್ತ, ದಿಲ್ಲಿ, ಲಾಹೋರ್, ಅಲ್ಲಹಾಬಾದ್, ಕಾನ್ ಪುರ, ಮುಂಬಯಿ, ರಾಂಚಿಗಳೇ ಮೊದಲಾದಅನೇಕ ತ್ರಾಮುಟ್ಟ ನಗರಗಳಲ್ಲಿ ಶ್ರೀ ಸೇನಗುಪ್ತರ ಮರಣಕ್ಕಾಗಿ ದುಃಖ ಸೂಚನೆ ಯನ್ನು ಮಾಡಲಾಯಿತು. ಶ್ರೀ ಸೇನಗುಪ್ತರು ರಾಜಬಂಧನ ದಲ್ಲಿರುವ ವೇಳೆಯಲ್ಲಿ ಮೃತಂದಾದುದರಿಂದ ದಿಲ್ಲಿಯಲ್ಲಿ ರಾಜ ಬಂಧಿಗಳನ್ನು ಯಾನ ವಿಚಾರಣೆಯಿಲ್ಲದೆ ಬಂಧನದಲ್ಲಿಡುವುದು ಅಯುಕ್ತವೆಂದು ಧಾಮಣವು ನಡೆಯಿತು.

ಬಂಗಾಳದ ಗವರ್ನರರು ಶ್ರೀ ಸೇನಗುಪ್ತರ ಮರಣಕ್ಕಾಗಿ ಶೋಕಿಸಿ ತಂತಿಯನ್ನು ರವಾನಿಸಿರುವರು. ಲಂಡನ್ನಿನಿಂದ ಸರ್. ತೇಜಬಹದ್ದೂರ್ ಸಪ್ರುಗಳವರ ತಂತಿಯೂ, ಶ್ರೀಮತಿ ಸೇನ ಗುಪ್ತರಿಗೆ ತಲಪಿರುತ್ತದೆ.

ಸಂಕ್ಷಿಪ್ತ ಜೀವನ ಚರಿತ್ರೆ.

ಶ್ರೀ ಜತೀಂದ್ರ ನೋಹನ ಸೇನಗುಪ್ತರಿಗೆ ಚಿತ್ತಗೊಂಗಿನಲ್ಲಿ ೧೮೮೫ರಲ್ಲಿ ಜನಿಸಿದರು. ೧೯೦೫ರಲ್ಲಿ ಅವರು ವಿದ್ಯಾಭ್ಯಾಸಕ್ಕೆಂದು ಇಂಗ್ಲಾಂಡಿಗೆ ಹೋಗಿ ಕೇಂಬ್ರಿಜ್‌ನಲ್ಲಿ ಕಲಿತರು. ಅಲ್ಲಿ ಪಿಸ್ ನೆಲ್ಲಿಗ್ರೇಯುವರ ಪರಿಚಯವಾಗಿ ಅವರೇ ಶ್ರೀಯುತರ ಪತ್ನಿಯಾದರು. ಇಂಗ್ಲಾಂಡಿನಿಂದ ಹಿಂತಿರುಗಿ ಶ್ರೀ ಸೇನಗುಪ್ತರು ಬಹು ಲಾಭಕರ ವಕೀಲ ವೃತ್ತಿಯಲ್ಲಿ ಹೆಸರುವಾಸಿಗಳಾದರು. ೧೯೧೯ರಲ್ಲಿ ಅವರ ಬತ್ತಿವು ರಿಷ್ಯದ ಕಡೆಗೆ ತಿರುಗಿತು. ಕೊಂಗ್ರೆಸ್ಸಿಗೆ ಹೊಕ್ಕಿದನೆ ಅವರ ಹೆಸರು ಜನಜನಿತವಾಯಿತು. ಅಸಹಕಾರ ಚಳವಳಿಯ ಪ್ರಾರಂಭ ವಾದಾಗ ಅವರು ತನ್ನ ಸರ್ವ ಧನಾರ್ಜನೆಯ ವೃತ್ತಿಯನ್ನು ಏಳ್ದಿಸಿ ರಾಷ್ಟ್ರ ಕಾರ್ಯರಂಗಕ್ಕೆ ದುಮುಕಿದರು. ಅಸಹಕಾರತೆಯಿಂದಾಗಿ ಅವರಿಗೆ ೧೯೨೧ರಲ್ಲಿ ೩ ತಿಂಗಳುಗಳ ಕಾರಾವಾಸವು ಲಭಿಸಿತು. ೧೯೨೧-೨೨ರಲ್ಲಿ ಬಂಗಾಳ ಪ್ರಾಂತಿಕ ಕೊಂಗ್ರೆಸ್ ಕಮಿಟಿಯ ಸೈಸ್ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟರು. ೧೯೨೨ರಲ್ಲಿ ಕೊಂಗ್ರೆಸ್ಸಿನ ಕಾರ್ಯ ಕಾರೀ ಮಂಡಳಿಯ ಸದಸ್ಯರೊಬ್ಬರಾದರು. ಅಸಹಕಾರ ಚಳವಳಿ ಹಿಂತೆಗೆಯಲ್ಪಟ್ಟಿದನೆ ಅವರು ಪುನಃ ವೃತ್ತಿಯನ್ನು ಕೈಗೊಂಡರು. ೧೯೨೫ರಲ್ಲಿ ದೇಶಬಂಧು ಚಿತ್ತರಂಜನದಾಸರ ಮರಣದ ನಂತರ ಅವರು ಕಲ್ಕತ್ತದ ಮೇಯರರಾದರು. ೧೯೩೦ರ ತನಕ್ಕ ಅವರು ಇದೇ ಸ್ಥಾನದಲ್ಲಿದ್ದು ಬಹು ಕೀರ್ತಿಯುತರಾದರು. ೧೯೩೦ರಲ್ಲಿ ಅವರನ್ನು ಮೇಯರರಾಗಿ ಜನರು ಆರಿಸುವಾಗ ಕ್ರೀಯುತರು ಕಾರಾಗೃಹದ ಕಕ್ಕಲೆಯಲ್ಲಿದ್ದರು. ೧೯೩೪ರಲ್ಲಿ ಅವರು ಬಂಗಾಳ ಪ್ರಾಂತಿಕ ಕೊಂಗ್ರೆಸ್ ಕಮಿಟಿಯ ಅಧ್ಯಕ್ಷರಾದರು. ನಂತರ ಬಂಗಾಳ ನ್ಯಾಯ ವಿಧಾಯಕ ಸಭೆಯಲ್ಲಿ ಕೊಂಗ್ರೆಸ್ಸಿನ ಪ್ರತಿಭಾನಿಧಿಸಿಸಲ್ಪಟ್ಟ ವ್ಯಕ್ತಿಗಳಾದರು. ಬಂಗಾಳ ಕೊಂಗ್ರೆಸ್ಸಿನಲ್ಲಿ ಛಿದ್ರಿಭಾವವು ತಲೆದೋರಿದಾಗ ಅವರು ವಿಶ್ವಸನ್ಮಂಟುಮಾಡಲು ಅತ್ಯಂತ ಸಾಹಸಪಟ್ಟರು. ಕೊನೆಗೆ ಕೊಂಗ್ರೆಸಿನ ಸದಸ್ಯತ್ವಕ್ಕಾಗಿ ಅವರು ರಾಜಿಕೊಟ್ಟರು. ೧೯೩೦ರಲ್ಲಿ ಶ್ರೀ ಸೇನಗುಪ್ತರು ಆರೋಗ್ಯ ಲಾಭಕ್ಕಾಗಿ ಯೂರೋಪ ಸಂಚಾರಕ್ಕೆ ತೆರಳಿದರು. ಅದೇ ವರ್ಷ ಜನವರಿ ೨೦ನೇ ದಿನ ಅವರು ಮುಂಬಾಯಿಯಲ್ಲಿ ಸ್ವೀಮರಿನಿಂದ ಇಳಿಯಲಿದ್ದಾಗಲೇ ಅವರನ್ನು ರಾಜಬಂಧಿಯಾಗಿ ಹಿಡಿದು ಸೆರೆಗೊಯ್ದರು. ಆರೋಗ್ಯವು ನೆಟ್ಟಗಿಲ್ಲದಿದ್ದುದರಿಂದಲೂ, ರಕ್ತ ಚಲನೆಯು ಆಗಾಗ ವಿಶೇಷವಾಗುತ್ತಿದ್ದುದರಿಂದಲೂ ಸರಕಾರವು ಅವರನ್ನು ರಾಂಚಿಯಲ್ಲಿ ಪ್ರತ್ಯೇಕ ಬಂಗಲೆ ಮಾಡಿ ವಾಸಿಸಲು ಅನುಮತಿಯನ್ನೀಯಿತು. ಕಳೆದ ಶನಿವಾರ ಮಧ್ಯಾಹ್ನ ತಲೆನೋವೆಂದು ಮಲಗಿದವರನ್ನು ಕಾಲನು ಕೊಂಡೊಯ್ದು ಇಡೀ ರಾಷ್ಟ್ರವನ್ನು ದುಃಖ ಸಾಗರದಲ್ಲಿ ಮುಳುಗಿಸಿದನು.

ಮಂಗಳೂರಿನಲ್ಲಿ ಪ್ರವಾಸ.

ಜೆ. ಎಂ ಸೇನಗುಪ್ತರು ಗಳಾನಿನೇ ಇಸವಿ ಮೇ ತಾ.೩ನೆ ದಿನ ಬೆಳಿಗ್ಗೆ ಹತ್ತು ಘಂಟೆಗೆ ದಕ್ಷಿಣ ಕನ್ನಡ ಜಿಲ್ಲಾ ೩ನೇ ರಾಜಕೀಯ ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನು ವಹಿಸಲು ಮಂಗಳೂರಿಗೆ ಬಂದಿದ್ದರು. ಅವರ ಅವೇಶಪರ ಭಾಷಣವು ಅವರನ್ನು ಧೀರ ಬಂಗಾಳಿಯೆಂದೇ ಕರೆಯಬೇಕೆಂದೆನ್ನಿಸುವಂತಿತ್ತು.

ಅಂತ್ಯಸತ್ಕಾರ.

ಶ್ರೀ. ಸೇನಗುಪ್ತರ ಶವ ಮೆರವಣಿಗೆಯು ಕಲ್ಕತ್ತದ ಶಹಾನಗರ ಸ್ಮಶಾನ ಭೂಮಿಯಲ್ಲಿ ನಿಂತಿತು. ಒಂಬೆವರೆ ಮೈಲು ಉದ್ದದ ಮೆರವಣಿಗೆ ಸಧೆಯು ಅಮ್ಮ ವಿಸ್ತೀರ್ಣವನ್ನು ಮುಚ್ಚಿಕೊಂಡಿತ್ತು. ಅವರ ಕಳೇಬರವನ್ನು ದಿವಂಗತ ಸಿ. ಆರ್. ದಾಸರ ಕಳೇಬರವನ್ನು ಲ ವರ್ಷಗಳ ಹಿಂದೆ ಭಸ್ಮೀಕರಿಸಿ ದ್ದಲ್ಲಿಯೇ, ಸಮೀಪವಾಗಿ ಕಳಿಸಲಾಯಿತು. ಹಿಂದೂ ವಿಧಿ ಪ್ರಕಾರವಾಗಿ ದಹನಕಾರ್ಯವೆರವೇರಿಸಲಾಯಿತು. ಅವರ ಅಣ್ಣನಾದ ಶ್ರೀ. ಸಿಸಿರನೆಂಬವರು ಅಂತ್ಯಸಂಸ್ಕಾರವನ್ನು ನಡಾಡಿದರು. ಶ್ರೀ. ಕೃಷ್ಣಕುಮಾರ ಮಿತ್ರ, ಡಾ। ಪ್ರಾಣಕೃಷ್ಣ ಆಚಾರ್ಯ ರವರು ಪ್ರಾರ್ಥನೆ ಮಾಡಿದರು. ಶವಕ್ಕೆ ಅಗ್ನಿ ಹಚ್ಚುವಾಗ ನೆರೆದ ಸಭಿಕರಲ್ಲಿ ಕಣ್ಣೀರು ಸುರಿಸದವರು ಇಲ್ಲವಾದರು.

ನಿಮಿಷ ನಿಮಿಷಕ್ಕೂ ಬೆಳೆದ ಮೆರವಣಿಗೆಯ ಜನತೆಂಡವನ್ನು ಕಂಡು ಆಂಗ್ಲೇಯರೊಬ್ಬರು ಆಶ್ಚರ್ಯಪಟ್ಟು, "ನಿಜವಾಗಿಯೂ, ಈ ಜನರು ತಮ್ಮ ಜಾಗ್ರತೆಯನ್ನು ಕಾವ ತೆಗೆದು ಕೊಳ್ಳಲರ್ಹರು" ಎಂದು ಅಸಿವಾರ್ಯವಾಗಿ ಹೇಳಿದರು. "ಸೇನ ಗುಪ್ತಕೀ ಜೈ!"ಎಂಬ ಆವೇಶಪರ ಜಯಕಾರವು ಬಲ್ಲಿಯೂ ಪ್ರತಿ ಯೊಬ್ಬನನ್ನು ರಾಷ್ಟ್ರಸೇವೆಗಾಗಿ ಎಚ್ಚರಿಸುವಂತಿದ್ದಿತ್ತು. ಹಿಂದೀ ಯರು ವೀರಪೂಜೆಯಲ್ಲಿ ಹಿಂದಕ್ಕಿರುವವರು ಎಂಬ ಮಾತು ಸುಳ್ಳೆಂದು ಶ್ರೀ ಗುಪ್ತರ ಮರಣದಿಂದ ವಿದಿತವಾಯಿತು.

ಬರೇ ಶವದಹನ ಸ್ಥಳದಲ್ಲಿಯೇ ೫೦,೦೦೦ ಜನರು ನುಗ್ಗಿ ನೂಕಿ ನಿಂತಿದ್ದರು, ಬಿಸಿಲಿನ ತಾಪವೂ ಅವರಿಗೆ ಧಾಪ ವಾಗಲಿಲ್ಲ. ಇದರಿಂದಾಗಿ ಸುಮಾರು ೩೦೦ ಜನರು (Sunstroke) ಬಿಸಿಲುತಾಪದಿಂದಾಗಿ ಮೂರ್ಛೆಹೊಂದಿದ ರೆಂದು ತಿಳಿದುಬಂದಿದೆ.

ಕಲ್ಕತ್ತದಲ್ಲಿ ಇಡೀ ನಗರವು ಮರಣದ ಮನೆಯಂತೆ ಕಂಡಿತು. ಎಲ್ಲಾ ಅಂಗಡಿಗಳೂ, ಆಫೀಸುಗಳೂ ಶಾಲಾ ಕೊಲೆಜುಗಳೂ ಮುಚ್ಚಲ್ಪಟ್ಟಿದ್ದುವು. ಜಾತಿ ಮತ ಭೇದವಿ ನ್ನದೆ ಎಲ್ಲರ ಮುಖ ಬಾಡಿ ಕುಂದಿತ್ತು. ಶ್ರೀಯುತರ ಮರಣವು ಇಡೀ ಬಂಗಾಳವನ್ನು ವ್ಯಸನಕ್ಕೀಡು ಮಾಡಿದೆ. ಶ್ರೀಯುತರ ಜನನ ಸ್ಥಳವಾದ ಚಿತ್ತಗಾಂಗಿನಲ್ಲಿ ಸಂಪೂರ್ಣ ಹರ್ತಾಳವು ಆಚರಿಸಲ್ಪಟ್ಟಿತು. ಕಲ್ಕತ್ತದ ಶೇರ್ ಮಾರ್ಕೆಟ್, ನೇಶನಲ್ ಚೇಂಬರ್ ಒಫ್. ಕಾಮರ್ಸ್‌ನ ಆಫೀಸು ಮೊದ ಲಾದುವೆಲ್ಲ ಮುಚ್ಚಲ್ಪಟ್ಟಿದ್ದುವು.

ಡಾ। ರವೀಂದ್ರನಾಥ ಠಾಗೂರ್, ಶ್ರೀಮತಿ ಸರೋಜಿನಿ ನಾಯಿಡು, ಸರ್ಜೆಂದ್ರಬೋಸ್, ಸುಬಾಸ್ ಚಂದ್ರ ಬೋಸ್, ಶ್ರೀ ಅಣೆ ಮೊದಲಾದ ಪ್ರಮುಖರೂ ಸಹಶಾಪತಂತಿಯನ್ನು ಕಳು ಹಿಸಿರುವರು. ಅನೇಕ ಮಹಿಳೆಯರೂ ಶ್ರೀಮತಿ ಸೇನಗುಪ್ತರಿಗೆ ತಂತಿಕೊಟ್ಟಿರುವರು. ಶ್ರೀಮತಿ ಲೀಲಾವತಿ ಮುನ್ಷಿಯವರು ಹೃದಯದ್ರಾವಕ ತಂತಿಯನ್ನು ಕೊಟ್ಟು ಶ್ರೀಮತಿ ನೆಲ್ಲಿ ಸೇನ ಗುಪ್ತರನ್ನು ಸಮಾಧಾನಿಸಿರುವರು.

ವಿವಿಧ ಸಮಾಚಾರ:—

ರೋಗಗಳಿಗೆ ನಿಂಬೆಹಣ್ಣು. ಸಮುದ್ರದಲ್ಲಿ ಮುಳುಗುವುದು ನಿಂತಿತು. ಹೊಸ ತರದ ವಿದ್ಯೆ.
ಹೊಸ ರೀತಿಯ ವಿಮಾನ. 13 ಸಲದ ಮೆಟ್ರಿಕ್. ಕೊಂಗ್ರೆಸ್ಸಿನ ಭವಿಷತ್ತು.
ಆಫೀಲೋಸಿನಲ್ಲಿ ನಿರುದ್ಯೋಗ. ಆಂಜೆ ಚೀಟಿನ ಅಗತ್ಯ.

ರೋಗಗಳಿಗೆ ನಿಂಬೆಹಣ್ಣು.

ಜ್ವರ ಬಂದಾಗ ಬಾಯಿಯಿಂದೆಯು ರುಚಿಹೆಚ್ಚುವದಕ್ಕೆ ಅಗ ಅ ಜಾಗಿ ಸಕ್ಕರೆ, ಒ ಟೀಸ್ಪೂ ತಕ್ಕೋರು, ೨ ಟೇಬಲ್ ಚಂಚಾದಷ್ಟು ನಿಂಬೆ ಹಣ್ಣಿನ ರಸ, ಇವೆಲ್ಲನ್ನು ಬೆರಸಿ ಕೊಟ್ಟರೆ ಅತ್ಯಂತ ಗುಣಕಾರಿ. ವಿಷಮ ತೀವ್ರಜ್ವರ ಮೊದಲಾದ ಪ್ರಬಲವಾದ ರೋಗಗಳಲ್ಲಿ ತೆಳ್ಳಗಿನ ಪಾಲನ್ನು ಆದಿಸಿ ನಿಂಬೆಯಿಂ ರಸವನ್ನು ಹಿಂದಿ ಕೊಡಬಹುದು ಬೇಸಿಗೆಯಲ್ಲಿ ರೋಗಿಗಳು ನಿಂಬೆ ಹಣ್ಣಿನ ರಸದ ಪಾನಕ ಅಥವಾ ಬಿಸಿಯಾದ ಚಹಾ ಕುಡಿಯಲು ಕೊಡಬಹುದು. ಗಾಬರಿ ರೋಗವುಳ್ಳವರು ನಿತ್ಯವೂ ನಿಂಬೆಯ ಹಣ್ಣುಗಳನ್ನು ತಿನ್ನುತ್ತಿದ್ದರೆ ಒಳ್ಳೆಯದು ಗಂಟಲು ಕಟ್ಟಿ ಆಪತ್ಸರವೂ ಆಯಾಸವೂ ಹೆಚ್ಚಿರುವ ಸಮಯಗಳಲ್ಲಿ ನಿಂಬೆಯ ಹಣ್ಣು ಅಮೃತ್ಯವಾದ ವಸ್ತು ವಾಗಿರುವುದು. ಸ್ವದೇಶಿ ಸ್ವಾಭಾವಿಕ ಸ್ಥಿತಿಗೆ ಬರಬೇಕಾದರೆ ನಿಂಬೆ ಹಣ್ಣಿನ ಪಾನಕ ಬೇಕಾಯಿತ್ತಿ ಹಾಕಿ ಬೇಯಿಸಿ ಆದರ ರಸವನ್ನು ಕುದಿಯ ಬೇಕು. ತೀಕ್ಷ್ಣದಿಂದ ಮೂಗು ಗಂಟಿಲು ಕಟ್ಟಿಕೊಂಡರೆ ಕುದಿಯುವ ನೀರಿಗೆ ನಿಂಬೆಯ ರಸವನ್ನು ಹಿಂಡಿ ಪುನಃ ಚೆನ್ನಾಗಿ ಕುದಿಸಿ ಆವಿಕ್ಕೆ ಕಟ್ಟು ಸಕ್ಕರೆಯ ಪುಡಿಯನ್ನು ಹಾಕಿ ಆರಿಸಿ ಕುಡಿಯ ಬೇಕು. ನಿಂಬೆ ಹಣ್ಣನ್ನು ನಿಪ್ಪೆಯೊಡನೆ ಜಗಿದು ನುಂಗುವುದರಿಂದ ಬಾಯಲ್ಲಿ ಹೊಲ್ಲು ರೋಗ ಧೀರಾಳವಾಗಿ ಉತ್ಪತ್ತಿಯಾಗುವುದು ಹಲ್ಲುಗಳೂ ವಸಡೂ ನಿರ್ಮಲವಾಗುವುವು. ಸಕ್ಕರೆಗೆ ನಿಂಬೆಯ ರಸವನ್ನು ಸೇರಿಸಿ ಭೋಜನದ ಮೊದಲು ನಿತ್ಯವೂ ನೂರು ವೇಳೆ ಕೊಡುವುದರಿಂದ ವೃಕ್ಕ ಉಬ್ಬಸವು ಗುಣವಾಗುವುದು ಭೋಜನದ ಮೊದಲು ನಿಂಬೆಹಣ್ಣಿನ ರಸವನ್ನು ನೀರೊಡನೆ ಸೇರಿಸಿದರೆ ಪಾಲಬದ್ಧತೆಯು ನಿವಾರಣೆಯಾಗುವುದು. ಇದರಿಂದ ತಲೆ ತಿರಿತ, ತಲೆ ತಿರುಕವೂ ನಿವಾರಣೆಯಾಗುವುದು ಕಾಫಿಗೆ ನಿಂಬೆಯ ರಸವನ್ನು ಸೇರಿಸಿ ಕುಡಿದರೆ ನರಗಳ ದೌರ್ಬಲ್ಯವು ಕಡಿಮೆಯಾಗುವುದು. ವಿಷಭೂತ ಕ್ರಿಮಿಗಳು ಕಡಿದ ಸ್ಥಳಕ್ಕೆ ನಿಂಬೆಯ ರಸವನ್ನು ಹಿಂಡಿ ಚೆನ್ನಾಗಿ ತಿಕ್ಕಿದರೆ ವಾಸಿಯಾಗುವುದು ನಿತ್ಯವೂ ಬೆಳಗ್ಗಿನ ವೇಳೆ ಒಂದಿಷ್ಟು ಜೇನು ತುಪ್ಪದೊಡನೆ ನಿಂಬೆ ಹುಳಿ ರಸವನ್ನು ಕುಡಿದರೆ ರಕ್ತವು ಶುದ್ಧಿಯಾಗಿ ದೇಹದಲ್ಲಿ ಕಾಂತಿಯು ಹೆಚ್ಚುವುದು. ಬಾಣಂತಿಯರನ್ನು ವಿಷಯುಷ ನೀರಿಗೆ ಹಾಕುವ ಇನ್ನಿತರ ಸೊಪ್ಪುಸದೆಗಳಿಗೆ ನಿಂಬೆಯ ಎಲೆಗಳನ್ನೂ ಹಾಕ ಬೇಕು

ಸಮುದ್ರದಲ್ಲಿ ಮುಳುಗುವುದು ನಿಂತಿತು

ಸಮುದ್ರದಲ್ಲಿ ಸಂಚಾರ ಮಾಡುವಾಗ ಸ್ಟೀಮರು ಮುಳುಗೀ ತೆಂದು ಇನ್ನು ಹೆದರುವ ಅಗತ್ಯವಿಲ್ಲ ಫ್ರಾನ್ಸಿನಲ್ಲಿ ಒಬ್ಬ ಶೋಧನ ಕಾರನು ನೀರು ತುಂಬಿಕೊಂಡರೂ ಮುಳುಗಲಾರದ ಒಂದು ವಿಚಿತ್ರ ಸನ್ನ ಬೋಟನ್ನು ಕಟ್ಟಿರುವನು. ಪ್ರಯೋಗಕ್ಕಾಗಿ ಅದಕ್ಕೆ ಸುತ್ತಲೂ ಕೆಲವು ತೂತುಗಳನ್ನು ತೆಗೆದು ಬೋಟಿನ ಒಳಗೆ ಇಬ್ಬರನ್ನು ಕುಳ್ಳರಿಸಿ ದನು. ನೀರು ತುಂಬಿಕೊಂಡು ಬಂದಂತೆ ಬೋಟು ಅಡಿಗೆ ಹೋಯಿ ತಾದರೂ ಜನರಿಗೇನೂ ಬಾಧೆಯಾಗಲಿಲ್ಲ ಅವರು ಕೆಳಗಿಳಿದೊಡನೆ ಬೋಟು ಮೇಲಕ್ಕೇರಿತು. ಮುಂದಕ್ಕೆ ಕಟ್ಟಲಿರುವ ಸ್ಟೀಮರುಗಳೆಲ್ಲ ಇದೇ ರೀತಿಯಲ್ಲಾದರೆಯೋಜನೆಯ ನ್ನು ಸೇರಿಸುವರು ಈ ಉಪಾಯವು ಅನೇಕ ವರ್ಷಗಳಿಂದ ಹಿಂದೆ ಕಂಡು ಹಿಡಿಯಲ್ಪಟ್ಟಿತ್ತಾದರೂ ಬಹಳ ವೆಚ್ಚ ತಗಲುವ ಕಾರಣ ನಿಮಿತ್ತವಾಗಿ ಅದನ್ನು ಕಾರ್ಯಕ್ಕೆ ಮಾಡಿರುವು ದಿಲ್ಲ ಮುಳುಗಲಾರದ ಒಂದು ಸ್ಟೀಮರನ್ನು ಕಟ್ಟಲು ಒಂದು ಸ್ಟೀಮರಿಗೆ ವೆಚ್ಚವಾಗುವ ದುಪಾಲು ಹಣವು ವೆಚ್ಚವಾಗುತ್ತದೆಂದು ತಿಳಿಯಲಾಗಿದೆ

ಹೊಸ ತರದ ವಿದ್ಯೆ.

ಸ್ತ್ರೀಪುರುಷರ ದೇಹ ಮತ್ತು ಮನೋಭೇದಗಳನ್ನು ಮಕ್ಕಳಿಗೆ ಚಿಕ್ಕಂದಿನಿಂದಲೇ ಕಲಿಸುವುದರಿಂದ ಬಹಳ ಕೆಡುಕಿದೆಯೆಂದೂ ಇನ್ನೂ ಹೆಚ್ಚಿನವರು ತಿಳಿದುಕೊಂಡಿರುತ್ತಾರೆ. ಆದರೆ ಮೆಕ್ಸಿಕೋ ಸರಕಾರ ದವರ ಅಭಿಪ್ರಾಯವು ತೀರ ವಿರೋಧವಾಗಿದೆ ಅಲ್ಲಿ ಮೂರನೇ ತರಗತಿಯಿಂದಲೇ ಬಾಲಕರಿಗೆ ಲಿಂಗಸಮ್ಮ ಶರೀರದ ಕಾರಿತು ಹೇಳಿ ಕೊಡುತ್ತಾರೆ ಈ ರೀತಿಯ ಹೊಸ ವಿದ್ಯಾಕ್ರಮದಿಂದ ಹೆಚ್ಚಿನ ಫಲವು ಉತ್ಪತ್ತಿಯಾಗುತ್ತದೆಂದು ಹಾರ್ಸಿಸುತ್ತಿರುವರು.

ಹೊಸ ರೀತಿಯ ವಿಮಾನ.

ಇತ್ತೀಚೆ ತಪಕ ಪಕ್ಷಿಯಾಕಾರದ ವಿಮಾನಗಳು ಮಾತ್ರ ಹಾರಾಡ ಬಲ್ಲವೆಂದು ತಿಳಿಯಲಾಗಿತ್ತು ಆದರೆ ಈಗ ಆ ಆಕಾರದಲ್ಲಿಲ್ಲದ ವಿಮಾನಗಳೂ ಅವುಗಳಂತೆ ಹಾರಾಡಬಲ್ಲವೆಂದು ಕಂಡು ಹಿಡಿಯ ಲಾಗಿದೆ ಯುಗೋಸ್ಲೇವಿಯನ್ ಎಂಬಲ್ಲಿನ ಒಬ್ಬ ಉಪಾಧ್ಯಾಯನು ಒಂದು ಪೆಟ್ಟಿಗೆ ರೂಪದ ವಿಮಾನದ ಎಡ ಬಲಗಳಿಗೆ ನಾಲ್ಕು ನಾಲ್ಕು ರೆಕ್ಕೆಗಳನ್ನು ಕಟ್ಟಿ ಅವುಗಳು ತಿರುಗುವಂತೆ ಮಾಡಿ ಅವುಗಳ ತಿರುಗಾಟದ ಥರದಿಂದ ವಿಮಾನವು ಹಾರುವಂತೆ ಮಾಡಿರುವನು.

೧೩ ಸಲದ ಮೆಟ್ರಿಕ್

ಅಮೃತಸರದಲ್ಲಿ ತರುಣದಾಸ್ರರಾಯನೆಂಬ ವಿದ್ಯಾರ್ಥಿ ಯೊಬ್ಬನು ೧೯೧೦ನೇ ಇಸವಿಯಲ್ಲಿ ಮೆಟ್ರಿಕ್ ಪರೀಕ್ಷೆಗೆ ಕುಳಿತನು. ಪರೀಕ್ಷೆಗಳಾಗಲಿಲ್ಲ. ಎರಡನೇ ಸಲವೂ ಅವನಿಂದ ಪಾಸಾಗಲಾಗಲಿಲ್ಲ. ಹೀಗೆ ಹೀಗೂ ಸಾಲ್ಕು-ಹತ್ತು, ಹನ್ನೆರಡು ಸಲ ಆವನು ಒಂದೇ ಸವನೆ ಪ್ರಯತ್ನ ಮಾಡಿದನು. ಆದರೂ ನಿರಾಶನಾಗದೆ ೧೯೩೨ರಲ್ಲಿ ೧೩ನೇ ಸಲದ್ದಾಗಿ ಪರೀಕ್ಷೆಗೆ ಕುಳಿತು ಜೆಲ್ಲೂ ಪಾಸಾಗಿರುವನು ಇವನ ಸಾಹಸವನ್ನು ಅಲ್ಲಿಯ 'ಸಿವಿಲ್ ಸೇವಕ'ನೆಂಬ ಪತ್ರಿಕೆಯೂ ಹೊಗಳಿ "ಸ್ಕೊಟ್‌ಲೆಂಡಿನ ಅರಸನಾಗಿದ್ದ ರೋಬರ್ಟ್ ಬ್ರೂಸನ ಯತ್ನಕ್ಕಿಂತಲೂ ಈ ವಿದ್ಯಾರ್ಥಿಯ ಸಾಹಸವು ಎಷ್ಟೋ ಪಾಲು ಮೇಲು" ಎಂದಿರುವರು. ಈ ವಿದ್ಯಾರ್ಥಿಗೆ ಇರುವಷ್ಟು ಪುಸ್ತಕ ಜ್ಞಾನವು ಅವನ ಈಗಿನ ಕ್ಲಾಸಿನ ಮತ್ತಿತ್ತಿಲ್ಲ ಯಾವ ಹುದುಗಿರುವುದಿಲ್ಲವೆಂದು ತಿಳಿಯ ಬಂದಿದೆ.

ರಾಷ್ಟ್ರವೀರ ಸೇನಗುಪ್ತರು.

(ವೀರವಿಯೋಗ) ತೀ ೭-೨೮

ಭಾರತೀ ಸ್ವಾತಂತ್ರ್ಯ ಸಂಗರ।
ಶೂರ! ನಿನ್ನಹಕಾರವರಧುರ।
ಧೀರ! ಭಾರತಚಿತ್ತರಂಜನವಾನ ಪಂವಾರ—॥
ವೈರಧೀಕರ ವಂಗವ್ಯಾಘ್ರನು ।
ವೀರ ವಿಭವಾನ್ವಿತನು ಸಂಜನು! ।
ಸೇರಿ ಹೋದನು—ಸೇನಗುಪ್ತನು—ವೀರ ಸ್ವರ್ಗವನು! ॥೧॥
"ದೇಶಬಂಧು"ವಿನೊಡನೆ ನಡೆಯು ವಿ
ಶೇಷ ಯಶವನು ಪಡೆದು ಭಾರತ।
ವಾಸಿಗಳ ಸೇವಾನಿ ಗಾಂಧೀ ಬಲದ ಭಟನಾಗಿ॥
ದೇಶಮಾತೆಯ ಸೇವೆಯಲಿ ತ
ನ್ನಾ ಶರೀರವ ನವೆಸಿದಾ ನಿಜ
ದೇಶಭಕ್ತನು ಧರನಿವನು ನವತೇಕ್ತಿಕಾಯವನು! ॥೨॥
ಮುಂದರಿನಿ ತಾವಿಟ್ಟ ಪದವನು।
ಹಿಂಪಳೆಯಲು ರಾಷ್ಟ್ರಸಭೆಯವ ।
ರಿಂದು ಚಿಂತಿಸುವುದನು ತಿಳಿವಿಗೆ ತಂದು ಮನಸೊಂದು॥
ಹಿಂದೆಗೆವ ಕೃತಿಯಿಂದ ಮೃತಿ ಲೇ।
ಸೆಂದು ಟಗೆದನೊ ತಾನೆನಲು ಜವ
ದಿಂದ ಪಿಡಿದನು ಕರ್ಮವೀರನು ಧೀರಪುಂಗವನು! ॥೩॥
ಕ್ರೂರದುಶ್ಕಾಸನ ವಿನಾಶ ಗ ।
ಧೀರ ಭಾರತ ಭೀಮ ವೈಭವ।
ಭಾರತೀಪ್ರಿಯವಿಜಯ ನರ್ಘಯಕಾಯ ಕೀರ್ತಿಮಯ
ನೇರಿದನು ಕೈಲಾಸವನು ಹಾ ।
ಹಾರಿದನು ಸಾಯುಜ್ಯಕಾತನು! ।
ಸಾರಿದನು ಸ್ವಾರಾಜ್ಯವನು! ಸ್ವಾತಂತ್ರ್ಯಪದನೆವನು! ॥೪॥
ವೀರನಾ ರಾಷ್ಟ್ರಾಭಿಮಾನವ।
ಭಾರತೀಯರ ಹೃದಯದಲಿ ವಿ।
ಸ್ತಾರವಾಗಿರುತಿರಲಿ! ಸುಮನೋಭೀಷ್ಟ ಸಿದ್ಧಿಸಲಿ!
ಧೀರಬಂಧುವಿಯೋಗ ದುಃಖವ ।
ಸೈರಿಸಲು ಭಾರತಕೆ ಶಕ್ತಿಯ ।
ತೀರಮನ ಕರುಬೆಸಲಿ ಸುಭಟನಾಗಾತ್ಮ ಶಾಂತಿಯನು! ॥೫॥

ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ

ಕೊಂಗ್ರೆಸ್ಸಿನ ಭವಿಷತ್ತು.

ಕೊಂಗ್ರೆಸ್ಸಿನ ಸದ್ಯದ ಅಧ್ಯಕ್ಷರಾಗಿರುವ ಶ್ರೀ ಎಂ ಎಸ್ ಅಣಿಯವರು ಈ ರೂಪದ ಪ್ರಕಟನೆಯನ್ನು ಕೂಡಿರುತ್ತಾರೆ —

"ಪೂನೆಯಲ್ಲಿ ಜರಿಗಿದ ಮಹಾಸಭೆಯ ಕೊಂಗೆಸ್ ಪಕ್ಷಗಳಿರ ಮತದಿಂದಲೂ, ಶ್ರೀ ಗಾಂಧಿಯವರ ಉಪವಾಸದಿಂದಲೂ ಮುಂದಕ್ಕೆ ದೇಶ ಕಲ್ಯಾಣ ದೃಷ್ಟಿಯಿಂದೆ ಕೊಂಗ್ರೆಸ್ಸು ಈ ಕೆಳಗಿನಂತೆ ನಡೆದರಾದೀ ತೆಂದು ಅಭಿಪ್ರಾಯವಾಗಿದೆ ಮೊದಲನೇಯದಾಗಿ ಶಾಸನಭಂಗ ಚಳವಳ ವನ್ನು ಈಗಿನ ಪರಿಸ್ಥಿತಿಯಲ್ಲಿ ಶರ್ತವಿಲ್ಲದೆ ಹಿಂತೆಗೆಯಬಾರದು ಸದ್ಯದ ಮಟ್ಟಿಗೆ ಸಾಮುದಾಯಿಕ ಶಾಸನಭಂಗ ಚಳವಳದನ್ನು ಅದ ಕೊಡನೆ ಕಂಡಾಯ ನಿರಾಕರಕ್ಕೆ, ಚಳವಳಿಗಳನ್ನೂ ನಿಲ್ಲಿಸಬೇಕು. ಎಲ್ಲಾ ಜಿಲ್ಲೆಯ ಕಛೇರಿಗಳನ್ನು ಸಿದ್ಧಪಡಿಸಲು ಸಿದ್ಧರಿರುವರು ತಮ್ಮ ಜವಾಬ್ದಾರಿಕೆಯ ಮೇಲೆ ಶಾಸನಭಂಗ ನಡೆಸುವುದಾದರೆ ಹಾಗೆ ಮಾಡು ವವರು ಕೊಂಗ್ರೆಸ್ಸಿನ ಸಹಾಯವಿಲ್ಲದೆ ಹಾಗೆ ಮಾಡಬಹುದು ಇಷ್ಟರ ತನಕದ ರಹಸ್ಯ ಉಪಾಯಗಳನ್ನು ಮುಂದರಿಸಲಾರದು ಎಲ್ಲಾ ಕೊಂಗ್ರೆಸ್ ಸಂಸ್ಥೆಗಳೂ, ಎಲ್ಲಾ ಕೊಂಗ್ರೆಸ್ ಕಮಿಟಿಯ ಆಫೀಸೂ ಇನ್ನು ಇರಬಾರದು. ಆದರೆ ಅಲ್ಲಲ್ಲಿರುವ ಸರ್ವಾಧಿಕಾರಿಗಳಲ್ಲಬಹುದು ವ್ಯಕ್ತಿಪರ ಕಾಯಿದೆಭಂಗ ಮಾಡಲು ಸಮರ್ಥರಾಗಿರುವವರು ತಮ್ಮ ಯೋಗ್ಯತಾನುಸಾರವಾಗಿ ಕೊಂಗ್ರೆಸ್ಸಿನ ರಜನಾ ಸಂಬಂಧ ಕೆಲಸಗಳನ್ನು ನಡೆಸಬಹುದು ಚಳವಳವನ್ನು ತೆಗೆಯಲಾರದುದಕ್ಕಾಗಿ ವೈಸರಾಯರು ಗಾಂಧಿಜೀಯವರಿಗೆ ವೈಸರಾಯರು ಭೇಟಿಕೊಡದಿದ್ದುದು ಸಂತಾಪಕರ ವೈಸರಾಯರು ಅವಧಿಕೃತ ವಾರ್ತೆಗಳನ್ನು ನಂಬಿದುದು ಕೋಚನೀಯ ಕೊಂಗ್ರೆಸ್ಸಿನ ಎಲ್ಲರೂ ಶಾಂತ ಸ್ವಾಧೀನರಾಗಿ ಉಕ್ಕೇರಿದರಾದ್ದರು ವೈಸರಾಯರ ಶರ್ತಕ್ಕೆ ಯಾರೂ ಒಪ್ಪುವುದು ಸ್ವಾಭಾವಿಕವಾಗಿಲ್ಲ ಕಾಯಿದೆಭಂಗ ಚಳವಳವು ಈ ತಿಂಗಳಾಂತ್ಯದ ವರೆಗೆ ನಿವೃತ್ತಿಯಲ್ಲಿಯೇ ಇದೆ.

ಆಫೀಲೋಸಿನಲ್ಲಿ ನಿರುದ್ಯೋಗ

ಅಹಮ್ಮದ್ ನಗರದ ಪೋಲೀಸ್ ಖಾತೆಯಲ್ಲಿ ೧೫ ಮಂದಿ ಕೊನ್‌ಸ್ಟೇಬಲುಗಳ ಕೆಲಸಗಳು ಖಾಲಿ ಇರುವುವೆಂದು ತೀರ ಅಲ್ಲಿನ ನಿರುದ್ಯೋಗಿಗಳು ಒಂದೇ ಸವನೆ ಪೋಲೀಸ್ ಸುಪರಿಂಟೆಂಡೆಂಟರ ಆಫೀಸಿಗೆ ಅರ್ಜಿ ಹಾಕಿದರೆ ಕೆಲವು ದಿನಗಳಲ್ಲೇ ೯೦೦ ಮಂದಿ ಉಮೇದ್ವಾರರ ೯೦೦ ಅರ್ಜಿಗಳು ಬಂದುವು. ಇವರಲ್ಲಿ ಹೆಚ್ಚಿನವರು ಬಿ. ಎ ಮುಂತಾದ ಡಿಗ್ರಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದವರು ೯೦೦ ಮಂದಿಗಳಲ್ಲಿ ೧೫ ಮಂದಿಗಳನ್ನು ಜಾತಿವಾರು ಮೇರೆಗೆ ಆರಿಸಿ ತೆಗೆದು ಉಳಿದ ಎಲ್ಲರನ್ನೂ ಮನೆಗೆ ಕಳುಹಿಸಿದರು.

ಆಂಜೆಚೀಟಿನ ಅಗತ್ಯ

ಇಪ್ಪತ್ತು ರೂಪಾಯಿ ಮತ್ತು ಮೇಲ್ಪಟ್ಟ ಮೊಬಲಗುಗಳಿಗೆ ರಶೀದಿ ಕೊಡುವಾಗ ಅದಕ್ಕೆ ಅಂಚೆಚೀಟು ಹಚ್ಚಿ ದಸ್ಕತು ಮಾಡ ದೇಕೆಂದು ಕೆಲವರಿಗೆ ಇನ್ನೂ ತಿಳಿದಿಲ್ಲ ಮುಂಬಾಯಿಯಲ್ಲಿ ಹಾಗೆ ಅಂಚೆ ಚೀಟು ಇಲ್ಲದೆ ಇಪ್ಪತ್ತು ರೂಪಾಯಿಯ ರಶೀದಿ ಕೊಟ್ಟಿರಿ ಅದೊಂದು ಅಪರಾಧವೆಂದೆಸಿಲ್ಪಟ್ಟಿದೆ ಶಕ್ತೀಧರ ಕಾರಣವೇನೆಂದರೆ ಹಾಗೆ ರಶೀದಿ ಕೊಡುವವನು ಸರಕಾರದ ಅಂಚೆ ಚೀಟಿಗೆ ಸಲ್ಲ ಬೇಕಾದ ಕ್ರಯವನ್ನು ಕೊಡಿದಿರುವುದು

ನೋಟೀಸು.

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

O P \ಂ 80/1933

1 ಕುಂಞಮ, 2 ಕುಂಞಂಬರಿ, 3 ಲೃಸಮ್ಮ, 4 ಅಬ್ದುಲ್ಲ, 5 ಕುಂಞ ಸಾತುಮ್ಮ, 6 ಕುಂಞಮಾನ, 7 ಅಕ್ಕಮ್ಮ—ಅರ್ಜಿದಾರರು

ಪಡ್ಡೆ ಗ್ರಾಮದ ಅಬ್ದುಲಾ ಕಯಿಲ್ಲತ್ತ ಅಲಿಯಾತ್ತ ಮಗ ಇತ್ತಲಾಗಿ ವ್ಯಾಪಕಪಟ್ಟು ಹುಸೆನ್ ಕುಟ್ಟಿ ಹಾಜಿಗೆ ಸರಿ ಗ್ರಾಮದ ಉದಿನೂರು ಮಮ್ಮಿದ್ ಹಾಜಿ ಅಳಿಯ ಅಬ್ದುಲ್ಲನು ತಾರೀಕು 1-7-೨೮೦೬ಲ್ಲಿ ರೂ 250ಕ್ಕೆ ಒಕ್ಕಿಕೊಟ್ಟ ಪ್ರೋನೋಟಿನ ಸಾಲ ವರೂ ಕುರಿತು ತಮಗೆ ಸರ್ಟಿಫಿಕೇಟು ಕೊಡಬೇಕಾಗಿ ಸರಿ ಕುಸನ್ ಸೆಟ್ಟಿ ವಿಧಿಯಾದ 1ನೇ ಅರ್ಜಿದಾರಳೂ ಮತ್ತು ಈತ ಬಾಕಿ ಅರ್ಜಿದಾರರೂ ಕೊಟ್ಟ ಮೇಲ್ಕಂಡ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 10-8-38ಕ್ಕೆ ತನ್ನಿಗೆ ಇಟ್ಟಿರುತ್ತಿರೆ ಅಕ್ಷೇಪ ಇದ್ದವರು ಆ ದಿವಸ ಕೋರ್ಟು ಮುಂದೆ ಹಾಜರಾಗಿ ಅಕ್ಷೇಪಣೆ ಜ್ಞಾಪಿಸಲು ತಿಳಿಸಿದೆ.

Kasargode 14 7 1933

K Shama Shetty,
Vakil for Petitioner

ದಿ ಇಕೊನೊಮಿಕ್ ಇನ್ಶೂರೆನ್ಸ್ ಕೋ ಲಿಮಿಟೆಡ್.

ಹೆಡ್ ಆಫೀಸು—ತಿರುವಲ್ಲಾ.

ವಿವಾಹ ವಿಮೆ

ಪ್ರವೇಶ ಹಾಸಲು ರೂಪ್ಯಾ 2 ಮಾಸಿಕ ವಂತಿಗೆ ರೂ 1 ಸೇರಿದ ಹಿಂದು ವರ್ಷದ ನಂತರ ಮದುವೆಯಾದರೆ ಮೆಂಬರರಿಗೆ ಹಕ್ಕು ದೊರೆಯುವುದ ಎಂದರೆ ಆ ತಿಂಗಳಲ್ಲಿ ಒಟ್ಟುಗೂಡಿದ ಹಣದಲ್ಲಿ ಕಾಲಂಶವು ಕಂಪೆನಿಯು ರಿಸರ್ವ್ ಫಂಡಿಗೆ ಹೋಗುವುದು ಬಾಕಿ ಉಳಿದ ಮುಕ್ಕಾಲುಂಶವನ್ನು ಆ ತಿಂಗ ಲ್ಲಿ ಮದುವೆಯಾದ ಮೆಂಬರೆಯೊಳಗೆ ಹಂಚ ಲಾಗುವುದು ಹಣ ಸಿಕ್ಕಿದ ನಂತರ ಒಂದು ಚೆಕ್ಕಾಯಸನ್ನಾದರೂ ಕಂಪೆನಿಗೆ ತೆರದೇಕಾಯಿಲ್ಲ 5 ಮತ್ತು 45 ವರ್ಷ ಪ್ರಾಯದೊಳಗಣ ಸ್ತ್ರೀ ಪುರುಷರೆಲ್ಲರೂ ಸೇರಬಹುದು ವೈದ್ಯಕೀಯ ಪರೀಕ್ಷೆ ಇಲ್ಲ ವಿವರಗಳಿಗೆ ಅರ್ಜಾಜೆ ಸ್ಯಾಂಪಿನೊಡನೆ ಬರೆಯಿರಿ

ಜೂನ್ ತಿಂಗಳಲ್ಲಾದ 13 ಮದುವೆಗಳಿಗೆ ಕೊಟ್ಟದ್ದು ರೂ. 1353

ಉದಾರ ಕರ್ತಗಳಲ್ಲಿ ಎಲ್ಲಾ ಕಡೆಗಳಲ್ಲಿ ವಿಜಂಟರು ಬೇಕಾಗಿದ್ದಾರೆ. ಕೆಲಸವಿಲ್ಲದ ಸಜ್ಜನರನ್ನು ಸದುಪಯೋಗ ಪಡಿಸಲು ಇದೇ ಉಪಾಯ ಕರ್ತಗಳಿಗೆ ಬರೆದುರಿ

ವಿಳಾಸ — **T. Madhava Pai,** *Organiser.* KASARGOD, S. K

ಪಾರುವಾಹಕರ ಅಧಿಕಾರಿಯವರು ಶ್ರೀಮುಖ ಸಂವತ್ಸರದ
ಆಷಾಢ ಶು. ೭ ಶನಿವಾರದಿಂದ ಶ್ರೀಮುಖ ಸಂವತ್ಸರದ
ಕಾರ್ತಿಕ ಶು. ೧೫ ಶುಕ್ರವಾರದ ವರೆಗಿನ ಪಂಚಾಂಗ
(ಗಣನೆಯು ಕರ್ಕಾಟಕ ಲಗ್ನ).

ತಾರೀಖು	ವಾರ	ತಿಥಿ	ನಕ್ಷತ್ರ	ಯೋಗ	ಕರಣ	ಸೂರ್ಯೋದಯ ಗಂ	ಸೂರ್ಯೋದಯ ನಿ
29	ಪಾ	೭	೨೪೧೫	ಚಿತ್ರಾ	೪೮೩	೦೪	6 16
30	ರವಿ	೮	೨೮೫	ಸ್ವಾತಿ	೪೭	೦೫	6 17
31	ಸೋಮು	೯	೩೧೫	ವಿಶಾಖಾ	೪೮	೦೩	6 17
1	ಮಂಜ	೧೦	೩೫೫	ಅನುರಾಧಾ	೨೮೫	೦೭	6 17
2	ಬುಧ	೧೦	೨೨೫	ಜ್ಯೇಷ್ಠಾ	೨೩	೦೦	6 17
3	ಗುರು	೧೩	೧೦೫	ಮೂಲಾ	೧೭೫	೦೯	6 7
4	ಶುಕ್ರ	೧೪	೨	ಪೂ. ಷಾ.	೧೦೫	೨೦	6 18

ತಾರೀಖು	ಸೂರ್ಯಾಸ್ತ ಗಂ	ಸೂರ್ಯಾಸ್ತ ನಿ
29	6	57
30	6	57
31	6	57
1	6	57
2	6	56
3	6	56
4	6	55

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಶಾವು) Maximum ಅಧಿಕವಾಗಿ	Minimum ಅಲ್ಪವಾಗಿ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
20	86— 4	76— 9	—	—
21	81— 0	74— 9	1—35	—
22	83— 7	72— 3	3—65	—
23	86— 0	71— 8	— 2	—
24	85— 7	72— 8	3—10	—
25	78— 7	71— 9	4—20	—
26	80— 6	73— 1	1—10	111—62

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ.	ಇಂದ ಆ	ವರೆಗೆ ರೂ.	ವರೆಗೆ ಆ
ರಾಶಿ ಅಕ್ಕಿ	3	12	4	0
ಮುತ್ತಕ್ಕಿ	4	4	4	12
ಗುಡ್ಡೆ	3	12	4	4
ಹುಗ್ಗಿ	3	10	4	0
ಉತ್ತರ ಆವ್ವಲ್ ಬೆಲ್ಲಗೆ	4	6	೨	0
ದಂಗಮನು ಬೆಲ್ಲಗೆ ಗೋಣಿ ೧ಕ್ಕೆ	೨	14	6	8
ಎಲ್ಲಾರು ಬೆಲ್ಲಗೆ ಮುಡಿ ೧ಕ್ಕೆ	4	0	4	4
ಗೋದಿ ಗೋಣಿ ೧ಕ್ಕೆ	10	12	12	8
ತೊಗರಿ ಗೋಣಿ ೧ಕ್ಕೆ	9	8	12	0
ಹುರುಳಿ ಗೋಣಿ ೧ಕ್ಕೆ	5	11	6	2
ಕಡಲೆ ಗೋಣಿ ೧ಕ್ಕೆ	8	8	10	4
ತೊಗರಿಬೇಳೆ ಗೋಣಿ ೧ಕ್ಕೆ	11	0	20	0
ಉದ್ದು ಗೋಣಿ ೧ಕ್ಕೆ	8	8	9	0
ಹೆಸರು ಗೋಣಿ ೧ಕ್ಕೆ	8	0	9	0
ಊರುಬೆಲ್ಲ ಖಂಡಿ ೧ಕ್ಕೆ	57	8	60	0
ಉಪ್ಪು ಗೋಣಿ ೧ಕ್ಕೆ	5	8	6	0
ಪೊಪ್ರಿ ಖಂಡಿ ೧ಕ್ಕೆ	55	0	60	0
ಪೊಪ್ರಿ ಹಂಡಿ ಖಂಡಿ ೧ಕ್ಕೆ	22	0	23	0
ಎಳ್ಳಂಡಿ ಖಂಡಿ ೧ಕ್ಕೆ	22	8	23	12
ಪೊಪ್ರಿ ಎಕ್ಕೆ ಮಣ ೧ಕ್ಕೆ	3	14	5	0
ಎಕ್ಕೆ ಮಣ ೧ಕ್ಕೆ	5	8	6	0
ಚಿಪ್ಪುಎಕ್ಕೆ ಪೆಟ್ಟಿಗೆ ೧ಕ್ಕೆ	7	4	8	12
ಮೋರಸ ಹಳ್ಳರಿ ಮಣ ೧ಕ್ಕೆ	4	1	4	2
ಹೊಸ ಮೆಣಸು	4	10	6	4
ಸಾಸಿವೆ ಮುಡಿ ೧ಕ್ಕೆ	4	12	5	0
ಕಾಳುಮೆಣಸು ಖಂಡಿ ೧ಕ್ಕೆ	140	0	160	0
ಯೇಲಕ್ಕಿ ಮೂಟೆ ೧ಕ್ಕೆ	19	0	22	8
ಗೇರುಬೀಜ ಮುಡಿ ೧ಕ್ಕೆ	3	4	3	7
ಕಳ್ಳಿಣ ಖಂಡಿ ೧ಕ್ಕೆ	25	0	25	8
ತಾಂಮ್ರ ತಗಡು ಮಣ ೧ಕ್ಕೆ	11	0	11 4	8
ತಾಂಮ್ರ ಪಾತ್ರೆಗಳು ಮಣ ೧ಕ್ಕೆ	15	0	16	0
ಬೀಜದೆಳ್ಳ ಸೇರು ೧ಕ್ಕೆ	14	12	15	0
ಕುಸ್ತಾಕ್ಕೆ ಕಡಲು ಮಣ ೧ಕ್ಕೆ	9	0	9	8
ಪಚ್ಚಮ ೧ಕ್ಕೆ	19	8	19	10
ಹುಣಸೆ ಹುಳಿ ಖಂಡಿ ೧ಕ್ಕೆ	35	0	42	8
ನೇಪಾಳ್ ಕಾಳಿ ಖಂಡಿ ೧ಕ್ಕೆ	200	0	225	0
ಫಿದೇರಿ ಕಾಳಿ ಖಂಡಿ ೧ಕ್ಕೆ	270	0	280	0
ಚಕೆ ಅಡಿಕೆ ..	130	0	140	0
ಹೊಸ ಅಡಿಕೆ ..	120	0	130	0

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವುವು ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕಾರಾವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಉಡುಪಿಗೆ ತಲುಪಿರಿ ಒಂದೇ ತಿರಿಕಲ್ಲಿನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲಿ ಕಾರ್ಕಳಕ್ಕೆ ತಲುಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಕ್ರಾಜೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಧರ್ಮಸ್ಥಳಕ್ಕೆ ಹೋಗಬೇಕಾದರೆ ಮಂಗಳೂರಿನಿಂದ ಬೆಳಿಗ್ಗೆ ಮತ್ತು ಮಧ್ಯಾಹ್ನ ಒಳಗೆ ತಲುಪಬಹುದು

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲುಪಬಹುದು

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧। ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆ ತಲುಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು

Secretary,
The Canara Public Conveyance Company Ltd., Mangalore

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ – ಮುಂಬಾಯಿಗೆ

ಆಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು – ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

- ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ-
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿಕಾಯೋಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಪತ್ರವ್ಯವಹಾರ.

ಪತ್ರಿಕೆಯ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಕೈಮುದ್ರಿತ ಟೀಕಾಟೊಳಿಗಳಂದೊಡಗೂಡದೆ ಸುಲಭ ಕೈಲಿ ಯಲ್ಲಿರತಕ್ಕದ್ದು (ಸಂ. ಸ್ವ.)

ವಿದ್ಯಾಭಿಮಾನಿಗಳಲ್ಲಿ ವಿಜ್ಞಾಪನೆ.

ಮಾನ್ಯರೇ!

ಸುಧಾರಣೆಯ ಹಿಂದೂ ವಿದ್ಯಾದಾಯಿನೀ ಸಂಘದಿಂದಲಿನ ಅಂಗಸಂಸ್ಥೆಗಳಲ್ಲವು ಅಂಕ್ಯವಾದದ್ದನ್ನು, ಸಂಘ ಮತ್ತು ಶಾಲೆಗಳು ಸುಸಂಘಟಿತವಾಗಿ ಮುನ್ನಡೆಯುವಂತೆ ಯುಕ್ತ ಪರಿಹಾರಗಳಾದುವು ಪೈಸ್ಕೂ, ಸುಮಾರು ೧೦-೧೫ ತಿಂಗಳುಗಳಿಂದ ಜೀವ ಇದ್ದ ಶಾಲಾಧ್ಯಾಪಕರ ಸಂಬಳವು ಸಂದಾಯವಾದುದನ್ನೂ ಕೇಳಿ ತಾವು, ನನ್ನಂತೆ ಬಹಳ ಹರ್ಷಿತರಾಗಿರುವುದು. ಸ್ವಾರ್ಥ ತ್ಯಾಗಿಗಳ ಸತತೋದ್ಯಮದ ಸ್ವರೂಪವಾಗಿ ಸ್ಥಾಪಿತವಾಗಿ ಅಭಿವೃದ್ಧಿಯ ಶಿಖರವನ್ನೇರುತ್ತಿರುವ ಈ 'ವಿದ್ಯಾದಾಯಿನೀ' ವಿದ್ಯಾಲಯವು, ಸುತ್ತುಮುತ್ತಲಿನ ವಿದ್ಯಾರ್ಥಿಗಳಲ್ಲಿ ಸ್ವಾರ್ಥತ್ಯಾಗಿಗಳನ್ನೂ, ಗ್ರಾಮ ನಿವಾಸಿಗಳಲ್ಲಿ ವಿದ್ಯಾವಾತ್ಸಲ್ಯವನ್ನೂ ಹುಟ್ಟಿಸಿ ತನ್ನೊಂದಾದಷ್ಟು ದೇಶದ ಹಾಗು ಜನಾಂಗದ ಸೇವೆಯನ್ನು ಪ್ರತಿಫಲಾಪೇಕ್ಷೆಯಾಗಿ ಮಾಡುತ್ತಿರುವ ಒಂದು ಸಂಸ್ಥೆಯ ಸದನವೆಂದರೆ ಅತ್ಯುಕ್ತಿಯೆನಿಸದು. ಕಳೆದ ೧೬ ದಿನಗಳಿಂದ ಈ ಸಂಸ್ಥೆಯು ತನ್ನ ಶಾಖೆಗಳಿಗೆ ಸಂಬಳವನ್ನು ಕಳುಹಿಸಲಾಗದೆ ಸಂಕಟಪಡುತ್ತಿರುವ ಸುದ್ದಿಯನ್ನು ತಿಳಿದುಕೊಂಡು, ಇತ್ತೀಚಿನ ಸಭೆಯಲ್ಲಿ ಉಸ್ತುವಾರಿ ನಮ್ಮ ಪ್ರಾತಿನಿಧಿಯನ್ನೂ ಪಡೆಯಲೆಂದು ಹಾರೈಸುವುದು ಪ್ರತಿಯೊಬ್ಬ ದೇಶ ಪ್ರೇಮಿಯ ಕರ್ತವ್ಯವಾಗಿರುತ್ತದೆ. ಏನೇ ದುರ್ದೈವದಿಂದ ಮೊಳಕೆಗೊಂಡ ಮನಸ್ತಾಪ ಹಾಗೂ ವಿವಾದಗಳು ಪ್ರಚಂಡ ವಾತಾವರಣವನ್ನು ತಾಳಿದ್ದರೂ, ಶಾಲಾ ಹಿತಚಿಂತಕರ ಪರಿಶ್ರಮದಿಂದ ಅವು ಶೀಘ್ರದಲ್ಲೇ ನಿವೃತ್ತಿಯಾಗುವುದು ಸಂಸ್ಥೆಯ ಭಾವೀ ಪ್ರಭೋದಯದ ಚಿಹ್ನೆಯೆನ್ನಿಸಿದೆ. ಆದರೆ ಇಂಥ ಸರ್ವಜನಾದರಣೀಯವಾದ ಸಂಸ್ಥೆಯು ಧನಾಭಾವದ ಸಂಕಷ್ಟಕ್ಕೊಳಪಟ್ಟಿದೆ ಎಂಬುದು ಮಾತ್ರ ಅತಿ ವ್ಯಸನಾಸ್ಪದವಾದ ಸಂಗತಿ. ಏನು? ನಮ್ಮಿ ನಿರಿನಾಡಿನಲ್ಲಿ ಕೊಡುಗೈಯ್ಯ ಉದಾರಿಗಳು ದುರ್ಲಭರಾದರೇ? ಈ ಸಂದರ್ಭದಲ್ಲಿ ನಮ್ಮ ನಾಡಿನ ವಿದ್ಯಾಭಿಮಾನೀ ಧನಿಕ ಮಹಾಶಯರಾಗಳೂ ಇನ್ನಿತರ ದೇಶಬಾಂಧವರೂ ಮುಂದೆ ಬಂದು ಸ್ವಪರ ಹಸ್ತಗಳಿಂದ ಈ ಸಂಸ್ಥೆಗೆ ಧನಸಹಾಯದ ಮಹದಾತ್ಮಯವನ್ನೀಯಬೇಕೆಂದು ಭರವಸೆ ಇದೆ. ಈ ಸರೀಕ್ಷೆಯು ಫಲಿಸುವುದಾಗುವಂತೆ ಸಕಲ ಮಹಾಜನರೂ ಸಹಕರಿಸುವುದಲ್ಲದೆ ಊರು ಪರವೂರುಗಳಲ್ಲಿ ಯೋಗ್ಯ ಉದ್ಯೋಗಿಗಳನ್ನೂ ಉನ್ನತ ಪದವಿಗಳನ್ನೂ ಗಳಿಸಿಕೊಂಡಿರುವ ಈ ಶಾಲೆಯ ಹಳೆ ವಿದ್ಯಾರ್ಥಿ ವರ್ಗದ ನನ್ನ ಸನ್ಮಾನ್ಯ ಮಿತ್ರರೆಲ್ಲರೂ, ತಮ್ಮ ಅಭಿವೃದ್ಧಿಗೆ ಮೂಲಕಾರಣವಾದ ಈ ವಿದ್ಯಾಲಯದ ಕಡೆಗೆ ಕೃತಜ್ಞತೆಯನ್ನು ಸಲ್ಲಿಸಲು ಇದಿಗ ತಕ್ಕ ಸುಸಂಧಿ ಎಂಬುದನ್ನರಿತು ತನುಮನಧನಗಳಿಂದ ।।ಅಳಿಲ ಭಕ್ತಿಯ ಮಾಳ ಸೇವೆ'ಯನ್ನಾದರೂ ಅರ್ಪಿಸಿ ಈ ಉತ್ತನು ಸಂಸ್ಥೆಯನ್ನು ಚಿರಾಯುವಾಗಿರಿಸಬೇಕೆಂದು ಆದರದಿಂದ ಆಶಿಸುವ,

ತಮ್ಮ ಹಿತೈಷಿಯೂ ಶಾಲಾಭ್ಯುದಯಾಭಿಲಾಷಿಯೂ ಆದ,

'ಓರ್ವ ಹಳೆ ವಿದ್ಯಾರ್ಥಿ'

ಅಯ್ಯಾ ಸ್ವದೇಶಾಭಿಮಾನಿಯೇ!

ಸೈಮನ್ ಸಹ್ರದವರು ಹಿಂದೂದೇಶಕ್ಕೆ ಬಂದು ಮುಕಳಿದವರು ತಮ್ಮ ರಿಪೋರ್ಟಿನಲ್ಲಿ "ಹಿಂದೂದೇಶಕ್ಕೆ ಕೊಡಲ್ಪಟ್ಟಿರುವ ಲೋಕಲ್ ಬೋರ್ಡುಗಳು ಸಂಪೂರ್ಣ ಅಭಿವೃದ್ಧಿಯನ್ನು ಹೊಂದಿವೆ" ಎಂದು ಒಕ್ಕಣಿಸಿರುವುದು ನಿನಗೂ ತಿಳಿದ ವಿಷಯವಲ್ಲವೇ? ಆ ಸಮಯದಲ್ಲಿ ಅವು ಪ್ರತಿಯೊಬ್ಬರ ದೇಶಭಕ್ತಿಯನ್ನು ಕ್ರೋಧನನ್ನುಂಟುಮಾಡುತ್ತಿತ್ತು. ಆದರೆ ಸಾವಧಾನವಾಗಿ ಯೋಚಿಸೋಣ. ಅವರ ತಕ್ಕಾಂಶವು ಕಂಡು ಬರುತ್ತದೆ.

ಉದಾಹರಣೆಗಾಗಿ ತಾಲೂಕು ಬೋರ್ಡುಗಳನ್ನು ತೆಗೆದುಕೊಂಡರೆ ಇವು ನ್ಯೂನತೆಯು ಸರಿಯಾಗಿ ಕಂಡುಬರುತ್ತದೆ. ಅಧಿಕಾರಿಗಳು ಸ್ವಕಪೆ ಯಾವ ವಿಚಾರವನ್ನೂ ತಿಳಿಯದೆ, ಒಂದು ದೂರು ಮಾತು ಗಳಿಗೆ ಪತ್ರರಾಗಿಯೂ, ಮುಖಸ್ತುತಿಗಳಿಗೆ ಪರವಶರಾಗಿಯೂ, ತಮ್ಮ ಗೌರವಕ್ಕೆ ಹೆಚ್ಚು ಅಧಿಕಾರವನ್ನು ನಡೆಸುತ್ತಿರುವ ಗುಮಾಸ್ತರುಗಳ ದಾಸ್ಯಕ್ಕಾದಿಗಳಿಗೂ, ಬಡ ಉಪಾಧ್ಯಾಯರುಗಳನ್ನು ತಿಂಗಳಿಗೆ ಎರಡು ಮೂರಾಣೆ ವರ್ಗಮಾಡುವುದರಲ್ಲಿಯೇ ದೆಕ್ಕರು. ಇದು ಅನ್ಯಾಯ ವಲ್ಲವೇ? ಒಂದು ಶಾಸನ ಪುಸ್ತಕ ಸರಿಯಾಗಿ ಶಾಲೆವನ್ನು ಗೃಹಸ ದೇಶಾವರೆ ಒಂದು ಇಡೀ ವರ್ಷ ಒಬ್ಬನೇ ಉಪಾಧ್ಯಾಯನಿಂದ ಅಯೋಮಾ ಶಾಖವನ್ನು ಹೇಳಲೇಬಾರದುವೆಯು. ಹಾಗಿಲ್ಲದೆ ತಿಂಗಳೆ ಗೊಬ್ಬ ಉಪಾಧ್ಯಾಯನು ಬಂದು ಒಂದೊಂದು ಹೊಸ ರೀತಿಯಿಂದ ಕಲಿಸಿದರೆ ವಿದ್ಯಾರ್ಥಿಗಳಿಗೆ ಹಿಂದೆ ಕಲಿತದ್ದೂ ಇಲ್ಲ, ಮುಂದೆ ಕಲಿಯು ವುದೂ ಇಲ್ಲವೆಂಬಂತಾಗುವುದು. ಯಾವ ಉಪಾಧ್ಯಾಯರನ್ನು ಎಲ್ಲಿ ತೆಯಿಸಿಕ್ಕೆ ನಿಯೋಗಿಸಬೇಕೆಂತ ತಿಳಿಯದೆ, ಸ್ಥಳೀಕ ಉಪಾಧ್ಯಾಯ ರನ್ನು ಸ್ಥಳದಲ್ಲಿಯೇ ನೇಮಿಸಿದರೆ ಆ ಶಾಲೆಯು ಅಭಿವೃದ್ಧಿಯಾಗುವು ದೆಂದು ತಿಳಿದು ಹಾಗೆ ಮಾಡಿದರೆ ಆ ಶಾಲೆಯು ಕೂಡಲೇ ಅಧೋ ಗತಿಗೆ ಳಿಯುವುದು. ಊರಿನ ಉಪಾಧ್ಯಾಯರು ಊರಿನ ಹಿತಕ್ಕೆ ಸಲುವಾಗಿ ಪ್ರಯತ್ನಪಡುವುದೆಂಬುದು ಎಲ್ಲರ ನಂಬಿಕೆಯಾದರೂ ಆ ನಂಬಿಕೆಯು ಸಿದ್ಧಯೋಗವಿನ. ಪರಸ್ಪರಗಳಲ್ಲಿರುವ ಉಪಾಧ್ಯಾ ಯರುಗಳು ಇದೇ ಸಬಷಯದಿಂದ ಭಿನ್ನರಭಿಪ್ರಾಯ ಪ್ರಯತ್ನ ಮಾಡಿ, ತಮ್ಮ ಊರಿಗೆ ವರ್ಗಾಯಿಸಿಕೊಳ್ಳುತ್ತಿರುವರು. ಆದರೆ ಊರಿನ ಶಾಲೆಗೆ ನೇಮಿಸಿದ ಮರುದಿನವೇ ತಮ್ಮ ಅಗಮನದ ಅನುಭವವನ್ನು ತಿನ್ನಾಗಿ ಮಾಡಿ ಕೊಡುವರು. ಗೃಹಕೃತ್ಯಗಳನ್ನು ತೀರಿಸಿಕೊಂಡು ಬೆಳಿಗ್ಗಿನ ಶಾಲೆಗೆ ಬರುವಾಗ್ಗೆ ೧೦॥ ಘಂಟೆಯಾಗುವುದು ಹೆಡ್ ಮಾಸ್ಟರು ಊರಿನವರಾದರೆ ಈ ಉಪಾಧ್ಯಾಯರು ಬದುಕಿದಂತೆಯೇ ಸರಿ ಯೆಂತೆಂದರೆ ೧೦॥ ಘಂಟೆಗೆ ಒಂದೂ ಶಾಲಾ ಪ್ರಾರಂಭಕ್ಕಿಂತ ಅರ್ಧ ಘಂಟೆ ಮುಂದಾಗಿ ಬಂದಂತಾಗುವುದು.

ಹೇಗಾದರೂ ಶಾಲೆಗೆ ಬಂದು ಮಕ್ಕಳಿಗೆ ಲೆಖ್ಖ ಹಾಕಿಕೊಟ್ಟು ಯೂ ಕೋಸಿ ಬರೆಯುವಂತೆ ಹೇಳಿ ಒಂದು ಕಡೆಗೆ ಪಂಚಾತಿಕೆಗೆ ಕುತರೆಂದರೆ, ಏನೋನ್ಮೋ ಗುರುತಿಲ್ಲದೆ ಬೋರ್ಡು ಮೆಂಬರರು ಕ್ಲಾಸಿಗೆ ಹೊಕ್ಕಿದರೂ ಆ ಕಡೆ ಇದರ ಗಮನವೇ ಇರಲಿಲ್ಲ. ಕೆಲವರಿ ಗಂತೂ ಮನೆಗೆಲಸದ ಆಯಾಸದಿಂದ ಶಾಲೆಗೆ ಬಂದೊಡನೆ ಮಂದ ದೂರುತನ ಸ್ವರ್ಶನಾಗುತ್ತಲೆ ಗಾಢನಿದ್ರೆ ಹತ್ತಿ ಬಿಡುವುದು. ಪ್ರಾಯಶಃ ಹಳ್ಳಿ ಶಾಲೆಗಳ ಉಪಾಧ್ಯಾಯರಲ್ಲಿರೂ ವಕ್ಕಲಿಗರೇ ಇರುವರು ಪ್ರತಿ ನಿಕ್ಷವೂ ಅವರ ಸಭೆಯ ಚರ್ಚೆಯು ವಿಷಯವು "ಬೇಸಾಯ" ಹೀಗಾಗಿ ಮಳ್ಳಿಕೆ ವಿದ್ಯೆಯು ನೈವೇದ್ಯವಾಗಲಿಕ್ಕೆ ಹೊಂದಿಕೆಯಿಲ್ಲ.

ನಮ್ಮೂರಲ್ಲಿಯೂ ಕರುಣಾಳು ಬೋರ್ಡಿನವರು ಒಂದು ಹಾಯರ್ ಎಲಿಮೆಂಟರಿ ಶಾಲೆಯನ್ನು ತೆರೆದು ಬಡಿಗೆಯ ಕಚ್ಚೋಲ ದಲ್ಲಿಯಾದರೂ ಅದನ್ನು ನಡೆಸುತ್ತಿರುವರು ಇದಕ್ಕಾಗಿ ಅವರಿಗೆ ನಾವು ಕೃತಜ್ಞರು ಆದರೆ ಇಲ್ಲಿಯ ಒಂಭತ್ತು ಉಪಾಧ್ಯಾಯರ ವೈಕಿ ಹೆಡ್ ಮಾಸ್ಟರು ಕೂಡಿ ೫ ಮಂದಿ ಊರವರೇ ಆಗಿರುವರು ೩೦೦ಕ್ಕೆ ಮಿಕ್ಕಿದ ಹುಡುಗರ ಸಂಖ್ಯೆಯು ೧೩೫ಕ್ಕೂ ಕಡಿಮೆ ಯಾಗಿದೆ. ಊರವರ ಪ್ರಯತ್ನವಂತೂ ಹೇಳಿ ತೀರಲಾರದು. ಇದಕ್ಕೆ ಇತ್ತೀಚೆಗೂ ಬೋರ್ಡಿನವರು ನಿಗಾ ಕೊಟ್ಟು ಶಾಲಾಭಿವೃದ್ಧಿ ಮಾಡು ವಂತೆ ನಿಮ್ಮ ಪ್ರೇರಣೆಯಿಸಬೇಕೆಂದು ನಿನ್ನಲ್ಲಿ ದೂರಿಕೊಂಡಿರುತ್ತೇನೆ

Thermal,
13-7-'33

ಊರವ

ಅಯ್ಯಾ

ಈ ನೊದಲು ಪತ್ರೂರು ಮಾಸ್ಟಿಂ ವಿದ್ಯಾಭ್ಯಾಸಜ ಅಭ್ಯುದಯ ಕ್ಕಾಗಿ ಒಂದು ಫಂಡನ್ನು ನಿರ್ಮಾಣಿಸಿದ್ದರು ಆ ವಿಷಯದಲ್ಲಿ ನೇತೃತ್ವ ವನ್ನು ಕೈಕೊಂಡವ್ಯ ಹಗಲ್‌ವಾಡಿ ಹುಸೈನ್ ಸಾಹೇಬರು ಆಗಿದ್ದರು ಆ ಹಣ ಸಹ ಆವರ ಸ್ವಾಧೀನದಲ್ಲಿಯೇ ಇರುವುದಾಗಿ ತಿಳಿದುಬರುತ್ತದೆ. ಆ ಸಂಘದ ಉದ್ದೇಶಕ್ಕನುಸಾರವಾಗಿ ಈ ಹಣವನ್ನು ಈಗ ವಿನಿಯೋಗಿ ಸುತ್ತಾರೋ? ವಿನಿಯೋಗಿಸದಿದ್ದರೆ ಅದಕ್ಕೆ ಜವಾಬ್ದಾರರಾರು? ಈಗ ಈ ಹಣವನ್ನು ಟಿಸಿದಿದ ಸಂಘವೆ ಸಚೇವರಾಗಿ ಉಂಟೋ? ಇಲ್ಲ ದಿದ್ದರೆ ಪುತ್ತೂರು ತಾಲೂಕಿನ ಮುಖಂಡರೆನ್ನಿಲ್ಲಾ ಕರೆದು ಒಂದು ಸಭೆ ಸಡಿಸಿ ಈ ಹಣವನ್ನು ವಿದ್ಯಾವಿಷಯಕಾಗಿರುವ ಮುಸಲ್ಮಾನರ ವಿದ್ಯಾ ಭ್ಯಾಸಾಭಿವೃದ್ಧಿಗಾಗಿ ವಿನಿಯೋಗಿಸಲೆಬಾಗಿ ವಿನಯಪೂರ್ವಕ ಅಪೇಕ್ಷಿ ಸುತ್ತೇನೆ.

ಇತಿ

ಪಿ ಬಿ ಅಬ್ದುಲ್ಲಕುಂಞ

ಸತೀ ಪದ್ಮತಿಯ
ರತ್ನ ರಂಜಿತ ಇತಿಹಾಸದ ಒಂದು ಪುಟ

ಸನ್ ೧೮೪೯ನೇಯ ಇಸವಿಯಲ್ಲಿ ಭಾರತ ವರ್ಷದ ವ್ಯಾಸರಾಯ ರಾಗಿದ್ದ ಲಾರ್ಡ್ ಆಳ್ಹೌಸಿಯು ಪಂಜಾಬಿಗೆ ಬರುವ ಕಾಲದಲ್ಲಿ ಪಂಜಾಬ ಕೇಸರಿ ಮಹಾರಾಜ ರಣಜಿತ ಸಿಂಹನು ಅವ್ಯವಸಸರದಲ್ಲಿ ಅವರ ಸ್ವಾಗತಕ್ಕೋಸ್ಕರ ಒಂದು ದೊಡ್ಡ ದರಬಾರನ್ನು ನಾಡಿದ್ದನು ಈ ದರಬಾರಿನ ಕಾರ್ಯವು ಹೂತಿಯಾಗುತ್ತಲೇ ರಣಜಿತ ಸಿಂಹನು ಭಯಂಕರವಾದ ಪಕ್ಷವಾತ ರೋಗದಿಂದ ಪೀಡಿತನಾಗಿ ಲಾಹೋರಿನ ಅರಮನೆಗೆ ತರಲ್ಪಟ್ಟನು ಆ ಸಮಯದಲ್ಲಿ ಅವನು ವಾಕ್‌ಶಕ್ತಿ ರಹಿತನಾಗಿದ್ದನು ಆದುದರಿಂದ ಅವನ ಒಬ್ಬ ವಿಶ್ವಾಸ ಪಾತ್ರನೇವಕ ನಾದ ಫಕೀರ ಅಜೀಜುದ್ದೀನನು ರಾತ್ರಿ ಹಗಲು ಅವನ ಹಾಸುಗೆಯ ಬಳಿಯಲ್ಲಿದ್ದುಕೊಂಡು ಸನ್ನೆಯಿಂದ ಅವನ ಮನಸ್ಸಿನ ಆಲೋಚನೆ ಗಳನ್ನು ತಿಳಿದು ಅವನಿಗೆ ರಾಜ್ಯದ ಎಲ್ಲಾ ಸಮಾಚಾರಗಳನ್ನು ತಿಳಿಸು ತ್ತಿದ್ದನು ಆಗ ಪಂಜಾಬು ಅಭಿವೃದ್ಧಿಸ್ಥಾನ ನಂತು ಪ್ರಬಿಷ್ಟ ರಾಜ್ಯದ ಮಧ್ಯದಲ್ಲಿ ನಿಲ್ಲಿಕೊಂಡು ಬಹಳ ವಿಪತ್ಸಾವಸ್ಥೆಯಲ್ಲಿತ್ತು ಇದೇ ಸಮಯದಲ್ಲಿ ಸರ್ವಗ್ರಾಸಿಯಾದ ಕಾಲನು ರಣಜಿತ ಸಿಂಹನ ಕಡೆಗೆ ಕೈಚಾಚಿದನು ಅವನ ಮರಣದ ಸಂದೇಹದಿಂದ ದಿನಕ್ಕೆ ಒಂದರಂತಾ ವರ್ತ ಅವನನ್ನು ಮಂಚದಿಂದ ಇಳಿಸಿ ನೆಲದ ಮೇಲೆ ಇಡುತ್ತಿದ್ದರು ಭಯವು ದೂರವಾಗುತ್ತಲೇ ಪುನಃ ಅವನನ್ನು ಎತ್ತಿ ರತ್ನ ಜಡಿತವಾದ ಮಂಚದ ಮೇಲೆ ಮಲಗಿಸುತ್ತಿದ್ದರು. ಅವನ ಈ ಸಂಕಟಾವಸ್ಥೆ ಯನ್ನು ನೋಡಿ ಬ್ರಿಟಿಷ್ ಸರಕಾರದ ಆ ಕಾಲದ ಪ್ರಸಿದ್ಧ ಡಾಕ್ಟರ್ ಮಿಟರ್ ಎಂಬವರನ್ನು ಕರೆಸಿದರು. ಅವರು ರೋಗಿಯನ್ನು ನೋಡಿ "ಇನ್ನು ಯಾವ ಆತೆಯೂ ಇಲ್ಲ" ಎಂದು ಹೇಳಿಬಿಟ್ಟರು. ಈ ಸಮಾ ಚಾರವನ್ನು ರಣಜಿತಸಿಂಹನು ಕೇಳಿ ಹೇಗಾದರೂ ಇನ್ನೂ ಕೆಲವು ದಿನ ಬದುಕಬೇಕೆಂದು ವ್ಯಾಕುಲವುಳ್ಳವನಾದನು ಆಗ ಅವನ ದೃಷ್ಟಿಯು ಫಕೀರ ಅಜೀಜುದ್ದೀನನ ಮೇಲೆ ಬಿತ್ತು. ನೋಡುತ್ತ ನೋಡುತ್ತಲೆ ಅವನಿಗೆ ಸನ್ಯಾಸಿಗಳಿಂದಲೂ ಫಕೀರರಿಂದಲೂ ಹುಂಡಿ ಹೋದುವು. ರಾಜ್ಯದ ಪ್ರತಿಯೊಂದು ದೇವಾಲಯದಲ್ಲಿ ಸ್ವಸ್ತ್ರ ಯನವು ಪ್ರಾರಂಭವಾಯಿತು ಮಹಾರಾಜನ ಆರೋಗ್ಯ ಲಾಭಕ್ಕಾಗಿ ಪಾನಾ ಪ್ರಕಾರದ ಪೆಅನುಷ್ಠಾನಗಳು ಮಾಡಲ್ಪಟ್ಟುವು ಅರಮನೆ ಯಲ್ಲಿ ದಾನಧರ್ಮವು ತೆರೆಯಲ್ಪಟ್ಟಿತು. ದೀನ ದುಃಖಿತರಿಗೆ ಅನ್ನ, ಬಟ್ಟೆ, ದ್ರವ್ಯಗಳು ದೊರೆತುವು ಇಷ್ಟೊಂದು ದಿನಗಳ ವರೆಗೆ ರಣಜಿತ ಸಿಂಹನು ತನ್ನ ತೀಕ್ಷ್ಣ ಬುದ್ಧಿ ಬಲ ಹಾಗೂ ಪೌರುಷದಿಂದ ಕೂಡಿ ಸಿಟ್ಟಿದ್ದ ಅಖಾಡವಾದ ಧನ ಸಂಪತ್ತನ್ನು ಇಂದು ಅವನು ಮುಕ್ತ ಹಸ್ತ ಗಳಿಂದ ಹಾಗೂ ಸಂಪ್ರದಾಯ ಭೇದವಿಲ್ಲದೆ ದಾನ ಮಾಡತೊಡಗಿ ದನು. ಅವನಿಗೆ ತನ್ನ ಮರಣಕಾಲವು ಸಮೀಪಿಸಿದಂದು ಗೊತ್ತಾಗಿ ತ್ತಲೇ ದಾನದ ಪರಿಮಾಣವು ಕೂಡ ವೃದ್ಧಿಯಾಯಿತು. ನೂರಾರು ದೇವಸ್ಥಾನಗಳಿಗೂ ಮಸೀದಿಗಳಿಗೂ ಉಂಬಳಿಗಳನ್ನು ಬಿಟ್ಟನು, ಇನ್ನು ಇತರ ವಸ್ತುಗಳಂದರೆ— ತನ್ನ ಅತಿ ಪ್ರೀತಿಯ ಕುದುರೆ ಆನೆ, ರತ್ನ ನೊದಲಾದುದನ್ನೂ ಕೂಡ ಕೊಟ್ಟು ಬಿಟ್ಟನು ರಾಜಕೋಷವು ಬರಿದಾಗುತ್ತಲೇ ಈಚೆಗೆ ಬ್ರಿಟಿಷ್ ಸರಕಾರದೊಡನೆ ಸಂಧಿ ಮಾಡುವ ಸಮಯದಲ್ಲಿ ಉಪಹಾರ ರೂಪವಾಗಿ ಕೊಹಿನೂರ್ ಮುತ್ತು ರತ್ನಗಳನ್ನು ಕೂಡ ದಾನ ಮಾಡಿಬಿಟ್ಟನು ಅಂತು ಅವನು ಮಾಡಿದ ದಾನದ ಪರಿಮಾಣವು ಹದಿನೈದು ಕೋಟಿ ರೂಪ್ಯಗಳಿಗೂ ಮಿಕ್ಕಿತ್ತು ಇನ್ನು ಸಾಯುವ ವರೆಗು ಘಂಟೆಗಳ ಮೊದಲು ಅವನು ಜಗತ್ಪ್ರಸಿದ್ಧವಾದ ಕೊಹಿನೂರು ರತ್ನವನ್ನು ಜಗನ್ನಾಥ ದೇವರಿಗೆ ಅರ್ಪಣೆ ಮಾಡುವ ದಕ್ಕೋಸ್ಕರ ತನ್ನ ಎದುರಿಗೆ ತರಲಿಕ್ಕೆ ಹೇಳಿದನು. ಆದರೆ ಅವನ ಪುತ್ರ ಮತ್ತು ಮಂತ್ರಿಗಳು ಬಂದು ಅಡ್ಡ ಮಾಡಿದರು, ಸಮಸ್ತ ಭಾರ ತದ ರಾಜಸ್ವಕ್ಕೂ ಮಿಕ್ಕಿದ ಬೆಲೆಯುಳ್ಳ ರತ್ನವನ್ನು ಈ ಪ್ರಕಾರವಾಗಿ ದಾನ ಮಾಡುವುದಕ್ಕೆ ಅವರಿಗೆ ಇಷ್ಟವಿರಲಿಲ್ಲ. ಅಂತೂ ಆ ದಿನ (೨೬—೬—೧೮೩೯) ಹಲವು ಸಲ ಮೂರ್ಛಿತನಾಗಿ ಕೊನೆಗೆ ತನ್ನ ಆಆಸನ ವಯಸ್ಸಿನಲ್ಲಿ ಇಹಲೋಕ ಯಾತ್ರೆಯನ್ನು ಮುಗಿಸಿದನು ರಾಜ್ಯದ ರಕ್ಷಣೆಯ ಯೋಗ್ಯ ವ್ಯವಸ್ಥೆ ಮಾಡುವ ವರೆಗೆ ಕುಮಾರ ಖಡ್ಗ ಸಿಂಗ ನೊದಲಾದವರು ಮಹಾರಾಜನ ಮರಣದ ವಾರ್ತೆಯನ್ನು ಗುಪ್ತ ವಾಗಿಟ್ಟರು. ಮಹಾರಾಜನ ಮರಣವು ಅಸಾಮಾನ್ಯವೆಂದು ಸಾಬೀತು ಏಳು ದಿನಗಳ ಮೊತಲೇ ೨೦—೬—೧೮೩೯ನೇಯ ರಾತ್ರಿ ಒಂದು ದೆರವಾನು ನಡೆಸಿ ಕುಮಾರ ಖಡ್ಗ ಸಿಂಗನನ್ನು ಯುವರಾಜನನ್ನಾಗಿ ಮಾಡಿದ್ದರು ದೀನ ಸಿಂಗನಿಗೆ ದಿವಾನ ಪದವಿಯನ್ನೂ ಕೊಟ್ಟಿದ್ದರು. ಜೂನು ೨೮ಕ್ಕೆ ಪಂಜಾಬು ಪ್ರವೇಶದ ಎಲ್ಲಾ ಪೂರ್ಣ ಮತ್ತು ಬಂದರು ಗಳನ್ನು ಸುರಕ್ಷಿತ ಮಾಡಿ ಇಂಗ್ಲೀಷ್ ರಾಜಧಾನಿಯಲ್ಲಿ ತಕ್ಕಷ್ಟು ಸೈನ್ಯ ಇಟ್ಟಿಟ್ಟು ಮಹಾರಾಜನ ಮೃತ್ಯು ಖಡ್ಗ ಸಿಂಹನ ರಾಜ್ಯ ಸಿಂಹಾಸನಾ ರೋಹಣ ದೀನಸಿಂಹನ ದಿವಾನ ಪದವಿ ಇತ್ಯಾದಿಗಳನ್ನು ಪ್ರಸಿದ್ಧ ಮಾಡಿದರು

ಇದೇ ಸಮಯದಲ್ಲಿ ಮಹಾರಾಜನ ಕುಂದನ, ಹಿಂದಾಲ, ರಾಜಕುಂವರಿ ಮತ್ತು ರಾಯಾಂತಾವಿ ಎಂಬ ನಾಲ್ಕು ಮಂದಿ ರಾಣಿಯೆಂದು ೧ ಸಹಮರಣಕ್ಕಾದ ಇಚ್ಛೆಯನ್ನು ಪ್ರಕಟ ಮಾಡಿ ಆಸಂಬಂಧವಾದ ಸಿದ್ಧತೆಗ ಳನ್ನು ಮಾಡಲಿಕ್ಕೆ ಆಜ್ಞಾಪಿಸಿದರು ಮಹಾರಾಜನ ಮರಣದ ಮರನೇ ದಿನ ನ್ಯಾಸ ದೇಹವನ್ನು ಗಂಗಾ ಜಲದಿಂದ ತೊಳೆದು ರತ್ನ ಖಚಿತವಾದ ಚಿನ್ನದ ಪಲ್ಲಂಗಿನಲ್ಲಿಟ್ಟು ಅಪೂರ್ವವಾದ ವೈಭವದಿಂದ ಸ್ಮಶಾನ ಭೂಮಿಗೆ ತೆಂಡಂಡೋದರು ಸತೀ ರಾಣಿಯರು ಅಪೂರ್ವ ವಸ್ತ್ರಾ ಭರಣಗಳಿಂದಲಂಕೃತರಾಗಿ ಗಂಭೀರ ಭಾವದಿಂದ ಬ್ರಾಹ್ಮಣ ಮತ್ತು ನಿಕ್ಕ ಪುರೋಹಿತರಿಂದಿಗೆ ಶವದ ಹಿಂದೆ ಸ್ಮಶಾನ ಭೂಮಿಗೆ ಮುಟ್ಟಿ ದರು. ಅಲ್ಲಿ ಚಿತಾರೋಹಣ ಮಾಡುವ ಮೊದಲು ಪ್ರಧಾನಮಹಿಷಿ ರಾಣಿ ಕುಂದನೆಯು ದೀನಸಿಂಹನ ಕೈಯನ್ನು ಮೃತಮಹಾರಾಜರ ದಕ್ಷಸ್ಥಳದ ಮೇಲಿರಿಸಿ ಖಡ್ಗಸಿಂಹ ಮತ್ತು ಆಳೆಯ ಪುತ್ರ ನೌನಿಹಾಲ ಸಿಂಹರನ್ನು ಎರಡಿಗೂ ಪರಿತ್ಯಾಗ ಮಾಡುವುದಿಲ್ಲೆಂದೂ, ಪಂಜಾಬಿನ ಸ್ವಾರ್ಥದ ಕಡೆಗೆ ಸದಾ ದೃಷ್ಟಿಯಿಟ್ಟಿರುವೆನೆಂದೂ ಆವಸಿಂದ ಪಕಥ ವನ್ನು ಮಾಡಿಸಿದಳು ಹಾಗೆಯೇ ಖಡ್ಗಸಿಂಹನಿಂದಲೂ ದೀನಸಿಂಹನಿಗೆ ಆಶ್ರಿತನಾಗಿರುವಂತೆ ಪ್ರತಿಜ್ಞೆಯನ್ನು ಮಾಡಿಸಿದಳು ಆನಂತರ ಅವಳು ಪ್ರಸನ್ನ ಚಿತ್ತದಿಂದ ಚಿತಾರೋಹಣ ಮಾಡಿ, ಮೃತ ಮಹಾರಾಜರ ಮಸ್ತಕವನ್ನು ತನ್ನ ತೊಡೆಯ ಮೇಲಿಟ್ಟುಕೊಂಡಳು. ಉಳಿದ ಮೂವರು ರಾಣಿಯರು ಮತ್ತು ಇವರು ಪ್ರೀತಿವಾಸಿಯರು ೩ ಪುಸನ್ನ ಮನಸ್ಸಿನಿಂದ ಮಹಾರಾಜರ ಮೃತದೇಹವನ್ನು ಸುತ್ತುಗಟ್ಟಿ ಕುಳಿತು ಕೊಂಡರು, ಖಡ್ಗಸಿಂಹನು ಬ್ರಾಹ್ಮಣರ ಅಪ್ಪಣೆಯಂತೆ ಚಿತೆಯಲ್ಲಿ ಅಗ್ನಿಸಂಯೋಗವನ್ನು ಮಾಡಿದನು. ೩ ಆ ಸಮಯದಲ್ಲಿ ವಿಶಕ್ತವಾದ ಸಮಸ್ತ ಸೇನೆ, ಆಸಂಖ್ಯ ಜನತೆ ಮತ್ತು ಒಂದು ನೂರು ಇಂಗ್ಲಿಷ್ ಅಧ

ನೋಟೀಸು

ಕಾರ್ಕಳ ತಾಲೂಕು ತಿರ್ತಾಡಿ ಗ್ರಾಮದ ಸಣ್ಣಾರು ಕುಂಞಪ್ಪ ಸೇರಿಗಾರನ ಮಗ ದುಗ್ಗಯ್ಯ ಸೇರಿಗಾರನು ಈ ಮುಖಾಲ ಎಲ್ಲಾ ಜನರಿಗೆ ತಿಳಿಯಪಡಿಸುವದೇನೆಂದರೆ:—

ಇದೇ 1933ನೇ ಇಸವಿ ಜೂನ್ ತಿಂಗಳ ಕಾರೇಕ್ಕು 2ರಲ್ಲು ನನ್ನ ವಾಸ್ತವ್ಯದ ಪಲ್ಕಾರು ಮನೆಯಿಂದ ನಮ್ಮ ನಂಬಂಧಿಕ ಸಜ್ರಿ ತಿರ್ತಾಡಿ ಗ್ರಾಮದ ಬಾಬು ಯಾನೆ ಹೊನ್ನಯ್ಯ ಸೇರಿಗಾರ 1 ಮತ್ತು ಪ್ಪಿಳಾಗ್ರಾಜೆ ದಾಕಯ್ಯ ಸೇರಿಗಾರ 1 ಕಡಿಂಡ 2 ಜನರು ನಾನು ಮನೆಯಲ್ಲಿರುವಾಗ್ಗೆ ನನ್ನ ತಂದೆಯವರು ತಿರ್ತಾಡಿ ಗ್ರಾಮದ ತೀಮುಂಜೆ ಗುತ್ತಿನ ಗುಮ್ಮೆಣ್ಣಾ ಬುಣ್ಣರಿಂದ 1898ರಲ್ಲು ಪಡಕೊಂಡ ಮೂಲಗೇಣಿಯ ದಸ್ತಾವೇಜು ಕುಂದು, ಸಜ್ರಿ ಮೂಲಗೇಣಿಯ ಮೂಲಗಾರರಿಂದ ಮೂಲ ಗೇಣಿ, ಗೇಣಿ ಪಾವ್ತಿಯ ಕೆಲವು ರಶೀದಿಗಳನ್ನು ನಗದಿ ರೂ. 125—0—0 ಮತ್ತು ನಮ್ಮ ಸ್ವಂತದ ದರ್ಕಾಸ್ತಿನ ಪಟ್ಟಿಯನ್ನೂ ಮತ್ತು ಜಿಪ್ಪದ ಕುಂಗುರು 2ನ್ನೂ ಮತ್ತು ಮಂಗುತ್ತಿ 1 ಕೂಡಾ ಮೇಲ್ಕ್ಯಾಣಿಸಿದ ಸೊತ್ತನ್ನೆಲ್ಲ ಕಳವು ಮಾಡಿದ್ದರು. ಈ ಸಂಗ್ತಿಯಲ್ಲಿ ಮುಂದಿನ ಮೂವರಿಗೆ ಬಗ್ಗೆ ನಮ್ಮ ಗ್ರಾಮದ ಪಟೇಲರ ಹತ್ತಿರ ಸ್ಪೇಶನಿಗೆ ರಿಪೋರ್ಟು ಕೊಡಬೇಕಾಗಿ ಕೇಳಿದೆ. ಅದಕ್ಕೆ ಅವರು ತಾನು ಎಲ್ಲಾ ರಾಜಿಯಿಂದ ತೀರ್ಮಾನ ಪಡಿಸುತ್ತೇನೆಂತಲೂ ಆ ಬಗ್ಗೆ ನಾನು ಮತ್ತೂ ನನ್ನ ತಂದೆ ಅಣ್ಣಂದಿರು ಕಬೂಲು ಇದ್ದೇವೆಂತ ದಸ್ತುತೂ ಕೈ ಮೊಹರು ಕೊಡಬೇಕಾಗಿ ಹೇಳಿದರು. ಆ ರೀತಿ ವಿಶ್ವಾಸದಿಂದ ವಿಶಾದ ತೀರ್ಮಾನ ಪಡಿಸಲಿಕ್ಕೆ ಇಷ್ಟಾಕಂತ ನಾವು ಕೈ ಮೊಹರ ಆಗಲಿ ಕಾಗದಕ್ಕೆ ಪಡಕೊಂಡಿದ್ದರು. ಸಜ್ರಿ ಪಟೇಲರೂ ಕೆಲವು ದಿವಸ ತನಕ ಯಾವ ಇತ್ಯರ್ಥ ಮಾಡದೆ ಇದ್ದ ಸಂಗ್ತಿಯಲ್ಲಿ ನಾವು ಕುಂದಾಪುರ ಜ್ಯೂಂಟ್ ಮೆಜಿಸ್ಟ್ರೇಟ್ ದೊರೆಗಳವರಿಗೆ ತಾ. 10—6—33 ರಲ್ಲು ಅರ್ಜಿ ಬರಕೊಂಡಿದ್ದೆವು. ಸಜ್ರಿ ಅರ್ಜಿಯು ಈಗ ತನ್ನಿಯಲ್ಲಿರುತ್ತದೆ. ನಮ್ಮಿಂದ ಪಡಕೊಂಡ ಕೈ ಮೊಹರು ದಸ್ತುತುಗಳನ್ನು ಸಜ್ರಿ ಪಟೇಲರು ಈಗ ಸುಳ್ಳು ರಿಕಾರ್ಡು, ನೋಟು ಮೈರೆ ದಾಕ್ಲೆಗಳನ್ನು ಮಾಡುತ್ತಾರಾಗಿ ನಾನು ತಿಳಿದು ಈ ಸಂಗ್ತಿಯಲ್ಲಿ ಪುನಃ ಮುಂದಿನ ನ್ಯಾಯವನ್ನು ಕಾಶಾಡಬೇಕಾಗಿ ದಕ್ಷಿಣ ಕನ್ನಡ ಬೆಲ್ಲಾ 1st ಕ್ಲಾಸ್ ಮೆಜಿಸ್ಟ್ರೇಟ್ ದೊರೆಗಳಿಗೆ ಅರ್ಜಿ ಕೊಡುತ್ತೇನೆ.

ಆದುದರಿಂದ ಸಜ್ರಿ ಪಟೇಲರು ಮತ್ತು ಬಾಬು ಯಾನೆ ಹೊನ್ನಯ್ಯ ಸೇರಿಗಾರನಾಗಲೀ ಏಕಸ್ತರಾಗಿ ನಮ್ಮ ಕೈ ಮೋಹರ ದಸ್ತುತಿನಿಂದ ಸೃಷ್ಟಿಸಿ ದಾಕ್ಲೆಗಳನ್ನು ಮಾಡಿ ಸಜ್ರಿ ದಾಕ್ಲೆಗಳನ್ನು ಯಾರಾದರೂ ಟ್ರೆನ್ಸ್‌ಫರ್ ವಗೈರೆ ಪಡಕೊಂಡರೆ ಆ ನಷ್ಟಕ್ಕೆ ನಾವು ಬದ್ಧರಲ್ಲಾ. ಅಲ್ಲದೆ ಈ ವರೆಗೂ ನಾವು ಯಾವದೊಂದು ತರದ ಬರಹ ಮೂಲಕ ದಾಕ್ಲೆಗಳನ್ನು ಸಜ್ರಿ ನಾಭರಾಜರಿಗಾಗಲೀ ಬಾಬು ಸೇರಿಗಾರನಿಗಾಗಲೀ ಬರ ಕೊಟ್ಟಿದ್ದಿಲ್ಲಾ ಎಂಬ ಸಂಗ್ತಿ ಸರ್ವರಿಗೂ ತಿಳಿದಿರಲಿ.

ದುಗ್ಗಯ್ಯ ಸೇರಿಗಾರ ರುಜು.

ನೋಟೀಸು.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O. R. No. 74/33.

1. ಹೊಸದುರ್ಗ ಮಂಜುನಾಥ ಕಮ್ತಿ, 2. ರುಕ್ಕಾಬ್ಬಾ ಯಾನೆ ಗಿಜಿಗಾ ಬ್ಬಾ, (ಮೃತನರು, ಕ್ಷೇಮಚಿಂತಕ 1ನೇ ಅರ್ಜದಾರ)—ಅರ್ಜದಾರರು.

ಮತ್ತು

ಹೊಸದುರ್ಗ ಕೃಷ್ಣ ಕಮ್ತಿ ಕೂಡಾ—ರೆಸ್ಪೊಂಡೆಂಟರು.

1933ನೇ ಇಸವಿ ಜನವರಿ ತಿಂಗಳಲ್ಲಿ ಮೃತಪಟ್ಟ ಹೊಸದುರ್ಗ ಪಾಂಡ್ಯರಂಗ ಕಮ್ತಿಯವರ ಮೃನೇರ ಮಗ ರಮಾನಾಥ ಕಮ್ತಿಯ ಹಕ್ಕಿನ ಎಲ್ಲಾ ಸ್ಥಿರಚರ ಸೊತ್ತುಗಳ ಗಾರ್ಡಿಯಾನನಾಗಿ 1ನೇ ಅರ್ಜದಾರನನ್ನು ನೇಮಿಸಬೇಕೆಂತ ಅರ್ಜೇಕ್ಷಿಸಿ ದಾಕ್ಲು ಮಾಡಿದ ಮೇಲ್ಕುಂಡ ಅರ್ಜಿಯು ಇದ್ದೇ ಬರುವ ಅಗೋಸ್ತು 8ಂಗಳ ತಾ. 11ನೇ ದಿವಸ ಮೇಲ್ಕುಂಡ ಕೋರ್ಟಿನಲ್ಲಿ ತನ್ನಿಗೆ ಇಟ್ಟರುವುದರಿಂದ ಆ ಕುರಿತು ಆಕ್ಷೇಪವಿದ್ದವರು ಸಜ್ರಿ ತಾರೀಕು 11—8—33ನೇ ದಿವಸ ಪೂರ್ವಾಹ್ನ 11 ಗಂಟೆಗೆ ಮೇಲ್ಕುಂಡ ಕೋರ್ಟಿಗೆ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಜ್ಞಾಪೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು, ತಾ—೬—೭೩.

*A. Ranganatha Rao,
Advocate for Petitioner.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಔಷಧಿಯು

ಸ್ತ್ರೀಯರಿಗೊದಗು ಮಹಾ ವರ!

ಯಾವ ತರದ ಅಥವಾ ಎಲ್ಲಾ ತರದ ಮುಟ್ಟುದೋಷ; ಮುಟ್ಟಾಗುವದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು; ಸ್ತ್ರೀಯರ ಅಂಗಾಂಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು ರೂ. 1—10—0.

ಕೇಸರ್ ಕುಟೀರ,

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for South Kanara

ಪೊಪ್ಯೂಲರ್ ಸ್ಟೋರ್ಸ್,

ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿ ಕೊಡುವಂತಹ

ಸುಮಧುರ

ರುಂಡು ದ್ರಾಕ್ಷಾಸವ

ಜರೂರು ಉಪಯೋಗಿಸಿರಿ.

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.

ರುಂಡು ಅಶೋಕಾರಿಷ್ಟ

ಬೇಗನೇ ಉಪಯೋಗಿಸಿರಿ.

'ZANDU'

ರುಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬ್ಯಾಗಳು.

ಬೆಂಗಳೂರು ಏಜಂಟ್ರು:—ಬಿ. ಪೊಪಟ್‌ಲಾಲ ಕಂಪೆನಿ, ೫೧ ಆರ್ಕಾಟ್ ಶ್ರೀನಿವಾಸಾಚಾರ ಸ್ಟ್ರೀಟ್.

ವಿಜಾಪುರ	,,	ಗೋವಿಂದ ಗೋಪಾಲ ಗಾಡಗೀಳ.	ಧಾರ್ವಾಡ ಏಜಂಟ್—ದಿ ಧಾರ್ವಾಡ ಫಾರ್ಮಸಿ.
ಮಂಗಳೂರು	,,	ದಿ ಉಲ್ಲನ್ ಮಾರ್ಟ್.	ಬೆಳಗಾಂವ ,, ಪ್ರೊವಿಜನ್ ಸಪ್ಲ್ಯಾ ಕೊ.
ಗದಗ	,,	ವಿದ್ಯಾವಿಲಾಸ ಬುಕ್ ಡಿಪೊ.	ಬೆಳಗಾಂವ ,, ಪ್ರೊವಿಜನ್ ಸಪ್ಲ್ಯಾ ಕೊ.
ಹುಬ್ಬಳ್ಳಿ	,,	ತಿಪ್ಪಣ್ಣ ಕ್ಷತ್ರಿಯ, ಧೂಪದಪೇಟೆ.	ಬೈಲಹೊಂಗಲ್ ,, ಜಿ. ಬಿ. ಉದಾಪುಡಿ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆರ್ಯುವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ.

ಸೇವಿಸಿ ತೃಪ್ತಿಗೊಂಡ ನಿರಾಕಿಗಳು ಇದನ್ನು

"ಜೀವಮಾನದ ಅಮೃತ. ನಿಜವಾದ ಶಕ್ತಿವರ್ಧಕ ಔಷಧ" "ಶಕ್ತಿ ಹೀನತೆಗೆ ಪ್ರಪಂಚದಲ್ಲಿನ ಸಿದ್ಧೌಷಧ" "ಶಕ್ತಿದಾಯಿನಿ ಔಷಧಗಳ ರಾಜ" "ಸರ್ವ ಸಿದ್ಧೌಷಧ"
"ವ್ಯಾಧಿಗಳಿಂದ ಸಂಕಟಿ ಪಡುವವರಿಗೆ ವರಪ್ರದಾಯಿನಿ"

ಎಂಬೀ ಮೊದಲಾದ ಹೆಸರುಗಳಿಂದ ಕರೆದಿರುತ್ತಾರೆ. ಪರೋಪ್ಕಾರಬುದ್ಧಿಯ ರೀತಿ ತಯಾರಿಸಿದ ಈ ಔಷಧವು ಯಾವುದೆಂದರೇ ನಿಮಗೆ ಹಿತಕಾರಿಯೂ ಜೀವನಕಾರವೂ ಆದ

ಜೀವಾಮೃತವೇ.

ಇದು ಪಂಡಿತ ಡಿ. ಗೋಪಾಲಾಚಾರ್ಯರವರು ಕಂಡು ಹಿಡಿದಿರುವ ಮಹಾ ಶಕ್ತಿವರ್ಧಕ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲಾ ಸುಪ್ರಸಿದ್ಧವಾಗಿದೆ. ಇರ್ಜಕನೇ ಇಸವಿಯಿಂದಲೂ ಇದು ಬಳಕೆಯಲ್ಲಿದೆ. ನರಗಳ ದೌರ್ಬಲ್ಯವು ಮುಖ್ಯಕ್ಕಳ ಹೀನತೆ ಪಡೆದು ಆಯಾಸ ರೋಗ ಹೀನತೆ, ನರಗಳ ಆಕಸ್ಮಿಕ, ಮೆದುಳು ಬೈತಲ್ಲಿಗುಂದಿರುವಿಕೆ, ತೂಕದಲ್ಲಿ ಕಡಮೆಯಾಗಿರುವಿಕೆ ಇತ್ಯಾದಿಗಳಿಂದ ನರಳುತ್ತಿದ್ದಲ್ಲಿ ಜೀವಾಮೃತವನ್ನು ಸೇವಿಸಲಾರಂಭಿಸಿ. ಇದರಿಂದ ನಿಮಗೆ ಪರಮಾಶ್ಚರ್ಯಕರವಾದ ಗುಣವೊಂಟಾಗುವುದು. ಮೊದಲೇ ನಾರೆ ಸೇವಿಸಲು ಪ್ರಾರಂಭಿಸಿದಾರಭ್ಯವೇ ಆವರ ಶ್ರೇಷ್ಠ ಗುಣಗಳು ನಿಮಗೆ ಗೊತ್ತಾಗುತ್ತದೆ. ನಿಮ್ಮ ವೈದ್ಯರು ಅದನ್ನು ಎರಡ ಸೈಜುಗಳಲ್ಲಿ ರೂ. ೩—೪—೦ ಮತ್ತು ರೂ. ೧—೧೨—೦ರಂತೆ ಮಾರುತ್ತಾರೆ. ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಆಯುರ್ವೇದಾಶ್ರಮಂ, ವೋ. ಬಾಕ್ಸು ನಂ. ೩೦೬, ಮದ್ರಾಸು.

ಸೋಲ್ ಏಜಂಟರು:—ನೀಡು ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೧೩ ಚಿಕ್ಕಪೇಟೆ ಸೆಂಗಳೂರು. (ಮಾಡು ಹೋಲೆಲ್ ಹತ್ತಿರ)

ದಕ್ಷಿಣ ಕನ್ನಡದ ಏಜಂಟರು— ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು.

ಹಳ್ಳಿಯ ಹಾಡು.

ಬಡತನವೆ ನೀಯೆನ್ನ ಬಿಡದೆ ಬೆನ್ನಲಿ ಬಂದೆ
ಕಡು ಕಷ್ಟಗೊಳಿಸಿ ದಣಿಸಿದೆ ಹೊನ್ನುಳ್ಳ
ಹೊಲೆಯಂಗೆ ಕೈಯ ಮುಗಿಸಿದೆ ॥ ೧ ॥

ಬಿದ್ದರೆತ್ತುವರಿಲ್ಲ ಬೆನ್ನ ತಾಂಗುವರಿಲ್ಲ
ಆನಿದ್ದೇನೆಂಬ ಹಿತರಿಲ್ಲ ದೇವರೆ
ತಾಯಂತೆ ನೀವೆ ಸಲಹಿರೊ ॥ ೨ ॥

ಆರೂ ಇಲ್ಲದ ಕಷ್ಟ ನೀರಿಲ್ಲದ ಕೆರೆ ಕಷ್ಟ
ಆದರಿಂದ ಕಷ್ಟ ಬಡಕನ ಬಂದರೆ
ಇರುವುದಕ್ಕೆ ಕಷ್ಟ ಪರರೆಡೆ ॥ ೩ ॥

ಕಷ್ಟ ದರಿದ್ರಂಗೆ ಹುಟ್ಟಲಾಗದು ಹೆಣ್ಣು
ಕೊಟ್ಟು ಕಕ್ಕಿದರೆ ತನಗಿಲ್ಲದಿದ್ದರೆ
ದುಷ್ಟರ ಬಾಯ ನುಡಿ ಕೇಳು ॥ ೪ ॥

ಕಣ್ಣು ಕಾಣದ ಹಕ್ಕಿ ಹಣ್ಣುಳ್ಳ ಮರವೇರಿ
ಹೆಕ್ಕಿಂದೆ ಮೆಲುಗು ಕಸುಗಾಯಿ ಆ ಹಕ್ಕಿ
ಹಾಲೆಂದೇ ಕುಡಿಗು ಹಣೆ ನೀರ ॥ ೫ ॥

* * * * * * *

ಕೋಗಿಲೆ ಕೂಗಿತು ಕುಂಬಳ ಹೂವಿಂಗೆ
ಬೆಟ್ಟ ಕೂಗಿತ್ತು ಬಿಸಿಲಿಂಗೆ ನನ್ನಾನೆಯ
ಬಾಲೆ ಕೂಗಿದಳೆ ಹೂವಿಂಗೆ ॥ ೬ ॥

ಹಾಲ ಕುಡಿಯಲ್ಲು ತಟ್ಟೆ ನೀರ ಮೊಗೆಯಲು ಗಿಂಡಿ
ಹೂವ ಕೊಯ್ಯಲಿಕೆ ಹರಿವಾಣ ತೆಗೆದುಕೊ
ಅರಳು ಮಲ್ಲಿಗೆಯ ಕೊಯ್ಯಲಿಕೆ ॥ ೭ ॥

ಬಲ್ಲಾಳ ಹಿತ್ತಿಲ ಬಳ್ಳಿಯ ಹೆಸರೇನು
ಬೆಳ್ಳಿಯ ದಂಡೆ ಬಿಡು ನೀರ ಹಿತ್ತಿಲ
ಬಲ್ಲಾಳ(ತಿಂಬ ಬಿಳಿಯೆಲೆ ॥ ೮ ॥

ಮಾವಿನ ಹೂವಿಂಗೆ ಅರೆಲ್ಲ ಕಳ್ಳರು
ದೇವೇಂದ್ರನರಸಿಳು ಬಸಿರಿನ ಬಯಕೆಗೆ
ದೇವೇಂದ್ರ ಮಂಜ ಕಳುಹಿದ ॥ ೯ ॥

ಉದ್ದ ಸಂಪಗೆ ಮೊರ ಗುದ್ದು ಸಂಪಗೆ ಹೂವು
ಮುದ್ದಣ್ಣ ಹೋಗಿ ಕೊಯ್ತಂದ ಸಂಪಗೆ
ಮುದ್ದು ತಂಗಿಯರ ಕುರುಬಿಂಗೆ ॥ ೧೦ ॥

ಹೆಣ್ಣಾಗಿ ಹುಟ್ಟಿಸದಕ್ಕೆ ಮಣ್ಣಾಗಿ ಹುಟ್ಟಲಕ್ಕು
ಮಣ್ಣ ಮೇಲೊಂದು ಮರಸಾಗಿ ಇದ್ದರೆ
ದಾರಿ ಹೋಪೋರಿಂಗೆ ನೆಳಲಕ್ಕು ॥ ೧೧ ॥

ನಗೆ ನಗೆ ಎಂಬುದು ನಗೆಯು ನಂಬಲೆ ಬಾರ
ನಗೆ ಬೇರೆ ಅವನ ಬಗೆ ಬೇರೆ ಬಾಳೆಯ
ಕುಂಡಿಗೆ ಬೇರೆ ಕೊನೆ ಬೇರೆ ॥ ೧೨ ॥

ಮಕ್ಕಳರ್ತಿ ಉಳ್ಳನಂಗೆ ಮಕ್ಕಳಾ ಕೊಡ ದೇವ
ಮಕ್ಕೊ ಬೇಡೆಂದು ಹಲುಬುವ ಬಡವಂಗೆ
ಮಕ್ಕಳ ಕೊಡುಗು ಮನೆ ತುಂಬ ॥ ೧೩ ॥

ಆಡಿ ಉಂಡವ ಕಟ್ಟ ಕೇಡ ನೆನೆದನ ಕಟ್ಟ
ನೋಡದ್ದ ಕೆಟ್ಟಾ ಬೆಳೆ ಭೂಮಿ ಸೋದರದ
ಹೆಣ್ಣು ತಂದು ಕೆಟ್ಟಾ ಅಭಿಮನ್ಯ ॥ ೧೪

ಸಂಗ್ರಾಹಕ—ಪದ್ಮನಾಭ, ಮಿತ್ರಸುಂದಲಿ

ಗುರಿ.

೧

ಏನ್ನಯ ಧರ್ಮವ ಕೇಳ್ವಿಯಾ?
ಶರಣ್ಯತೆಯಾಗಿಹುದು,
ನಿನ್ನಯ ಧರ್ಮವ ಹೇಳುವಿಯೋ?
ಮಾನ್ಯತೆಯೆಹುದೆನಗೆ

೨

ಕರ್ಮವ ತಿಳಿಯಲು ಬಯಸುವಿಯಾ?
ಸೇವೆಯು ಗೈಯುವುದು
ನಿರ್ಮಲ ಚಿತ್ತದೊಳಿನಿತ ಪ್ರೇಮವ
ಜೀವನ ಸಾಗಿಸುದು

೩

ನೀತಿಯ ಸೀಮೆಯನರಿಯುವುದೇಕೆ—
ಕಾತುರಗೊಳ್ಳುವುದು?
ಪ್ರೀತಿಯ ರಾಜ್ಯಕೆ ಮೇರೆಯ ಬೇಲಿಯ
ನೇತಕೆ ಹಾಕುವುದು?

೪

ಗುರಿಯಹುದೆನ್ನಯ ಜೀವನಕ್ಷೇತ್ರಕೆ
ವಿರುಗುವ ತಾರೆಯೊಳು
ಬೆರೆಯುತ ದಿನದಾ ಬೆಡಗಿಗೆ ಸೋಲದ
ಸುರೆಯಾಗಿರುವುದದು.

ರಾಘವ, ಮಿತ್ರಸುಂದಲಿ, ಮಂಗಳೂರು

ಸಾಹಿತ್ಯ
ಸ್ವದೇಶಾಭಿಮಾನಿ
ಸಂಚಿಕೆ

ಸಂಪುಟ ೨ ಜುಲಾಯಿ ೨೮—೭—೧೯೩೩. ಸಂಚಿಕೆ ೬

— ಅನುಕ್ರಮಣಿಕೆ —

ಪುಟ
ಪತ್ರಿಕೆಗಳ ಕೊರತೆ ೪೧
ಸಾಹಸಾಹಿಕ್ಯ ೪೩
ಶ್ರೀ ಬೇಂದ್ರೆ ೪೩
ಪಟಪಟಾರಿ ೪೪
ಅಸ್ಪೃಶ್ಯತಾ ನಿವಾರಣೆ ೪೭
ಹಳ್ಳಿಯ ಹಾಡು. ಗುರಿ ೪೮

ಜುಲಾಯಿ ತಾರೀಕು ೨೮ನೇ ಶುಕ್ರವಾರ ೧೯೩೩

ಪತ್ರಿಕೆಗಳ ಕೊರತೆ.

ಕನ್ನಡ ಸಾಹಿತ್ಯದ ಬೆಳವಣಿಗೆಗೆ ವರ್ತಮಾನ ಪತ್ರಿಕೆಗಳೂ, ಮಾಸ ಪತ್ರಿಕೆಗಳೂ ಮೂಲಾಧಾರವೆಂಬ ಸಂಗತಿಯು ಸಹಜವಾದೆ ಪತ್ರಿಕೆಗಳ ಸಂಖ್ಯೆಯೂ, ಅವುಗಳ ಪ್ರಸಾರವೆಯೂ ಸಾಹಿತ್ಯ ಪ್ರಗತಿಯನ್ನು ತೋರಿಸುತ್ತದೆ ಪತ್ರಿಕೆಗಳು ಎಷ್ಟು ತರದ್ದಿರ ತ್ರವೋ, ಅಷ್ಟರ ಮಟ್ಟಿಗೆ ಸಾಹಿತ್ಯ ಪ್ರಸಾರವು ವಿವಿಧ ರೀತಿಯಲ್ಲಿ ನಡೆಯುವುದು. ಒಂದು ಒಳ್ಳೆಯ ಜ್ಞಾನಕೋಶ ಪತ್ರಿಕೆಯಿದ್ದರೆ ಆ ವಿಷಯದ ಸಾಹಿತ್ಯವು ಹೆಚ್ಚಾಗುವುದಲ್ಲವೆ? ರಸಾಯನ ಶಾಸ್ತ್ರದ ಪತ್ರಿಕೆಯಿಂದ ರಸಾಯನ ಶಾಸ್ತ್ರ(ಕ್ಕೆ)ನನ್ನು ಜನರಿಗೆ ತಿಳಿಸಲುಬೇಕಾದ ಶಬ್ದಗಳು ಬೆಳೆಯುವುದೆಂಬುದು ನಿಸ್ಸಂದೇಹ ಹಾಗೆಯೇ ಐತಿಹಾಸಿಕ, ಔದ್ಯೋಗಿಕ, ರಾಜಕೀಯ ಮತ್ತು ಶಿಕ್ಷಣ ಪತ್ರಿಕೆಗಳು ಈ ರೀತಿಯಲ್ಲಿ ನೋಡಿದರೆ ಕನ್ನಡನಾಡಿನಲ್ಲಿ ಎಷ್ಟು ಪತ್ರಿಕೆಗಳವೆ?

ರಾಜಕೀಯ ಮತ್ತು ಜನಸಮುದಾಯಕ ವಿಷಯಗಳಲ್ಲಿ ಕೈ ಹಾಕಿ ನುರಿತ ಎಷ್ಟೋ ಜನರು ತಮ್ಮ ಹೇಳಿಕೆಗಳಿಗೆ ತಕ್ಕ ಪ್ರಚಾರ ದೊರೆಯಬೇಕೆಂದೂ, ಇತರರ ಅಭಿಪ್ರಾಯಗಳನ್ನು ಹಬ್ಬಿಸಲು ಸಂದರ್ಭ ಒದಗಿಸಿಕೊಡಲಿಕ್ಕೆಂದು ಆಯಾ ಕಾಲದಲ್ಲಿ ಪತ್ರಿಕೆಗಳನ್ನು ಹೊರಡಿಸಿರುವರು ಆದರೆ ಅವುಗಳಲ್ಲಿ ಅನೇಕವುಗಳು ಚಿಕ್ಕಪ್ರಾಯದಲ್ಲಿಯೇ ಮರಣ ಹೊಂದಿರುತ್ತವೆ ಉತ್ಸಾಹದಿಂದ ಹೊರಡುವುದು, ಉತ್ಸಾಹದಂದ ಕೆಲಕಾಲ ನಡೆಯುವುದು ಆ ಮೇಲೆ—ಹೇಳದೆ ಕೇಳದೆ ನಿಂತುಬಿಡುವುದು ಇದೇ ಅನೇಕಪ್ರಗ್ಳ ಚರಿತ್ರೆಯಾಗಿದೆ- ಈ ಲೆ ವನ್ನು ಓದುವವರ ಮನಸ್ಸಿಗೆ ದೃಷ್ಟಾಂತಗಳನೇಕ ಹೊಳೆಯಬಹುದು ಆದುದರಿಂದ ಅವುಗಳನ್ನು ಹೇಳಲವಶ್ಯವಿಲ್ಲ. ಇದರ ನಿಜತ್ವವು ಯೊಬ್ಬನಿಗೆ ತಿಳಿದ ವಿಷಯವಾಗಿದೆ

ಇಂತಹ ಸ್ಥಿತಿಗೆ ಕಾರಣವೇನು? ಮೊದಲಿನ ಕಾರಣವೆಂದರೆ ಜನರ ಸಹಾನುಭೂತಿಯು ಸಾಕಷ್ಟು ಇರುವುದಿಲ್ಲ ಪತ್ರಿಕೆಗಳ ಕೊಂಡು ಕೊಂಡು ಓದುವುದು ಪ್ರತಿ ಒಬ್ಬ ಸುಶಿಕ್ಷಿತನ ಕರ್ತವ್ಯವೆಂ ಯಾರೂ ತಿಳಿಯುವುದಲ್ಲ ನಮ್ಮಲ್ಲಿಯೇ ಎಷ್ಟು ಜನರು ಅಧ ಎಷ್ಟು ಸೌಂಸ್ಥೆಯವರು ಕನ್ನಡ ಪತ್ರಿಕೆಗಳಿಗೆ ಚಂದಾದಾರರಾಗಿ ತ್ತಾರೆ? ಬಹಳ ಕಡಿಮೆ ಹೀಗೆ ಜನರ ಔದಾಸೀನ್ಯದಿಂದ ಪತ್ರಿಕೆಗ ಕ್ರಯಪೋಗವು ಹಿಡಿದಂತಾಗಿದ ಚಾಲಕರಲ್ಲಿ ಉತ್ಸಾಹವು ಕಡಿ ಯಾಗುತ್ತಾ ಬರುತ್ತದೆ ಲೇಖಕರು ಕಡಿಮೆ. ಓದುವರು ಇ ಕಡಿಮೆ ಇದು ನಮ್ಮ ದೇಶದ ದೊಡಕಾಗಿದೆ

ಪತ್ರಿಕೆಗಳ ಬೆಳೆವಣಿಗೆಗೆ ಮಾಲಿಕರೂ ಹೊಣೆಗಾರರೆನ್ನಬಹುದು ಅನೇಕರಿಗೆ ಪತ್ರಿಕೆಗಳನ್ನು ನಡೆಸುವುದೇ ಅವರ ಮುಖ್ಯ ಉದ್ಯೋ ವಲ್ಲ ಇದೊಂದು ಒದಿಯ ಕೆಲಸವೆಂದು ಅವರು ತಿಳಿಯುತ್ತಾ ತಮಗೆ ಸಮಯ ಸಿಕ್ಕಿದ ಹಾಗೆ, ತಮಗೆ ಅನುಕೂಲವಿದ್ದಂತೆ ಪ ಗಳನ್ನು ಜರಿಸುವುದು ಪತ್ರಿಕಾ ಚಲನೆಯೆಂಬುದು ಹಗುರವಾ ಕೆಲಸವಲ್ಲ ಅದಕ್ಕಿರುವಷ್ಟು ಜವಾಬ್ದಾರಿಯು ಇನ್ನಾವುದಕ ಇಲ್ಲವೆನ್ನಬಹುದು ಪ್ರತಿಯೊಂದು ಪತ್ರಿಕೆಯಂದರೆ ಅದೊಂ ಸೌಂಸ್ಥೆಯೆಂದೇ ನಾವು ತಿಳಿಯಬೇಕು ತಮ್ಮ ಬುದ್ಧಿಶಕ್ತಿಯನು ಪೂರ್ಣ ಸಮಯವನ್ನೂ ಆ ಕೆಲಸಕ್ಕೆನೇ ವಿನಿಯೋಗಿಸುವ ಜ ಲಿಸ್ಟ್‌ರು ಅದರಲ್ಲಿ ಕೈ ಹಾಕುವುದು ಉತ್ತಮ. ತನ್ನ ಕೈಲಾ ಮಟ್ಟಿಗೆ ದೇಶದ ಉನ್ನತ ಜ್ಞಾನ, ವಿಚಾರಗಳನ್ನು ಒಟ್ಟು ಕೂ ಪತ್ರಿಕೆಗಳ ಮುಖಾಂತರ ಆ ನದಿಗೆ ದಾರಿಯನ್ನು ಓದಗಿಸುವ ಕೆಲಸ ಅವರ ಪಾಲಿನದು.

ಕೆಲಸ ನಡೆಸಲು ದ್ರವ್ಯ ಸಹಾಯವಿಲ್ಲದೆ ಆಗುವುದಿಲ್ಲ ಹ ವೆಚ್ಚ ಮಾಡುವಷ್ಟು ಫಲಕಾರಿ ಪತ್ರಿಕೆಗಳೂ ಇನ್ನೂ ಳ ವನ್ನು ವೆಚ್ಚ ಮಾಡದೆ ಪತ್ರಿಕೆಗಳು ಬೆಳೆಯುವುದಿಲ್ಲ. ಪತ್ರಿಕೆ ಪ್ರಚಾರವಾಗದೆ ಹಣದ ಕೊಡಕು ಮಾಮೂಲಾಗುವುದಿಲ್ಲ! ಇನ್ನ

ಮನು ತಿಳಿಸಿರುವ ಭಾರವು ಪತ್ರಿಕೆಯ ಮೂಲಿಕರ ಮೇಲೆ ಬೀಳುತ್ತದೆ.

ನಮ್ಮ ನಾಡಿನ ಪತ್ರಿಕೆಗಳಿಗೆ ಇನ್ನೊಂದು ಕೆಟ್ಟ ತರದ ಕೊಡಕಿದೆ. ಪತ್ರಿಕೆಗಳನ್ನೆಲ್ಲ ಸಂಗ್ರಹಿಸಿ ನಾವು ಓದಲು ಕೊಡಗಿದರೆ ನಮ್ಮ ಅಂದು ಸಂಗತಿಯು ಖಚಿತವಾಗಿದೆ. ಓದಕ್ಕ ಲೇಖಗಳು ಎಲ್ಲೆ ಇಲ್ಲವೂ ಬಹಳ ಕಡಿಮೆ. ವಿವಿಧ ವಿಷಯಗಳ ಮೇಲೆ ಲೇಖಗಳಿಲ್ಲ. ಪತ್ರಿಕೆಗಳಲ್ಲಿ ಕತೆಗಳಲ್ಲದೆ ಬೇರೆ ವಿಷಯಗಳು ಬಹಳ ಕಡಿಮೆ. ಪತ್ರಿಕೆಗಳಿಗೆ ಲೇಖಗಳನ್ನು ಬರೆಯುವುದು ಒಂದು ಸ್ರಿಯ ಕೆಲಸ (Hobby) ವೆಂದು ಬಗೆಯುವವರು ಕಡಿಮೆ. ಈ ವೃತ್ತಿಯಲ್ಲಿ ಸುರಿತ ಕಾಣ ಕಡಿಮೆ. ಪ್ರತಿಯೊಂದು ಪತ್ರಿಕೆಗೆ ಲೇಖನಗಳ ಕೊರತೆಯು ಹಳೆಯಾಗಿದೆ. ಈ ತೊಡಕನ್ನು ಹೋಗಲಾಡಿಸುವ ಭಾರವು ಓದು ಪ್ರೇಮಿಗಳು, ಅವರು ಪತ್ರಿಕೆಗಳನ್ನು ಉದ್ಧರಿಸುವುದು ತಮ್ಮ ಕೆಲಸ ಲೇಖಗಳನ್ನು ಕಳುಹಿಸಿ ಕೊಟ್ಟರೆ ಅದರಿಂದ ತಮ್ಮ ಜ್ಞಾನ ಹೆಚ್ಚುವುದಲ್ಲದೆ ಪತ್ರಿಕೆಗಳು ಹೆಚ್ಚಾಗಿ ಮಾರ್ಗ ಮಾಡಿಕೊಟ್ಟಂತಾಗುವುದು ಎಂಬುದನ್ನು ತಿಳಿಯಬೇಕು. ಅದರಿಂದ ಪರೋಪಕಾರವಾಗುವುದು ಮಾತ್ರವಲ್ಲದೆ ತಮಗೂ ಅದರಿಂದ ಶಿಕ್ಷಣ ದೊರೆಯುವುದು. ತಮ್ಮ ಮಕ್ಕಳಿಗೆ ಒಂದು ರೂಪವನ್ನು ತಾಳುವುದು ಎಂದು ಪತ್ರಿಕೆಗಳಿಗೆ ಲೇಖನಗಳನ್ನು ಕಳುಹಿಸಿ ಸಾಹಿತ್ಯ ವಿಚಾರಗಳನ್ನು ಬೆಳೆಸಿದರೆ ನಾಡ ಹಿತವಾಗುವುದು.

ಜಾನಪದ ಸಾಹಿತ್ಯ—ಈ ಪತ್ರಿಕೆಯಲ್ಲಿ, ನಮ್ಮ ಜಿಲ್ಲೆಯ ಪ್ರಚಾರದಿದ್ದ ಹಳೆ ಹಾಡೊಂದನ್ನು ಕೊಟ್ಟಿರುತ್ತೇವೆ. ಇದರಲ್ಲಾದರೆ ಹಳೆಯ ವಿಚಾರಗಳ ರಸವು ಎಷ್ಟು ಮಧುರವಿದೆ ಎಂದು ನಮಗೆ ತಿಳಿಯುವುದು. ವಿಶ್ವಮಂಡಲಿಯ "ವದ್ಮನಾಭ"ರ ಹಾಗೆ ಅನೇಕ ಹಾಡುಗಳನ್ನು ಸಂಗ್ರಹಿಸಿ ಈ ಪತ್ರಿಕೆಯಲ್ಲಿ ಪ್ರಕಟಿಸುವವರಿದ್ದಾರೆ. ಇದರಿಂದ ನಮ್ಮ ಜಿಲ್ಲೆಯ ಹಳೆಯ ಹಾಡು ಪ್ರಚಾರಕ್ಕೆ ಬರುವುವು ಎಂದು ನಾವು ನಂಬುತ್ತೇನೆ.

ನಾಡಸಾಹಿತ್ಯ.

ನಮ್ಮ ನಾಡಸಾಹಿತ್ಯ ಶೈಶವನಾದಿನ ವೃದಾತನ ಚರಿತ್ರೆಯಿಳ್ಳ, ಸ್ರಿಶ್ರ ರೀತಿಗಳನ್ನು ಬೋಧಿಸುವಂತೆಹದುದಾಗಿದೆ. ಈ ಹಳೆಯ ಸಾಹಿತ್ಯವನ್ನು ಈಗ ಹುಡುಕಿ ಓದಿದು, ಈಗಿನ ಕಾಲದ ಹೊಸ ಹಾಡುಗಳಲ್ಲಿ ತೊಳ್ಳಿ ಹೋಗುವ ಸಂಭವ ಇಲ್ಲದಿರುವ ತಮ್ಮ ಹಳೆಯ ಅಚ್ಚು-ಅಚ್ಚಂದಿಯುರ ಅಳಿವಿಯಿಂದ ಅದರ ಹಲವು ಭಾಗಗಳು ಹಾಳಾಗಿ ಹೋಗಿವೆ. ಮನೆಗಳಲ್ಲಿ ಚಿಕ್ಕ ಮಕ್ಕಳಿಗೆ ಹೇಳುತ್ತಿದ್ದ ಕತೆಗಳು, ಜೋಗುಳಗಳು, ಇತರ ಸಣ್ಣ ಪುಟ್ಟ ಹಳ್ಳಿಯ ಹಾಡುಗಳು, ಗಾದೆಗಳು ಇವುಗಳಲ್ಲಿ ಈಗ ಕಾಲಂಶ ಮಾತ್ರ ಅರ್ಧನುರ್ಧವಾಗಿ ಇವೆಯೆನ್ನಬಹುದು ಉಳಿದ ಮುಕ್ಕಾಲು ಭಾಗವು ಸಂಗ್ರಹಕಾರರಿಲ್ಲದೆಯೂ, ನಮ್ಮ ಅಜಾಗರೂ ಕತೆಯಿಂದಲೂ ನಿರ್ನಾಮವಾಗಲು ಆರಂಭವಾಗಿದೆ. ಇದರಿಂದ ನಮ್ಮ ಹಳ್ಳಿಯ ಸಾಹಿತ್ಯದ ಬೆನ್ನೆಲುಬು ಮುರಿದಂತಾಗಿದೆ. ಆದು ಕಾರಣ ನಾವೀಗ ಪ್ರಯಾಸಪಟ್ಟು, ನಮ್ಮ ಜಿಲ್ಲೆಯಲ್ಲಿ ಇದ್ದಷ್ಟನ್ನಾದರೂ ಸಂಪಾದಿಸಿ ಸಂಗ್ರಹಿಸದಿದ್ದರೆ ನಮ್ಮ ನಾಡಸಾಹಿತ್ಯವು ಅಳಿದು ಹೋಗುವುದರಲ್ಲಿ ಸಂದೇಹವಿಲ್ಲ.

ಹಳ್ಳಿಯ ಸಾಹಿತ್ಯವೆಂದೊಡನೆ ಹಲವರಿಗೆ ಬಲು ಬೇಸರ ಮತ್ತು ಉದಾಸೀನ. ವರಂತು ಅವುಗಳಲ್ಲಿ ಅಡಗಿರುವ ಅಗಾಧ ತತ್ವಗಳನ್ನೂ, ವಿಚಾರಗಳನ್ನೂ ವಿವೇಚಿಸಿದರೆ, ಅದರ ಸವಿಯು ನಮಗೆ ತಿಳಿಯುವುದು. ನಮ್ಮ ಹಳ್ಳಿಯ ಮಕ್ಕಳು ಕಣ್ಣುಮುಚ್ಚಿಕೆಯಾಟವನ್ನು ಆಡುವಲ್ಲಿ ಹೇಳುವ "ಕಣ್ಣಾ ಮುಚ್ಚೇ ಕಾಡೇ ಗೂಡೇ, ಉದ್ದಿನ ಮೂಡೇ ಉರುಳೇ ಹೋಯ್ತು" ಯೆಂಬ ಮಕ್ಕಳಾಟದ ಮಾತಿನಲ್ಲಿಯೂ ರಾಮಾಯಣದ ಕತೆಯು ಅಡಕವಾಗಿದೆಯೆಂಬುದನ್ನು ವಂದಿಕ ದೇವತಿಪ್ರಾಮಜಿ ಅಳಸಿಂಗಾಚಾರ್ಯರವರು "ರಾಷ್ಟ್ರ ಬಂಧು"ವಿನ ಯುಗಾದಿ ಕಾಣಿಕೆಯಲ್ಲಿ ಸ್ಪಷ್ಟವಾಗಿ ಕಾಣಿಸಿರುವರು. ಹೀಗೆಯೇ ಇನ್ನೂ ಅನೇಕ ತರದ ಮಕ್ಕಳ ಮಾತುಗಳಲ್ಲಿಯೂ, ಹಾಡುಗಳಲ್ಲಿಯೂ ಕತೆಗಳಲ್ಲಿಯೂ, ಗಾದೆಗಳಲ್ಲಿಯೂ ಪ್ರಕೃತಿಯು ಒಳ ಹೊರಗಣ ಸತ್ಯ ಸೊಗಸುಗಳ ಚ್ಯೇತಾತ್ಕಕ ಪ್ರಭೆಯು ಕಂಡು ಬರುತ್ತದೆ. ಇಂತಹ ದಿವ್ಯ ಸಾಹಿತ್ಯದ ಕಡೆ ನಾವು ಮಾತ್ರ ಉದಾಸೀನರಾದುದು ವಿಧಿಯ ಉಪಹಾಸವಲ್ಲದೆ, ಮತ್ತೇನು?

ಈಗ ಹಳ್ಳಿಯ ಹೆಂಗಸರು ತಮಗೆ ಬಿಡುವಿದ್ದಾಗ ಹೇಳುವ ಪಾಡ್ದನ, ಸಿರಿ ನಗ್ಗೆರೆಗಳಲ್ಲಿ ನಮ್ಮ ಪೂರ್ವಜರ ಆಚಾರ ವಿಚಾರಗಳು, ನಡೆನುಡಿಗಳು, ನ್ಯಾಯನೀತಿಗಳು, ಜೀವನ ಚರಿತ್ರೆಗಳು ಗರ್ಭೀಭೂತವಾಗಿವೆ. ಈ ವೈಕಿ 'ಕೋಟಿ-ಚೆನ್ನಯ'ರ ಕತೆಯು ವಿಶೇಷ ಪ್ರಚಾರದಲ್ಲಿದೆ. ಇನ್ನು ಕೆಲವು ಹಾಡುಗಳು, ಗಾದೆಗಳು, ಕತೆಗಳು ಈಗ ಬದುಕಿರುವ ನಮ್ಮ ಹಳೆಬರ ಸಂಗ್ರಹದಲ್ಲಿವೆ. ಇವುಗಳನ್ನೆಲ್ಲಾ ಕೇಳಿ ತಿಳುರಿಸಿ, ಇವುಗಳ ಪ್ರಕಟಣೆಗೆ ಯೋಗ್ಯವಾದ ವ್ಯವಸ್ಥೆ ಮಾಡುವುದು ನಮ್ಮ ಆದ್ಯ ಕರ್ತವ್ಯ. ಈ ವಿಧದಿಂದ ಹಳ್ಳಿಯ ಹಳೆಯ ನಾಡಸಾಹಿತ್ಯವನ್ನು ಉಜ್ಜೀವನಗೊಳಿಸಲಿಕ್ಕೆ ಉತ್ತರವಾದಿಗಳಾಗಿ ಕಾರ್ಯೋನ್ಮುಖರಾಗುವವರು ಎಷ್ಟು ಮಂದಿ ತಯಾರಿರಬಹುದು???

ಕಾ. ಮ. ಶೆ.

ಆದರೆ ಅವಳು ಮಕ್ಕಳಂತೆ ಹಟ ಮಾಡುತ್ತ 'ಅದಾಗದು ನಾನೇ ಬಾಚುವೆನು' ಎಂದಳು.

ನಾನು ಮಾತಿತ್ತದೆ ಬಾಚಣಿಗೆಯನ್ನು ಅವಳಿಗೆ ಕೊಟ್ಟೆನು. ಆ ಮೇಲೆ ಊಟದ ಹೊತ್ತಾಯಿತ್ತು. ಶಾಂತೆಯು ವಿದ್ಯುಚ್ಛಕ್ತಿಯ ಬೀಸಣಿಗೆಯನ್ನು ನಿಲ್ಲಿಸಿದಳು. ತಾಳೆಯ ಬೀಸಣಿಗೆಯಿಂದ ತಾನು ಗಾಳಿ ಹಾಕ ತೊಡಗಿದಳು.

ನಾನು - ಏನು?

ಅವಳು—ವಿದ್ಯುಚ್ಛಕ್ತಿಯ ಬೀಸಣಿಗೆಯು ಗಾಳಿ ಒಳ್ಳೆಯದಲ್ಲ.

ಮಧ್ಯಾಹ್ನ ನಾನು ನಿದ್ದೆಹೋಗುತ್ತಿರಲು ಅವಳು ಬಂದು ಕಾಲ ಸ್ಪೊತ್ತ ತೊಡಗಿದಳು. ಸಂಜೆಗೆ ನಾನು ಎದ್ದೆನು, ಫಲಾಹಾರದ ನಂತರ ಅಲಮಾಸಳ ಮನೆಗೆ ಹೋದೆನು.

ಇರುಳು ಕಳೆದು ಹೊತ್ತು ಮೂಡಲು ನಾನು ಮನೆಗೆ ಬಂದೆನು. ಹಾಸಿಗೆಯ ಬಳಿಯಲ್ಲಿ ಶಾಂತೆಯು ಕುಳಿತುಕೊಂಡಿದ್ದಳು.

ನಾನು—ಶಾಂತಾ, ನೀನು ನಿದ್ದೆ ಹೋಗಿಲ್ಲವೆ?

ಅವಳು—"ತಾವು ನಿದ್ರಿಸಿದರೆ ನಾನೂ ನಿದ್ರಿಸುವೆನು." ನಾನು ನಲ್ಲಂಗದ ಮೇಲೆ ಮಲಗಿದೆನು. ಶಾಂತೆಯು ನನ್ನ ಕಾಲ ಬಳಿಯಲ್ಲಿ ಕುಳಿತು ಕಾಲನ್ನು ಒತ್ತ ತೊಡಗಿದಳು.

ಒಂದು ದಿನ ನಾನು ಹರಿಯನ್ನು ಕೇಳಿದೆನು—'ಹರಿ, ನಿನ್ನ ಯಜಮಾನಿಯು ನಿದ್ರಿಸುವುದೆಂದಿಲ್ಲವೆ?' 'ಸ್ವಾಮಿ ತಾವು ಮನೆಗೆ ಬಂದ ಮೇಲೆ ತಮ್ಮ ಸೇವೆಯನ್ನು ಮಾಡಿ ವಿಶ್ರಾಂತಿಯನ್ನು ಪೆಗೆದು ಕೊಳ್ಳುತ್ತಾರೆ.'

ಶಾಂತೆಯು ನನ್ನ ಎಲ್ಲಾ ಕೆಲಸಗಳನ್ನು ಸ್ವತಃ ಮಾಡುತಿದ್ದಳು. ಅವಳ ಆರೋಗ್ಯವು ದಿನೇ ದಿನೇ ಕೆಡ ತೊಡಗಿತು; ದುರ್ಬಲಳಾಗುತ್ತಾ ಬಂದಳು.

ಒಂದು ದಿನ ನಾನು, 'ಶಾಂತಾ, ನೀನು ಏಕೆ ಕೃಶಳಾಗುತ್ತಾ ಬರುತ್ತಿಯಾ?' ಎಂದು ಕೇಳಿದೆನು.

ಅವಳು ನುಡಿದಳು. 'ಇಲ್ಲಪ್ಪಾ'.

ಅಂದಿನಿಂದ ನಾನು ನನ್ನ ಕಾರ್ಯಕ್ರಮವನ್ನು ಬದಲಾಯಿಸಿ ಹನ್ನೊಂದು ಗಂಟೆಯ ಮೊದಲೇ ಮನೆಗೆ ಬರ ತೊಡಗಿದೆನು. ಕ್ರಮೇಣ ಅಲಮಾಸಳು ನನ್ನ ದೃಷ್ಟಿಯಲ್ಲಿ ಬಹಳ ತುಚ್ಛಳಾಗಿ ಕಂಡುಬಂದಳು; ಅವಳ ನೆನವು ಕೂಡ ನಿಶ್ಚೇಷವಾಗಿ ಅಳಿದು ಹೋಯಿತು. ಶಾಂತೆಯ ಸೇವಾಭಾವವು ನಿಸ್ಸೆನ್ನು ಪಶುವಿನಿಂದ ಮನುಷ್ಯನನ್ನಾಗಿ ಮಾಡಿತು.

ಒಂದು ದಿನೆ ನಾನು ಪ್ರೇಮದಿಂದ ನುಡಿದೆನು.' 'ಶಾಂತಾ, ನನ ಗೋಸ್ಕರ ಇಷ್ಟು ಕಷ್ಟಗಳನ್ನು ಏತಕ್ಕೆ ತಂದುಕೊಳ್ಳುವೆಯಾ? ಸ್ತ್ರೀಯರು ದಾಸಿಯರಂತೆ ಕೆಲಸವನ್ನು ಮಾಡುವುದು ಉಚಿತವಲ್ಲ.'

ಶಾಂತೆಯು ಗಾಂಭೀರ್ಯದಿಂದ ಉತ್ತರವಿತ್ತಳು. 'ಪ್ರೇಮವು ಎಲ್ಲಿಲ್ಲವೊ ಅಲ್ಲಿ ದಾಸಿಯ ಭಾವವಿದೆ. ಆದರೆ ಎಲ್ಲಿ ಪ್ರೇಮವಿದೆಯೊ ಅಲ್ಲಿ ಯಾರೂ ಒಡೆಯರಾಗಲಾರರು ಯಾ ದಾಸಿಯಾಗಲಾರರು.

(ಹಿಂದೀ ಕಥೆಯ ಆಧಾರ)

ಅಸ್ಪೃಶ್ಯತಾ ನಿವಾರಣೆ.

ನೋಡಿ! ನೋಡಿ! ಗಾಂಧಿಯವರು ಪ್ರಾಣ ಕೊಡುವರೂ, ।
ಬೇಡುತಾರೆ ದಲಿತರನ್ನುದ್ಧಾರ ಗೈಯ್ಯಲೂ. ॥ ಪಲ್ಲ

ಹಿಂದು ಧರ್ಮ, ಬಂಧು ಅವರು ನಮ್ಮ ಅಂಗನೆ! ।
ಇಂದು ನಾವು ಅವರ ಕೊರೆವುದ್ಯಾವ ನ್ಯಾಯವೇ? ॥ ಅ. ಪಲ್ಲ

ಸೃಷ್ಟಿ ಕರ್ತನಿಂಗೆ ಅವರು ಮಕ್ಕಳಲ್ಲವೇ? ।
ಇಪ್ಪು ದಯವ ಅವರ ಕಡೆಗೆ ನಾವು ತೋರಿವೇ ॥೧॥ನೋಡಿ!ನೋಡಿ!

ಸೂರ್ಯ ಚಂದ್ರ ನೀರು ಗಾಳಿ ಸರಿಸಮಾನದಿ, ।
ಸರ್ವೋ ಪರಿಯೊಳಿತ್ತ ದೇವ ದಿವ್ಯ ಮಾನದೀ ॥೨॥ ನೋಡಿ!ನೋಡಿ!

ಪ್ರಾಣಿ ವರ್ಗದಲ್ಲಿ ಮನುಜ ಶ್ರೇಷ್ಠನಲ್ಲವೆ?। ।
ಹೀನವೆಂತು ನಮಗೆ, ಅವರು ಮನುಜರಲ್ಲವೇ?॥೩॥ನೋಡಿ!ನೋಡಿ!

ಕೊಳಕುತನವ ನೀಗಿ ಅವರ ಶುದ್ಧ ಗೈವುದೂ, ।
ಒಳಿತು ಸೇವೆಯೆಂದು ನಾವು ಇಂದು ತಿಳಿವುದೂ.॥೪॥ನೋಡಿ!ನೋಡಿ!

ಏಳು ಕೋಟಿ ಪತಿತರೆಲ್ಲ ನಮ್ಮ ಬಿಟ್ಟರೆ, ।
ಅಳಿದು ಕ್ಷೀಣವಾಗೊದಯ್ವ ಹಿಂದು ಧರ್ಮವೆ. ॥೫॥ನೋಡಿ!ನೋಡಿ!

ಹಿಂದು ಧರ್ಮ ತೊರೆದೆ ಅವರು ಕ್ರೈಸ್ತರಾದರೂ, ।
ಇಂದು ನಮ್ಮ ಅವರು ಬಿಟ್ಟು ಯವನರಾದರೂ.॥೬॥ನೋಡಿ!ನೋಡಿ!

ಮುಟ್ಟಲಾರೆ ತಟ್ಟಲಾರೆವೆಂದು ಹೇಳುತೆ, ॥
ಅಟ್ಟ ಬೇಡಿ ಕ್ರೈಸ್ತ ಯವನ ಫಾಲಿಗವರನೂ.॥೭॥ ನೋಡಿ! ನೋಡಿ!

ಸರ್ವಲೋಕದೊಡೆಯ ದೇವ ವಿಶ್ವವ್ಯಾಪಿಯೂ, ।
ಇರುವನವನೊ ದೇವಸ್ಥಾನದಲ್ಲಿ ಮಾತ್ರವೇ? ॥೮॥ ನೋಡಿ! ನೋಡಿ!

ದಲಿತ ಗೈಡಿ ನಿರತ ಅವನು ವ್ಯಾಪಿಸಿರುವನೂ, ।
ತಿಳಿದು ಅದನು ಕರುವಿರೀಕೆ ದೋಷವವನಿಗೆ ॥೯॥ ನೋಡಿ! ನೋಡಿ!

ಹಿಂದುಗಳಿಗೆ ಸಂಘಶಕ್ತಿ ಒಂದು ಬೇಕಿದೇ? ।
ಎಂದು ಹೃದಯಮಂದಿರವನು ನಾವು ತೆರೆಯುವಾ. ॥೧೦॥ನೋ!ನೋ!

ಬಂಧು ಪ್ರೇಮದಿಂದ ಅವರ ನ್ನಾವು ಕಾಣುವಾ. ।
ಇಂದು ನಮ್ಮ ದೇವಸ್ಥಾನವನ್ನು ತೆರೆಯುವಾ.॥೧೧॥ ನೋಡಿ!ನೋಡಿ!

ವಿ. ಸಚ್ಚಾರ್ಥಿ, ಸಿದ್ದಾಂತ ವಿಚಾರದ

ವನಿಗಳ ಮೇಲೆ ಕತ್ತಿಯಿತ್ತಿದವರಿರುವಂತೆ, ಇವರ
ಕತ್ತಿಯಿತ್ತದವರಿಲ್ಲ; ಭಾಷಾ ಸ್ವಾತಂತ್ರ್ಯವನ್ನು ಅವರು
ಸಿರುವರು. 'ನನ್ನದು ತಪ್ಪಿಲ್ಲವೇ'—ಎಂದರೆ 'ನಿಮ್ಮಪ್ಪ
ರಲಿಲ್ಲವೇ'—ಎಂದು ನಿನ್ನ ಬಾಯಿಯನ್ನು ಮುಚ್ಚಿಸು
ದ ಕವಿತೆಗಳಲ್ಲಿ ವಿಚಾರಗಳ ಅಳವು ಬಹಳವಾಗಿದೆ
ತ್ತಿದೆ', 'ಮುವತ್ತಮೂರು ಕೋಟಿ', ಮೊದಲಾದ ಅವರ
ಅವರ ದೃಷ್ಟಿಯ ವಿಶಾಲತೆಯನ್ನೂ, ಛಾಪಾ ಬಲವನ್ನೂ
ತಿಯನ್ನೂ ತೋರಿಸಬಲ್ಲುವು. ಒಟ್ಟಾಗಿ ಕಾಣಾನವಲ್ಲಿ
ೀರವರು. ಚಿತ್ರಕಲೆಯಲ್ಲಿ ಕ್ಯೂಬಿಸ್ಟ್—ಕಲೆಯಂತೆ
ಗಳು ನನ್ನ ಕಣ್ಣಿಗೆ ಕಾಣುವುವು. ಅವೆಲ್ಲ ವಿಠಿವಿಡ್ಡು
ಧವಾಗಿ ನಿಮ್ಮ ಕಣ್ಣಿದುರಿಗೆ ನಿಂತು, ನಿಮ್ಮನ್ನು ದಿಗಿಲು
ನೀವು ನಿಮ್ಮ ಗಮನವನ್ನು ಕೊಡದಿದ್ದರೂ, ನಿಮ್ಮ
ತ್ತಿಳಿತವೆ. ಅವರ 'ಕುಣಿಯೋಣ ಬಾರಾ'—ಹಾಡು,
ಕ್ಕುಂದ ಕೂಡಿದರೂ, ಲಲಿತ ಭಾವನೆಯಿಂದ ಲಂಬಿ
ಟ್ಟೆ ಬೇಂದ್ರೆಯವರು ಕುಣಿದಾರು—ಎಂದು ನಮಗೆ
. ಹಾಗೆ ನಿಜವಾಗಿಯೂ ಕುಣಿದರೆ—ಗಗನಮಂಡ
ಹೊರಿದ್ದಿಸಿ ಬಿಡುವ ಕಾಯ ಅವರದು! ಅವರ 'ಕುಣಿ
ನಗೆ ಶಿವನ ತಾಂಡವವು ಕಾಣುತ್ತದೆ. ಆದರೆ—
ಗೆಯು ಲಲಿತ ಕುಣಿತವಿದೆ. ರಾಸ್ಯ—ನರ್ತನವೆನ್ನುವ
ತ್ಕೃ ಒಪ್ಪುವ ಭಾಷೆಯು ಬೇಂದ್ರೆಯವರಿಗಿಲ್ಲ. ಅವರ
ತ್ಪೆಯು ವೃದು ವಿಚಾರಗಳಿಗೆ ಉಪಯುಕ್ತ ಶರೀರ
ಲ್ಲ. ಅವೇಶ, ಆಕ್ರೋಶ, ಆರ್ಭಟೆ, ವಿಕಟಾನಂದ—
ಸಾಮ್ರಾಜ್ಯ. ಅವರು ಭಕ್ತರಾಗಿ ಬಗ್ಗಿದಾಗ, ಹಿರಣ್ಯ
ಕ್ಯಪು ಅತ್ಮವು, ಪ್ರಹ್ಲಾದನ ಕೋಮಲ ಶರೀರವನ್ನು
ಡಿದರೆ—ಎಂತು ಕಾಣಿಸಬಹುದೋ ಹಾಗೆ ಕಾಣಿಸು

ಮವರ ನಾಟಕಗಳೂ ಕೆಲವಿವೆ. ಅವರ 'ನಯೆ
ದ್ಧಾರ'—ಗಳು ಅವರ ಈಚೆಗಿನ ನಾಟಕಗಳು. ಮೊದ
ಗಿದೆ. ಎರಡನೆಯದರಲ್ಲಿ ಅದರ ಉದ್ಧಾರವೇ ಆದಂತೆ
. ನಾಟಕವು ಆದಿಯಿಂದ ಅಂತ್ಯದ ತನಕ ಆರ್ಭಟೆ
ಗುವುದು. ಗುತ್ತುಗ ಮಿಂಚುಗಳಂತೆ ಅಬ್ಬರವೆಬ್ಬಿಸಿ,
ಕಿದಿಗೆ ಮಾಯವಾಗುವ ಮುಗಿಲಿನ ಆರ್ಭಟೆಯಂದು.
ಮಳಿಯಲ್ಲ. ಬೇಂದ್ರೆಯನರ ಮಾತುಗಳು ನುಣು
ದರೆ, ಶಕ್ತಿಯಿದೆ. ಉಪನ್ಯಾಸರ ರೀತಿಗಳು ಅವರ
ನೋ ಒಂದು ಶಕ್ತಿಯಿಂದ; ಅವರು, ಜನರನ್ನು ಮೋಹಿಸ
ದೇ ಅವರ ವ್ಯಾಮೋಹಕನವಿರಬೇಕು.

ಸಾಹಿತ್ಯ ಗೊಂದಲದಲ್ಲಿ ಅವರು ಬಲಿಯಾದವರು.
ಾಗಿಲೀ ಇವರ ಕವಿಗಳಲ್ಲಾಗಲೀ ಅವರ ಬರಹಗಳ
ಕಾಲುವರುಂಟು ಕಣುಚ್ಚಿ ಮೋಹಿಸುವನೆರುಂಟು.
ನೆರು ತಮ್ಮ ಸಮತೋಲವನ್ನು ಕಳಿಸಿಕೊಂಡಾರೆಂಬ
ಅವರಿಯನ್ನು ವಿಶ್ಲೇಷಿಸುವ, ಸೃಷ್ಟಿಕಾರರ ಹಾದಿ
ಕ್ಷಿಯನಿರೇ!?

ಹಟಮಾರಿ.

ಮಕ್ಕಳು ಗುಮ್ಮ ಎಂದರೆ ಹೆದರುತ್ತಾರಲ್ಲ. ಅದೇ ರೀತಿಯಲ್ಲಿ ಮುನ್ನಿಯ ತಾಯಿಗೆ ನಾನು ಬಹಳ ಹೆದರುತ್ತಿದ್ದೆನು.

ಮುನ್ನಿಯು ಬಹಳ ಸಮಯದ ತನಕ ಬದುಕಲ್ಲಿಲ್ಲ; ಮೂರೇ ತಿಂಗಳಲ್ಲಿ ಅವಳ ಬಾಳು ಮುಗಿಯಿತು. ಹೆಸರನ್ನು ಮಾತ್ರ ತನ್ನ ಹಿಂದೆ ಬಿಟ್ಟು ಹೋದಳು. ಅವಳ ತಾಯಿಗೆ ನಾವು ಮುನ್ನಿಯ ತಾಯಿ ಎಂದು ಕರೆಯ ತೊಡಗಿದೆವು. ಅನಳೇನೊ ನನ್ನ ಹೆಂಡತಿಯಾಗಿದ್ದಳು. ಆದರೆ ನನಗೆ ಅವಳೊಡನೆ ಮದುವೆ ಎಂದಾಯಿತು, ಏಕಾಯಿತು ಎಂಬುದು ತನಿಸಿನಂತೆ ನೆನಪಿಗೆ ಬಲಲ್ಲೊದು.

ನನಗೆ ಸ್ವಲ್ಪ ಪಯಸ್ಸಾಗಲು ತಾನು ಮುನ್ನಿಯ ತಾಯಿ ಗಂಡ ಮುನ್ನಿಯ ತಂದೆ ಎಂದು ತಿಳಿಯಿತು. ಇಷ್ಟರಲ್ಲೇ ಮುನ್ನಿಯು ಈ ಲೋಕ ಬಿಟ್ಟೇ ಹೋದಳು. ಆದರೆ ಮುನ್ನಿಯು ತನ್ನ ತಾಯನ್ನು ಸಂಗಡ ಕರೆದುಕೊಂಡು ಹೋಗಲಿಲ್ಲವಲ್ಲಾ ಎಂದು ನನಗೆ ಬಹಳ ದುಃಖವಾಯಿತು.

ಅವಳು ಸುಖಿಯಾಗಿರಬೇಕೆಂದು ನಾನು ಬಹಳ ಪ್ರಯತ್ನ ಪಟ್ಟೆನು. ಆದರೆ ಅವಳು ಸುಖಿಯಾಗಲೊಲ್ಲಳು. ಯಾವಾಗ ನೋಡಿದರೂ ಹಣೆಯು ಆಕುಂಚಿತವಾಗಿತ್ತು.

ಈ ಸಮಯದಲ್ಲಿ ಬ್ರಹ್ಮನು ನನಗೆ ಸೃಷ್ಟಿ ಕಾರ್ಯದ ಶಕ್ತಿಯನ್ನು ಕೊಡುತ್ತಿದ್ದರೆ, ನನ್ನ ಸೃಷ್ಟಿಯಲ್ಲಿ ಸಿಂಹ, ಹುಲಿ, ಕರಡಿ ಹಾವು, ಚೇಳು, ಪ್ಲೇಗ್, ಕೊಲೆರಾ ಸಿಡುಬು ಇವೆಲ್ಲವು ಇರುತ್ತಿದ್ದವು. ಆದರೆ ಮುನ್ನಿಯ ತಾಯಿಯು ಇರುತ್ತಿದ್ದಿಲ್ಲ. ಈಗ ಮುನ್ನಿಯ ತಾಯಿಯನ್ನು ತೆಗೆಳುವವರಿದ್ದರೆ ಭಕ್ತ ಜನರು ರಾಮಾಯಣ ಕಥೆಯನ್ನು ಕೇಳುವಂತೆ ಶ್ರದ್ಧೆಯಿಂದ ಕೇಳುತ್ತಿದ್ದೆನು. ಅವರ ಬಾಯಿಯಲ್ಲಿ ಬೆಲ್ಲ ತುರುಕಿಸಲೆಂದು ಮನಸ್ಸಾಗುತ್ತಿತ್ತು.

ಈ ದಿನಗಳಲ್ಲಿ ನೆರೆಹೊರೆಯ ಶಿವಸರನನ ಮೂವರು ಹೆಂಡಿರು ಪರಲೋಕಕ್ಕೆ ತೆರಳಿದ್ದರು. ನಾನು ಆಕಾಶದ ಕಡೆಗೆ ಕೈಗಳನ್ನೆತ್ತಿ 'ಹೇ ಭಗವಂತನೇ', ಜನರ ಮೂರು ಮೂರು ಹೆಂಡರು ಸತ್ತರು. ದುರ್ಭಾಗ್ಯನಾದ ನನ್ನ ಒಬ್ಬಳೂ ಸಾಯಲಿಲ್ಲವಲ್ಲಾ!' ಎಂದು ನಿಟ್ಟುಸಿರಿಟ್ಟೆನು.

ಈ ನನ್ನ ಮಾತುಗಳನ್ನು ಕೇಳಿ ನಿಮಗೆ ನಗೆ ಬರಬಹುದು. ಆದರೆ ನಾನು ಈ ದಿನಗಳಲ್ಲಿ ಗೋಳಾಡುತ್ತಿದ್ದೆನು. ಒಮ್ಮೊಮ್ಮೆ ಆತ್ಮಹತ್ಯೆ ಮಾಡಲೊ ಎಂದು ಅನ್ನಿಸುತ್ತಿತ್ತು; ಮನೆಯು ಘಾಸಿಯ ಕೊಪ್ಪೆಯಂತೆ ಭಾಸವಾಗುತ್ತಿತ್ತು.

ಇರಲಿ,ಮುನ್ನಿಯ ತಾಯನ್ನು ಪ್ರಸನ್ನಳಾಗಿ ಮಾಡಲು ನನ್ನ ಎಲ್ಲಾ ಪ್ರಯತ್ನಗಳು ನಿಷ್ಫಲವಾದವು. ಇನ್ನು ಸತ್ಯಾಗ್ರಹದಿಂದ ಏನಾದರೂ ಪ್ರಯೋಜನವಾದೀತೆಂದು ಅವಳೊಡನೆ ಮಾತಾಡುವುದನ್ನು ನಿಲ್ಲಿಸಿದೆನು. ಹಲವು ದಿನಗಳು ಕಳೆದು ಹೋದವು. ಅವಳು ಈ ಸತ್ಯಾಗ್ರಹಕ್ಕೆ ಏನೂ ಸೊಪ್ಪು ಹಾಕಿದಂತೆ ಕಾಣಲಿಲ್ಲ.

ಹೀಗೆ ನನಗೊಬ್ಬನಿಗೆ ಭೂತ್ರವಲ್ಲ. ಇಡೀ ಮನೆಗೆ ಅವಳು ಒಂದು ದೊಡ್ಡ ಆಪತ್ತಿನಂತಾದಳು. ಮನೆಯ ಕೆಲಸದವರಿಗಂತೂ ಅವಳು ಒಬ್ಬ ಪೂಂಜೀಪತಿ (capitalist) ಯಂತಿದ್ದಳು. ಅವರ ನೆತ್ತರನ್ನು ಸಹ ಹೀರಲೆಳಸುತ್ತಿದ್ದಳು.

'ಈ ಬಡಪಾಯಿಗಳು ಎಂದಿಗೂ ನಿನ್ನ ಹಗೆಗಳಲ್ಲ' ಎಂದು ಅಪ್ಪಿ ತಪ್ಪಿ ಒಂದು ದಿನ ಹೇಳಿದೆನು. ಸೈ. ಪ್ರಾಣಿಣ ಭಾದ್ರವದ ಮಾಸಗಳ ಮೋಡಗಳಂತೆ ಗರ್ಜಿಸಲು ಮೊದಲು ಮಾಡಿದಳು. 'ಹೌದು, ಹೌದು, ನಾನು ಕಪಟಿಯು, ನನಗೆ ಸೇವಕರಿಗಿರುವಷ್ಟು ಮರ್ಯಾದೆ ಸಹ ಇಲ್ಲ. ನೀವು ಕೂಡ ಇವರಿಗೇ ಸಮಾಚಾರ ತೆಗೆದುಕೊಳ್ಳುತ್ತೀರಿ. ನಾನು ಸತ್ತರೆ ಜೀನು ಕುಡಿಯಿರಿ.'

ನಾನು ಮನಸ್ಸಿನಲ್ಲೇ ಅಂದೆನು—ಇದು ಹದಿನಾರಾಣೆ ಸರಿ.

ನಾನು ಬೇಸತ್ತು ಹೋಗಿದ್ದೆನು.; ನುನೆಯಿಂದ ಹೊರಬಿದ್ದರೂ, ಮುನ್ನಿಯ ತಾಯಿಯ ನೆನಪು ಹೋಗುತ್ತಿದ್ದಿಲ್ಲ ಕುರುವುಳ್ಳ ರೋಗಿಗೆ ಸರ್ಜನನ ಶಸ್ತ್ರದ ನೆನಪಿನಂತೆ ಈ ನೆನಪಾಗಿತ್ತು.

ಕೊನೆಗೆ ಈ ಸಂಕಷ್ಟದಿಂದ ಪಾರಾಗುವುದಕ್ಕೆ ಸಾಧಾಯ ಕುಡಿಯಲು ಮೊದಲು ಮಾಡಿದೆನು. ಮೊತ್ತಮೊದಲು ಸ್ವಲ್ಪ ಸ್ವಲ್ಪ, ನಂತರ, ಜೆನ್ನಾಗಿ; ಮನೆಯಲ್ಲೇನು ಹಣದ ಕೊರತೆಯಿದ್ದಿಲ್ಲ. ಈ ಅನಸ್ಥೆಯಲ್ಲಿ ಕೆನ್ನೀರ ಸಮುದ್ರದ ಆನಂದವನ್ನು ಏಕೆ ಅನುಭವಿಸಬಾರದು. ವಿಸ್ತರ ಸಲಹೆಗನುಸಾರವಾರವಾಗಿ ಒಂದು ದಿನ ನಗರ ಸಂಚಾರವನ್ನು ಕೂಡ ಮಾಡಿದೆನು. ಅಲ್ಲಿ ಏನು ಹೇಳಲಿ? ಸೌಂದರ್ಯದ ವ್ಯಾಪಾರವು ನಡೆಯುತ್ತಿತ್ತು. ದುಡ್ಡಿಗೆ ಪ್ರೇಮವು ಸಿಕ್ಕುತ್ತಿತ್ತು; ಪಾಪವು ನುನುಷ್ಯರ ಕಣ್ಣುಗಳಲ್ಲಿ ಕುಣಿಯುತ್ತಿತ್ತು.

\+ + + + + +

ಅಲಮಾಸಳು ನಜ್ರದಂತೆ ಸುಂದರಳಿದ್ದಳು. ಅವಳ ಕಣ್ಣುಗಳಲ್ಲಿ ನುತ್ತತೆಯು! ತುಟಿಗಳಲ್ಲಿ ಅನ್ಯತೆ! ನಾನು ಅವಳನ್ನು ನೋಡಿದೆನು, ಅವಳ ನಾತುಗಳನ್ನು ಕೇಳಿದೆನು; ಅವಳ ರೂಪದ ಸಾಧುರ್ಯದ ಸವಿ ನೋಡಿದೆನು. ನಾನು ಬೇರೊಂದು ಲೋಕ ನನ್ನೆದಿರುವೆನೊ ಎಂಬಂತೆ ಭಾಸವಾಯಿತು. ಎಲ್ಲಾದರೂ ಸ್ವರ್ಗ ವಿರುವುದಾದರೆ, ಎಲ್ಲಾದರೂ ಆನಂದವಿರುವುದಾದರೆ, ಎಲ್ಲಾದರೂ ಈಶ್ವರನು ಮತ್ತು ಪುಣ್ಯವಿರುವುದಾದರೆ, ಸರಿ, \+ + ! ನಾನು ಅವಳನ್ನು ನೋಡಿದೆನು. ಅವಳು ನನ್ನನ್ನು. ಅವಳಿಗೆ ನನ್ನ ಹಣದ ಮೇಲೆ ಕಣ್ಣಿತ್ತು. ನಾನು ಅವಳ ಕಣ್ಣಿನಲ್ಲಿ ಅಡಗಿರುವ ನುತ್ತತೆಗೆ—ವಿಳಾಸಕ್ಕೆ—ಹಾ ಕೊರೆಯುತ್ತಿದ್ದೆನು. ಏನು ಹೇಳಲಿ? ಇಡೀ ಜಗತ್ತನ್ನೇ ಮರೆತೆನು. ಮತ್ತು ಅಲಮಾಸಳ ದಾಸನಾದೆನು.

ಸಂಜೆಯಾದೊಡನೆ ನಾನು ಅಪಳಿದ್ದೆಡೆಗೆ ಹೋಗುತ್ತಿದ್ದನು. ಮತ್ತು ಮುಂಜಾನೆ ಅಲ್ಲಿಂದ ಹೊರಟು ಮನೆಗೆ ಮರಳುತ್ತಿದ್ದೆನು.

ಇದೆಲ್ಲಾ ಪಾಪವೆಂದು ನನಗೆ ಗೊತ್ತಿತ್ತು. ಆದರೆ ಇದರಲ್ಲಿ ನನ್ನ ಅಪರಾಧವೇನು? ನೀವು ಈ ಸ್ಥಿತಿಯಲ್ಲಿ ನನ್ನು ಮಾಡುತ್ತಿದ್ದರಿ ಇಲ್ಲವೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರಿ. ಇಲ್ಲವೆ ನಾನು ಡೊಂಗಿ ದಂತೆ ಮಾಡುತ್ತಿದ್ದರಿ.

ಇನ್ನೇನು, ಅಲಮಾಸಳೂ ಅಧಳು, ನಾನೂ ಜದೆನು. ಅವಳು ಮದ್ಯವಾದರೆ ನಾನು ಸೇವನೆ ಮಾಡುವವನು; ಅನಳು ಮೂರ್ಖಿಯಾದರೆ ನಾನು ಪೂಜಾರಿ.

ಮನೆಯವರೆಲ್ಲರು ಬೆಚ್ಚುಬಿದ್ದರು; ಆದರೆ ಯಾರಿಗೂ ಮಾತನಾಡುವ ಸಾಹಸವಿರಲಿಲ್ಲ. ಮೆಲ್ಲ ಮೆಲ್ಲಗೆ ಪಿಸುಗುಟ್ಟ ತೊಡಗಿದರು.

ಒಂದು ದಿನ—ನೀವು ಇದನ್ನು ಕೇಳಿ ನಗೆಬಹುದು—ಹತಭಾಗ್ಯಳಾದ ಮುನ್ನಿಯ ತಾಯಿಯು ರೋಗದಿಂದ ನರಳುತ್ತಿದ್ದಳು. ರಾತ್ರೆ ನಾನು ಬಂದು ಸುಮ್ಮಗೆ ಮಲಗಿಕೊಂಡೆನು. ಹೊತ್ತಾರೆ ಏಳುವಾಗ ಅವಳ ಸ್ಥಿತಿ ಬಹಳ ಕೆಟ್ಟದೆಂದು ಗೊತ್ತಾಯಿತು, ಮುಂಡದ ಬಳಿಗೆ ಹೋಗಿ 'ಏನಾಗಿದೆಯಾ?' ಎಂದು ಕೇಳಿದೆನು.

ಅವಳು ತೀಕ್ಷ್ಣ ಸ್ವರದಿಂದ ಹೇಳಿದಳು—ಇಲ್ಲಿ ಬನ್ನಿರಿ. ನಾನು ಮುಂದೆ ಅಡಿಯಿಡುತ ನಗುತ ನುಡಿದೆನು—ಅಪ್ಪಣೆ ಏನು?

'ನೀವು ಬುದ್ಧಿಶೂನ್ಯರಾಗಿ ಹೋಗಿದ್ದೀರಿ. ಸಾಧಾಯ ಕುಡಿಯುತ್ತೀರಿ. ಮತ್ತು ವೇಶ್ಯೆಯಲ್ಲಿಗೆ ಹೋಗುತ್ತೀರೆಂದು ಕೇಳುತ್ತೇನೆ.

ನಾನು ನಗು ನಗುತ್ತಾ ಹೇಳಿದೆನು—ಯಸ್ ಸಾರ್!

ಅವಳ ಮೈಯು ಉರಿದಂತಾಯಿತು, ತಟ್ಟನೆ ಎದ್ದು ಕುಂಡೆಳು: "ಏನು, ನನ್ನನ್ನು ಆ ಗಲ್ಲಿ ಹೆಂಗಸಿನ ಹಾಗೆ ತಿಳಿದುಬಿರಾ? ಶರಹಾಸ್ಯ ನನ್ನೊಡನೆ ಸಾಗದು."

ನಾನು ನಗುತ್ತಾ ತೋಡೆಯ ಹೊರಗೆ ನಡೆದು ಬಿಟ್ಟೆನು.

ಹಲವು ದಿನಗಳ ಬಳಿಕ ಮನೆಯಲ್ಲಿ 'ಗೋಳಾಟವು ಕೇಳಿಸಿತು: ಆಗ ಮುನ್ನಿಯ ತಾಯಿಯು + + +

\+ + + + + +

ಮುನ್ನಿಯ ತಾಯಿಯು ಸತ್ತಳು; ಆದರೆ ನನಗೆ ದುಃಖವಾಗಲಿಲ್ಲ; ವಿಶೇಷ ಸಂತೋಷವೂ ಆಗಲಿಲ್ಲ. ಏಕೆಂದರೆ ಇತ್ತೀಚೆಗೆ ಅವಳಿಂದ ನನಗೆ ಯಾವ ಕಷ್ಟವೂ ಇರಲಿಲ್ಲ. ಅಲಮಾಸಳು ಮತ್ತು ಉಪದೇಶಕನಂತಿರುವ ಆ ಹೊಲೆಯ ಮೆದ್ಯದೆಂಗಡಿಯು ನನ್ನನ್ನು ನಿಶ್ಚಿಂತನಾಗಿ ಮಾಡುತ್ತಿದ್ದತು.

ಅಲಮಾಸಳು, ಅವಳ ತಂಗಿಯು ಮತ್ತು ನರ್ತಕಿಯು, ಇವರು ಒಟ್ಟಿಗೆ ಹಾಡಲು, ವೀನೆನು ಆಗಲಿಕ್ಕಿಲ್ಲ.

ಸರಿ, ಮುನ್ನಿಯ ತಾಯಿ ಸತ್ತಳು; ನಾನು ಹಗಲೂ ಇರುಳೂ ಅಲಮಾಸಳವನಾದೆನು. ಮನೆಗೇನೋ ಹೋಗುತ್ತಿದ್ದೆನು. ಆದರೆ,

ಗಾಂಧಿಜೀಯವರನ್ನು ಪುನಃ ಸೆರೆಗೆ ಅಟ್ಟುವರೇ?

ಕೊಂಗ್ರೆಸ್ಸು ಪುನಃ ಅರಣ್ಯವಾಸವನ್ನನುಭವಿಸುವುದೇ?

ಮಹಾತ್ಮಾಜೀಯವರ ೫೧ ದಿನಗಳ ಅನಿರೀಕ್ಷಿತ ಉಪವಾಸವೃತದ ದೆಸೆಯಿಂದಾಗಿ ರಾಯಬೆದಂಗ ಚಳವಳವು ನಿನ್ಯತ್ತಿ ಪಡಿಸಲ್ಪಟ್ಟಿತು. ನಿನ್ಯತ್ತಿಯ ನಿಯಮಿತ ದಿನವು ಸವಿಹತ್ತಿರ ಬರುತ್ತಿರಲು ಅನೇಕ ಕೊಂಗ್ರೆಸ್ಸು ಪಕ್ಷೀಯ ಧುರೀಣರು ಮಾತಾನುಸಾರವಾಗಿ ಪೂನೆಯಲ್ಲಿ ಒಂದು ಮಹಾಸಭೆಯನ್ನು ಜರಗಿಸಿ ತೊಂಗ್ರೆಸ್ಸಿನ ಮುಂದಿನ ಕಾರ್ಯಕ್ರಮವನ್ನಾವುದೆಂದು ಆಲೋಚಿಸಲಾಯಿತು. ಅವರಲ್ಲಿ ಆಲೋಚನೆಯಾದ ಮೇರೆಗೆ, ಗಾಂಧಿಜೀಯವರು ವೈಸರಾಯರೊತನೆ ಭೇಟಿ ಕೇಳಿ ! ಶಾಂತಿಸ್ಥಾಪನೆಗೊಂದು ದಾರಿಯನ್ನು ಹುಡುಕಬೇಕೆಂದು ನಿರ್ಧಾರವಾಯಿತು. ಅದೇ ನೇರೆಗೆ ಕೊಂಗ್ರೆಸ್ಸಿನವರ ಸಂಪೂರ್ಣ ಅನುಮತಿಯಂತೆ ಗಾಂಧಿಜೀಯವರು ವೈಸರಾಯರಿಗೊಂದು ತಂತಿಬಿಟ್ಟು "ಶಾಂತಿ ಸ್ಥಾಪನಾ ಸಂಬಂಧವಾಗಿ ಮಾತುಕತೆ ನಡೆಸೋಣವೇ?" ಎಂದು ಕೇಳಿದರು. ಆದರೆ ಮಹಾಸಭೆಯಲ್ಲಿ ನಡೆದ ಪಾಸಗಿ ಮಾತುಕತೆಗಳ ಮೇಲೆ ದೃಷ್ಟಿಯನ್ನಿಟ್ಟು ಆಗಿಹೋಗುವ ಎಲ್ಲಾ ವಿವರಗಳನ್ನು ಲಂಡನಿಗೆ ತಿಳುಹಿಸುತ್ತಿದ್ದ ವೈಸರಾಯ ಲೋರ್ಡ್ ವಿಲ್ಲಿಂಗ್ಡನ್ನರು "ನಿನ್ನೊಡನೆ ಶಾಂತಿಸ್ಥಾಪನಾರ್ಥವಾಗಿ ಮಾತುಕತೆಯನ್ನಡೆಸುವ ಅಗತ್ಯವಿರುವುದಿಲ್ಲ" ಎಂದು ಹೇಳಿ ಶಾಂತಿಯ ಮಂದಿರವನ್ನು ಯಾರೂ ಪ್ರವೇಶಿಸದಂತೆ ಬಾಗಿಲು ಹಾಕಿ ಕೊಂಡರು. ಹೀಗಿದ್ದರೂ, ಮಹಾತ್ಮರೂ ಕೊಂಗ್ರೆಸ್ಸಿನವರೂ "ನೀವು ನಮ್ಮ ಪಾಸಗಿ ಮಾತುಕತೆಗಳನ್ನು ನಂಬಿ, ನಾವು ಶಾಂತಿಧಂಗವನ್ನೇ ಬಾಡುವ ಹವ್ಯಾಸದಲ್ಲಿದ್ದೇವೆಂದು ನೆನೆದುದು ತಪ್ಪು ಆದುದರಿಂದ ನನಗೊಂದು ಭೇಟಿ ಕೊಟ್ಟು ಕೊಂಗ್ರೆಸ್ಸಿನ ನಿಜವಾದ ಅಂತರ್ಯವೇನೆಂದು ತಿಳಿಯಿರಿ" ಎಂದು ವೈಸರಾಯರಿಗೆ ಪುನಃ ತಂತಿಕೊಟ್ಟರು ಆದರೆ ವೈಸರಾಯರು ಅದನ್ನೂ ಲಕ್ಷ್ಯಕ್ಕೆ ತಾರದೆ, "ಎಷ್ಟು ಮಾತ್ರಕ್ಕೂ ನಿಮಗೆ ಭೇಟಿಯ ಸ್ನೇಯಲಾಗದು" ಎಂದು ಖಚಿತವಾಗಿ ಹೇಳಿಬಿಟ್ಟರು. ಅವರು, "ದೇಶಕ್ಕೆ ಘಾತುಕಪ್ರಾಯವಾದ ರಾಯಬೆದಂಗ ಚಳವಳವನ್ನು ತ್ಯಜಿಸದ ಸಂಸ್ಥೆಯ ಪ್ರತಿನಿಧಿಯೊಡನೆ ನಾನು ಮಾತನಾಡಲಿಚ್ಛಿಸುವುದಿಲ್ಲ" ನೆಂದೇ ಅಭಿಪ್ರಾಯ ಪಟ್ಟರು. ಸರಕಾರದ ನಿಸಿದ್ಧಾಪ್ತಗಳ ಪರಿಣಾಮ-ದಿಂದಾಗಿ ಕೊಂಗ್ರೆಸ್ಸಿನ ಎಲ್ಲಾ ಚಟುವಟಿಕೆಗಳು ನಿಂತು ಹೋದುವೆಂದು ಸರಕಾರದವರೂ ಇನ್ನಿತರರೂ ತಿಳಿದಿದ್ದರೂ, ಅಂತಹ ಚಳವಳದ ಜಿಜ್ಞೆಯು ದೇಶದಲ್ಲಲ್ಲ ದಿದ್ದರೂ, ವೈಸರಾಯರು "ಚಳವಳವನ್ನು ತೊರೆಯಿರಿ" ಎಂದು ಹೇಳುವುದಾದರೆ ಅವರು, ಚಳವಳವಿದೆಯೆಂದು ಒಪ್ಪಿಕೊಂಡಂತಾಗುತ್ತದೆ. ಅಲ್ಲದೆ, ಈಗ, ಒಂದೆರಡು ತಿಂಗಳುಗಳಿಂದ ಕೊಂಗ್ರೆಸ್ಸಿನ ಚಳವಳವು ನಿವೃತ್ತಿಗೊಳಿಸಲ್ಪಟ್ಟಿದೆ ಹೀಗಿರುವುದಾದರೂ ವೈಸರಾಯರು "ಚಳವಳವನ್ನು ತೊರೆಯಿರಿ" ಎಂದು ಹೇಳುವ ಮಾತಿನ ರೂಪವನ್ನು ಪರಿಚೀಲಿಸುವಾಗ, ಅವರು ದೇಶದ ಮಾನವನ್ನು ಮಾರಿ, ಕೊಂಗ್ರೆಸ್ಸು, ತಾನು ಸೋತು ಮಣ್ಣು ಗೂಡಿರುವೆನೆಂದು ಒಪ್ಪಲೇ ದೇಶ ಎಂದು ಅಭಿಪ್ರಾಯಗೊಳ್ಳುವಂತಿದೆ, ಆದರೆ ಗಾಂಧಿಜೀಯವರು ಸಾಮ ದಾನ, ದಂಡ ಭೇದೋಪಾಯಗಳನ್ನರಿತಿರುವ ಮಹಾತ್ಮರು. ಅವರು ದಂಡೋಪಾಯದೆದುರು ಸಾನೋಪಾಯವು ಎಂದೂ ಮಾನಾರ್ಹವಲ್ಲವೆಂದು ತಿಳಿದಿರುವರು. ಅಲ್ಲದೆ, ಎಲ್ಲಿ ಔದಾರ್ಯವನ್ನು ತೋರಬೇಕು, ಎಲ್ಲಿ ಕಾಠಿಣ್ಯ ಪ್ರದರ್ಶನ ಮಾಡಬೇಕು ಎಂದೂ ಅವರಿಗೆ ತಿಳಿದಿದೆ. ಆದುದರಿಂದಾಗಿ ಅವರು "ನಾನು ರಾಷ್ಟ್ರದ ಪ್ರತಿಷ್ಠೆಯನ್ನು ಬಲಿಗೊಟ್ಟು ಸರಕಾರಕ್ಕೆ ಶರಣು ಹೋಗೆನು" ಎಂದು ಹೇಳಿಯೇ ಬಿಟ್ಟರು. ಇವರ ಈ ರೀತಿಯ ಮಾತಿನಿಂದಾಗಿ ಅನೇಕ ಕೊಂಗ್ರೆಸ್ ಪಕ್ಷೀಯರು ಬೇದಗೊಂಡರು. ಅನೇಕರು ಇವರು ಸರಿಯೆಂದರು. ಪಂಡಿತ ಮಾಲವೀಯರಂತಹ ಉದ್ದಾಮ ಪುರುಷರೂ ಕೂಡಾ ಗಾಂಧಿಜೀಯವರ ಪಕ್ಷವಾಗಿಯೇ ನಿಂತರು.

ಹೀಗಿರಾಗಿ ಕೊಂಗ್ರೆಸ್‌ನವರಲ್ಲಿ ಭೇದಗಳುಂಟಾದುವು. ಕೆಲವರು ಗ್ಹಾಂಧಿಜೀಯವರನ್ನು ಕೊಂಗ್ರೆಸ್ಸಿನಿಂದ ಹೊರಗೆ ನಿಲ್ಲಿಸಿ ಸ್ವಕಾರ್ಯ ಪ್ರವೃತ್ತರಾಗಬೇಕೀಗ ಎಂದರು. ಕೆಲವರು ಅವರ ಹೆಜ್ಜೆಯನ್ನೇ ಅನುಸರಿಸೋಣ ಎಂದರು. ಅಂತೂ ಇಂತೂ ಈಗ ಶಾಸನಭಂಗ ಚಳವಳವು ಕೊಂಗ್ರೆಸ್ಸಿನವರಿಗೆ ಅರಣ್ಯವಾಸಕ್ಕೆ ನಡೆದಂತಾಗಿದೆ. ಸಾಮುದಾಯಿಕ ಚಳವಳವನ್ನು ನಿವೃತ್ತಿಗೊಳಿಸಿ ವ್ಯಕ್ತಿಪರ ಶಾಸನೋಲ್ಲಂಘನೆಯನ್ನು ಉಪದೇಶಿಸಿದ ಗಾಂಧಿಜೀಯವರನ್ನು ಸರಕಾರದವರು ಸೆರೆಗಟ್ಟುವರೇ? ಎಂಬ ಸಂದೇಹವು ತಲೆದೋರಿರುತ್ತದೆ. ಮಹಾತ್ಮರೂ ಅವರ ಅನುಯಾಯಿಗಳೂ ತಮಗೆ ಇನ್ನು ಹೆಚ್ಚಿನ ದಿನಗಳ ತನಕ ಸೆರೆಯ ಹೊರಗಿರಲು ಅವಕಾಶ ದೊರೆತೀತೆಂದು ಆಶೆಯಲ್ಲಿರುವುದಿಲ್ಲ. ಲಂಡನಿನಲ್ಲಿ ನಡೆಯುವ ಕಾರ್ಯ ಕಲಾಪಗಳನ್ನು ಪರಿಚೀಲಿಸುವಾಗ, ಹಿಂದೂದೇಶಕ್ಕೆ ದೇಡವಾಗಿರುವ ಪ್ರಾಂತಿಕ ಸರಕಾರ ಯೋಜನೆಯನ್ನೇ ಬಲಾತ್ಕಾರದಿಂದ ಕೊಡಲಿರುವ ಹಾಗೆಯೂ, ಅಂತಹ ಅಸಂತೃಪ್ತಿಕರ ರಾಜ್ಯದಾನ ಯೋಜನೆಯನ್ನು ಜನರು ಸ್ವೀಕರಿಸಲೊಪ್ಪದಂತೆ ಮಾಡ ಬೇಕೆಂದಿರುವ ಗಾಂಧೀ–ಕೊಂಗ್ರೆಸ್ಸಿನವರನ್ನು ಸೆರೆಯಲ್ಲಿ ತುಂಬಿಸಿ ತಮ್ಮ ಕಾರ್ಯ ಸಾಧನೆಯನ್ನು ! ಮಾಡಲು ಬ್ರಿಟಿಷ ಮತ್ತು ಇಂಡಿಯಾ ಸರಕಾರಗಳು ನಿರ್ಧರಿಸಿಕೊಂಡಿರಬಹುದೆಂಬುದೂ ಇದೆಯೆಂದು ಧಾರವಾಗುತ್ತಿದೆ. ಎಷ್ಟು ಬಲಿಷ್ಠವೇ ಆಗಲಿ, ಹಿಂದೂದೇಶದಲ್ಲಿ ಸಂಸ್ಥಾಪಿತವಾಗುವ ಯಾವ ಸಾಮುದಾಯಿಕ ಸಂಘಟನೆಗಳಾದರೂ ಬಲದಿಂದಲೇ ಮುರಿದಿಸ್ಕಾನ ವಿನಹ ಬ್ರಿಟಿಷ ಸರಕಾರಕ್ಕೆ ಗತಿಯೇ ಇಲ್ಲವೆಂದು ಈಗೀಗ ಕಂಡು ಬರುವ ಚಿಹ್ನೆಗಳಿಂದ ತೋರಿ ಬರುತ್ತದೆ "ಟೈಮ್ಸ್ ಆಫ್ ಇಂಡಿಯಾ" ಪತ್ರಿಕೆಯ ಒಬ್ಬ ವಾರ್ತಾವಾಹಕನು ಹೇಳುವಂತೆ "ಇದು ಧರ್ಮಯುಗವಲ್ಲ ಸಂತರ ಕಾಲವಲ್ಲ ಅಥವಾ ಶುದ್ಧಿಗಳ ಸ್ವಭಾವದಿಂದ ವರ್ತಿಸುವ ಕಾಲವಲ್ಲ ಈಗ ಬೇಕಾದುದು ಸ್ವಕಾರ್ಯದಲ್ಲಿ ಜೇಗರದೂರ ಜಯವನ್ನು ಹೊಂದುವ ಚತುರೋಪಾಯಗಳು ಎಂದು ಬ್ರಿಟಿಷ ಆಳಂಸರು ತಿಳಿದಂತಿದೆ ಆದರೆ ಒಂದು ದೃಷ್ಟಿಯಿಂದ ಈ ಭಾವನೆಯು ಅಸಂಗತವಲ್ಲವಾದರೂ, ಧಾರ್ಮಿಕ ಅಥವಾ ಶಾಸಮಾರ್ಗಿಕ ದೃಷ್ಟಿಯಿಂದ ಈ ಭಾವನೆಗೆ ಎಲ್ಲಿಯೂ ಯೋಗ್ಯಸ್ಥಾನವಿಲ್ಲ. ಬ್ರಿಟಿಷರು ಧ್ರುವ್ಯಾರ್ಜನೆಯೊಂದರಲ್ಲೇ ದೃಷ್ಟಿಯಿಟ್ಟವರು; ಆದರೆ ಹಿಂದೀಯರಿಗೆ ಧ್ರುವವು ಪ್ರಾಮುಖ್ಯವಲ್ಲ. ಅದನ್ನು ಮೀರಿದ ಧರ್ಮ! ಈಗ ನಡೆಯುತ್ತಿರುವುದು. ಈ ಧರ್ಮ ಮತ್ತು ಧ್ರುವಗಳೊಗಣ ಸಮರ.

ದೇಶದ ಮುಖ್ಯಾಂಗನಾದ ಕೊಂಗ್ರೆಸ್ಸಿನ ಪೀಡಿತೆಗಳೇ ಈ ರೀತಿಯ ಕೆಟ್ಟಿದ ಕಿವಿಗಳಿಗೆ ಬೀಳುತ್ತಿರುವಾಗ, ದೇಶದ ಧರ್ಮಸಂಧೂತರೇ ಆದ ಮಹಾತ್ಮರ ಶಾಂತಿಪರ ಚಳವಳಗಳೇ ಈ ತೆರನಾದ ಕಾಠಾವಾಸವನ್ನನುಭವಿಸುವಾಗ, ಮುಂದಕ್ಕೆ ಬ್ರಿಟಿಷರು ಹಿಂದೂಸ್ಥಾನದಿಂದೆ ಕಾಲ್ತೆಗೆವ ಸಂಧವವೇ ಇರಲಾರದೆಂದೂ ಹೇಳಬಹುದೆನ್ನಿಸುತ್ತದೆ. ಎಷ್ಟರ ತನಕ ಸರಕಾರ ಕ್ಕಂತ ಮಿಗಿಲೆನ್ನಿಸುವ ಬಗ್ಗಟ್ಟು ಸತ್ಯವು ಹಿಂದೀಯರಲ್ಲಿ ತೋರಿ ಬರುವುದಿಲ್ಲವೋ ಅಷ್ಟರ ತನಕ ಯಾವ ಚಳವಳವೂ ಪ್ರಯೋಜನಕಾರಿಯಾಗುವಂತಿಲ್ಲವೆಂದು ಹೇಳಿಬಿಡಬಹುದು

ಜೈಂಟ್ ಸಿಲೆಕ್ಟ್ ಕಮಿಟಿಯು ಲಂಡನಿನಲ್ಲಿ ನಡೆದು ಮುಗಿಯುತ್ತಿದೆ. ಸರ್ ಸಾಮುವೇಲ್ ಹೋರರು ಕೊನೆಯ ದಾಗಿ ಮಾತನಾಡಿರುವರು. ಅವರು ಇಂಡಿಯಾ ಸರಕಾರದ ಆಡಚಣೆಗಳನ್ನು ಹೊಗಳುತ್ತಾ "Simultaneously with the rigi enforcement of law and order, the Government of India consistently followed the path of cooperation with the friends of India"–ಅಂದರೆ "ಇಂಡಿಯಾ ಸರಕಾರವು ಕಾನೂನು ಕಾಯಿದೆಗಳನ್ನು ಸರಿಯಾಗಿ ಕಾರ್ಯಕ್ಕೆ ತಂದು ಹಿಂದೂಸ್ಥಾನದ ಮಿತ್ರರೊಡನೆ ಸಹಕರಿಸಿ ನಡೆಯಿತು" ಎಂದು ಅರ್ಥ ಗರ್ಭಿತ ಮಾತನಾಡಿರುವರು. ಇದರಿಂದಾಗಿ ಬ್ರಿಟಿಷ ಮುತ್ಸದ್ದಿಗಳು ಕೂಡಾ ಇಂಡಿಯಾ ಸರಕಾರದ ವರ್ತನೆಯನ್ನು ಅನುಮೋದಿಸುತ್ತಿರುವರೆಂದು ತಿಳಿಯಲಾಗುತ್ತದೆ.

ಗಾಂಧೀಜೀಯವರಿಗೆ ವೈಸರಾಯರು ಭೇಟಿ ಕೊಡಲು ತಿರಸ್ಕರಿಸಿದುದನ್ನು ಕೇಳಿ ಸರ್ ತೇಜಬಹದ್ದೂರ್ ಸಪ್ರೂ ಮತ್ತು ಶ್ರೀ. ಎಂ. ಆರ್. ಜಯಕರರೂ ತಮ್ಮ ಸಂತಾಪಸೂಚನೆಯನ್ನು ಲಂಡನಿನಲ್ಲಿ ಮಾಡಿರುವರು. "ಶಾಂತಿಯ ಒಗ್ಗೆ ಯತ್ನಮಾಡೋಣವೆಂದು ಗಾಂಧಿಜೀಯವರು ಹೇಳಿದ ಮಾತಿಗೆ ಅಲಕ್ಷ್ಯ ತನ್ನಿತ್ತುದು ವೈಸರಾಯರ ರಾಜನೀತಿಜ್ಞತೆಯ ಕುರುಹು ಅಲ್ಲ" ವೆಂದು ಅವರು ಮತ ಕೊಟ್ಟಿರುವರು. ಹಿಂದೂಸ್ಥಾನದ ಗತಿಯನ್ನು ನೋಡಿ ಅವರೂ ದುಃಖಿಕ್ಕೊಳಗಾಗಿರುವರು. ಜೈಂಟ್ ಸಿಲೆಕ್ಟ್ ಕಮಿಟಿಯಲ್ಲಿ ತಾವು ಅಪಯಶಸ್ಸಿಯಾದುದರಿಂದಲೂ ಅವರಿಗೆ ವ್ಯಸನವಿಲ್ಲ. ಈ ಪರಿಸ್ಥಿತಿಯಿಂದಾಗಿ ಸರಕಾರದ ಮುಖಂಡರು ಒಂದು ಕಡೆಯಿಂದ ರಾಮ್ಯ ಪಕ್ಷೀಯರ, ಇನ್ನೊಂದು ಕಡೆಯಿಂದ ಮಂದ ಪಕ್ಷೀಯರ ಬೆಂಬಲವನ್ನು ಕಳೆದುಕೊಳ್ಳುವಂತಿದೆ ಸರ್ ಸಾಮುವೇಲರು ಡ್ಯಾಶ್‌ಹಾರ್ಡರಿ ಪ್ರತಿಭಟನೆಯಿಂದಲೂ, ಲೋರ್ಡ್ ವಿಲ್ಲಿಂಗ್ಡನ್ನರು ಸಾಮುವೇಲರ ಉಪದೇಶದಿಂದಲೂ ಈ ಸಂಧಿಗ್ಧ ಸ್ಥಿತಿಯನ್ನು ಸೃಷ್ಟಿಸಿ ಕೊಂಡಂತಿದೆ, ಗಾಂಧಿಜೀಯವರಿಗೆ ಭೇಟಿ ಕೊಡದಿರುವುದನ್ನು ನೋಡಿ ಚರ್ಚಿಲ್ಲರು ಒಡನೆ ಎದ್ದು "ಬಹಳ ಚೆನ್ನಾಯಿತು. ಲೋರ್ಡ್ ವಿಲ್ಲಿಂಗ್ಡನ್ನರು ಕುಶಲ ರಾಜನೀತಿಜ್ಞರು ಎಂಬುದಕ್ಕೆ ಸಂದೇಹವೇ ಇಲ್ಲ"ವೆಂದು ಹೇಳಿದರು. ಇವರ ಪಕ್ಷೀಯರಾದ ಇನ್ನಿತರರೂ ಕೈ ಚಪ್ಪಾಳೆ ತಟ್ಟಿದರು. ಆದರೆ ಲಾನ್ಸ್‌ಬುರಿ ದೊರೆಯಂತಹ ಸಹಾನುಭೂತಿಯುಳ್ಳವರು ಈ ಡ್ಯಾಶ್‌ಹಾರ್ಡರನ್ನು ಎಚ್ಚರಿಸಿ "ಈ ರೀತಿಯ ನಿಷ್ಠುರ ನೀತಿಯು ಎಂದೂ ಯೋಗ್ಯವಾದುದಲ್ಲ ಹಿಂದೂಸ್ಥಾನವನ್ನು ನಾವು ಇದೇ ರೀತಿ ದಬ್ಬಿ ಸುತ್ತಾ ಹೋದರೆ ನಿರಾಶಾದಾಯಕವಾದ ಜನತೆಯು ಕ್ರಾಂತಿಯನ್ನು ಮಾಡೀತು ಹಿಂಸೆಯು ಕಲೆದೋರೀತು" ಎಂದರು"

ಹಿಂದೂಸ್ಥಾನಕ್ಕೆ ಬ್ರಿಟಿಷ ಸರಕಾರವು ಅನೇಕ ಸಲ ಸ್ವಾತಂತ್ರ್ಯವನ್ನೀಯುವೆನೆಂದು ವಾಗ್ದಾನ ಮಾಡಿದ ವಿಚಾರವಾಗಿ ಪಾರ್ಲಿಮೆಂಟಿನ ಸಭೆಯಲ್ಲಿ ಚರ್ಚೆ ನಡೆಯಿತು ಟೋರಿ ಗಳೆಲ್ಲ ಒಂದಾಗಿ ಆ ವಾಗ್ದಾನಗಳು ಆಗಿರುವುದೇ ಇಲ್ಲ ವೆಂದರು. ಒಬ್ಬರು "ಹಿಂದೂಸ್ಥಾನದ ವೈಸರಾಯರುಗಳು ಸ್ವಾತಂತ್ರ್ಯ ಕೊಡುತ್ತೇವೆ ಎಂದು ಧಾತೆಯನ್ನಿತ್ತಿರ ಬಹುದು. ಅಂತಹ ವಾಗ್ದಾನಗಳನ್ನು ಪಾರ್ಲಿಮೆಂಟಿನವರು ಮುರಿಯ ಬಹುದು" ಎಂದು ಬಿಟ್ಟರು ಇದನ್ನು ಕೇಳಿದ ಸಪ್ರೂರವರು ಬಿಸಿಯೇರಿದರು ಒಡನೆ "ಈಗ ನಿಮ್ಮಂತಹವರು ಹೀಗೆ ಒದರಿದರೂ ನಮ್ಮ ಕೇಳಿಕೆಗಳು ಜಕ್ರವರ್ತಿಯವರಿಂದ ತಿರಸ್ಕೃತವಾಗಲಿಲ್ಲ" ಎಂದರು. ಸರ್ ಜೇಮ್ಸ್ ತೋಮ್ಸನರೆಂಬವರು ಒಕ್ಸ್‌ಫರ್ಡ್‌ನಲ್ಲಿ "ಹಿಂದೂಸ್ಥಾನದವರನ್ನು ಇಂಗ್ಲಿಷರು ಉದ್ಧರಿಸಿದರು ಅವರನ್ನು ಸಂಸ್ಕೃತರಾಗಿ ಮಾಡಿದುದು ಬ್ರಿಟಿಷರು. ಆದುದರಿಂದ ಈಗ ಅವರು ಚಳವಳಿಸಿ ಫಲವಿಲ್ಲ ಹೊರಬರುವ ರಾಜ್ಯ ರಚನಾ ದಾನವನ್ನು ಅವರು ಎರಡು ಕೈಗಳಿಂದಲೂ ಸ್ವೀಕರಿಸಲೇ ಬೇಕು" ಎಂದು ಮೊದಲಾಗಿ ಹೇಳಿದರು

ಸಪ್ರೂರವರೂ ರಂಗಸ್ವಾಮೈಂಗಾರರೂ ಬರುವ ವಾರ ಹಿಂದೂಸ್ಥಾನಕ್ಕೆ ತೆರಳುವರು. ಅನಂತರ ಎಲ್ಲಾ ಪ್ರತಿನಿಧಿಗಳೂ ಹೊರಡುವರು.

ಈಗೀಗ ಬಂದ ವಾರ್ತೆಯಿಂದಾಗಿ ಶ್ರೀ. ರಂಗ ಸ್ವಾಮಿಯವರು ಶಾ. ೩೭ನೇ ದಿನ ಖಂಡಿತವಾಗಿಯೂ ಲಂಡನಿನಿಂದ ಹೊರಡುವರೆಂದು ತಿಳಿದು ಬಂದಿದೆ. ರೂಟರನ ಪ್ರತಿನಿಧಿಯೊಬ್ಬರು ವಿಚಾರಿಸಿದಾಗ, ಅಯ್ಯರ್‌ರು—ತಾನು ಮುಂದಕ್ಕೆ ಇಲ್ಲಿ ನಿಂತು ಏನೂ ಫಲವಿಲ್ಲವೆಂದು ಹೇಳಿದರು. ನವ ರಾಜ್ಯಾಂಗರಚನಾದಾನವನ್ನು ಹೊಂದುವುದರಲ್ಲಿ ನೆನಸಿದಷ್ಟು ಲಾಭಗಳು ಆಗಲಿಲ್ಲವೆಂದು ಅಯ್ಯರರ ಅಭಿಪ್ರಾಯ ಶ್ರೀ. ರಂಗಸ್ವಾಮ್ಯೆಯಂಗಾರರು ಗಾಂಧೀಜೀಯವರಿಗೆ ವೈಸರಾಯರು ಭೇಟಿ ಕೊಡದಿದ್ದುದಕ್ಕಾಗಿ ವೈಸರಾಯರನ್ನು ಟೀಕಿಸಿದರು. ಶ್ವೇತಪತ್ರವನ್ನು ಸುಧಾರಿಸುವ ಸುದ್ದಿಯೇ ಲಂಡನಿನಲ್ಲಿಲ್ಲವೆಂದು ಶ್ರೀಯುತರು ಹೇಳಿದರು. ಅವೆಲ್ಲಕ್ಕೂ ಸರ್ ಸಾಮುವೇಲ್ ಹೋರರ ಆಟವೇ ಕಾರಣವೆಂದರು. ಹೋರರು ಶ್ವೇತಪತ್ರಕ್ಕೂತ ಹೆಚ್ಚು ದಾನ ಕೊಡಲು ಸಮ್ಮತಿಸಲಿಲ್ಲವೆಂದೂ ಹೇಳಿದರು.

+/+ ++

ಉಕ್ಕಿ ಉಕ್ಕಿ ಬರುವ ಕೆಮ್ಮಿಗೆ 'ಕೂ-ಕೂಮಿನ್' ಎಂಬುದು ರಾಮಬಾಣ!

ಉಕ್ಕಿ ಉಕ್ಕಿ ಬರುವ ಕೆಮ್ಮುಗಳು, ಉಕ್ಕಿ ಉಕ್ಕಿ ಬರುವ ಕೆಮ್ಮಿನ ಪಡಿಚಾ; ಮತ್ತಿಗೆ ಉಂಟಾಗುವ ನಿನೋನಿಯಾ, ಕ್ಷಯ ಮೊದಲಾದ ರೋಗಗಳ ಆಘಾತದಿಂದಲೂ ನಿಮ್ಮ ಮಕ್ಕಳನ್ನು ಈ ಔಷಧ ಕೊಟ್ಟು ರಕ್ಷಿಸಿರಿ!

ಸ್ವಾವಿಕಾರು ಮಕ್ಕಳನ್ನು ಈ ಔಷಧಿಯು ಇಂತಹ ಕೆಟ್ಟ ಕೆಮ್ಮುವಿನಿಂದ ಸಾರುಮಾಡಿಯುವೆ. – ಮಹದಪಾಯಕರವಾದ ಈ ರೋಗನಿವಾರಣಾರ್ಥವಾಗಿ ಮದ್ರಾಸ್ ಮತ್ತು ಇನ್ನಿತರ ದೊಡ್ಡ ದೊಡ್ಡ ಪಟ್ಟಣಗಳ ಡಾಕ್ಟರರು ಈ ದಿವ್ಯೌಷಧವನ್ನೇ ಪ್ರಯೋಗಿಸುತ್ತಾರೆ.

ಉಕ್ಕಿ ಉಕ್ಕಿ ಬರುವ ಕೆಮ್ಮುಗಳಲ್ಲಿ ನೆಗಡಿ ಮೊದಲಾದ ಕಾರಣದಿಂದ ಉಂಟಾಗುವ ಉಕ್ಕಿ ಉಕ್ಕಿ ಬರುವ ಕೆಮ್ಮುಗಳಿಗೆ, 'ಕೂ-ಕೂಮಿನ್' ಇದು ದಿವ್ಯೌಷಧವಾಗಿದೆ. ಕ್ರಯ 1-8-0

ಮದ್ರಾಸಿನಲ್ಲಿ ದಿ ಒರಿಯಂಟಲ್ ರಿಸರ್ಚ್ ಲೆಬೊರೆಟರಿಯವರಿಂದ ಸಿದ್ಧವಾದುದು

ದಕ್ಷಿಣ ಕನ್ನಡಾ ಜಿಲ್ಲಾ ಸೋಲ್ ಏಜಂಟ್ಸ್–

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಷನ್ ಲಿಮಿಟೆಡ್, ರಥಬೀದಿ, ಮಂಗಳೂರು

ಕೊ-ಆಪರೇಟಿವ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಜಿಸ್ಟರುಗಳು, ರಶೀದಿ ಪುಸ್ತಕಗಳು ಮತ್ತು ಇತರ ಫಾರಂಗಳೂ ಮಾರಾಟಕ್ಕಿವೆ.

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಷನ್

ರಥಬೀದಿ, ಮಂಗಳೂರು

ಡಾಕ್ಟರ ವಾಮನ ಗೋಪಾಳರವರ

ಐಡಿಯಾಯಜ್ಞ ಸಾರ್ಸಪರಿಲ್ಲಾ

ಕೆಟ್ಟ ರಕ್ತಕ್ಕೆ ಪರಮೌಷಧ. ೫೦ ವರ್ಷದ ಅನುಭವ ಉಪಯೋಗಿಸಿದವರೇ ಹೇಳ್ತಾರೆ.

ಡಾಕ್ಟರ್ ಗೌತಮರಾವ್ ಕೇಶವರವರ ಫೊಸ್ಫರಸ್ ಗುಳಿಗೆಗಳು ಉಪಯೋಗ ಮಾಡಿ.

ಡಾ. ಗೌತಮರಾವ್ ಕೇಶವ ಅಂಡ್ ಸನ್ಸ್,

ಫಾಳುರಡ್ಕಾಸ್, ಮುಂಬಾಯಿ ೨ ಸ್ಟ್ರೀಟ್ಸ್– ಹಾ ಕಂಪನಿ,

[ಪತ್ರಕ್ಕೆ ಪೋಸ್ಟಾಫೀಸ್ ಅಡ್ರೆಸ್ ಮುಂಬಾಯಿಯಲ್ಲಿ] ಮಂಗಳೂರು.

ಕ್ಷಯಕ್ಷೀಣಾದಿಗಳಿಗೆ

ಚ್ಯವನಪ್ರಾಶಾನ ಲೇಹ.

ಪ್ರಸೂತಿ ರೋಗಾದಿಗೆ

ದಶಮೂಲಾರಿಷ್ಟ.

ಕಸ್ತೂರಿ ವಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ,

ದೊಂಗರಕೇರಿ ರಸ್ತೆ, ಮಂಗಳೂರು

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur. Shimoga, Chitaldroog, and Tumkur. (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd
64, 3rd Cross Road, Srirampur Extn
Malleswaram Post, BANGALORE,

OR

The Managing Agents,
The S. I. G. A. Co Ltd
55 Poonamallee High Road, Kilpauk, MADRAS

THE SOUTH INDIA CO-OPERATIVE INSURANCE SOCIETY, LIMITED, MADRAS.

LOCAL BOARD:—

THE SOUTH CANARA CENTRAL CO-OPERATIVE BANK, LTD., MANGALORE.

Applications are invited for 'Sub Agents' from capable and energetic persons and Co-operative Institutions to canvass business on behalf of the Local Board of the Society at Mangalore.

FOR TERMS APPLY TO—

The Secretary,
South Canara Central Co-operative Bank, Ltd., KODIALBAIL P O (Mangalore)
SOUTH CANARA

ನಿಮಗೆ ಭಕ್ತಿ, ಜ್ಞಾನಗಳು ಬೇಕೋ? ಹಾಗಾದರೆ ಶ್ರೀ ಭಾಗವತವನ್ನು ಓದಿರಿ.

ಕನ್ನಡ ಟೀಕಾತಾತ್ಪರ್ಯಾದಿ ಸಹಿತ

ಶ್ರೀ ಭಾಗವತ ಮಹಾಪುರಾಣ.

ಆಸ್ಥಾನ ಮಹಾವಿದ್ವಾನ್ ನೋಟುಗಾನಹಳ್ಳಿ ರಾಮಶೇಷಶಾಸ್ತ್ರಿಗಳಿಂದ ಪ್ರಕಟಿಸಲ್ಪಟ್ಟುದು.

ಮತತ್ರಯಾನುಸಾರವಾಗಿ ಅನೇಕ ವಿಷಯಗಳೊಡನೆ ಕನ್ನಡಿಸಲ್ಪಟ್ಟ ಈ ಗ್ರಂಥವು ಮೊದಲಿನಿಂದ ಹತ್ತು ಸ್ಕಂಧಗಳು 7 ಸಂಪುಟಗಳಲ್ಲಿ ಪ್ರಚಾರವಾಗಿರುವುದು ಸವಿಯವೆ. ಈಗ 11—12ನೇಯ ಸ್ಕಂಧಗಳೆಳ್ಳ ಎಂಟನೆಯ ಸಂಪುಟವು ಪೀಠಿಕಾ ವಿಮರ್ಶೆಗಳೊಡನೆ ಬಿಕರಿಗೆ ಸಿದ್ಧವಾಗಿದೆ. ಹಿಂದಣ ಗ್ರಾಹಕ ಮಹಾಶಯರು ದೇಶಬಾಂಧವರೂ ಸಹಾ ವ್ಯೋತ್ಪಾಹಿಸಬೇಕೆಂದು ಪ್ರಾರ್ಥನೆ.

1ನೇಯ ಸಂಪುಟ	(1–2ನೇ ಸ್ಕಂಧಗಳು)	3- 4-0	7ನೆಯ ಸಂಪುಟ (ದಶಮ ಉತ್ತರಭಾಗ) 4-8-0
2 ,,	,, (3ನೆಯ ಸ್ಕಂಧ)	3-12-0	8 ,, ,, (11, 12ನೆಯ ಸ್ಕಂಧಗಳು ಪೀಠಿಕೆ ಸಹಿತ) 4-8-0
3 ,,	,, (4 ,,)	3- 8-0	ಶ್ರೀ ಭಾಗವತ ಪುರಾಣ ವಿಮರ್ಶೆ ಮಾತ್ರ 0-8-0
4 ,,	,, (5–6ನೇಯ ಸ್ಕಂಧಗಳು)	4- 0-0	ಕರ್ನಾಟಕ ಮುದ್ರಾಂಕಾಕ್ಷರ ಸಾಹಿತ್ಯ 1-4-0
5 ,,	,, (7, 8, 9 ಸ್ಕಂಧಗಳು)	5- 8-0	(ಇದೇ ಗ್ರಂಥಕರ್ತರಿಂದ ರಚಿಸಲ್ಪಟ್ಟುದು)
6 ,,	,, (ದಶಮ ಪೂರ್ವಭಾಗ)	5-0 0	

ಈ ಬೆಲೆಗಳಿಗೆ ಟಪ್ಪಾಲು ಹಾನಲು ಸೇರಿಲ್ಲ.

ಹೆಚ್ಚು ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ಆರ್. ಶ್ರೀಕಂಠ ಶಾಸ್ತ್ರಿ, ಧಾರಣೀ ಭವನಂ, ಚಾಮರಾಜಪೇಟೆ, ಬೆಂಗಳೂರು ಸಿಟಿ.

ಮಾರಾಟಕ್ಕಿವೆ! ಮಾರಾಟಕ್ಕಿವೆ!!

ಕಾಫಿ ಕ್ಲೇಟಿರಿಗೂ, ತೋಟದವರಿಗೂ

ಬೇಕಾಗುವಂತಹ

ಚಕ್ರೋಲ್‌ಗಳು

ಮೂರು ಸ್ಥಾವನಲ್ಲಿ ತಯಾರಿಸಲ್ಪಟ್ಟು

ಮಾರಾಟಕ್ಕೆ ಸಿದ್ಧವಿವೆ.

ರೆಟಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ

ಕೃಪೆಯಿಟ್ಟು, ಇವರ ಮಾರಾಟಗಳ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,

ಶಾರದಾ ಫಾರ್ಮಸಿ,

ರಥಬೀದಿ, ಮಂಗಳೂರು.

ವಾರ್ಷಿಕ ಚಂದಾ ರೂಪಾಯಿ ೩–೦–೦ ಟಪ್ಪಲು ಜಾಸ್ತಿ ಸೇರಿ ರೂಪಾಯಿ ೩–೧೩–೦

ಸ್ವದೇಶಾಭಿಮಾನಿ.

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರಕ್ಷೈರ್ಮಹಾಹ್ಯೆಸ್ತುತುರ್ಮನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿಕಾರ್ಥಾದ್ವಿರಮಂತಿ ಧೀರಾ ॥ ೧ ॥

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ? ಮತ್ತೆ ವಿಷ್ಣುವ ಸುಡುತ ಬರುತಿರುವ ॥

ಗರಲಕವರಂಜಿದರೆ? ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ । ತೆರಳ ಬಲ್ಲರೆ? ತೊರೆದು ಧೀರರು ನಿಶ್ಚಿತಾರ್ಥವನು । ೧ ॥

ಪುಸ್ತಕ ೨೭. ಮಂಗಳೂರು ತಾ ೪ನೇ ಶುಕ್ರವಾರ ಆಗೋಸ್ತು ೧೯೩೩ (4–8–'33) ಸಂಚಿಕೆ ೩೧

THE CANARA BANKING CORPORATION, UDIPI, LTD.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI. **Branches:—Coondapoor, Mangalore, Shimoga & Madras**

ಹೆಡ್ ಆಫೀಸು:—ಉಡುಪಿ. ಶಾಖೆ–ಕುಂದಾಪುರ, ಮಂಗಳೂರು, ಶಿವಮೊಗ್ಗ ಮತ್ತು ಮದ್ರಾಸು

Authorised Capital Rs. 3,50,000. Paid up Capital Rs. 2,25,000-

ನಿಯಮಿತ ಮೂಲಧನ ರೂ 3,50,000- ಚಂದಾ ಹಾಕಲಿಕ್ಕೆ ಅರ್ಪಿಸಿದ ವ ಎತ್ತಿದ ಮೂಲಧನ ರೂ 2,25,000

STATEMENT OF ASSETS & LIABILITIES AS ON 30TH JUNE, 1933.

CAPITAL AND LIABILITIES.			PROPERTY AND ASSETS		
1 Paid up Capital	Rs.	2,25,000-0 0	1 Bank Premises, Buildings, Furniture etc	Rs.	69 859 9- 9
2 Reserve and other funds	,,	2,35,000 0-0	2 Investment G P Notes	,,	2 63,088 4 0
3 Deposits	,,	21,64 775-14 8	3 Authorised Investments	,,	24 36,054 5 3
4 Due to Bankers	,,	1,54631-13-5	4 Bills for collection		9,913 3 6
5 Sundries	,,	74,106 0 8	5 Sundries	,,	34 328 9 11
6 Bills for collection per contra		9,913-3 6	6 Cash on hand & with bankers	,,	50 183 1 10
	Total	28,63,427 2 3		Total	28 63 427 2-3

UDIPI 5–7–'33.

N. ANANDA RAO,
Secretary & Manager

(Regd.)

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಪ್ಪಕೊಡುವ ವಾತ, ಥಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಘಾಯ, ಜಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ತ್ವರೆಯಲ್ಲೇ ಗುಣ ಪಡಿಸುತ್ತದೆ ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು—ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ, ಮೂರು ಸಲಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ 3–8–0 ಅಂಚೆಖರ್ಚು ಪ್ರತ್ಯೇಕ

ಅಮೃತಾಂಜನ ಡಿಪೋ.

ಮದರಾಸು ಮತ್ತು ಬೊಂಬ್ಬಾಯಿ.

ಸಣ್ಣ ಹುಡುಗರ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ

ಇದನ್ನು
ಕೊಡುವುದರಿಂದ ಮಕ್ಕಳು
ಸಶಕ್ತರೂ, ಪುಷ್ಟರೂ ಮತ್ತು
ಸಂತೋಷ ಚಿತ್ತರೂ ಆಗುವರು.

ಕೇ. ಟಿ. ಡೋಂಗರೇ ಕಂಪೆನಿ,
ನಿರ್ಗಾಂವ, ದಾದರ್ ಬಾಂಬೆ ಡಿಸ್ಟ್ರಿಕ್ಟ್

ಏಜಂಟರು— ಬಾಂಬೆ ಕಂಪೆನಿ, ಹುಬ್ಬಳ್ಳಿ.

ಹಿರಿಯರಿಕ್ಕೂ, ಜಾಹೀರಾತು ಕೊಡಲಿಕ್ಕೂ
ಮಕ್ಕಳಿಗೂ, ದೊಡ್ಡವರಿಗೂ, ಹೆಳೆಯವರಿಗೂ, ಪೇಟೆಯವರಿಗೂ, ವಿದ್ಯೆ
ಇದ್ದವರಿಗೂ ಇಲ್ಲದವರಿಗೂ
ಬೇಕಾದ,

ನಮ್ಮ, ನಿಮ್ಮ, ಎಲ್ಲರ, ಮತ್ತು ಕನ್ನಡಿಗರ
ಪತ್ರಿಕೆ

'ಸ್ವದೇಶಾಭಿಮಾನಿ'
27 ವರ್ಷಗಳ ನವತರುಣ!

ಗಾಳಿ ಮುರಿಯುತ್ತೆ—ಮೀನು ಕಚ್ಚಿತು!!!

ಬೆಸ್ತರಲ್ಲಿ ಫಸ್ಟ್ ಕ್ಲಾಸ್ ಬೆಸ್ತ ಗಾಂಧೀ ಮುದುಕ! ಹಿಂದೂ ಸ್ವಾತಂತ್ರ್ಯದ ರಾಷ್ಟ್ರೀಯ ಬೆಸ್ತರಿಗೆ ಇವನೇ ಗುರಿಕಾರ!

× × × ×

"ಲಂಡನ್ ಕೆರೆಯಲ್ಲಿ ಭಾರೀ ಮೀನುಗಳಿವೆಯೆಂದು ನಾನು ಹೇಳಿದ್ದೇ ಹೋಗಿ ಬಹಾರ್ ? ಪತ್ರಿಕೆಯಲ್ಲಿ ಪ್ರಕಟವಾಗಿದ್ದಿತು

× × + × ×

ಇದನ್ನು ಹಿಂದೂಸ್ಥಾನದ ರಾಜಕೀಯ ಬೆಸ್ತರೆಲ್ಲರೂ ಓದಿದರು ಒಮ್ಮೆ "ಛೆ! ಛೆ!" ಎಂದು ಹಾರಿ ಕುಣಿದರು. ಆದರೆ ನಮ್ಮ ಗಾಂಧೀ ಮುದುಕ ಮಾತ್ರ "ಏ ಮಕ್ಕಳೇ! ಯಾಕೆ ಹಾರುತ್ತೀರಿ? ಲಂಡನ್ ಕೆರೆಯಲ್ಲಿ ಮೀನುಗಳಿಲ್ಲ, ಇದ್ದರೂ ಒಂದು ಮೀನು ಇರಬಹುದು, ಅದು ನಮಗೆ "ಧೂರೆಯಾಬಂಡಿಲ್ಲ" ಎಂದನು.

+ × × × ×

ಇದನ್ನು ಸಪ್ತಜಯಕರ ರಂಗ ಸ್ವಾಮ್ಯೆಂಗಾರ್ ಎಂಬ ಪ್ರಮುಖ ಪಿರುದ್ಧ ಪಕ್ಷದ ರಾಜಕೀಯ ಬೆಸ್ತರು ಕೇಳಿ ಕೋಪಗೊಂಡರು— ಗಾಂಧಿಗೆ ಬೈದರು—"ಗಾಂಧೀ ಗೂಬೆಯು ಹೇಳುವುದೆಲ್ಲ ಡೋಂಗಿ ಯೆಂದು ಹೇಳಿ ತಮ್ಮ ಮಾರಿ ಭಳೆಯನ್ನು ಹಿಡಿದುಕೊಂಡು ಲಂಡನ್ ಕೆರೆಗೆ ಹೋದರು.

× × × ×

ಅಲ್ಲಿ ಸಪ್ತಜಯಗಳು ತನ್ನ ಬಲೆಯನ್ನು ಬಲ್ಲನೆ ಬೀಸಿದರು. ಬಲೆಯು ಭಾರವಾಯಿತು ಮೀನುಗಳ ರಾಶಿಯು ದೊರೆಯುತೆಂದು ಭಾವಿಸಿ, ತನ್ನ ಮಕ್ಕಳು ಮರಿಗಳ ಪುಣ್ಯವೆಂದು ಹೇಳಿ ಧೃಢವೆಲ್ಲನೆ ಬಲೆಯನ್ನು ದೋಣಿಗೆ ಹಿಂದಕ್ಕೆಳೆದರು ನೋಡುತ್ತಾರೇನು? ಬಲೆಯಲ್ಲಿದ್ದುದು ಮೀನುಗಳಲ್ಲ! ಸತ್ತ ಒಂದು ದೊಡ್ಡ ಹಂದಿ! ಲಂಡನ್ ಊರವರು ತಿಂದು ತಿಂದು ಸಾಕಾಗಿ ಎಸೆದುದಾಗಿರಬಹುದು!

× + × ×

ಜಯಕರರೂ ರಂಗ ಸ್ವಾಮಿಯವರೂ ಇದೇ ರೀತಿ ತಮ್ಮ ತಮ್ಮ ಮಾರಿ ಬಲೆಗಳನ್ನು ಬೀಸಿದರು—ಮೂರು ಮೂರು ಸಲ ಬೀಸಿದರು— ಸಿಕ್ಕಿದುದೇನು? ಕಲ್ಲು—ಮಣ್ಣು ಕೊಳೆತ ಹಂದಿಗಳು!

× + × +

ಬಲೆಯಿಂದ ಕೆಲಸ ನಡೆಯುವುದಿಲ್ಲವೆಂದು ಹೇಳಿ ದೊಡ್ಡ ಗಾಳಕ್ಕೆ ನಮಸ್ಕಾರದ ಎರೆಯನ್ನು ಕಟ್ಟಿ ಗಾಳ ಹಾಕಿದರು. ಉಳಿದವರೂ ಹಾಗೆಯೇ ಮಾಡಿದರು!

× × × ×

ಸುಮಾರು ದಿನಗಳ ಮೇಲೆ ಒಂದು ಮೀನು ಬಂದು ಈ ಮೂರು ಗಾಳಗಳ ಮೇಲೂ ಎರಗಿ ನಮಸ್ಕಾರದ ರಾಜಕೀಯ ಎರೆಯನ್ನು ತಿಂದು ಗಾಳವನ್ನು ಕಡಿದು ಎಲ್ಲಿಯೋ ಹಿಡಿತು ಬ್ರಿಟಿಷ ಜಾತಿಯ ಅದೊಂದು ಮೀನಿನ ಆಟವೇ ಆದು! ಅದನ್ನು ಹಿಡಿಯಬೇಕಾದರೆ ೨೧ ದಿನಗಳ ಉಪವಾಸ ಮಾಡಿದ ಪುಣ್ಯಾತ್ಮನೇ ಆಗಬೇಕು!

× + × × × × ×

ಸಪ್ತಜಯಕರರು ನೋಡುತ್ತಾರೇನು? ಏರೆಯೂ ಇಲ್ಲ ಗಾಳವೂ ಇಲ್ಲ! ಇದನ್ನು ಕಂಡು ಈ ಮೂವರು ಬೆಸ್ತರಿಗೂ ಬಹಳ ಬೇಜಾರಾಯಿತು—ಅತ್ತರು, ಬಿದ್ದರು, ಎದ್ದರು! ಪಾಪ! ಮತ್ತೇನು ಮಾಡುವರು?

× × × ×

ಸಪ್ತಜಯಗಳಿಗೆ ದುಃಖಾವೇಶಗಳಿಂದ ಕೊಸ್ಕೊದ್ರೇಕವಾಯಿತು "ಇನ್ನು ಮುಂದಕ್ಕೆ ಈ ಲಂಡನ್ ಕೆರೆಗೆ ಬಂದು ನಾನು ಏಂದೂ ಬಲೆ ಬೀಸಲಿಕ್ಕಿಲ್ಲ—ಗಾಳ ಹಾಕಲಿಕ್ಕಿಲ್ಲ" ಎಂದು ತಟ್ಟನೆ ಹೇಳಿದರು ಇವರ ಕೊಡನೆ ಉಳಿದವರೂ "ಆಸ್ತು! ಆಸ್ತು!" ಎಂದರು

× × + × × + ×

ಈಗ ಈ ಮೂವರೂ ಲಂಡನ್ ಊರಿನಿಂದ ಹಿಂತೆರಳಿರುತ್ತಾರೆ! ಆಗ ಬೋಟಿನಲ್ಲಿ ಬೈರಳ್ ಹೊಡೆದು ಮೂವರೂ ತಾಳ ಬಡಿದು ಹೀಗೆ ರಾಗ ಹಾಕುತ್ತಿದ್ದಾರೆ

ಅಬ್ಬಿಹನು ನೋಟು!—ರಾಗ: ಬಡಿದ ತಾಳ.

ಗಾಳವ ಕುರಿಯುತು! ಮೀನದು ಓಡಿತು ಕೋಲು ಕೋಲಣ್ಣ
ತಾಳವು ಉರುತ್ತು! ಬಾಲವ ಜೋಯುತು ಕೋಲು ಕೋಲಣ್ಣ
ಗಾಂಧಿಯು ಹೇಳಿದ ಮಾತನ್ನು ಕೇಳದೆ ತಾಲು ಹಾಳಣ್ಣ
ನಂದಿಯ ದಿಟ್ಟು, ಹಂದಿಯ ಹಿಡಿವೆವು ಕೋಲು ಕೋಲಣ್ಣ
ಗಾಳವು ಮುರಿಯಿತು! ಮೀನದು ಓಡಿತು ಕೇಳು ಕೇಳಣ್ಣ
ತಾಳದ ಲೆಕ್ಕಕ ತಾಣುತ ಬಂದವ್ ಹಾಳು ಹಾಳಣ್ಣ
ಯಾರಿಗೆ ಬೇಕು ಗಾಳದ ಕೆಲಸ?—ಮುಂದಕೆ ಬೇಡಣ್ಣ
ಗಾಂಧಿಯಮಾತನು ನಂಬುಕರೆರುವ, ಪ್ರೀತಿಯ ಬತ್ತಣ್ಣ

× × × × ×

ಕೆಟ್ಟ ಮೇಲೆ ಬುದ್ಧಿ ಬಂತು ಈ ಬೆಸ್ತರಿಗೆ! ಕ್ರಯ ಕೊಟ್ಟು ಪಡೆದ ಗಾಳವೂ ಹೋಯಿತು! ಬೆಲೆಯುಳ್ಳ ನಮಸ್ಕಾರಗಳ ಎರೆಯೂ ಹೋಯಿತು! ಅದರೊಡನೆ ಆಯುಷ್ಯವೂ ಕಡಿಮೆಯಾಯಿತು!

× × × +

ಹಿಂಯವನವಾದ ಗಾಂಧೀ ಬೆಸ್ತನಿಗೆ ತಿಳಿಯದಿರುವುದುಂಟೇ? ಅವನಿಗೆ ಬ್ರಹ್ಮಾಂಡದ ಒಳಹೊರಗಿನ ಎಲ್ಲಾ ಸಂಗತಿ ತಿಳಿದಿದೆ ಲಂಡನ್ ಕೆರೆಯಲ್ಲಿ ಮೀನುಗಳ ಬದಲಿಗೆ ಹಂದಿಗಳಿವೆಯೆಂದು ಅವನಿಗೆ ತಿಳಿಯದೆ?

× × + ×

ಆತನ ಮಾತನ್ನು ಯಾರಿದುದೇಳಿ? ಆತನ ದೆಂಬಲರಾಗಿರುವ ಬೆಸ್ತರ ಮಾತನ್ನು ಉಲ್ಲಂಘಿಸಿ ನಡೆದುದೇಳಿ? ಈಗ ಉಪ್ಪು ತಿಂದವನು ನೀರು ಕುಡಿಯುವುದು ಆಸ್ವಾಭಾವಿಕವೆ?

× × × × ×

ಹಾಗೆ ಲಂಡನ್ ಮೀನುಗಳು ದ್ಯೂರೆಯಬೇಕೆಂಬಾದರೆ ಅವಕ್ಕೆ ತಕ್ಕ ಗಾಳವು ಸ್ವಯಂಸಲ್ಲದೆ ಬೇರಾದವರು ಅವಗಿಗೆ ಬರೆದು ಸರು ತ್ತರವನ್ನು ಪಡೆದುಕೊಳ್ಳಬಹುದು

× × × × ×

ಸಪ್ತಜಯಕರರು ಲಂಡನ್ನಿಂದ ಹೊರಡುವಾಗ "ನಾವು ಇನ್ನು ಈ ಕಸಬನ್ನೇ ಬಿಡುತ್ತೇವೆ" ಎಂದರುವರು! ನನ್ನ ಅಭಿಪ್ರಾಯದ ಮೇರೆಗೆ ಇವರ ಈ ಮಾತು ಎಂದಿಗೂ ಸತ್ಯವಲ್ಲ!—ಇವರು ಈ ಕಸ ಬನ್ನು ಬಿಡಲಿಕ್ಕಿಲ್ಲ ಇವರು ಅದನ್ನು ಬಿಡುವರಾತ್ರೆ ವೈಪರಾಯರು ಬಿಡುವುದೂ ಇಲ್ಲ!

× × × ×

ಅಂತೂ ಈ ರಾಯರುಗಳ ಬಲೆ ಬೀಸಾಟದಿಂದಲೂ ಗಾಳ ಹಾಕಿಸುವಿಕೆಯಿಂದಲೂ ಹಿಂನೂಸ್ಥಾನದ ಬೆಸ್ತರಿಗೆ ನಷ್ಟವಲ್ಲದೆ ಬೇರಾ ವಿನ ಲಾಭವಿಲ್ಲ!!!

× × × × ×

ಲಂಡನ್ನಿಗೆ ಹೋದ ಇವರು ಇಲ್ಲಿಗೆ ಬಂದೊಡನೆ ಮೊದಲು ವೈಸ ರಾಯರ ಭೇಟಿ ಮಾಡುವರು—ಇವರ ಭೇಟಿಯನ್ನು ನಮ್ಮ ದೊಡ್ಡಣ್ಣ ನವರಾವ ಮುಖಾಂತರವೇ ಕೌಶಾಂಬಿಯವರು ಮಾಡುವರು ಕೆಲವು ರಾಯಿಯವರು ಮುಸಲ್ಮಾನ ಭೇಟಿ ಮಾಡಿ ಗಾಂಧಿ ಮಾತಿಬೆಯ ತಪ್ಪಿಸುವರು

× × × × ×

ಅಷ್ಟರಲ್ಲಿ ಗಾಂಧಿಯವರು (fast unto death) ಪ್ರಾಯೋ ಪಾಂತಿಕ ಉಪವಾಸದ ಭೇಟಿ ಮಾಡಿರುವರು. ಹಿಂದೂಸ್ಥಾನ ಬೆಸ್ತರೆಲ್ಲ ದೈವಿಕ ಅಥವಾ ಬಡತನ, ಅಥವಾ "ಲಾಯಿ" ಭೇಟಿಯನ್ನು ಮಾಡು ವರು ಇಷ್ಟು ನನ್ನ ಧವಿಕ್ಯ!

× × × × ×

ಬೆಸ್ತರಲ್ಲಿ ಫಸ್ಟ್ ಕ್ಲಾಸ್ ಬೆಸ್ತರಾದ ಮಿಸ್ಟರ್ ಗಾಂಧಿಯವರು ತನ್ನ ಅಶ್ರಮವನ್ನು ಸರಕಾರಕ್ಕೆ ದಾನ ಕೊಡುತ್ತಾರಂತೆ, ಮಾರಾ ಬಲೆ ಯನ್ನು ಸಾಲಗಾರರಿಗೆ ಮಾಡಿರುವ ಬೆಸ್ತರಲ್ಲವೇ ಇವರು!

× × × × ×

ಇವರು ಒಂದು ದೊಡ್ಡ ಬಲೆಯನ್ನು ತಯಾರಿಸಿರುವರಂತೆ, ಈ ಬಲೆಯನ್ನು ಎಲ್ಲಿ ಬೀಸುವರೆಂದು ತಿಳಿದುಬಂದಿಲ್ಲ. ಆಶ್ಚರ್ಯ ವಾಗಿಗಳನ್ನೆಲ್ಲ ಎತ್ತರಿಸಿದವರು! ವಿಪರಾಗುವುದೋ ತಿಳಿಯದು!

× × + ×

ಆರ್ಯಾ ಗಾಂಧಿ ರಾಜನೀ, ನಿನ್ನ ಮಹಾ ಬಲೆಯನ್ನು ಸಪ್ತ ಜಯಕರ ಮೊದಲಾದ ಲಿಬರಲರ ನೇಲೆ ಮೊದಲು ಬೀಸು! ಅವರನ್ನು ಮೊದಲು ಕಂಳಕೊಳಗೆ ಸೇರಿಸಿದರೆ ನಿನ್ನ ಎಲ್ಲಾ ಕಾರ್ಯವೂ ಪೂರ್ತಿಯಾಗುತ್ತದೆ!

× × × × ×

ಇಲ್ಲದಿದ್ದರೆ ಆ ಬೆಸ್ತರು ನಿನ್ನನ್ನು ಕೂಡಾ ಲಂಡನ್ನಿಗೆ ಮೀನು ಹಿಡಿಯಲು ಹೋಗಬಹುದು. ಆವರಿಗೆ ಅದನ್ನು ಹಿಡಿಯುವುದೆಂದರೆ ಬಹಳ ಪ್ರೀತಿ. ಮೊದಲು ಅವರನ್ನು ಬಲೆಯಿಂದ ಹೆದೆ ಮುರಿಕಟ್ಟು!

ಅಮರದಿಂದ—

ಎಲ್ಲನು ಬಿಡಿರಿ ಸಪ್ತರ ಹಿಡಿರಿ ಗಾಂಧಿ ರಾಜಣ್ಣ
ಚಲ್ಲಣ ಕೊಪ್ಪ ಬ್ರಿಟಿಷರ ಕಿವಿರಿ ಗಾಂಧಿ ರಾಜಣ್ಣ!
ಮೆಲ್ಲನೆ ಹೋರರ ಕವಿಯೆನು ಹಂದಿ ಕೋಲು ಕೋಲಣ್ಣ
ತಲ್ಲಣ ಬೇಡ, ಎಲ್ಲವೂ ದೊರೆವುದು ಗಾಂಧಿ ರಾಜಣ್ಣ

× × × × ×

ನೋಡಬಾರದೆ! ನಮ್ಮ ಸಪ್ತಜಯಕರ ಮುಷ್ಠಿಯಲ್ಲಿ ಬೆವರು! ಜ್ಯೋಂಟಿ ಸಿಲೆಕ್ಟ್ ಕಮಿಟಿಯಲ್ಲಿ ಭಯ ಕಟ್ಟಿ ಕುಳಿತು ಕುಳಿತು ರಾಯರಿಗೆ ಉಸಿರು ಕಟ್ಟಿದಂತಾಗಿದೆ ಆಕಳ್ಳಿ ಅಗ್ಗಬೋಟ್ ಬಲೆ ತ್ತದೆ! ಬರ್ತೇನೆ ರಂಜಾ ಬರ್ತೇನೆ

ಪಿ. ಶ-ತ

'ಸ್ಯಾಬ'

++++

ಗುಣಬಾರದಿದ್ದರೆ] ಸುಪ್ರಸಿದ್ಧ ವೈದ್ಯರಾದ ಎಮ್ ಕೆ ರಜಪೂತ ಇವರ [ಹಣ ವಾಪಾಸು

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಕಸ್ಮಿಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲ್ಲ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾ ಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಪುಟ್ಟಾಗುವಿಕೆಯು ನೇಮದಂತೆ ಸುರುವಿರುವುದು ಕಾರಂಕ್ಕೆ ಏನೂ ಅಪಾಯವಾಗದ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು ವೈದ್ಯ ಡಾಕ್ಟರ ಬಿ ಎ ವೈದ್ಯ, ಎಲ್ ಸಿ ಪಿ ಎಸ್. ಕೆಳವಾಮಹಿಮ ರಾಜೇ ಈ ಚೂರ್ಣದಿಂದ ಯಾವ ತರವ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ

ವಿಳಾಸ:—ಸಂಜೀವಿನೀ ಔಷಧಾಲಯ ಮು ಪೊ ಮಿರಜಿ, S M C

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! **ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!**

ಕಸ್ತೂರಿ ಮಿಶ್ರಿತ ರಶಮೂಲಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-8-0. ದ್ರಾಕ್ಷಾಸವ ೧೬ ಔನ್ಸ್ ಬಾಟ್ಲಿ 1ಕ್ಕೆ ರೂ. 1. ಅಶ್ವಗಂಧಾರಿಷ್ಟ ೧೬ ಔನ್ಸ್ ಬಾಟ್ಲಿ ಒಂದಕ್ಕೆ ರೂ 1—4—0. ಅಬಲಾವೃತ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ 2 ಅಶೋಕಾರಿಷ್ಟ ೧೬ ಔನ್ಸ್ ಬಾಟ್ಲಿ ೧ಕ್ಕೆ ರೂ. 1-4-0 ಜೀವನಪ್ರಾಶಲೇಹ ೧ ರಾತ್ತಿಗೆ ರೂ 2-8-0 ಅಧಯಾಮಲಕೆ ೧ ರಾತ್ತಿಗೆ ರೂ. 2 ಚಂದ್ರಮಸ್ (ವಿಶೇಷಿಕೆಗೆ ರಾಮಬಾಣ) ಕಾಲು ಔನ್ಸಿಗೆ ರೂ 0-5-0 ದಂತಧಾವನ ಚೂರ್ಣ ತೊಲೆ ೧ಕ್ಕೆ 0-1-0. ಕೈವಿಷಾತಿನಿ (ದದ್ದು, ಕಜ್ಜಿಗೆ) ಡಬ್ಬಿ ೧ಕ್ಕೆ ರೂ 0-6-0 ಕೃಷ್ಣಾರಕ ೧ ಔನ್ಸಿಗೆ ರೂ. 0-6—0. ಚಿತ್ರಕ (ಮಕ್ಕಳ ಗೃಹಣೀ ರೋಗಕ್ಕೆ ದಿವ್ಯೌಷಧ) ತೊಲೆ ೧ಕ್ಕೆ ರೂ 0-8-0 ಮಹಾ ಚಿತ್ರಕ ತೊಲೆ ೧ಕ್ಕೆ ರೂ 1-0-0. ಪಿಂಡ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 0-10-0. ಒಲಾವ್ಯಗಂಧಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ 0-12-0 ಹಿಮಸಾಗರ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ. 1-8-0 ಮಹಾಚಂದನಾದಿ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ 1-0-0 ಶ್ರೀ ಗೋಪಾಲ ತೈಲ ೫ ಔನ್ಸ್ ಬಾಟ್ಲಿ ೧ಕ್ಕೆ ರೂ ೨-8-0

ನಮ್ಮ ಔಷಧಗಳು ದೊರೆಯುವ ಸ್ಥಳ:— ಬೈಂದೂರು—ಕೆ ಪುತ್ತು ಕಾಸುಧಾಗ. ಗಂಗೊಳ್ಳಿ—ಜಿ ಸುರೇಂದ್ರ ನಾಯ್ಕ, ಕುಂದಾಪುರ—ಕೆ. ರಾಮ ಭಟ್, ಡಾಕ್ಟರ್ ಕೆ ಎಲ್ ಕಾಮತ್ ಉಡುಪಿ—ಡಾಕ್ಟರ್ ಯು. ಎಸ್ ಆರ್. ಸೈ, ಆರ್ ಎಸ್. ಕೆಟ್ಟೈ, ರಥಬೀದಿ. ಕಾರ್ಕಳ—ವಿ ವಿ. ಶೆಟ್ಟಿ. ಕಾವೂ—ಡಾಕ್ಟರ್ ಬಿ ಕೆ. ಬೇಕಲ್ ಎಲ್ಲೆಲ್ಲಿಯೂ ವಿಜಂಟರು ಬೇಕಾಗಿದ್ದಾರೆ.

ಪಟ್ಟನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಕೊಳ್ಳಬಹುದು.

ನಾಯಕ್ ಬ್ರದರ್ಸ್, ಶ್ರೀಮದ್ಭುವನೇಂದ್ರ ಮಹೌಷಧಾಲಯ, ತೋನ್ಸೆ ಕಟಪಾಡಿ, ದ. ಕ.

Canara Bank Limited.

Established 1906

Authorised Capital	10,00000—0—0
Subscribed capital	6,00,000—0—0
Paid up Capital	1,30,000—0—0
Reserves	4,31,600—0—0

Head Office —**Bunder Mangalore** Local Office —**City & Bunder**

BRANCHES — Bombay Cochin Calicut, Ernaculam Alleppey Chikmagalur, Gangull, Coondapoor, Udipi, Karkal, Puttur Kasaragod, & Buntwal Out-agency

Interest is allowed on Current Fixed and Saving Bank Accounts, Rates of which may be ascertained on application Advances made on approved securities at easy rates All kinds of Banking business transacted. Rules of business on application

ಮಂಗಳೂರು,
12-7-33

A Madhava Pal,
Secretary

Next Division of Profits become due as at 31st December 1933
Why not share in the profits by taking out a Policy on your life Before the date with the

East & West Insurance Company Ltd.,

(Incorporated in India 1913)

Striking Progress in all directions increasing popularity evidence of Public Confidence

Annual Report as on 31st December 1932 Shows

News Business Received for an assurance of	Rs	29,54,000
New Policies issued for an assurance of	,,	20,82,000
Total Business in Force including Re-insurance	,,	59,08,101
Claims During the Year	,,	74,123
Total Claims Paid from the inception of the Co,	,,	3,58,250
Outstanding Claims only	,,	23,850
Total income for the year	,,	3,34,595
Life Assurance Fun at the close of the year	,,	6,27,707
Total Assets	,,	7,93,065

For particulars apply or please call at —

"Harbour View" Mangalore

ನಮ್ಮ ಕಾರ್ಖಾನೆಯು ಳೆದ ವರ್ಷದಲ್ಲೇ ಸ್ಥಾಪಿತವಾಗಿ ಹನ್ನೊಂದು ತಿಂಗಳು ಕಳೆಯಿತು ವಷ್ಟರಲ್ಲಿಯೇ ನಾವು ತಯಾರಿಸಿದ ಸಾಬೂನುಗಳ ಉತ್ಕೃಷ್ಟತೆಯ ಬಗ್ಗೆ ೮ ಸ್ವರ್ಣ ಪದಕಗಳೂ ಮೊದಲನೇ ತರಗತಿಯ ಬಹುಮಾನ ಪತ್ರಗಳೂ ಇತರ ಸರ್ಟಿಫಿಕೇಟು ಪತ್ರಗಳೂ ಪಡೆದಿದೆ

ದಿ ವೆಜಿಟೇಬಲ್ ಸೋಪ್ ವರ್ಕ್ಸ್‌ನ

'ಮಲಬಾರ್' ಸಾಬೂನುಗಳನ್ನೆ ಉಪಯೋಗಿಸಿರಿ.

ಶೇವಿಂಗ್ ಸ್ಟಿಕ್‌ಗಳೂ, ಸೆಂಡಲ್‌ವುಡ್, ಜಸ್ಮಿನ್; ಲಿಲಿ ರೋಜ, ಕೊಲಟಾರ; ರೋಸ್, ಲಿಮ್ಡಾ ಲಿಲಾ ಬೊರೆಕ್ಸ ಟರ್ಕಿಷ್ ಬಾತ, ಲಿಕ್ವಿಡ ಸೆಂಡಲ್ ಸ್ಟಾಬೂನುಗಳು. ಇವುಗಳು ಹುಮ್ಮಸ್ವಾದ ಜ್ಯಾಲಿಟಿಗಳು.



ಉಡಿಗೆ ತೊಡಿಗಳ ಬಗ್ಗೆ ಮಲಬಾರ್ ಟ್ವಿನ್, ಟೆಬಲೆಟ್ಸ್ 4 ಮತ್ತು 8 ಬೆಂಕು ಕ್ಯೂಬ, 101 ನಂಬ್ರದ ಗುಜಂತಾ ವಾಶಿಂಗ್ ಸೋಪು ವಸ್ತ್ರಗಳನ್ನು ಚೆಲೋ ದಾಗಿ ಬೆಳುಪು ಮಾಡುವ ಗುಣವುಳ್ಳ ಪೀಲವು ಸೋಪುಗಳು ಬಾರ ಸೋಪುಗಳು

'ಸನ್' ಗುರುತಿನ (ಸ್ಪೂರ್ಯ ಛಾಪಿನ) ಕೊಡೆಗಳನ್ನು ತಯಾರಿಸುವ

ಸೇಠ್ ನಾಗಜೀ ಪುರುಷೋತ್ತಮ ಕಂಪನಿ,

ಕಲ್ಲಿಕೋಟೆ.

ಇವರಲ್ಲೂ ಇವರ ಏಜಂಟರುಗಳಲ್ಲಿಯೂ ಯಾವಾಗಲೂ ರಮಿಂ ಸಿಗುವುದು.

ಈ ಕೆಲ್ಲಿಗೆ ಪ್ರವರ್ತಕರು:—

S·U N· & CO.

Chowkhamba. Benares City

ಮೂರು ಇನಾಮುಗಳು

ನಮ್ಮಲ್ಲಿ ಕಾಶ್ಮೀರ್ ಶಾಲುಗಳ ಗಿಂತಲೂ ಅತ್ಯುತ್ತಮವಾದ ಕಸೂತಿಗ ಕೆಂದೊಪ್ಪುವ ಶುದ್ಧ ಸ್ವದೇಶೀ ಬಿದ್ದರ್ ಶಿಲ್ಕು ಶಾಲುಗಳು ತಯಾರಾಗುತ್ತವೆ. ಬೇಕಾದವರು ತ್ವರೆಮಾಡಿ ಬರೆದರೆ ಈ ಕೆಳಗಿನ ದರದಲ್ಲಿ ಕಳುಹಿಸಲಾಗುತ್ತದೆ 5 ಮೊಳ ಉದ್ದ 2½ ಅಗಲ ದರ ಒಂದಕ್ಕೆಒರೂ 2—8—0ರಿಂದ 3—12—0 5½ ಮೊಳ ಉದ್ದ 2¾ ಮೊಳ ಅಗಲ ದರ 1ಕ್ಕೆ 3—8—0, 4—8—0 6 ಮೊಳ ಉದ್ದ 3 ಅಗಲ ದರ 1ಕ್ಕೆ ರೂ 4—8—0, ರೂ 5 ಅಲ್ಲದೆ ಸ್ವದೇಶೀ ಬಿದ್ದರ್ ಮಾಡಿಗಳೂ, ಕೀರೆಗಳೂ ಅಂಚುಗಳಿಲದೆ ಎಲ್ಲಾ ರಂಗುಗಳಲ್ಲಿದ್ದ ತ್ತವೆ ಮತ್ತು ಜರೀತಾರೀ ಕೀರೆಗಳೂ ಪಿತಾಂಬರಗಳೂ ರವಕೆಗಳೂ, ರುದ್ರಾಕ್ಷೀ—ಬಾಣಲಿಂಗ—ಪಂಚಾಯತನ ಸುದರ್ಶನ ಹಿತ್ತಾಳೆ ಕ್ಯಾಮಿಗ ವಿಶ್ವನ್, ಮಡಿ ಧಾವಳಿ ತಾಲು, ಜಗನ್ನಾಥ ಗಂಟೆಗಳೂ ಕೂಡಾ ಸರಿಯಾದ ದರಕ್ಕೆ ಕಳುಹಿಸಲಾಗುತ್ತದೆ ವಿವರಕ್ಕೆ ಕಟಲಾಗಿ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟೇಂಪು ಕಳುಹಿಸಿದರೆ 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕಟಲಾಗಿನೂ ಡನೆ 3 ಇನಾಮುಗಳು

ವಿಳಾಸ—

ಶಿರೋಮಣಿ ನಾರಾಯಣಾಚಾರ್ಯ ಮತ್ತು ಕಂಪೆನಿ, ಚೌಕಾಂಬಾ ಬೆನಾರಸ್ (ಕಾಶಿ)

— ಗಡಿಯಾಳ ವೃಕ್ತಟೆ —

ದುಬಿನಿಂಶಕ ಮುಖಮು ಎಗಜರ್ಜ ಷೆಟ್ಟಿ ಇಷಲ ನಾಯಟಿ ಮುಂತಾದ ಎಲ್ಲಾ ಕೃಬೆಯೋಗದ ವ ೇಲೆ ವಂದೇ ರಮಣಾ ಪಿಷ್ಟಿ, ೨೪ ತಾಸಿನಲ್ಲಿ ಗುಣಬರುತ್ತದೆ ಸಾವಿರಾರು ಜನರು ಶಿಫಾರಸು ಮಾಡಿರುತ್ತಾರೆ ಕಿಮ್ಮತ್ತು ದಬ್ಬಿ ೧೮ ಆಣೆ ೧—೪—೦ ೧೪೦ ಮೇಲೆ ಪೈಂಟೇಷು ೧೪೦ ಮೇಲೆ ಅಲಾವರ್ಧ ಪೈಂಟೇಷು ೨೪೦ ಮೇಲೆ ರಾಷ್ಟ್ರೀಕ್ಷೆ, ೩೬೦ ಮೇಲೆ ರಿಸ್ವಾಮೇ ಪ್ರತ್ಯೇಕ ಸಿಗುವುದು ಕೂಡಲೇ ಬರೆಯಿರಿ ಪತ್ರವ್ಯವಹಾರ ಮಾಂತಿ ಯಾ ಇಂಗ್ಲಿಷಿನಲ್ಲಿ

King George Coronation,
BOBMAY 4
16—6—33 (Head Office—Kotah Rajputana)

ಬೇಕಾಗಿದ್ದಾರೆ.

ಮಾಸಪತ್ರಿಕೆ ಪಾಕ್ಷಿಕ ಪತ್ರಿಕೆ ವಾರ ಪತ್ರಿಕೆ ಮುಂತಾದ ಪರ್ಚೆಯಾದ ಪತ್ರಿಕೆಗಳನ್ನು ಪ್ರಾರಂಭಿಸಿ ಮಾಡುವ ಬಗ್ಗೆ ಒಳ್ಳೆಯ ಚುರುಕುತನದಿಂದ ಕೆಲಸ ಮಾಡುವ ಕುಶಲರು ಬೇಕಾಗಿದ್ದಾರೆ. ಬೆನ್ನಾಗಿ ಕೆಲಸ ಮಾಡುವವರಿಗೆ ಯೋಗ್ಯ ಸಂಬಳ ವ ಕಮಿಶನ್ನು ಕೊಡೋಣಾಗುವುದು.

ನ್ಯೂ ಮೇಗೇಜಿನ್, ಫ್ಯಾಮಿಗೇಜಿನ, ನಗುವನಂದ, ಏಕಪಿ ವಿನೋದಿನಿ, ಮೊದಲಾದ ಇಂಗ್ಲಿಷ್ ಮತ್ತು ಕನ್ನಡ ಪತ್ರಿಕೆಗಳಿಗೆ ಉಡುಪಿ, ಕಾರ್ಕಳ ಕುಂದಾಪುರ ಮತ್ತು ಪುತ್ತೂರು ಉಪ್ಪಿನಂಗಡಿ ವಗೈರೆ ಸ್ಥಳಗಳಿಗೆ ಏಜಂಟರು ಬೇಕಾಗಿದ್ದಾರೆ ಹೆಚ್ಚಿನ ಮಾಹಿತಿ ಬಗ್ಗೆ, ಈ ಕೆಳಗಿನ ವಿಳಾಸಕ್ಕೆ ಬರೆಯಿರಿ ಯಾ ನೋಟ್ಸ್ ಮಾತನಾಡಿ ಬಹುದು —

K Bhasker Pai,
News & Commercial Agent,
Flower Market Mangalore.
ಕೆ ಭಾಸ್ಕರ ಪೈ,
ನ್ಯೂಸ್ ಎಂಡ್ ಕಮರ್ಷಿಯಲ್ ಏಜಂಟ್,
ಸಿಟಿ ಪಬ್ಲಿಸಿಟಿ ಆಂಡ್ ಹೂ ಮಾರ್ಕೆಟು,
ಮಂಗಳೂರು.

LOOK HERE!

We have got for sale all kinds of freshly prepared Exercise books, Note books and Diaries etc.,

SHARADA PRESS,
Car Street, Mangalore.

(೭೬೫ನೆ ಸಂಖ್ಯೆಯಿಂದ ಮುಂದುವರಿದುದು)

ಕ್ರಾಂತಿಯು ಪ್ರಾರಂಭ.

೧೯೩೭ ಫುಟ್ಬಾಲ್ ಆಟದ ಅಂಗಳದಲ್ಲಿ ಚೀನದ ಭೂಮಿಯು ರಾಜಕೀಯ ಕ್ರಾಂತಿಯ ಕ್ಷೇತ್ರವಾಗಿ ಪರಿಣಮಿಸಿತು. ಅದೇ ಸಮಯದಲ್ಲಿ ಅಲ್ಲಿಯ ಮಹಿಳೆಯರಲ್ಲಿಯೂ ಕ್ರಾಂತಿಯ ಕಾರ್ಮೋಡಗಳು ತಲೆದೋರಿದವು. ಚೀನದ ಕ್ರಾಂತಿಯ ಸೂತ್ರದಾರಿಗಳಾದ ಡಾಕ್ಟರ್ ಸನ್ಯಾತಸೇನ್ ಎಂಬವರು ಸ್ತ್ರೀ ಪುರುಷರಿಗೆ ಸಮಾನ ಅಧಿಕಾರವನ್ನು ಕೊಟ್ಟುಬಿಟ್ಟರು. ಅವರ ನಂತರ ಅವರ ಧರ್ಮಪತ್ನಿಯವರು ಅವರ ಕಾರ್ಯವನ್ನು ಪೂರೈಸಿದರು. ಸನ್ಯಾತರು ಪುರುಷಸಮಾನವಾದ ಅಧಿಕೀತ್ಯಗಳಾಗಿದ್ದರು. ಅಕ್ಕಲ್ಪ ಕಾಲದೊಳಗಾಗಿ ಚೈನದ ಮಹಿಳಾ ಸಮಾಜದಲ್ಲಿ ಉಂಟಾದ ನವೀನ ಜಾಗ್ರತಿಯನ್ನು ಇತರ ರಾಷ್ಟ್ರದವರು ಕಂಡು ಆಶ್ಚರ್ಯಚಕಿತರಾದರು. ಕ್ರೈಸ್ತಮತ ಪ್ರಚಾರಕರು ಅಲ್ಲಿಯ ಸ್ತ್ರೀಯರಿಗೆ ವಿದ್ಯಾದಾನದ ಬೀಜವನ್ನು ಬಿತ್ತಿದ್ದರು. ಪರಂತು, ನವೀನ ಕ್ರಾಂತಿಯು ಎಲ್ಲವನ್ನೂ ಅತಿಮೀರಾಗಿರಿಸಿತು. ಒಂದು ಕಾಲದಲ್ಲಿ ಅಲ್ಲಿಯ ಸ್ತ್ರೀಯರು ತಮ್ಮ ಕಾಲಿಗೆ ಕಬ್ಬಿಣದ ಕಡಾವಿಗಳನ್ನು ಬಿಗಿಯುತ್ತಿದ್ದರು ಆಧುನಿಕ ನೀಯ ಎಪ್ರಿಲ್ ತಿಂಗಳಲ್ಲಿ ನಾವೆಲ್ಲರೂ ಸಂಪೂರ್ಣ ನಗ್ನರಾಗಿ ಬಹಿರಂಗವಾದ ಮೆರವಣಿಗೆಯನ್ನು ಹೊರಡಿಸುವೆವು ಯಾರಾದರೂ ಧೈರ್ಯಶಾಲಿಗಳು ಇದ್ದರೆ ನಮ್ಮನ್ನು ತಡೆಯಲಿ ಎಂಬುದಾಗಿ ಅಲ್ಲಿಯ ಹಳೆಯ ಸಂಪ್ರದಾಯವಾದಿಗಳಿಗೆ ಒಂದು ಪ್ರಕಟಣೆಯನ್ನು ಕೊಟ್ಟರು. ಇದು ಹೊಂತು "Anti old-mission" ಎಂಬ ಒಂದು ಸಂಘವನ್ನು ಅವರೇ ಸ್ಥಾಪಿಸಿದರು. ನಾವೆಲ್ಲರೂ ಪ್ರಬಲವಾದ ಕ್ರಾಂತಿಕಾರಿಗಳೆಂಬುದನ್ನು ತೋರಿಸಿಕೊಳ್ಳಲು ತಮ್ಮ ಕೂದಲುಗಳನ್ನು ಕತ್ತರಿಸಿದರು ಹಂದು ನೇಳೆ ಪುರುಷರು ತಮ್ಮ ಪತ್ನಿಯನ್ನು ಬಿಟ್ಟುಬಿಡುವುದಾದರೆ ಸ್ತ್ರೀಯರಿಗೂ ತಮ್ಮ ಪತಿಗಳನ್ನು ಬಿಡಲಿಕ್ಕೆ ಸಂಪೂರ್ಣ ಅಧಿಕಾರವಿದೆ ಎಂಬ ಒಂದು ಠರಾವನ್ನು ಹಯೆಹದ ಸ್ತ್ರೀಮಂಡಲದವರು ಮಂಜೂರು ಮಾಡಿಕೊಂಡರು ಇದು ಹೊರತು ಒಬ್ಬನು ತನ್ನ ಪತ್ನಿಯನ್ನು ತ್ಯಜಿಸಿದರೆ ಅಕೆಯು ಅವನ ಮೇಲೆ ದಾವೆ ನಡಿಸಿ ಅವನಿಂದ ಜೀವನದ ಅಂಶವನ್ನು ಪಡೆಯುವ ಮತ್ತು ಪತಿಯ ಸಂಪತ್ತು ಪತ್ನಿಗೆ ಮಾತ್ರ ದೊರೆಯುವ ಸಂಪೂರ್ಣ ಅಧಿಕಾರವನ್ನು ದೊರೆತಿಸಿಕೊಂಡರು ಅನೇಕ ಸ್ತ್ರೀಯರು ರಷ್ಯದ ಕಛೆಂತಾಯಿನ್ ಮತ್ತು ಸೋಫಿಯಾ ಮುಂತಾದ ಕ್ರಾಂತಿಕಾರಿ ಮಹಿಳೆಯರ ಮಾರ್ಗವನ್ನೇ ಅನುಸರಿಸಿದರು ಚೀನದ ಫನ್‌ಫಿ ಎಂಬವಳು ಕ್ರಾಂತಿಯಲ್ಲಿ ಅತ್ಯಂತ ಪ್ರಸಿದ್ಧಳಾದಳು.

ಮುಹಮ್ಮದೀಯ ಮಹಿಳೆಯರಲ್ಲಿ ಕ್ರಾಂತಿ

ಜಗತ್ತಿನಲ್ಲಿ ಪ್ರಕೃತ ಅನೇಕ ಧರ್ಮಗಳಿವೆ. ಅವುಗಳಲ್ಲಿ ಮುಹಮ್ಮದೀಯ ಧರ್ಮವೆ ಒಂದಾಗಿರುತ್ತದೆ ಸ್ತ್ರೀಯರಿಗೆ ಇತರ ಧರ್ಮಗಳಲ್ಲಿ ದೊರೆಯುವಷ್ಟು ಸ್ವಾತಂತ್ರ್ಯವು ಮಹಮ್ಮದೀಯ ಧರ್ಮದಲ್ಲಿ ದೊರೆಯುವುದಿಲ್ಲ; ಇತರ ಸ್ತ್ರೀಯರಂತೆ ಮೀಯ ಮಹಿಳೆಯರಿಗೆ ಅಧಿಕಾರವಿಲ್ಲ. ಅವರೆಲ್ಲರೂ ಶೋಚನೀಯ ಪರ್ದಾ ಪದ್ಧತಿಯಿಂದ ಬಂಧಿಸಲ್ಪಟ್ಟಿರುವರು. ಇದರಿಂದಾಗಿ ಮುಸ್ಲಿಮ್ ಸ್ತ್ರೀಯರು ಅಂತರಿಕ ಜೀವನವು ಕಟ್ಟುಪಾಡುಗಳಾಗಿ ಬರುವುದನ್ನು ತಿಳಿದು ಅವರು ಸಹ ಪರದಾ ಪದ್ಧತಿಯನ್ನು ತೆಗೆದು ತರತರದ ವಿದ್ಯಾದಾನವನ್ನು ಮಾಡತೊಡಗಿದರು. ಇಂದಿಗೆ ಟರ್ಕಿ, ಎಜ್ಪ್ತ್, ಸಿರಿಯಾ, ಮುಂತಾದ ಮುಸಲ್ಮಾನ ದೇಶಗಳ ಸ್ತ್ರೀಯರು ತಮ್ಮ ಸುಧಾರಣೆಯ ಬಗೆ, ತರತರದ ಕ್ರಾಂತಿಯನ್ನು ಕೈಕೊಂಡಿದ್ದಾರೆ.

ಟರ್ಕಿಯಲ್ಲಿ.

ಟರ್ಕಿಯಲ್ಲಿ ಮುಸ್ತಫಾ ಕೆಮಲ್ ಪಾಶಾರವರು ತಮ್ಮ ಲ್ಲಿನ ಸ್ತ್ರೀಯರಿಗೆ ಎಲ್ಲಾವಿಧದಲ್ಲಿ ಸಮಾನ ಅಧಿಕಾರವನ್ನು ಕೊಟ್ಟಿರುವರು. ಅಲ್ಲಿಯ ಸ್ತ್ರೀಯರಲ್ಲಿ ಪರದೆ, ಬಹುವಿವಾಹದ ಪದ್ಧತಿಯು ನಿಷೇಧಿಸಲ್ಪಟ್ಟಿರುವುದು ಅಲ್ಲಿಯ ಮಹಿಳೆಯರಲ್ಲಿ ಹಾದ್ಯಿ, ಜ್ಞಿ, ಸೆಲ್ಲಾ, ವಿಕಮ್ ಎಂಬವರೇ ಮೊದಲು ಪರದೆಯನ್ನು ಕೆತ್ತು ತೆಗೆದರು. ಇದಾದ ನಂತರ ಎಲ್ಲಾ ಮಹಿಳೆಯರು ಪರದಾ ಪದ್ಧತಿಯನ್ನು ಸಂಪೂರ್ಣವಾಗಿ ವಿರೋಧಿಸಿದರು ಹೀಗೆ ಅಲ್ಲಿಯ ಮಹಿಳೆಯರು ವಿಶ್ವ ವಿದ್ಯಾಲಯದ ಸೆನೆಟ್ ಮೆಂಬರರಾಗಿ ಇರುತ್ತಾರೆ ಕೆಲವರು ಡಾಕ್ಟರ್, ವಕೀಲ್ ಇತ್ಯಾದಿ ಬೇರೆ ಬೇರೆ ವೃತಸಾಯಗಳನ್ನು ಕೈಕೊಂಡಿದ್ದಾರೆ ಪ್ರತಿಯೊಬ್ಬರು ಶರೀರವನ್ನೆಲ್ಲಾ ಮುಚ್ಚಿಕೊಂಡಿದ್ದ ಮುಸಕನ್ನು ತೆಗೆದು ಪಾಶ್ಚಾತ್ಯರಂತೆ ಉಡಿಪೆತೊಡಿಗೆಯನ್ನು ಬದಲಾಯಿಸಿರುವರು

ಈಜ್ಪ್ತದಲ್ಲಿ

ಈಜ್ಪ್ತದ ಮುಖಂಡರಾದ ಸ್ವರ್ಗೀಯ ಜಗಲುಲ್ ಪಾಶಾರವರ ಧರ್ಮ ಪತ್ನಿಯವರು ಅಲ್ಲಿಯ ಸ್ತ್ರೀ ಸಮಾಜದ ಮುಖಂಡಳುಗಳಾಗಿರುವರು ಕಳೆದ ಸಾರಿ ಮಹಾತ್ಮರು ಲಂಡನ್ನಿಗೆ ಪಯಣ ಬೆಳೆಸಿದಾಗ ಈಜ್ಪ್ತದ ತೀರಕ್ಕೆ ತಲ್ಪುತ್ತಲೇ ಈ ಮಹಿಳಾ ಶಿರೋಮಣಿಯು ಮಹಾತ್ಮರ ಪಯಣದ ಸಫಲತೆಗಾಗಿ ತಮ್ಮ ಸಂದೇಶವನ್ನು ಮಹಾತ್ಮರಿಗೆ ಒಪ್ಪಿಸಿದರು ಅಲ್ಲಿಯ ಮಹಿಳಾ ಮಂಡಲದ ಕಾರ್ಯದರ್ಶಿಯವರಾಗಿರುವ ಶ್ರೀಮತಿ "ಹದ್ ಸನ್ ಆಹೆಮ್ಮನ್ ಶಕೀರ್" ಎಂಬವರು ಅಮೀರಿಕದಲ್ಲಿ ಉತ್ತಮ ಶಿಕ್ಷಣವನ್ನು ಹೊಂದಿದವರಾಗಿರುತ್ತಾರೆ. ಒಬ್ಬನು ನಿಃಒಬ್ಬ ಮಂದಿ ಬೀದಿಯಂರನ್ನು ಇಟ್ಟುಕೊಳ್ಳಬಹುದೆಂಬ ಮಹಮ್ಮದೀಯರಲ್ಲಿರುವ ಪದ್ಧತಿಯನ್ನು ವಿರೋಧಿಸಿ ನಿರ್ಮೂಲಗೊಳಿಸಿದವರು ಶ್ರೀಮತಿ ಶಕೀರರೇ ಆಗಿರುತ್ತಾರೆ

ಸಿರಿಯಾ

ಸಿರಿಯಾ ದೇಶವು ಇಸ್ಲಾಮಿಧರ್ಮದ ತವರೂರಾಗಿರುತ್ತದೆ ಅಲ್ಲಿಯ ಸ್ತ್ರೀಯರು ಸಹ ಬಹುವಿವಾಹದ ಪದ್ಧತಿಗೆ ವಿರುದ್ಧವಾಗಿ ಘೋರವಾದ ಕ್ರಾಂತಿಯನ್ನು ಎಬ್ಬಿಸಿದರು ಇವರ ಕ್ರಾಂತಿಗೆ ದಮಸ್ಕ ಪಟ್ಟಣವು ಮುಖ್ಯ ಕೇಂದ್ರವಾಗಿ "ಜುಲಿಯಾ ಧೈಮಿತಿ" ಎಂಬ ಮಾಸಿಕ ಪತ್ರಿಕೆಯನ್ನು ನಡೆಸುತ್ತಿದ್ದಾರೆ. ಈ ಪತ್ರಿಕೆಯಲ್ಲಿ ಮಹಮ್ಮದೀಯ ಮಹಿಳೆಯರ ಅನ್ಯಾಯಗಳ ಬಗ್ಗೆ ಕ್ರಾಂತಿಕಾರಿಯಾದ ಲೇಖನಗಳು ಪ್ರಕಟವಾಗುತ್ತಿವೆ. ಮಹಮ್ಮದೀಯ ಮಹಿಳೆಯರ ಕ್ರಾಂತಿಯು ಎಲ್ಲಾ ಕಡೆಯಲ್ಲಿಯೂ ತಲೆದೋರಿದೆ. ಅಫಘಾನಿಸ್ತಾನದ ಮೊದಲಿನ ಅರಸರಾದ ಅಮಾನುಲ್ಲಾಖಾನರ ಧರ್ಮಪತ್ನಿ ಸುರ್ಯಾರವರು ತನ್ನ ದೇಶದ ಮಹಿಳೆಯರಲ್ಲಿಯೂ ಅನೇಕ ರೀತಿಯ ಸುಧಾರಣೆಗಳನ್ನುಂಟು ಮಾಡಿದರು ಈ ಪ್ರಕಾರ ಜಗತ್ತಿನ ಮಹಿಳೆಯರು ತಮ್ಮ ಸುಧಾರಣೆಯ ಒಗ್ಗೆ ಬಹು ವಿಧದ ಕ್ರಾಂತಿಯನ್ನು ಮಾಡುತ್ತಿರುವರಲ್ಲಿ ಭಾರತೀಯ ಮಹಿಳೆಯರಾದ ನಾವು ಸಹ ನಮ್ಮ ಉನ್ನತಿಯ ಪಥದಲ್ಲಿ ತೀಗ ಇರುವುದಕ್ಕಿಂತ ಒಂದು ಹೆಜ್ಜೆಯನ್ನಾದರೂ ಮುಂದರಿಸುವುದು ಲೇಸಲ್ಲವೆ?

(ಜಾಂಡ್ ಪತ್ರಿಕೆಯಿಂದ)

ಅನುವಾದಕಿ —ವಿದ್ವಾನ್ ಶಾರದಾಂಬಾಯಿ

ವೀರನಿಧನ

ಏಕ ಸ — ಧಾರತಾಂಬೆಯ ಸೇವೆಗಾಗಿ ತನುಮನಧನವ
ಧಾರೆಯೆರೆದಿತ್ತು ನಶ್ವರ ದೇಹಮಂ ತ್ಯಜಿಸಿ
ಧೂರಿ ಕೀರ್ತಿದ್ಯುಮಣಿಯಾಗಿ ಧಾರತಗಗನ ಮುಂಡಲದಿ
ಬೆಳಗುತಿರ್ಪ ।

ಧಾರತಾವನಿ ಬಂಧು ಚಿತ್ತರಂಜನ ತಿಲಕ
ಧೀರ ಲಜಪತ ಮೋತಿಲಾಲಾದಿ ಧಾರತೀ
ವೀರ ಯೋಧರ ಸರಣಿಯಂ ಸೇರ್ದನಾದೇಶಭಕ್ತ
ಶ್ರೀ ಸೇನಗುಪ್ತ ॥ ೧ ॥

ಧಾರತೀ ಸ್ವಾತಂತ್ರ್ಯ ಸಂಗ್ರಾಮ ಶೂರವರ
ವೀರರಿಪು ಲ ಧಯಂಕರ ಸ್ಫೂರ್ತಿಲತಾಯಗಂ
ಧೀರಮುಖ ಚಿತ್ತರಂಜನ ದಾಸ ತೈವಸುಕುಟಿಧಾವಿತರ
ಕಾರ್ಯಕಾರಿ ।

ಧಾರತೇಯರಿಗೆನರ ವರತಾರ್ಯಧಾರವನು
ಸಾರಿ ತನ್ನಮಲಕೀರ್ತಿಯ ಕೆರಣವನು ಬೀರಿ
ಧೂರಿ ಕರ್ಮದೊಳಸ್ತಮಿಸಿದನೈ ರಾಷ್ಟ್ರಾಧಿವಾನಿ
ಸುಜ್ಞಾನದಾನಿ ॥ ೨ ॥

ಅರ್ತಂದು ನುಂಗಲಾಪುರಕೈದಿದಾವೀರ
ಮೂರ್ತಿ ಕಣ್ಮರೆಯಾದನಃಟಕಟ ಧೀರನಾ
ಸ್ಫೂರ್ತಿದಾಯಕನಾದ ಧಾತಣದ ನೆನಪಿಂದು ಹುರಿದುಂಬಿ
ಪುದು ಜನರನು ॥

ಕೀರ್ತಿಮಯನಿ ಕಳಂಕ ರಾಷ್ಟ್ರಾಧಿವಾನ ಸಂ
ಪೂರ್ತಿಯಾಗಿರಲಿ ಜನಮೊಳ್ ವೀರನಾತ್ಮಕಾ
ಶಾರ್ಥನಾಂತಿ ಕಾಂತಿಯಂ ಕರುಣಿಸಲಿ ಜನತೆ ವೀರನೆಂ
ಬರಿಯದಿರಲಿ ॥ ೩ ॥

ಬೇಲೆಗದ್ದೆ ಅಪ್ಪಯ್ಯ, ವಿದ್ಯಾರ್ಥಿ.

The Canara Industrial & Banking Syndicate Limited,

Established in 1925. Branches. Mangalore, Payyanur, Brahmavar, Kumta, Karwar, Hubli & Honnavar. **Head Office:— UDIPI**

Authorised Capital Rs. 1,00,000. Subscribed Capital Rs. 1,00,000 Paid up Capital Rs 20,000

STATEMENT OF AFFAIRS OF THE SYNDICATE AS ON 31ST MAY 1933

LIABILITIES.			ASSETS.		
Paid up Capital	Rs	20,000—0—0	Loans on Land mortgage	Rs.	1,79,010—9—5.
Reserve & other funds	,,	20,250—0—0	Loans on Valuable Securities	,,	2,49,986—9—6
Deposits	,,	9 13,800—3—7.	Bills of Exchange, Hundis and Promissory Notes		4,62,367—4—5,
Due to Bankers	,,	61,019—10—3.	Investment on Shares of other Companies	,,	43,575—0—0
On Bills & D. P Notes	,,	42,000—0—0.	On Deposits with Bankers	,,	90,000—0—0
Bills for Collection	,	6,036—2—2	Bills for collection (per contra)	,,	6,036—2—2
Sundries		74,025—7—1	Sundries	,,	38,117—15—3
			Cash in hand & with Bankers	,,	18,037—14—4.
Total Rs.		11 37,131—7—1	Total Rs.		11,37,131—7—1.

Long and Short term Loans on attractive Schemes are granted.
ALL KINDS OF BANKING BUSINESS UNDERTAKEN

Udipi, 9—6—1933.

P. A. Pai Bros., *Managing Agents.*

DUO-TREAD TIRES.

Seiberling's Novel Features.

1. Air Cooled.
2. Duo Tread.
3. Twice the Mileage.
   FOR
4. Only 20 per cent extra Money

A TIRE UN-IMITATED & EXCLUSIVE.

Dealers Earn Profits. *Users Save Money.*

The Canara Public Conveyance Co., Ltd.

MANGALORE.

ಸ್ಫುಟ ವಿಚಾರಗಳು.

ನಮ್ಮ ಮಹಾರಾಜರುಗಳು -

ನಮ್ಮವರೇ ಆದರೂ, ಅದೊಂದು ಬಗೆಯ ಮಾಯಾ ಪ್ರತಿಭೆಯಿಂದ, ದೈವಿಕವಾಗಿರುವ ಅಧಿಕಾರಿಕಾರಗಳನ್ನು ಪಡೆದು ಇತರ ಧಾರತೀಯರ ಅತಾಕಾಂಕ್ಷೆಗಳು ಫಲಿತಕ್ಕೆ ಬಾರದಂತೆ, ಪ್ರಜೆಗಳ ಹಣದಿಂದ ಸೈಧವದಿಂದ ಮೆರೆದಾಡುತಿರುವುದು ಸೊಗಸಲ್ಲವೆಂದು ತೋರಿಸುವುದಕ್ಕಾಗಿಯೆ ವಿದೇಶಗಳಿಂದ ಇತ್ತ ಸಂಚಾರಕ್ಕೆ ಬಂದಿರುವ ಎಷ್ಟೋ ಮಂದಿ ವಿದುಷಿಯರು ಅವರ ಜೀವಿತಾವಧಿಯ ಬರೆಹುತಲಿರುವರು 'ಚಿನ್ನದ ಸಂಕೋಲೆ' ಗಳಿಂದ ಕಟ್ಟಿರುವ ಅರು ಕಾಡು ಹುಲಿಗಳು ಅಲ್ಲಲ್ಲಿ ಚಿನ್ನದ ತಗಡುಗಳೂ ಅಮೂಲ್ಯ ರತ್ನಗಳೂ ಕತ್ತಿರುವ ಅರಮನೆ, ೬೫ ಮೋಟಲು ಕಾರುಗಳು, (ಅರ್ಧ ಮಿಲ್ಲಿಯ್ ಡೊಲ್ಲರು ಕ್ರಯದವು) ೫೭ ಆನೆಗಳು, ಅವುಗಳಿಗಾಗಿ ಇನ್ನೂರು ಸೇವಕರು, ಗಾಡಿಗಳನ್ನು ಚಿಮಕಿಸುವಂತೆ ಇಡುವುದಕ್ಕಾಗಿಯೆ ಒಂದು ಸಣ್ಣ ದಂಡು ೩೦೦ ಬೇಟೆಯ ನಾಯಿಗಳು, ೧೬ ಜನ ಒಂದು ಹೋಗುವುದನ್ನು ಸೂಚಿಸುವುದಕ್ಕಾಗಿ ಹಾರಿಸುವ ೧೯ ಫಿರಂಗಿಗಳು; ಚಿನ್ನದ ತುತ್ತೂರಿಗಳು, ಇಂಗ್ಲೆಂಡಿಗೆ ಹೋದರೆ, ಇಡೀ ಹೊಟೇಲಿನ ಒಂದು ಮಾಳಿಗೆಯೇ ಬಾಡಿಗೆಗೆ ಮಹಿಸಿ ಅದರಲ್ಲಿ ತನ್ನನ್ನೂ ಗಲರಿ ಮಂದಿ ಪರಿವಾರವನ್ನೂ ಇರಿಸುವ ವ್ಯವಸ್ಥೆ—ಇವೆಲ್ಲವೂ ಪಾಟಿಯಾಲದ ಮಹಾರಾಜರದು ಈ ಮಹಾರಾಜನ ಆಯವು ಬರೇ ಮೂರು ಮಿಲ್ಲಿಯ ಡೊಲ್ಲರು ಎಂದೊಂದು ಚಿತ್ರ.

ಹೊಸರಾಜರುಗಳು ತಯಾರಾಗ ತ್ತಾರೆ.

ವಿಲಾಯತಿಯಲ್ಲಿ ಮಹಾ ಯುದ್ಧದ ನಂತರ ಹೊಸ ರಾಜ್ಯಗಳುಂಟಾಗಿ, ಅವುಗಳಲ್ಲಿ ಪ್ರಜಾಸತ್ತಾತ್ಮಕ ರಾಜ್ಯಧಾರವೇ ಸ್ಥಾಪನೆ ಹೊಂದಿತು ಗ್ರೀಸ್, ಹಂಗೆರಿ, ಜರ್ಮನಿ ಎಂಬೀ ರಾಜ್ಯಗಳಲ್ಲಿ ಹಿಂದೆ ಪ್ರಜಾಪ್ರಾಸ್ಥಿತರಾದ ರಾಜಮಂಗಳಿದ್ದರು ಅವರನ್ನು ತಳ್ಳಿಹಾಕಿ, ಪ್ರಜಾಧಿಪತ್ಯ ಸ್ಥಾಪನೆ ಹೊ ದಿತು. ಈಗ, ಆಯಾ ರಾಜ್ಯಗಳಲ್ಲಿ, ಆಯಾ ರಾಜರುಗಳಲ್ಲಿ ಭಕ್ತಿ ಯುಳ್ಳ ಜನರುಗಳು ಬಂದಾಗಿ ಮೆಲ್ಲನೆ ಪುನಃ ರಾಜವಂಶಗಳನ್ನು ಸಂಸ್ಥಾಪನೆಗೊಳಿಸುವುದೇ ತಮಗೆ ಕೀರ್ತಿಕರವೆಂದೂ ಗೌರವವೆಂದೂ ನಿರ್ಧರಿಸಿದ್ದಾರೆಂದು ವಾರ್ತೆ ಇದೆ ಗ್ರೀಸಿನಲ್ಲಿ ಈಗ ಅಧಿಕಾರಾರೂಢರಾಗಿರುವ ಮಂತ್ರಿಮಂಡಲವೇ ಇನ್ನೂ ಜುನಾವನೆ ಮೂಲಕ ಬರಲಿರುವ ಪ್ರತಿನಿಧಿಗಳೂಡನೆ, ಹಿಂದಣ ರಾಜರ ಪುತ್ರನಾದ ನಿಕೋಲಸನನ್ನೆ ಅರಸನನ್ನಾಗಿ ಮಾಡಿಕೊಳ್ಳಲಿರುವರು ಈತನು ಈಗ್ಗೆ ೧೦ ವರ್ಷಗಳಿಂದಲೂ ಅಜ್ಞಾತವಾಸ, ಹಂಗೇರಿಯಲ್ಲಿ ರಾಜನೊಡನೆಯೆ ಅಸ್ತಿಯನ್ನೂ ಕಳಿಯತೆಂದ ಹಲವು ಜನಿಂದಾರರು ಬಂದಾಗಿ ಸೈನಿಂದನ್ನೆ ತನ್ನು ಬೆಂಬ ಕ್ಕಿಟ್ಟುಕೊಂಡು, ಸದ್ಯದಲ್ಲೆ ಬೆಲ್ಜಿಯಮಿನಲ್ಲಿ ಅಜ್ಞಾತವಾಸಿರುವ ಒಬ್ಬೋ ರಾಜಕುಮಾರನನ್ನು ಅಧಿಪೇಕ ಮಾಡುವುದಲ್ಲಿದ್ದಾರೆ. ಜರ್ಮನಿಯಲ್ಲಿ ಹಿಟ್ಲರನೇ ಸರ್ವಾಧಿಕಾರಿಯಾಗಿದ್ದು, ಹಳೆಯ ಕೈಸರರ ಮುಮ್ಮಕ್ಕಳೆಲ್ಲಿ ಒಬ್ಬರನ್ನು ತರಿಸಿ, ಕೈಸರನನ್ನಾಗಿ ಮಾಡಿಕೊಳ್ಳುವನಂತೆ

ಜಗದುದ್ಧಾರ ಕಾರ್ಯಕ್ಕಾಗಿ

ಲಂಡನಿನಲ್ಲಿ ಸೇರಿದ ಆರ್ಥಿಕ ಪರಿಷತ್ತು ಅತಿ ವಿಸ್ತಾರವಾದ ಸೊನ್ನೆಯೊಂದನ್ನು ಪ್ರಯತ್ನಪೂರ್ವಕವಾಗಿ ಅಂಕಿಸಿ, ಮುಗಿಯಿತೆಂದು ಎಲ್ಲರೂ ಬಲ್ಲರು ಅರ್ಥಶಾಸ್ತ್ರ ಪ್ರಮಾಣ ರಿಗೆ ಅತಿ ಕಠಿಣವಾದ ವಿದ್ಯಮಾನಗಳನ್ನೆಲ್ಲ ಸ್ಪಷ್ಟಾರ್ಥದಲ್ಲಿ ವಿಮರ್ಶಿಸಿ, ಮುಂದಣ ದಿನಗಳಲ್ಲೆಲ್ಲ ಅತಿ ಸುಗಮವಾಗುವಂತಹ ಸುಲಭೋಪಾಯಗಳನ್ನು ಸೂಚಿಸುವೆವೆಂಬ ವಿಶ್ವಾಸದಿಂದ ಪ್ರಪಂಚದ ಸಮಸ್ತ ರಾಷ್ಟ್ರಗಳ ಮುಖಂಡರನ್ನು ಪ್ರತಿನಿಧಿಗಳನ್ನಾಗಿ ಕರೆದುದಾಯಿತು ಪ್ರತಿಯೊಬ್ಬ ಪ್ರತಿನಿಧಿಯೂ ಇನ್ನಿತರರ ನಷ್ಟವೇ ತನಗೆ ಲಾಭದೆಂಬಂತಹ ತತ್ವವನ್ನು ಅಧರಿಸಿಕೊಂಡು ಟೀಕೆಗೆ ತೊಡಗಿದನೆಂದೇ ಹೇಳುವುದು ತಶ್ಚಾಗದು ಒಟ್ಟಾಪ ದಲ್ಲಿ ಸಾಮ್ರಾಜ್ಯದ ಇತರ ಧಾಗದವರನ್ನೆಲ್ಲ ಕರೆದು ಒಂದು ವ್ಯಾಪಾರೀಕರಾರನ್ನು ಮಾಡಿಕೊಂಡಮ್ಮು ಸೌಲಭ್ಯತೆಯಿಂದ ಇಲ್ಲಿಯೂ ಒಂದು ಕರಾರನ್ನು ಮಾಡಬಹುದಾಗಿ ನಂದಿದ ಪ್ರತಿನಿಧಿಗಳು ಸೋತರು ಹಲವರು ಅಮೇರಿಕವನ್ನು ದೂರಿ, ವಸೂ ಮಾಡಲಹುದಿಲ್ಲವೆಂದರು ಅಮೇರಿಕವು ಅಷ್ಟು ಕೃಪಣತೆಯಿಂದ ವರ್ತಿಸಿದೆಯೆಂದು ತಿಳ್ಳೀಪಕರವಾದುದಾದರೂ, ಇಲ್ಲಿ ದಿಲ್ಲಿ ಇನ್ನೊಂದು ಬಾರಿ ಮಾತಾ ತೆಗಿಸಿ ಪ್ರಯತ್ನಿಸೋಣವೆಂದು, ಸರ್ವಸಮ್ಮತವಿರ್ಣಯವನ್ನು ಎಲ್ಲರೂ ನುಡಿದು ಮರೆದರು.

ವಾಯವ್ಯ ಗಡಿನಾಡಿನಲ್ಲೇನು?

ಯುದ್ಧವೆ ಹೊರಬೇಕು—ಹಾಗೇನೂ ಪ್ರಸ್ತಾಪವಾಗಿಲ್ಲ, ಆದರೆ ಎಂದಿಗೆ ಮುಗಿಯಬಹುದೆಂದು ಯಾರೂ ಹೇಳಲಾರದ ತರಗತಿಯ ಯುದ್ಧವೊಂದು ಪ್ರಾರಂಭಿಸಿರುವಂತೆ ತೋರುತ್ತಿದೆ ಕಾಂತಿ ಸ್ಥಾಪನೆಗಾಗಿ ಈ ಯುದ್ಧವಂತೆ ಅಲ್ಲಿನ ಯುದ್ಧಾ ತುರರಾದ ಪಂಗಡಗಳೊಳಗೆ ಯುದ್ಧಗಳಾಗುವುದು ಒಂದು ಬಗೆಯ ಅನುದಿನದ ಸಂಭವ; ಹಾಗಿದ್ದರೂ, ಇಂಡಿಯಾ ಸರಕಾರವೇಕೆ ಒಂದು ಚಿಕ್ಕ ದಂಡನ್ನು ಅತ್ತ ಕಳಿಸಿತು? ಅಲ್ಲಿನ ಗೊಂದಲಗಾರರು ಈ ದಂಡನ್ನು ನೋಡಿ ತಲೆಗೊಡುವ ಹಾಗೂ ಇಲ್ಲ, ತಲೆದೂಗುವಂತೆಯೂ ಇಲ್ಲ ಆದರೂ, ಈ ದಂಡು ಅಲ್ಲಿ ನಿಂತಂತೆಯೂ ಇರುವುದಿಲ್ಲ ಎಂದು ತಿಳಿಸಲಾಗಿದೆ ಯುದ್ಧ ಕಾಲದಲ್ಲಿ ಇಷ್ಟನ್ನು ಯಾವಾಗಲು ತಿಳಿಸಿ, ಬಹು ಕಾಲದ ತನಕ ಹೂಡಿದಾಟ ನಡೆಸಿದ್ದಿದೆ ಈ ನಡುವೆ, ವಿಮಾನಗಳಿಂದ ಬೊಂಬು ಬೆಂಡುಗಳನ್ನು ಚೆಲ್ಲಲಾದೀತು ಎಂಬೂ ಕೊನೆಯ ಸೂಚನೆ ಕೊಡಲಾಗಿದೆ ವಿಮಾನಗಳನ್ನು ಈ ಸಿಡಿಗುಂಡಿನ ಚೆಲ್ಲಾಟಕ್ಕೆ ವಿನಿಯೋಗಿಸುವುದು ಅನಾಥ್ಯಕರವೆಂದು ಶಸ್ತ್ರಸನ್ಯಾಸ ಪರಿಷತ್ತಿನಲ್ಲಿ ಬಹಳವಾಗಿ ತಿಳಿಸಲಾಗಿದೆ. ಆದರೆ ಕಾಡುಜನರ ಮೇಲೆ ಯುದ್ಧವಾಗುವಾಗ ಈ ಒಗೆಯೇ ಸುಲಭವೆಂತು ಶೀಲ್ಡ್ ಫಲದಾಯಕವೆಂದು ಬ್ರಿಟಿಷರ ನಂಬಿಕೆ ಇದೆ ಹೀಗಾಗಿ, ಇನ್ನು ಈ ಯುದ್ಧದಲ್ಲಿ ಕಾಡಾಡಿಗಳನ್ನು ಬೊಂದಿನಿಂದ ಅಣಗಿಸಿದ ಕೊರರ ಕಾರ್ಯಗಳ ವೃತ್ತಾಂತವನ್ನು ಓದಲಿರುವೆವು

ದಕ್ಷಿಣಾಫ್ರಿಕದಲ್ಲಿ ಹಿಂದೀಯರು

ಆ ಪ್ರದೇಶವನ್ನು ಸುಧಾರಣೆಗೊಳಿಸಿ ಬ್ರಿಟಿಷರೇ ಮೊದ ಲಾದವರು ಸುಖವಾಗಿ ನೆಲೆಸಿಲ್ಲುವಂತೆ ಮಾಡಲು ಅದ್ವಿತೀಯ ಸಹಾಯಕರಾದರು ನಂತರ, ಚಿಕಿತ್ಸೆ ಮಾಡಿದ ಕೈಯನ್ನ ರೋಗಿಯು ಕಡಿಯ ತೊಡಗಿದನು! ಅಲ್ಲೇ ಹುಟ್ಟಿರುವ ಹಿಂದೀ ಯರು ಒಟ್ಟು ಹಿಂದೀಯರಲ್ಲಿ ನೂರಕ್ಕೆ ೭೦ರಂತೆ ಇರುವರು. ಇವರಿಗೆ ಸ್ವದೇಶವೆಂದರೆ ದಕ್ಷಿಣಾಫ್ರಿಕವಾಗಿದೆ. ಅವರನ್ನೆಲ್ಲ ಪುನಃ ಇಂಡಿಯಕ್ಕೆ ಕಳುಹಬೇಕೆಂದು ಕಾನೂನಾಗುತ್ತಿದೆ ಕಳೆದ ವರ್ಷದ ಜೂಲಲ ಹಿಂದೀಯರನ್ನು ಹಿಂದಕ್ಕೆ ಈ ರೀತಿ ಯಲ್ಲಿ ಕಳುಹಿಸಲಾಯಿತು ಹಿಂದೀಯರು ಈಗ ಕೆಲಸ ಮಾಡಲೂ ಅಸ್ಪದ ಸಿಗದೆ ಹಿಂದೆರಳಬೇಕಾಗಿ ಬಂದಿದೆ ಇದೀ ದಕ್ಷಿಣಾಫ್ರಿಕರ ಜನನಂಖ್ಯೆಯಲ್ಲಿ ನೂರಕ್ಕೆ ಮೂರಿರಂತೆ ಮಾತ್ರ ಹಿಂದೀಯರು ಇರುವರಾದರೂ, ೧೭ ಇತರರು ಸೇರಿ ಅವರಿಗೆ ಜೀವ ಹಿಡಿದು ಬದುಕುವಂತೆ ಎಲ್ಲ ಪ್ರಯತ್ನ ಮಾಡಿರುವ ಮೂವರು ಹಿಂದೀಯರನ್ನು ಹೊರಗೋಡಿಸುವುದಕ್ಕೆ ಕೃತಪ್ಪತ್ನತೆ ಯೆಂದೋ ಅಮಾನುಷ ಕೃತಿಯೆಂದೋ ಕರೆಯಬೇಡವೆ? ಇಂಡಿಯಾ ಸರಕಾರವೂ ಈ ಹಿಂದೀಯರ ಬಗೆಗೆ ಯಾವ ಸೇನ್ಸ್ ಗಾರ್ಡುಗಳನ್ನು ಮಾಡಿರುವುದು?

ಅಲ್ವಾರ್ ಮಹಾರಾಜರ ದೊರು.

ಇವರ ರಾಜ್ಯದಲ್ಲಿ ದಂಗೆಯಾಯಿತು ಕಾಂತಿಯಾಗುವರೆಗೆ ಇಂಗ್ಲಿಷ್ ಅಧಿಕಾರಿಗಳೇ ಸದ್ಯಕ್ಕೆ ಆಳಬೇಕಾದಾಯಿತು ಮಹಾ ರಾಜರು ಎರಡು ವರ್ಷಗಳ ವರೆಗೆ ವಿದೇಶಗಳಲ್ಲಿ ಸಂಚರಿಸ ಬೇಕೆಂದಾಯಿತು ಮಹಾ ರಾಜರೂ ಇಂಗ್ಲೆಂಡಿಗೆ ನಡೆದರು ತನ್ನ ಪರಿಸ್ಥಿತಿಯನ್ನು ಸಮ್ಮಾಟರ ಸಮ್ಮುಖದಲ್ಲಿ ಇಡುವೆನೆಂದರು ಈಗ ಅಲ್ಲಿ ಕೆಲ ವಿಷಯಗಳನ್ನು ಪ್ರಕಟಿಸಿರುವಂತೆ ವಾರ್ತೆ "ಇನ್ನೂ ದೇಶಗಳೆನ್ನೆಲ್ಲ ಒಂದು ಕೂಡಿಸುವ ಹಂಚಿಕೆ ಯಾಗುತ್ತಲಿದೆ. ಅಫಘಾನಿಸ್ಥಾನ, ವಾಯವ್ಯ ನಾಡು, ಸಂಸಾ ಬುಗಳನ್ನು ಮೆಲ್ಲನೆ ಒಂದಾಗಿಸುವರು ಎರಡು ವರ್ಷಗಳ ಹಿಂದೆಯೆ ಇಂಡಿಯಾ ಸರಕಾರಕ್ಕೆ ತನ್ನ ರಾಜ್ಯದಲ್ಲಿನ ಮುಸ್ಲಿ ಮರು ತಂಟೆ ಮಾಡಬಹುದಾಗಿ ತಿಳಿಸಿದನು ವೈಸರಾಯರು ಸೂಚಿಸಿದಂತೆ, ನೆನ್ನೆ ಹಿಂದೂ ದಿವಾನನನ್ನು ನಿಲ್ಲಿಸಿದೆನು ಸೆರಕಾರವು ಸೂಚಿಸಿದಂತೆ ಮಾಡಿಜರುತ್ತಿರುವುದೊಳಗೆ ಕರ್ನಲ ಇಬೆಟ್ಸನರನ್ನು ಸ್ಪೆಶಲ್ ಕಮಿಶನರೆಂದು ನೇಮಕ ಮಾಡದೇ ಕೆಂದರು ನಾನು ಒಂದು ಕಮಿಟಿಯನ್ನು ನೇಮಿಸಿ, ಎಲ್ಲಿ ಷಳವಳಗಳನ್ನು ವಿಮರ್ಶೆ ಮಾಡಿಸಿದನು ಅವರ ರಿಪೋರ್ಟನ್ನು ನೋಡಿ ಸಹ ಹಾಕುವುದರೊಳಗೆ ಎರಡು ವರ್ಷಗಳ ತನಕ ಪರ ದೇಶಕ್ಕೆ ಹೋಗಬೇಕಾಗಿ ಇಪ್ಪತ್ತನಾಲ್ಕು ತಿಂಸು ವಾಯಿದೆ ಕೊಟ್ಟು ನನಗೆ ನೋಟೀಸು ಕೊಟ್ಟರು ಎಂಬುದು ಅವರ ಹೇಳಿಕೆಯ ಸಾರಾಂಶವೆಂದು ಲಂಡನಿನಿಂದ ಒಂದು ಪತ್ರಿಕೆಯ ವಾತ್ಮಿದಾರನು ಬರೆವನು ಮೂಲಾಧಿಕಾರಿಗಳಾಗಿ ಶಾಶ್ವತ ರಾಜರಾಗಿರುವಂತೆ ರಕ್ಷಣೆ ಹೊಂದಿರುವ ರಾಜರುಗಳ ವಿಶಿ ಎಪರಾಸಗಳನ್ನು ಇಲ್ಲಿ ತಿಳಿಯಬೇಡವೆ?

NOTES... ನೋಟಗಳು.

ಮಹಾತ್ಮರನ್ನು, ಲೋಕಮಾನ್ಯ ತಿಲಕರ ಕಂಚಿನ ಪ್ರತಿಮೆಯನ್ನು ಅನಾವರಣಗೊಳಿಸಲು ಆಮಂತ್ರಿಸಿದ್ದರು. ಅಂದೇ, ಮಹಾತ್ಮರಿಗೆ ಅವರ ಶಿಷ್ಯರೂ ಆವರಣಗೊಳ್ಳಲು ಆಮಂತ್ರಣ ಹೊಂದಿದರು

* * * *

ಸೊನ್ನೆಯನ್ನು ಸಿಂಗಾರವಾಗಿರಿಸುವ ಶ್ರಮವನ್ನು ಮೆಳ್ ಡೊನಲ್ಡರೇ ಬಲ್ಲರು ಆಡಂಬರದ ಪರಿವತ್ತಿನಿಂದ ದೊರೆತ್ತುದು ಸೊನ್ನೆ ಮಾತ್ರ, ಆದರೂ ಜಗತ್ತಿನ ಧಾವೀ ಪರಿಣಾಮಕ್ಕೆ ಅತ್ಯನುಕೂಲವಾದ ಪರಾಮರ್ಶೆಗಳಾದುವು ಎಂದು ಅವರ ಸಂತೋಷದ ನುಡಿ

* * * *

ಮುಖ್ಯ ಜನಾಂಗಗಳಲ್ಲವ್ವ ಖಜಂನೆಯಲ್ಲಿ ಸೊನ್ನೆಯನ್ನೆ ಕಾಣುತ್ತಲಿವೆ. ಆದರೆ, ಆದರ ಮೊದಲು ಕೆಲವು ಅಂಕೆಗಳನ್ನು ಇರಿಸಿದರೆ ಸುಬವಾಗುವುದಾಗಿ ಪರಿವತ್ತು ಕೂಡಿಸಿದರು

* * * *

ಅಂಕೆಗಳು ಇನ್ನೂ ತಯಾರಾಗಿಲ್ಲ ಸೊನ್ನೆ ಹಾಗೆಯೆ ಉಳಿದರೂ, ಅಂಕೆಗಳು ಮುಂದೆ ಸೂತೀವ್ರ ಎಂದೇ ಧರವಸೆ ಹೇಳಿ, ಪರಿವತ್ತು ಮುಗಿಯಿತು

* * * *

ಕಾಯಿದೆಗೆ ವಿರೋಧವಾದುದೆಂದು ಕೊಂಗ್ರೆಸ್ ಕೂಟಗಳನ್ನು ಸರಕಾರವು ಬರ್ಡಿನೆನ್ನುಗಳಿಂದ ಮುರಿಯಿತು ಮುಕ್ತ ಕಾರ್ಯಸ್ಥಾನಗಳಾಗಿ ಕೊಂಗ್ರೆಸ್ ಕೂಟಗಳು ಇಡಬಾರದಾಗಿ ಆಜ್ಞೆಯಾಯಿತು ಅವನ್ನು ಮುರಿದರು ಆದರೂ ಸರಕಾರಕ್ಕೂ ಆಜ್ಞೆಯವರಿಗೂ ಸ್ನೇಹಾಚಾರವಿರಬಾರದೆ? ಇಬ್ಬರ ಧ್ಯೇಯವು ಒಂದೇ

* * * *

ಹೋರಾಂಭ ಧೀರರಿಲ್ಲ ಎಂದೇ ನಮ್ಮ ಪ್ರತಿನಿಧಿಗಳು ಅವರನ್ನು ಕೊಂಡಾಡಿದರು ದೇಶಕ್ಕೆ ಕಾಸಿನ ಪ್ರಯೋಜನ ಕಾರದೆ, ಪ್ರತಿನಿಧಿಗಳಾದು ಅಲ್ಲಿಗೆ ಹೋಗಿ ಮರಳುವ ನಮ್ಮ ಪ್ರತಿನಿಧಿಗಳಂತಹ ಧೀರರು ಲೋಕದಲ್ಲಿ ಕಲುವರೇ

* * * *

ಅಖಿಲ ವಿಶ್ವದ ಡೊಲ್ಲರು ವ್ಯಯಿಸಿ, ಎರಡು ವರ್ಷ ಗಳೊಳಗೆ ಹೊಸ ಯುದ್ಧನಾವೆಗಳನ್ನು ತಯಾರಿಸ ಬೇಕಾಗಿ ಅಮೇರಿಕವು ಸೆಂಟ್ಸನ್ ಮಾಡಿರುವುದು ಯುದ್ಧತ್ಯಾಗದ ಪರಿಷತ್ತುಗಳಿಂದೇನು ಫಲವಾಯತ ?

* * * *

ಬೇಡ, ಬೇಡ,— ಡಾಣ! ಎಂದರೆ ವಿಲಾಯತಿಯ ಸರಕಾರಗಳು ಮತ್ತೂ ಯುದ್ಧತ್ಯಾಗ ಮಾಡಿಲ್ಲವಾದ ಕಾರಣ, ನಾವು ಅವರೆಲ್ಲರಿಗೆ ಮಿಗಿಲಾಗಿ ಯುದ್ಧ ಸನ್ನಾಹ ಮಾಡದೇ ಕೆಂದೇ ಅಮೇರಿಕದ ಟೀಕೆ

* * * *

ಅಮೇರಿಕವು ಹೀಗೆ ಬಲಕಾಲಿಯಾಗುವುದನ್ನು ನೋಡಿಯೇ ಮಿಕ್ಕ ಸರಕಾರಗಳು ಇನ್ನಾದರೂ ಯುದ್ಧ ಕಾಲದಿಂದೀಚೆಗೆ ಕರಾರು ಬರಕೊಂಡು, ಅಮೇರಿಕವು ತಯಾರು ಮಾಡುವ ಹಡಗುಗಳನ್ನೆಲ್ಲ ಸಮುದ್ರದಲ್ಲಿ ಮುಳುಗಿಸುವಂತೆ ಮಾಡುವರೋ ನೋಡಬೇಕು

* * * *

ಮೇಲ್ಕಾಣಿ ವಾದಿಯ ೩ನೇ ಪ್ರತಿವಾದಿ ಕಾಟಿಕುಳ್ಕೆ ಗ್ರಾಮದ ಕೆಜೇಕಾರು ಶಂಕರನಾರಾಯಣ ಭಟ್ಟರ ಮಗ ಮಹಾಬಲ ಭಟ್ಟರಿಗೆ ಕೈಪಿಯತ್ತು ನೋಟೀಸು ಜಾರಿ ಬಗ್ಗೆ ಹುಕುಂ ಆಗಿ ತಾ. 29—8—38ಕ್ಕೆ ತನ್ನಿಗೆ ಇಟ್ಟಿರುತ್ತದೆ. ಆ ಪ್ರಕಾರ ಆ ವ್ಯಾದಿಗೆ ಆತನು ಕೋರ್ಟು ಮುಂದೆ ಹಾಜರಾಗದಿದ್ದರೆ ಆತನನ್ನು ತಿರ್ಮಾ ಮಾಡಲಾದೀತೆಂತ ಈ ಮೂಲಕ ತಿಳಿಸೋಹಾಗುತ್ತದೆ

ಪುತ್ತೂರು, } ಸವೂರ ಆನಂದರಾವ್,
ತಾ. 4-8-'33 } ವಾದಿರ ಕಡೆ ವಕೀಲ್.

ವಿಷಯಸೂಚನೆ.

ಅಗ್ರಲೇಖ ೧

ಹಿಂದೂಮತಿಗೆ ನೂತನ ಆದರ್ಶ ೪

ಸ್ವದೇಶಾಭಿಮಾನಗಳು ೬

ಸೋಜಿಗಳು ,,

ವರ್ತಮಾನ ಸಂಗ್ರಹೆಗಳು—

ಒಳದೇಶ ವರ್ತಮಾನ ವಿದೇಶ ವರ್ತಮಾನ, ೮

ವಿವಿಧ ಸಮಾಚಾರಗಳು ೧೧

"ಕೋಲೆಯ ಕಬ್ಬೆ"!!!(?) ೩

ಸ್ವಲ್ಪ ಸೋಜಿಗದ ಬಾತು! ೪

ದೇಶೀಯ ಕನ್ಯಾಶಾಲೆ—ಮಂಗಳೂರು, ಸುರತ್ಕಲ್, ಬಂಟ್ವಾಳ ಮತ್ತೂರು, ಕಾಸರಗೋಡು. ೯

ದೇಶೀಯ ಕನ್ಯಾಶಾಲೆಯ ಬಾಯಿಯವರನ್ನು ಹಿಡಿದಳು!! ೧೦

ಪತ್ರಿಕೆಯ ವಿಚಾರ ೧೩

ಮುದುವೆಯ ಸುಧಾರಣೆ ೧೪

ಮಹಾತ್ಮಾಜೀಯವರಿಗೆ ಒಂದು ವರ್ಷದ ಸಾದಾ ಸಜೆ ! ೧೫

ಸ್ವದೇಶಾಭಿಮಾನಿ.

ತಾ. ೧೧ನೇ ಶುಕ್ರವಾರ ಆಗೋಸ್ತು ೧೯೨೨.

ಹಿಂದೂವಿಗೆ ನೂತನ ಆದರ್ಶ.

ಪ್ರತಿಯೊಂದು ಮತದಲ್ಲಿಯೂ ಅವರವರ ಸಾಧು ಸಂತರ ಪೂಜನ ಮಾಡುವುದು ಪದ್ಧತಿಯಿದೆ ಆದರೆ ಹಿಂದೂ ಮತದ ಸಂತರಿಗೂ ಇತರ ಮತದ ಸಂತರಿಗೂ ಬಹಳ ತಾರತಮ್ಯವಿದೆ ಇತರ ಮತದ ಸಂತರ ತತ್ವಗಳು ಗಹನವಾದುವುಗಳಲ್ಲ ಸಮಾಜದ ಸ್ಥೂಲ ಸೂತ್ರಗಳನ್ನೂ ಸಮಾಜದ ಐಹಿಕ ಆವಶ್ಯಕತೆಗಳನ್ನೂ ಮೀರಿ ಹೋದವರಲ್ಲ ಆದುದರಿಂದ ಅವರ ಪೂಜೆಯು ಅಂತಹ ಮತಗಳಿಗೆ ಬಹಳ ಸಹಾಯವನ್ನೇ ಮಾಡಿಕೊಟ್ಟಿದೆ ಅವರಿಂದ ಸಮಾಜದ ವ್ಯವಸ್ಥೆಯು ನಿಂತಿದೆ, ಸಮಾಜದೊಳಗಿನ ಅಸ್ಕೋಸ್ಯವನ್ನು ಹೆಚ್ಚಿರುತ್ತದೆ ಮತ್ತು ಸಾಂಸಾರಿಕನಿಗೆ ಆ ಮೂಲಕ ಬಹಳ ಸಹಾಯವೂ ದೊರಕಿರುತ್ತದೆ

ಆದರೆ ಹಿಂದೂಮತದ ಸಾಧುಸಂತರ ಜೀವನ ತತ್ವಗಳು ಅವರ ತತ್ವಗಳಂತಲ್ಲ ಅವು ಗಹನವಲ್ಲದುವು ಅವು ಸಾಮಾನ್ಯನ ಜ್ಞಾನವನ್ನೂ, ಸಾಮಾನ್ಯನ ಶಕ್ತಿಯನ್ನೂ ಮೀರಿರುವಂತಹವು ಸ್ವತಃ ಹಿಂದೂ ತ್ಯಾಗಿಯ ಸ್ವಲ್ಪ ಉಚ್ಚ ತತ್ವಾಪೇಕ್ಷೆಯನ್ನು ಇತರ ಮತದಲ್ಲಿಲ್ಲ ಆದರೆ ಆ ಶ್ರೇಯ ಸ್ಸು ಅವನ ಮಟ್ಟಿಗೆ ಅಯತೇ ಹೊರತು ಸಾಮಾನ್ಯನಿಗೆ ಅದರಿಂದ ಹೆಚ್ಚಿನ ಪ್ರಯೋಜನವಿಲ್ಲ ಅವನ ತತ್ವವು ಸಂಸಾರವನ್ನು ಬಿಡುವಂತಹುದು, ಪರಮಾರ್ಥವನ್ನು ಇಚ್ಛಿಸುವಂತಹುದು ಸಾಮಾನ್ಯ ಮನುಷ್ಯನ ಕಷ್ಟಸುಖಗಳಲ್ಲಿ ಅವನ ತತ್ವವು ಸಹಾನುಭೂತಿಯನ್ನು ತೋರಿಸುವುದಿಲ್ಲ ಸಾಂಸಾರಿಕನ ಸಮಸ್ಯೆಗಳಿಗೆ ತತ್ವಜ್ಞಿಕನ ಉತ್ತರವೊಂದೆ—ಸಂಸಾರವು ತ್ಯಾಜ್ಯಾರ್ಹವಾದುದೆಂದು

ಈ ತತ್ವವು ಎಷ್ಟೇ ಗಹನವಿದ್ದುದಾದರೂ ಹಿಂದೂಮತವು ಹಿಂದು ಸಮಾಜವಾಗಿ ಅಸ್ತಿತ್ವದಲ್ಲಿ ಇರಲು ಸಹಕಾರಿಯಾಗುವುದಿಲ್ಲ ನಮ್ಮ ಸಾಧುಸಂತರು ಸಂಸಾರಿಗಳಿಗೆ ಹಲವು ಹಿತಬೋಧೆ ಮಾಡಿರುವರಾದರೂ, ಅದರೊಳಗಿನ ಸಂಸಾರದ ವಿರಕ್ತಿಯು ಇದ್ದೇ ಇದೆ ಈ ತರದ ತತ್ವಗಳು ಸಮಾಜವನ್ನು ವ್ಯವಸ್ಥೆಗೊಳಿಸಲಿಕ್ಕೆ ಸಾಕಾಗಲಾರವು ॥

ಆದರೆ ಹಿಂದೂ ಸಂನ್ಯಾಸಿಗಳ ಈ ವರೆಗಿನ ಜೀವನದ ಆದರ್ಶವು ಇಂತಹ ವಿರಕ್ತರೇ ಆಗಿದ್ದಾರೆ ಸಾಧುಸಂತರ ಜೀವನ ಚರಿತ್ರೆ, ಮಜಾತ್ಮರ ಉಪದೇಶಗಳು ಇತ್ಯಾದಿಗಳೇ ಸಂಸಾರದ ವಿಷಾದ ಸಮಯದಲ್ಲಿ ಹಿಂ ಸಿ-ನ ಕಥನದ ವಿಷಯಗಳಾಗಿವೆ ಅದರಲ್ಲೂ, ಶ್ರೀ ರಾಮತೀರ್ಥ, ರಾಮಕೃಷ್ಣ ಪರಮಹಂಸರಿತ್ಯಾದಿ ಮಹಾತ್ಮರ ನಂತರ ಈತ್ತಮ ವರ್ಗದ ಸನ್ಯಾಸಿಗಳು ಉಂಟಾಗಿ ವಿರಕ್ತಿಯನ್ನು ಪ್ರಸರಿಸುತ್ತಿದ್ದಾರೆ ಸ್ವಾಮಿಗಳಾ ಅಭೇದಾನಂದ, ವಿತ್ತಾನಂದ ಇತ್ಯಾದಿಯವರ ಉಪದೇಶಗಳೂ ತತ್ವಗಳೂ ರಾಶಿಗಟ್ಟಲೆಯಾಗಿ ಹೊರಬರುತ್ತಲೇ ಇವೆ

ಆದರೆ ಈಗಿನ ಸಂದಿಗ್ಧ ಸಮಯದಲ್ಲಿ, ಈಗಿನ ನಮ್ಮ ಅಸ್ತಿತ್ವವೇ ಕಷ್ಟವಾಗಿರುವ ಸಮಯದಲ್ಲಿ ನೆಮ್ಮ ಸಾರಮಾರ್ಥಿಕ ತತ್ವಗಳು ನಮಗೆ ಸಹಕಾರಿಯಾಗಲಾರವು. ಪ್ರತಿಯೊಬ್ಬ ಅಸ್ಪೃಶ್ಯನಿಗೆ Hero worship ಅಂದರೆ ವೀರೋಪಾಸನೆಯು ಹಿಂದೂವಿಗೆ ಅಗತ್ಯ ಅಪ್ರತಿಮ ಚೈತನ್ಯವೇ ತಮ್ಮ ಆದರ್ಶವಾಗಿರಬೇಕು, ಸಂಸಾರದ ದೃಢತೆಯೇ ನಮ್ಮ ತತ್ವವಾಗಿರಬೇಕು ಹಿಂದೂಮತದ ಪ್ರತಿ ಅಕ್ಷರದಲ್ಲಿಯೂ ತಲೆದೋರುತ್ತ ಮತ್ತು ಹೊಗಳಲ್ಪಡುವ ಸಾತ್ವಿಕತೆಯ ಸುಗುಣವು ತ್ಯಜಿಸಲ್ಪಡಬೇಕು, ಪ್ರತಿ ಹಿಂದೂವು ರಾಜಸ ಗುಣವೃತ್ಯನಿಗಾಗ ಬೇಕು, ಮತ್ತು ಹಿಂದೂವೆಂಬ ಸಮುಸ್ಪಿಯ ನ್ಯಾರ್ಥದಿಂದ ಹಿಂದೂವಿನ ಎದೆಯು ಉಬ್ಬಿ ಸ್ವಂಧಿಸಬೇಕು

ನಮ್ಮ ಜೀವನವು ನೆಲೆಯಿಲ್ಲದ ತತ್ವಗಳಿಂದಲೇ ಹೀಳಾಯಿತು ಏಹಿಕರೆನ್ನುವ ಪಾಶ್ಚಾತ್ಯರಾಷ್ಟ್ರ ಕೂಡ ಉಚ್ಚ ಧಾವನೆಗಳಾಗಲಿ, ಸಮಾಜ ಸೇವಾತುರವಾಗಲಿ, ಆತ್ಮಬಲಿಯ ಧೈರ್ಯವಾಗಲಿ, ತಾತ್ಪಿಕರಾದ ನಮ್ಮಲ್ಲಿಲ್ಲ ಏಕೆಂದರೆ, ನಮ್ಮ ಜೀವನವು ಅನಸುಕರಣೀಯವಾವ ತತ್ವಗಳ ಮತ್ತು ಅಸಹನೀಯವಾದ ತಾಪತ್ರಯಗಳ ವಿಚಿತ್ರ ಸಂಯೋಗವಾಗಿರುತ್ತದೆ ಅಂತಹ ಜೀವನದಲ್ಲಿ ವಿಚಾರದಲ್ಲಿ ಮೌಢ್ಯವೂ, ಆಚಾರದಲ್ಲಿ ಮಿಥ್ಯೆಯೂ, ಉಂಟಾಗುವುದು, ಹೀಗೆಯೇ ಉಂಟಾಗಿರುತ್ತದೆ

ಮಹಾತ್ಮಾಗಾಂಧಿಯವರೂ ರಾಜಕೀಯ ತತ್ವಗಳೊಡನೆ ಮತತತ್ವಗಳನ್ನು ಬೆರೆಸಿ ರಾಜಕೀಯ ಕೃತ್ಯಗಳನ್ನ ಅಸಾಧ್ಯವಾಗಿ ಮಾಡಿದರು ಈ ವಿಷಯವೂ ಹಿಂದೂಗಳ ತತ್ವ ವಿಚಾರದಲ್ಲಿ ಬಹಳ ಗೊಂದಲವುಂಟಾಗಿಯದೆಂದು ಹೇಳ ಬಹುದು ಇಂತಹ ಗೊಂದಲವನ್ನು ಧೈರ್ಯದಿಂದಲೂ ಸಾಧನೆಯಿಂದಲೂ ನಿವಾರಿಸುವುದು ಅತ್ಯವಿರುತ್ತದೆ

ಹಿಂದೂಗಳಿಗೆ ವೀರೋಪಾಸನೆಯು Hero worship ಅಗತ್ಯವಿದೆ ಅದು ಸನ್ಯಾಸಿಗಳದ್ದಲ್ಲ, ಸಾಧುಗಳದ್ದಲ್ಲ, ಸಾಂಸಾರಿಗಳದ್ದು ಜೀವನಪೂರ್ವಕ ಸಂಸಾರದ ತಾಪತ್ರಯಗಳಲ್ಲಿ, ಏಹಿಕದ ಜಯ ಪರಾಜಯಗಳಲ್ಲಿ, ಸಮಷ್ಟಿಯ ವಿಶಾಲ ಸ್ವಾರ್ಥದಲ್ಲಿ, ಕಾದಾಡಿ, ಕ್ರಮಿಸಿದವನದ್ದು ಹಿಂದೂಗಳ ತಮ್ಮ ಈಗಿನ ಜೀವನಹೀನವಾದ, ನಿರಾಕರಣೆಯ (negative) ಆದರ್ಶವನ್ನು ತ್ಯಜಿಸಬೇಕು ಏಹಿಕದಲ್ಲಿ ಪರಮಾರ್ಥವನ್ನೂ, ಸ್ವಾರ್ಥದಲ್ಲಿ ಪರಾರ್ಥವನ್ನೂ, ಕಾಣುವ ಆದರ್ಶವು ಹಿಂದೂಗಳದ್ದಾಗಬೇಕು ಇಲ್ಲವಾದರೆ ಹಿಂದೂಗಳು, ತಮ್ಮ ಸ್ವಾರ್ಥವನ್ನೂ ಪರಮಾರ್ಥವನ್ನೂ ಕಳಕೊಳ್ಳುವುದರಲ್ಲಿ ಸಂಶಯವಿಲ್ಲ

Stop-Press.

ಅಹ್ಮದಾಬಾದಿನ ಸಬರ್ಮತಿ ಜೈಲಿನೊಳಗೆ ಶ್ರೀಮತಿ ಕಸ್ತೂರಿಬಾಯಿ ಯವರ ನ್ಯಾಯ ವಿಚಾರಣೆಯು ನಡೆಯಿತು ಅವರು ಖಾಸಗಿ ಕೋಣೆಗೆ ತೊಡಗಿಸಲು ಹೌದೆಂದು ಒಪ್ಪಿದರು "ನಿಮ್ಮ ವೃತ್ತಿಯೇನು" ಎಂದು ಮೆಜಸ್ಟೇಟರು ಕೇಳಿದ್ದಕ್ಕೆ ಅವರು ನಗುತ್ತಾ "ನಿಮಗೆ ತಿಳಿದಿಲ್ಲವೇ?" ಎಂದು ಪ್ರಶ್ನಿಸಿದರು ನ್ಯಾಯ ವಿಚಾರಣೆಯಾಗಿ ಅವರಿಗೆ ೬ ತಿಂಗಳ ಸಾದಾ ಸಜೆಯು ವಿಧಿಸಲ್ಪಟ್ಟಿತು

ಮುದ್ರಾಸಿನ ಕೊರ್ಪರೇಶನ್ ಕೌನ್ಸಿಲಿನವರು ಗಾಂಧಿಜೀಯವರ ಬಂಧನ ಸಂಬಂಧವಾಗಿ ಮುಹಾಪ್ರದರ್ಶನ ಮಾಡಿ ತಮ್ಮ ಕಾರ್ಯವನ್ನು ಹಿಂದಕ್ಕಿಕ್ಕಿದರು ಸರಕಾರ ಕೊಂಗ್ರೆಸ್‌ಗಳೊಳಗೆ ಶಾಂತಿಯನ್ನುಂಟು ಮಾಡಬ್ಬ ಸರಕಾರವು ಒಪ್ಪದಿದ್ದುದಕ್ಕಾಗಿ ಸಂತಾಪ ಪಡಲಾಯಿತು ॥ ಈ ಸಭೆಯೂ ತೀರ್ಮಾನಿಯವರು ಇದಕ್ಕೆ ಕಾರಣ

ಕಾರವಾರಿನ ಡಿಪ್ಟಿಕ್ಟ್ ಮೇಜಿಸ್ಟೇಟರ ಆಜ್ಞೆಯಂ ಮೇರೆಗೆ ಬೆಂಗಳೂರಿನಲ್ಲಿ ॥ ಎಸ್ ವೆಂಕಟಪತಯ್ಯ (ಎಡ್ವೋಕೇಟ್ ಮತ್ತು ಮುನಸಿಪಲ್ ಕೌನ್ಸಿಲರ್) ಇವರು ಕಂದಾಯ ನಿರಾಕರಣೆಯ ಕುರಿತು ಪತ್ರಗಳನ್ನು ಪ್ರಕಟಿಸಿರುವರೆಂಬ ಅಪಾದನೆಗಳಿಗಾಗಿ ನೆರೆ ಹಿಡಿಯಲ್ಪಟ್ಟಿರು

ಶ್ರೀಮತಿ ಮಹದೇವ ದೇಸಾಯಿಯವರಿಗೂ ಮಿಸ್ ಕಂಡಿಕ್ ಎಂಬವರಿಗೂ ೩ ತಿಂಗಳ ಕಠಿಣ ಸಜೆಯು ವಿಧಿಸಲ್ಪಟ್ಟಿತು

ಅಯರ್ಲೆಂಡಿನಲ್ಲಿ ಜನರಲ್ ಒಡಫ್ಲಿಂಯವರು ತಾನು ಫ್ರೀಸ್ಟೇಟ್ ಸೈನಿಕ ಗಾರ್ಡಿನ ಪೆರೆಡನ್ನು ನಡೆಸಲಿರುವೆನೆಂದು ಪ್ರಕಟಿಸಿದ ಕಾರಣ ತುಂಬಾ ಕ್ಷೋಭೆಗೆ ಕಾರಣವಾಗಿರುತ್ತದೆ ಕಮ್ಯೂನಿಸ್ಟರು ಪೆರೆಡಿನಷ್ಟಿರಿಗೆ ಗುಂಡಿಕ್ಕಿಯಲಿರುವರೆಂದು ತಿಳಿದುಬಂದಿದೆ.

ಕ್ಯೊಂಟ್ ಸಿಲೆಕ್ಟ್ ಕಮಿಟಿಯಲ್ಲಿ ಸರ್ ಸಾಮುವೆಲ್ ಹೋರರ ಸಾಕ್ಷ್ಯವು ನಡೆಯಿತು ಕ್ಷೇತಪತ್ರದ ಸುಧಾರಣೆಗಳು ಹಿಂದೂ ಸ್ಥಾನಕ್ಕೆ ದೊರೆಯುವಂತಿದೆ

ಶ್ರೀ ಎಂ. ಎಸ್ ಆಣೆಯವರು ಜಂಗ್ಲಿ ಕಾನೂನನ್ನು ತಾ. ೧೫ನೇ ದಿನ ಮುರಿಯಲಿರುವನೆಂದು ಸರಕಾರಕ್ಕೆ ಬರೆದಿರುವರು

ಲಾಹೋರಿನಲ್ಲಿ ಲಾಫ್ ಚಾರ್ಜ್ ಮಾಡಿ ಒಬ್ಬ ವರ್ಷಕನ್ನು ಕೊಂದ ಮಂಗತ್ರಾಂ ಎಂಬ ಸಿ ಐ ಡಿ ಕಾನ್ಸ್ಟೆಬಲಿಗೆ ಮೂವರು ವರ್ಷದ ಕಠಿಣ ಸಜೆಯಾಯಿತು

ಒಳದೇಶ ವರ್ತಮಾನ

ಮುಂಬಯಿಯಲ್ಲಿ ॥ ಅದಿದಾಲಿ ಜಕರ್ ಖಾ ॥ ಮಹಮ್ಮದ್ ಪೀನ್ ಬೆನ್ ಕಫ್ಲನ್ (ದಾದಾ ಖಾ ನವಕೋತ್ಥಯವರ ಮೊಕ್ಕದ್ದಮೆಗಳು) ಮೊನ್ನೆ ಅರು ಮಂದಿಗಳು ಮುಂಬಯಿ ಶೇಷಾ ಮೂರ್ಟಿನಲ್ಲಿ ವಿಚಿಟಿಂಗ್ ನಡೆಸಿದುದಕ್ಕಾಗಿ ನೆರೆ ಹಿಡಿಯಲ್ಪಟ್ಟಿದರು ಶ್ರೀಮತಿ ಪರಿನರು ಖಾನು ಸಭೆಪರಾಧಿಯೆಂದೂ, ದೇಶದ್ರೋಹವು ಎಂದೂ ಪ್ರೊಸಿಕ್ಯೂಟರ್ ಜೇಥವರು ಅವರಿಗೆ ಮೂಕು ತಿಂಗಳ ಸಾದಾ ಸಜೆ ವಿಧಿಸಲಾಯಿತು.

ಮುಂಬಾಯಿಯಲ್ಲಿ ಕೈದುಮಾಡಲ್ಪಟ್ಟವರಲ್ಲಿ ಶ್ರೀಮತಿ ಮಂಜ ಬೆನ್ ಘುಲ್ಲಿ ಎಂಬ ಮೃತ್ಯೆಯಿಬ್ಬರೊಡನೆ ಮೇಜಸ್ಟ್ರೇಟರು ತಪ್ಪನ್ನೊಪ್ಪಿ ಮುಂದಕ್ಕೆ ಜಳಪಳಕ್ಕೆ ಸೇರುವುದಿಲ್ಲವೆಂದು ಬರೆದು ಕೊಡಬಹುದೋ ಎಂದು ಕೇಳಿದುದಕ್ಕೆ ಆ ಸ್ತ್ರೀಯು ತಾನು ಹಾಗೆ ಮಾಡಲಿಕ್ಕಿಲ್ಲವೆಂದೂ ತನ್ನನ್ನು ದಿಡುಗಡೆ ಮಾಡಿದರೆ ತನ್ನ ಧರ್ಮವಾದ ವಿಚಿಟಿಂಗನ್ನು ಕೂಡಲೇ ನಡೆಸುವೆನೆಂದು ಹೇಳಿದರು

ವಿದೇಶೀ ವಸ್ತ್ರವನ್ನು ಮಾರಾಂಟ ಮಾತಬೇಡಿರೆಂಬು ಸೋಟೆಸ್ಸ ಹಂಚಿದ ಕರ್ಮಕೆಂಬಲದಿಗೆ ಮುಂಬಾಯಿಯಲ್ಲಿ ಅರು ತಿಂಗಳ ಸಾದಾ ಸಜೆಯಾಯಿತು.

ಅಮರಾವತಿಯಲ್ಲಿ ವೈಯಕ್ತಿಕ ಕಾನೂನುಲ್ಲಂಘನೆಯನ್ನ ಕಂಡಾ ನಬ್ಬಲಾರದ ॥ ವೀರ ವಾಮನರಾವ್ ಜೋಶಿಯೆಂಬವರು ಡಿಸ್ಟ್ರಿಕ್ಟ್ ಕೌಂಗ್ರೆಸ್ ಕಮಿಟಿಯ ಅಧ್ಯಕ್ಷತನಕ್ಕೆ ರಾಜಿನಾಮೆಯನ್ನು ತ್ತಿರುವರು

ಕಲ್ಕತ್ತದಲ್ಲಿ ಕ್ರಾಂತಿಕಾರಕ ಪಂಗಡದ ಒಬ್ಬ ಬಂಗಾಳೀ ಯುವಕನನ್ನು ನೆರೆ ಹಿಡಿದಿರುತ್ತಾರೆ

ಮದ್ರಾಸ್ ಸಂಸ್ಥಾನದಲ್ಲಿ ಕಾಯದೆಭಂಗ ಮಾಡಿ ಜುಲಾಯಿ ತಿಂಗಳಲ್ಲಿ ನೆರೆಯನ್ನನುಭವಿಸುತ್ತಿದ್ದವರ ಸಂಖ್ಯೆಯು ಈಗ ೩೮೪ಕ್ಕೆ ಬಂದಿರುತ್ತದೆ ಇವರಲ್ಲಿ ೩೦ ಮಂದಿಗಳು ಸ್ತ್ರೀಯರು.

ಮಧುರಾ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರ ಮೇಲೆ ಅವಿಶ್ವಾಸದ ಕರಾವು ಮುಂದಾಗಲಿದೆಯೆಂದು ತಿಳಿದುಬಂದಿದೆ

ಮುಂಬಯಿಯಲ್ಲಿ ರೋಬರ್ಟ್ ಬ್ಲಿನ್ ರೀಲ್ ಟ್ರಾಂಡ್ ಮತ್ತು ಮಫ್ಲಾಂಡ್ ಎಂಬವರು ಕಾಶಾ ಮಹಲ್ ಹೋಟೆಲಿನಲ್ಲಿರುವ ನವಾ ನಗರದ ಮಹಾರಾಜರಿಂದ ತಾವು ವೈಸರಾಯರ ಪ್ರೈವೇಟ್ ಸೆಕ್ರಿಟರಿಯ ಪ್ರತಿನಿಧಿಗಳೆಂದು ರೂ ೩೦೦೦ನ್ನು ಕಡದು ಮೋಸಗೊಳಿಸಿದ ರೆಂದು ತಿಳಿದುಬಂದ. ನೆರೆಹಿಡಿಯಲ್ಪಟ್ಟಿರುವರು

ಮದುರೆಯಲ್ಲಿ ಶ್ರೀಮತಿಗಳಾ ಪ ಲಕ್ಷ್ಮಿ ಅಮ್ಮಾಳ್ ಮೊದಲಾದ ಪ್ರಸಿದ್ಧ ಸ್ತ್ರೀಯರು ತಾವು ವಿಚಿಟಿಂಗನ್ನು ನಡೆಸುವೆವೆಂದು ಡಿಸ್ಟ್ರಿಕ್ಟ್ ಮೇಜಸ್ಟೇಟರಿಗೆ ಬರೆದಿರುವರು.

ಏಂ ಎಲ್ ಸಿ ಗಳ ಡೈಲಿ ವಿಚಿಟ್ಟೆಂಡನ್ಸ್‌ಗಳನ್ನು ರೂಪಾಯಿ ಕಿರಿದ ೧೦೯೬ ನೆರೆಸಬೇಕೆಂದು ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ನಿರ್ಧಾರವಾಗಿರುತ್ತದೆ

ದಾ ಅನ್ನಾರಾಯವರು ಆರೋಗ್ಯ ಸಂಪಾದನೆಗಾಗಿ ಯುರೋಪಿಗೆ ತೆರಳಿರುವರು ವೈಸರಾಯರು ಗಾಂಧಿಜೀಯವರಿಗೆ ಭೇಟಿ ಕೊಡದಿರುವುದು ದುರದೃಷ್ಟಕರವೆಂದು ಅವರು ಕೇಳಿರುವರು

ಅಹ್ಮದಾಬಾದಿನಲ್ಲಿ ೩೬ ಕೊಂಗ್ರೆಸ್ ಸ್ವಯಂಸೇವಕರು ರಾಷ್ಟ್ರಾಮಕ್ಕೆ ತೆರಳುತ್ತಿರುವಾಗ ಅವರನ್ನು ನೆರೆಹಿಡಿದಿರುತ್ತಾರೆ ಇವ್ವರನ್ನು ಒಟ್ಟು ೩೮ ವರ್ಷದ ಮೇಲೆ ಶಿಕ್ಷೆಯು ನಡೆಯಲಿದೆ.

ಕರಾಚಿಯಲ್ಲಿ ಭೋಜರಾಜ ಲೇಖರಾಜ ಎಂಬ ಅಳ್ಳಸಾಲಿರ ನಲ್ಲಿ ಕಳ್ಳಾಟಿಕೆಯ ಭಂಗಾರವನ್ನು ಇದ್ದುದಕ್ಕಾಗಿ ವಿಚಾರಣೆಯಾಗಿ ಆರು ತಿಂಗಳ ಕಠಿಣ ಸಜೆಯಾಯಿತು. ಅಪ್ಪೀಲಾಗಿ ಆ ಶಿಕ್ಷೆಯು ರೂ ೩೦೦೦ ದಂಡದಲ್ಲಿ ನಿಂತಿತು ಆದರೆ ಅವನಿಗೆ ಆರು ತಿಂಗಳ ಶಿಕ್ಷೆಯೇ ಕಾಯಂ ಆಯಿತೆಂದು ಅವನಿಗೆ ಯೂರ್ಸ ಸಾಳ್ಳು ಹೇಳಿದರು ಇದನ್ನು ಕೇಳಿದ ಅಳ್ಳಸಾಲಿಗನು ಪ್ರಾಣಜಕ್ಕೆ ನೂಡಿಕೊಂಡನು

ಸಳಕೇತಪುರ.

ಸ್ಥಳೀಯ ಇಂಡಿಯನ್ ಕ್ಲಬ್ಬಿನ ವರ್ಷಾವಧಿ ವಿಜೃಂಭಣೆ ಇದೇ ತಾ ೭-೮—೨೨ರಲ್ಲಿ ಜರಗಿತು ಬಾಲ್ಯ ವರ್ಷಕ್ಕೆ ಸ್ಥಳೀಯ ಸರ್ದಿವಿಜನಲ್ ಸಾಹೆಬರಾದ ರಾ ಭುಟ್ಟು ರಂಗಸ್ವಾಮಿ ಐ ಎಸ್ ಸಿ ಇವರನ್ನು ಅಧ್ಯಕ್ಷರನ್ನಾಗಿಯೂ ರಾ ಎಸ್ ಎಂ ರಾಮು ಸ್ವಾಮಿಯವರನ್ನು ಸೆಕ್ರಿಟರಿಯನ್ನಾಗಿಯೂ ನೇಮಿಸಲಾಯಿತು. ಈಚೆದ ವರ್ಷ ಸೆಕ್ರಿಟರಿಯವರಾಗಿ ರಾ ಕೆ ವಿ. ಹೆಡ್ಡಿಯವರು ಶ್ಲಘನೀಯ ಪರವಾಗಿ ನಡೆಸಿದ ಕಾರ್ಯಗಳ ಪ್ರಶಂಸೆಯನ್ನು ರಿಕಾರ್ಡು ಮಾಡಿದರು ಶ್ಲಘನೀಯ ಕಟ್ಟಿಡವನ್ನು ಇನ್ನೂ ಸ್ವಲ್ಪ ದೊಡ್ಡದನ್ನಾಗಿ ಮಾಡುವಂತೆ ತೀರ್ಮಾನವಾಯಿತು

ಈಚೆದ ೧೫ ದಿವಸಗಳಂದ ಹೋರಾಗಿ ಬರುತ್ತಿದ್ದ ಮಳೆಯು ಸಾಧಾರಣವಾಗಿದೆ, ಹೆಬ್ಬನ ಸೌಖ್ಯಕ್ಕೂ ಆಗಲಿಲ್ಲ ಮುಂಜಾವಾದು ಕೊಡಲಿ ಪೇಟೆ ರೀತಿಯ ಕಂಬರ್ಲಿ ಸಮೀಪ ಬಗೂರು ಹೊಳೆಯು ನೀರಿನಯೆ ಮೇಲೆ ಬಂದು ಸುಮಾರು ೪ ದಿವಸಗಳಲ್ಲಿ ಹೃಯಾಣಕ್ಕೆ ತೊಂದರೆಯಾಗಿರುತ್ತದೆಂದು ತಿಳಿದು ಬಂದಿದೆ

ದಕ್ಷಿಣ ಕನ್ನಡ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಇದರ ಒಂದು ಶಾಖೆಯು ಮೈಸೂರ ಪೈಲ್ಲ ತೆರೆಯಲ್ಪಟ್ಟಿದೆ ಈ ಸಂಸ್ಥೆಯ ೨ ಕಛೇರಿ ವರ್ಷಗಳಿಂದಲೂ ವಿಶ್ವಾಸಯುಕ್ತ ಮತ್ತು ಪ್ರಗತಿಪರ ವ್ಯಾಪಾರವನ್ನು ಮಾಡಿರುತ್ತದೆ ಸ್ಟೆಸರಿನಲ್ಲಿ ತೆರೆಯಲ್ಪಟ್ಟಿದ್ದೂ ಇದರ ಎಂಟನೇ ಶಾಖೆ ೧೯೩೬ರಲ್ಲಿ ಮುಟ್ಟಿದ ವರ್ಕಿಂಗ್ ಕೆಪಿಟಲ್ ೧೬೫೫೫ ಇತ್ತು ಅದು ಈಗ ಜೂನ್ ತಿಂಗಳಲ್ಲಿ ೧೧,೫೦,೦೦೦ ರೂಪ್ಯಾಗಳಾಗಿವೆ. ಈ ಸಿಂಡಿಕೇಟು ಜನತೆಯ ವಿಶ್ವಾಸಕ್ಕೆ ಪಾತ್ರವಾಗಿ ಇತ್ತು ಪ್ರಗತಿಗೆ ಬಂದಿದು ಕನ್ನಡಿಗರಿಗೊಂದು ಭೂಷಣಪ್ರಾಯ ವಿಷಯವಾಗಿದೆ ಈ ಸಂಸ್ಥೆಯ ಮೈಸೂರಿನ ಶಾಖೆಯು ಸರ್ವ ವಿಧದಿಂದಲೂ ಪ್ರೋತ್ಸಾಹಿಸಲ್ಪಟ್ಟೀತೆಂದು ಧೈರ್ಯದಿಂದ ಹೇಳಬಹುದು.

ಮಂಗಳೂರು:—ದಕ್ಷಿಣ ಕನ್ನಡ ಜಿಲ್ಲಾ ಅಥ್ಲೆಟಿಕ್ ಎಸೋಸಿಯೇಶನ್ ಸಭೆಯು ಜುಲ್ಯಾ ೭ರಲ್ಲಿ ಕೆನರಾ ಹೈಸ್ಕೂಲಿನಲ್ಲಿ ಜರಗಿ, ಶಾಲೆಯೊಳಗಡೆ ಜೂನಿಯರ್ ತ್ರಿಕೆಟ್ ಪಂದ್ಯಾಟಗಳು ಆಕ್ಟೋಬರ ತಿಂಗಳ ಮೊದಲನೇ ವಾರದಲ್ಲಿ ಜರಗತಕ್ಕದ್ದೆಂದೂ ಸೀನಿಯರ್ ಪಂದ್ಯಾಟವು ಆಗೋಸ್ತು ೨೫ರಲ್ಲಿ ಆರಂಭವಾಗುತಕ್ಕದೆಂದೂ, ಅಲ್ಬ್ರಕ್ರ್ ಕಪ್ ಪಂದ್ಯಾಟವು ಸಪ್ಟಂಬರ ತಿಂಗಳ ಮೊದಲನೇ ವಾರದಲ್ಲಾರಂಭವಾಗತಕ್ಕದೆಂದೂ ನಿರ್ಧರಿಸಲಾಗಿದೆ ಪತ್ರವ್ಯವಹಾರ ನಡೆಸುವವರು ದಿ ಒನರರಿ ಸೆಕ್ರೆಟರಿ, ದಕ್ಷಿಣ ಕನ್ನಡ ಎಥ್ಲೆಟಿಕ್ ಎಸೋಸಿಯೇಶನ್ ಕೆನರಾ ಹೈಸ್ಕೂಲು ಮಂಗಳೂರು, ಎಂದು ವಿಳಾಸ ಬರೆಯಬೇಕು

ಹವೆಯು ಅನುಕೂಲವಾಗಿದ್ದರೆ ಮುಂಬಾಯಿ ಸ್ಟೀಮ್ ನೆವಿಗೇಶನ್ ಕಂಪೆನಿಯ ಸ್ಟೆಲ್ ಸ್ಟೀಮರು ಒಂದು ಇದೇ ಸಪ್ಟಂಬರ ತಾ ೫ಕ್ಕೆ ಮುಂಬಾಯಿಯಿಂದ ಹೊರಟು ಮರ್ಮಗೋವಾ, ಕಾರವಾರ ಮತ್ತು ಮುಲ್ಕಿಗಳಲ್ಲಿ ತಂಗಿ, ತಾ ೭ಕ್ಕೆ ಮಂಗಳೂರಿಗೆ ತಲಪುವುದೆಂದೂ ಎಂದಿನಂತೆ ಸರಕುಗಳನ್ನೂ ಪೆಸೆಂಜರುಗಳನ್ನೂ ಸ್ವೀಕರಿಸಲಾಗುವುದೆಂದೂ ಕಂಪೆನಿಯವರು ತಿಳಿಸಿಸುತ್ತಾರೆ

ಕಳೆದ ಮಾರ್ಚಿ ತಿಂಗಳಲ್ಲಿ ಚಂದ್ರು ಎಂಬವನನ್ನು ಕೊಂದ ನೆಂಬ ಅಪಾದನೆಗೊಳಗಾದ ಜನ್ನು ಪೂಜಾರಿ ಎಂಬವನನ್ನು ಇಲ್ಲಿಯ ಸೆಶನ್ಸ್ ಜಡ್ಜರು ಖುಲಾಸೆ ಪಡಿಸಿರುವರು.

ದಕ್ಷಿಣ ಕನ್ನಡ ಜಿಲ್ಲಾ ವೈದ್ಯಕೀಯ ಸಂಘದ ಒಂದು ಸಭೆಯು ಇದೇ ತಿಂಗಳ ತಾ. ೧೯ನೇ ದಿನ ಸಂಜೆ ಗಂಟೆ ೫-೩೦ಕ್ಕೆ ವೆನ್‌ಲಾಕ್ ಆಸ್ಪತ್ರೆಯಲ್ಲಿ ಜರಗಲಿರುವುದು. ರಾ ಎನ್ ಶಿವರಾವ್, L. R. P. M. R. C. S. L. M ಇವರು ಮಾತಾಡಲಿರುವರು ಎಲ್ಲಾ ವೈದ್ಯ ಹುದ್ದೇದಾರರುಗಳಿಗೆ ಸಂಬ್ಬಗತವಿದೆಯೆಂದು ಸಂಘದ ಒನರರಿ ಸೆಕ್ರೆಟರಿಯವರು ತಿಳಿಸುತ್ತಾರೆ

ಮಂಗಳೂರು ತಾಲೂಕು ಬೋರ್ಡಿನ ಸಿ.ಮೀನ್ಸ್ ಸಭೆಯೊಂದು ತಾ ೫-೮-೩೬ನೇ ಮಂಗಳವಾರ ಅದರ ಆಫೀಸಿನಲ್ಲಿ ಜರಗಲಿರುವುದು

ಶ್ರೀ ಕೃಷ್ಣ ಸಿನೆಮಾ ಮಂದಿರದಲ್ಲಿ ತಾ ೧೫-೮-೩೬ರಿಂದ ಈಸ್ಟ್ ಇಂಡಿಯಾ ಫಿಲ್ಮ್ಸ್ ಕಂಪೆನಿಯ ಅತ್ಯುಜ್ವಲ ಚಿತ್ರವಾದ 'ರಾಧಾಕೃಷ್ಣ' ಎಂಬ ಚಿತ್ರವನ್ನು ಪ್ರದರ್ಶಿಸಲಾಗುವುದು ಇದು ಜಗತ್ಪ್ರಸಿದ್ಧವಾದ ಚಿತ್ರವಾಗಿದೆ ಇಂಪಬಾಲ ಅಂಗುರ್‌ಬಾಲ ಮಿಸ್ ಸಲೀತದೇವಿ ರೇಣು, ವೀಣ, ಕಮಲ, ಮೊದಲಾದ ನಟಿಯವರ ಗ್ರುಪೊಫೋನ್ ರತ್ನಗಳ ಮತ್ತು ಬೆಂಗಳೂರ ಬ್ಲೈಂಡ್‌ಸಿಂಗರ್ ಕೆ ಸಿ ಡೆ ಮತ್ತು ದಿರಾಜ್ ಬ್ಯಾನರ್ಜಿ ಎಂಬವರ ಸಂಗೀತದಿಂದಲೂ, ಧೃದಯ ದ್ರಾವಕವಾದ ಅಭಿನಯದಿಂದಲೂ, ಸೋಚಗವಾದ ದೃಶ್ಯಾವಳಿಗಳಿಂದಲೂ ಮೆರೆಯುತ್ತಿರುವ ಚಿತ್ರವಾಗಿದೆ

ಕೆಲ ತಿಂಗಳ ಹಿಂದೆ ಕಂಕನಾಡಿಯಲ್ಲಿ ನಡೆದೊಂದು ಖೂನಿಯ ಸಂಬಂಧ ಅಪಾದನೆಗೊಳಗಾಗಿ ಆನಂತ ಭಂಡಾರಿ ವಗೈರೆರ ಮೇಲಿನ ಮೊಕದ್ದಮೆಯು ಬಿಚಾರಣೆಯು ಇಲ್ಲಿಯ ಸೆಶನ್ಸ್ ಜಡ್ಜರಲ್ಲಿ ನಡೆದು, ಅಪಾದಿತರು ವಿವಿಧ ಶಿಕ್ಷೆಗೆ ಗುರಿಯಾಗಿರುವರು.

ಈ ವರ್ಷದ ಮಳೆಯು, ಜಿಲ್ಲೆಯ ಉತ್ತರ ಪ್ರದೇಶಗಳಲ್ಲಿ ಬಾದ ನೆರೆಯ ಜೊರತು ಇತರ ಕಡೆಗಳಲ್ಲೆಲ್ಲ ಬೆಳೆಗೆ ಅತ್ಯನುಕೂಲವಾಗಿಯೇ ಪರಿಣಮಿಸಿ, ಬೆಳೆಯು (ಬೆಟ್ಟು ಗದ್ದೆಗಳ ಬೆಳೆಯು) ಹುಲುಸೊಂಗಿದೆಯಾಗಿ ತಿಳಿದುಬರುತ್ತದೆ

ಇಲ್ಲಿಯ ಆರ್ಯ ವಿದ್ಯಾನಿಧಿಯ ನಾಟಕ ಸಭಾ ಇವರು ತಾ ೨೧-೮-೩೬ನೇ ರವಿವಾರ ರಾತ್ರೆ ೯-೩೦ಕ್ಕೆ ಗಣಪತಿ ಹ್ಯಾಸ್ಕೂಲಿನಲ್ಲಿ "ಸಂಸಂತಲಿತಾ" ಎಂಬ ಸಾಮಾಜಿಕ ನಾಟಕವನ್ನಾಡಲಿರುವರೆಂದು ತಿಳಿದು ಬರುತ್ತದೆ

ಕೆನರಾ ಹ್ಯಾಸ್ಕೂಲಿನ ಹಳೆ ವಿದ್ಯಾರ್ಥಿ ಕೂಟದ ನವ ವರ್ಷಾರಂಭ ಸಮಾರಂಭವು ಕಳೆದ ತಾ ೭ನೇ ಸೋಮವಾರ ಸಾಯಂಕಾಲ ಘಂಟೆ ೫-೩೦ಕ್ಕೆ ಕೆನರಾ ಹ್ಯಾಸ್ಕೂಲಿನ ಭುವನೇಂದ್ರ ಮಂದಿರದಲ್ಲಿ ಆಸ್ಟೋ ರೇಟ್ ಶ್ರೀ ಅಮ್ಮೆಂಬಳ ಶ್ರೀನಿವಾಸ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು ಸ್ಥಳೀಯ ಗವರ್ನಮೆಂಟ್ ಕೊಲೇಜಿನ ಪ್ರಿನ್ಸಿಪಾಲರಾಗಿರುವ ಶ್ರೀ ಜಿ ಕೆ ಚಿಟ್ಟೂರರು "ಹಾಸ್ಯರಸವೂ ಚತುರೋಕ್ತಿಯೂ" ಎಂಬ ವಿಷಯವನ್ನೆತ್ತಿ ಭಾಷಣ ಮಾಡಿದರು. ಹಳೆ ವಿದ್ಯಾರ್ಥಿಗಳಲ್ಲದೆ, ಅನೇಕ ಮಹಿಳೆಯರೂ ಆಗಮಿಸಿದ್ದರು.

ದೇಶಭಕ್ತಿಯ ಸೆನ್ ಗುಪ್ತರ ಆಕಾಲ ಮರಣಕ್ಕಾಗಿ ದುಃಖ ಸೂಚಕ ಸಭೆಯು ಮೃಚ್ಛೆ ದುತ್ತು ಪ್ರಾದ್ಧದ ದಿನ ಬಡ ಜನರಿಗೆ ಹಣ್ಣು ಹಂಚುವರೆ ನೂರಾದ ಧನ ವ ಅಕ್ಕಿ ಸಂಗ್ರಹ ವ ಖರ್ಚಿನ ಲೆಕ್ಕ — ಜಮಾ ರೂ ೧೧೨-೮-೦ ಅಕ್ಕಿ ೧೩೩ ಮುಡಿ ಈ ಪೈಕಿ ೯ ಮುಡಿ ಅಕ್ಕಿಯನ್ನು ಬೊಂಬೈ ರಿಸ್ಟೋರೆಂಟಿನ ಪೆನೇಜರ ರಾ ನಾಪನರಾಯರು ಸ್ವತಃ ಸಂಗ್ರಹಿಸಿ ಕೊಟ್ಟರುವರು ಖರ್ಚು—೨೪ ಮುಡಿ ಅಕ್ಕಿ ಕೊಡುಕೊಂಡ ಕ್ರಯ ರೂ ೪೬-೧೦ ಕರಪತ್ರಗಳ ಬಗ್ಗೆ ೩-೮-೦ ದುಃಖಸೂಚಕ ಸಭೆಯ ವ್ಯವಸ್ಥೆ ಬಗ್ಗೆ ಕೂಲಿ, ವಾಪನ ಇತ್ಯಾದಿಗಳ ಖರ್ಚು ೩-೪-೬ ಪಣ ತೀರಿಸುವ ಬಗ್ಗೆ ಮತ್ತು ಶ್ರಾದ್ಧದ ದಿನ ಅಕ್ಕಿ ಹಂಚುವ ಬಗ್ಗೆ ಖರ್ಚು ೪-೧೫-೩ ಒಟ್ಟು ಖರ್ಚು ೯೭-೪ ಉ ಶಿಲ್ಕು ರೂಪ್ಯಾ ೧೫-೩-೪ ಶಿಲ್ಕು ಹಣವು ದಿವಂಗತರ ಹೆಸರಲ್ಲಿ ಯಾವುದಾದೂ ಯೋಗ್ಯ ಸಂಸ್ಥೆ ವ ಕಾರ್ಯಕ್ಕೆ ಉಪಯೋಗಿಸಲ್ಪಡುವುದು. ಒಟ್ಟು ೭೬॥ ಮುಡಿ ಅಕ್ಕಿಯ ೨ ಶ್ರಾದ್ಧದ ದಿನ (೬-೮-೩೬) ಬಡ ಜನರಿಗೆ ಹಂಚಲ್ಪಟ್ಟರುವುದೆಂದು ಡಾ॥ ಯು. ಪಿ ಮಲ್ಯ ಆರ್ ಆರ್ ತಲಪೇರಿಕರ್, ಏ ಅನಂತ ಶೈ, ಬಿ ಕೆ ಭಂಡಾರಿ (ದುಃಖ ಸೂಚಕ ಸಭೆಯ ಸಂಬಾಲಕರು) ಇವರು ತಿಳಿಸಿಸುತ್ತಾರೆ

ಹಿಂದುಸ್ಥಾನ ಸಿನೆಮಾ ಕಂಪೆನಿ ಲಿಮಿಟೆಡ್‌ನಲ್ಲಿ ತಾ ೧೧ರಿಂದ ಮೂಯಾ ಮಥಿರಾದ್ರುನೆಂಬ ಅತ್ಯುತ್ತಮ ಚಿತ್ರವು ಪ್ರದರ್ಶಿಸಲ್ಪಡಲಿರುವುದು. ಇದರಲ್ಲಿ ಹೆಸರುವಾಸಿಯಾದ ಚಲಚಿತ್ರವು ಇನ್ನೊಂದಿದು ಯಾವುದು?

ಸುರತಲಲ್ — ಇಲ್ಲಿಯ "ಕರ್ನಾಟಕ ಯಕ್ಷಗಾನ ಪಿತೃಸಿ ಸಭಾ"—ಇವರಿಂದ ಪ್ರತಿ ಗುರುವಾರ ಶ್ರೀಮದ್ರಾಮಾಯಣದ 'ರಾಮಪ್ರಾಹಿಕ ತಾಳ ಮದ್ದಲೆ ಯನ್ನು ನಡೆಯಿಸುತ್ತಿರುವರಲ್ಲಿ. ಕಳೆದ ತಾ ೪ನೇ ದಿನ ರಾತ್ರೆ ಲಂಕಾಹನನ ಕಥೆಯಾಗಿದ್ದಿತು ಅಂದು ನೆರೆದ ಶ್ರೋತೃಗಳಲ್ಲಿ ಮುಂಬಾಯಿಯಿಂದ ಸ್ವದೇಶಕ್ಕೆ ಬಂದಿರುವ ರಾ ಶ್ರೀ-ಕಿನ್ನಿಗೋಳಿ ಸರ್ವೋತ್ತಮ ಕೃಷ್ಣ ಕಾಮತರವರು ಈ ಸಂಘದ ಕಾರ್ಯಕಲಾಪಗಳ ನ್ನೆಲ್ಲಾ ಪರೀಲಿಸಿ ಸಂತೋಷಗೊಂಡು ಸಂಘಾಭ್ಯುದಯವನ್ನು ಬಯಸಿ ರೂ ೧೫ನ್ನು ಉಚಿತವಾಗಿತ್ತು ಪ್ರೋತ್ಸಾಹಿಸಿದ್ದರೆಂದು ತಿಳಿಸಲು ಸಂತೋಷ ವಾಗುತ್ತದೆ

ತಾ ೭ನೆಯ ದಿನ ಜರುಗಿದ "ಸುರತಕಲ್ ಗ್ರಾಮ ಪಂಚಾಯತ ಕೋರ್ಟ್" ಪ್ರೆಸಿಡೆಂಟರ ಚುನಾವಣೆಯಲ್ಲಿ, ಶ್ರೀಮಾನ್ ಯು ವಾಸು ದೇವ ಭಟ್ಟರು ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುತ್ತಾರೆಂಬುದು ತುಂಬಾ ಸಂತೋಷಪ್ರದ.

ಬಂಟ್ವಾಳ—ಇಲ್ಲಿಯ ಸಬ್ ಇನ್ಸ್‌ಪೆಕ್ಟರರಾದ ಮ ರಾ ಅಂತಪ್ಪನವರು ಮಂಗಳೂರಿನ ಪ್ರಖ್ಯಾತ ಕೇಡಿ ಒಬ್ಬನನ್ನು ಇಲ್ಲಿ ಹಿಡಿದಿರುತ್ತಾರೆ ಇವನಿಗೆ ೭ ಸಾರಿ ಶಿಕ್ಷೆಯಾಗಿದೆ. ಇನ್ನು ಬಂಟ್ವಾಳದ ಸ್ಟೇಷನಿಗೆ ಸೇರಿದ ಮತ್ತು ಹಿಂದೆ ಒಮ್ಮೆ ಕೈದಿಯಾಗಿ ಓಡಿ ಹೋಗಿದ್ದ ಸಣ್ಣ ಪಮ್ಮದಿಯನ್ನೂ ಸಹ ಹಿಡಿದಿರುತ್ತಾರೆಂದು ವರ್ತಮಾನ ಕೇಳುತ್ತೇವೆ. ಇವನು ಸಹ ಅನೇಕ ಸಾರಿ ಶಿಕ್ಷೆ ಹೊಂದಲ್ಪಟ್ಟವನಾಗಿರುತ್ತಾನೆ

ಮಿತ್ತೂರು—ಈ ಶಾಲೆಯ ಜೀರ್ಣೋದ್ಧಾರಕ್ಕಾಗಿ ಕಳೆದ ತಿಂಗಳ ೨೦ನೇ ತಾರೀಕಿಗೆ ಕೂಡಿದ ಸಭೆಯಲ್ಲಿ ಮುಂದಿನ ಮಾಟಂಗು ಇದೇ ತಿಂಗಳ ತಾರೀಕು ೨೦ಕ್ಕೆ ಕೂಡುವುದೆಂದು ನಿಶ್ಚಯವಾಗಿತ್ತು. ಈ ಸಭೆಗೆ ಮ ರಾ ಪುತ್ತೂರು ತಾಲೂಕು ಬೋರ್ಡು ಪ್ರೆಸಿಡೆಂಟರವರನ್ನು ಬರುವರೇ ಕೇಳಿಕೊಳ್ಳಬೇಕೆಂದು ನಿಶ್ಚಿತವಾಗಿತ್ತು. ಆದರೆ ಸದರಿಯವರ ತಾರೀಕು ೪-೮-೩೬ನೇ ಹುಕುಂ ಪ್ರಕಾರ ಮುಂದಿನ ೨೦ನೇ ತಾರೀಕಿಗೆ ಜರಗಲಿಕ್ಕಿರುವ ಸಭೆಯನ್ನು ತಾರೀಕು ೧೩ನೇ ಗುರುವಾರ ಅಪರಾಹ್ನ ಗಂಟೆ ೨ಕ್ಕೆ ಕೊಡುವುದೆಂದು ಸದರಿ ಸ್ಕೂಲ್ ಕಮಿಟಿ ಕಾರ್ಯದರ್ಶಿ ರಾ ಕೂಸಿಹತ್ತಲು ನಂಕಪ್ಪಮಣಿ ಭಟ್ಟರು ತಿಳಿಸುತ್ತಾರೆ ಈ ಸಭೆಗೆ ಬೇರೆ ಒಬ್ಬಿಬ್ಬರು ಮುಕ್ಕೇಯರುಗಳು ಬರಲಿಕ್ಕಿರುತ್ತಾರೆ.

ಕಡಬ—ಇಲ್ಲಿಯ ಲೋಕಲ್ ಫಂಡ್ ಆಸ್ಪತ್ರೆಯ ಪ್ರವೇಶೋತ್ಸವವು ಇದೇ ತಾ ೬-೮-೩೬ನೇ ಸೋಮವಾರ ಬೆಳಿಗ್ಗೆ ಘಂಟೆ ೧೦ಕ್ಕೆ ಮ ರಾ ರಾ ಪುತ್ತೂರು ತಾಲೂಕು ಬೋರ್ಡು ಪ್ರೆಸಿಡೆಂಟ್ ಯಂ ಶಿವರಾಯರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು ಮತ್ತು ಅದೇ ದಿನ ಸಾಜೆ ಘಂಟೆ ೬ಕ್ಕೆ ಈ ಊರಿನ ಯುವಕರ ಚಿತ್ತರಂಜನ ವಾಚನಾಲಯದ ಪ್ರವೇಶ ಸಮಾರಂಭವೂ ವಾರ್ಷಿಕ ವರ್ಧಂತಿಯೂ ಶ್ರೀಯುತ ಕೋಟ ಶಿವರಾಮ ಕಾರಂತರವರ ಅಧ್ಯಕ್ಷತೆಯಲ್ಲಿ ನಡೆಯಿತು

ಸ್ವೀಕಾರ

ಮುಂಬಾಯಿಯಲ್ಲಿ ಶ್ರೀಯುತ ಯಂ. ನಾರಾಯಣರವರ ಸಂಪಾದಕತ್ವದಿಂದ "ತೊಡಲ್ಬುದಿ" ಎಂಬ ಕನ್ನಡ ವಾರಪತ್ರಿಕೆಯು ಹೊರಬೀಳುತ್ತಿದೆ ಪ್ರತಿ ರವಿವಾರ ಹೊರಡುತ್ತದೆ ಚಂದಾ ವಿವರ ಅಂಚೆಯೆಚ್ಚ ಕೂಡಿರೂ ೩-೪-೦ ಸ್ಥಳೀಯರಿಗೆ ರೂ ೩-೮-೦ ದೇಶಿಕ್ಕೆ ಆಕಾರದಲ್ಲಿ ಪುಸ್ತಕ ರೂಪದಿಂದ ಹೊರಬರುವುದು ಕ್ರೀಯು ಸ್ವರ ಕನ್ನಡ ಪತ್ರಿಕೆಗಳಲ್ಲಿದ ಬಂಬಾಯಿಯಲ್ಲಿ ಕನ್ನಡಿಗರು ಕನ್ನಡ ಸೇವೆಯನ್ನು ಮಾಡಲು ಮುಂಬರಿದಿರುವುದು ನಿಜವಾಗಿಯೂ ಶ್ಲಾಘನೀಯ ಸಣ್ಣ ಕತೆ ವಿನೋದ ಮೊದಲಾದುವುಗಳು ಸ್ವಾರಸ್ಯಪೂರ್ಣವಾಗಿರುವುದ ಕೊಡನೆ ರಾಜಕೀಯದ ಕುರಿತಾಗಿ ಟೀಕೆ ಟಿಪ್ಪಣಿ, ವಾರ್ತಾವಿಶೇಷಗಳನ್ನು ಪ್ರಕಟಿಸಿದರೆ ಉತ್ತಮ ಮುಂಬಾಯಿಯ ಸಾಹಿತಿಗರು ಒಂದಿಸ್ತು ಯಾಗಲೆಂದು ಕೋರುವೆವು

ತಿವಮೊಗ್ಗದ ಶ್ರೀ ಎಂ ರಾಘವೇಂದ್ರ ಶಾಪಿ ಇವರು "ಸ್ವರಾಜ್ಯೋದಯ ಅಥವಾ ಶಿವಾಜಿ" ಎಂಬ ಹತ್ತಾನೆ ಬೆಲೆಯ ಐತಿಹಾಸಿಕ ಕಂದುಬರಿಯನ್ನು ಪ್ರಕಟಿಸಿರುತ್ತಾರೆ ಛಂ.ಪಾ. ಶೈಲಿಯ ದಟ್ಟನ ದೋಷಯುತ್ತವಾಗಿಲ್ಲ ವಸ್ತುವೂ ಒಳ್ಳೆಯದಿದೆ. ಮುದ್ರಣ ದೋಷ ಗಳನ್ನು ತೆಗೆದು, ಗದ್ಯಕ್ಕೆಲ್ಲರ ಮುನ್ನುಡಿ ಬರೆಸಿ ಶಿಲಾ ಪ್ರತ್ಯಕ್ಷರ ವನ್ನು ಮಾಡಿಸಿದರೆ ಶ್ರೀಯುತರ ಯತ್ನವು ಫಲಕಾರಿಯಾಗಿರದು ೭೮ ಪುಟಗಳಿಗೆ ಈ ಬೆಲೆಯು ಹೆಚ್ಚಾಯಿತೆಂದು ಹೇಳಲೇ?

+ —+— +

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದ ಕನ್ನಡ)

ಇದರಿಂದ ತಯಾರಿಸಲ್ಪಟ್ಟ, ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ನಡೆದ ಅಖಿಲ ಭಾರತ ವಸ್ತು ಪ್ರದರ್ಶನಗೆಗಳಲ್ಲಿ ಸುವರ್ಣ ಪದಕಗಳನ್ನು ಪಡೆದಿರುವ "ಕರ್ನಾಟಕ"

ದ್ರಾಕ್ಷಾಸವ, ಬ್ರಿಲ್ಲಂಟೈನ್ ೧೦೫ಕ್ಸ್,
ಜೈವನಪ್ರಾಶ, ಸ್ನೋ, ಸೋಪ್ಸ್,

ಇವುಗಳನ್ನೇ ಉಪಯೋಗಿಸಿರಿ.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ವಿಜಂಟರುಃ—

ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

Managing Director:—**Venkatraya Annappa Baliga**

ಶ್ರೀಮತಿ ಕಸ್ತೂರಿ ಬಾಯಿಯವರನ್ನು ಹಿಡಿದರು!

ಶ್ರೀ ರಾಜಗೋಪಾಲಾಚಾರ್ಯರಿಗೆ ಆರು ತಿಂಗಳ ಕಠಿಣ!!

ಗಾಂಧಿಜೀಯವರ ಸತ್ಯಾಗ್ರಹ ಆಶ್ರಮದ ಹದಿನಾರು ಮಂದಿಗಳು ಕೂಡಿಕೊಂಡು ಶ್ರೀಮತಿ ಕಸ್ತೂರಿಬಾಯಿಯವರ ಮುಂದಾಳುತನದಲ್ಲಿ ಅಹ್ಮದಾಬಾದಿನಲ್ಲಿ ನಡೆದರು. ಕಾಯಿದೆ ಭಂಗ ಚಳವಳಿಗೆ ಕೈ ಹಾಕಬಾರದೆಂದು ಅವರಿಗೆ ಪೊಲೀಸ್ಕೇಟರ ಅಪ್ಪಣೆಯು ದೊರೆಯುತ್ತು, ಇವರೆಲ್ಲರೂ ಅಪ್ಪಣೆಯನ್ನು ಧಿಕ್ಕರಿಸಿ ಮುಂದೆ ನಡೆದರು. ಒಡನೆ ೧೬ ಮಂದಿಗಳನ್ನೂ ಸೆರೆ ಹಿಡಿದು ಸಬರ್ಮತಿ ಆಶ್ರಮದಲ್ಲಿ ಬಂಧಿಸಿಡಲಾಯಿತು.

ಶ್ರೀ. ರಾಜಗೋಪಾಲಾಚಾರ್ಯರು ತಾನು ಸೆರೆಗೆ ಹೋಗುವ ಮೊದಲು ಮದ್ರಾಸು ಗವರ್ನರರಿಗೊಂ ಪತ್ರವನ್ನು ಬರೆದು ಹೀಗೆ ತಿಳಿಸಿರುತ್ತಾರೆ:—"ಕಾ. ಲನೇ-ಮೇ ತಿಂಗಳಿಂದಮೊದಲುಗೊಂಡು ಗಾಂಧಿಜೀಯವರು ಶಾಂತಿ ಸ್ಥಾಪನೆಗಾಗಿ ಮಾಡಿದ ಯತ್ನವು ನಿಷ್ಫಲೋದ್ಯಾವಾಯಿತು. ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವು ಬೇಕೆಂದು ಹೆಣಗಾಡಿದವನೂ ನಿರ್ಧರಿಸಿದವನೂ ನಾನಾಗಿರುತ್ತೇನೆ. ದಿಲ್ಲಿ ಕರಾರನ್ನು ಸರಕಾರವು ಮುರಿದಿರುತ್ತದೆ. ಈಗ ಅಹಿಂಸೆಯಲ್ಲಿ ವಿಶ್ವಾಸವಿಲ್ಲದವರಿಗೆ ಈ ಕಾಯಿದೆ ಭಂಗವೇ ಪ್ರಾಮುಖ್ಯ ಸಾಧನವೆಂದು ನನ್ನ ಅಭಿಪ್ರಾಯವಿದೆ. ಬ್ರಿಟಿಷರು ತಮ್ಮ ತಮ್ಮ ವ್ಯಾಪಾರದ ದೃಷ್ಟಿಯಿಂದ ರಾಜ್ಯ ಶಾಸನಗಳನ್ನು ಹೊಡಿಕೊಂಡು ಬಂದುತ್ತಿರುವರು. ಮಹಾತ್ಮಾ ಗಾಂಧಿಯವರು ಸ್ವೆತ್ತಿಕ ವಿಷಯಕ್ಕಾಗಿ ಮಾಡಿದ ಮನವಿಯು ಅಲ್ಲಗಳೆಯಲ್ಪಟ್ಟಿತು. ಮುಂದಕ್ಕೆ ನಮಗೆ ದಾರಿ ತೋರದು. ಗಾಂಧಿಜೀಯವರು ರಾಜ್ಯಾಂಗ ರಚನೆಯ ಪ್ರಯುಕ್ತ ವೈಸರಾಯರ ಭೇಟಿ ಕೇಳಿದುದಲ್ಲ—ಶಾಂತಿಸ್ಥಾಪನೆಗಾಗಿ. ಅವರ ಅಂತಹ ಸಮಾಧಾನಕರ ಮನವಿಯೂ ಕೂಡಾ ಸರಕಾರದವಿಂದ ಸ್ವೀಕೃತವಾಗಲಿಲ್ಲ. ಈಗ ನಾನು ಸ್ವಾತಂತ್ರ್ಯ ರಂಗಕ್ಕೆ ಇಳಿಯಬೇಕೆಂದಿರುವೆನು."

ಗಾಂಧಿಜೀಯವರ ಬಂಧನದೊಡನೆ ವೈಯಕ್ತಿಕ ಶಾಸನೂ ಭಂಗವು ಪ್ರಾರಂಭವಾಗಿತಿದೆ. ಅಹ್ಮದಾಬಾದಿನಲ್ಲಿ ಗಾಂಧಿಜೀಯವರ ಆಶ್ರಮದ ೧೯ ಮಂದಿಗಳನ್ನು ಒಮ್ಮೆ ಕೈದು ಮಾಡಿ ಮತ್ತು ಬಿಟ್ಟರು. ಅವರು ತಾ. ಲನೇ ದಿನ ರಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಗೆ ತಾವು ಕಾಯಿದೆಭಂಗ ಮಾಡಲಿರುವೆವೆಂದು ತಿಳಿಸಿರಬಸ್ ಗ್ರಾಮಕ್ಕೆ ಹೊಟ್ಟರು. ಶ್ರೀಮತಿ ಜಾನಕಿ ಬೆನ್ ಎಂಬ ವೃದ್ಧೆಯರೊಬ್ಬರು ಮುಂದಾಳುಗಳಾಗಿದ್ದರು. ಅವರು ಗ್ರಾಮವನ್ನು ಸವಿಾಪಿಸಿದಿದ್ದಾಗಲೇ ವಿಕ್ಟೋರಿಯಾ ಗಾರ್ಡನ್ಸ್ ಪತ್ತಿರಸೆರೆ ಹಿಡಿಯಲ್ಪಟ್ಟರು.

ಶ್ರೀ ಕೃಷ್ಣಾಲಿನ ಎಂಬ ಮಿಡತೆ ಗಾಂಧಿ ಆಶ್ರಮದ ಸದಸ್ಯರೊಬ್ಬರು ರಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಅಪ್ಪಣೆಯನ್ನು ಮೀರಿ ನಡೆದುದಕ್ಕಾಗಿ ಒಂದು ವರ್ಷದ ಕಠಿಣ ಸಜೆಗೆ ಗುರಿಯಾದರು. ಇವರು ಪೂನಾ ಪಟ್ಟಣವನ್ನು ಬಿಟ್ಟು ಹೊರಡಬಾರದೆಂದು ನೋಟೀಸು ಹೋಗಿತ್ತು. ಆದರೆ ಇವರು ಆ ನೋಟೀಸನ್ನು ಲಕ್ಷೀಕರಿಸಿಲಿಲ್ಲ.

ಕರಾಚಿಯಲ್ಲಿ ಸ್ವಾಮಿಕೃಷ್ಣಾನಂದ ಎಂಬ ಕೊಂಗ್ರೆಸ್ ಧುರೀಣರು ಸರಕಾರದ ಅಪ್ಪಣೆಯನ್ನು ಪ್ರತಿಭಟಿಸಿ ಧಾರಣ ಮಾಡಿದುದಕ್ಕಾಗಿ ಸೆರೆ ಹಿಡಿಯಲ್ಪಟ್ಟಿರುವರು.

ಗಾಂಧಿಯವರ ಬಂಧನದ ಕುರಿತು ಕರ್ನಾಟಕವೇನೆನ್ನುತ್ತದೆ?

ಮಹಾತ್ಮಾ ಗಾಂಧಿಯವರ ಮತ್ತು ಅವರ ಅನುಯಾಯಿಗಳ ದಸ್ತಗಿರಿಯೇನೋ ಆಯಿತು. ಆದರೆ ಅವರೆಲ್ಲರೂ ಇನ್ನು ಮುಂದೆ ಯಾವಾಗಲೂ ಬಂಧನದಲ್ಲಿಯೇ ಇರಬೇಕಾಗುವುದೇ ಎಂಬ ಸಮಸ್ಯೆಯು ಉದ್ಭವಿಸುತ್ತಿದೆ. ಮಹಾತ್ಮಾ ಗಾಂಧಿಯವರು ಕಾನೂನು ಭಂಗದ ಹಕ್ಕನ್ನು ಬಿಡುವ ಹಾಗಿಲ್ಲ. ಸರಕಾರದವರು ಕಾನೂನು ಭಂಗದ ಹಕ್ಕನ್ನು ಬಳ್ಳೆವ ಹಾಗಿಲ್ಲ. ಅಂತೂ ಶಾಂತಿಯ ಪರಿಸ್ಥಿತಿಯು ಕಲೆದೋರುವ ಚಿಹ್ನೆಗಳೇ ಇಲ್ಲ. ಈ ರೀತಿಯಾದ ವಾತಾವರಣದಿಂದ ನಮ್ಮ ದೇಶದಲ್ಲಿ ಸುಖಶಾಂತಿಗಳನ್ನು ಕಾಣುವುದಾದರೂ ಎಂದು? ಸರ್ ಸಾಮ್ಯುಯಲ್ ಹೋರೆರೂ ಲೀಡ್ಸ್ ವಿಲ್ಲಿಂಗ್ಡನ್ನರೂ ಅತ್ಯುತ್ಸಾಹದಿಂದ ನಾವು ಕೊಂಗ್ರೆಸ್ಸನ್ನು ನಿರ್ಮೂಲ ಮಾಡಿದೆವು. ಗಾಂಧಿಯವರನ್ನು ಬಂಧಿಸಿದೆವು. ವೈಟ್‌ಲೇಪರಿನ ನೀತಿಯನ್ನೇ ಜಾರಿಗೆ ತರಲು ಸರ್ವ ಪ್ರಯತ್ನಗಳನ್ನೂ ಮಾಡುತ್ತಿರುವೆವು. ಎಂಬುದಾಗಿ ಚೀಳಿಕೊಳ್ಳಬಹುದು. ಆದರೆ ಈ ನೀತಿಯ ಅನರ್ಥವು ತೀಕ್ಷ್ರದಲ್ಲಿಯೇ ಸರ್ವತ್ರ ವ್ಯಾಪಿಸುವುದರಲ್ಲಿ ಸಂದೇಹವಿಲ್ಲ.

ತಾಯ್ನಾಡು.

ಗಾಂಧಿಯವರ ಕೈದು ಅಂದರು. ಸಬರ್ಮತಿ ಜೈಲು ಅಂದರು. ವರ್ಧಾಡಾ ಅಂದರು. ಅವರು ಅಂದಂತೆಲ್ಲ ಒಂದೊಂದನ್ನೇ ಒಂದೊಂದು ಕಡೆ ನಾವೂ ಉಲ್ಲೇಖಿಸುತ್ತ ಬಂದೆವು. ಇವ್ಯಾದರೂ ಹೇಳುವುದಿನ್ನೂ ಬಾಕಿ—ಅದಿಷ್ಟೇ—ಎರಡು ಮಾತು. ಗಾಂಧಿಯವರನ್ನು ಕಳೆದ ತಾ. ೪ರಲ್ಲಿ ೧೧ ಘಂಟೆಗೆ ಬಿಟ್ಟರು ಎಂದಾಯಿತು. ಬಿಡುವ ಕಾಲದಲ್ಲಿ ಪೂನಾ ನಗರದ ಎಲ್ಲೆಯನ್ನು ದಾಟಬಾರದೆಂಬ ಸರಕಾರದ ಆಪ್ಪಣೆಯನ್ನು ವಿುರಿದ ಕಾರಣ ಪುನಃ ಗಾಂಧಿಯವರ ಕೈದು ಎಂದೂ ಆಯಿತು. ಮತ್ತಾ ತಪ್ಪಿನ ವಿಚಾರಣೆ; ತಪ್ಪು ಸ್ಥಾಪನೆ; ಒಂದು ವರ್ಷ ಸಾದಾ ಸಜೆ. ಇದರಲ್ಲಿ ಏನು ವಿಶೇಷವೋ ಗೊತ್ತಿಲ್ಲ. ವಿಚಾರಣೆ ಇಲ್ಲದ ನಿರ್ಬಂಧವಾದರೇನು? ಇದ್ದ ನಿರ್ಬಂಧವಾದರೇನು? ನಿರ್ಬಂಧ ನಿರ್ಬಂಧನೇ. ಇನ್ನಾದರೂ ಗಾಂಧಿಯವರ ಸಂಧಿ ತಲ್ಲಿ ಗಾದರೂ ಮುಗಿದೀತೆ? ಡಾಯ್‌ಹಾರ್ಡರಿಗೆ, ಆಂಗ್ಲೋ ಇಂಡಿಯನ್ ಪತ್ರಿಕೆಗಳಿಗೆ ಈಗಲಾದರೂ ಕೃಪ್ತಿಯಾದೀತೆ!

ಕಾಂಗ್ರೆಸ್ಸಿನ ಮೇಲೆ ಸರಕಾರದ ವಜ್ರ ಮುಷ್ಟಿ ಬಿದ್ದಿದೆ. ಇಂದು ಮಹಾತ್ಮರನ್ನು ಕೈದು ಮಾಡಲಾಯಿತು. ಒಂದು ವರ್ಷದ ಸೆರೆಮನೆಯ ವಾಸವನ್ನು ವಿಧಿಸಲಾಯಿತು. ನಾಳೆ ಕಾಂಗ್ರೆಸ್ಸಿನ ಪ್ರಕೃತದ ಧೋರಣಕ್ಕೆ ಸಮ್ಮತಿಸುವ, ಹೆಸರಿನ ಪ್ರತಿಯೊಬ್ಬ ಮುಖಂಡನಿಗೂ ಕಾರಾಗೃಹ ವಾಸದ ವಿಕಾಂತತೆಯನ್ನು ಸರಕಾರವು ಕರುಣಿಸುವುದರಲ್ಲಿದೆ. ಕೇವಲ ನಿರರ್ಥಕವಾದ ಅಭಿಮಾನದ ದೆಸೆಯಿಂದ ದೇಶದಲ್ಲಿ ಶಾಂತಿಸ್ಥಾಪನೆ ಮಾಡುವ ಸಂದರ್ಭವನ್ನೂ ಸರಕಾರವು ಕಳೆದುಕೊಂಡಿತು. ಇಂಗ್ಲಂಡಿನಲ್ಲಿ ಸ್ವೇತಪತ್ರದ ಮೇಲೆ ಅಧಿಕಾರಿಗಳ ಸಮ್ಮತಿ ಮುದ್ರೆ ಬೇಗನೇ ಬೀಳುವುದರಲ್ಲಿದೆ. ಒಂದು ವೇಳೆ ಬೀಳದಿದ್ದರೂ ಕಾಂಗ್ರೆಸ್ಸಿನವರು ಚಳವಳಿಯ, ಅದರಲ್ಲಿ ದೇಶಕ್ಕೆ ಕ್ಷುದ್ರವಾದರೂ ಅಧಿಕಾರಿಗಳಿಗೆ ಅಶುಭವಾದ ವ್ಯತ್ಯಾಸವನ್ನುಂಟುಮಾಡುವುದು ಸಾಧ್ಯವಲ್ಲ ವಾದುದರಿಂದ, ಸಂಧಿಗಾಗಿ ಸೆರಗೊಡ್ಡಿ ದೇವಿದ ಮಹಾತ್ಮರನ್ನು ಒಮ್ಮೆ ಕರೆಯಿಸಿ ಒಣ ಪರಿಚಿಗಳನ್ನಾದರೂ ಹೂಡಿದು ಕಳುಹಿಸಬಾರದಿತ್ತೆ? ಸೈಸರಾಯಿಗಳಿಗೆ? ವೈಸರಾಯಿಗಳ ದರ್ಪಕ್ಕೆ ಸಿಕ್ಕು ತ್ತಿದ್ದರೆ ಪುನರಪಿ ಕೃತಯುಗವು ಬರಬಹುದಿತ್ತೆಂಬ ವಿಶ್ವಾಸ ನಮ್ಮಲ್ಲಿ ಇರಲಿಲ್ಲ; ಈಗಲೂ ಇಲ್ಲ. ಆದರೆ ದರ್ಪನಾಪೇಕ್ಷೆಯನ್ನು ಗಳನ್ನು ಕಾಣುವುದೊಂದು ಸಮ್ಮತಿಯಲ್ಲವೆ? ನಾವೊಂದನ್ನು ಮರೆತೆವು. ಈ ಪ್ರಶ್ನೆಯು ವಿಲ್ಲಿಂಗ್ಡನ್ನರ ದಂಬಾಚಿನಲ್ಲಿ ಇಲ್ಲ ವೆಂಬುದನ್ನು ಮರೆತೆವು. ಅವರು ವೈಸರಾಯಿ ಪದವಿಯ ಆರೋಹಣ ಮಾಡಿದಂದಿನಿಂದ ಒಂದೇ ಧೋರಣವನ್ನು ಅನುಸರಿಸುತ್ತಿರುವರು. ಒಂದೇ ಹಾಡನ್ನು ಹಾಡುತ್ತಿದ್ದರು. ಆ ರದು ತಪ್ಪಿಲ್ಲ. ದರ್ಪನಾಪೇಕ್ಷೆಯೆನ್ನು ವ್ಯಕ್ತ ಪಡಿಸಿದ ಗಾಂಧಿಗಳದ್ದೇ ತಪ್ಪು!

"ರಾಷ್ಟ್ರಬಂಧು"

ರಾಷ್ಟ್ರದ ಕಷ್ಟಕಾಲವು ಇನ್ನೂ ತೀರಿಲ್ಲವಾದುದರಿಂದ ಅನೀಕ್ಷೆತವಿದ್ದಂತೆ ಹಿಗನೇ ಜುಲೈ ದಿವಸ ನಡು ರಾತ್ರಿಯಲ್ಲಿಯೇ ಮಹಾತ್ಮರು ಬಂಧಿಸಲ್ಪಟ್ಟರು. ಇಂದು ಅವರ ಮೂರ್ತಿಯು ಕಣ್ಮರೆಯಾಯಿತು. ಅವರ ದರ್ಶನದಿಂದ, ಧಾರಣದಿಂದ ಸ್ಫೂರ್ತಿ ಹೊಂದಿ ಮತ್ತೆ ರಾಷ್ಟ್ರದಲ್ಲಿ ಪ್ರಚಂಡವಾದ ಆಂದೋಲನವೆದ್ದು ಈಗ ಸ್ಥಿರವಾದ ಅಧಾರವಿಲ್ಲದ ಸರಕಾರದವರ ಆಸನವು ಕುಸಿದು ವಿದ್ಯೋತಿಂಬ ಭಯದಿಂದ ಮಹಾತ್ಮರನ್ನು ಎರವಾಡಿ ಮಂದಿರದಲ್ಲಿ ತಂದು ನಿರ್ಬಧದಲ್ಲಿಟ್ಟಿರುವರು. ರಾಜ್ಯಸತ್ತೆಗೆ ಪ್ರಜಾನುರಾಗವೇ ಬಲವಾದ ಆಧಾರ. ಅದುವೇ ಮಾಯವಾದ ಮೇಲೆ ರಾಜ್ಯಸತ್ತೆಗೆ ಅಳಿಗಾಲವೇ ಸರಿ. ಈ ಮೂಲಭೂತ ತತ್ವವನ್ನು ಸರಕಾರದವರು ತಿಳಿಯದಿರುವುದು ಅತ್ಯಂತ ಶೋಚನೀಯವಾಗಿದೆ.

ಆರುನೋದಯ.

ನೋಟೀಸು.

ತಾ. 6th August 1933.

ಕಾರ್ಕಳ ತಾಲ್ಲೂ ತಿರ್ತಾಡಿ ಗ್ರಾಮದ ಪಟೇಲ್ ಎಸ್. ಡಿ. ನಾಭಿರಾಜನು ಸದ್ರಿ ಗ್ರಾಮದ ಪಲ್ಕಾರು ಕುಂಞಪ್ಪ ಸೇರಿಗಾರನ ಮಗ ದುಗ್ಗಯ್ಯ ಸೇರಿಗಾರನಿಗೆ ಈ ಮೂಲಕ ತಿಳಿಸುವುದೇನೆಂದರೆ:—

ನೀನು ತಾ. ೩೦-೬-೩೩ರಲ್ಲು ಶ್ರೀಯುತವಾದ ಸ್ವದೇಶಾಭಿಮಾನಿ ಪತ್ರಿಕೆಯ ಗಳನೇ ಪುಟದಲ್ಲಿ ನನ್ನ ಮೇಲೆ ತಪ್ಪು ಸುಳ್ಳು ಆರೋಪಣೆಗಳನ್ನು ಮಾಡಿ ಸೈನ್ ಮಾಡಿದ ನೋಟೀಸನ್ನು ನೋಡಿ ನಾನು ಬಹಳ ಆಶ್ಚರ್ಯಪಡುತ್ತೇನೆ. ಸದ್ರಿ ನೋಟೀಸಿನಲ್ಲಿ ನಮೂದಿಸಿದ ಪ್ರಕಾರ ನಿನ್ನ ಮನೆಯಲ್ಲಿ ಳಕವಾದ ಸಂಗ್ತಿ ನನಗೆ ಗೊತ್ತೂ ಇಲ್ಲ. ಆ ಳವಿನ ಬಾಬ್ತಿನಲ್ಲಿ ರಿಪೋರ್ಟು ಕೊಡಬೇಕಾಗಿ ನೀನು ನನ್ನ ಹತ್ತ ಹೇಳಿದ್ದೂ ಇಲ್ಲ. ತಕ್ಕಿನು ಸದ್ರಿ ಳವಿನ ಸಂಗ್ತಿಯನ್ನು ರಾಜಿಯಿಂದ ತೀರ್ಮಾನ ಪಡಿಸುತ್ತೇನೆ. ಅದಕ್ಕಾಗಿ ನೀನು ನನ್ನ ತಂದೆ ಮತ್ತು ಅಣ್ಣಂದಿರು ಕಬೂಲಿದ್ದೇನೆಂತ ಕೈಬೊಹರು ದಸ್ತುತು ಕೊಡಬೇಕೆಂತ ನಾನು ನಿನ್ನತ್ರ ಹೇಳಿದ್ದೂ ಇಲ್ಲ. ಮತ್ತು ಆ ರೀತಿ ನೀವು ಯಾರು ಕಾಲಿ ಕಾಗದಕ್ಕೆ ಕೈಬೊಹರು ಮಾಡಿ ನನಗೆ ಕೊಟ್ಟಿದ್ದೂ ಇಲ್ಲಾ. ಳವ ಬಾಬ್ತನ್ನು ರಾಜಿಮಾಡುವ ಅಧಿಕಾರವೂ ನನಗಿಲ್ಲ. ಈ ಸಂಗ್ತಿಗಳೆಲ್ಲಾ ಕೇವಲ ಸುಳ್ಳು; ಅನಾವಶ್ಯಕವಾಗಿ ನನ್ನ ಮಾನ ಹಾನಿ ಮಾಡಬೇಕೆಂಬ ಕೆಟ್ಟ ಉದ್ದೇಶದಿಂದಲೇ ನೀನು ಸದ್ರಿ ಸುಳ್ಳು ಸಂಗ್ತಿಗಳನ್ನು ಪತ್ರಿಕೆಯಲ್ಲಿ ಬಹಿರಂಗವಾಗಿ ಪ್ರಕಟಿಸಿದ್ದಾಗಿರುತ್ತದೆ. ನಿನ್ನ ಸದ್ರಿ ಪ್ರಕಟಣೆಯಿಂದ ನಾನು ಬಹಳ ಮನಸ್ಸು ನೊಂದವನಾಗಿರುತ್ತೇನ್ನುದೆ. ನನ್ನ ಆಪ್ತ ಮಿತ್ರರಲ್ಲಿಯೂ ಗ್ರಹಸ್ಥ ಕೂಟದಲ್ಲಿಯೂ ನನಗೆ ಮುಖವನ್ನು ತೋರಿಸುವಷ್ಟು ಅವಮಾನವಾಗಿರುತ್ತದೆ. ಆದ್ದರಿಂದ ನಿನ್ನ ಈ ಸುಳ್ಳು ನೋಟೀಸಿನಿಂದ ನನಗುಂಟಾದ ಮಾನನಷ್ಟಕ್ಕೆ ನೀನು ಮೇಲೆ ನ್ಯಾಯಸ್ಥಾನದಲ್ಲಿ ತೀರ್ಪು ನ ಕ್ರಿಮಿನಲ್ ವ್ಯವಹಾರಣೆಗಳನ್ನು ದಾಖಲ್ ಮಾಡಿಯತ್ತೇನೆ. ತಿಳಿದಿರುವುದು.

Shirthadi D. 6-7-'33 } **S. D. Nabhi Raj,** *of Shirthadi, Potail.*

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 70/1933.

ಡಿ. ವಿ. ಸುಬ್ಬರಾವ್—ಅರ್ಜಿದಾರ.

ಮತ್ತು

1. ಕಾವೇರಿ ಯಾನೆ ರಾಧಮ್ಮ. 2. ಸುಂದರಿಯಾನೆ ಭಗೀರಥಿ—ಎದ್ರಿರು.

ಕಾರ್ಕಳ ತಾಲೂಕು ನಾಡಿಪ್ಪಾಲ ಗ್ರಾಮದ ಸೋಮೇಶ್ವರ ಪೇಟೆಯಲ್ಲಿರುತ್ತಿದ್ದ ನಾಗಪ್ಪ ಶಾನುಭೋಗರಿಗೆ ಕಾರ್ಕಳ ಕಸಬೆಯಲ್ಲಿರುವ ಕೊಡ್ಮಣ್ಣು ಗೋಪಾಲ ಪ್ರಭುಗಳು ಕಳೆದ ತಾ. 15-8-1932ರಲ್ಲು ರೂಪ್ಯಾ 248ಕ್ಕೆ ಬರಕೊಟ್ಟ ಡಿಮಾಂಡ್ ಪ್ರೋಮಿಸರಿ ನೋಟಿನ ಅಸಲು ಬಡ್ಡಿ ಏವೇಜು ವಸೂಲು ಮಾಡುವ ಹಕ್ಕನ್ನು ಸದ್ರಿ ನಾಗಪ್ಪ ಶಾನುಭೋಗರು ಮೃತಪಟ್ಟ ನಂತರ ಅವರ ವಾರೀಸುದಾರರಾದ ಅವರ ವಿಧವೆ ಕಾವೇರಿಯಾನೆ ರಾಧಮ್ಮನು ಅರ್ಜ್ದುದಾರ ವಿ. ವಿ. ಸುಬ್ರಾಯರಿಗೆ ಪ್ರೆನ್ಸ್‌ಪರ ಮಾಡಿ ಕೊಟ್ಟ ಮೇರೆಗೆ ಸದ್ರಿ ಸುಬ್ರಾಯರು ಸದ್ರಿ ಗೋಪಾಲ ಪ್ರಭುಗಳ ಮೇಲೆ ಈ ಕೋರ್ಟು ಸ್ಮಾಲನಂಬ್ರ 104/1933ಕ್ಕೆ ದಾವಾ ದಾಖಲು ಮಾಡಿರುವಲ್ಲಿ ಸ್ಪೆಶಿಕಿನ ಸರ್ಟಿಫಿಕೇಟು ಹೊಂದಿ ದೇಕಾಗಿ ಹುಕುಂ ಕೊಟ್ಟಿರುವುದರಿಂದ ಅರ್ಜಿದಾರ ಸ್ಪೆಶಿಕಿನ ಸರ್ಟಿಫಿಕೇಟು ಆಪೇಕ್ಷಿಸಿ ಬರಕೊಂಡ ಅರ್ಜಿಯು ತಪ್ಪಿ ಬಗ್ಗೆ ಇದೇ 1933ನೇ ಇಸವಿ ಸಪ್ತಂಬರ ತಾ. 4ಕ್ಕೆ ಇಟ್ಟಿರುತ್ತದೆ. ಆ ಕುರಿತು ಯಾರಾದರೂ ಆಕ್ಷೇಪಗಳು ಇರುವಾದರೆ ಸದರಿ ದಿನ ಹಗಲು 10 ಘಂಟೆಗೆ ಈ ಕೋರ್ಟು ಹಾಜರಾಗಿ ಜ್ಞಾಪಿಸಿರಲು ಮಾಡಿಕೊಳ್ಳತಕ್ಕದ್ದು.

ಕಾರ್ಕಳ 9-8-1933 } **K. Vasudeva Kamath,** *B.A., B.L.* *(Counsel for Pititioner.)*

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P ನಂಬ್ರ 62/1933.

ಗ. ರಂಗಯ್ಯ ಶಾನುಭೋಗ—೩. ನರಸಿಂಹ ತ್ಯಾನುಭೋಗ—ಅರ್ಜಿದಾರರು.

ತಾ. ೩೮-೬-೧೯೩೩ರಲ್ಲು ಮೃತಪಟ್ಟ ರಂಜಾಳ ಮಂಜುನಾಥ ತಾನುಭೋಗರಿಗೆ ಬರತಕ್ಕ ಸಾಲದ ಹಣಗಳನ್ನು ವಸೂಲು ಮಾಡುವಲ್ಲಿ ೧ನೇ ಅರ್ಜಿದಾರನಿಗೆ ಸ್ಪೆಶಿಕಿನ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಅರ್ಜಿಯನ್ನು ತಾ. ೫-೮-೧೯೩೩ನೇ ದಿನ ತಪ್ಪಿಗೆ ಇಡೋಣಾಗಿಯಾಗಿದೆ. ಸದ್ರಿ ಅರ್ಜಿಗೆ ಆಕ್ಷೇಪ ಹೇಳುವವರು ತಾ. ೫-೮-೧೯೩೩ನೇ ಬೆಳಿಗ್ಗೆಗಿ ಘಂಟೆಗೆ ಕೋರ್ಟು ಮುಂದೆ ಹಾಜರಾಗಿ, ಜ್ಞಾಪಿಸಿರಲು ಮಾಡಿಕೊಳ್ಳಬಹುದು.

ಕಾರ್ಕಳ 4-8-1933 } **K. B. Joishi,** ಅರ್ಜದಾರರ ಪರ ವಕೀಲ.

ವಿವಿಧ ಸಮಾಚಾರ:—

ಮುಂಬಾಯಿಯ ಜನಸಂಖ್ಯೆ. ದಿಗಂಬರ ಮುನಿಗಳು! ನಿದ್ರೆಯೆಮ್ಮು ಬೇಕು? ದುರ ದೃಷ್ಟ! ಪ್ರೇಮ ವೈಚಿತ್ರ್ಯ. ಗವರ್ನರರ ಮೇಲೆ ಪಿತೂರಿ! ನಲ್ಲ ಭಭಾಯ್ ಪಟೇಲರವರು. ದುರ್ದೈವ! ಆತ್ಮಹತ್ಯೆ. ಸಫೋಡಿಲ್ಲ ಯಾ ಚುಕ್ಕುಹಣ್ಣಿನ ಗಿಡ.

ಮುಂಬಾಯಿಯ ಜನಸಂಖ್ಯೆ.

ಮುಂಬಾಯಿ ನಗರದ ಪುರುಷ ವರ್ಗದಲ್ಲಿ ಪ್ರತಿ ಸಾವಿರಕ್ಕೆ ೬೯೫ ಜನರೂ, ಸ್ತ್ರೀವರ್ಗದಲ್ಲಿ ಪ್ರತಿ ಸಾವಿರಕ್ಕೆ ೧೮೮ ಜನರೂ, ಸಂಪಾದಿಸುತ್ತಿರುವರು. ಒಟ್ಟು ಪ್ರಜಾಗಣದಲ್ಲಿ ಶೇಕಡಾ ೪೮೫೦೪೨ ಮುಂಬಯಿಗರು ಆಂದರೆ ೫೬೬೦೪೨ ಮುಂಬಯಿಗರು ಕೆಲಸ ಮಾಡಿ ಸಂಪಾದಿಸುತ್ತಿರುವರು. ಇವರಲ್ಲಿ ೫೧೧೦೩೦ ಜನರು ಗಂಡಸರು, ಉಳಿದ ೫೫೮೩೪ ಜನರು ಸ್ತ್ರೀಯರು. ಕೈಗಾರಿಕೆ ಸಂಸ್ಥೆಗಳಲ್ಲಿ ೧೫೪೪೪೬ ಗಂಡಸರೂ ೨೧೪೧೬ ಹೆಂಗಸರೂ, ವಾಹನಗಳನ್ನಿಟ್ಟು ಕೊಂಡವರಲ್ಲಿ ೪೦೨೧೪ ಗಂಡಸರೂ ೩೯೦ ಹೆಂಗಸರೂ, ಸುಮಾರು ೬೫೦೦೦ ಜನರು ವ್ಯಾಪಾರ ಸಲ್ಲಿಯುವ, ಇರತರಾಗಿರುತ್ತಾರೆ. ಮುನಿಸಿಪಾಲಿಟಿ ಮತ್ತು ಇತರ ಕೈಕೆಲ ಸಂಸ್ಥೆಗಳಲ್ಲಿ ೨೬೫೧೭ ಪುರುಷರೂ ೧೧೦೬೫ ಸ್ತ್ರೀಯರೂ ಸೇರಿದಿಯಲ್ಲಿರುವರು. ಸಂಸಾರಗಳಲ್ಲಿ ಊಳಿಗಕ್ಕೆ ಸೇರಿಕೊಂಡಿರುವವರಲ್ಲಿ ೩೪೧೧೭ ಗಂಡಸರೂ ೩೧೮೦ ಹೆಂಗಸರೂ ಇರುವರು.

ದಿಗಂಬರ ಮುನಿಗಳು!

ದಿಗಂಬರ ಪ್ರಾಗಡದ ೫೯ ನೇ ಪರಮಪೂಜ್ಯ ಜಯ ಸಾಗರ ಮುನಿ ಮಹರಾಜ್ ಎಂಬ ಜೈನ ಯತಿಗಳನ್ನು ಆಹ್ವಾನಾಪೂರ್ವಕ ನಗರದ ಬೀದಿಗಳಲ್ಲಿ ಅವರ ಪಲ್ಲಕ್ಕಿ ಪ್ರಕಾರ ನಿರ್ವಾಣವಾಗಿ ಮೆರವಣಿಗೆಯಿಂದ ಕರೆತರಬೇಕೆಂದು ಅಲ್ಲಿನ ಜೈನರು ಕೋರ್ಟಿಗೆ ಅರ್ಜಿ ಸಲ್ಲಿಸಿದರಾಗಿಯೂ, ಸರಕಾರದ ಪರವು ಮಾತ್ರ ಈ ಅರ್ಜಿಯನ್ನು ಕಾರ್ಯರೂಪಕ್ಕೆ ತರಲು ಅದಕಾಶ ಕೊಡಲಿಲ್ಲವಾಗಿಯೂ, ಪರದೆ ಹಾಕಿ ಮುನಿಗಳನ್ನು ಮೆರವಣಿಗೆ ಮಾಡಿಸಲಪ್ಪಣೆಯನ್ನಿತ್ತಿರುವರೆಂದೂ ತಿಳಿದುಬಂದಿದೆ ದೃತ ಭಂಗವಾದ ಮೆಲೆಕ್ಕೆ ಈ ಯತಿಗಳು ಸರಿಯಾದ ಅಪ್ಪಣೆ ದೊರೆಯುವ ವರೆಗೆ ನಿರಶನ ವೃತ ಮಾಡುವರಂತೆ ತಿಳಿಯಲಾಗಿದೆ

ನಿದ್ರೆಯೆಮ್ಮು ಬೇಕು?

ಜನರು ನಿದ್ರಿಸಹೋಗುವುದರಲ್ಲಿ ಹೆಚ್ಚಿನ ವ್ಯತ್ಯಾಸವನ್ನು ಮಾಡುವುದಂದರೂ, ಹೊತ್ತಿಗೆ ಶಕ್ತಿಂತೆ ನಿದ್ರಿಸದಿರುವುದರಿಂದಲೂ ಹೆಚ್ಚಿನ ರೋಗರುಜಿನಗಳಿಗೆ ಕಾರಣವಾಗುತ್ತದೆಂದು ಡೈನ್ ಲೇಡಾ' ನಲ್ಲಿಯ ಡ್ಯೂಸ್ ಬರ್ಗ್ ಎಂಬ್ದ ಡೈರೆಕ್ಟರ್ ಒಫ್ ಸ್ಯೊಲಜ್ಯಿಕ್ ಎಕ್ಸಪೆರಿಮೆಸ್ ಇವರು ತೋಧೆ ಮಾಡಿರುತ್ತಾರೆ ಇವರ ತೋಧನೆಯಂತೆ, ಮನುಷ್ಯರು ಅಕಾಲದಲ್ಲಿ ಅನಗತ್ಯವಾಗಿ ಹೆಚ್ಚು ನಿದ್ರೆ ಮಾಡಿ ಹೆಚ್ಚಿನ ತೊಂದರೆಗಳನ್ನು ಸೀಡಾಗುತ್ತಾರೆ. ಮಧ್ಯರಾತ್ರಿಯು ಮೊದಲು ನಾಲ್ಕೈದು ಘಂಟೆಗಳ ವರೆಗೆ ನಿದ್ರಿಸಿದರೆ ಆಯುರಾರೋಗ್ಯಗಳು ವೃದ್ಧಿಯಾಗುವುದೆಂದು ಅವರು ಕಂಡು ಹಿಡಿದಿರುತ್ತಾರೆ ಕೆಲವು ಮಂದಿ ಯುವಕರ ಮೇಲೆ ಅವರು ಈ ಪ್ರಯೋಗವನ್ನು ಒಂದು ವರ್ಷದ ವರೆಗೆ ನಡೆಸಿದರು ಈ ಹುಡುಗರು ಸಂಜೆ ೭ ಘಂಟೆಗೆ ನಿದ್ರಿಸುತ್ತಿದ್ದರು ಇತ್ತಕ್ಕೆ ೧೧-೩೦ ರ ಒಳಗೆ ಎಚ್ಚರಗೊಂಡು ನೈಯಲ್ಲಿ ಯಾವ ಆಲಸ್ಯವೂ ಇಲ್ಲದೆ, ಹೆಚ್ಚಿನ ಚಟುವಟಿಕೆಯಿಂದ ಕೆಲಸ ಮಾಡಿದರು ಇದರಿಂದಾಗಿ ಅವರ ಅರೋಗ್ಯವೂ ಚೆನ್ನಾಗಿರಕ್ಕೆಯೂ ವೃತ್ಯಾಸವನ್ನು ಹೊಂದಿಲಿಲ್ಲ — ಬದಲಾಗಿ, ವೃದ್ಧಿಗೊಂಡಿತು ಲೋಕದ ಎಲ್ಲಾ ಜನಾಂಗಗಳೂ ಇದೇ ರೀತಿಯಲ್ಲಿ ಆಭ್ಯಾಸವನ್ನು ಮಾಡಿದರೆ ಹೆಚ್ಚಿನ ಕೈಗಾರಿಕೆಯ ವೃದ್ಧಿಯೂ ವಾಣಿಜ್ಯ ವೃದ್ಧಿಯೂ ಆಗುವುದೆಂದು ಅವರು ಅಭಿಪ್ರಾಯ ಪಡುತ್ತಾರೆ ಶ್ರೀಧ ಪಯಸ್ಸರು ಈ ತೋಧಕರ ಅಭಿಪ್ರಾಯಕ್ಕೆ ಸಮ್ಮತಿ ನಡೆದರೆ ಏನೂ ಬಾಧಕವಾಗಲಾರದು ಎಂದು ಒಂದು ಪತ್ರಿಕೆಯು ಹೇಳುತ್ತದೆ

ದುರದೃಷ್ಟ!

ದಿಲ್ಲಿಯ ಹೋರಿ ಗೇಟಿನ ಒಳ ಮುಸಲ್ಮಾನ ವ್ಯಾಪಾರಿಯೊಬ್ಬನು ತನ್ನ ಮಂಚದ ಮೇಲೆ ರೂ. ೧೦೦ ನೋಟೊಂದನ್ನು ಇಟ್ಟಿದ್ದನು ಅದನ್ನು ಹತ್ತಿರ ಬಂದ ಹೆಣ್ಣು ಆಡು ಒಂದು ಕಕ್ಕನೆ ತಿಂದುಬಿಟ್ಟಿತು ಮುಸಲ್ಮಾನನು ಕಂಗಾಲಾದನು ಹೇಗಾದರು ಪಾಡಿ ಆ ನೋಟನ್ನು ಪಡೆಯುವ ಆಶೆಯಿಂದ ಆಡನ್ನು ಒಡನೆ ಕೊಂದು ಅದರ ಹೊಟ್ಟೆಯನ್ನು ಸೀಳಿದನು ಹುಡುಕಿದಾಗ, ಆ ನೋಟು ಮುದ್ದೆಯಾಗಿ ಜೋಳಿಗೆ ವಿಶ್ಯ ಆಹಾರದೊಡನೆ ಸೇರಿ ಹಾಳಾಗಿತ್ತು ಆದರ ನಂಬಿಕು ಆದರೂ ದೊರೆತರಾದೀತೆಂದು ಆತಿಪಟ್ಟರೂ ಅದನ್ನಿಗೆ ಅಮ ಸಿಗಲಿಲ್ಲ ಗಾಳಿಯೂ ಹೋಯಿತು, ಗಾಳಿ ಹಾಕಿದ ಕೈಯೂ ಹೋಯಿತು,

ಪ್ರೇಮ ವೈಚಿತ್ರ್ಯ.

ದಕ್ಷಿಣಾಫ್ರಿಕೆಯ ಉತ್ತರದಲ್ಲಿ ತ್ರಾನ್ಸ್‌ವಾಲ್ ಎಂಬಲ್ಲಿ ಒಂದು ಹೆಣ್ಣು ನಾಯಿಯು ಇದೆ. ಇದಕ್ಕೆ ಮೂಸಾ ಮರಿಗಳಿವೆ ಅದರೂ ಇದು ಮನೆಯುಟ್ಟಿನ ಒಂದು ಹಂದಿಯ ಮರಿಯನ್ನು ದಿನಾಲೂ ಎತ್ತಿ ತೊಂಡು ದೂರದ ಪೊದರುಗಳಿಗೆ ಕುಳಿತು ಅದಕ್ಕೆ ನೊಲೆಗೊಟ್ಟು ಸಾಕುತ್ತದೆ. ಹಂದಿಯ ಮರಿಯೂ ಕರಿಯಾ ಈ ತಾಯಿ ನಾಯಿಯನ್ನು ಬಿಟ್ಟಿರಲು ಒಪ್ಪುವುದಿಲ್ಲ. ನಾಯಿಯ ಹಾಲನ್ನು ಕುಡಿದು ಈ ಹಂದಿಯ ಮರಿಯು ಬಹು ಚೆನ್ನಾಗಿ ಬೆಳೆದಿದೆ. ಪ್ರೇಮ ದೇವಿ ಈ ಮರಿಯನ್ನು ನಾಯಿಯಿಂದ ದೂರವಿಟ್ಟುಡೇ ಆದರೆ ಅದರ ಅರ್ಜನಾದಕ್ಕೆ ತೊಡೆ ಮೊದಲಿರುವುದಿಲ್ಲ. ಈ ಪ್ರೇಮ ವೈಚಿತ್ರ್ಯವನ್ನು ನೋಡಲು ಜನರು ತವಕ ಪಡುತ್ತಿರುವರು.

ಗವರ್ನರರ ಮೇಲೆ ಪಿತೂರಿ!

ಪೂರ್ವ ಬಂಗಾಳ ರೈಲ್ವೆಗೆ ಸೇರಿದ ಕಲಿಮಪುರ ಸ್ಟೇಷನಿನ ಬಳಿ, ಕಲ್ಕತ್ತಾ ಪಟ್ಟಣದಿಂದ ೧೫೫ ಮೈಲು ದೂರದಲ್ಲಿ ಬಂಗಾಳ ಪ್ರಾಂತ್ಯದ ಗವರ್ನರರಾದ ಸರ್ ಜೋನ್ ಆಂಡರ್‌ಸನ್ ಎಂಬವರು ಕಳೆದ ತಿಂಗಳ ೪೦೦೦ರಲ್ಲಿ ಆ ಮಾರ್ಗವಾಗಿ ಸ್ಪೆಶಲ್ ಟ್ರೈನ್‌ನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಆ ಯಾರೋ ರೈಲಿನ ಮುಂದೆ ಸಿಡಿಮದ್ದನ್ನು ಇರಿಸಿದ್ದರು ರೈಲು ಅದನ್ನು ದಾಟುತ್ತಲೇ ದೊಡ್ಡ ಶಬ್ದವಾಯಿತು ಯಾರಿಗೂ ಅಪಾಯ ಸಂಭವಿಸಿರುವುದಿಲ್ಲ ಪರೀಕ್ಷಿಸಲಾಗಿ ಇದು ಯಾರೋ ಕುಬೇಷ್ಟಗಾಗಿ ಮಾಡಿದ ಕೆಲಸವೆಂದೂ, ಗವರ್ನರರನ್ನು ಗದರಿಸಲು ಮಾಡಿದಕುಟಿಲೋಪಾಯವೆಂದೂ ತಿಳಿದುಬಂತು

ನಲ್ಲ ಭಭಾಯ್ ಪಟೇಲರವರು.

ಈ ವಲ್ಲಭಭಾಯ್ ಪಟೇಲರವರು ಗುಜರಾತ್ ಪ್ರಾಂತ್ಯದ ಖೈರಾ ಜಿಲ್ಲೆಯ ನದಿಯಾದ್ ಎಂಬಲ್ಲಿ ಕರಮಸಾದ್ ಎಂಬ ಚಿಕ್ಕ ಹಳ್ಳಿಯ ರೈತ ಕುಟುಂಬದಲ್ಲಿ ಜನಿಸಿದರು ಇವರು ಬಡು ಜನ ಮಕ್ಕಳು. ಎಸೆಂಟ್ಲಿ ಅಡ್ಮಕ್ಟದಾಗಿದ್ದ ವಿ ಜೆ ಪಟೇಲರು ಇವರ ಅಣ್ಣಂದಿರು ಇವರು ಸಾಲ್ಕನೇಯವರು ಇವರು ಬಹಳ ಕಷ್ಟದಿಂದ ವಕಾಲತ್ತಿನ ವರೆಗೆ ವಿದ್ಯೆ ಕಲಿತರು ಅದಾದ ಮೇಲೆ ಇವರು ಇಂಗ್ಲಾಂಡಿಗೆ ತೆರಳಿ ಅಲ್ಲಿ ಬ್ಯಾರಿಸ್ಟರ್ ಪರೀಕ್ಷೆ ಪಾಸಾಗಿ ಹಿಂದಿರುಗಿದರು, ಈ ಕಾಲ್ಕೆ ವಿಠ್ಠಲ್ ಭಾಯ್ ಪಟೇಲರೂ ಬ್ಯಾರಿಸ್ಟರರಾಗಿ ಹಿಂದೂದೇಶಕ್ಕೆ ಹಿಂದಿರುಗಿದರು ಇಬ್ಬರು ಸಹೋದರರೂ ವಕಾಲತ್ತಿನಲ್ಲಿ ಹೆಚ್ಚಿನ ಹೆಸರುವಾಸಿಗಳಾದರು ಈ ಸಮಯದಲ್ಲಿ ಸಬರ್ಮತಿಯಲ್ಲಿದ್ದ ಗಾಂಧಿಜೀಯವರ ಪರಿಚಯವು ವಲ್ಲಭಭಾಯಿಯವರಿಗಾಗಿ ಆವರಿಂದಾರ್ಜಿಸಲ್ಪಟ್ಟರು ೧೯೧೬ರಲ್ಲಿ ಎಲ್ಲಕ್ಕೂ ಕಿರೀಟಪ್ರಾಯನ್ನಿತ್ತ ಗಾಂಧಿಜೀಯವರ ಭೂಪದಂತ ದರು. ೧೯೧೪—೧೮ರ ಘೋರ ಯುದ್ಧಕ್ಕೆ ಹಿಂದೂಸ್ಥಾನದಿಂದ ಯಾರೂ ಹೋಗಬಾರದಾಗಿ ಕೈರಾ ಡಿಸ್ಟ್ರಿಕ್ಟ್‌ನಲ್ಲಿ ಕೆಲಸ ಮಾಡಿದರು ೧೯೧೭ರಲ್ಲಿ ಇವರು ಅಹ್ಮದಾಬಾದಿನ ಶಾಸ್ತ್ರೀಯ ಸಭೆಯ ಸ್ಥಾಗಕ ಸಮಿತಿಯ ಅಧ್ಯಕ್ಷರಾದರು ೧೯೨೪ರಲ್ಲಿ ಅಹ್ಮದಾಬಾದಿನ ಗಾಂಧೀ ವಿದ್ಯಪೀಠದ ವಿದ್ಯಾಲಯಕ್ಕೆ ಹಣವನ್ನು ಕೇಬರಿಸಿದರು ೧೯೨೮ರಲ್ಲಿ ಗುಜರಾತಿನಲ್ಲಿ ತಲೆದೋರಿದ ಕ್ಷಾಮದ ಬೇಳೆಯಲ್ಲಿ ವಲ್ಲಭಭಾಯ್ ಯವರು ಅನ್ನಕಾರವಿಲ್ಲದೆ ಕೆಲಸ ಮಾಡಿ ಸಾವಿರಾರು ಜನರನ್ನು ರಕ್ಷಿಸಿದರು. ಇವರನ್ನು ಗುಜರಾತ್ ಗಾಂಧಿ ಯೆಂದೂ ಕರೆಯುತ್ತಿದ್ದರು ಕರಾಚಿಯಲ್ಲಿ ಕೂಡಿದ ೪೬ನೇ ರಾಷ್ಟ್ರೀಯ ಸಭೆಗೆ ಇವರು ಅಧ್ಯಕ್ಷರಾದರು. ಆಗಲೇ ೧ಹಾರಣೀಯರ ಗುರು ಸಂಪೂರ್ಣ ಸ್ವಾತಂತ್ರ್ಯವೆಂದಾಯತು ಇವರು ಈಗ ಮೂಸಿನಿ ನೋಪಾಸಿಂದಿರುತ್ತಲಿವರು

ದುರ್ದೈವ!

ಜೆಕೋಸ್ಲೋವೋಕಿಯಾದಲ್ಲಿ ವರ್ತಕನೊಬ್ಬನು ಜರ್ಮನಿ ದೇಶಕ್ಕೆ ಹೋಗಿ ತನ್ನಲ್ಲಿದ್ದ ಧನವನ್ನೆಲ್ಲಾ ಜರ್ಮನಿಯ ಮಾರ್ಕ್ ನೋಟುಗಳಿಗೆ ಬದಲಾಯಿಸಿಕೊಂಡನು ಇದರಿಂದಾಗಿ ತನಗೆ ಹೆಚ್ಚಿನ ಲಾಭವು ದೊರೆತೀತೆಂದು ಅವನ ಅಶೆಯಾಗಿದ್ದಿತು ಇಷ್ಟರಲ್ಲಿ ಮಾರ್ಕ್ ನೋಟುಗಳ ಬೆಲೆ ವಿಪರೀತವಾಗಿ ಬಿದ್ದುಹೋಯಿತು ಪಾಪಪಥನ ದಶವಿದ್ದ ನೋಟುಗಳೆಲ್ಲ ಬೆಲೆಯಿಲ್ಲದಂತಾದುವು ಒಂದು ಸಮಯದಲ್ಲಿ ಅಮಿತವಾಗಿದ್ದ ಅವನು ಬಡ ಫಕೀರನಾದನು ಈಗ ಅವನು ಕಂಗಾಲಾಗಿ ತನ್ನಲ್ಲಿರುವ ನೋಟುಗಳೆಲ್ಲಾ ಮನೆಯ ಗೋಡೆಗಳಿಗೆ ಹಚ್ಚಿರುವನ್ನನೆ ಇದನ್ನು ಕಾಣಲು ಬಹು ಜನರು ಬರುತ್ತಿರುವರು ಬಹಳ ಬಡವನಾಗಿರುವುದರಿಂದ ಮನೆಗೆ ಬರುವ ಜನರಿಂದ ನೋಟುಗಳನ್ನು ಗೋಡೆಗಳಲ್ಲಿ ಕಾಣುತ್ತಿರುವ ಮೊದಲು ಸ್ವಲ್ಪ ಹಣವನ್ನು ತನಗೆ ಟಿಕೇಟು ಪಡೆಕೊಂಡು ಕೊಡಬೇಕೆಂದು ಕೇಳುತ್ತಿರುವನು

ಆತ್ಮಹತ್ಯೆ.

ಕಡ್ಡಾನೂರಿನ ಬಳಿ ಅಲವಿಲ್ಲವೆಂಬಲ್ಲಿಯ ಬಾವಿಯೊಂದರಲ್ಲಿ ತರುಣ ತರುಣಿಯರಿಬ್ಬರ ಹೆಣಗಳು ಕಾಣ ದೊರೆತಿವೆ ಪರೀಕ್ಷಿಸಲಾಗಿ, ಪ್ರಣಯ ಪ್ರಣಯಿನಿಗಳೆಂದು ತಿಳಿದು ಬಂತು. ತರುಣನು ತೀಯ ಜಾತಿಯವನ್ನು, ತರುಣಿಯು ನಾಪಲಿಗ ಜಾತಿಯವಳು. ವಿವಾಹ ವಾಗಲು ಅಡ್ಡಯಾದುದರಿಂದ ಅವರು ನಿರಾಶೆಗೊಂಡು ಈ ರೀತಿಯ ಹೆಡ್ಡ ಕೆಲಸಕ್ಕೆ ನಿರ್ಧಾರ ಮಾಡಿದರೆಂದು ತಿಳಿದುಬಂತು

ಸಫೋಡಿಲ್ಲ ಯಾ ಚುಕ್ಕುಹಣ್ಣಿನ ಗಿಡ

ಇದರ ಮೂಲವು ಅಮೇರಿಕ ದೇಶವು ಇದು ಉಷ್ಣಪ್ರದೇಶ ದಲ್ಲಿ ಬೆಳೆಯತಕ್ಕ ಮರವು ಸುಮಾರು ಒಂದು ಶತಮಾನದ ಹಿಂದೆ ಇದನ್ನು ಬಂಗಾಳಕ್ಕೆ ತಂದು ನೆಟ್ಟರು ಈಗ ಇದು ನಮ್ಮ ದೇಶದ ಅನೇಕ ಭಾಗದಲ್ಲಿ ತುಂಬಾತ್ತ ಬೆಳೆಯುತ್ತಿದೆ ಪೂರ್ವ ಮತ್ತು ಪಶ್ಚಿಮ ಕರಾವಳಿ ಜಿಲ್ಲೆಗಳಲ್ಲಿ ಸಮೃದ್ಧಿಯಾಗಿ ಬೆಳೆಯುವುದು

ಈ ಹಣ್ಣಿನ ಬೀಜದಿಂದಾದ ಮರವು ೧೦ ಯಾ ೧೫ ವರ್ಷಗಳಲ್ಲಿ ಫಲದಿಯುವುದು. ಇದನ್ನು ಹೆಚ್ಚಾಗಿ ಕಿರ್ಪಾಯೆಂಬ (Mimosop Hexandra) ಇದೇ ಜಾತಿಗೆ ಸೇರಿದ ಕಾಡುಹಣ್ಣಿನ ಗಿಡಕ್ಕೆ ಈ ಹಾಡು (ಕಸಿಕಟ್ಟುವುದು) ಮಾಡುತ್ತಾರೆ ಕಿರ್ಪಾಗಿಡಕ್ಕೆ ಕಟ್ಟಿದ ಕಸಿ ಗಳು ೨ ಯಾ ೩ ವರ್ಷದಲ್ಲಿ ತಪ್ಪದೆ ಫಲದಿಯುತ್ತದೆ ಮತ್ತು ದೊಡ್ಡದ ಕಾಯಿಯ ಮರದ ಹಾಗೆ ತುಂಬಾ ಫಲದಿಯುತ್ತದೆ ಈ ಜಾತಿಯ ಗಿಡಕ್ಕೆ ಕಟ್ಟಿದ ಒಂದೇ ಒಂದು ಮಕವಾದರೂ ಫಲ ಬಿಡದೆ ಇರುವು ದಿಲ್ಲ ಸಫೋಡಿಲ್ಲದಲ್ಲಿ ಬಾರಮಾತ್ಯಯೆಂಬ ಜಾತಿಯು ತೆಂಗಿನ ಮರದ ಹಾಗೆ ವರ್ಷದ ಎಲ್ಲಾ ತಿಂಗಳಲ್ಲಿಯೂ ಫಲಧರಿಯುವುದು ನೂವಿನ ಮರವಾದರೆ ಒಂದು ವರ್ಷ ಫಲಬಿಟ್ಟರೆ ಮತ್ತೊಂದು ವರ್ಷ ಕಾಯಿಬಿಡದೆ ಇರುವುದುಂಟು ಈ ಮರವು ಚೆನ್ನಾಗಿ ಸಾಕಿದರೆ ತೆಂಗಿನ ಮರದ ಹಾಗೆಯೇ ಪ್ರತಿ ವರ್ಷವೂ ಸಮೃದ್ಧಿಯಾಗಿ ಫಲ ಕೊಡುವುದು ಕಾಯಿಯು ೪ ತಿಂಗಳಲ್ಲಿ ಕೈಯಿಗೆ ಬರುವುದು. ೧೦ ಯಾ ೧೫ ವರ್ಷ ಪ್ರಾಯದ ಚೆನ್ನಾಗಿ ಸಾಕಿದ ಮರವು ೬ ಯಾ ೮ ಸಾವಿರ ಹಣ್ಣುಬಿಡುವುದು ಚೆನ್ನಾಗಿ ಬೆಳೆದ ದೊಡ್ಡ ಮರದಿಂದ ವರ್ಷ ಒಂದಕ್ಕೆ ೩೦ ಯಾ ೪೦ ಸಾವಿರ ಹಣ್ಣು ದೊರೆಯಂತಾಗುವುದು ಕೂಡಾ ಉಂಟು ಕಾಯಿಯು ನೋಡಲಿಕ್ಕೆ ದೊಡದ ಕಾಯಿಯ ಹಾಗೆಯೇ ಇರುವುದು ಹಣ್ಣು ಗಾತ್ರದಲ್ಲಿಯೂ ದೊಡದ ಕಾಯಿಯಷ್ಟೇ ದೊಡ್ಡದು ಇದರಲ್ಲಿ ಒಂದು ಜಾತಿಯ ಮರದ ಹಣ್ಣು ಭಾರದಲ್ಲಿ ೩೬ ತೊಲೆಯಂದ್ದು, ಗಾತ್ರದಲ್ಲಿ ಕ್ರಿಕೆಟ್ ಬೊಲಿನಷ್ಟು ದೊಡ್ಡದಾಗಿರುವುದು ಹಣ್ಣಿನ ಮೇಲೆ ಬಹು ತೆಳ್ಳಗೆ ಸಿಪ್ಪೆ ಇರುವುದು ಕಾಯಿಯು ಬಿಗಾಗಲು ರುಚಿ, ಸರಿಯಾಗಿ ಫಕ್ವವಾದ ಹಣ್ಣು ಜೇನಿನ ಹಾಗೆ ಮಧುರವಾಗಿದ್ದು ಬಹಳ ರುಚಿಯಾಗಿರುತ್ತದೆ ಹಣ್ಣು ಅತಿ ಪಕ್ವವಾದರೂ ರುಚಿ ಕೆಡುವುದು. ಇದು ಬಹಳ ಬೇಗನೆ ಜೀರ್ಣವಾಗುವುದು ಆಜೀರ್ಣ, ಪಿತ್ತರೋಗ, ಕ್ಷಯ ಮುಂತಾದ ಕಾಲೆಯವರಿಗೆ ಉತ್ತಮ ಆಹಾರ ಹಣ್ಣಿನಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ಧಾತು ಹೆಚ್ಚಿಗೆ ಅಂಶವಿರುವುದರಿಂದ ರಕ್ತವನ್ನು ವೃದ್ಧಿಪಡಿಸುವುದು. ಗಿಡವನ್ನು ೨೫ ಫೀಟ್ ಯಾ ೩೦ ಫೀಟ್ ದೂರಕ್ಕೊಂದರಂತೆ ಮೂರು ಆಡಿ ಉದ್ದ ಅಗಲ ಆಳದ ಹೊಂಡಗಳನ್ನು ಮಾಡಿ ಹೊಂಡ ಒಂದಕ್ಕೆ ಒಂದು ಹೊರೆ ಹಸಿ ಸೊಪ್ಪು ಹಾಕಿ ಹೊಂಡವನ್ನು ಮ್ಯಾಲ್ಕಾಲುಪಾಲು ಮೇಲ್ಮಣ್ಣಿನ ಮಣ್ಣಿನಿಂದ ತುಂಬುವುದು ಆ ಮೇಲೆ ಪ್ರತಿ ಹೊಂಡಕ್ಕೂ ಒಂದು ಪೆಡಿಗೆ ಸಾಧಾರಣ ಹಳೆ ಹಟ್ಟಿಗೊಬ್ಬರ, ಅರ್ಧ ಪೆಡಿಗೆ ಬೂದಿ ಹಾಕಿ ಇವನ್ನು ಮಣ್ಣಿನೊಂದಿಗೆ ಚೆನ್ನಾಗಿ ಬೆರಸಿ, ಗಿಡಗಳ ಪಾತ್ರೆ ಒಡೆದು ಕಸಿಕಟ್ಟಿದ ಭಾಗವು ಮಣ್ಣಿನಲ್ಲಿ ಮುಳುಗದ ಹಾಗೆ ನೆಡಬೇಕು. ಬೋನ್‌ಮೀಲ್ ದೊರಕಿದರೆ ಒಂದು ಗಿಡಕ್ಕೆ ೩ ರಾತ್ತು ಮೇರೆಗೆ ಹಾಕ ಲಹುದು

ಬೇಕಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಊರುಗಳಲ್ಲಿ ಅಮೇರಿಕನ್ ಚಿಮ್ಣಿ ಎಣ್ಣೆ (Kerosene Oil) ಸೊದಲಾದುವನ್ನು ಮಾರಲು ಏಜೆಂಟರು ಬೇಕಾಗಿದ್ದಾರೆ ಅತ್ಯುತ್ತಮ ತರದ ಎಣ್ಣೆ—150 ತಿಗ್ರಿ ಫಯರ್ ಟೆಸ್ಟ್ (150 degrees Fire test.)

ವಿಜಂಟರಾಗುವವರಿಗೆ ಉದಾರ ಶರ್ತಗಳು—ಕೈ ತುಂಬಾ ಲಾಭ ಸ್ವಲ್ಪ ನಗದಿ ಜಾಮೀನನ್ನು ಕೊಡಲೊಪ್ಪುವವರು ಮಾತ್ರ ಕೆಳಗಿನ ವಿಳಾಸಕ್ಕೆ ಕೂಡಲೇ ಬರೆಯಿರಿ ಇದೀಗಲೇ ಕೆಲವು ವಿಜಿನ್ಸಿಗಳು ತುಂಬಿವೆ.

ವಿಳಾಸ:— **T. Madhava Pai,**
Court Road, KASARGOD, S. K.

ಶಾರ್ವರಿನಾಮ ಸಂವತ್ಸರದ ಶ್ರೀಮುಖ ಸೋದರದ
ಶ್ರಾವಣ ಬ. ೭ ಶನಿವಾರದಿಂದ ಶ್ರೀಮುಖ ಸೋದರ
ಶ್ರಾವಣ ಬ. ೧೩ ಶುಕ್ರವಾರದ ವರೆಗಿನ ಪಂಚಾಂಗ

(ಗಾಯಕನೆಯ ಕರ್ನಾಟಕ—ಆಟ).

ತಾರೀಖು	ವಾರ	ತಿಥಿ	ಭೋಗ	ನಕ್ಷತ್ರ	ಭೋಗ	ಸೂರ್ಯೋದಯ	ಸೂರ್ಯ. ಅಸ್ತ
12	ಶನಿ	೭	೪೫	ಧನಿಷ್ಠ	೩೦	6.18	6.52
13	ರವಿ	೮	೪೦	ಧನಿಷ್ಠ	೫೯	6.19	6.51
14	ಸೋಮ	೯	೩೫	ಶತಭಿಷ	೨೮	6.19	6.50
15	ಮಂಗ	೧೦	೩೦	ಪೂರ್ವಾಭ	೫೭	6.19	6.49
16	ಬುಧ	೧೧	೨೭	ಉತ್ತರಾಭ	೨೬	6.19	6.48
17	ಗುರು	೧೨	೨೫	ರೇವತಿ	೪೪	6.19	6.48
18	ಶುಕ್ರ	೧೩	೨೧	ಅಶ್ವಿನಿ	೪೦	6.19	6.47

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಪರಮಾವಧಿ	Minimum ಅಲ್ಪಾವಧಿ	Rainfall. ಮಳೆ ದಿನದ ಮಳೆ	ಜಮಲಾ ಮಳೆ.
3	82— 7	75— 9	0—60	—
4	83— 7	73— 2	1—25	—
5	82— 9	75— 5	0—85	—
6	84— 6	73— 1	2—18	—
7	81— 0	73— 3	0—78	—
8	82— 1	74— 9	0—53	—
9	83— 1	78— 9	0—20	124-71

ಮಂಗಳೂರಿನ ಪೇಟೆ ಧಾರಣೆ.

ಪೇನಸು	ಇಂದ ರೂ.	ಆ.	ವರೆಗೆ ರೂ.	ಆ.
ರಾಶಿ ಅಕ್ಕಿ ...	3—	8	4—	0
ಮಸ್ಕತಿ ...	4—	4	4—	10
ಗುಮ್ಮೆ ...	3—	10	4—	2
ಸುಣ್ಣ ...	3—	8	3—	15
ಊದ ಅವ್ವಲ್ ಬೆಳ್ತಿಗೆ ...	4—	6	5—	0
ರಂಗೂನು ಬೆಳ್ತಿಗೆ ಸೋಣೆ ೧ಕ್ಕೆ ...	5—	14	6—	8
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ ...	4—	0	4—	4
ಗೋದಿ ಸೋಣೆ ೧ಕ್ಕೆ ...	10—	12	12—	8
ತೊಗರಿ ಸೋಣೆ ೧ಕ್ಕೆ ...	9—	8	12—	0
ಹುರುಳಿ ಸೋಣೆ ೧ಕ್ಕೆ ...	5—	11	6—	2
ಕಡಲೆ ಸೋಣೆ ೧ಕ್ಕೆ ...	8—	8	10—	4
ತೊಗರಿಬೇಳೆ ಸೋಣೆ ೧ಕ್ಕೆ ...	11—	0	20—	0
ಉದ್ದು ಸೋಡೆ ೧ಕ್ಕೆ ...	8—	8	9—	0
ಹೆಸರು ಸೋಡೆ ೧ಕ್ಕೆ ...	8—	0	9—	0
ಊರುಬೆಲ್ಲ ಖಂಡಿ ೧ಕ್ಕೆ ...	57—	8	60—	0
ಉಪ್ಪು ಸೋಣೆ ೧ಕ್ಕೆ ...	5—	8	6—	0
ಪೊಪ್ಪ ಖಂಡಿ ೧ಕ್ಕೆ ...	55—	0	60—	0
ಪೊಪ್ಪ ಹಿಂಡಿ ಖಂಡಿ ೧ಕ್ಕೆ ...	20—	0	22—	0
ಎಳ್ಳಿಂಡಿ ಖಂಡಿ ೧ಕ್ಕೆ ...	22—	8	21—	4
ಪೊಪ್ಪು ಎಳ್ಳೆ ಮಣ ೧ಕ್ಕೆ ...	3—	13	5—	0
ಎಳ್ಳೆಣ್ಣೆ ಮಣ ೧ಕ್ಕೆ ...	5—	8	6—	0
ಚಿಮಣಿಎಣ್ಣೆ ಬಿಟ್ಟಿಗೆ ೧ಕ್ಕೆ ...	7—	4	8—	12
ಪೋರಿನ ಸಕ್ಕರೆ ಮಣ ೧ಕ್ಕೆ ...	4—	1	4—	2
ಹೊಸ ಮೆಣಸು ...	5—	0	6—	4
ಸಾಸಿವೆ ಮುಡಿ ೧ಕ್ಕೆ ...	4—	12	5—	0
ಕಾಳುಮೆಣಸು ಖಂಡಿ ೧ಕ್ಕೆ ...	140—	0	160—	0
ಯೆಳ್ಳುಕ್ಕಿ ಮಣ ೧ಕ್ಕೆ ...	19—	0	22—	8
ಗೇರುಬೀಜ ಮುಡಿ ೧ಕ್ಕೆ ...	3—	4	3—	7
ಕಚ್ಚೂರ ಖಂಡಿ ೧ಕ್ಕೆ ...	25—	0	25—	8
ತಾಂಬ್ರು ತಗಡು ಮಣ ೧ಕ್ಕೆ ...	11—	0	11-4	8
ತಾಂಬ್ರು ಪಾತ್ರೆಗಳು ಮಣ ೧ಕ್ಕೆ ...	15—	0	16—	0
ಜೀನಬೆಲ್ಲ ಸೇರು ೧ಕ್ಕೆ ...	14—	12	15—	0
ಒಕ್ಕಳ ತಗಡು ಮಣ ೧ಕ್ಕೆ ...	9—	0	9—	8
ಕವಸು ೧ಕ್ಕೆ ...	19—	8	19—	10
ಹುಣಸೆ ಹುಳಿ ಖಂಡಿ ೧ಕ್ಕೆ ...	35—	0	42—	8
ನೇಟಿವ್ ಕಾಫಿ ಖಂಡಿ ೧ಕ್ಕೆ ...	200—	0	225—	0
ಪಿಬೇರಿ ಕಾಫಿ ಖಂಡಿ ೧ಕ್ಕೆ ...	270—	0	280—	0
ಚಕ್ಕೆ ಅಡಕೆ ...	130—	0	140—	0

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವುವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೊಡಲಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕಾರವಳಿ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಉಳಿತು ನಾಳ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ತಿಳಿಕಲ್ಲಿನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡದೇ ಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು. 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲಪುವಿರಿ. ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ದೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಕಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary.

The Canara Public Conveyance Company Ltd., Mangalore

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು.

ಮುಂಬಾಯಿಯಿಂದ – ಮಂಗಳೂರಿಗೆ

ಮಂಗಳೂರಿನಿಂದ – ಮುಂಬಾಯಿಗೆ

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ

ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು – ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ – ಶಿವಮೊಗ್ಗಕ್ಕೆ, ಬೇರೂರಿಗೆ, ಕಡೂರಿಗೆ.
– ಮೂಡಗೆರೆಗೆ, ಸಕಲೇಶಪುರಕ್ಕೆ.
– ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
– ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿಸುಕೊಳ್ಳಿರಿ.

ಪ್ರಪಂಚದ ಆರ್ಥಿಕ ಮಹಾಸಭೆ:—

ಈ ಮಹಾಸಭೆಯು ಉಪಸಂಹರಿಸಲ್ಪಡುವ ಸ್ಥಿತಿಗೆ ಬಂದಿರುವುದು. ಈ ಸಭೆಗೆ ೬೬ ಸಂಸ್ಥಾನಗಳ ಪ್ರತಿನಿಧಿಗಳು ಬಂದಿದ್ದರು. ಬಂದವರೂ ಸ್ವಾರ್ಥಪರತೆಯ ತಿಮಿರದಿಂದ ಇತಿಯುವುದಕ್ಕೆ ಒಪ್ಪಿದ್ದಿಲ್ಲ. ಎಲ್ಲಾ ಸಂಸ್ಥಾನಗಳೂ ನಾಶವಾದರೂ ಆಗಲಿ, ನಮ್ಮ ಸಂಸ್ಥಾನ ಮಾತ್ರ ಸರಿಯಾಗಿರಬೇಕು ಅದಕ್ಕೆ ಗಮನವನ್ನು ಕೊಡು ಪುವು ಪಕ್ಷ ಕೆಲಸವೆಂಬ ಮನೋಭಾವವನ್ನು ಇವರಲ್ಲಿ ಮುಖಂಡ ರಾಯರು ತೋರಿಸಿದ್ದರಿಂದ ಈ ಸಭೆಯ ಉದ್ದೇಶಗಳು ನೆರವೇರಲಿಲ್ಲ. ಸ್ವತಂತ್ರವಿರಬೇಕೆಂದಲ್ಲಿ ಎಲ್ಲಾ ಸಂಸ್ಥಾನಗಳೂ ನೆಮ್ಮದಿಯಾಗಿರಬೇಕಾದರೆ ಅಂತಹವುಗಳನ್ನು ಹೇಗೆ ಇಟ್ಟುಕೊಳ್ಳಬೇಕೋ ಪರಸ್ಪರ ಸಹಕಾರವನ್ನು ಹೇಗೆ ಮಾಡಬೇಕೋ ದಂಡಗಾತಿಕೆ ಮರ್ಜುಗಳನ್ನು ಹೇಗೆ ನಿಲ್ಲಿಸ ಬೇಕೋ ಎಲ್ಲರೂ ಬುದ್ಧಿಬಲದಿಂದಲೂ ಬಾಹು ಬಲದಿಂದಲೂ ಶಾಶ್ವತವಾದ ತೀರ್ಮಾನಗಳನ್ನು ಪಿಟ್ಟು ಹೇಗೆ ಆತ್ಮಾವಲಂಬಿಗಳಾಗಬೇಕೋ ಯಾರೂ ಆಕ್ರಮಣವನ್ನು ಮಾಡದಂತೆ ಹೇಗೆ ವಿರ್ಪಾಡುಗಳನ್ನು ಮಾಡಬೇಕೋ ಇವುಗಳನ್ನು ಪರ್ಯಾಲೋಚಿಸುವುದಕ್ಕೆ ಈ ಸಭೆಯು ತೀರಿಲ್ಲವಾಯಿತು. ಇದರ ಭಾರವನ್ನೆಲ್ಲಾ ಮೆಕ್‌ಡೊನಾಲ್ಡರವರು ಬಹಿ ನಿಸ್ಸರು. ಅವರು ಶ್ರದ್ಧೆಯಿಂದ ಕೆಲಸ ಮಾಡಿದೆ ಹೋದದ್ದರಿಂದ ಈ ಸಭೆಯು ಹಲವಕಗಳು ವಿರ್ಧಕವಾಯಿತೆಂಬುದಾಗಿಯೂ ಇದಕ್ಕೆ ಇವರೇ ಕಾರಣಾಬ್ಧಾರೆಂಬುದಾಗಿಯೂ ವಿಲಾಯತಿಯಲ್ಲಿ Labour ಸರ್ಕಾರದ ಮಂತ್ರಿಗಳಾಗಿದ್ದು Conservative ಸರ್ಕಾರಕ್ಕೆ ಮಂತ್ರಿ ಯಾಗಿ ಎರಡು ಪಕ್ಷಗಳಲ್ಲೂ ಹೀನಸ್ಥಿತಿಗೆ ಇವರು ತಂದರೆಂಬು ದಾಗಿಯೂ ಇವರನ್ನು ಅನೇಕರು ನಿಂದಿಸುತ್ತಲಿದ್ದಾರೆ. ಕುಟುಂಬ ಗಳಲ್ಲಿಯಾಗಲಿ ಸಂಸ್ಥಾನಗಳಲ್ಲಿಯಾಗಲಿ ಎಲ್ಲರ ಕ್ಷೇಮವೂ ಪ್ರಕಿಯೊಬ್ಬರ ಕ್ಷೇಮಕ್ಕೂ ಅನ್ಯೋನ್ಯ ರೂಪವಾದ್ದೆಂದು ಪ್ರತ್ಯಕ್ಷವನ್ನು ಕಳ್ಳಿಸಿ ಅದು ಸರ್ವರ ಅನುಷ್ಠಾನಕ್ಕೂ ಬರುವಂತೆ ಮಾಡಿದ ಹೊರತು ಸಂಸಾರಗಳಿಗೂ ಸಂಸ್ಥಾನಗಳಿಗೂ ಕ್ಷೇಮವುಂಟಾಗುವುದಿಲ್ಲ. ಈ ವಿಷಯವನ್ನು ಅನೇಕರು ತಿಳಿದುಕೊಂಡಿರುವುದು. ಆದಾಗ್ಯೂ ಅದನ್ನು ಜಾಂಗೆ ತರುವ ಧೈರ್ಯ ಸ್ಥೈರ್ಯಗಳನ್ನು ಹೊಂದಿದವರು ಅತಿಅಪರ್ವ ಲೋಕದಲ್ಲಿ ನೂರಾರು ಲೋಕಗಳಿಗೆ ಬೇಕಾದಷ್ಟು ಸಂಪತ್ತಿದ್ದಾಗ್ಯೂ ಎಲ್ಲರೂ ಬದುಕಲಿ, ಯಾರಿಗೂ ಬಾಧಕವಿಲ್ಲದಂತೆ ನಾವು ಬದುಕೋಣ ಎಂಬ ಮನೋಭಾವವುಳ್ಳ ಜನಗಳ ಸಂಖ್ಯೆಯು ಕಡಿಮೆಯಾಗಿರುವುದರಿಂದ ಈ ಪ್ರಪಂಚವೇ ನರಕವಾಗಿರುವುದು. ಸಂಪತ್ತಿನ ಮಹತ್ವದಲ್ಲಿ ಕೋಟ್ಯಂತರ ಜನಗಳು ಅನ್ನಕ್ಕಿಲ್ಲದೇ ಸಾಯುವ ಸ್ಥಿತಿಯೆಂಬುದಿರುವುದು ಆರ್ಥೋಪತಿಯಲ್ಲಿರತಕ್ಕವರೆಲ್ಲರೂ ಒಗ್ಗ ಟ್ಟಾಗಿ ಭೇದಭಾವಗಳನ್ನು ಪರಿತ್ಯಾಗ ಮಾಡಿ ತಮಗೆ ಅನ್ನವಸ್ತ್ರಗಳಿಗಿಲ್ಲದಂತೆ ಮಾಡುತ್ತಲಿರುವ ವಿಪರೀತಗಳಿಗೆ ತಕ್ಕ ಬುದ್ಧಿಯನ್ನು ಕಲಿಸುವುದು ಅತ್ಯಾವಶ್ಯಕ. ಈ ವಿಷಯವನ್ನು ಬಡವರಿಂದವರೆಲ್ಲರೂ ಪರ್ಯಾಲೋಚಿಸಿ ಧನ ವಿಶಾಚದಿಂದ ಹಿಡಿಯಲ್ಪಟ್ಟು ಜಗಗಳ ದಾಸತಿಗೆ ಬೆರಗಾಗದೆ ತಮ್ಮ ಮೋಕ್ಷಕ್ಕೆ ತಾವೇ ಕಾರಣಭೂತರೆಂದು ತಿಳಿದು ತಿಂದು ಆದ್ಯತೆಭಾವದಿಂದ ಕೆಲಸ ಮಾಡುವುದನ್ನು ತಿಳಿದುಕೊಳ್ಳ ಬೇಕು. ಎಲ್ಲರೂ ತಮ್ಮನ್ನು ತಾವು ರಕ್ಷಿಸಿಕೊಳ್ಳಬೇಕೇ ಹೊರತು ಪರಾಧೀನಂಗಾದೇ ಇರುವುದನ್ನು ಅಭ್ಯಾಸ ಮಾಡಬೇಕು.

ಎಮ್. ವೆಂಕಟಕೃಷ್ಣಯ್ಯ

ಅಮೇರಿಕದ ವಿದ್ಯಾರ್ಥಿ.

ಅಮೇರಿಕಾ ದೇಶದ ವಿದ್ಯಾರ್ಥಿಗಳ ವಿಷಯ ಕೆಲವು ಮಾತು ಗಳನ್ನು ಬರೆಯುತ್ತೇನೆ. ಅಮೇರಿಕದ ವಿದ್ಯಾರ್ಥಿಗಳು ಸದಾ ಹಸನ್ಮುಖರಾಗಿಯೇ ಇರುವರು ಅವರು ಮುಖವನ್ನು ಎಂದಿಗೂ ಆರಿ ಯರು. ಅವರು ಸದಾ ನಿರ್ಭಯರಾಗಿರುವಂತೆ ಅವರ ತಾಯಿತಂದೆ ಗಳೂ ಅಧ್ಯಾಪಕರೂ ಪ್ರಯತ್ನಿಸುತ್ತಾರೆ. ಬಾಲ್ಯದಿಂದಲೇ ವಿದ್ಯಾರ್ಥಿ ಗಳು ಸ್ವಾವಲಂಬಿಗಳಾಗಿರುವಂತೆ ಪ್ರಯತ್ನಮಾಡಲ್ಪಡುತ್ತದೆ. ತರುಣ ವಿದ್ಯಾರ್ಥಿಗಳು ಮಿಲ್ಲುಗಳಲ್ಲಿಯೂ, ಜವಾನು ಅಥವಾ ತೋಟಗಳಲ್ಲಿ ಕೆಲಸ ಮಾಡಿ ತಮ್ಮ ವಿದ್ಯಾಭ್ಯಾಸಕ್ಕಾಗಿ ದುಡಿಯುತ್ತಾರೆ. ಏನಾದರೂ ಕೆಲಸ ಮಾಡುವುದೇ ಮರ್ಯಾದೆಯೆಂದು ತಿಳಿಯುವರು. ಇವರು ಹೊಟೇಲುಗಳಲ್ಲಿ ಪಾತ್ರೆಗಳನ್ನು ತೊಳೆಯುವುದೂ, ಮಾರ್ಗಗಳನ್ನು ಶುಭ್ರವಾಗಿಡುವುದೂ ಶುಚ್ಯ ಕೆಲಸವೆಂದು ಎಣಿಸುವುದಿಲ್ಲ. ಇವರ ಮಾತಿನ ಸುಪ್ಪನೆ ಇರುವವರು ಗೌರವಿಸಲ್ಪಡುವುದಿಲ್ಲ. ಹೀಗಾಗಿ ಪ್ರತಿಯೊಬ್ಬನು ಎಂತಹ ಕೆಲಸ ಮಾಡಲಿಕ್ಕೂ ಹಿಂಜರಿಯದೆ ಉತ್ಸಾಹ ಯುತನಿರುತ್ತಾನೆ. ಸಣ್ಣ ಸಣ್ಣ ಬಾಲಕರು ಹೆಚ್ಚು ಪರಶ್ರಮದ ಕೆಲಸ ವನ್ನು ಮಾಡಲಾರದವರಾದ್ದರಿಂದ ಸಣ್ಣ ಸಣ್ಣ ಕೆಲಸವನ್ನು ಮಾಡುವರು ಕೈಯಲ್ಲಿ ವರ್ತಮಾನ ಪತ್ರಿಕೆಗಳನ್ನೂ, ಹಣ್ಣು ಹಂಪಲುಗಳನ್ನೂ, ಬೀಂ ಪೆಟ್ಟಿಗೆ, ಅದ್ಭುತಾಕಾಶದಂಥಹ ಔಷಧ ಕರಡಿಗೆಗಳನ್ನು ಹಿಡಿದು ಮಾರಾ ಟಕ್ಕೆ ಹೊರಡುವರು. ಈ ಚಿಕ್ಕ ಮಕ್ಕಳ ಸಾಮಾನುಗಳು ಬಹು ಬೇಗ ಮಾರಾಟವಾಗುವವು. ಕೆಲವು ಬಾಲಕರು ಸಮಾಚಾರ ಪತ್ರ ಮುಂತಾ ದುವುಗಳನ್ನು ಬಹು ವಿನಯಪೂರ್ವಕ ಎಮ್ಮು ಸ್ಥಿತಿಯಿಂದ ಮಾರಾಟ ಮಾಡುವರೆಂದರೆ, ಈ ತರಹ ಪತ್ರಿಕೆಗಳನ್ನು ಕಾಣದವರು ಸಹ ಒಂದೊಂದು ಪತ್ರಿಕೆಯನ್ನು ಪಡೆಯುವರು. ಅಲ್ಲಿ ಹಗಲು ಕೆಲಸ ಮಾಡುವವರಿಗಾಗಿ ರಾತ್ರಿ ಶಾಲೆಗಳೂ, ರಾತ್ರಿ ಕೆಲಸ ಮಾಡುವವರಿಗೆ ಹಗಲು ಶಾಲೆಗಳಿವೆ ಹಾಗೂ ಕುಂಟಾ ಆಟೂಟವುಂಟಾಗುತ್ತದೆ. ಅಲ್ಲಿ ಯವರು ಕಮಟಟ್ಟುಕೆಲಸ ಮಾಡಿದುದರಿಂದಲೇ ಫೋರ್ಡರಂಥ ಧನಕರೂ ರಾಕಿಂಗ್ಫೆಲರಂಥ ಧನ ವಿದ್ವಾಂಸರೂ, ವಿಂಕೆಲಂಥ ಪ್ರಸಿದ್ಧ ಪುರುಷರೂ ಆಗಿದ್ದರು «ಆರ್ಯಮಿತ್ರ»

ಪತ್ರವ್ಯವಹಾರ.

(ಬಾತ್ಮಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡಕಕ್ಕುದು ದೀರ್ಘ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯುಂಟಿದ್ದು ಯುಕ್ತ ಶೈಲಿ ಯಲ್ಲಿರತಕ್ಕುದು (ಸಂ. ಸ್ವ)

ದಿ. ಬೊ. ಉಪಾಧ್ಯಾಯರು.

ಅಯ್ಯಾ,

ನಮ್ಮ ಜಿಲ್ಲಾ ಬೋರ್ಡಿನ ಶಾಲೆಗಳ ಉಪಾಧ್ಯಾಯರೊಳಗೆ ಎಂದೂ ಇಲ್ಲದ ಕೋಲಾಹಲವನ್ನು ತೆಗಿನ ಮಾನ್ಯ ಪ್ರೆಸಿಡೆಂಟರು ಎಬ್ಬಿಸಿ ಎಲ್ಲೆಲ್ಲಿಯೂ ಅಶ್ಯಸ್ತಿಯೂ ಅಸಮಾಧಾನವೂ ತಲೆದೋರು ವಂತೆ ಮಾಡಿರುವ ಕಾರಣವೇನೋ ತಿಳಿಯುವುದಲ್ಲ. ಶಿಕ್ಷಣ ಪಕ್ಷ ಪಾತಿಯಾದ ಪ್ರೆಸಿಡೆಂಟರು ಶಿಕ್ಷಣವನ್ನು ಊರ್ಜಿತ ಸ್ಥಿತಿಗೆ ತರಬೇಕೆಂಬ ಆತುರತೆಯಿಂದ ಎಂದೂ ಮಾಡಿರದ ಈ ರೀತಿಯ ವರ್ಗಾವರ್ಗ ಗಳನ್ನು ಮಾಡಿದರು. ಅವುಗಳಲ್ಲಿ ಒಂದನ್ನು ಸಹ ಬದಲಾಯಿಸದ ಹಾಗೆ ಇಟ್ಟದ್ದರೆ ಅವರ ಪ್ರಾತಿಯು ಹೆಚ್ಚುತ್ತಿತ್ತು. ಆದರೆ ಹೆಚ್ಚಿಗಿನ ವರ್ಗಾವರ್ಗಿಗಳನ್ನು ಅವರು ಮನ್ನಾ ಮಾಡಿದುದು ಕುಂಟಾ ಶೋಚ ನೀಯ

ಒಂದೇ ಶಾಲೆಯಲ್ಲಿ ಹತ್ತು ಹದಿನೈದು ವರುಷಗಳ ವರೆಗೆ ಕೆಲಸ ಮಾಡಿರುವ ಉಪಾಧ್ಯಾಯರುಗಳಿಗೆ ವರ್ಗವೇ ಆಗದಿರುವುದು ಆಶ್ಚರ್ಯವಲ್ಲವೇ?

ಒಂದೇ ಕಡೆಯಲ್ಲಿದ್ದುದರಿಂದಲೂ ಸಂಬಳವು ಮಿಕ್ಕಿಮಮತೆಗೆ ಒಂದುದರಿಂದಲೂ ಕಲಿಸುವುದರಲ್ಲಿ ಉತ್ಸಾಹವು ಕುಂದಿಹೋಗಿ ಜಿಗುಪ್ಸೆ ಹುಟ್ಟುವುದು ಸಹಜ. ಅಂತಹವರನ್ನು ಶಾಲಾ ಅಭಿವೃದ್ಧಿಗಾಗಿಯೂ ಅವರ ಒಳ್ಳೆಯದಕ್ಕಾಗಿಯೂ ತಮ್ಮ ಕೆಲಸಗಳಲ್ಲಿ ಹೆಚ್ಚು ಶ್ರದ್ಧೆವುಳ್ಳವರಾಗಿಯೂ, ಜಾಗರೂಕರಾಗಿರುವುದಕ್ಕಾಗಿಯೂ ವರ್ಗಾಯಿಸುವುದು ಅತ್ಯಗತ್ಯವು. ಇನ್ನಾದರೂ ಈ ವಿಷಯವನ್ನು ಮಾನ್ಯ ಪ್ರೆಸಿಡೆಂಟರು ಗಮನಿಸುವರೆ?

ಕಾರ್ಕಳದಿಂದ ಒಬ್ಬರನ್ನು ಕುಂದಾಪುರಕ್ಕೂ ಇನ್ನೊಬ್ಬರನ್ನು ಕಾಸರಗೋಡಿಗೂ ಮತ್ತೊಬ್ಬರನ್ನು ಪುತ್ತೂರಿಗೂ ಇನ್ನೊಬ್ಬರನ್ನು ಮೂಡಬಿದ್ರಿಗೂ ವರ್ಗಾಯಿಸಿದುದು ಸಂತೋಷಕರ. ಆದರೆ ಕುಂದಾ ಪುರದವರು ಹೋಗಲೇ ಇಲ್ಲ. ಕಾಸರಗೋಡಿನವರೂ ಹಾಗೆಯೇ ಪುತ್ತೂರಿನವರು ಕನ್ನನ್ನೂ ಪುನಃ ವರ್ಗಾಯಿಸಬೇಕಾಗಿ ಧನೀರಥ ಪ್ರಯತ್ನ ಮಾಡುತ್ತಿದ್ದಾರೆ. ಈ ರೀತಿಯ ವರ್ಗಾವರ್ಗಿಗಳಿಗೆ ಏನೆನ್ನ ಬೇಕೋ ನಾನರಿಯೆ!

ಇತಿ,

ನಿಷ್ಪಕ್ಷಪಾತಿ

ಉಚ್ಚಿಲ ಬೋವಿ ಎಲಿಮೆಂಟರಿ ಶಾಲೆಯ ಮುಂಬೈ ಹಳೆವಿದ್ಯಾರ್ಥಿಗಳಿಗೆ ವಿಜ್ಞಾಪನೆ.

ಮುಂಬಾಯಿ, ೭–೮–೩೩.

ವಿದ್ಯಾಭಿಮಾನಿಗಳೇ,

ತಾವೆ ತಮ್ಮ ಅಂತಃಶಲಹವನ್ನು ಪಿಟ್ಟು ಈ ಮೇಲಿನ ಶಾಲೆಯ ಹಳೆ ವಿದ್ಯಾರ್ಥಿ ಸಂಘಕ್ಕೆ ಸೇರಿ, ಕಮ್ಮಿಲ್ಲರ ಬುದ್ಧಿ ಬಾತುರ್ಯವನ್ನು ಈ ಶಾಲೆಯಲ್ಲಿ ಕಲಿತ ವಿದ್ಯೆಯ ಮೂಲಕ ಈ ಸಂಘವನ್ನು ಊರ್ಜಿತ ಸ್ಥಿತಿಗೆ ತಂದು ಶಾಲೆಗೆ ಕೀರ್ತಿಗೊಳಿಸಿರಿ

ಮಾನನೀಯರೇ, ನೀವು ನಮ್ಮ ಅಮೂಲ್ಯವಾದ ಸುಸಂದರ್ಭ ವನ್ನು ವ್ಯರ್ಥವಾಗಿ ಕಳೆಯುವುದಕ್ಕಿಂತಲೂ, ಈ ಸಂಘಕ್ಕೆ ಸೇರಿ ಅಲ್ಲಿಗೆ ಬರುವಂಥಾ ಕನ್ನಡ ಪತ್ರಿಕೆಗಳನ್ನು ಓದಿ ಕನ್ನಡಾಭಿರುಚಿಯನ್ನೆ ಪೂರ್ತಿಗೊಳಿಸಿ ವಿಕ್ಕತೆಯನ್ನು ಪಡೆಯಲು ಸಹಕರಿಸಿ.

ಮೆಂಬರರಲ್ಲೊಬ್ಬ.

IN THE COURT OF THE SUBORDINATE JUDGE OF SOUTH KANARA

O S No 64 of 1930.

Between —

G S Ramulu .Plaintiff

and

N. B Thakur and others Defendants

Notice is hereby given that the undermentioned properties of the R. T. Company, Mangalore, will be sold by public auction by the under-signed, who has been appointed Commissioner by the Subordinate Judge's Court, South Kanara, for selling the same, by order dated 28–6–1933, at the premises of the said R. T. Company on Sunday, the 20th August 1933 at 9 A M

The sale of the properties will be held in the order in which the properties are described herebelow and will be knocked down to the highest bidder.

The successful bidder will have to deposit 25 per cent. of the purchase money immediately and the balance within a week from the date of the purchase.

Delivery of the properties will be given only after payment of the entire purchase money

In case the purchaser fails to deposit the balance of the purchase money within the time fixed, the property purchased by him will be re-auctioned and any shortage in the price at the 2nd sale will be recovered from the defaulting purchaser. The sale being held under order of the Court the intending purchasers are to satisfy themselves about the title of the properties advertised for sale and there will be no guarantee of title given by the Court or by the Commissioner

The upset price in respect of each lot is noted against it but it is liable to be reduced or raised on the joint representation of the plaintiff and defendants

General description of the properties of the R T Company proposed to be sold

(1) One Vitapack Unit, one two-block tiled building, one three-block building with corrugated-sheets roofing, one tiled motor shed, one tiled watchmen's shed, Peeling, Grading and Packing appertanances, other sundry materials and furniture situated on Lutchel plot in the Boloor village, Mangalore Taluk, having survey No 96/3. Four Roasting sheds with corrugated-sheets roofing, three tiled shelling sheds, five drying ovens under sheds with corrugated sheets roofing, one tiled godown-shed and one tiled latrine shed all containing necessary appertanances and other sundry materials situated on plots in the Boloor Village, Mangalore Taluk, having survey Nos. 97/3 and 71/1, together with the good will of the R T Company. Upset price Rs. 50,000/–

(2) Three Roasting sheds with corrugated sheets roofing, two thatched sheds for shelling, and one thatched godown—all containing necessary appertanances situated in the Derebail village, Mangalore Taluk, having Survey Nos. 36/5 and 36/6. Upset price Rs. 1,140/

(3) One free-hold plot of land (dry land) measuring 15 acres and 70 cents bearing Survey No 70, situated in Mudanidambur village, Udipi Taluk, containing two single-block building with corrugated sheets roofing And one adjacent free-hold plot of land (dry land) measuring 3 cents bearing Survey No 72/4A and situated in Amblapadi village, Udipi Taluk Upset price Rs 13,750.

(4) One Vitapack Unit, three sheds for shelling, peeling and grading purposes and one godown—all with corrugated-sheets roofing two drying ovens under sheds with corrugated-sheets roofing—all containing necessary appertanances and other sundry materials situated on a plot in Raciam village, Loutulim Sub-division in the Goa Territory Upset price Rs 22,300

Mangalore, 31–7–1933. P D'Souza, B A, B.L., *Commissioner.*

"ನಿದ್ದೆಯೇ ಇಲ್ಲ. ನಿದ್ದೆಯು ನಿದ್ದೆಯೂ ಇಲ್ಲ. ಎಷ್ಟರವೊ ಅಷ್ಟು ಆಯ್ತು ನನ್ನ ನೂಕು. ರಾತ್ರಿಯಿಡಿಯ ಹತ್ತಿರ. ಅವನು ನನಗೆ ಏನೇನೋ ಹೇಳುವನು. ನನ್ನ ಸ್ಥಿತಿಯು ಒಂದೇ ಸನ್ನು. ನನಗಿರುವುದು ಒಂದೇ ಮನಸ್ಸು, ಆದರೂ ಅದು ಕೂಡಾ ಹಲವು ರೂಪಗಳನ್ನು ಧರಿಸಿ ಸೂರಾರು ಮನಸ್ಸು ಆಗಿ ಗಳಿಗೆಗೆ ಒಂದೊಂದು ಯೋಚನೆ ಹುಟ್ಟಿ ಹುಚ್ಚನಂತಾಗುತ್ತಿದ್ದೆನು. ಅದಕ್ಕಾಗಿ ವೈದ್ಯಪತ್ರಿಕೆ ಓದಬೇಕೆಂದು ರಾಮು ನನಗೆ ಹೇಳುವನು. ತಂದೂ ಕೊಡುವನು ಈ ದಿನವೂ ಕೂಡ ರಾಮು ಒಂದು ಪತ್ರಿಕೆಯನ್ನು ತಂದುಕೊಟ್ಟಿನು. "ವಿಶ್ವನಾಥ! ಇದನ್ನು ಓದು. 'ಯೋಚನೆ ಮಾಡಬೇಡಾ' ಎಂದನು. ಅವನ ಮಾತಿನಿಂದಲೆ ನನಗೆ ಬಹು ನಂದಿಕೆ. ಅವನು ಕೊಟ್ಟ ಪತ್ರಿಕೆಯನ್ನು ತೆಗೆದುಕೊಂಡೆನು. ಆಗಲೇ ರಾತ್ರಿ ೧೧ ಘಂಟೆಯಾಗಿತ್ತು. ಹಾಸಿಗೆಯ ಮೇಲೆ ಮಲಗಿಕ್ಕೊಂಡೆನು. ನೋಡಿದರೆ "ಸ್ವದೇಶಾಭಿಮಾನಿ" ತಾ. ೧೪—೩—೨೩ನೇದು. ನನಗೆ ಹೊಸಾ ಪತ್ರಿಕ್ಕು ಬೇಕಾಗಿದ್ದಿತು ಆಗ್ರಹವೇನು ಅದೇ ಇರಬಹುದೆಂದು ತೆಗೆದನು ವಿಷಯವು ಬೇರೆಯೇ. "ಸಮಾಜಸ್ಥಿತಿ ವಿವಾಹ ಕ್ರಮಗಳೂ" ಎಂದಿತ್ತು. ಓದಿದ್ದೆನು—ದುನಿಯಿನ ರೀತಿಯೇ ಬದಲಾಗಿ ಹೋದಂತು ಮತ್ತೊಮ್ಮೆ ಓದಿದನು. ಚಿಂತೆಯು ಇನ್ನೂ ಅಧಿಕವಾಯಿತು. ನನಗೂ ಒಂದು ಹೆಣ್ಣು ಮಗು. ಆಗಲೇ ೧೪ ವರ್ಷ ಪ್ರಾಯ. ಎರಡು ವರ್ಷಗಳಿಂದ ನೆಂಟಿಸ್ಕಿಕೆ ಹುಡುಕುತ್ತಿದ್ದರೂ ಇದು ವರೆಗೆ ನಂಬಿದ್ದು ಒಂದೂ ಇಲ್ಲ. ವರದಕ್ಷಿಣೆ ಕೊಡುವ ದೆಸೆ ನನಗೂ ಇಷ್ಟವಿಲ್ಲ. ಹಾಗೆಂದು ಅದನ್ನೇ ಪ್ರಚಾರ ಮಾಡಲು ಹೋದರೆ ನನಗೂ ನಾಲ್ಕು ಗಂಡು ಮಕ್ಕಳು ಬೇರೆ ಇವೆ. ಸಿಕ್ಕುವ ವರದಕ್ಷಿಣೆಗೂ ಎಲ್ಲಿ ಸೊನ್ನೆಯಾಗುತ್ತದೋ ಎಂಬುದೊಂದು ಚಪಲ. ಅಂತು ಹಾಸಿಗೆ ಮೇಲೆ ಮಲಗ್ಗಿವಾಗ ಬಂದಿದ್ದ ಒಂದೆರಡು ಆಕಳಿಕೆಗಳೂ ಮಾಯವಾದುವು. ನಿದ್ದೆ ಬರಲಿಕ್ಕೆಂದು ಓದುತ್ತಿದ್ದ ಪತ್ರಿಕೆಯು ನಿದ್ರೆಯನ್ನು ಗಡೀಪಾರು ಮಾಡಿಬಿಟ್ಟಿತು. ಇನ್ನು ಮುಂದೆ ಇಂಥಾ ಲೇಖಗಳನ್ನು ಬರೆಯಕೂಡದೆಂದು ಸಂಪಾದಕರಿಗೆ ತಂತೀ ಕೊಡುವ ದೆಂದು ಯೋಚಿಸಿದೆನು ಆದರೆ ಮದ್ಯರಾತ್ರಿ ಕಾಲ ಭಾನುವಾರ ವೇರೆ ಒಂದೆಕ್ಕೆ ನಾಲ್ಕರಷ್ಟು ಖರ್ಚು ಇದೆಲ್ಲ ಸರಿಯಲ್ಲ ನಾಳೆ ಮಾಡೋಣ ವೆಂದು ಸುಮ್ಮನಾದೆನು ಆದರೆ ನಿದ್ದೆಯಿಲ್ಲ. ಎಷ್ಟೆಷ್ಟು ಹೊರಳಾಡಿ ದರೂ ನಿದ್ದೆಯೇ ಇಲ್ಲ. ಕೊಂಚ ಆರಿಜೋದ್ಯು ಉಂಟಾಯಿತು ಅಷ್ಟರಲ್ಲಿಯೇ "ಧೈರ್ಯವಾಗಿರಿ ಧೈರ್ಯವಾಗಿರಿ' ಹೆದರಬೇಡಿರಿ' ಧೈರ್ಯವಾಗಿರಿ!' ಎಂಬ ಧ್ವನಿಯು ಕೇಳಿಸಿತು. ಇತೆತ ನೋಡಿದೆನು—ಹಾಲುವಕ್ಕಿಯು ಬುಡುಬುಡುಕೆ ಹಿಡಕೊಂಡ ನಿಂದಿದ್ದನು ನನ್ನನ್ನು ನೋಡಿ "ಬುಡ್ ಬುಡ್ ಬುಡಕ್" ಎಂದು ಪುನಃ ಶಬ್ದ ಮಾಡಿದನು. ಶಾಸ್ತ್ರ ಹೇಳಲಿಕ್ಕೂ ಪ್ರಾರಂಭಿಸಿದನು "ಮಕ್ಕಳ ಹುಡುಗಿಯ ಚಿಂತೆ ಹುಡುಗಿಗೆ ವಯಸ್ಸಾದ ಚಿಂತೆ ಎರಡು ವರ್ಷದಿಂದಲೂ ನೆಂಟಿಸ್ಕಿಕೆ ಸಿಕ್ಕದ ಚಿಂತೆ ಚಿಂತೆಯದಿರಿ ಚಿಂತೆಯದಿರಿ ಯೋಚನೆ ಬಿಡಿ ಬುಡ್ ಬುಡ್ ಬುಡ್ ಬುಡಕ್' ಉಕ್ಕುವ ದಿಕ್ಕಿನಲ್ಲಿ ಒಟ್ಟು ಸನ್ಯಾಸಿ ಹುಟ್ಟಿದ್ದನು ವೇದಗಳಿಗೆ ಭಾಷ್ಯ ಬರೆದಿದನು ಸ್ವಾಮಿ ದಯಾನಂದ ಸರಸ್ವತಿ ಎಂದು ಪ್ರಸಿದ್ಧಿಯಾದನು. ಜನಗಳಿಗೆ ಉಪಕಾರ ಮಾಡಿದನು. ಬುಡ್ ಬುಡ್ ಬುಡಕ್' ಕೆನ್ನೆಗೆ ೨೪ ವರ್ಷ ಗಂಡಿಗೆ ೪೪ ವರುಷ. ಆಗ ಹಾನೇಗಲ್ಲ ಮಿಸೆ ಬೆಳ್ಳಗಾಗುವ ೪೮ ವರುಷದ ಮುದಿ ಯುವಕ ನಿಗೆ ೨೪ವರ್ಷದ ಬಿಕ್ಕ ಹುಡುಗಿಯನ್ನು ಕೊಟ್ಟು ಮದುವೆ ಮಾಡುವುದು ಶ್ರೇಷ್ಠವಾದ ವಿವಾಹವು ಇದನ್ನು ಜನಗಳಿಗೆ ಉಪದೇಶ ಮಾಡಿದನು ಬುಡ್ ಬುಡಕ ಜಾತಕದ ಆಸ್ಥವಿಲ್ಲ ಹುಡುಗನಾಗಲೀ ಹುಡುಗಿಯಾಗಲೀ ಕಮತಮಾಗಿ ಬೇಕಾದವರನ್ನು ಮದುವೆಯಾಗ ಬಹುದು ಸಂತತಿಗೆ ತೊಂದರೆ ಇಲ್ಲ ಗಂಡ ಮುದುಕನಾದರೆ ಬೇರೆ ಹುದುವೆ, ಗಂಡ ಸತ್ತರೆ ಹೆಣ್ಣೊಂದು ಗಂಡಂದಿರನ್ನು ಮಾಡ ಬಹುದು. ಒಂದು ಹೆಂಗಸಿಗೆ ೪೪ ಮಕ್ಕಳು ಹುಟ್ಟಬೇಕು, ಜಗತ್ತಿನ ಉದ್ಧಾರವಾಗುವುದು ಇದನ್ನೇ ಜನಗಳಿಗೆ ಹೇಳಿ ಬೋಧನೆ ಮಾಡಿದನು. ಬುಡ್ ಬುಡ್ ಬುಡಕ್' ವೃಥಾಚಾರ ದೋಷವಿಲ್ಲ. ಮದುವೆಗೆ ಮುಂಚಿತವಾಗಲೀ ಮದುವೆಯ ನಂತರವಾಗಲೀ ಗಂಡಸಿರಿ ಹೆಂಗಸರು ಬೇಕುಬೇಕಾದವರನ್ನು ಇಟ್ಟುಕೊಳ್ಳಬಹುದು ಇದಕ್ಕೆ ಸಂಯೋಗವೆಂದು ಹೆಸರು ಇದನ್ನೆಲ್ಲಾ ಕಂಡು ಹಿಡಿದರು ಧರ್ಮಾಕ್ಕರು ಧೈರ್ಯವಾಗಿರಿ! ಧೈರ್ಯವಾಗಿರಿ! ಬುಡ್ ಬುಡ್ ಬುಡಕ್' ದುರ್ಗಮವಾದ ಅಜ್ಞಾನಾಂಧಕಾರದಲ್ಲಿ ಬಿದ್ದು ಹಿಂದೂ ಜಾತಿಯು ನಶಿಸಿ ಹೋಗುತ್ತಿರುವುದನ್ನು ಕಂಡು, ತನ್ನ ದಿವ್ಯ ಜ್ಞಾನಶಕ್ತಿಯಿಂದ ಅವರಲ್ಲಿ ನೂತನ ದಿವ್ಯ ಜ್ಯೋತಿಯನ್ನು ಬೆಳಗಿಸಿದ ಮಹರ್ಷಿ ದಯಾನಂದ ಸರಸ್ವತಿಯೇ ಇದರ ಉಪದೇಶಕನು ಪರಮ ಪಾವನೆಯಾದ ಭರತ ಮಾತೆಯ ಗರ್ಭಾಂಬುಧಿಯಲ್ಲಿ ಹುಟ್ಟಿದ ಪುರುಷರತ್ನಕೆಂದರೆ ಇದೇ. ಬರುವ ಅಕ್ಟೋಬರ ತಿಂಗಳಲ್ಲಿ ದಯಾನಂದರ ನಿರ್ವಾಣವಾಗುವುದು ಅದಕ್ಕೆ ನೀವೆಲ್ಲರೂ ವಂತಿಗೆ ಕೊಡಿರಿ ಬುಡ್ ಬುಡ್ ಬುಡಕ್' ಶಕ್ಯನೆ ಎಚ್ಚತ್ತೆನು. ಹಾಲುವಕ್ಕಿಯೂ ಇಲ್ಲ ಯಾರೂ ಇಲ್ಲ ಹಾಸಿಗೆಯ ಮೇಲೆ ನಾನೊಬ್ಬನೇ ಉಂಟಾದ ಕನಸಿಗಾಗಿ ಆಶ್ಚರ್ಯಪಟ್ಟೆನು. ಹಾಲುವಕ್ಕಿಯ ಮಾತು ಸುಳ್ಳು ಹೇಳುವ ದಿಲ್ಲ ಹಾಲುವಕ್ಕಿಯ ರೂಪ ಧರಿಸಿ ದೇವ್ಯರೇ ನನಗೆ ಕನಸಿನಲ್ಲಿ ಬಂದು ತಿಳಿಸಿರಬೇಕು. ಮಕ್ಕಳ ಹುಡುಗಿಯ ಚಿಂತೆಯೆನ್ನು ದಬ್ಬೇ ಬಿಟ್ಟೆನು ನಾನು ಈ ವರೆಗೆ ಐದು ಮಕ್ಕಳನ್ನು ಮಾತ್ರ ಹುಟ್ಟಿಸಿರುತ್ತೇನೆ. ವೈದಿಕ ಧರ್ಮದ ಪ್ರಕಾರ ಇನ್ನೂ ೩೯ ಮಕ್ಕಳನ್ನು ಹುಟ್ಟಿಸಬೇಕಾಗಿದೆ. ಅದಕ್ಕೋಸ್ಕರ ನಾನು ನಿಯೋಗವನ್ನು ಪ್ರಾರಂಭಿಸಬೇಕೆಂದು ನಿಶ್ಚಯಿಸಿದೆನು ಚಿಂತೆ ಬಿಟ್ಟೆನು, ಶಾಂತನಾಗಿ ನಿದ್ದೆ ಮಾಡಿದೆನು. ಇನ್ನು ಮೇಲೆ ನಾನು ಆರ್ಯ ಸಮಸ್ತೇ.

"ವಿಶ್ವನಾಥ"

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಔಷಧಿಳ್ಳ
ಸ್ತ್ರೀಯರಿಗೊಂದು ಮಹಾ ವರ!

ಯಾವ ತರದ ಆಥವಾ ಎಲ್ಲಾ ತರದ ಮುಟ್ಟಿದೋಷ; ಮುಟ್ಟಾಗುವದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟಿ ಅಧವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ ರೂ 8 ಮತ್ತು ರೂ 1-10-0

ಕೇಸರಿ ಕುಟೀರಂ,

ಇಂಡಿಯನ್ ಕೆಮಿಸ್ಟ್ಸ ಮತ್ತು ಡ್ರಗಿಸ್ಟ್ಸ, ಏಜೆಂಟರ್ ಮದರಾಸು,

Sole Agents for South Kanara

ಪೊಪ್ಯುಲರ್ ಸ್ಟೋರ್ಸ್,
ರಥಬೀದಿ ಮಂಗಳೂರು

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ
ದ್ರಾಕ್ಷಾಸವ

ಜರೂರು ಉಪಯೋಗಿಸಿರಿ.

ಸ್ತ್ರೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ
ಅಶೋಕಾರಿಷ್ಟ

ಬೇಗನೇ ಉಪಯೋಗಿಸಿರಿ

'ZANDU'

ಝಂಡು ಫಾರ್ಮಾಸ್ಯೂಟಿಕಲ್ ವರ್ಕ್ಸ್ ಲಿ: ಮುಂಬ್ಯಾಗಳು.

ಬೆಂಗಳೂರು ಏಜಂಟ್ — ಬಿ ಪೊಪಟ್‌ಲಾಲ್ ಕಂಪನಿ, ೨೧ ಆರ್ಕಟ ಶ್ರೀನಿವಾಸಾಚಾರ್ ಸ್ಟ್ರೀಟ್.

ವಿಜಾಪುರ	,,	ಗೋವಿಂದ ಗೋಪಾಲ ಗಾಡಗೀಳ	
ಮಂಗಳೂರು	,,	ದಿ ಉಲನ್ ಮಾರ್ಟ್	ಧಾರ್ವಾಡ ಏಜಂಟ್-ದಿ ಧಾರ್ವಾಡ ಫಾರ್ಮಸಿ
ಗದಗ	,,	ವಿದ್ಯಾವಿಲಾಸ ಬುಕ್ ಡಿಪೊ	ಬೆಳಗಾಂವ ,, ಪ್ರೊವಿಜನ್ ಸಪ್ಲ್ಯಾ ಕೊ.
ಹುಬ್ಬಳ್ಳಿ	,,	ತಿಪ್ಪಣ್ಣ ಕ್ಷತ್ರಿಯ, ಭೂಸವೇಟೆ	ಬೈಲಹೊಂಗಲ್ ,, ಜಿ. ಬಿ ಉದಾಪುಡಿ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ

ಆರ್ಯುವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ

ಸೇವಿಸಿ ತೃಪ್ತಿಗೊಂಡ ನಿರಾಕಿಗಳು ಇದನ್ನು

"ಜೀವಮಾನದ ಅಮೃತ ನಿಜವಾದ ಶಕ್ತಿವರ್ಧಕ ಔಷಧ" "ಶಕ್ತಿ ಹೀನತೆಗೆ ಪ್ರಪಂಚದಲ್ಲಿನ ಸಿದ್ಧೌಷಧ" "ಶಕ್ತಿದಾಯಿನಿ ಔಷಧಗಳ ರಾಜ" "ಸರ್ವ ಸಿದ್ಧೌಷಧ" "ವ್ಯಾಧಿಗಳಿಂದ ಸಂಕಟ ಪಡುವವರಿಗೆ ವರಪ್ರದಾಯಿನಿ"

ಎಂಬೀ ಮೊದಲಾದ ಹೆಸರುಗಳಿಂದ ಕರೆದಿರುತ್ತಾರೆ ಪದಾರ್ಥೋತ್ಪತ್ತಿ ರೀತಿ ತಯಾರಿಸಿದ ಈ ಔಷಧವು ಯಾವುದೆಂದರೇ ನಿಮಗೆ ಹಿತಕಾರಿಯೂ ಜೀವನಾಕಾರವೂ ಆದ

ಜೀವಾಮೃತವೇ.

ಇದು ಪಂಡಿತ ವಿ ಗೋಪಾಲಾಚಾರ್ಯರವರು ಕಂಡು ಹಿಡಿದಿರುವ ಮಹಾ ಶಕ್ತಿವರ್ಧಕ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲಾ ಸುಪ್ರಸಿದ್ಧವಾಗಿದೆ. ಗರ್ಭಾಶಯ ಇನಿಸಿದಾದಲೂ ಇದು ಬಳಕೆಯಲ್ಲಿದೆ. ನರಗಳ ದೌರ್ಬಲ್ಯವು ಮುಕ್ಕಳ್ಕಿದ ಹೀನತೆ ಪಡೆದು, ಅಯಾಸ ರಕ್ತ ಹೀನತೆ, ನರಗಳ ಅಶಕ್ತತೆ, ಮೆದುಳು ಬೈಕಲ್ಯಗುಂದಿರುವಿಕೆ, ತೊಳಲಿಕ್ಕೆ ಕಡಮೆಯಾಗಿರುವುದು. ಇತ್ಯಾದಿಗಳಿಂದ ನರಳು ತ್ತಿದ್ದವರಲ್ಲಿ ಜೀವಾಮೃತವನ್ನು ಸೇವಿಸಲಾರಂಭಿಸಿದ ಇಪ್ಪತೊಂದು ದಿವಸಗಳಲ್ಲಿ ಸಾಕಷ್ಟು ಸೇವಿಸಲು ಪ್ರಾರಂಭಿಸಿದವರಲ್ಲಂತೂ ಅವರ ಶ್ರೇಷ್ಠ ಗುಣಗಳು ನಿಮಗೆ ಗೋಚ್ಯವಾಗುತ್ತದೆ. ನಿಮ್ಮ ವೈದ್ಯರು ಅದನ್ನು ಎಲ್ಲಿ ಸ್ಟೋರುಗಳಲ್ಲಿ ರೂ ೩—೪—೦ ಮತ್ತು ರೂ ೧—೧೪—೦ರಂತೆ ಮಾರುತ್ತಾರೆ. ಅಥವಾ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಆಯುರ್ವೇದಾಶ್ರಮರು, ಪೋ. ಬಾಕ್ಸು ನಂ. ೩೮೭, ಮದ್ರಾಸು.

ಸೋಲ್ ಏಜಂಟರು.- ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೩ ಚ್ಯೈನೇಟೆ ಸೆಂಗಳೂರು- (ಉಡುಪಿ ಹೋಟೆಲ್ ಪಕ್ಕದ)

ದಕ್ಷಿಣ ಕನ್ನಡದ ಏಜಂಟರು- ಪೊಪ್ಯುಲರ್ ಸ್ಟೋರ್ಸ್, ಮಂಗಳೂರು

P No 104

ಮಹಾತ್ಮಾಜೀಯವರಿಗೆ ೧ ವರ್ಷದ ಸಾದಾ ಸಜೆ!!!

ಒಮ್ಮೆ ಬಿಟ್ಟು ಮತ್ತೊಮ್ಮೆ ಹಿಡಿದರು!

ಅರ್ಧ ತಾಸಿನೊಳಗೆ ವಿಚಾರಣೆಯಾಯಿತು!!

"ನಾನು ಅಪರಾಧಿ ನಿಜ! ದಂಡಿಸಿರಿ!—ದಂಡಿಸಿರಿ!!!"

ಕಾನ್‌ಪುರದಲ್ಲಿ ಭಯಂಕರ ಬಿರುಗಾಳಿ ಪೀಸು ಹೆಚ್ಚಿನ ಜನಪದಗಳಿಗೆ ನಷ್ಟವಾಯಿತು

ಕಾಶಿಯ ಸದಿಯೊಂದರಲ್ಲಿ ಬಿರುಗಾಳಿಯು ದೇಹಿಯಂದಾಗಿ ೭೩ ದುಂದಿಗಳು ಮುಳುಗಿದರು. ಪದಿನೆಂಟು ಜನರು ರಕ್ಷಿಸಲಾಗಿರುವರು.

ತಿಲ್ಲಿಯ ನರ್ವಾನ ಗ್ರಾಮದಲ್ಲಿ ಒಬ್ಬರು ಸ್ತ್ರೀಯು ಮೂರು ಗಂಡು ಮತ್ತು ಎರಡು ಹೆಮ್ಮಕ್ಕಳನ್ನು ಒಂದೇ ಸಲ ಹಡೆದಿರುವಳು

ಮಲೆಯು ಪಂಜಾಬು ಪ್ರಾಯಸ್ಥ ಗಡಿನಾಡು, ಬ್ರಹ್ಮದೇಶ, ಅಸಾಮು ಮೊದಲಾದ ಭಾಗಗಳಲ್ಲಿ ವಿಶೇಷ ಪದ್ಧತಿ

ಹಾಸನದ ಡಿಸ್ಟ್ರಿಕ್ಟ್ ಬೋರ್ಡು ವ್ಯಾಸ್ ಪ್ರೆಸಿಡೆಂಟರನ್ನು ಆರಿಸು ವರೆ ಸಭೆಯು ಇದೇ ಕಳೆದ ತಾ ೨೨—೮—೨೨ರಲ್ಲು ಹಾಸನದ ಡಿಸ್ಟ್ರಿಕ್ಟ್ Court Hallನಲ್ಲಿ ನಡೆಯುವು ರಾ. ಆರ್‌ಲಗಳೂ ಸಂಖ್ಯಾಬಲ ತೆಟ್ಟು ಹಾಸನದ ಕಶ್ಮಣ್ಣ ಗೌಡರು ಮತ್ತು ವೇಳೂರು ಅಯ್ಯಂಗಾರಿಮೂರ್ತಿ ಸಾಹೇಬರು ಈ ಮೂರು ಜನ ಉಮೇದ್ವಾರರು ನಿಂತಿ ದ್ದರು ವಿಷಿಂಗಿಗೆ ಗದಮೆಂಟ್ ಆಫೀಸರರೂ ಆಫೀಸರರಲ್ಲದವರೂ ಸುಮಾರು ನೂರು ಜನ ಸೇರಿದ್ದರು. ಹಾಸನ ಕಶ್ಮಣ ಗೌಡರು, ಬಹು ಮತದಿಂದ ವ್ಯಾಸ್ ಪ್ರೆಸಿಡೆಂಟರಾಗಿ ಆರಿಸಿ ಬಂದರು ರಾ. ಗುಂಡಪ್ಪ ಗೌಡ ಬಿ ಎ ಬಿ ಎಲ್ ಡಿಸ್ಟ್ರಿಕ್ಟ್ ಬೋರ್ಡು ವೈಸ್‌ಪ್ರೆಸಿಡೆಂಟರರು ಆಯ್ಕೆಟ್ಟ ಸ್ಥಾನವನ್ನು ವಹಿಸಿದ್ದರು.

ಕಳೆದ ಜೂನ್ ತಿಂಗಳ ತಾ ೧೦ರಲ್ಲು ಆಲುಳ್ಳಿಯಲ್ಲಿ ಎಳ್ಳೆ ಣ್ಣಿರಾಣ ಇದರಿಂದ ಕೊಲೆ ಮಾಡಲ್ಪಟ್ಟು ಳೆಣನ ತಮ್ಮಯು ಇ ತಾ. ೨೨ ೮—೨೨ರಲ್ಲು ಹಾಸನದ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ತನ್ನಿಗೆ ಇಟ್ಟಿದ್ದರು. ಸಕಲೇಶಪುರದ ಪೋಲೀಸ್ ಇನ್ಸ್‌ಪೆಕ್ಟರರು ಸಬ್ ಇನ್ಸ್‌ಪೆಕ್ಟರರು ಮತ್ತು ೩ ಜನ ಕನ್ಸ್‌ಟೇಬಲರು ಮತ್ತು ೯ ಜನ ಇತರರು ಕತಿಡಾ ೧೬ ಜನ ಸಾಕ್ಷಿಗಳಿದ್ದರು ಮೆಜಿ ಸ್ಟ್ರೇಟರು ಅತ್ಯಾವಶ್ಯಕವಾಗಿ ೪೫ ದಿನ ರಜೆ ತೆಗೆದುಕೊಂಡಿದ್ದುದರಿಂದ ಕೇಸನ್ನು ತನ್ನ ಬಗ್ಗೆ ತಾ ೨—೯—೨೨ಕ್ಕೆ ಮುಂದಕ್ಕಿಟ್ಟಾರೆಂದು ತಿಳಿಬರುತ್ತದೆ

ಕಳೆದ ವರ್ಷ ಅಕ್ಟೋಬರ್ ತಿಂಗಳಲ್ಲಿ ಆಚಂಗಿಯಲ್ಲಿ ಆದ ಕೊಲೆಯ ಕೇಸನ್ನು ತಾ. ೧೧—೯—೨೨ರಲ್ಲಿ ಹಾಸನದಲ್ಲಿ ಸೆಷನ್ ಕಮಿಟಿಗೆ ಇಟ್ಟಿರುತ್ತಾರೆ ಸುಮಾರು ೭೫ ಮಂದಿ ಸಾಕ್ಷಿಗಾರರಿದ್ದಾ ರೆಂದು ತಿಳಿಬರುತ್ತದೆ

ಹೊಸ ಯಾಕ್ಟಿಯು ಅಪ್ಪ ಸ್ವಲ್ಪ ಬೆಟ್ಟಿಗೆ ಬರುತ್ತಾ ಇದೆ. ಈ ವರ್ಷ ಕಳೆದ ವರ್ಷಕ್ಕಿಂತಲೂ ಇಬ್ಬಿಯು ಬೆಲೆಯಾಗಿದೆಯೆಂದೂ ಭಾರತಕ್ಕೆಯು ಸ್ವಲ್ಪ ಜಾಸ್ತಿಯಾಗಬಹುದೆಂದೂ ತಿಳಿಸಲಾಗಿದೆ.

ದಕ್ಷಿಣ ಕನ್ನಡ

ಮಂಗಳೂರು.—ಇದೇ ಆಕ್ಟೋಬರ್ ತಿಂಗಳಲ್ಲಿ ಆಚರಿಸಲ್ಪಡುವ ವಿಜಯದಶಮಿ ಪರ್ವದಿನದ ಅಧ್ಯಕ್ಷತೆಯನ್ನು ವಹಿಸಲು ಪ್ರಸಿದ್ಧ ಕವಿಗಳಾದ ಶ್ರೀ ನಾರಾಯಣ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಅಖಿಲ ಹಿಂದೂಸ್ಥಾನದ ದೇಶಾದ್ಯಂತರೂ ಜನಪ್ರಿಯತೆ ಪಡೆದಿರುವ ಮಹಿಳೋತ್ಸವಕ್ಕೆ ವಿಜಯದಶಮಿಯಲ್ಲಿರುವುದರಿಂದ ವ್ಯಾಪಾರಸ್ಥರಿಗೆ ತಮ್ಮ ಕಲೆಗಳ ಪ್ರದರ್ಶನವನ್ನು ಮಾಡಲು ಇದು ಯೋಗ್ಯ ಸಂದರ್ಭ.

(ದಿ. ೩—೮—೩೩) "ವಿಶ್ವತುಲಂದಲೆ" ಯ ದರ್ಬಾರಂಭ ಭಾಷಣ ಸಮಾರಂಭವು ಶ್ರೀಮಾನ್ ಯಸ್ ರಾಜಗೋಪಾಲ ಅಕ್ಕಸ್ಸಾಲಿಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಟಿ ನಾರಾಯಣ ಭಟ್ಟರು ಪ್ರಾರ್ಥನೆಯನ್ನೊದಿದರು. ಮತ್ತೆ ಕಾರ್ಯಕ್ರಮದಂತೆ ಶ್ರೀಗಳಾದ ಪುಣಚಶಾಸ್ತ್ರಿಯವರು, ಬಾಲಕೃಷ್ಣರಾಯರು ಪೆಜ್ಜಾರ್ ಉಳ್ಳಾಲ ಮಂಜೇಶ್ವರರಾಯರು ಮತ್ತು ಮಂಜಯ ತಿಮ್ಮಪ್ಪಯ್ಯನವರೂ ಉಪಯುಕ್ತ ಸೂಚನೆಗಳನ್ನಿತ್ತು ದೂರಾಗಿದರು. ತೊನೆಗೆ ಅಧ್ಯಕ್ಷರ ಭಾಷಣವಾದ ಮೇಲೆ ಕೃತಜ್ಞತೆಯೊಡನೆ ಸಭಾ ವಿಸರ್ಜನೆಯಾಯಿತು.

ಮಿಷ್ಟಿಕ್ ಬೋರ್ಡಿನವರ ಜನರಲ್ ಮೀಟಿಂಗ್ ಒಂದು ಕಾಸರಗೋಡಿನ ಬೋರ್ಡು ಹೈಸ್ಕೂಲಿನಲ್ಲಿ ತಾ ೨೬ನೇ ದಿನ (ನಾಳೆ) ೩-೩೦ಕ್ಕೆ ಜರಗುವುದು.

ಇಲ್ಲಿಯ ಪ್ರಸಿದ್ಧ ರಾ ಕಸ್ತೂರಿ ಸುಬ್ರಾಯ ಪೈಯವರ ಪೌತ್ರಿಗೆ ಶ್ರೀಮತಿಯವರ ಪೌತ್ರಿಗೆ ಶ್ರೀನಿವಾಸರವರು ಇದೇ ತಾರೀಖು 16—8—೩೨ರಲ್ಲಿ ವಿವಿಧ ಸ್ವರದಿಗಳಾಗಿ ತೀರ್ಥರೂಪರಾಗಿ ತಿಳಿಸಿಸಲು ವ್ಯಸನಪಡುತ್ತೇವೆ. ಶ್ರೀಯುತರು ಎಳೆ ವಯಸ್ಸಿನಲ್ಲಿ ಗುಣಾಢ್ಯರೂ ಆಗಿದ್ದರು. ಅವರ ಆತ್ಮಕ್ಕೆ ಶಾಂತಿಯಿರಲಿ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್‌ನ ಶಾಖೆಯೊಂದು ಬೆಂಗಳೂರಿನಲ್ಲಿ ಮೊನ್ನೆ ತೆರೆಯಲ್ಪಟ್ಟಿತ್ತೆಂದು ತಿಳಿದು ಬಂದಿದೆ. ಇದೇ ತಾ ೨೪ನೇ ದಿನ ಇದರ ಇನ್ನೊಂದು ಶಾಖೆಯು ಕಣ್ಣಾನೂರಿನಲ್ಲಿ ಆಕ್ಟೋಬರ್ ತಿಂಗಳಿನಲ್ಲಿ ತೆರೆಯಲ್ಪಡುವುದು. ಸಿಂಡಿಕೇಟು ಇದೇ ತೆರನಾಗಿ ಉಡುಪಿಯಲ್ಲಿಯೂ ಒಂದು ಶಾಖೆಯನ್ನು ತೆರೆಯಲಿದೆಯೆಂದೂ ಮೂಲಗಳಿಂದ ತಿಳಿದು ಬಂದಿದೆ. ಈ ಶಾಖೆಯನ್ನು ಪ್ರಾರಂಭಿಸಲಿರುವ ಸಿಂಡಿಕೇಟಿನ ಕಾರ್ಯಕರ್ತರಿಗೆ ಶುಭಾಶಯಗಳು.

ಇದೇ ತಾ ೨೬ನೇ ದಿನ ಶ್ರೀ ವಿವಿಧಕ್ಷತ್ರಿಯೋತ್ಸವ ಸಂಘದಲ್ಲಿ ಶ್ರೀ ಪ್ರೊಫೆಸರು ಲಕ್ಷ್ಮೀನಾರಾಯಣ ಪುಣಚಶಾಸ್ತ್ರಿಯರು ಹರಿಜನೋದ್ಧಾರದ ವಿಷಯವಾಗಿ ಭಾಷಣ ಮಾಡಲಿರುವರು. ಹಿಂದಿನ ಎರಡು ವಾರಗಳಲ್ಲಿ ಶ್ರೀ ಲಕ್ಷ್ಮಣರೇವ ವಿದ್ಯಾರ್ಥಿಯವರು ಮಧ್ವರ ಭಾಷಣ ಮಾಡಿದ್ದರು.

ಶ್ರೀ ಕೃಷ್ಣ ಸಿನೆಮಾ ಮಂದಿರದಲ್ಲಿ ತಾ ೧೩ರಿಂದ ಜಗತ್ಪ್ರಸಿದ್ಧ ಅತಿ ಗ್ಲೋರಿಯ ಸ್ವನಸನ ಎಂಬಹೆಸರಿಂದ ಅಭಿನಯಿಸಲ್ಪಟ್ಟ ಯೂನಿವರ್ಸಲ್ ಆರ್ಟಿಸ್ಟ್ಸ್‌ರ "ಲೈನ್ ಎಂಡ್ ಲೆಟ್ಟ್" ಎಂಬ ಮೂಕಾಭಿನಯ ಚಿತ್ರವನ್ನು ಪ್ರದರ್ಶಿಸಲಾಗುವುದು.

ಅಪಾಯವನ್ನು ಸರಿ ತೂಗಿಸುವುದಕ್ಕಾಗಿ ಮೋಟರ್ ವಾಹನಗಳ ವಿಶೇಷ ಇನ್ಸೂರೆ ವಾಹನಗಳ ಮೇಲೆ ಸುಂಕ ವಸೂಲು ಮಾಡುವುದಕ್ಕಾಗಿ ಒಂದು ಶಾಸನವಾಗಲಿದೆ

ಈ ತಿಂಗಳಿನಿಂದ ಮೊದಲ್ಗೊಂಡು ನಗರ ಸಭೆಯವರು ಉಲ್ಲ ವಿದ್ಯುತ್ಶಕ್ತಿಯನ್ನು ಹೆಚ್ಚಿಸುತ್ತಿರುವರು

ಲೈನ್‌ಮೈದಾನನ್ನು ಸಮಪ್ರದೇಶವನ್ನಾಗಿ ಮಾಡಲು ರೂಪಾಯಿ ೧ ಸಾವಿರವು ನಗರ ಸಭೆಯಲ್ಲಿ ಮಂಜೂರಾಗಿದೆ.

ಗರ್ವರ್‌ಮೆಂಟ್ ಬಾಲೇಷನ ಸಿಪಾಯರ್ ಇಂಟರ್ನ ವಿದ್ಯಾರ್ಥಿ ಮಿ ಅಬಿದ್ ಹುಸೇನ್ ಎಂಬ ೨೦ ವರ್ಷ ವ್ಯಾಯಿಜ ಯುವಕನು ಕೆಳೆದ ಬುಧವಾರ ಪ್ರಾಣತ್ಯಾಗಮಾಡಿರುವುದು ತಿಳಿದುಬಂದಿರುತ್ತದೆ

ಇಲ್ಲಿಯ 'ಲಾತ್ಯ ಬಂಧು' ಪತ್ರಿಕೆಯು ಯುಜಪತ್ರಿಕೆಯನ್ನು ಮುದ ರಾಸಿನ ಡಾ ಯು ರಾಮರಾವ್ ಇವರು ಪಡಿಸಿಕೊಂಡಿರುವರು ಪ ಪುಟಗಳನ್ನು ಹೆಚ್ಚಿಸಿ 'ಅಲೋಗ್ಯ ವಿಚಾರ'ವನ್ನು ಕೊಡಲಾರಂಭ ಮಾಡಿರುವರು

ಮುಂಡಬೆದ್ರೆ—ಎಸೆಸ್ ಮತ್ತು ತಾಲೂಕು ಬೋರ್ಡ್ ಉಪಾಧ್ಯಾಯರ ಸಂಘದ ಜನೇ ಸಾಮಾನ್ಯ ಸಭೆಯು ಪುಷ್ಪಮೊಗೇರು ಹರ್ಷ ಹಾಯರ್ ಎಲಿಮೆಂಟರಿ ಶಾಲೆಯ ಮುಖ್ಯ ಉಪಾಧ್ಯಾಯರಾದ ಮಿ ರಾ ಪಿ ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಇದೇ ತಾರೀಖು ೧೫ರಲ್ಲಿ ಇಲ್ಲಿಯ ಮೈನ ಶಾಲೆಯಲ್ಲಿ ಜರುಗಿತು. ಸಭೆಗೆ ಅಧ್ಯಾಪಕರ ಹಾಜರಿಯು ಬಹು ಕೃತ್ಯಕರವಾಗಿತ್ತು. ತಾಲೂಕಿನ ಬೋರ್ಡುಗಳನ್ನು ತೆಗೆದು ಹೊಸ ಗ್ರಾಮ ಪಂಚಾಯತು ಬೋರ್ಡುಗಳನ್ನು ಮತ್ತು ಡಿಸ್ಟ್ರಿಕ್ಟ್ ಕೌನ್ಸಿಲನ್ನು ಸ್ಥಾಪಿಸುವಲ್ಲಿ ಬೋರ್ಡು ಉಪಾಧ್ಯಾಯರ ಕಳೆದ ಜುಲ್ಯಾ ೧೫ತ್ತರಿಂದ ಕಡಿತದ ಸಂಬಳದ ½ ಸಂಪೂರ್ಣವಾಗಿ ಹಿಂತಿರುಗಿ ಕೊಡಬೇಕೆಂಬುದೂ, 'ಟ್ರೈಮ್ಸ ಸ್ಕೇಲು' ಜ್ಯಾರಿಗೆ ಆದಷ್ಟು ಬೇಗನೆ ತರಬೇಕೆಂಬಲೂ ತೀರಾವು ಮಾಡಲಾಯಿತು. ಬಡ್ತಿ ಸಭೆಯು ಅಕ್ಟೋಬರ ೧೫ನೇ ತಾರೀಖಿಗೆ ಇಡಲ್ಪಟ್ಟಿದೆಯೆಂದು ತಿಳಿಸಲಾಗಿದೆ

ಕಾರ್ಕಳ—ತಾ ೧೫—೮ ಭಾನುವಾರ ದಿನ ಸಾಯಂಕಾಲ ಇಲ್ಲಿಯ ಮೈನ ಎಲಿಮೆಂಟರಿ ಶಾಲೆಯಲ್ಲಿ ಕಾರ್ಕಳ ತಿಂಬರಿನ ಉಪಾಧ್ಯಾಯರ ಸಭೆಯು ಈ ರೀಂಜಸ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ ಮಿ ರಾ ವೆಂಕಟ್ರಾಯ ಮುಲ್ಕರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀಯುತ ರಂದಾಳ ವಿಚ್ಛಿದ್ರ ತೆಲ್ಲೆಯವರು ಎರಡನೆ ತರಗತಿಗೆ ಮಗ್ಗಿ ಪೀಠದಮ್ಮ ತೆಪ್ಪ ಕರುವಾಯ ಮುಗಿಸಿದ ಪರೀಕ್ಷೆಯನ್ನು ಮಾಡಿಕೊಟ್ಟ ಬಳಿಕ ಇತರ ಸಾಮಾನ್ಯ ಕೆಲಸವು ಜರುಗಿ ಸಭಾಂಕ್ಯವಾಯಿತು

ನಮ್ಮ ಭಾರತ ಹಿಂದೀ ಪ್ರಚಾರ ಸಭೆಯ ಪ್ರಾಥಮಿಕ ಪಾಠ್ಯ ಮಿಕ ರಾಷ್ಟ್ರಭಾಷಾ ಪರೀಕ್ಷೆಗಳು ಇದೇ ಬರುವ ಸಂಕ್ರಾಂತಿ ೧೦ನೇ ತಾರೀಖಿನ ದಿನ ಕಾರ್ಕಳ ಕೇಂದ್ರದಲ್ಲಿಯೂ ಕೂಡ ನಡೆಯುವುದಾಗಿಯೂ, ಒಟ್ಟು ೨೧ ವಿದ್ಯಾರ್ಥಿಗಳು ಬೇರೆ ಬೇರೆ ಪರೀಕ್ಷೆಗಳಿಗೆ ನಿಲ್ಲುವರೆಂದೂ ಪ್ರಚಾರಕರಾದ ಶ್ರೀ ಕಟಪಾಡಿ ಶ್ರೀನಿವಾಸ ಶೆಣೈ ರಾಷ್ಟ್ರಭಾಷಾ ವಿಶಾರದ ಇವರು ತಿಳಿಸುತ್ತಾರೆ

ಕಾಸರಗೋಡು—ಇಲ್ಲಿಯ ವಿಶ್ವಪ್ರ ಸಂಕೇಂದರಿ ಶಾಲೆಯಲ್ಲಿ ೩೪ತ್ತರೆಗೆ ತೆರೆಯಲ್ಪಟ್ಟ ಕರ್ನಾಟಕ ವಿದ್ಯಾರ್ಥಿ ಸಂಘದ ಒಂದು ಸಭೆಯು ತಾ ೧೬-೮ ೩೩ನೇ ಸಾಯಂಕಾಲ ನೇರಿ ವಿದ್ವಾನ್ ಸುಬ್ರಹ್ಮಣ್ಯ ಸಾಬ್ರಾಯರ ಅಧ್ಯಕ್ಷತೆಯಲ್ಲಿ ಸ್ತ್ರೀ ವಿದ್ಯಾಭ್ಯಾಸವು ಬೇಕೊ ಬೇಡವೊ ಎಂದು ಚರ್ಚೆ ನಡೆಯಿತು. ವಿದ್ಯಾರ್ಥಿಗಳು ವಿದ್ಯಾರ್ಥಿನಿಯರು ಬಹಳ ಉತ್ಸಾಹದಿಂದ ಅಧ್ಯಕ್ಷರ ಭಾಷಣ ಮಿದಂತೂ ಅಧಿಕ ಆನಂದವನ್ನು ತೋರಿಸಿದರು. ಈ ಸಂಘವು ಅಭಿವೃದ್ಧಿಯನ್ನು ಹೊಂದಲಿ

ಧರ್ಮಸ್ಥಳ—ಇದೇ ಬರುವ ಕಾರ್ತಿಕ ಬ ವಿಕಾದಶಿ ಮೊದಲ್ಗೊಂಡು ಅಮವಾಸ್ಯೆ ಪರ್ಯಂತರ ವರ್ಷಂಪ್ರತಿ ಜರಗುವ ದೀಪೋತ್ಸವ ಸಮಾರಂಭಕ್ಕೆ ನೆರೆಯುವ ಜನಸಮುದಾಯದಲ್ಲಿ ಧರ್ಮಗಳ ಮರ್ಮವನ್ನು ಬೋಧಿಸುವಂತೆಹ ಒಂದು "ಸರ್ವ ಧರ್ಮಸಮ್ಮೇಳನ"ವೂ, ರಾಷ್ಟ್ರೀಯ ಕೃಷಿ ಮತ್ತು ಕೈಗಾರಿಕೆ ಸಂಬಂಧವಾದ ಒಂದು "ಸಸ್ಯಪ್ರದರ್ಶನ"ವೂ ಕೂಡಾ ನೆರವೇರಿಸಲ್ಪಡಬೇಕಾಗಿ ನಿಶ್ಚೈಸಿಯಾಗಿದೆ ಇದರಲ್ಲಿ ಧರ್ಮಬಂಧುಗಳೂ ರಾಷ್ಟ್ರಬಂಧುಗಳೂ ತಮ್ಮ ಸಹಾನುಭೂತಿಯನ್ನು ತೋರಿಸುವುದಾಗಿ ನಿರೀಕ್ಷಿಸೋಣಾಗಿರುವೆ. ಇದರ ಮೊತ್ತಿನ ವಿವರವು ಸಪ್ಟಂಬರ್ ಪ್ರಥಮವಾರದಲ್ಲಿ ಪ್ರಕಟಿಸಲ್ಪಡುವುದೆಂದು ಶ್ರೀ ವಿ ಮಂಜಯ್ಯ ಹೆಗ್ಗಡೆಯವರು ತಿಳಿಸಿಸುತ್ತಾರೆ

ಕಿನ್ನಿಗೋಳಿ—ಇಲ್ಲಿಯ ನೇಷನಲ್ ಕ್ಲಬ್ಬಿನ ಪ್ರೆಸಿಡೆಂಟ್ ಶ್ರೀಯುತ ಬಿ ಲಕ್ಷ್ಮಿ ಸುಬ್ರಾಯ ಪೈಯವರ ಚತುರ್ಥ ಪುತ್ರಿಯ ಚೌಲೋತ್ಸವ ದಾವಿಗೆ ಇಂದಿಗೆ ೩ ವರ್ಷಗಳು ಮುಟ್ಟಿಗೆ ಲೈಬ್ರೇರಿಗೆ ಪುಸ್ತಕಗಳನ್ನೊದಗಿಸಿದ್ದಲ್ಲದೆ ಪ್ರಸ್ತಕ ಚೌಲೋತ್ಸವಕ್ಕೆ ಬಂದ ಇರುವ ಒಂದು ಹೋಮವನ್ನು ಧರ್ಮಾರ್ಥವಾಗಿ ಕೆಲವಿನ ಉಪಹಾರದ ಬಗ್ಗೆ ತಾ ೧೫-೮-೩೩ರಿಂದ ಬಿಟ್ಟುವ ರೆಂಬ ಸಂಗತಿಯನ್ನು ತಿಳಿಸಲು ತಾ ಸಂತೋಷಪಡುತ್ತೇನೆ.

ಅಡ್ಯಾರು—ಅಡ್ಯಾರು ಅಡ್ಯಾರು ಗ್ರಾಮಗಳ ಕೆಲವು ಕಡೆಯ ರಿಂದ ಸ್ಥಾಪಿತವಾದ ಇಲ್ಲಿಯ "ಶ್ರೀ ಮಹಲಿಂಗೇಶ್ವರ ಕೃಪಾಪೋಷಿತ ಸಂಘ"ದಲ್ಲಿ ರಾತ್ರಿ ಗಂಟೆ ೭ಕ್ಕೆ ಸರಿಯಾಗಿ ಜರಗತಕ್ಕ ಪ್ರತಿ ಸೋಮವಾರದ ಯಕ್ಷಗಾನಕ್ಕೆ ಪ್ರತಿ ಶನಿವಾರದ ಭಜನೆಗೂ ಊರ ಹಾಗೂ ಪರವೂರ ಯಕ್ಷಗಾನ ಪಾತ್ರೀಕ ಮತ್ತು ಭಜಕ ಮಹಾಶಯರುಗಳು ಆಗಾಗ್ಗೆ ದಯಮಾಡಿ ಬಂದು ನಮ್ಮ ಈ ಸಂಘವನ್ನು ಏಳಿಗೆಗೆ ತರುವೇ ಕಾಗಿ ಸಂಘಾಧ್ಯಕ್ಷರಾದ ರಾ ಎಮ್ ರಮಿವರ್ಮನವರು ವಿನಂತಿಸಿ ಕೊಳ್ಳುತ್ತಾರೆ

ನಿತ್ತೂರು—ಇಲ್ಲಿನ ಶಾಲಾ ಕಮಿಟಿಯ ೩ನೇ ಸಭೆಯು ಇದೇ ಕಳೆದ ೧೬ನೇ ತಾರೀಖು ಗುರುವಾರ ಅಪರಾಹ್ನ ೫ಂಟೆ ೩೪ ನಿಮಿಷಕ್ಕೆ ಕೂಡಿತು. ಈ ಸಭೆಗೆ ಜೆಷ್ಟು ಕಡಿಮೆ ೩೦ ಮಂದಿ ಗ್ರಾಮಸ್ಥರು ಹಾಜರಿದ್ದರು. ಈ ದಿವಸ ಸಭೆಗೆ ಪುತ್ತೂರು ತಾಲೂಕು ಬೋರ್ಡು ಪ್ರೆಸಿಡೆಂಟರಾದ ರಾ ಬೋಳಜ್ಜ ಶಿವರಾಯರು ಮುದ್ದು ಚಿತ್ರೈಸಿದ್ದರು. ಬಾಲಕಿಯರಿಂದ ದೇವರ ಪ್ರಾರ್ಥನೆಯಾದ ಬಳಿಕ ಕಾರ್ಯದರ್ಶಿ ವೆಂಕಪ್ಪ ಪೂಜಾರಿ ಹಿಂದಿನ ಪಾಠಿಂಗಿನ ವರದಿಯನ್ನು ಓದಿದರು. ನಂತರ ಕೆಲವು ಪ್ರಾಮುಖ್ಯ ನಿರ್ಣಯಗಳು ಆದ ಬಳಿಕ ತಾ ಬೋ ಪ್ರೆಸಿಡೆಂಟರವರು ಕೋಳಿಗಳನ್ನು ಜಾನುವಾರುಗಳ ಹಾಗೂ ಬೇಸುಬೆಳ್ಳದ ವೃಥಸಾಯ ಇವುಗಳ ಕುರಿತು ಸುದೀರ್ಘವಾದ ಭಾಷಣವಿತ್ತರು. ಮುಂದಿನ ಪಾಠಿಂಗು ಸದ್ಯಂಬರ ತಾರೀಖು ೧೬ನೇ ನೋಮು ವಾರ ಅಪರಾಹ್ನ ೫ಂಟೆ ೪೪ಕ್ಕೆ ಕೂಡುವುದೆಂದು ನಿರ್ಣಯಿಸಿ ಸಭೆಯು ಮುಕ್ತಾಯವಾಯಿತು

ಅಜೆಕಾರು—ಊರಲ್ಲಿ ಹುಲಿ ಮತ್ತು ಕಾಡುಹಂದಿಗಳ ಉಪದ್ರವವನ್ನು ಹೇಳಿ ತೀರದು. ಮೊನ್ನೆ ತಾನೇ ಒಂದು ಕಾಡು ಹಂದಿಯು ಒಬ್ಬ ಯುವಕನನ್ನು ತನ್ನ ದಾಡೆಗಳಿಂದ ತಿವಿದಿರುವುದು ಹುಲಿರಾಯನಾದರೋ ನಿರ್ಭಯವಾಗಿ ಹಗಲಲ್ಲೇ ಛರ್ಚಸುತ್ತಿರುವನು ಬೇಟೆಗಾರರಿಗೆ ಒಳ್ಳೇ ಸುಸಂಧಿ! ಆದರೆ ಆದರೆ?

ಜಂಗ್ಲಿ ಇಲಾಖೆಯವರು ಸ್ಪೀಲರಿನ ಕೆಲಸವು ರಭಸದಿಂದ ಜರಗುತ್ತಿರುವುದು

ಸ್ವೀಕಾರ

೧೯೪೯ರಿಂದ ೩೦ ವರೆಗಿನ ತಾಲೂಕು ಸಂಖ್ಯಾ ವಾರಿಯ ವರದಿಯ ಹಸ್ತಪ್ರತಿಯನ್ನು ಶ್ರೀಯುತ ಮಾಡಿಸಿದ್ದಾರೆ.

ಧಾರವಾಡದ ಜಯಕರ್ನಾಟಕ ಗ್ರಂಥಮಾಲೆಯಿಂದ ಶ್ರೀ ರಂಗರವರ ಲೇಖನ ಮೂಲಕ ದರಿದ್ರ ನಾರಾಯಣ" ಎಂಬ ಸಾಮಾಜಿಕ ನಾಟಕವು ಪ್ರಕಟವಾಗಿ ನಮಗೊದಗಿದ್ದು ಕೃತಿಯ ಕಲಪಿಸಿಕೊಡದ ಅದರ ದಿಂದ ಸ್ವೀಕರಿಸಿದ್ದೇವೆ. ಮಧುರ ಭಾಷೆಯ ಸುಂದರ ಗ್ರಂಥ ವಾಚನೀಯ ಬೆಲೆ ಹತ್ತಾಣೆ. ಕನ್ನಡಿಗರೆಲ್ಲರೂ ಓದಿಕೊಳ್ಳಲಿಲೆಂದು ಹಾರೈಸುತ್ತೇವೆ

+ ++ +

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದ ಕನ್ನಡ).

ಇದರಿಂದ ತಯಾರಿಸಲ್ಪಟ್ಟು, ಕುಂಭಕೋಣದಲ್ಲಿಯೂ ವ ಪುರಿಯಲ್ಲಿಯೂ ನಡೆದ ಅಖಿಲ ಭಾರತ ವಸ್ತು ಪ್ರದರ್ಶನಗಳಲ್ಲಿ ಸುವರ್ಣ ಪದಕಗಳನ್ನು ಪಡೆದಿರುವ "ಕರ್ನಾಟಕ"

ದ್ರಾಕ್ಷಾಸವ, ಬ್ರಿಲ್ಲಂಟೈನ್ ೧೦೫, ಟೈವನಪ್ರಾಶ, ಸ್ನೋ, ಸೋಪ್ಸ್

ಇವುಗಳನ್ನೇ ಉಪಯೋಗಿಸಿರಿ.

ಪಶ್ಚಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ವಿಜಂಟರು:—

"ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು

Managing Director —**Venkatraya Annappa Baliga**

"ಮಹಾತ್ಮಾಜೀಯವರನ್ನು ಬದುಕಿಸಿರಿ!!!"

"ಎಲ್ಲ ಕೈದಿಗಳಂತೆ ಅವರಲ್ಲ — ಯಿಂದೂದೇಶವವರು"

ಅಮರಣಾಂತಿಕ ಉಪವಾಸದ ಪರಿಣಾಮ!!!

ಮಹಾತ್ಮರಿಗೆ ಸೌಲಭ್ಯಗಳನ್ನೊದಗಿಸಿ ಕೊಡಬೇಕೆಂಬುದಕ್ಕಾಗಿ ದೇಶದ ಅಲ್ಲಲ್ಲಿ ರಂಪಾಟಗಳಾಗಿ ಸರಕಾರಕ್ಕೆ ಮನವಿಗಳು ಹೊರಟಿವೆ.

ಉಪವಾಸವನ್ನಾರಂಭಿಸಿದಂದಿನಿಂದ ಮಹಾತ್ಮರು ದಿನಕ್ಕೆ ಎರಡು ಔನ್ಸುಗಳಷ್ಟು ತೂಕವನ್ನು ಕಳೆದುಕೊಂಡಿರುವರಾಗಿ ವಾರ್ತೆ ಯಿದೆ. ಅವರಿಗೆ ಓಕರಿಕೆಯು ಪ್ರಾರಂಭವಾಗಿದೆಯೆಂಬ ಭಯಭೀತಿಕರ ಸುದ್ದಿಯೂ ತಲಪಿದೆ ಆದರೂ ಸುಖನಿದ್ರೆಯಿಂದಿರುವರು ಕಳೆದ ಉಪವಾಸದ ಸಮಯದಲ್ಲಿ ತೋರಿದ ಜಿಜ್ಞಾಸೆಗಳು ವಹಿಸಿದೆ ಡಾಕ್ಟರರು ಶುಶ್ರೂಷೆಗೆಳನ್ನೊದಗಿಸಿ ಕೊಡುತ್ತಿರುವರು ಐ. ಎಂ ಎಸ್ ಆಫೀಸರಾಗಿರುವ ಜೈಲಿನ ಸುಪರಿಂಟೆಂಡೆಂಟರು ಅವರನ್ನು ರಕ್ಷಿಸುತ್ತಿರುವರು ಶ್ರೀ ಮಹದೇವ ದೇಸಾಯಿಯವರೂ ಇಬ್ಬರು ಬಂಧಿಗಳೂ ಅವರ ಮೇಲ್ವಿಚಾರದಲ್ಲಿರುತ್ತಿರುವರು ಸಿ ಎಫ್ ಎಂಡ್ರೂಸರು ಮಹಾತ್ಮರನ್ನು ಪುನಃ ಕಂಡು ಮಾತನಾಡಿದರು. ಶ್ರೀ ಮಥುರದಾಸ್ ತ್ರಿಕಂಜಿಯವರು ಗಾಂಧೀಜೀಯವರ ಭೇಟಿಗಾಗಿ ಹೋಮ್ ಸೆಕ್ರೆಟರಿಯವರಿಗೆ ಅರ್ಜಿ ಮಾಡಿಕೊಂಡು ಮಹಾತ್ಮರು ಉಪವಾಸದಿಂದಿರುವುದರಿಂದ ತಾನವರನ್ನು ದಿನಂಪ್ರತಿ ನೆರೆಯೊಳಗೆ ಭೇಟಿಯಾಗುವೆನೆಂದು ಅರಿಕೆ ಮಾಡಿಕೊಂಡರು ಆದರೆ ಅವರ ಅರಿಕೆಯು ತಿರಸ್ಕರಿಸಲ್ಪಟ್ಟಿತು. ಮಹಾತ್ಮರನ್ನು ತ್ರಿಕಂಜಿಯವರು ತಾ ೧೫ರಲ್ಲಿ ಸಂದರ್ಶಿಸಲೂ ಕೂಡಾ ಅವಕಾಶವು ದೊರೆಯಲಿಲ್ಲ

ಶ್ರೀಮತಿ ಕಸ್ತೂರಿಬಾಯಿಯವರನ್ನು ಅಪ್ಪಣೆಯಾದಿನ ನೆರೆಯಿಂದ ಗುಜರಾತ್ ಮೈಲಿನ ಮೂಲಕ ಬಲ್ಲ ಸ್ಪೀಡೊಡನೆ ಎರವಾಡಾಕ್ಕೆ ಕಳುಹಿಸಿದರು

ಮಹಾತ್ಮರ ಉಪವಾಸವು ಇನ್ನೂ ಕೆಲವು ದಿನಗಳ ವರೆಗೆ ಮುಂದರಿಯುವುದಾದರೆ, ಅವರಿಗೆ ಸಂಕಾರದವರು ಬಲಾತ್ಕಾರದಿಂದ ಅನ್ನಾಹಾರವನ್ನುಣ್ಣಿಸುವರೆಂಬ ವಾರ್ತೆಯಿದೆ ಆದರೆ ಮಹಾತ್ಮರು ಇದನ್ನು ಸ್ವೀಕರಿಸುವರೋ ಇಲ್ಲವೋ ಎಂದು ತಿಳಿದಿರುವುದಿಲ್ಲ ವೈಸರಾಯರ ಕಛೇರಿಯೂ, ಹೋಮ್ ಸೆಕ್ರೆಟರಿಯವರ ನಡುವಲೂ ದಿನೇ ದಿನೇ ಸಭೆ ಸೇರಿ ಮಹಾತ್ಮರ ಉಪವಾಸ ಸಂಬಂಧವಾಗಿ ಏನೆಲ್ಲ ಮಾಡಬೇಕೆಂದು ಆಲೋಚಿಸುತ್ತಿರುವರು ವಿಷಮಾವಸ್ಥೆಯು ಬಂದೊದಗುವುದಾದರೆ ಗಾಂಧೀಜೀಯವರನ್ನು ಕೂಡಲೇ ಸೆರೆಯಿಂದ ಬಿಡುವರೆಂದು ತಿಳಿದುಬಂದಿದೆ

ಸಿ ಎಸ್ ಎಂಡ್ರಿಸರು ಪೂನೆಯಲ್ಲಿ ಇನ್ನೂ ಒಂದು ವಾರ ತಡೆಯುವರು ಅವರು ಪದೇ ಪದೇ ಹೋಮ್ ಸೆಕ್ರೆಟರಿಯವರನ್ನು ಸಂದರ್ಶಿಸಿ ಮಾತುಕತೆ ನಡೆಸುತ್ತಿರುವುದರಿಂದ ಅವರ ಕಾರ್ಯದಲ್ಲಿ ಯಶಸ್ವಿಯಾಗದಿರಬೇಕೆಂದು ಭಾವಿಸಲಾಗಿದೆ ಹೋಮ್ ಸೆಕ್ರೆಟರಿಯವರು ಅವಿಶ್ರಾಂತವಾಗಿ ಕೆಲಸ ಮಾಡುತ್ತಿರುವರು

ಮಹಾತ್ಮರಿಗೆ ದೇಶಾದ ಅನುಕೂಲತೆಗಳನ್ನು ಒದಗಿಸಿ ಕೊಡಬಹುದೋ ಎಂದು ವೈಸರಾಯರು ಸೆಕ್ರೆಟರಿ ಆಫ್ ಸ್ಟೇಟರಿಗೆ ತಂತಿಬಿಟ್ಟು ಕೇಳಿರುವರು 'ಹೋರರು' ಅಂತಹ ಅನುಕೂಲತೆಗಳು ದೊರೆಯಬೇಕಾದರೆ ಗಾಂಧಿಯವರು ಕಾಯಿದೆ ಭಂಗ ಚಳವಳಿಯನ್ನು ಸಂಪೂರ್ಣ ತ್ಯಜಿಸಬೇಕೆಂದು ಅಭಿಪ್ರಾಯ ಪಟ್ಟಿರುವರೆಂದು ತಿಳಿಯಲಾಗಿದೆ.

ಮುಂಬಾಯಿಯ ವ್ಯಾಪಾರೀ ಮಹಾಮಂಡಲದವರು ಈ ಕೆಳಗಿನ ಪ್ರಕಟಣೆಯನ್ನು ಮಾಡಿ ಮಹಾತ್ಮರನ್ನು ಸರಕಾರವು ಬಿಡುಗಡೆಸಿಕೊಡಬೇಕಾಗಿ ಕೇಳಿಕೊಂಡಿರುವರು

ಮಹಾತ್ಮಾ ಗಾಂಧಿಯವರಿಗೆ ಹೆಚ್ಚಿನ ಸಂಬಂಧವಾದ ಕೆಲಸಗಳನ್ನು ಸೇರಿವೇರಿಸುವುದಕ್ಕಾಗಿ ನ್ಯಾಯಯುಕ್ತವಾದ ಸೌಲಭ್ಯಗಳನ್ನು ಸರಕಾರವು ತಿರಸ್ಕರಿಸಿರುವುದು ರಾಜನೀತಿ ಜ್ಞತೆಗೆ ಯುಕ್ತವೋ ನ್ಯಾಯವೋ ಅಲ್ಲ. ಸರಕಾರದ ಈ ವರ್ತನೆಯನ್ನು ಈ ಮಹಾಮಂಡಲವು ಕಂಡು ಅತ್ಯಂತ ದುಃಖ ಕೆಮ್ಮಿಗಾಗಿದೆ. ಅಂತಹ ತೀರ್ಮಾನದಿಂದಾಗಿ ಮಹಾತ್ಮರು ಕೈಕೊಂಡ ಅಮರಣಾಂತಿಕ ಉಪವಾಸವು ಭರತ ಖಂಡದಲ್ಲಿ ಮಹಾ ಕ್ಷೋಭೆಯನ್ನೆಬ್ಬಿಸಿಬಿಟ್ಟಿರುತ್ತದೆ. ರಾಜಕೀಯ ಬಂಗದಲ್ಲಿ ಶಾಂತಿಯನ್ನುಂಟುಮಾಡಲು ಗಾಂಧೀಜೀಯವರು ನ್ಯಾಯ ಬದ್ಧರಾಗಿ ಪ್ರಾರ್ಥಿಸಿರುವುದನ್ನು ಕೂಡಾ ಸರಕಾರವು ತಿರಸ್ಕರಿಸಿರುವುದನ್ನು ಕಂಡು ಪ್ರಪಂಚವೇ ಆಶ್ಚರ್ಯಕ್ಕೊಳಗಾಗಿದೆ ಜನರ ದುಃಖ ನಿವಾರಣೆಗಾಗಿಯೂ ದೇಶದ ನ್ಯಾಯಕ್ಕಾದ ಊರ್ಜಿತದ ಬಗ್ಗೆ ಉತ್ಕಟಾಂತಿಯು ಅಗತ್ಯವಿರುವಾಗ ಸರಕಾರವು ಈ ರೀತಿಯಿಂದ ವರ್ತಿಸುತ್ತಿರುವುದು ವಿಷಾದಕರವಾಗಿದೆ ಸರಕಾರವು ತನ್ನ ಪ್ರಕಟಣೆಯಲ್ಲಿ ಕೊಟ್ಟಿರುವ ಕಾರಣಗಳು ಎಷ್ಟಕ್ಕೂ ಸಾಧುವಾಗುವುದಿಲ್ಲ ಸಂಪ್ರದಾಯವಾದಿಗಳು ಮಹಾತ್ಮರಿಗೆ ಅಂತಹ ಸೌಲಭ್ಯಗಳನ್ನು ಕೊಡಲೊಪ್ಪುವುದಿಲ್ಲ ಎಂಬ ನೆವವನ್ನು ಮುಂದಿಟ್ಟು ಸರಕಾರವು ಮಹಾತ್ಮಾಜೀಯವರನ್ನು ಬಾಧೆಗಳೊಳಿಸುವುದು ವಿಜ್ಞತ್ರ ವಿಷಯವಾಗಿದೆ ಸರಕಾರವೂ ಜನರಾಂಗವೂ ಈ ಹರಿಜನೋದ್ಧಾರಕ್ಕಾಗಿ ಹೆಣಗಾಡಬೇಕಾಗಿರುವ ಈ ದಿನಗಳಲ್ಲಿ ಇಂತಹ ಅಲಸ್ಯವು ವ್ಯಸನವನ್ನುತ್ಪನ್ನಗೊಳಿಸಲು ಕಾರಣವಾದೀತು.

ಮಹಾತ್ಮಾಜೀಯವರ ಉಪವಾಸ!

ಮಹಾತ್ಮಾಜೀಯವರನ್ನು ಎರವಾಡಾ ಜೈಲಿನಿಂದ ಸಸೂನ್ ಆಸ್ಪತ್ರೆಗೆ ಕೊಂಡೊಯ್ಯಿರುವರಾಗಿ ತಾ ೨೮ರಲ್ಲಿ ಬಂದ ವಾರ್ತೆಯಿಂದಾಗಿ ತಿಳಿದು ಬಂದಿದೆ

ಅವರು ಬಹಳ ಕ್ಷೀಣರಾಗಿರುವರು ಅರು ದಿನಗಳ ಉಪವಾಸದಿಂದಾಗಿ ಅವರ ಸ್ವರವು ತಗ್ಗಿದೆ ಆಗಾಗ್ಗೆ ಕಾರು ತ್ತಿರುವರು ತಾ ೫ನೇ ದಿನ ರಾತ್ರೆ ಅವರಿಗೆ ಸರಿಯಾದ ನಿದ್ರೆ ಹತ್ತಲಿಲ್ಲ ಮಹಾತ್ಮರು ಪ್ರಕೃತಿಗಳಿ ೨೦ರುಂಡಿಷ್ಟು ಭಾರವಿರುವರು

ಸಿ ಎಫ್ ಎಂಡ್ರೂಸರೇ ಗಾಂಧೀಜೀಯವರನ್ನು ಸಂದರ್ಶಿಸಿದರು ಯಾವ ವಿಷಯವಾಗಿಯೂ ಅವರಾ ಬಾಯಿ ಬಿಡುವುದಿಲ್ಲ

ಶ್ರೀಮತಿ ಗಾಂಧಿಯವರು ಯಾವ ಶರ್ತವಿಲ್ಲದೆಯೂ ಬಿಡಲ್ಪಟ್ಟು ಮೇಲೆ ಪತಿಯ ಒಳ ಸೇರಿ ಅವರನ್ನು ಉಪಚರಿಸುತ್ತಿರುವರು

ದೇಶವಿದೇಶಗಳಿಂದ ತಂತಿಗಳು ಬಂದು ಮಹಾತ್ಮರ ಆರೋಗ್ಯವಿಚಾರವೇನೆಂದು ಸಿ. ಎಫ್ ಎಂಡ್ರೂಸರೊಡನೆ ಕೇಳುತ್ತಿರುವವು ಶ್ರೀಮತಿ ಸರೋಜಿನಿ ದೇವಿಯವರು ಹೈದರಾಬಾದ್‌ನಿಂದ ತಂತಿ ಬಿಟ್ಟು ಮಹಾತ್ಮರ ಶುಶ್ರೂಷೆಗಾಗಿ ತಾನು ಕೂಡಲೇ ಒರುವೆನೆಂದು ಅವರು ತಿಳಿಸಿರುವುದು ಅಸ್ಪೃಶ್ಯತೆಯಲ್ಲಿ ಗಾಂಧೀಜೀಯವರನ್ನು ಶುದ್ಧ ಗಾಳಿಯಿರುವಲ್ಲಿ ಸಾಲಗಿಸಿರುವರು ಕಟ್ಟೋಣದ ಹೊರಗಡೆ ಸುತ್ತಲೂ ಪೋಲೀಸರನ್ನು ಕಾವಲಿರಿಸಿರುವರು

ತಾ ೨೮ನೇ ದಿನ ಗಾಂಧೀಜೀಯವರನ್ನು ಸಿವಿಲ್ ಸರ್ಜನರು ಪರೀಕ್ಷಿಸಿದರು ರೆಸಿಡೆಂಟ್ ಮೆಡಿಕಲ್ ಆಫೀಸರರೂ ಇನ್ನೊಬ್ಬ ಡಾಕ್ಟರರೂ ಅವರ ಆರೋಗ್ಯ ವಿಚಾರವನ್ನು ಮಾಡಿದರು

ಬಹಳ ಕೃಶರಾಗಿರುವಂತಾದರೂ ಮಹಾತ್ಮರು ತಾವಾಗಿಯೇ ಮುಖ ಪ್ರಕ್ಷಾಳನವನ್ನು ಮಾಡುತ್ತಿರುವರು. ಹಲ್ಲು ಬಾಯಿಗಳನ್ನು ಸ್ವಚ್ಛಹಾ ತೊಳೆಯುತ್ತಿರುವರು

ಶ್ರೀಮತಿ ಗಾಂಧಿಯವರು ಗೀತಾವಾಚನ ನಡೆಸುತ್ತಿರುವರು ಗಾಂಧೀಜೀಯವರು ಏಕಚಿತ್ತದಿಂದ ಅದನ್ನಾಲಿಸುತ್ತಿರುವರು

ಗಾಂಧೀಜೀಯವರು ಅಪಾಯಕರ ಸ್ಥಿತಿಯಲ್ಲಿರುವುದಿಲ್ಲವೆಂದು ಸಿವಿಲ್ ಸರ್ಜನರು ಅಭಿಪ್ರಾಯಪಡುತ್ತಿರುವರು.

ತಾ. ೨೮ನೇ ದಿನ ಸಂಜೆ ಗಾಂಧೀಜೀಯವರನ್ನು ತೂಕ ಮಾಡಿದ್ದಲ್ಲಿ ಅವರು ೧೧ ಪೌಂಡು ಭಾರವಿರುವರಾಗಿ ತಿಳಿದು ಬಂದಿದೆ.

ಗಾಂಧೀಜೀಯವರೂ ಅಪಾಯ ಸ್ಥಿತಿಗೆ ಮುಟ್ಟಿರೊಡನೆ ಅವರನ್ನು ವೈದ್ಯಕೀಯ ಸಲಹೆಯ ಮೇಲೆ ಬಿಡುಗಡೆ ಮಾಡುವರಾಗಿ ತಿಳಿದು ಬಂದಿರೆ

ಗಾಂಧೀಜೀಯವರ ಸ್ಥಿತಿಗತಿಗಳನ್ನು ಇಂಗ್ಲೆಂಡಿನ ಮೇಲಧಿಕಾರಿಗಳಿಗೆ ಇಂಡಿಯ ಸರಕಾರವು ತಿಳುಹಿಸುತ್ತಿರುವುದು, ಗಾಂಧೀಜೀಯವರ ಬಿಡುಗಡೆಯನ್ನು ಇಂಡಿಯಾ ಸಂಕಾರವೇ ನಿರ್ಣಯದಿಂದ ಪ್ರಕಟಿಸುವುದು

ಲೆಫ್ಟಿನೆಂಟ್ ಕರ್ನಲ್ ಜಿಂಡಿಯವರು ಮಹಾತ್ಮರನ್ನು ಪರೀಕ್ಷಿಸಿ "ನಿಮಗೆ ಮುಂಬಾಯಿ ಕಲ್ಪತ್ತಗಳ ವೈದ್ಯರನ್ನು ತರಿಸಬೇಕೆ?" ಎಂದು ಕೇಳಿದರು ಆದರೆ ಮಹಾತ್ಮರು 'ದೇವದೇವ, ನಿನ್ನ ಮೇಲೆ ನನಗೆ ಸಂಪೂರ್ಣ ಭರವಸೆ ಇದೆ' ಎಂದರು.

+++++

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P No 90/1933

ಮೃತಪಟ್ಟ ಮಾಣಪ್ಪ ಯಾನೆ ಮಾದಪ್ಪ ಭಟ್ಟರಿಗೆ ಜರಕಸ್ಯ ಸಾಲಗಳ ವಸೂಲಿ ಬಾಬಿನಲ್ಲಿ-

ದೇಲಂಕಬೆಟ್ಟು ಕೃಷ್ಣ ಭಟ್ಟ-ಅರ್ಜಿದಾರ

ಗೋವಿಂದ ಭಟ್ಟ ಕೂಡಾ ಎದ್ರಿರು ಮೃತಪಟ್ಟ ಸದ್ರಿ ಮಾಣಪ್ಪ ಯಾನೆ ಮಾದಪ್ಪ ಭಟ್ಟರ ಸಾಲಗಳನ್ನು ವಸೂಲಿ ಮೂಲು ಮಾಡುವರೆ ಅರ್ಜಿದಾರರಿಗೆ ಸರ್ಟಿಫಿಕೇಟು ಕೊಡಿಸಬೇಕಾಗಿ ಅರೇಕ್ಷಿಸಿ ಅರ್ಜಿದಾರನ ದಾಕ್ಷಲು ಮಾಡಿದ ಮೇಲ್ಕಂಡ ಅರ್ಜಿಯು ತಾ 11-9-1933ರಲ್ಲು ತನ್ನಿಗೆ ವ್ಯಾದೆ ನಿಶ್ಚಯಿಸಿರುವುದೆಂತ ಈ ಮೂಲಕ ತಿಳಿಸೋಣಾಗುತ್ತದೆ ಮತ್ತು ಸದ್ರಿ ಅರ್ಜಿಗೆ ಅಕ್ಷೇಪಣೆ ಇದ್ದಲ್ಲಿ ತಮ್ಮ ಅಕ್ಷೇಪಣೆಯನ್ನು ಸದ್ರಿ ಕೋರ್ಟಿನಲ್ಲಿ ಆ ವ್ಯಾದೆಗೆ ಜಜ್ಞಾಪೀರು ಮಾಡತಕ್ಕದ್ದು ಇದಕ್ಕೆ ತಪ್ಪಿದರೆ ತಿರುವಾ ತೀರ್ಮಾನ ಮಾಡೋಣಾಗುವುದು

ಪುತ್ತೂರು 12-8-'33 } B Ramachandra Rao *M A B L*
Pleader for Petitioner.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P No 89/1933.

(1) ಪರಮೇಶ್ವರ ಕೇಕಂಣಾಯ—(2) ನಾರಾಯಣ ಕೇಕಂಣಾಯ.-ವೆಂಕಟ್ರಮಣ ಕೇಕಂಣಾಯರ ಮಕ್ಕಳು. ಅರ್ಜಿದಾರರು—ಪಳ್ಳಿಕೆರೆ ಗ್ರಾಮದ ತ್ರಿಕನ್ನಾಡಲ್ಲಿರುವವರು.

ಮೇಲ್ಕಂಡ ಮೃತಪಟ್ಟಯ ಅರ್ಜಿದಾರರ ತಂದೆ ಮೃತಪಟ್ಟ ವೆಂಕಟ್ರಮಣ ಕೇಕಂಣ್ಣಾಯರು ವಾದಿಯಾಗಿ ಪ್ರತಿವಾದಿರು ಬಳ್ಳೋಡಿನ ಕುಂಞಾಸ್ಸೈನ್ನಾಯರ ಕೂಡಾ 5 ಜನರ ಮೇಲೆ ಪಡೆದ ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನ O S No 574/1930ನೇ ನ್ಯಾಜ್ಞದ ಡಿಕ್ರೆಮೇರೆಗಿನ ಪಣ್ಣ ಜನ್ಯ ವಸೂಲಿ ಮಾಡುವರೆ 2ನೇ ಅರ್ಜಿದಾರನ ಹೆಸರಲ್ಲಿ ವಾರಸು ಸರ್ಟಿಫಿಕೇಟು ಕೊಡಿಸಬೇಕಾಗಿ ದಾಖಲು ಮಾಡಿದ ಮೇಲ್ಕಂಡ O. P No 89/33ನೇ ಅರ್ಜಿ ವ್ಯಾಪಕೆಯು ತನಿಖೆ ಜಗ್ಗೆ ತಾ. 6-9-1933ಕ್ಕೆ ಇಟ್ಟಿರುವುದರಿಂದ ಆ ಕುರಿತು ಅಕ್ಷೇಪ ಉಳ್ಳವರು ಸದರಿ ದಿವಸ ಮಂಜೂರು ಕೋರ್ಟಿನಲ್ಲಿ ಹಾಜರಾಗಿ ಅಕ್ಷೇಪಣೆ ಜೇಕಾಕೊಳ್ಳಬಹುದೆಂಬ ಸಂಗತಿ ಈ ಮೂಲಕ ತಿಳಿಸೋಣಾಗುತ್ತದೆ.

ಕಾಸರಗೋಡು 17-8-'33 } C. M. Kamath,
Vakil for Petitioner.

ವಿವಿಧ ಸಮಾಚಾರ:—

ಸೃಷ್ಟಿ ವೈಚಿತ್ರ್ಯ, ಮುಂಬಾಯಿಯಲ್ಲಿ ಭಯಂಕರ ಬೆಂಕಿ! ಇನ್ನೊಂದು ಕೋಟಿ! ಜಪಾನರೂ ಹಿಂದೀಯರೂ. ಅತಿವೃಷ್ಟಿ—ಎಲ್ಲೆಲ್ಲಿಯೂ ಜಲಪ್ರಳಯ!

ಸೃಷ್ಟಿ ವೈಚಿತ್ರ್ಯ

ಮಲೆಯಲ್ಲೂ ಅನೇಕ ವಿಧಗಳವೆ. ಮೋಡಗಳಿಂದಾಗಿ ನಮಗೆ ತುದ್ದ ನೀರು ದೊರೆಯುತ್ತದೆಂಬ ಮಾತು ಇರುವುದಾದ ಪ್ರ, ಅದೇ ಮೋಡದಿಂದಾಗಿ ನಮಗೆ ಕೆಂಪು ಮಳೆ ವಿಷಾನ ಮಳೆ, ಮುತ್ತಿನ ಮಳೆ, ಇಲಿಗಳ ಮಳೆ ಕಲ್ಲುಗಳ ಮಳೆ, ಮುಂಬ್ಯಗಳ ಮಳೆ ಶ್ರಿಮಗಳ ಮಳೆ, ಹುಳಗಳ ಮಳೆಗಳೂ ಬರುತ್ತವೆ! ಅನೇಕ ಕಡೆಗಳಲ್ಲಿ ಕೆಂಪು ಮಳೆಯು ಬಂದಿರುವುದನ್ನು ನಾವು ಕೇಳಿರುತ್ತೇವೆ ಅದರ ಇದಕ್ಕೆ ಕಾರಣವೇನೆಂದು ನಾವು ತಿಳಿದಿರುವುದಿಲ್ಲ ಎ ಜೆ ಫೋರ್ಸ್ ಎಂಬೊ ಬ್ಬರು ತಾವು ಕಂಡ ಅನೇಕ ವಿಧದ ಮಳೆಗಳ ಕುರಿತು-ಗಿ ಅನುಭವಿದ್ದ ಲೇಖನವನ್ನು ಬರೆದಿರುತ್ತಾರೆ ಅದರಲ್ಲಿ ಅವರು ಇತ್ತಲಾಗಿ ಇಟಲಿಯ ಪಿಸ್ಟೊಗಾಡಿ ಎಂಬಲ್ಲಿ ಒಂದು ದಿನ ಕೆಂಪು ಪ ಕೆಯು ಧಾರಾಕಾರ ವಾಗಿ ಸುರಿದುತೆಂದೂ ಜನರು ಇದು ದೇವಕ್ಕೆ ಆಪಕಳುನವೆಂದು ಬೆದರಿದರಂತೆ ಅವರು ಹೇಳುತ್ತಾರೆ —ಮಳೆಯ ನೀರು ರಕ್ತವರ್ಣ ಮಿಶ್ರಿತ ವಾಗಿತ್ತು ಬಿದುಗಾಳಿಯು ಪ್ರಚಂಡವಾಗಿ ಬೀಸಿತು ಮಾಡಿನ ನಕ್ಕಗಳಿಂದ ರಕ್ತವು ಹರಿಯುತ್ತ 'ಇದಕ್ಕೆ ಕಾರಣವೇನೆಂಯ ತಿಳಿಯ ಲ್ಲಿ ೧೯೩೬ರಲ್ಲಿ ಲಗ್ಸೆಂಬರ್ಗ್ ಎಂಬಲ್ಲಿ ಹಳದಿ ವರ್ಣದ ಮಳೆಯು ಸುರಿಯಿತು ಬಿಳಿ ವಸ್ತ್ರಗಳು ಹಳದಿಯಾದುವು ಕೆಲವು ಭಾಗಗಳಲ್ಲಿ ವಿಸ್ತೀರ್ಣದಲ್ಲಿ ಈ ಮಳೆಯು ಬಿದ್ದಿತು ನೋರ್ವೆಯಲ್ಲಿ ಒಂದು ದಿನ ಮಳೆಯೊಡನೆ ಬೆಳ್ಳಗಳು ನಾಣ್ಯಗಳು ಹೇರಳವಾಗಿ ಬಿದ್ದುವೆ ಸೆಲ್ಶೆ ಬಿದ್ದೊಡನೆ ಅವುಗಳು ಮ್ಯಕಟ್ಟುವೆ. ಅವುಗಳ ಕಳೆಬರವನ್ನು ತೆಗೆಯಲು ಒಂದು ಇಡೀ ದಿನವೇ ಬೇಕಾಯಿತು ಅಲ್ಲದೇ ಒಮ್ಮೆ ಹುಳುಗಳ ಸಮೇತವಾಗಿ ಮಳೆ ಬಿದ್ದಿತು. ಪ್ರತಿ ಯೊಂದು ಹನಿ ನೀರಿನಲ್ಲಿ ಸಾವಿರಾರು ಹುಳುಗಳ ಸೇರಿಕೊಂಡಿದ್ದುವು ಕಾರಣವೇನೆಂದು ಜನರು ತಲೆಮಳಿಸಿದರೂ ನಿಷ್ಫಲವಾಯಿತು ಗಿಲಿಟ ರಲ್ಲಿ ಗ್ವಾನ್ ಮೋರ್ಗನ್‌ವಲ್ಲಿ ಒಮ್ಮೆ ವಿಷಾನ ವರ್ಷಿಣಾರಂಭವಾಯಿತು ಮೋಡಗಳಿಂದ ವಿಷಾನಗಳ ರಾಶಿರಾಶಿಯಾಗಿ ಬಿದ್ದುವೆ ಹಲವು ಜಾತಿಯ ವಿಷಾನುಗಳು ಬಿಟ್ಟಿಗಿದ್ದುವು ವ ದುದಿನ ಎಲ್ಲಿ ನೋಡಿದರೂ ಸುಖಜೀವನ—ವಿಷಾನ ಭೋಜನ! ಎಲ್ಲೆಲ್ಲಿ ಅನಂದ. ಮಕ್ಕಳು ಮಂಡಿಗಳಿಗೆ ವಿಷಾನು ಹೆಕ್ಕಿ ರಾಶಿಮಾಡಿ ಒಣಗಿಸುವ ಆಪಾತುರ ಕಾರ್ಯವೇ! ಇವೆಲ್ಲ ವಿಚಿತ್ರ ತರದ ಮಳೆಗಳು ನೆಪ್ಲ್ಸ್‌ನಲ್ಲಿ ಒಮ್ಮೆ ಬಿರುಗಾಳಿ ಬೀಸಿತು ೨೦ ಮೋಡವು ಸುತ್ತಲೂ ಅವರಿಸಿ ಮಳೆಯು ಧರಧರನೆ ಹರಿಯಿತು ಹರಿದಂತೆ ಸಾವಿರಗಟ್ಟಲೆ ಕಿತ್ತಳೆ ಹಣ್ಣುಗಳು ಮೇಲಿನಿಂದ ಬಿದ್ದುವು ರಾಶಿ ರಾಶಿ ಕಿತ್ತಳೆ ಹಣ್ಣುಗಳು ಬೀಳ ಪ ದೆಸೆಯಿಂದ ಜನರಿಗೆ ಹೊರಗೆ ಕಲೆಯೊಡ್ಡಲು ಅವಕಾಶವಿಲ್ಲದಾಯಿತು ಮಳೆ ನಿಂತ ಮರುಕ್ಷಣದಲ್ಲೇ ಬೀದಿಬೀದಿಗಳಲ್ಲಿ ಕಿತ್ತಳೆ ಹಣ್ಣು ಹೆಕ್ಕುವ ಜನರು! ಮನೆಮನೆಯಲ್ಲಿ ರಾಶಿ ರಾಶಿ ಕಿತ್ತಳೆ ಹಣ್ಣುಗಳು! ನೋಡ ಗಳಿಗೆ ಈ ಕಿತ್ತಳೆ ಹಣ್ಣುಗಳು ಎಲ್ಲಿಂದ ದೊರೆಯುವು? ಎಂಬುದೇ ಜನರ ಪ್ರಶ್ನೆಯಾಯಿತು. ಹಿಂದೂಸ್ಥಾನದ ಸಿಕಂದರಾಬಾದಿನಲ್ಲಿ ಒಮ್ಮೆ ಮುತ್ತಿನ ಮಳೆಯು ಸುರಿದ ತು ಎಲ್ಲೆಲ್ಲೂ ಮುತ್ತಿನ ರಾಶಿಗಳು! ಜನರ ಆನಂದಕ್ಕೆ ಪಾರವೇ ಇಲ್ಲ ಮಳೆಗೆದಿದ ಎರಡನೆ ದಿವಸ ಕೇವರು ಈ ಮುತ್ತು ಹೆಕ್ಕುವ ಉದ್ಯಮಕ್ಕೆ ತಲೆಕೊಟ್ಟರು ಗಂಡಹೆಂಡಿರು ಮಕ್ಕಳೆಲುವರಿಗಳು ಇದೇ ಕಾರ್ಯದಲ್ಲಿ ಬಿದ್ದರು ಒಂದು ವಾರ ಕಳೆ ಯುತ್ತಲೇ ಅಲ್ಲಿಗೆ ಮುತ್ತುಸರೀಕ್ಷಕನೊಬ್ಬನು ಬಂದನು ಆವನು ಆ ಮುತ್ತುಗಳನ್ನು ಪರೀಕ್ಷಿಸಿ ಅವುಗಳೆಲ್ಲ ಒಂದು ಜಾತಿಯ ಹುಳುಗಳ ಮೊಟ್ಟೆಗಳೆಂದು ತಿಳುಹಿಸಿದನು ಜನರ ಆಶಾನಿರಾಶೆಯ ಸ್ಥಿತಿಯ ತೋಡಬಾರದಾಗಿತ್ತು ಈ ರೀತಿಯ ಮಳೆಗೆ ಸೃಷ್ಟಿಯ ವೈಚಿತ್ರ್ಯವೇ ಕಾರಣವಾಗಿರುತ್ತದೆ. ಭೂಮಿಯ ವಸ್ತುಗಳನ್ನು ಹೊಂದಿಕೊಂಡು ಹಾಕುವ ಶಕ್ತಿಯು ಮೋಡಗಳಿಗೆ, ಹವೆಗೂ ಇದೆ ಅದರಿಂದಾಗಿಯೇ ಇಂತಹ ಮಳೆಗೆ ಕಾರಣ ಕೆಂಪು ಮಳೆಯು ಮೋಡಗಳಿಗೆ ದೊರೆತು ಮೃತವಾದ ಪ್ರಾಣಿಗಳ ನೆತ್ತರೆಂದು ಅದು ಕೆಲವರು ಊಹೆ. ಇದು ಪ್ರತ್ಯಕ್ಷ ದಲ್ಲ, ಹವೆಯ ಗುಣದೋಷಗಳಿಂದವಾಗಿಯೇ ಈ ರೀತಿಯ ಬಣ್ಣ ಬಣ್ಣದ ಮಳೆ ಬೀಳಲು ಕಾರಣ

ಮುಂಬಾಯಿಯಲ್ಲಿ ಭಯಂಕರ ಬೆಂಕಿ!

ಮುಂಬಾಯಿ ಜಂಜೆಕಾರ್ ಬಜಾರ್‌ದಲ್ಲಿ ಜುಮ್ಮಾ ಮಸೀದಿಯ ಎದುರು ಮಂಗಳವಾರ ದಿನ ಭಯಂಕರ ಬೆಂಕಿಯೆದ್ದಿತ್ತು. ಕರ್ಪೂರ ಗೋದಿಗೆಯ ಒಂದು ದೊಡ್ಡ ಅಂಗಡಿಗೂ ಕೆಂಡ ಮಾತಾಯಿತು ಒಂದು ಅಂಗಡಿಗೂ ಬೆಂಕಿಯ ನಾಲಗೆಯು ಹರಡಿತು ಗೊಂಬೆಗಳಿಗೆ ಬೆಂಕಿಯು ತಗಲಿಕೊಡನೆ ಅಂಗಡಿಯ ಮಾಡು ಸುಟ್ಟುಹೋಯಿತು ಕೊಡಿಗಳು ಹತ್ತಿಯಂತೆ ಉರಿದುವು ಗೊಂಬೆಯಂಗಡಿಯ ಯಜಮಾನರಾದ ಸುಲೇಮಾನ್ ಇಬ್ರಾಹಿಮ್ ಎಂಬವರು ಬೆಂಕಿಯಿದ್ದ ಕೂಡಲೇ ಬೆಟ್ಟುಪ್ಪಿರು—ಜನರು ಕೂಡಿದರು. ಅಷ್ಟರಲ್ಲಿ ಅರ್ಧಾರ್ಧ ಸಾಮಾನುಗಳು ಸುಟ್ಟುವೆ ಒಟ್ಟ ಪೋಲೀಸನು ಭಯಂಕರ್‌ಗೆಡೆನ್ನು ಕರೆಸಲು ಹಿಡಿದನು. ಫೋರ್ಟ್, ಕೊಲಾಬಾ ಭುಲೇಶ್ವರ, ಭೈಕುಲ್ಲಾ, ಕಾರ್ನಾಕ್ ರೋಡ್ ಮತ್ತು ೨೧ ರೋಡುಗಳ ಭಯಂಕರ್‌ಗೆಡ್‌ಗಳು ಹಿಡಿದೆ ಧಾವಿಸಿ ಬಂದುವು. ಕೊಡಿಯಂಗಡಿಯ ಯಜಮಾನರಾದ ಅಬ್ದುಲ್ಲ ಹುಸೇನ್ ಇಬ್ರಾಹಿಮ್ ಎಂಬವರು ಸಾಮಾನು ಸುಡುವ ಹಣ್ಣು ಕಂಡು ಕಚೇರಿಯವರದೆ, ಒಂದು ಕೆಟ್ಟು ಕೊಡಿಯನ್ನಾದರೂ ತೆಗೆಯೆಂದು, ಆವಶ್ಯಕ್ಕು ಉಳಿಸಿಕೊಡುವೆಂಬು ವರ್ತರಿಸಿ ಒಂದು ಕೆಟ್ಟು ಕೊಡಿಯನ್ನು ಧೈರ್ಯಮಾಡಿಕೆಳೆದರು ಅವರ ಇಡೀ ಕೈಯು ಬೆಂಕಿ ಯಿಂದ ಪರಿಕೀತವಾಗಿ ಸುಟ್ಟು ಹಡಕ ಮೇಲೊಂದು ಕೈಯೂ ನಷ್ಟವಾ ದಂತಾಗಿದೆ. ಈ ಅಂಗಡಿಗಳ ಬಳಿಯಲ್ಲಿರುವ ಎರಡು ಮೂರು ಕಾಪು ಗಳ ಸಾಮಾನುಗಳು ಭಯರ್ ಬ್ರಿಗೇಡ್‌ನ ನೀರಿನಿಂದ ಒದ್ದೆಯಾಗಿ ಹಾಳಾಗಿವೆ ಒಟ್ಟು ನಷ್ಟ ರೂ ೩೫,೦೦೦ ಸಾಮಾನುಗಳು ಇನ್ಸೂರು ಮಾಡಲ್ಪಟ್ಟಿವೆ

ಇನ್ನೊಂದು ಕೋಟಿ!

ಒಂದು ಕೋಟಿ ರೂಪ್ಯಾಗಳನ್ನು ವೆಚ್ಚ ಮಾಡಿ ನ್ಯೂ ದಿಲ್ಲಿಯನ್ನು ರಚಿಸಲಾಯಿತು ಸರಕಾರವು ಇಷ್ಟು ಹೇರಳ ಹಣವನ್ನು ಈ ಆರ್ಥಿಕ ಕೆಡುಗಾಲದಲ್ಲಿ ವೆಚ್ಚಮಾಡಿದುದನ್ನು ಕಂಡು ಸಮಸ್ತ ಭಗತಖಂಡವೇ ದುಃಖಪಟ್ಟಿದ್ದಿತು ಅದರೆ ಈಗ ದಿಲ್ಲಿಯಲ್ಲಿ ಎಸೆಂಬ್ಲಿಯ ಸಭಸ್ಯರಿಗಾಗಿಯೂ, ಸರಕಾರಿ ನೌಕರರಿಗಾಗಿಯೂ ಒಂದು ಮಂದಿರವು ಇನ್ನೊಂದು ಕೋಟಿ ರೂಪಾಯಿ ವೆಚ್ಚದಿಂದ ಕಟ್ಟಲ್ಪಡುವುದೆಂದು ನಿರ್ಧಾರವಾಗಿದೆ ಈ ದುರ್ವ್ಯಯವನ್ನು ಈಗಿನ ಎಸೆಂಬ್ಲಿ ಮೆಂಬರಾಗಿ ಬಹು ಸಂತೋಷದಿಂದ ಮಂಜೂರುಮಾಡಿರುವರು.

ಜಪಾನರೂ ಹಿಂದೀಯರೂ

ಜಪಾನದ ಇಡ್ಯೋಲಿಕ ತೀವ್ರ ಗತಿಯ ಪರಿಣಾಮವು ಅಲ್ಲಿ ಆನಂದಜನಕವಾಗಿದೆ ಈಗೀಗ ನಮ್ಮಲ್ಲಿಂದ ಜಪಾನಕ್ಕೆ ಒಟ್ಟೆಗಳು ಹೋಗುವುದೇ ಇಲ್ಲ ೧೯೯೯ ನೆಯ ವರ್ಷದಲ್ಲಿ ಕೇವಲ ೬೦ ೦೦೦ ರೂಪಾಯಿಗಳ ಒಟ್ಟೆಯು ಮಾತ್ರ ಜಪಾನಕ್ಕೆ ಹೋದ ಕಡೆಯ ದೃಷ್ಟಾಂತವು ದೊರೆಯುತ್ತದೆ ಆ ಮೇಲೆ ನಮ್ಮ ಬಟ್ಟೆಯು ಅಕ್ಕ ಹೋಗಲುಬಾಗಲಿಲ್ಲ ಮುಂದಿನ ೨೦ ವರ್ಷಗಳಲ್ಲಿಯೇ ಆ ದೇಶದ ಬಟ್ಟೆಯು ಉದ್ಯೋಗದಲ್ಲಿ ವಿಶಿಷ್ಟ ಪ್ರಗತಿಯುಂಟಾಯಿತು ೪೦ ವರ್ಷ ಗಳ ಹಿಂದೆ ಜಪಾನದಲ್ಲಿ ಹಿಂದೂಸ್ಥಾನದ ಬಟ್ಟೆಯನ್ನು ದಿಟ್ಟಿಸಿ ಬೇರೆ

> ನಮ್ಮ ವಿಜಂಟರಿಗೆ ವಿಶ್ರಯದ ಬಗ್ಗೆ ಕಳು ಹಿಸಲ್ಪಡುತ್ತಿದ್ದ ಪ್ರತಿಗಳೊಡನೆ ಕೆಲವು ಚಂದಾ ದಾರರ ಪತ್ರಿಗಳನ್ನೂ ಕೆಲವು ಸಮಯದಿಂದ ಕಳುಹಿಸುತ್ತಿದ್ದೆವಷ್ಟೆ, ನಮ್ಮ ಚಂದಾದಾರರ ಸಂಖ್ಯೆಯು ಬಹುವಾಗಿ ಹೆಚ್ಚಿರುವುದರಿಂದ ಮುಂದಕ್ಕೆ, ನಮ್ಮ ಅನುಕೂಲತೆಗಾಗಿ, ಚಂದಾ ದಾರರ ಸಂಚಿಕೆಗಳನ್ನು ವಿಜಂಟರ ಮೂಲಕ ಕಳುಹಿಸದೆ, ಮೊದಲಿನಂತೆ ಟಪ್ಪಾಲು ಮೂಲ ಕವೇ ರವಾನಿಸಲಾಗುವುದು
> ಮೆನೇಜರ್

ಬಟ್ಟೆಯೇ ಇರಲಿಲ್ಲ ಆದರೆ ಇಂದು ಒಂದು ಚೂರು ಬಟ್ಟೆಯನ್ನೂ ಅವರು ನಮ್ಮಿಂದ ತರಿಸಿಕೊಳ್ಳದೆ ತೀವ್ರ ಸ್ಪರ್ಧೆಯಿಂದ ಬೆಳೆಯಹತ್ತಿದ ತಮ್ಮ ಬಟ್ಟೆಗಳಿಂದಲೇ ಹಿಂದೂಸ್ಥಾನದ ಪೇಟೆಗಳನ್ನು ಜಪಾನವು ಅಕ್ಕ ಮಸ ತೊಡಗಿದೆಯೆಂಬುದು ತೋಡಗಿದೆಯೆಂಬುದು ಜಾತಿಯ ವಿಷಯವೇ ಆಗಿದೆ. ಇಂದಿನ ಉದ್ಯೋಗಮಯ ಜಪಾನದೊಂದಿಗೆ ಬಟ್ಟೆಯಲ್ಲಿ ಮೇಲ್ಬಟ್ಟೆ ಆದನ್ನು ಹೆಮ್ಮೆಟ್ಟುವುದು ಹಿಂದೂಸ್ಥಾನಕ್ಕೆ ಅಶಕ್ಯವಾಗಿದೆ ೧೯೩೨ ನೆ ಇ ರಲ್ಲಿ ಹಿಂದೂಸ್ಥಾನಕ್ಕೆ ಬಂದಿಸ್ಸು ಹಿತಕರವಾಗುವಂತೆ ಕಂದಾಯದ ಭೋರಣವನ್ನು ಸರಕಾರವು ಬದಲಿಸಿತು ಹೊರಗಿನಿಂದ ಬರುವ ಬಟ್ಟೆಯ ಮೇಲೆ ಈ ಮೊದಲು ೧೫೦ಕ್ಕೆ ೭ ಯಾಂತೆ ಇದ್ದ ಸುಂಕವನ್ನು ೭೫ಕೆ ವರಿಸಿದಲೆ ದೇಶಕ್ಕೆ ಕಲ್ಯಾಣಕರವಾದ ಕಂದಾಯದ ಭೋರಣ ಕ್ರಮವನ್ನು ತಿಂಚಿತ್ತಾದರೂ ಸರಕಾರದವರು ಅನುಸರಿಸಿ ಹಿಂದೆ ಮಾಡಿದ ತಪ್ಪನ್ನು ಇಂದು ತಿದ್ದಿಕೊಂಡಿರೆಂದು ದೇಶದಲ್ಲಾ ಸರಕಾರ ವನ್ನು ಕೊಂಡಾಡಿತು

ಅತಿವೃಷ್ಟಿ—ಎಲ್ಲೆಲ್ಲಿಯೂ ಜಲಪ್ರಳಯ!

ಈಗೆರಡು ವಾರಗಳಲ್ಲಿ ದೇಶ ದೇಶ ಭಾಗಗಳಲ್ಲಿ ಅತಿಶಯವಾದ ಮಳೆ ಬಿದ್ದಿದೆ ಈ ಅತಿವೃಷ್ಟಿಯಿಂದ ಅನೇಕ ನದಿಗಳಿಗೆ ಹೆಚ್ಚು ಪ್ರವಾಹ ಬಂದು ಬೆಳೆಗಳು ಹಾಳಾಗಿರುವುದಲ್ಲದೆ ಮನೆಮಾಕುಗಳು ಕೂಡ ತೇಲಿಹೋಗಿವೆ ಅಲ್ಲಲ್ಲಿ ಮರಣಗಳೂ ಕೂಡ ಆಗಿದ್ದು ಬಹಳ ನಷ್ಟವಾಗಿದೆ

ನರ್ಮದಾ ವೈನಗಂಗಾ, ಹೀರ, ಕಾವ್ತಾನ ನದಿಗಳಿಗೆ ಪ್ರವಾಹ ಬಂದು ಥಂದವಾಡ ನಾಗಪುರ ಭಾಗದಲ್ಲಿ ಬೆಳೆಯೆಲ್ಲ ಹಾಳಾಗಿ, ಬಹಳ ನಷ್ಟವಾಗಿದೆ

ಬಡೋದೆಯಲ್ಲಿ ಹಗಲು ರಾತ್ರಿಯಿಪ ರೀತ ಮಳೆಯಾಗಿ, ಎಲ್ಲಿ ನೋಡಿದರೂ ನೀರೋನೀರಂಯಾಯಿತು. ೪—೬ ಅಡಿ ನೀರು ನಿಂತಿತು ರೇಲ್ವೆ ಕಂದಾಯ ನೀರಲ್ಲಿ ಪಯಣಿಗಿ, ಅನೇಕ ಕಡೆಗಳಲ್ಲಿ ಕಿತ್ತು ಹೋದವು ವಿಶ್ವಾಮಿತ್ರ ನದಿಯಲ್ಲಿ ಪ್ರವಾಹ ಬಂದು, ಸೇತುವೆಯ ಮೇಲೆ ೭ ಅಡಿ ನೀರು ವರಿತು.

ಅಹಮದಾಬಾದಿನ ಕಡೆಗೂ ಮಳೆ ವಿಶೇಷ ಬಿದ್ದಿದೆ. ವಢವಾಣ ಜಕಡಿಗೆ ಹಲವಾಡ ಭಾಗದಲ್ಲಿ ರೇಲ್ವೆ ಮಾರ್ಗವು ಕೆಟ್ಟುಹೋಗಿದೆ ಮುಂಬಾಯಿ ಅಹಮದಾಬಾದಗಳ ನಡುವೆ ೫೦೫ ಕಂಬಗಳು ಬಿದ್ದಿವೆ ಬೇಡಾ ಜಿಲ್ಲೆಯಲ್ಲಿಯೂ ಅತಿವೃಷ್ಟಿಯಾಗಿದೆ ಬೇಡಾ ಊರಲ್ಲಿ ೧೫ ಇಂಚು ಮಳೆಯಾಗಿ ನದಿಗಳಿಗೆ ಪ್ರವಾಹ ಬಂದು ನೀರೋನೀರಾಗಿದೆ ಡಾಕೋರದಲ್ಲಿ ಒಂದೇ ದಿವಸ ೮ ಇಂಚು ಮಳೆಯಾಗಿ ಎಲ್ಲಾ ಕಡೆ ನೀರೋನೀರಾಯಿತು.

ಬಿಕಾನೇರ ಸಂಸ್ಥಾನದಲ್ಲಿಯೂ ಅತಿವೃಷ್ಟಿಯಾಗಿದೆ ಹಳೆ ಅರ ಮನೆ ಬಿದ್ದಿಳು

ಕರಾಚಿನಲ್ಲಿ ಒಂದು ಸವನೆ ಮನೆ ಬೀಳುತ್ತಿದೆ

ರತ್ನಾಂಗಲ್ಲಿ ವಿಶೇಷ ಮಳೆಯಾಗಿ ರೇಲ್ವೆ ಮಾರ್ಗವು ಕಟ್ಟು ಹೋಗಿದೆ.

ಬಿಹಾರ ಪ್ರಾಂತದಲ್ಲಿಯೂ ಮಳೆ ಹೆಚ್ಚಾಗಿದೆ. ಮಹಾವಿದಿಗೆ ವಿಶೇಷ ಪ್ರವಾಹ ಬಂದು ಕಟಿಳದ ಹತ್ತರವೆಲ್ಲ ಬಹಳ ಅನರ್ಥವುಂಟಾ ಗಿದೆ ಬೆಳೆಗಳಲ್ಲ ಕೆಟ್ಟುಹೋಗಿವೆ ಪ್ರಾಣಹಾನಿಯೂ ಆಗಿವೆ. ಸಂಕಟಗ್ರಸ್ತರಿಗೆ ಸಹಾಯ ಮಾಡುತ್ತಿರುವರು

ಪೂಂಡಾಕಾಡದಲ್ಲಿ ದಿನಾಲು ೪—೫ ಇಂಚು ಮಳೆ ಬೀಳುವುದು ಇದುವರೆಗೆ ೧೩೦ ಇಂಚು ಮಳೆ ಬಿದ್ದಿದೆ.

ರತ್ನಾಗಿರಿ ಜಿಲ್ಲೆಯಲ್ಲಿ ವಿಶೇಷ ಮಳೆಯಾಗಿದೆ ಮಾಹಾಡ ಎಂಬಲ್ಲಿ ದಿನಾಲು ೭—೮ ಇಂಚು ಮಳೆ ಬಿದ್ದು ಎಲ್ಲಿ ನೋಡಿದರೂ ನೀರೋನೀರಾಯಿತು ಒಂದು ವಾರ ಎಲ್ಲ ರಾಷ್ಟ್ರೀಯ ರಸ್ತೆಗಳಲ್ಲ ನೀರಲ್ಲಿ ಮುಳುಗಿದ್ದವು ಕೆಲವೆಡೆ ೭—೪ ಅಡಿ ನೀರು ನಿಂತಿದ್ದಿತು ನೀರು ಸರಿದ ಮೇಲೆ ಈಗ ಮಾರಿಕಾಟೇನೆ ತಲೆದೋರಿದೆ.

ನಿಜಾಂ ರಾಜ್ಯದಲ್ಲಿಯೂ ಮಳೆಯಾಗಿದೆ ಬೋರ್ಡಿ ಎಂಬಲ್ಲಿ ರಾತ್ರಿ ಆದ ಮಳೆಯಿಂದ ಹಳ್ಳವು ತುಂಬಿಬಂದು ದಂಡೆಯ ಮೇಲಿದ್ದ ೧೫ ಗುಡಿಸಲುಗಳು ತೇಲಿಹೋದವು ಒಳಗೆ ಮಲಗಿದ್ದ ೫೫ ಜನರೂ ತೇಲಿಹೋಗಿ ೫೧ ಜನರು ಮೃತರಾದರು ೪ ಜನ ಮಾತ್ರ ಉಳಿದರು ನಿಕಂದರಾಬಾದಲ್ಲಿ ಒಂದು ಮನೆ ಬಿದ್ದು, ಅದರೊಳಗೆ ಒಬ್ಬ ಹೆಂಗಸೂ ಇಬ್ಬರು ಹುಡುಗರೂ ಜೀವಂತ ಹೂಳಲ್ಪಟ್ಟರು

ಭಡೋಚದಲ್ಲಿ ಹೆಚ್ಚು ಮಳೆಯಾಗಿದೆ ನರ್ಮದಾ ನದಿಗೆ ಅತಿಶಯ ಪ್ರವಾಹ ಬಂದು ಬಹಳ ನಷ್ಟವಾಗಿದೆ. ನದಿಯ ಸಮತಾಪ ಳದ ಮೇಲೆ ೩೨ ಅಡಿ ನೀರು ವರಿತು ೧೯೧೩—೧೯೩೩ ಇಷ್ಟವಿಯಲ್ಲಿ ಅತಿಸ್ರವಾಗಿ ಬಂದರೂ ಇಷ್ಟು ಇರಲಿಲ್ಲ ಇದು ಅಭೂತಪೂರ್ವ ವಾದುದು ಊರಲ್ಲೆಲ್ಲ ನೀರು ಹೊಕ್ಕು ಬಹಳ ನಷ್ಟವಾಗಿದೆ. ಊರಲ್ಲಿ ಕೇವಲ ಕಡೆಗೆ ದೋಣಿ ದಿಬುವಷ್ಟು ನೀರು ಇದೆ ಪ್ರವಾಹವು ನೋಡಲು ಭಯಪ್ರದವಾಗಿದೆ ನರ್ಮದೆಯ ಪಾತ್ರವು ಭಡೋಚದ ಹತ್ತರ ಒಂಬ ಮೈಲು ಅಗಲವಾಗಿದ್ದರೂ ನದಿಯ ದಡಗಳ್ಳ ತುಂಬಿ ನೀರು ಎಲ್ಲಾ ಕಡೆಗೆ ಪ ಸಾರವಾಗಿದೆ ಮನೆಮಾಯ ದನಕರುಗಳು, ಇನ್ನೂ ನಾನಾ ವಸ್ತುಗಳು ಪ್ರವಾಹದಲ್ಲಿ ತೇಲಿಹೋಗುತ್ತಿವೆ ಪ್ರವಾಹ ಮೂಡಿಸೆ ಹೋಗುವ ಹಾವಿನ ಹಿಂದನ್ನು ನೋಡಿದರಂತೂ ಹೆದರಿಕೆ ಬರುವುದು

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಸ್ಮಾಲ್ ನಂಬ್ರ 198/1933

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿ ಕೇಟ್ ಲಿಮಿಟೆಡ್ ಉಡುಪಿ—ಇದರ ಏಜೆಂಟ್ ತೋನ್ಸೆ ರಘುನಾಥ ಅನಂತ ಪೈ—ವಾದಿ

ವರ್ತು

ಮಂಗಳೂರು ಫಕೀರ ಷಾಡಾ— ಪ್ರತಿವಾದಿರು

ಇವರೊಳಗೆ

ಸದರಿ ವ್ಯಾಜ್ಯದ 1ನೇ ಪ್ರತಿವಾದಿಯಾದ ಉಡುಪಿ ಕಸಬೆ ಯಲ್ಲಿರುವ ಕುಂಞಪ್ಪನ ಮಗ ಮಂಗಳೂರು ಫಕೀರಗೆ ಈ ಮೂಲಕ ತಿಳಿಯಪಡಿಸುವುದೇನಂದರೆ —

ಪ್ರತಿವಾದಿರು ವಾದಿಗೆ ತಾ 2—2—81ರಲ್ಲಿ ರೂಪ್ಯಾ 400ಕ್ಕೆ ಬರಕೊಟ್ಟ ಡಿಮಾಂಡ್ ಪ್ರೊಮಿಸರಿ ನೋಟಿನ ಅಸಲು ಬಾಕಿ ವ ಬಡ್ಡಿ ಕೂಡಾ ರೂಪ್ಯಾ 207—18—0ಕ್ಕೆ ವಾದಿಯು ದಾವಾಯು ಮಾಡಿದ ಸದರಿ ವ್ಯಾಜ್ಯವು ಆಕ್ಟೋರ ತನಪಿ ಬಗ್ಗೆ ತಾರೀಕು 11—9—33ಕ್ಕೆ ಇಟ್ಟಿರುವುದರಿಂದ ಸದರಿ ದಾವೆಗೆ ಉದಾಹರಣೆ ಕೊಡುವ ಬಗ್ಗೆ ಸದರಿ 1ನೇ ಪ್ರತಿವಾದಿಯು ಸ್ವತಹಾ ಅಥವಾ ಪ್ಲೀಡರ್ ಮೂಲಕ ಸದರಿ ತಾರೀಕಿನ ದಿವಸ ಸದರಿ ಕೋರ್ಟಿಗೆ ಮುಂಚೆ ಹಾಜರಾಗಲಿಕ್ಕೆ ತಪ್ಪಿದರೆ ಸದರಿ ದಾವೆಯು 1ನೇ ಪ್ರತಿವಾದಿಯ ಗೈರಹಾಜರಿಯಲ್ಲಿ ಕೇಳಿ ಶೈಸಲ್ ಮಾಡಲಾದೀತೆಂತ ಈ ಮೂಲಕ ಸದರಿ 1ನೇ ಪ್ರತಿವಾ ದಿಗೆ ತಿಳಿಯಪಡಿಸೋಣಾಗುತ್ತದೆ

Udipi, S K
20—8—1933.

H. Keshava Pai,
Vakil for Plaintiff.

ಕಾರ್ತಿಕಮಾಸದಲ್ಲಿ ಬಹುಳ ಪಾಡ್ಯದಿಂದ ಶ್ರೀಮುಖ ಸಂವತ್ಸರದ
ಭಾದ್ರಪದ-ಮಾ-೨೫ ಶನಿವಾರದಿಂದ ಶ್ರೀಮುಖ ಸಂವತ್ಸರದ
ಭಾದ್ರಪದ ಮಾ ೨೬ ಶುಕ್ರವಾರದ ವರೆಗಿನ ಪಂಚಾಂಗ
(ಗಣಕಿನಯ ಸಿಂಹ—ನೇಮಣ).

ತಾರೀಖು	ವಾರ	ತಿಥಿ	ನಕ್ಷತ್ರ	ಯೋಗ	ಕರಣ	ಸೂರ್ಯೋ. ಉ	ಸೂರ್ಯೋ. ಅ
26	ಶನಿ	೫	ಪೂ	ಶುಕ್ಲ	ಬಾಲ	೧೦	6 20	6.41
27	ರವಿ	೬	೧	ವಿಕಾಪಾ	ಕೌಲ	೧೧	6.20	6 41
28	ಸೋಮ	೭	೩೦	ಅನುರಾಧಾ	ಗರ	೧೨	6 20	6 40
29	ಮಂಗ	೮	೪೫	ಜ್ಯೇಷ್ಠಾ	ವಣಿ	೧೩	6 20	6 40
30	ಬುಧ	೧೦	೬೮	ಮೂಲಾ	ಭದ್ರೆ	೧೫	6 21	6 39
31	ಗುರು	೧೧	೮೪	ಪೂ ಷಾ	ಬಾಲ	೧೫	6 21	6.39
1	ಶುಕ್ರ	೧೨	೯೬	ಉ. ಷಾ	ಕೌಲ	೧೬	6 21	6 39

ಮಂಗಳೂರಿನ-ವಾಯುಸ್ಥಿತಿ.

Date ತಾರೀಖು	Temperature. ಉಷ್ಣ(ಶಾವು) Maximum ಪರಮಾಧಿಕ	Minimum ಅಲ್ಪಾಧಿಕ	Rainfall. ಮಳೆ ದಿನದ ಮಳೆ.	ಜುಮಲಾ ಮಳೆ.
10	83— 7	74— 5	0—25	—
11	83— 3	75— 1	0—33	—
12	82— 9	74— 1	1—12	—
13	83— 3	75— 7	—	—
14	83— 9	75— 9	0—05	—
15	84— 7	75— 9	0—08	—
16	83— 0	71— 9	1—00	127-54

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ. ಆ	ವರೆಗೆ ರೂ. ಆ
ರಾಶಿ ಅಕ್ಕಿ	೨— ೪	4— 0
ಮಕ್ಕಿ	4— 4	4—10
ಗುಡ್ಡು	೩—10	4— 2
ಸುಗ್ಗಿ	೩ ೬	—೧೨
ಊರಿ ಅವ್ವಲ ಬೆಲ್ಲಗೆ	4— 6	೪ 0
ರಂಗೂನು ಬೆಲ್ಲಗೆ ಗೋಣಿ ೧ಕ್ಕೆ	6— 0	6— 4
ಎಲ್ಲಾರು ಬೆಲ್ಲಗೆ ಮುವಿ ೧ಕ್ಕೆ	4 0	4— 4
ಗೋದಿ ಗೋಣಿ ೧ಕ್ಕೆ	11— 0	12— 8
ತೊಗರಿ ಗೋಣಿ ೧ಕ್ಕೆ	9— 8	12— 0
ಹುರುಳಿ ಗೋಣಿ ೧ಕ್ಕೆ	5—12	6— 0
ಕಡಲೆ ಗೋಣಿ ೧ಕ್ಕೆ	8— 8	12— 4
ತೊಗರಿಬೇಳೆ ಗೋಣಿ ೧ಕ್ಕೆ	11— 0	20— 0
ಉದ್ದು ಗೋಣಿ ೧ಕ್ಕೆ	8— 8	9— 0
ಹೆಸರು ಗೋಣಿ ೧ಕ್ಕೆ	8— 0	9— 0
ಊರುಬೆಲ್ಲ ಮಂಡಿ ೧ಕ್ಕೆ	57— 8	00— 0
ಉಪ್ಪು ಗೋಣಿ ೧ಕ್ಕೆ	5 8	6— 0
ಖೊಬ್ರಿ ಒಂಡಿ ೧ಕ್ಕೆ	೨5 0	60— 0
ಖೊಬ್ರಿ ಹಂಡಿ ಒಂಡಿ ೧ಕ್ಕೆ	20— 0	21— 0
ಎಳ್ಳಂಡಿ ಒಂಡಿ ೧ಕ್ಕೆ	21— 4	21— 8
ಖೊಬ್ರಿ ಎಣ್ಣೆ ಮಣ ೧ಕ್ಕೆ	3—12	5— 0
ಎಳ್ಳೆಣ್ಣೆ ಮಣ ೧ಕ್ಕೆ	5— 8	6— 0
ಚಿಮಿಸೆಣ್ಣೆ ಪಟ್ಟಿಗೆ ೧ಕ್ಕೆ	7— 4	8—12
ಮೋಸದ ಸಕ್ಕರೆ ಮಣ ೧ಕ್ಕೆ	4— 1	4— 2
ಹೊಸ ಮೆಣಸು	೨— 0	6— 4
ಸಾಸಿವೆ ಮುಡಿ ೧ಕ್ಕೆ	4—12	೨— 0
ಕಾಳುಮೆಣಸು ಖಂಡಿ ೧ಕ್ಕೆ	140— 0	160— 0
ಯೇಲಕ್ಕಿ ಮಣ ೧ಕ್ಕೆ	19 0	22— 8
ಗೇರುಬೀಜ ಮುಡಿ ೧ಕ್ಕೆ	3— 2	3— 4
ಕೆಟ್ಟಿಣ ಖಂಡಿ ೧ಕ್ಕೆ	35— 0	35— 8
ತಾಂಪ್ರು ತಗಡು ಮಣ ೧ಕ್ಕೆ	10—12	11— 0
ತಾಂಪ್ರು ತಾಪ್ರಗಳು ಮಣ ೧ಕ್ಕೆ	15— 0	16— 0
ಟೀನಬೆಳ್ಳಿ ಸೇರು ೧ಕ್ಕೆ	14—12	15— 0
ಹಿತ್ತಾಳೆ ತಗಡು ಮಣ ೧ಕ್ಕೆ	9— 0	9— 8
ಪವನು ೧ಕ್ಕೆ	19— 8	19—10
ಹುಣಸೆ ಹುಳಿ ಖಂಡಿ ೧ಕ್ಕೆ	35— 0	42— 8
ನೇಟಿವ್ ಕಾಫಿ ಖಂಡಿ ೧ಕ್ಕೆ	200— 0	225— 0
ಫಿಬೇರಿ ಕಾಫಿ ಖಂಡಿ ೧ಕ್ಕೆ	270— 0	280— 0
ಹಳೆ ಅಡಿಕೆ	130— 0	140— 0
ಹೊಸ ಅಡಿಕೆ	120— 0	130— 0

THE CANARA PUBLIC CONVEYANCE CO., LTD, MANGALORE
(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್
ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವುವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೂಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ನಾಲ್ಕು ಸಾರಿ ಕಂಠವಳ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ನಾಸುಗಳಲ್ಲಿ ಉಡುಪಿಗೆ ತಲುಪಿರಿ ಒಂದೇ ತಿಕೆಟ್ಟಿನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ತಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಲುಬಹುದು. 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಬೇಲೂರಿನ ಸೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲುಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ತಿಮ್ಮೊಗ್ಗಕ್ಕೆ 12 ಗಂಟೆ ತಲಪಬಹುದು. ಹೆಚ್ಚಿನ ಮಾಹಿತಿಗೆ ಮಂಗಳೂರು ಹಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು

Secretary,
The Canara Public Conveyance Company Ltd., Mangalore

Chikmagalur Public Conveyance Motor Service.
CHIKMAGALUR.
ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು – ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು.

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ
ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ
ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ-
—ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಪತ್ರವ್ಯವಹಾರ.

(ಚಾಪ್ತಿದಾರರಿಗೆ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ. ಎಲ್ಲಾ ಲೇಖಕರು ತಮ್ಮ ಸಂಪೂರ್ಣ ಹೆಸರು ವಿಳಾಸಗಳನ್ನು ಕೊಡತಕ್ಕದ್ದು. ವೀಳ್ಯೆ ಲೇಖನಗಳಿಗೆ ಎಡೆ ಕೊಡಲಾಗುವುದಿಲ್ಲ. ಲೇಖನಗಳು ಸಾರ್ವಜನಿಕ ಹಿತದೃಷ್ಟಿಯಿಂದಿದ್ದು ಸುಸ್ಪಷ್ಟ ಶೈಲಿಯಲ್ಲಿರತಕ್ಕದ್ದು (ಸಂ. ಸ್ವ.)

ಹೊಟೇಲುಗಳ ಗೋಳು.

ಅಯ್ಯಾ,

ಈಗಿನ ಕಾಲದಲ್ಲಿ ಬಡತನರಾಹವು ಬದುಕುವುದೇ ಕಷ್ಟ. ಬಡ ಪರು ಕಾಫಿ ಹೊಟೇಲು ಇಟ್ಟು ವ್ಯಾಪಾರ ಮಾಡಿದರೂ ಉತ್ಪತ್ತಿಗಿಂತ ಕಾಲ್ಭಾ ಪಾಲು ಟೆಕ್ಸ್ ಹೊರಿಸುತ್ತಾರೆ. ಸಾವಿರ ಸಾವಿರಗಟ್ಟಿ ಹಣ ವನ್ನು ಬಹಿರಂಗವಾಗಿ ಸಂಪಾದನೆ ಮಾಡಿದುದಕ್ಕೆ ಕೇಳುವವರೇ ಇಲ್ಲ, ಟೇಕ್ಸು ಇಲ್ಲ, ಈ ಮಧ್ಯೆ ಇನ್ನು ಈಗ ಕಾರ್ಖಾನೆದಲ್ಲಿರುವ ಲೋಂಡಿಗಳ ಮೊಲ್ಲಿ ಅರಿಗೆ ವಿನೂ ತೊಂದರೆಗಳೇ ಇಲ್ಲ

ಪ್ಯಾನೇಟ್ ಎಂಬ ದೋರ್ಮು ಹಚ್ಚಿಕೊಂಡು ದಿನಂಪ್ರತಿ ನಾಲ್ಕು ಸಾರಿ ಲೋಡು ಮಾಡಿಕೊಂಡು ಕಾರ್ಖಾನೆ ಮಂಗಳೂರಿಗೆ ಹೋಗಿ ಬರುತ್ತಾ ಬಾಡಿಗೆಯಿಂದ ಸಂಪಾದಿಸಿದ ಹಣ ಒಂದು. ಸರಕಾರಿ ಉದ್ಯೋಗಸ್ಥರ ಕಷ್ಟ ಮರೆ ಮಾಡಿ ಪಾಕೆಂಜರುಗಳನ್ನು ಆಕರ್ಷಿತ ಸಾಗಿಸಿ ಪಡೆದಿರುವ ಹಣ ಒಂದು. ಈ ರೀತಿ ಸಾವಿರಗಟ್ಟಿ ಸಂಪಾದಿಸಿ ಪೋಲೀಸರ ತೆರೆದ ಕಣ್ಣನ್ನು ಮೆಚ್ಚಿಸುವಂತೆ ಮಾಡಿ ಪ್ಯಾನೇಟೆಂಬ ರಿಪೋರ್ಟು ಮಾತಲಾಗಿ ಟೇಕ್ಸೇ ಇಲ್ಲವಾಗುತ್ತದೆ. D. S. P. ಯವರು ಇದಕ್ಕೆ ಲಕ್ಷ್ಯ ಕೊಡದೆ ಪೋಲೀಸ್ ರಿಪೋರ್ಟು ಗೆನೇ ಸಹಿ ಹಾಕಿ ಕಾತ್ತಾರೆಯೋ? ಒಬ್ಬರೆ ನೇಲಧಿಕಾರಿಗಳ ವಿಚಾರಣೆ ಇಲ್ಲದೆ - ಬಡವರಿಗೆ ಕಷ್ಟವೋ? ಪಾಪ! ಕಾಫಿ ಹೊಟೇಲಿನವರೆ ಗೇಸ್ ದೀಪಗಳೋ ಕನ್ನಡಿ ಗಳೋ ಕುರ್ಚಿಗಳೋ ಇತ್ಯಾದಿ ಟೀಕ್ಸಿಗೆ ಆಹುತಿ. ಯಾವನಾದರೋ ಕಾರಿನವನು ಇನ ಕೊಡಿಸಿದರೆ ಅತನಿಗೆ ಜಾಲವಾನೆ! ಬೋರಿ ಗಳಲ್ಲಿ ತುಂಬಾ ಜನ ಕೂಡಿಸಿಕೊಂಡು ಓಡಾಡಿದರೆ ಕೇಳುವವರೇ ಹೂಂ ಹೂಂ, ತಪ್ಪಿ ನಡೆದರೆ ಸರಕಾರಿ ಉದ್ಯೋಗ್ಯರಿಗೆನೇ ಬೇಕಾ ದಾಗ ಲೋರಿಗಳು ಬಾಡಿಗೆಗೆ ದೊರಕುವುವಿಲ್ಲವೆಂಬ ಭಾವನೆಯಂದಲೋ ತಿಳಿಯದು. ಲೋರಿಗಳು ಬಾಡಿಗೆಗೆ ಇಟ್ಟಿರಿ ರೂ ೧೫೦ ಡಿಸ್ಟ್ರಿಕ್ಟ್ ಬೋರ್ಡಿಗೆ ಟೇಕ್ಸು ತೆರಬೇಕಂತೆ. ಪಬ್ಲಿಕಾಗಿ ಬಾಡಿಗೆ ಮಾಡುತ್ತಾ ಆಫೀಸು ವಿಜಯಿಸಲು ಲೆಕ್ಕಪತ್ರ ಇಟ್ಟು ಹೋರಳ ಹಣ ಸಂಪಾದಿಸುವ ಲೋರಿ ಮ್ಯಾಲಿಕರಿಗೆ ಯಾವ ಟೇಕ್ಸು ಹೊರಿಸದೆ ಇದ್ದರೂ ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ತಿಳಿಯದೇ ಇದ್ದುದರಿಂದಲೇ ಇರಬಹುದು. ಇನ್ನಾದರೂ ಡಿಸ್ಟ್ರಿಕ್ಟ್ ಬೋರ್ಡಿನವರು ಈ ಕುರಿತು ದಿಟ್ಟದೃಷ್ಟಿಯಿಂದ ಗಮನಕ್ಕೆ ತಾರದೆ ಸುಮ್ಮನಿರುವರೇ? –

ಕಾರ್ಕಳ, ೨೨–೮–೩೩ ಬಡ ಕಾಫಿ ಹೊಟೇಲಿನವ.

ಬಡರೈತರಿಗೆ ಆಫೀಸರರ ವಿಚಿತ್ರ ಸಹಾಯ.

ಕಡಬ ಗ್ರಾಮದ ಸೋಕೊಂದನ್ನು ಇಲ್ಲಿ ಬರೆಯುತ್ತೇನೆ ಈಗಿನ ದಿನಗಳಲ್ಲಿ ರೈತರಿಗೆ ಸಾಗುವಳಿ ಚೆನ್ನಾಗಿ ನಡೆದರೂ ತೀರ್ವೆ ತೊಡು ವುದು ಕಷ್ಟವಾಗುವಾಗ ಆಫೀಸರರೇ ಅತ್ಯಾಚಾರಕ್ಕೆ ತೊಡಗಿದರೆ- ಹೇಳಿ ತೀರುವುದುಂಟೆ? ಕಡಬ ಪೇಟೆಯಲ್ಲಿ ಕೆಲವು ವಿಷಯಗಳಂದ, ಪೋಲೀಸು ಸಬ್ ಇನ್ಸ್‌ಪೆಕ್ಟರರ ಎಮ್ಮೆಯೊಂದು ತಪ್ಪಿದ ಒಬ್ಬ ರೈತನ ಗದ್ದೆಗೆ ಬರುತ್ತಾ ಇದೆ. ಟೇರೆಯವರ ಗದ್ದೆಗೆ ಹೋಗುತ್ತಿಲ್ಲ. ಅಲ್ಲೇ ಪಕ್ಕಾಯಲಾ ಅದಕ್ಕೆ ಉತ್ತಮ ಮೇವದೆಯೆಂದು ತಿಳಿದಿರಬೇಕು. ಗದ್ದೆಯ ಯಜಮಾನನು ರಾಯರಲ್ಲಿ ದೂರು ಕೊಟ್ಟಿರೆ – "ಆದನ್ನು ಕಡಿದು ಹಾಕಿಬಿಡಿ" ಎಂದು ಅಪ್ಪಣೆಯಾಯಿತು. ಪಿತೃವೂ ಇದೇ ಹಾದು.

ಏನ್ನೆ ದಿನ (೧೩ ೮–೩೩) ಈ ರೈತನ ಅಳಿಯನು, ಅದನ್ನು ಸಿಗಿದು ದೊಡ್ಡಿಗಾದರೂ ಕೊಡುವ ಎಂದು ಬಂದರೆ, ಪೋಲೀಸ ಪ್ಪರು ಯಾಮೆಜಿಸರಂತೆ ಅವರ ಹೆಸರು. ಅಲ್ಲಿಗೆ ಬಂದು, ಹೊಲ ವನ್ನು ಹೊಡೆಯುವೆನೆಂದು ಬೆದರಿಸಿದರು. ಅವನು ತನ್ನನ್ನು ಹೊಡೆಯುತ್ತಾರೆಂದು ಧನಿಯನ್ನು ಕೂಗಿದನು. ಧನಿ ಬಂದರೆ – ಅವನಿಗೆ ಮೆಟ್ಟಿನಿಂದ ಹೊಡೆಯುತ್ತೇನೆಂದು ಮೆನೆಜರ ಆಭಯವಾದಂತು. ಊರಿನ ಸದ್ಗೃಹಸ್ಥರು ಹಲವರು ಇದನ್ನು ಕಂಡರು. ಆದರೆ ಮಾಡುವು ದೇನು? ರೈತನು ವಿಯೋಗಿ ಮಾಡಬೇಕು. ಈ ಸಾಕ್ಷಿ ಜನರನ್ನು ಕಟ್ಟಿ ತೊಂಡು ಅವನು ಕೋರ್ಟು ಏರಿದರೆ, ಅವನು ದಿವಾಳಿ. ಹಾಗೆ ಬಿಟ್ಟರೆ ಗದ್ದೆ ದಿವಾಳಿ

ಇನ್ನು ರಾಯರ ಎಮ್ಮೆಯು ಅಲ್ಲೇ ಮೇಯಲಿಕ್ಕೆ ಬರುತ್ತದೆ. ಸದರಿ ಆಫೀಸರರು ಪ್ರಾಯಶಃ ರೈತನ ಯೋಗ್ಯತೆ ಎಮ್ಮೆಗಿಂತ ಕಡಿಮೆ ಯೆಂದು ತಿಳಿದೂ ವಿನೋ, ಈ ಅಪಹಾಸ್ಯಕಾರ ಸ್ಥಿತಿಯನ್ನು ಮೇಲಾಧಿ ಕಾರಿಗಳು ತಾವಾಗಿ ವಿಚಾರಿಸದಿರೆಂದು ನನ್ನ ನಂಬಿಕೆ.

ಇತಿ,

ಮೊಳ್ಳಾಂ ಕಡಬ, 17–8–33 } ತಿವರಾಮ ಕಾರಂತ.

ಇದೊಂದು ಮಾಹಪತ್ರ!

ಉಯ್ಯಾ ಪತ್ರಿಕಾಗಾರನ,

ನಮ್ಮ ಜಾಗರಣ ಬಂಧುಗಳು ಮೊನ್ನೆ ದಿವಸ ಸಭೆ ಸೇರಿ ಇಲ್ಲಿಯ ತನಕ ತಮ್ಮನ್ನು ರುಚಿ ರುಚಿ ತಂಡಿಗಳಿಂದಲೂ, ಹ್ಯಾಂಗು ಎಳ್ಳಿನ ಸ್ಟೊಂಗ್ ಕಾಫಿಗಳಿಂದಲೂ ತಬ್ಬಿಗೊಳಿಸಿದ್ದ ಹೊಟೇಲು ತಿವರ (೨) ರಾಜಮನ್ನು ಸಾಂತು ನಾಯ್ಕರಿಗೆ ಸಭೆಗಾಗಲು ಅವರ ದಿವಸ ಬಾದ ತಕದಲ್ಲಿ ಅರ್ಪಿಸಿದ ಮಾನಪತ್ರದ ತಾತ್ಪರ ನಕಲು

ಪಾಕಶಾಸನ ಪ್ರಬೋಧ ಚಂದ್ರೋದಯ!

ತಾವು ತಮ್ಮ ದಿವ್ಯಕರ ಪಲ್ಲವಗಳಿಂದ, ಈ ಬೀದಿಯ ಮಾನವ ಕೀಟಗಳಾದ ನಮ್ಮ ಕಿವಿ ಮೂಗು, ಬಾಯಿಗಳನ್ನು ದಿವ್ಯ ಪುಳಿ ಸಮಾನವಾದ ಉತ್ತಮೋತ್ತಮ ಕಾಫಿ ಪ್ರಾಷಕ ಶ್ರೇಷ್ಠದಿಂದಲೂ ಜಗದ ದಿಕ್ಪಾಲಕರನ್ನು ಸ್ವರ್ಗವಾಸಿ ದೇವತೆಗಳನ್ನು ಮೋಹಿಸಿ ಮರಳು ಮಾಡಿ, ಉರುಳಿಸಬಲ್ಲ, ರಾಸವೇಕಪರಿಪೂರಿತ, ಸುವಾಸನಾ ಸುಮಧುರಯುಕ್ತ ರಾಸೇಂದ್ರಿಯ ಪರಿಪಾವನವಾದ, ಸ್ವರ್ಗಕಲ್ಪಾ ಸುಖಸಂತೋಷ ಕಾರಣ ಯಾದ ಅಮೋಘ ಪಥ್ಯಸಗಳಿಂದಲೂ ತೃಪ್ತಿಗೊಳಿಸಿದ ಬಗ್ಗೆ ನಾವು, ನಮ್ಮ ಪುತ್ರಪಾತ್ರಕಳತ್ರ ಸಮೇತರಾಗಿ ತಮ್ಮ ಪಾದದ ಬಳಿಗೆ ಬಂದ ನೋರ್ವೆಯನ್ನರ್ಪಿಸಿ ಬರಬಿಸುತ್ತೇವೆ. ತುಮ್ಮಂಥಹ ದಿವ್ಯ ಮಾನವ ಗಣ ಶ್ರೇಷ್ಠರೂ, ಉದಾರಗಣ ವಿದ್ವಜ್ಜನ ಪರಿಪೂರ್ಣರೂ, ಪ್ರಪಂಚ ಸಮಾನ ವಿಶಾಲ ಹೃದಯರೂ, ಕೇವಲ ಲೌಕಾತ ತುಲ್ಯಗುಣಾಧಿಗಳೂ, ಸುಜೇ ಧಿಗಳೂ ಆದ ತಮ್ಮ ಉಪಕಾರವನ್ನೂ, ಈ ಬಡ, ದರಿದ್ರ, ಕ್ಷುಲ್ಲಕ, ಅಲ್ಪ ತೈರಶಾಖ್ಯ ಸಮಾನರಾದ ಜನರು ಎಂದಾದರೂ ಮರೆಯ ಬಲ್ಲರೇ? ಅದೂ ತಾವೆ ತಮ್ಮ ದಿವ್ಯ ಹಸ್ತದಿಂದ, ನಾವು ಅರ್ಪಿಸು ತ್ತಿರುವ ಈ ಸನ್ಮಾನ ಪತ್ರವನ್ನು ಕೊನೆಗೊಂಡು ಕಡ್ಡಿಯಿಂದಲಾದರೂ ಮುಟ್ಟಿ ಪವಿತ್ರಗೊಳಿಸಬೇಕೆಂದು, ತಮ್ಮ ಮುಂದೆ ಕಣ್ಣೀರಿನ ಮಳೆ ಕರೆಯುವ,

ಬಡತನಗ್ರಾಮದ ಮೇಲುಬೀದಿಯ ಪುರವಣಿಗರು.

ಸದ್ರಿ ರಾಜ್ಯಮನ್ನಾರು,

—ಈ ಮಾನಪತ್ರವನ್ನು ಕೇವಲ ಜನರ ಅಗ್ರಹಕ್ಕಾಗಿ, ತಮ್ಮ ಸೇವಕನ - ಮುಖಾಂತರ ಕಡ್ಡಿಯಿಂದ ಮುಟ್ಟಿ ಅವರನ್ನು ಸಂತೃಪ್ತಿ ಗೊಳಿಸಿದರು. ಅನಂತರ ಪುರಪ್ರಮುಖರಾದ (೩)—ರವರು, ವಿಜ ನಗರದ ಅರಸರನ್ನೂ, ಕವಿಪುಂಗವರನ್ನೂ ನಾಚಿಸಲು ಯೋಗ್ಯವಾದ ಈ ದಮಡಾ ಸದಸಾರಂಭಕ್ಕೆ ಎಡೆಕೊಟ್ಟು – (೪)ಬ ರಾ ರಾ ಸಾಂತ ನಾಯ್ಕರಿಗೂ, ಈ ಮಾನಪತ್ರದ ಪಂಡಿತಮಯ ಒಕ್ಕಣೆಯನ್ನು ಒದಿದ ಕವಿಪುಂಗವ (೫)—ರವರಿಗೂ ಧನ್ಯವಾದಗಳನ್ನು ಅರ್ಪಿಸಿ ಸಭೆಯು ಮುಕ್ತಾಯವಾಯಿತು.

ಇತಿ ತಮ್ಮ,

ಊಹಾತಾದರ್ಶಿ ಕಾರಿಕ.

ಇನ್ ಕಮ್ ಟೇಕ್ಸ್ ಕುರಿತಾಗಿ.

ಅಯ್ಯಾ ಸಂಪಾದಕರೇ,

ಇನ್ ಕಮ್ ಟೇಕ್ಸ್ ಎಂದರೇನೆಂದು ತಮಗೂ ತಿಳಿದಿರಬಹುದು. ಸಾವಿರ ರೂಪಾಯಿ ಮೇಲ್ಪಟ್ಟು ಸಂಪಾದನೆಯುಳ್ಳವರಿಗೆ ಇನ್ ಕಮ್ ಟೇಕ್ಸ್‌ನ ಕೊಡಲಿಯಂತೂ ತಪ್ಪದಿರುವುದಂದ ಸಾವಿರಾರು ಜನರು ಬಳಲುತ್ತಿರುವುದಂತಿರಲ! ನಾನು ಹೇಳಲಿಕ್ಕಿರುವುದು ಇನ್ ಕಮ್ ಟೇಕ್ಸ್ ಆಫೀಸಿನ ಕುರಿತಾಗಿ. ಬೆಳಿಗ್ಗೆ ಹನ್ನೊಂದು ಘಂಟೆಗೆ ಪುಸ್ತಕದಿ ಕಟ್ಟುಗಳನ್ನು ಹೊತ್ತುಕೊಂಡು ಹೋಗಿ ಅಲ್ಲಿ ಕುಳಿತು ವಾಡಿಕೆಯಂತೆ ಗಿರಿ ಅನ್ನ ನೀರು ತಿಳ್ಳದಂತಾಗುತ್ತದೆ. ಲೆಟ್ಟು ಪತ್ರಗಳ ವಿಷಯ ಆರ್ಡರಿಸಿದರೆ ಗತಿಯೇ ಬೇರೆ! ಹಾಗೆ ೧೦ ತಾಸು ಕೆಲಸ ನಡೆಸಿದರೂ ಆ ಆಫೀಸಿನ ಕೆಲಸವು ಮುಗಿಯುವುದೇ ಇಲ್ಲ! ಬೆಳಿಗ್ಗೆ ಹೋದರೆ ರಾತ್ರಿ ಎಂಟು ಘಂಟೆಯ ನಂತರ ಹಿಂದೆ ಬರಬೇಕಾಗುತ್ತದೆ. ಅಷ್ಟರ ತನ ಕವೂ ಇನ್ ಕಮ್ ಟೇಕ್ಸ್‌ನ ನಡೆಸುತ್ತಾರೆ. ಸೆಕ್ಷನ್ಸ್ ಇದ್ದರೆ ಕೋರ್ಟು ಹಜೂರಾಫೀಸು, ಡಿಸ್ಟ್ರಿಕ್ಟ್ ಕೋರ್ಟು ನೋಡಲಾದ ದೊಡ್ಡ ದೊಡ್ಡ ಆಫೀಸುಗಳಾದರೂ ಬೇಗನೇ ಮುಚ್ಚಲ್ಪಡುತ್ತವೆ. ಆದರೆ ನಮ್ಮ ಇನ್ ಕಮ್ ಟೇಕ್ಸ್ ಆಫೀಸಿನ ದಿನಗಳು ರಾತ್ರಿ ಘಂಟೆ ಒಂಭತ್ತು ಹತ್ತಾ ದರೂ ನಂದದಿರುವ ದಿನಗಳಂತೆ. ಅಲ್ಲಿಯವರು ತಮ್ಮ ಬಳಿಗೆ ಬಂದವರ ಸ್ಥಿತಿಗತಿಗಳೇನೆಂದು ತಿಳಿಯುವಂತೆಯೇ ಇಲ್ಲ. ತಮ್ಮ ಕಾರ್ಯವಾಗದೆ ಎಷ್ಟೇ ಗೋಳು ತಮಗೆ ಕೇಳುಬಿಸಿದರೂ ಕ್ಯಾರೆಯು ಅಲ್ಲಿ ತಾರುವುದಿಲ್ಲವೆಂದು ತೋರುತ್ತದೆ. ಒಮ್ಮೊಮ್ಮೆ ಸಾಲ್ಕಾರು ದಿನಗಳ ತನಕ ಆಕೌಂಟ್ಸ್ ಚೆಕ್ ಮಾಡಿ ಮುಗಿಯುವುದೇ ಇಲ್ಲ. ನಮ್ಮಿಂ ದಲೇ ಲಾಭವನ್ನು ಹೊಂದಿ ನಮ್ಮಿಂದಲೇ ಬದುಕುವ ಈ ರೀತಿಯ ಆಫೀಸುಗಳು, ನಮ್ಮನ್ನು ಹೀಗೆ ದಣಿಸಿದರೆ ಹೇಗೆ? ಪೇಳಿ ತಪ್ಪಿಯೂ ಹೆಚ್ಚಿನ ಕೆಲಸ ಮಾಡಿ ಜನರನ್ನು ಬಳಲಿಸುವುದಲ್ಲದೆ ತಾವೂ ಬಳಲುವ ದೇಕೆ? ಆದುದರಿಂದ ಸಂಬಂಧಪಟ್ಟವರು ಎಸೆಸೀಗಳ ಮೇಲೆ ಕರುಣೆ ಯಿಟ್ಟು ಅತಾಲದಲ್ಲಿ ಆಕೌಂಟ್ಸ್ ಚೆಕ್ ಮಾಡಿ ದಣಿಸುವ ಪದ್ಧತಿ ಯನ್ನು ತೆಗೆದು ಹಾಕಲೆಂದು ಹಾರೈಸುವ,

'ವರ್ತಕ'

ನಮ್ಮ ಡಿಸ್ಟ್ರಿಕ್ಟ್ ಬೋರ್ಡು.

ಸ್ವತಂತ್ರಾಧಮಾನಿಯೇ,

ನಮ್ಮ ಘನ್ನ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರು ಉದಾ ಧ್ಯಾಯರ ವಿಷಯ. ತಂಡಾ ಕಷ್ಟಪಡುತ್ತಾರೆಂಬುದು ಎಲ್ಲರಿಗೂ ತಿಳಿದ ವಿಷಯವೇ. ಆಗಾಗ್ಗೆ ಪಾಠಗಳನ್ನು ಸಂದರ್ಶಿಸಿ ಅವರನ್ನು ಪ್ರೋತ್ಸಾಹಿಸುವುದು ತುಂಬಾ ಆನಂದಕರ.—ಆದರೆ ಕಳದ ದಶಂಬರ ತಿಂಗಳಲ್ಲಿ ಜರಗಿದ ಉದಾಧ್ಯಾಯರ ಅಧಿವೇಶನದಲ್ಲಿ ಮುಂಚಿನ ಪ್ರೆಸಿ ಡೆಂಟರ ಕಾಲದಲ್ಲಿ ರಿಕಾರ್ಡುಗಳು ಅವ್ಯವಸ್ಥೆಯಲ್ಲಿದ್ದು ಕೆಲಸವು ತುಂಬಾ ಬಾಕಿ ಇದ್ದದೆ, ಎಂಬುದಾಗಿ ಆಗಿನ ಅಧ್ಯಕ್ಷರು ಹೇಳಿದ್ದರು. ಅದು ನಿಜವಾಗಿದ್ದರೆ ಅಂಥದನ್ನು ಸರಿಪಡಿಸುವುದು ಇವರ ಮುಖ್ಯ ಕರ್ತವ್ಯವಲ್ಲವೇ? ಇವರು ಬಂದು ಒಂದು ವರ್ಷವಾಗಲಿಕ್ಕಾಬರೂ ಇನ್ನೂ ಬಡ ಉದಾಧ್ಯಾಯರಲ್ಲಿ ಕೆಲವರಿಗೆ ಸಿಕ್ಕಬೇಕಾಗಿದ್ದ ಅವರ ಪಕ್ಕೆಸದಾಗಿದ್ದ ಇನ್ಕ್ರಿಮೆಂಟನ್ನು ಇನ್ನೂ ಏತಕ್ಕೆ ಕೊಡಿಸಲಿಲ್ಲ? ಅವರು ದೂಡಿರುವ ಅರ್ಜಿಗಳ ಕಟ್ಟುಗಳನ್ನು ಹೊರಲಕ್ಕೆ ಒಬ್ಬ ಪೇದೆಯು ಸಾಲದೆಂದು ತೋರುವುದು. ಅವರಿಂದ ಎರಡು, ಮೂರು ಸಲ ಅರ್ಜಿಗಳನ್ನು ತರಿಸಿಕೊಂಡು ಈಗ ದೊರಕಿದಂದಿರುವುದರ ಅರ್ಥ ವೇನು? ಇನ್ನಾದರೂ ಬಡ ಉದಾಧ್ಯಾಯರ ಗೋಳನ್ನು ಯೋಗ್ಯ ರೀತಿಯಲ್ಲಿ ಪರಾಮರ್ಶಿಸಿ ಅವರಲ್ಲಿ ನಿಜವಾಗಿ ಕೊಡಬೇಕಾಗಿರು ವವರಿಗೆ ಅವರು ಬಾಧ್ಯರಾಗಿರುವ ಇನ್ಕ್ರಿಮೆಂಟಿನ್ನು ಆದಷ್ಟು ಬೇಗನೆ ದಯಪಾಲಿಸಬಾರದೇ? "ಹರಿಕೊಲ್ಲಲ್ ಪರ ಕಾಯುವನೇ" ಎಂಬಂತೆ ಪ್ರೆಸಿಡೆಂಟರೇ ಅವರ ಕೈ ಬಿಟ್ಟರೆ ಅವರು ಇನ್ಯಾರ ಮೊರೆಹೊಕ್ಕಳೀ?

ನ್ಯಾಯಪ್ರಿಯ.

ಪುತ್ತೂರು ದಸರಾ ಮಹೋತ್ಸವ.

ಸ್ಪೈ – ಪುತ್ತೂರು ದೋರ್ಮು ಹಾಯರ್ ಎಲಿಮೆಂಟರಿ ಹುಡು ಗರ ಶಾಲೆಯಲ್ಲಿ

ಸಮಯ – ಬರುವ ಸಪ್ಟಂಬರ ತಾ. ೨೦ರಿಂದ ೨೫ ವರೆಗೆ—

ಈ ವರುಷದ ಉತ್ಸವವು ಕಳದ ವರ್ಷಕ್ಕಿಂತಲೂ ಎಷ್ಟೊ ಹೆಚ್ಚಾಗಿ ಜನರ ಮನಸ್ಸು ಆಕರ್ಷಿಸುವಂತೆ ತರತರದ ಆಟ, ಪಾಟ್ಟಿ ಗಾಯನ ನಾಟಕ, ನರ್ತನ ಮುಂತಾದ ವಿಧವಿಧದ ಮನೋರಂಜಕ ಮತ್ತು ಸ್ಫೂರ್ತಿದಾಯಕವಾದ ಪ್ರದರ್ಶನಗಳಿಂದಲೂ ಊರ, ಪರ ಊರಿನ ಪ್ರಸಿದ್ಧಪುರುಷರ ಭೋಧರದವಾದ ಉಪನ್ಯಾಸಗಳಿಂದಲೂ ದಿನ ದಿಂದ ದಿನ ಎಲ್ಲರನ್ನೂ ಉತ್ಸಾಹದಿಂದ ಮುಂದೆ ಅದರ ಮೂಲಕ ಜನತೆಯಲ್ಲಿ ಕಾರ್ಯೋದ್ಯಮದಿಂದ ಪರಿಣಾಮಕಾರಿಯಾಗುವಂತೆ ಮಾಡಬೇಕೆಂದು ಸಂಕಲ್ಪಿಸಿಯದೆ. ಕಳದ ವರುಷದಂತೆಯೇ ಈ ವರುಷವೂ ಪ್ರತೀ ಸಾಯಂಕಾಲ ಮತ್ತು ರಾತ್ರಿ ಯಥಾವಿಧಿಯಾಗಿ ಕಾರ್ಯಕ್ರಮವು ಜರಗುವುದು ಇದರ ಜೊತೆಗು ಈ ವರುಷ ಹೊಸತಾಗಿ ಈ ಕೆಳಗೆ ತಾವೆಸುವಂತೆ ಪ್ರತಿದಿನ ಬೆಳ್ಳಿ ಸ್ಪರ್ಧೆಗಳು ನಡೆಯಲಿಕ್ಕಿರುವುವು. ಅವುಗಳಲ್ಲಿ ಗೆದ್ದವರಿಗೆ ಪದಕ ಮುಂತಾದ ಬಹುಮಾನಗಳನ್ನು ತಂಜ ಜರಗುವುದು

1. ವಾಗ್ಮಿತ್ವ . . . 1. ವಿದ್ಯಾರ್ಥಿಗಳಿಗೆ – ೫ನೇ ದರ್ಜೆ ಅಥವಾ ೩ನೇ ಫೋರ್ಮು ಮೀರಕೂಡದು.
(ಕನ್ನಡ ಭಾಷೆ) 2. ಬೇರೆಯವರಿಗೆ – ವಿಷಯ ಮುಂತಾದ ಮಿತಿಯಿಲ್ಲ.
2. ವ್ಯಾಯಾಮ 1. ೪ ಮೈಲು ಓಟ
2. ೧೦ ಮೈಲು ನಡೆಯುವುದು.
3. ಈಜುವುದು.
4. ಉರ್ಸಾಟಿ (Wrestling)
5. ಮುಷ್ಟಿಯುದ್ಧ (Boxing)
6. ಭಾರ ಎತ್ತುವುದು.
7. ಸುಂದರ ಮೈಕಟ್ಟು (18 ವರ್ಷ ಮಿಕ್ಕಿ ದವರಾಗಬೇಕು.)
3. ವೈಚಿತ್ರ್ಯ . . . . ಹಗಲುವೇಷ (Fancy Dress)
1. ಮಕ್ಕಳಿಗೆ (12 ವರ್ಷಗಳಿಗಿಪ ಕಡಿಮೆ ವಿಯಾಯದವರಿಗೆ)
2. ಮಿಕ್ಕವರಿಗೆ.
4. ಸ್ತ್ರೀಯರಿಗೆ . 1. ರಂಗವಲ್ಲಿ.
2. ಹೂವಿನಲೆ ಕಟ್ಟುವುದು.
3. ಗಾಯನ.

ಇವುಗಳಿಗೆ ಎಲ್ಲಿಯವರೂ ಯಾರೂ ಸ್ಪರ್ಧೆಗೆ ಸೇರಬಹುದು. ಈ ಸ್ಪರ್ಧೆಗಳು ಪ್ರತಿದಿನ ಬೆಳಿಗ್ಗೆ ನಡೆಯುವುವು. ಸ್ಪರ್ಧೆಗೆ ಸೇರಲು ಅಪೇಕ್ಷಿಸುವವರು ಇದೇ ಬರುವ ಸಪ್ಟಂಬರ ತಾ ೨೦ ಒಳಗೆ ಇಲ್ಲಿಗೆ ಬರಹ ಮೂಲಕ ತಿಳಿಸಬೇಕು. ಅವರ ಹೆಸರು, ಪ್ರಾಯ, ಸಂಪೂರ್ಣ ವಿಳಾಸ ಈ ವಿವರಗಳನ್ನು ತಳುಪಿಸಬೇಕು. ಎಲ್ಲರೂ ಪ್ರೋತ್ಸಾಹಿಸ ಬೇಕಾಗಿ ಅಗ್ರಹಪೂರ್ವಕವಾದ ವಿನಂತಿ.

ಎಲ್ಲಾ ಕಾರ್ಯಕ್ರಮಗಳ ಸಂಪೂರ್ಣ ವಿವರವು ಹಿಂದಿನಿಂದ ಪ್ರಕಟಿಸಲಾಗುವುದು.

ಪುತ್ತೂರು, 13–8–33 } (Sd) ಮೊಳಹಳ್ಳಿ ತಿವರಾಯ, ಕಾರ್ಯಾಲಿಕ ಕಾರ್ಯದರ್ಶಿ.

ಸಾರ್ವಜನಿಕ

ಉಡುಪಿಯ ಕಾರ್ಕಳ ದೇವಸ್ಥಾನದಲ್ಲಿರುವ ಪೆರಂಪಳ್ಳಿ ಗ್ರಾಮದ ಕುಟುಂಬ ಸೇವಾಜಂಗಮನ ಮಗ ನಾಗನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ—

ನಾನು ಇದೇ ಕಳೆದ ತಾ. 31—7—1933ನೇ ಇವತ್ತು ಸೋಮವಾರ ದಿವಸ ಉಡುಪಿ ತಾಲೂಕು ಶಿರೂರು ಗ್ರಾಮದ ಪೈಲುಮನೆಯಂಬಲ್ಲಿಗೆ ನನ್ನ ತಮ್ಮನ ಮನೆಗೆ ಹೋದಾಗ ಅಲ್ಲಿ ನಾನು ಹೊರಗೆ ಬಂದದ್ದು ನೋಡಿ ಸದರಿ ಪೈಲುಮನೆ ಮುತ್ತಯ್ಯ ಸೆಟ್ರು ತಮ್ಮ—ಅಂತಯ್ಯ ಸೆಟ್ರು ಮತ್ತು ಕಳ್ಳಾಡಿ ಶೇಜಪ್ಪ ಸೆಟ್ರು ಕೂಡಾ 2 ಜನರು ನನ್ನನ್ನು ತಮ್ಮ ಮನೆಗೆ ಬರಬೇಕಾಗಿ ಕರೆದರು. ನಾನು ಹೋದೆ. ಆಗ ಸದರಿ ಸೆಟ್ರು ಅಳುಗಳು ಕೊರಗಿದಿಂದ ತನಗೆ ಬಹಳ ಬರತಕ್ಕದ್ದುಂಟು ಅವರು ನಿನ್ನ ಜೊತೆಯಲ್ಲಿ ಮೇಲೆ ಗಟ್ಟಕ್ಕೆ ಬರುವದಾದ್ದರಿಂದ ಸದರಿ ಬಹಳ ನೀನು ತೊಡಬೇಕು, ಇಲ್ಲವಾದರೆ ನೋಟು ಬರಕೊಡಬೇಕು ಎಂತ ಹೇಳಿದರು. ನಾನು ಒಪ್ಪಲಿಲ್ಲಾ, ಆಗ್ಗೆ ನನ್ನನ್ನು ಬಲತ್ಕಾರದಿಂದ ಮುದ್ದರಿಸಿ ಹಿಡಕೊಂಡು ನನ್ನ ಎಡಗೈಯ ಉಂಗುಟ್ಟದಿಂದ 3 ಮೂರು ಕಾಗದಗಳ ಮೇಲೆ ಮೂರು ಹೆಬ್ಬೆಟ್ಟು ಮೊಹರು ಗಳನ್ನು ತೆಗೆದುಕೊಂಡು ಬಿಟ್ಟಿದ್ದಾರೆ. ನನ್ನ ಬರಹ ದಸ್ಕತು ಹಾಕಲಿಲ್ಲಾ; ನಾನು ಈ ವರೇಗೆ ಯಾರಿಗಾದರೂ ಯಾವ ತರದ ರೀಕಾರ್ಡುಗಳು ಬರೆದು ಯಾ ಬರೆಸಿ ಕೊಟ್ಟದ್ದು ಇಲ್ಲಾ. ಸದರಿ ಅಂತಯ್ಯ ಸೆಟ್ರು ಎಗ್ಗೆರೆರು ನನ್ನ ಕೈಮೊಹರು ಮಾಡಿ ಕೊಂಡ ಕಾಗದಗಳ ಮೇಲೆ ಸದರಿ ಅಂತಯ್ಯ ಸೆಟ್ರಾಗಲಿ ಯಾ ಬೇರೆ ಯಾರೆ ಹೆಸರಲ್ಲಿಯಾಗಲಿ ಯಾವ ತರದ ಸೃಷ್ಟಿನೆ ರೀಕಾರ್ಡುಗಳು ನಾನು ಬರೆಸಿಕೊಟ್ಟಿದ್ದೆಂತ ಮಾಡಿಸಿದರೂ ಆ ಅವುಗಳನ್ನು ಟ್ರಾನ್ಸ್‌ಫರ್ ವಗ್ಗೆರೆ ಮಾಡಿಸಿದರೂ ಸಹ ಅವುಗಳು ನನ್ನ ಮೇಲೆ ಬದ್ರೀಕೃತವಾಗತಕ್ಕುತಾಗಲಿಲ್ಲಾ. ಅವುಗಳಿಗೆ ನಾನು ಒಪ್ಪುವಂತಾದ್ದಿಲ್ಲಾ ಎಂಬ ಸಂಗತಿ ಈ ಮೂಲಕ ಸರ್ವ ಜನರಿಗೂ ಶ್ರುತಪಡಿಸುತ್ತೇನೆ.

ಬೆಳ್ಳೆ, ತಾ. 8—8—1933. ನಾಗನ.ರುಜು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. No 77/1933.

1. ನಾರಾಯಣ, 2. ಈಶ್ವರ (ಮ್ಯಾನೆರರು) ಅರ್ಜಿದಾರರು.

ಇವರ ರಕ್ಷಣೆಗು ತಾಯಿ ತೀರು ಹೆಂಗಸು.

ಮತ್ತು

1. ದಿತುನಾಯ್ಕ, 2. ಚಿನ್ನಯ್ಯನಾಯ್ಕ, 3. ತನಿಯ ನಾಯ್ಕ ಕೂಡಾ—ಎದ್ರಿರು.

ಸದರಿ ಮ್ಯಾನೆರ ಅರ್ಜಿದಾರರ ತಂದೆ ಮೃತಪಟ್ಟ ಕಡೆಂದಲೆ ಗ್ರಾಮದ ಒಲ್ಲಾಡಿ ಸೋಮಪ್ಪನಾಯ್ಕ ಎಂಬವನು ಧಾರವಾಡ ಸೆಂಟ್ರಲ್ ಬೇಂಕಿನಲ್ಲಿ ಸದರಿ ಬೇಂಕಿನ ಎಜಿನ್ಸರ ನಂಬ್ರ 8೨೬ಕ್ಕ ತಾ 15—9—1930ರಲ್ಲಿ ರೂಪಾಯಿ 500 ಮತ್ತು ತಾ. 6—10—1930ರಲ್ಲಿ ರೂಪಾಯಿ 500 ಕೂಡಾ ರೂಪಾಯಿ 1000ನ್ನು ಡಿಪೋಜಿಟ್ ಇಟ್ಟಿರುವದರಿಂದ ಅದನ್ನು ಬಡ್ಡಿ ಸಮೇತ ವಸೂಲು ಪಡಿಯುವರೆ ಸದರಿ ಮ್ಯಾನೆರರು ಕಡೆಯಿಂದ ರಕ್ಷಣೆಕಾಗಿ ತಾಯಿಯು ಈ ಕೋರ್ಟಿಗೆ ಸಕ್ಷೇಶನ್ ಸರ್ಟಿಫಿಕೇಟು ಅಪೇಕ್ಷಿಸಿ ಬರಕೊಂಡ ಅರ್ಜಿಯು ತನಿಕೆ ಬಗ್ಗೆ ಇದೇ 1933ನೇ ಇಸವಿ ಸಪ್ಟಂಬರ ತಾರೀಕು 14ಕ್ಕೆ ಇಟ್ಟಿರುತ್ತದೆ. ಆ ಕುರಿತು ಯಾರಾದಾರೂ ಆಕ್ಷೇಪಣೆಗಳು ಇರುವ ದಾದರೆ ಸದರಿ ದಿವಸ ಹಗಲು 10 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರು ಆಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

ಕಾರ್ಕಳ, 18—8—'33. } K. Vasudeva Kamath, *Advocate for petitioners*

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಕ್ರಮ ಅಮಲ್‌ಜ್ಯಾರಿ ನಂಬ್ರ 631/1933

ಎಲಿಸ್ ನಜ್ರೆತ್ ಬ್ಯಾಪ್—ಅರ್ಜಿದಾರಳು.

ಮತ್ತು

ವಿನ್‌ಸೆಂಟ್ ಫೆರ್ನಾಂದಿಸ್—ಎದ್ರಿ.

ಮೇಲ್ಕುಂಡ ಅಮಲ್‌ಜ್ಯಾರಿಯಲ್ಲಿ ಎದ್ರಿಯು ಎಂದಿಯಾಗಿ ರುಜುವಾರಿ ನಜ್ರೆತ್‌ರ ಮೇಲೆ ಪಡದ ಈ ಕೋರ್ಟು ಕ್ರಮನಂಬ್ರ 546/1932ನೇ ವ್ಯಾಜ್ಯದ ಡಿಕ್ರಿಯ ಜಪ್ತಿ ಅಪೇಕ್ಷಿಸಿರುವದರಿಂದ, ಆ ಕುರಿತು ನಿಮ್ಮ ಆಕ್ಷೇಪಗಳು ಇದ್ದರೆ, ಈ ಕೋರ್ಟು ಮುಂದೆ ತಾ. 5—9—1933 ಹಗಲು ಘಂಟೆ 11ಕ್ಕೆ ಹಾಜರಾಗಿ ಜಾಹೀರು ಮಾಡಿಕೊಳ್ಳಬೇಕಾಗಿಯೂ, ತಪ್ಪಿದರೆ ಏಮ್ಮನ್ನು ತೀರ್ಮಾನವಾಗಲಾಗುವದಾಗಿಯೂ ಈ ಮೂಲಕ ಸದರಿ ಎದ್ರಿಗೆ ತಿಳಿಸಿದ್ದಾಗುತ್ತದೆ.

Udipi, 19—8—'33 } K. Vittal Nayak, *Pleader for Petitioner.*

ಅಮೃತಧಾರಾ

ಸುಪ್ರಸವಕ್ಕಾಗಿ ದಿವ್ಯ ಔಷಧಿಯು ಸ್ತ್ರೀಯರಿಗೊಂದು ಮಹಾ ವರ!

ಯಾವ ತರದ ಅಥವಾ ಎಲ್ಲಾ ತರದ ಮುಟ್ಟುದೋಷ; ಮುಟ್ಟಾಗುವದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧ ರಕ್ತ. ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು ರೂ. 1-10-0.

ಕೇಸರಿ ಕುಟೀರ,

ಇಂಡಿಯನ್ ಕೆಮಿಸ್ಟ್ಸ ಮತ್ತು ಡ್ರಗಿಸ್ಟ್ಸ, ಎಗ್ಮೋರ್ ಮದರಾಸು,

Sole Agents for South Kanara

ಪೊಪ್ಯುಲರ್ ಸ್ಟೋರ್ಸ್,

ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ ಶಕ್ತಿವರ್ಧಕವಾದ ಸ್ವಾರ್ತಿಕೊಡುವಂತಹ

ಸುಮಧುರ

ಝಂಡು ದ್ರಾಕ್ಷಾಸವ

ಜರೂರು ಉಪಯೋಗಿಸಿರಿ.

ಸ್ತ್ರೀಯರ ಸಲುವಾಗಿ ಆರೋಗ್ಯವರ್ಧಕ.

ಪ್ರದರಾದಿ ರೋಗಗಳ ಮೇಲೆ ರಾಮಬಾಣ ಉಪಾಯ.

ಝಂಡು ಅಶೋಕಾರಿಷ್ಟ

ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬ್ಯಾಗಳು.

ಬೆಂಗಳೂರು ಏಜಂಟ್.—ಬಿ. ಪೊಪಟ್‌ಲಾಲ ಕಂಪನಿ, ೫೧ ಆರ್ಮಟ ಸ್ಟ್ರೀನಿವಾಸಾಚಾರ ಸ್ಟ್ರೀಟ್.

ವಿಜಾಪುರ ,, ಗೋವಿಂದ ಗೋಪಾಲ ಗಾಡಗೀಳ.
ಮಂಗಳೂರು ,, ದಿ ಉಲನ್ ಮಾರ್ಟ್ ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ.
ಗದಗ ,, ವಿದ್ಯಾವಿಲಾಸ ಬುಕ್ ಡಿಪೊ. ಬೆಳಗಾಂವ ,, ಪ್ರೊವಿಜನ್ ಸಪ್ಲ್ಯ ಕೊ.
ಹುಬ್ಬಳ್ಳಿ ,, ತಿಪ್ಪಣ್ಣ ಕ್ಷತ್ರಿಯ, ಧಾರವಾಡ. ಬೈಲಹೊಂಗಲ್ ,, ಜೆ. ಬಿ ಉದಾಪುಡಿ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡಕೊಳ್ಳಿರಿ.

ಸೇವಿಸಿ ತೃಪ್ತಿಗೊಂಡ ನಿರಾಕಿಗಳು ಇದನ್ನು

"ಜೀವಮಾನದ ಅಮೃತ ನಿಜವಾದ ಶಕ್ತಿವರ್ಧಕ ಔಷಧ" "ಶಕ್ತಿ ಹೀನತೆಗೆ ಪ್ರಪಂಚದಲ್ಲಿನ ಸಿದ್ಧೌಷಧ" "ಶಕ್ತಿದಾಯಿನಿ ಔಷಧಗಳ ರಾಜ" "ಸರ್ವ ಸಿದ್ಧೌಷಧ" "ವ್ಯಾಧಿಗಳಿಂದ ಸಂಕಟ ಪಡುವವರಿಗೆ ವರಪ್ರದಾಯಿನಿ"

ಎಂದೀ ಮೊದಲಾದ ಹೆಸರುಗಳಿಂದ ಕರೆದಿರುತ್ತಾರೆ. ಪರೋಪ್ಕಾರಕ್ಕೆ ರೀತಿ ತಯಾರಿಸಿದ ಈ ಔಷಧವು ಯಾವುದೆಂದರೇ ನಿಮಗೆ ಹಿತಕಾರಿಯೂ ಜೀವನಾಕಾರವೂ ಆದ

ಜೀವಾಮೃತವೇ.

ಇದು ಪಂಡಿತ ಶ್ರೀ. ಗೋಪಾಲಾಚಾರ್ಯರವರು ಕಂಡು ಸಿದ್ಧಿಪಡಿಸಿದ ಮಹಾ ಶಕ್ತಿವರ್ಧಕ ಔಷಧವೆಂದು ಹೊಗಳಿಸಿಕೊಳ್ಳುವ ಸುಪ್ರಸಿದ್ಧವಾಗಿದೆ. ಗರ್ಭಕೋಶದಲ್ಲಾಗಲಿ ಇದು ಉಳಿಕೆಯಲ್ಲಿದೆ. ಪ್ರದರ ದೌರ್ಬಲ್ಯವು ಮಹಿಳೆಯರಿಗೆ ಹಾಗೂ ಪುರುಷರಿಗೆ ಅಯಾಸ ರಕ್ತ ಹೀನತೆ, ಸರಗಳ ಆಕಳಿಕೆ, ಮೆದುಳು ಬೈತಲ್ಯಗುಂದಿರುವಿಕೆ, ತೊಡಲಲ್ಲಿ ಕಡಿಮೆಯಾಗಿರುವುದು. ಇತ್ಯಾದಿಗಳಿಂದ ಪೀಡಿತರಾಗಿ ತ್ತಿದ್ದಲ್ಲಿ ಜೀವಾಮೃತವನ್ನು ಸೇವಿಸಿಸಲಾರಂಭಿಸಿರಿ. ಇದರಿಂದ ನಿಮಗೆ ಪರಮೌಷಧ್ಯರ್ಯಕರವಾದ ಗುಣವುಂಟಾಗುವುದು. ಮೊದಲನೇ ಸಾರಿ ಸೇವಿಸಲು ಕ್ಕಾರಂಭಿಸಿದಾರಭ್ಯನೇ ಆದರ ಶ್ರೇಷ್ಠ ಗುಣಗಳು ನಿಮಗೆ ಗೊತ್ತಾಗುತ್ತವೆ. ನಮ್ಮ ನೈಕ್ಯರು ಅಮೃತ ಎರಡ ಸೈಜುಗಳಲ್ಲಿ ರೂ. ೩—೪—೦ ಮತ್ತು ರೂ. ೧—೧೫—೦ರಂತೆ ಮಾರುತ್ತಾರೆ. ಆಕಾಶ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಆಯುರ್ವೇದಾಶ್ರಮಂ, ಪೋ. ಬಾಳ್ಳು ನೆಂ. ತೀರ್ಥಹಳ್ಳಿ, ಮದ್ರಾಸು.

ಸೋಲ್ ಏಜಂಟರು:- ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೧೩ ತೆಕ್ಕಡೆಪೇಟೆ ಬೆಂಗಳೂರು. (ಸಾಮಿ ಹೋಟೆಲ್ ಹತ್ತಿರ)

ದಕ್ಷಿಣ ಕನ್ನಡದ ಏಜಂಟರು:- ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No. 104

ಮಹಾತ್ಮರ ಆಮರಣಾಂತಿಕ ಉಪವಾಸ!!!

ಹರಿಜನ ಸೇವೆಗಾಗಿ ಅತ್ಯದ ಬಲಿದಾನ!

"ನಿರ್ಬಂಧಗಳು ವಿಪರೀತವಾಗಿವೆ!! ಒಪ್ಪಲಾರೆ.

ಕಳೆದ ವಾರವೆ ಅಗಾಗಲೇ ಬಂದ ಮಹಾತ್ಮರ ಆಮರಣಾಂತಿಕ ಉಪವಾಸದ ವಾರ್ತೆಯನ್ನು "Stop Press"ನಲ್ಲಿ ಪ್ರಕಟಿಸಿದ್ದವಷ್ಟೆ. ಈ ಕುರಿತಾದ ಸವಿವರ ವಾರ್ತೆಯು ಹೀಗಿದೆ.

ತಾ ೧೫ನೇ ಆಗೋಸ್ತು ದಿನ ಬಂಧಿಸಲ್ಪಟ್ಟು ಮೇಲೆ ಗಾಂಧೀಜಿಯವರು ಸರಕಾರಕ್ಕೊಂದು ಪತ್ರವನ್ನು ಬರೆದು— "ನನ್ನ ಉಪವಾಸದ ಮೊದಲು, ನಾನು ಎರವಾಡಾ ಸೆರೆಮನೆ ಯಲ್ಲಿರುವಾಗ, ಹರಿಜನ ಕೆಲಸಕ್ಕಾಗಿ ನನಗೆ ಸರಕಾರವು ಎಲ್ಲಾ ಅನುಕೂಲತೆಗಳನ್ನೂ ಒದಗಿಸಿ ಕೊಟ್ಟಿತ್ತು. ದರ್ಶನಾ ಪೇಕ್ಷಿತರಾಗಿ ಒಂದೆರಡನ್ನು ಕಾಣಲಿಕ್ಕೂ, ಪತ್ರಗಳನ್ನು ಸ್ವೀಕರಿಸಲಿಕ್ಕೂ, ಹೊಗೆ ಕಳುಹಿಸಲಿಕ್ಕೂ, ಒಬ್ಬ ಪೈಸ್ಸಿನನ್ನು ಇಟ್ಟುಕೊಳ್ಳಲಿಕ್ಕೂ, ವರ್ತಮಾನ ಪತ್ರಿಕೆಗಳನ್ನೂ ಸಾಹಿತ್ಯ ಗಳನ್ನೂ ಪಡೆಯಲಿಕ್ಕೂ ನನಗೆ ಅನುಕೂಲತೆಗಳಿದ್ದುವು ಅಂದಿನ ಅನುಕೂಲತೆಗಳನ್ನು ನನಗೆ ಈಗಲೂ ಕೊಡಬೇಕೀಗಾ ಗಿದೆ ಪೂನೆಯಲ್ಲಿ ಪ್ರಕಟವಾಗುವ 'ಹರಿಜನ ಪತ್ರಿಕೆಗ ನಾನು ಲೇಖನಗಳನ್ನು ಕಳುಹಿಸುವುದು ಅಗತ್ಯವಿದೆ, ಅಲ್ಲದೆ ಅದರ ಸಂಪಾದಕರಿಗೆ ಆಗಾಗ್ಗೆ ಸಲಹೆಗಳನ್ನೂ ಕೊಡುವುದ ಗತ್ಯವಿರುತ್ತದೆ" ಎಂದು ತಿಳಿಸಿದರು ಈ ಕುರಿತಾಗಿ ತನಗೆ ತೀರ್ಪಾದಲ್ಲೇ ಉತ್ತರ ಕೊಡಬೇಕೆಂದು ಗಾಂಧೀಜಿಯವರು ಸರ ಕಾರದೊಡನೆ ಕೇಳಿದರು, ಹರಿಜನ ಸೇವೆಯನ್ನು ತನ್ನ ಪ್ರಾಣ ದಾನೆಯನ್ನಾದರೂ, ತೊರೆದು ಮಾಡದಿರಲು ಸಾಧ್ಯವಿಲ್ಲದಿರುವು ದರಿಂದ ಸರಕಾರವು ಒಡನೆ, ಅಂದರೆ ತಾ ೭ರೊಳಗೆ ಉತ್ತರ ಕೊಡಬೇಕು ಎಂದರು ಈ ಅವಿಧೆಯನ್ನು ಸರಕಾರವು ಪರಿ ತೀಲಿಸ ತೊಡಗಿತು ಆ ಬಗ್ಗೆ ಗಾಂಧಿಜಿಯವರಿಗೆ ಉತ್ತರವು ಸಿಗುವುದೆಂದು ಸರಕಾರವು ತಿಳಿಸಿತು ಎರಡು ದಿನಗ ಳಿಂದ ನಂತರವೂ ಗಾಂಧಿಜಿಯವರಿಗೆ [ಉತ್ತರವು ದೊರಯ ಲಿಲ್ಲ ಇದನ್ನು ಕಂಡು ಮಹಾತ್ಮರು ತಾ ೮ನೇ ದಿನ ಬೆಳಿಗ್ಗೆ ಸರಕಾರಕ್ಕೆ ಮತ್ತೊಂದು ಸಲ ಪತ್ರ ಬರೆದು ತನಗೆ ಉತ್ತ ರವ ದೊರೆಯಬೇಕೆಂದು ಕೇಳಿಕೊಂಡರು ಅದರ ತಾ ೧೫ನೇ ಸರಕಾರಕ್ಕೆ ಬರೆದ ಪತ್ರದ ಸಾರಾಂಶವು ಹೀಗಿತ್ತು—"ಈ ಹೊತ್ತು ಸೋಮವಾರ ಮಧ್ಯಾಹ್ನವಾಯಿತು ನನ್ನ ಅರಿಕೆಗೆ ನಿಮ್ಮ ಉತ್ತರವು ಇನ್ನೂ ತಲಪಿರುವುದಿಲ್ಲ ತಾ ೧೫ನೇ ದಿನದಿಂದಲೇ ನಾನು ನಿಮಗೆ ಬರೆದಿರುತ್ತೇನೆ ಹರಿಜನ ಸೇವೆಯ ಸಂಬಂಧವಾಗಿ ಅನುಕೂಲತೆಗಳನ್ನೊದಗಿಸಿ ಕೊಡಬೇಕೆಂದು ಕೇಳಿಕೊಂಡಿರುತ್ತೇನೆ ಇದು ಕೂಡಿ ನಾನು ನಿಮಗೆ ಬರೆಯು ವುದು ಖಚಿತ ನಷ್ಟವಾಗಿರುತ್ತದೆ ಈ ಸಂಬಂಧವಾದ ಕೆಲಸ ಗಳನ್ನು ಈಗಲೇ ನೆರವೇರಿಸಬೇಕಾಗಿದೆ ಬುಧವಾರ ಮಧ್ಯಾಹ್ನ ದೊಳಗೆ ನೀವು ನನಗೆ ಯಾವ ಉತ್ತರವನ್ನೂ ಕೊಡದಿರುವಿರಾ ಏಕಾದರೆ, ಆ ದಿನದಿಂದ ಮೊದಲುಗೊಂಡು ನಾನು ಉಪ್ಪು ನೀರನ್ನಲ್ಲದೆ ಮತ್ತಿತ್ತಾದ ಆಹಾರವನ್ನೂ ಸ್ವೀಕರಿಸಲಾರೆನು ನನ್ನ ಪ್ರತಿಜ್ಞೆಯನ್ನು ಪೂರೈಸಿಕೊಳ್ಳಲು ನನಗೆ ಇದೊಂದೇ ಸನ್ಮಾರ್ಗ ವಾಗಿರುತ್ತದೆ ಸರಕಾರವನ್ನು ಒಗ್ಗಿಸಬೇಕೆಂಬ ಇಚ್ಛೆಯಿಂದ ನಾವು ಈ ನಿರಶನವೃತ್ತವನ್ನು ಕೈಕೊಂಡಿರುವುದಲ್ಲ. ಯಾವ ನಿರ್ಬಂಧವೂ ಇಲ್ಲದೆ ಹರಿಜನ ಸೇವೆಯನ್ನು ಮಾಡದಿದ್ದರೆ ನನಗೆ ಪ್ರಾಣವೇ ಬೇಡವೆಂದನ್ನಿಸುತ್ತಿದೆ ಎರವಾಡಾ ಒಪ್ಪಂದ ದಲ್ಲಿ ನನಗೆ ಇಂತಹ ಸೇವೆ ಮಾಡಲು ಅನುಕೂಲಿಸಿಕೊಟ್ಟರು ತ್ತೀರೆ ಇದಕ್ಕೆ ಬ್ರಿಟಿಷ ಸರಕಾರವೂ ಒಪ್ಪಿರುತ್ತದೆ ನ್ಯಾಯ ವಾಗಿ ನನಗೆ ಅನುಕೂಲತೆಗಳು ಕೊಡಲ್ಪಡಬೇಕು ಎಂಬ ಧಾರಣೆಯಿಂದಲೇ ನನ್ನ ಕೋರಿಕೆಗಳನ್ನು ಕೊಡೋಣಾಗಲಿ ನಿರಶನ ವೃತ್ತವನ್ನು ನಾನು ಕೈಕೊಳ್ಳುವೆನೆಂಬ ಕಾರಣದಿಂದ ನನಗೆ ಅನುಕೂಲತೆಗಳನ್ನು ಒದಗಿಸಬೇಕೆಂದಿಲ್ಲ. ಈ ಧೀಕ್ಷೆ ಯನ್ನು ನಾನು ನನ್ನ ಸಮಾಧಾನಕ್ಕಾಗಿಯೇ ತಿರಸ್ಕಾರಿಸಿ ಕೊಂಡಿರುವೆನು.॥ ಮಹಾತ್ಮರ ಈ ರೀತಿಯ ಧೀಕ್ಷಾಬದ್ಧತೆ ಯನ್ನು ಕಂಡು ಸರಕಾರವು ತಾ. ೧೬ನೇ ದಿನ ಹೀಗೆ ತಿಳಿಸಿತು— "ಹರಿಜನ ಸಂಬಂಧವಾಗಿ ನೀವು ವಾರ್ತಾ ಪತ್ರಿಕೆಗಳನ್ನು ಪಡೆ ಯಬಹುದು. ಪತ್ರಿಕೆಗಳಲ್ಲಿ ಪ್ರಕಟಿಸುವುದಕ್ಕಾಗಿ ನೀವು ಹೊರಗಿನವರಿಗೆ ದರ್ಶನ ಕೊಡಬಾರದು ಒಂದು ದಿನಕ್ಕೆ ಇಬ್ಬರಿಗಿಂತ ಹೆಚ್ಚು ಜನರಿಗೆ ಭೇಟಿ ಕೊಡಬಾರದು ನೀವು ಹರಿಜನ ಪತ್ರಿಕೆಗೆ ವಾರಕ್ಕೆ ಮೂರು ಸಲ ಲೇಖನಗಳನ್ನು ಸಲಹೆಗಳನ್ನೂ ಕಳುಹಿಸಬಹುದು ಮೇರೆಮೀರಿ ಪತ್ರಗಳನ್ನು ಬರೆಯಲೂ ಸ್ವೀಕರಿಸಲು ಅನುಕೂಲವಿಲ್ಲ ನಿವೃತ್ತ ಸಹಾ ಯಾರ್ಥವಾಗಿ ಒಂಭಯಾಗಿರುವ ಒಬ್ಬ ಸ್ಟೆನೊಪೈಸ್ಟನ್ನು ಕೊಡ ಲಾಗುವುದು ಹರಿಜನ ಸೇವೆಗೆ ಬೇಕಾಗುವ ಪುಸ್ತಕ ಪತ್ರಿ ಕಾದಿಗಳನ್ನು ನೀವು ಕುಡಯೋಗಿಸಬಹುದು" ಇದನ್ನು ಗಾಂಧಿ ಜೀಯವರಿಗೆ ತಿಳಿಸಲಾಗಿ ಅವರು ಒಮ್ಮೆತಾನು ಉಪವಾಸ ಮಾಡುವುದಿಲ್ಲವೆಂದು ತಿಳಿಸಿಸಿದರು ಅವರೆ ಸ್ವಲ್ಪ ಬೇಳೆ ಕಳಯುತ್ತಲೇ, ಅವರು ಆಹಾರವನ್ನು ತಿರಸ್ಕರಿಸಿ ಸರಕಾರಕ್ಕೆ ಹೀಗ ಎರವ —ನಾನು ನನ್ನ ಅವಸರದಿಂದಾಗಿ ಅಲೋಚಿಸದೆ ಧಿಕ್ಕಾರತನಂತೆ ಆಚರಿಸಿ "ನನಗೆ ಆಡಿನ ಹಾಲನ್ನು ಕೂಡಲಿಕ್ಕು ದಿಂಗಿ' ನಿಮಗೆ ಒಲಿದೆನು ಇದರಿಂದಾಗಿ ಉಪವಾಸದಿಂದಿರಲು ನನಗೆ ಸಮ್ಮತವಿಲ್ಲವೆಂದು ನೀವು ತಿಳಿಯಬಹುದು

ಆದರೆ ನೀವು ನನ್ನ ಕೈಯಲ್ಲಿ ಬಿಟ್ಟು ಹೋಗಿರುವ ಆಪ್ತತೆ ಯನ್ನು ಮತ್ತೂ ಮತ್ತೂ ಓದುತ್ತಿರುವಾಗ, ನನಗೆ ಮೊದಲಿದ್ದ ಅನುಕೂಲತೆಗಳನ್ನು ಸರಕಾರವು ಈಗ ಕೊಟ್ಟಲ್ಲವೆಂದು ಭಾಸ ವಾಗುತ್ತಿದೆ ಮೊದಲಿನ ಅನುಕೂಲತೆಗಳಿಗೂ ಈಗ ನನಗೆ ದೊರಯುತ್ತಿರುವ ಅನುಕೂಲತೆಗಳಿಗೂ ಅಜಗಜಾಂತರವಿದೆ ಹೀಗಿರು ವುದರಿಂದ, ನಾನು ಉಪವಾಸವನ್ನು ಬಿಡುವಾರೆಂದು ನನ್ನ ಪುನರಾಲೋಚನೆ ಇರುತ್ತದೆ ಈಗಿನ ಅಪ್ಪಣೆಯನ್ನು ಸರ ಕಾರವು ನಿಂದ್ಯ ಧಾವನೆಯಿಂದಲೇ ನನಗೆ ಕೊಟ್ಟಿರುವುದೆಂದು ತೋಚುತ್ತದೆ ನಿಮ್ಮ ನಾಚ್ಛಾದಿನದಲ್ಲಿರುವ ಪತ್ರಗಳನ್ನು ನನಗೆ ನೀವು ಕೊಡಲಾಗುವುದಿಲ್ಲವಂತೆ ಹರಿಜನ ಪತ್ರಿಕೆಗೆ ಲೇಖನ ಗಳನ್ನು ಕಳುಹಿಸಲೂ ಅನುಕೂಲತೆಗಳನ್ನು ಕೊಡಲಾಗಲಿಲ್ಲ ಈ ಪತ್ರವನ್ನು ಬರೆಯಲು ನನಗೆ ವ್ಯಸನವಾಗುತ್ತದೆ ಆದರೂ, ಉಪವಾಸವನ್ನು ನಿಲ್ಲಿಸದೆ ನನಗೆ ಮತ್ತಷ್ಟು ವ್ಯಸನವಾಗ ದಿರದು ಎಂದು ಮೂರು ಸಲ ನಿಮ್ಮ ಅಪ್ಪಣೆಯನ್ನು ಓದಿ ದೆನು ಆದರೂ ಹರಿಜನ ಸೇವೆಗಾಗಿ ಆಗತ್ಯವಿರುವ ಕೆಲಸ ಗಳನ್ನು ಸರಕಾರವು ಕಂಡು ಮೆಚ್ಚುವಂತೆ ನನಗೆ ಕಾಣುವುದಿಲ್ಲ ನಿಮ್ಮ ಅಪ್ಪಣೆಯಲ್ಲಿರುವ ನಿರ್ಬಂಧಗಳಿಂದಾಗಿ, ನಾನು, ಹರಿಜನ ಸೇವೆಯನ್ನು ಮಾಡಲು ಸಾಧ್ಯವಿಲ್ಲ— ಆದುದರಿಂದ ನನಗೆ ಉಪ ವಾಸದ ಧೀಕ್ಷೆಯೇ ಸದ್ಯಕ್ಕೆ ಯೋಗ್ಯವಿರುತ್ತದೆ ಇದಕ್ಕಾಗಿ ನನಗೆ ಸ್ವಾತಂತ್ರ್ಯವನ್ನು ಕೊಟ್ಟು ಕಳುಹಿಸಿರುವ ಹಾಲನ್ನೂ ಹೆಣ್ಣು ಗಳನ್ನೂ ದಯ ಮಾಡಿ ಹಿಂದೆ ಪಡೆಯುವಿರೇ? ಉಪವಾಸವನ್ನು ಬಿಡುವೆನೆಂದು ಅವಸರದಿಂದ ಹೇಳಿ ತಪ್ಪಿದ ನನ್ನನ್ನು ಕ್ಷಮಿಸು ವಿರೇ?"

ಮಹಾತ್ಮರು ಉಪವಾಸವನ್ನು ಕೈಕೊಂಡೊಡನೆಯೇ ಇಂಡಿಯಾ ಸರಕಾರವು ನಡೆದ ಪತ್ರವ್ಯವಹಾರವನ್ನು ಚುಟುಕಾಗಿ ಪ್ರಕಟಿಸಿ ಗಾಂಧೀಜಿಯವರ ಆರೋಹಣೆಯಲ್ಲಿ ನ್ಯಾಯವೂ ಅದಕ್ಕೆ ಸಕಾರಣವೂ ಕಾಣುವುದಿಲ್ಲವೆಂದು ಟೀಕಿ ಸಿರುವರು ಬೇಕಾದ ಅವಶ್ಯಕತೆಗಳೆಲ್ಲ ಕಲ್ಪಿಸಿ ಕೊಟ್ಟರು ವಾಗಿ ಗಾಂಧಿಯವರು ಮತ್ತೂ ನಿನು ಬೇಕೆಂದು ಕೇಳು ತ್ತಾರೋ ತಮಗೆ ತಿಳಿಯದೆಂದು ಸರಕಾರವು ಹೇಳುತ್ತದೆ ಹಂಗೂ ಗಾಂಧೀಜಿಯವರು ಅಮರಣಾಂತಿಕ ಉಪವಾಸವನ್ನು ಕೈಕೊಳ್ಳಲಿರುವರಾದರೆ, ಅವರು ಎಲ್ಲಾ ತರದ ಕಾಯದೆಧೋಗ ಚುಟುವಟಿಕೆಗಳನ್ನು ಬಿಟ್ಟು ಬಿಡುವರಾದರೆ ಅವರನ್ನು ವಿಡುಗಡೆ ಮಾಡಲು ಕೂಡಾ ಸರಕಾರವು ಆಡ್ಡಿಯಿರುವುದಿಲ್ಲವೆಂದು ಪ್ರಕ ಟಿಸಿರುತ್ತದೆ ಉಪವಾಸವು ಪ್ರಾರಂಭವಾದ ೩೬ ತಾಸು ಗಳೆಂದಲೂ ಗಾಂಧಿಜಿಯವರನ್ನು ಅನೇಕರು ಸಂದರ್ಶಿಸುತ್ತಿರು ವರು ಕಾನೂನಿನ ಭಂಗ ಮಾಡಿದವರ ಮೇಲಿರುವ ನಿರ್ಬಂಧ ಗಳಂತಹ ನಿರ್ಬಂಧಗಳು ಈಗ ಅವರ ಮೇಲಿರುವುದಿಲ್ಲ ಅವರ ಸೆರೆಯ ಬಾಗಿಲು ರಾತ್ರಿಯಲ್ಲೂ ಮುಚ್ಚಲ್ಪಡುವುದಿಲ್ಲ. ದೀನ ಬಂಧು ಸಿ. ಎಫ್ ಎಂಡ್ರೂಸರು ಗಾಂಧಿಜಿಯವರನ್ನು ಸಂದ ರ್ಶಿಸಿ ಪರಿಸ್ಥಿತಿಯನ್ನು ವಿಚಾರಿಸಿಕೊಳ್ಳುತ್ತಿರುವರು ಎಂಡ್ರೂಸರು ಸರಕಾರ ಮತ್ತು ಕೊಂಗ್ರೆಸ್ಸುಗಳೊಳಗೆ ಕಾಂತಿಯನ್ನುಂಟು ಮಾಡಬೇಕೆಂದು ಯತ್ನಿಸುತ್ತಿರುವರು ಅವರು ಹೋವ್ ಸೆಕ್ರೆಟರಿಯೆಯವರೊಡನೆಯೂ ಗಾಂಧೀಜಿಯವರೊಡನೆಯೂ ವ್ಯವ ಹಾರ ನಡೆಸುತ್ತಿರುವರು. ಯಾವ ವಿಷಯಕವಾಗಿ ನೀವು ಸಾಹಸಿಸಿರುತ್ತಿರುವಿರೆಂದು ಕೇಳಿದ್ದಲ್ಲಿ ಅವರು ಎಲ್ಲಾ ರಾಜ ಕೀಯವಾಗಿ ಈಗ ಹೇಳಲು ಸಾಧ್ಯವಿಲ್ಲ' ಎಂದು ಉತ್ತರವಿತ್ತಿರು ವರು ಗಾಂಧೀಜಿಯವರು ಉಪವಾಸ ಬಿಡುವಂತಾಗುವುದೋ ಎಂದು ಅವರೊಡನೆ ಕೇಳಿದಾಗ ಅವರು "ಹಾಗೆ ತಿಳಿಸಬಹುದು" ಎಂದು ಹೇಳಿರುವರು

ಗಾಂಧೀಜಿಯವರ ಉಪವಾಸದಿಂದಾಗಿ ದೇಶದಲ್ಲೆಲ್ಲಾ ಹಾಹಾರಕ್ಕೆ ಪ್ರಾರಂಭವಾಗಿದೆ ನಿಮ್ಮಲದ ನ್ಯಾಯವಿಧಾ ಯಕ ಸಭೆಯಲ್ಲಿ ಮಿ! ಮಸ್ಸಾವುದ್ ಅಹಮ್ಮದ್, ಎಂ ಎಲ್ ಎ ಯವರು ಗಾಂಧಿಜಿಯವರ ಅಮರಣಾಂತಿಕ ಉಪವಾಸ ವನ್ನು ಕೈಬಿಕ್ಕಳಿಲು ಕಾರಣವೇನು? ಅವರಿಗೆ ಯಾವ ಅನು ಕೂಲತೆಗಳನ್ನು ಕೊಡಲಾಗಲಿಲ್ಲ? ಅವರಿಂದ ಯಾವುದೆಲ್ಲ ಸ್ವೀಕೃತವಾಗಲಿಲ್ಲ? ಪತ್ರವ್ಯವಹಾರದಲ್ಲಿ ಅವರ ಮೇಲೆ ಯಾವ ನಿರ್ಬಂಧಗಳನ್ನು ಹಾ ಲಾಗಿದೆ? ಅವರ ಕೋಳಿಕೆಗಳೇನು? ಅವರ ಕೋಳಿಕೆಗಳು ಸಂಕಂಬಂದವರಿಗೆ ಏಕೆ ಸ್ವೀಕೃತವಲ್ಲ? "ಎಂದು ಮೊದಲಾಗಿ ಪ್ರಶ್ನೆಯಿಡಲಿರುವರು ಮುಂಬಾಯಿಯಲ್ಲಿ ಇಂಡಿ ಯನ್ ವರ್ಕಿಂಗ್ಸ್ ಜೇಂಟ್ ಕಮಿಟಿಯವರು ಇಂಡಿಯಾ ಸರಕಾರಕ್ಕೂ ಮುಂಬಾಯಿ ಸರಕಾರಕ್ಕೂ ಹಿಂದು ಪ್ರಾರ್ಥನೆ ಯನ್ನು ಕಳುಹಿಸಿ "ಮಹಾತ್ಮಾಗಾಂಧಿಯವರು ಇನ್ನೊಂದು ಅಮರಣಾಂತಿಕ ಉಪವಾಸವನ್ನು ಒಧವಾರದಿಂದ ಮೊದಲು ಗೊಂಡು ಕೈಕೊಂಡಿರುವರೆಂಬುದನ್ನು ಕೇಳಿ, ಈ ಕಮಿಟಿಯು ಸಂತಾಪ ಸೂಚಿಸುತ್ತದೆ ಅವರಿಗೆ ಮೊದಲು ಕೊಡಲ್ಪಟ್ಟಿದ್ದ ಅನುಕೂಲತೆಗಳು ಈಗಲೂ ಕೊಡಲ್ಪಡಬೇಕೆಂದು ನಮ್ಮ ಅಭಿ ಪ್ರಾಯವಿದೆ ಗಾಂಧೀಜಿಯವರಿಗೆ ಬೇಕಾಗುವ ಅನುಕೂ ಲತೆಗಳನ್ನು ಸರಕಾರವು ತಿರಸ್ಕರಿಸುವುದು ಬಿಂದ ಅದು ಭಯಾ ನಕ ಜನವಾಬ್ದಾರಿಕೆಯನ್ನು ತನ್ನ ಹೊತ್ತಂತಾಗುತ್ತದೆ ಕಾನೂನು ನ್ವಯ ಗಳ ನೆವದಿಂದ ಸರಕಾರವು ಗಾಂಧೀಜಿಯವರ ರಕ್ಷಣೆಯ ಜವಾಬ್ದಾರಿಕೆಯನ್ನು ಅಲ್ಲಗಳಯ ಬಾರದೆಂದು ಈ ಸಭೆಯು ಕೇಳಿಕೊಳ್ಳುತ್ತದೆ ಎಂದು ತಿಳುಹಿಸಿರ ವರು

ಸಿ ಎಫ್ ಎಂಡ್ರೂಸರ ಸಾಹಸವು ವಿಫಲಾವಸ್ಥಾಪನ್ನವಾಗಿ ಯಾಗಲಿಕ್ಕಿಲ್ಲವೆಂಬಂಗೆ, ಮಹಾತ್ಮರ ಉಪವಾಸದ ಆಂತ್ಯ ಧಾನದ ವರೆಗೆ ಸರ್ಕಾರವು ಗಾಂಧೀಜಿಯವರ ಕೋಳಿಕೆಗಳಿಗೆ ಒಪ್ಪುವ ಚಿಹ್ನೆಯೂ ರಾಜಕೀಯ ವಾತಾವರಣದಲ್ಲಿ ತೋರಿ ಬರುವುದಿಲ್ಲವೆಂದೂ ಈಗೀಗ ಒಂದ ವಾರ್ತೆಯಿಂದಾಗಿ ಗೂತ್ತಾ ಗಿರುತ್ತದೆ

ಗಾಂಧೀಜಿಯವರು ಅಮರಣಾಂತಿಕ ಉಪವಾಸವನ್ನು ಕೈಕೊಂಡರೆಂದು ತಿಳಿದುಬಂದೊಡನೆ ಅಹ್ಮದಾಬಾದಿನ ಸರಯು ಲ್ಲಿನುವ ಶ್ರೀಮತಿ ಕಸ್ತೂರಿಬಾಯಿಯವರೂ ಅವರಂತೆ ಉಪ ವಾಸ ವ್ರತವನ್ನಾಚರಿಸಿರುವರೆಂದೂ, ಗಾಂಧೀಜಿಯವರು ಅನ್ನಾ ಹಾರಗಳನ್ನು ಸ್ವೀಕರಿಸದ ತನಕ ತಾನೂ ಸ್ವೀಕರಿಸಲಾನೆಂದು ಅವರು ಹೇಳಿರುವಂಗಿಯೂ ಪ್ರಕಟವಾಯಿತು ಈಗೀಗ ಒಂದ ವಾರ್ತೆಯಿಂದ ಈ ಸದ್ದಿಯು ಸುಳ್ಳುಂಬುದಾಗಿ ಒಂದು ಕಡೆ ಯಿಂದ ವರ್ತಮಾನ ಬಂದಿದೆ ಶ್ರೀಮತಿಯವರು ನಿತ್ಯದಂತೆ ಆನ್ನಾಹಾರವನ್ನು ಸ್ವೀಕರಿಸುತ್ತಿರುವರೆಂದೂ ಅವರ ಕುಮಾರ್ತಿ ಯಲ್ಲಿರುವ ಸ್ತ್ರೀಯೋರ್ವಳು ಅಂತಹ ವಾರ್ತೆಯು ಸುಳ್ಳುಂದು, ಹೇಳಿರುವಂಗಾಗಿಯೂ ವಾರ್ತೆಯಿದೆ

ಮಹಾತ್ಮಾಗಾಂಧಿಯವರ ಉಪವಾಸದ ಸಂಬಂಧವಾಗಿ ದೇಶದ ಹಲವೆಡೆಗಳಲ್ಲಿ ಸಾರ್ವಜನಿಕ ಸಭೆಗಳಾಗಿ ಅವರಿಗೆ ಅನು ಕೂಲತೆಗಳನ್ನು ಕೊಡಬೇಕಾಗಿ ರರಾವುಗಳಾಗುತ್ತಿವೆ ಕೆಲ ವೆಡೆಗಳಲ್ಲಿ ವೈಯಕ್ತಿಕ ಕಾಯದೆಧೋಗ ಚಳವಳಿಗಳಾಗುತ್ತಿದೆ

(ಮುಂದಿನ ಪುಟದಲ್ಲಿ ದಿನದ ಪುಟವನ್ನು ನೋಡುವುದು)

ಉಕ್ಕಿ ಉಕ್ಕಿ ಬರುವ ಕೆಮ್ಮಿಗೆ 'ಕೂ-ಕೂಮಿನ್' ಎಬ್ಬಿಡು ರಾಮಬಾಣ!

ಉಕ್ಕಿ ಉಕ್ಕಿ ಬರುವ ಕೆಮ್ಮಿಗೂ, ಉಕ್ಕಿ ಉಕ್ಕಿ ಬರುವ ಕೆಮ್ಮಿನ ಪರಿಣಾಮವಾಗಿ ಉಂಟಾಗುವ ನಿಶೋನಿಯಾ, ಕ್ಷಯ ಮೊದಲಾದ ರೋಗಗಳ ಪ್ರಭಾತದಿಂದಲೂ ನಿಮ್ಮ ಮಕ್ಕಳನ್ನು ಈ ಔಷಧ ಕೊಟ್ಟು ರಕ್ಷಿಸಿರಿ!



ಸಾವಿರಾರು ಮಕ್ಕಳನ್ನು ಈ ಔಷಧಿಯು ಇಂತಹ ಕೆಟ್ಟ ಕೆಮ್ಮಿನಿಂದ ಪಾರುಮಾಡಿಯಿದೆ. ಮಹದಪಾಯ ಕರವಾದ ಈ ರೋಗವಿನಿಂದ ಹಾರ್ಥವಾಗಿ ಮದ್ರಾಸ್ ಮತ್ತು ಇನ್ನಿತರ ದೊಡ್ಡ ದೊಡ್ಡ ಪಟ್ಟಣಗಳ ಡಾಕ್ಟರರು ಈ ದಿವ್ಯೌಷಧವನ್ನೇ ಪ್ರಯೋಗಿಸುತ್ತಾರೆ.

ಉಕ್ಕಿ ಉಕ್ಕಿ ಬರುವ ಕೆಮ್ಮುಗಳೆಲ್ಲವೂ ನೆಗಡಿ ಮೊದಲಾದ್ದರಿಂದ ಉಂಟಾಗುವ ಉಕ್ಕಿ ಉಕ್ಕಿ ಬರುವ ಕೆಮ್ಮುಗಳಿಗೆ, 'ಕೂ ಕೂಮಿನ್' ಇದು ದಿವ್ಯೌಷಧವಾಗಿದೆ ಕ್ರಯ 1-8-0

ಮುದ್ರಾಸಿನಲ್ಲಿ ದಿ ಒರಿಯಂಟಲ್ ರಿಸರ್ಚ್ ಲೆಬೊರೆಟರಿಯವರಿಂದ ಸಿದ್ಧವಾದುದು

ದಕ್ಷಿಣ ಕನ್ನಡ ಜಿಲ್ಲಾ ಸೋಲ್ ಏಜೆಂಟ್ಸ್—

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಷನ್ ಲಿಮಿಟೆಡ್, ರಥಬೀದಿ, ಮಂಗಳೂರು

WANTED.

Four Organisers to organise the work of the South Indian General Assurance Society, Ltd, in the following places noted below. Capable organisers can expect to have attractive and encouraging terms with sound footing for their future

(1) South Canara, (2) Mysore, Hassan and Coorg, (3) Kadur Shimoga, Chitaldroog and Tumkur (4) Mangalore, Kolar.

For terms and other particulars please apply to—

The Divisional Manager,
The South Indian General Assurance Co Ltd
64 3rd Cross Road Srirampur Extn
Malleswaram Post, BANGALORE

OR

The Managing Agents,
The S I G A Co Ltd.
55 Poonamallee High Road, Kilpauk, MADRAS.

ಬೇಕಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಊರುಗಳಲ್ಲಿ ಆಮೇರಿಕನ್ ಚಿಮ್ನಿ ಎಣ್ಣೆ (Kerosene Oil) ಮೊದಲಾದುವನ್ನು ಮಾರಲು ಏಜೆಂಟರು ಬೇಕಾಗಿದ್ದಾರೆ. ಅತ್ಯುತ್ತಮ ಕರದ ಎಣ್ಣೆ—150 ಡಿಗ್ರಿ ಫಯರ್ ಟೆಸ್ಟ್ (150 degrees Fire test)

ಏಜೆಂಟರಾಗುವವರಿಗೆ ಉದಾರ ಶರ್ತಗಳು—ಕೈ ತುಂಬಾ ಲಾಭ ಸ್ವಲ್ಪ ನಗದಿ ಜಾಮೀನನ್ನು ಕೊಡಲೆಪ್ಪುವವರು ಮಾತ್ರ ಕೆಳಗಿನ ವಿಳಾಸಕ್ಕೆ ಕೂಡಲೇ ಬರೆಯಿರಿ ಇದೀಗಲೇ ಕೆಲವು ಏಜೆನ್ಸಿಗಳು ತುಂಬಿವೆ

ವಿಳಾಸ:— **T. Madhava Pai,**
Court Road, KASARGOD, S K

ಕೊಪ್ಪರಕೊಬ್ಬರಿ ಸೊಸೈಟಿಗಳಿಗೆ

ಬೇಕಾದ ನಮೂನೆಯ ಎಲ್ಲಾ ವಿಧದ ಫಾರಂಗಳು, ರಿಜಿಸ್ಟ್ರಿಗಳು, ರಸೀದಿ ಪುಸ್ತಕಗಳು ಮತ್ತು ಇತರ ಫಾರಂಗಳೂ ಮುದ್ರಿಸಲ್ಪಡುವವು.

ದಿ ಮಂಗಳೂರು ಪ್ರೇಡಿಂಗ್ ಎಸೋಸಿಯೇಷನ

ತಾ. ೨೪ಕ್ಕೆ ಬುಧವಾರ ಹಬ್ಬದ ಸಮಾರಂಭವಾಗಿ ಇಲ್ಲಿನ ಟೋರ್ಡ್ ಹೈಸ್ಕೂಲಿನ ಅಧ್ಯಾಪಕವರ್ಗದವರಿಗೂ ೫ನೇ ವಿಜ್. ದೇವರಾಯ ಬಿ. ಎ., ಎಲ್. ಟಿ. ಯವರು ಸುಮಾರು ೬೯ ಮಂದಿ ಹರಿಜನ ವಿದ್ಯಾರ್ಥಿ ಮತ್ತು ಅಪರಂಗಲರಿಗೆ ಸಂತರ್ಪಣೆಯನ್ನು ಮಾಡಿಸಿದ್ದರು; ೫ನೇ ಗಣಪತಿ ಪ್ರೌಢಶಾಲೆ ಸೈನೇದ್ದದ ಎಲ್ಲಾ ಭಕ್ಷ್ಯಭೋಜ್ಯ ಖಂಡಿಗೆಲ್ಲವೂ ಧಂಪತಿ ಗಳೇಪರಿಂದಲೇ ಹರಿಜನ ಬಾಂಧುಗಳಿಗೆ ಸಂತುಪ್ತಿಯನಿಸುವಷ್ಟು ಬಡಿ ಸಿದ್ದರಲ್ಲದೆ ಕಿಂಚಿತ್ತು ದಕ್ಷಿಣೆಯನ್ನೂ ಇತ್ತರು. ಸುರುವಿನೆಲ್ಲೂ ೪೦ ಮುಂದಿ ಇತರ ಹರಿಜನರಿಗೂ ಭೋಜನವು ಇವರಿಂದಲೇ ಈಯಲಾಯಿತು. ಇವೀಗ ಅದರ್ಶನೀಯ ಹರಿಜನ ಸೇವೆಯಪ್ಪ!

ತಾ. ೨೬ಕ್ಕೆ ನಾಳ್ಕೆಯು ಮಜಲಾಲ್ಲಾ ಬಂಧುಗಳು ಸುರಿಯನ್ನು ಹದ ವಿಸಾಯಿಂ ಸೇವಿಸಿರುತ್ತಾ ಕುಂಬಳೆಯಿಲ್ಲಿ, ಕಲ್ಲಂಸಂಕ, ಸಂತೆಪೇಟೆ ಪರಾಗಲ್ಲಿ ಬಡಿಳ ದುಂಡಲೆ ವಾಡಿದರಾಗಿ, ಅದರಲ್ಲೂ ಸಂತೆಪೇಟೆ, ಹತ್ತಿರ ಸೋಡಾ ಬಟ್ಟಲಿಯಿಂದಲೂ ಸಹ ಹೊಡೆವಾಡಿಕೊಳ್ಳುವುದಪನ್ನು ಇಲ್ಲಿನ ಮ್ಯಾ ನೈಜರಿ ಸಜ್ ಮೇಜಸ್ಟೈಟರೇ ಸ್ವತಃ ಕಂಡದ್ದರಿಂದ ಸದ್ರಿ ಆಪಾದಿತರು ಕಾಡಲೇ ಕೈದು ಮಾಡಲ್ಪಟ್ಟು ಲೊಕಪ್ಪಿನಲ್ಲಿದ ಪ್ಪರು. ತಾ. ೩ಕ್ಕೆ ಇವರ ಕಟ್ಟೀರು ವಿಚಾರಣೆಯಾಗಿ, ಆಪಾದಿತರು ತಪ್ಪನ್ನು ಒಪ್ಪಿಕೊಂಡು ಪಶ್ಚಾತ್ತಾಪ ಪ್ರಕಟಿಸಿದರಾಗಿ, ಒಂದೊಂದು ರೂಪ್ಯಾಯಂತೆ ವಿಧಿಸಲಾದ ಜುರುಮಾನೆಯನ್ನು ತೆತ್ತು ಬಿಡುಗಡೆ ಯಾದರು. ಇನ್ನಾದರೂ ಸುಂಬಾವಾ ಮಾಡತಕ್ಕವರು ಜಾಕರೂಕರಾಗಿ ಜನತೆಗೆ ಆಸಹ್ಯ ವನ್ನು ತೊಂದರೆಯಾಗದ ರೀತಿ ವರ್ತಿಸಲಿ.

ಬೆಳ್ತಂಗಡಿ:—ತಾ ೫-೯-೩೩ನೇ ಸಾಯಂಕಾಲ ಘಂಟೆ ೭ಕ್ಕೆ ಬೆಳ್ತಂಗಡಿ ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ "ಆಯ್ಕೆ ಸಂತಾನದ ಮನುದೆಯ ಕುಂತು ಚರ್ಚಿಸಿ ಇತ್ಯರ್ಥಿಸುವ ಬಗ್ಗೆ ಆಯ್ಕೆ ಕಟ್ಟಸ್ಥಾಚರಿಸುವ ಎಲ್ಲಾ ಜಾತೀಯರ ಸಭೆಯೊಂದು ಜರಗಲಿರುವುದು.

WANTED

A travelling (Saraswat) agent to visit all important towns in Madras Presidency where Saraswats reside and to collect information for All India Saraswat Directory. Apply to:—Manager, Saraswat Agency, Jiji House, 17 Ravelin St. Bombay 1.

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದ. ಕನ್ನಡ).

ಇವರಿಂದ ತಯಾರಿಸಲ್ಪಟ್ಟು, ಕುಂಭಕೋಣದಲ್ಲಿಯೂ ಮಧುರೆಯಲ್ಲಿಯೂ ನಡೆದ ಅಖಿಲ ಭಾರತ ನಸ್ತು ಪ್ರದರ್ಶನಗಳಲ್ಲಿ ಸುವರ್ಣ ಪದಕಗಳನ್ನು ಪಡೆದಿರುವ "ಕರ್ನಾಟಕ"

ದ್ರಾಕ್ಷಾಸವ, ಬ್ರಿಸ್ಟಂಟಾನ್ ೧೦ಕ್ಸ್,
ಟೈವನಪ್ರಾಶ, ಸ್ನೋ, ಸೋಪ್ಸ್

ಇವುಗಳನ್ನೇ ಉಪಯೋಗಿಸಿರಿ.

ಸಚ್ಛಿಮ ಕರಾವಳಿ ಮತ್ತು ಮೈಸೂರು ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು:—

ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕಂಪೆನಿ, ಮಂಗಳೂರು.

Managing Director:—**Venkatraya Annappa Baliga**

ಮಹಾತ್ಮರ ಉಪವಾಸದ ಪರಿಣಾಮವೇನು?!!

ಇತ್ತೀಚೆಗೆ ಮಹಾತ್ಮಾ ಗಾಂಧಿಯವರ ಆಶಯಗಳು ಬಹುಸಂಖ್ಯಾತ ರಾಷ್ಟ್ರೀಯವಾದಿಗಳಿಂದ ಅನುಮೋದಿತವಾಗುವುದಿಲ್ಲ, ಅವರ ಅಗಾಧವಾದ ಅಧ್ಯಾತ್ಮಿಕ, ನೈತಿಕ ವಿಚಾರಗಳ ಅರಿವು ಹೆಚ್ಚಿನವರಿಗಾಗುವುದಿಲ್ಲ. ಈಗಿನ ಮಹಾತ್ಮರು ಜನ ಸಾಮಾನ್ಯದ ತಿಳುವಳಿಕೆಯನ್ನು ವಿಪರೀತ ನೈತಿಕ ವಿಚಾರಕ್ಕೆ ಗುರಿಯಾಡುತ್ತಿರುವುದರಿಂದ ಅವರ ಹಿಂಬಾಲಕರು ದಾರಿಗಾಣದ ಪಥಿಕರಂತೆ ಬಳಲುತ್ತಿರುವರು.

ಮಹಾತ್ಮಾಜೀಯವರು ರಾಷ್ಟ್ರದ ಹೇಳಿಕೆಯನ್ನೂ ಅಲ್ಲಲ್ಲಿ ಗಳಲ್ಲಿ ಕಾಯಿದೆಗಳಾಗಿ ಚಳವಳಿಯನ್ನು ಮುಂದೊತ್ತಿರುವುದೂ ಎರಡು ಮೂರು ಲಕ್ಷ ರೂಪಾಯಿ ಬೆಲೆ ಬಾಳುವ ಆಶ್ರಮವನ್ನು ನಿಷ್ಕೇಪಗೊಳಿಸುವುದೂ ಹೆಚ್ಚಿನ ಜನರನ್ನು ಸಂತೋಷಗೊಳಿಸಿರುವುದಿಲ್ಲ. ಆದರಲ್ಲೂ ಗಾಂಧೀಯವರೂ ಶ್ರೀ ಅಣೆಯವರೂ ಒಟ್ಟು ಗೂಡಿ ಕೊಂಗ್ರೆಸ್ ಸಂಸ್ಥೆಗಳನ್ನೇ ರದ್ದುಗೊಳಿಸಿದುದು ಜನತೆಯ ದಿಗ್ಭ್ರಮೆಗೆ ಮತ್ತಷ್ಟು ಕಾರಣೀಭೂತವಾಗಿದೆ. ಹೀಗಿದ್ದರೂ ಮಹಾತ್ಮರು ಮಹಾತ್ಮರೇ!

ಎಲ್ಲಿ ಅಸತ್ಯದ ವಾಸನೆ ಇದೆಯೋ ಅಲ್ಲಿ ಮಹಾತ್ಮರಿಲ್ಲ. ಎಲ್ಲಿ ಹಿಂಸೆಯ ದುರ್ಗಂಧವಿದೆಯೋ ಅಲ್ಲಿ ಗಾಂಧೀಯವರಿಲ್ಲ. ಎಲ್ಲಿ ನೀತಿಯು ನೆಲೆತಪ್ಪಿತೊ ಅಲ್ಲಿ ಅವರ ಸುಳಿವಿಲ್ಲ. ಸ್ವದೇಶಾ, ಸ್ವದಾಂಧವ ವಿಚಾರ ಸ್ವರಾಷ್ಟ್ರ ವಿಚಾರದಲ್ಲೂ ಅವರು ಇದೇ ಸೂತ್ರವನ್ನನುಧಮಿಸುತ್ತಿರುವರು.

ಬಾಪೋಜೀಯವರು ಎಷ್ಟು ಸರಳರೋ ಅಷ್ಟು ದೂರದೃಷ್ಟಿ ಗಳು. ಅವರು ಎಷ್ಟು ಅದ್ವಿತೀಯರೋ ಅಷ್ಟು ಶತ್ರುರು. ಎಷ್ಟು ಸತ್ಯಾಗ್ರಹಿಗಳೋ ಅಷ್ಟು ಸಾಹಸಿಗರು.—ಗುಣಾಢ್ಯರು.

ಮಹಾತ್ಮರ ಕಾಯಿದೆಭಂಗ ಚಳವಳವು ಅಪಯಶಸ್ವಿ ಯಾಯಿತೆಂದು ಟೀಕಿಸುವವರ ಸಂಖೆಯು ದಿನೇದಿನೇ ಹೆಚ್ಚಾಗುತ್ತಿದೆ. ಅದರ ಪ್ರಯೋಜನದ ಅರಿವನ್ನು ಮಾಡಿಕೊಳ್ಳುವುದು ಈಗೀಗ ಕಷ್ಟವಾಗುವುದು. ರಾಷ್ಟ್ರ ಸಂಘಟನೆಯ ಕೆಲಸದಲ್ಲಿ ಅವರ ಚಳವಳವು ಅಪಯಶಸ್ಸನ್ನು ಹೊಂದಿತೆಂದು ಒಪ್ಪಿದರೂ, ರಾಷ್ಟ್ರದ ಆರ್ಥಿಕಲ್ಲಾದ ಸಾಮಾನ್ಯ ಜನರನ್ನೂ ತರುಣರನ್ನೂ ಅದು ಯಾವ ವಾಗರ್ಗಕ್ಕೆಳೆಯುತೆಂದೂ, ಸ್ವಾತಂತ್ರ್ಯ ಪ್ರೇಮದ ದೃಷ್ಟಿಯಿಂದ ಅದು ಎಷ್ಟೊಂದು ವಿಚಿತ್ರ ಕೆಲಸಗಳನ್ನು ನೆರವೇರಿಸಿತೆಂದೂ ತಿಳಿದರೆ ಕಾಯಿದೆಭಂಗ ತತ್ವ ದಲ್ಲಿ ಏನೋ ಗೂಢಾರ್ಥವಡಗಿದೆಯೆಂದು ತಿಳಿಯಬಹುದು.

ಹಿಂದೂಸ್ಥಾನದ ಸ್ವಾತಂತ್ರ್ಯ ಸಮರ ಕಾರ್ಯದಲ್ಲಿ ಮಹಾತ್ಮರ ಕಾಯಿದೆಭಂಗ ಚಳವಳವಾಗಲೀ, ಅವರ ಸಾಹಸ ವಾಗಲೀ ಇವ್ಹರ ತನಕ ಬಲೇ ಪ್ರಥಮ ಸೋಪಾನವೆಂದೇ ತಿಳಿಯ ತಕ್ಕುದು. ಸ್ವಾತಂತ್ರ್ಯ ಲಾಭವು ಇಂದು ನಾಳೆಯಾಗುವ ದೆಂಬ ವಿಷಯವು ಎಷ್ಟು ಅಸಾಧ್ಯವಿಕವಾಗಿದೆಯೋ ಅಷ್ಟು ಹಾಸ್ಯಜನಕವಾಗಿದೆ. ಮಹಾತ್ಮರ ಪ್ರಾಣ ಬಲಿಯಿಂದಾಗಿಯೋ ಅಥವಾ ರಾಷ್ಟ್ರಪುರುಷರ ದೇಹಾರ್ಪಣೆಗಳಿಂದಲೋ ಅಥವಾ ಲಿಬರಲ್ ಪಕ್ಷೀಯರ ಬೆದಾರ್ಯದ ಕೊಡುಗೈಯ ಸಹಾಯ ದಿಂದಲೋ ಅಥವಾ ಬ್ರಿಟಿಷರ ಚಕ್ರಗೋಪ್ಯಿಗಳಿಂದಲೋ ಹಿಂದೂ ಸ್ಥಾನವು ಸ್ವಾತಂತ್ರ್ಯ ಸಂಪಾದನೆಯನ್ನು ಮಾಡುವುದೆಂಬ ಭ್ರಮೆಯು ಎಂದೂ ನಂಬತಕ್ಕದ್ದಲ್ಲ. ಹೀಗೂ ಸಂಪಾದನೆ ಮಾಡಿ ದರೂ ಅಂತಹ ಸ್ವಾತಂತ್ರ್ಯವು ಎಷ್ಟು ಮಾತ್ರಕ್ಕೂ ಸ್ಥಿರವಲ್ಲ. ಹಿಂದೂದೇಶವು ಉನ್ನತಿಯನ್ನು ಹೊಂದಬೇಕಾದರೆ ಇನ್ನೂ ಎಷ್ಟೋ ಶತಮಾನಗಳವೆ. ಅಷ್ಟು ಶತಮಾನಗಳ ಹಾದಿಯನ್ನು ಹಿಂದೀಯರು ನಡೆಯದ ವಿನಹ ಅದು ಎಂದೂ ಲಭ್ಯವಲ್ಲ. ಗಾಂಧೀಜೀಯವರು ನಿದ್ರಿಸಿದವರನ್ನು ಎಚ್ಚರಿಸಿದರು. ಕರ್ತವ್ಯ ಪರಂಪರೆಗಳೇನೆಂಬುದನ್ನು ಜನತೆಗೆ ದೋಧಿಸಿದರು. ಸರಕಾರ, ರಾಜ್ಯವೆಂದರೇನೆಂಬ ವಿಚಾರವನ್ನು ತಿಳಿವಿನ ಪ್ರತಿಯೊಬ್ಬ ಮನುಷ್ಯನಿಗೂ ತಿಳಿಸಿಹೇಳಿದರು. ತನ್ನ ನೈತಿಕ ಬಲ ಪ್ರಕಾಶ ದಿಂದ ಇಡೀ ಧರೆಯನ್ನೇ ಬೆಕ್ಕಸಗೊಯ್ದರು. ಸತ್ಯದ ಶಕ್ತಿಯನ್ನು ತೋರಿಸಿದರು. ನಿರ್ಬಲ ಜನತಾಂಗವು ಅಹಿಂಸಾ ವ್ರತ ಧಾರಣೆ ಮಾಡಿ ಹೇಗೆ ಲೋಕಕ್ಕೆ ಆದರ್ಶಪ್ರಾಯ ವಾಗಬಹುದೆಂಬುದನ್ನು ಅವರು ಸರ್ವತೋಮುಖವಾಗಿ ಸಾರಿ ದರು. ಅವರ ಮೌನ ಆತ್ಮದ ಶಕ್ತಿಯು ಅಂತಹುದು.

ಕೊಂಗ್ರೆಸ್ ಸಂಸ್ಥೆಗಳಲ್ಲಾ ರಹಸ್ಯ ತತ್ವಗಳ ಮಂದಿರಗಳಾ ದುವು. ಜವಾಬ್ದಾರೀ ಮುಂದಾಳುಗಳು ಸೆರೆಗಳನ್ನು ಸೇರಿ ದೊಡನೆ ಹಿಂದುಳಿದ ತರುಣರು ಸ್ವಾಧಾವಿಕವಾಗಿ ದಾರಿ ತಪ್ಪಿ ನಡೆದರು. ಅಂತೂ ನೈತಿಕ ಸಂಘವೆಂದೆನಿಸಲ್ಪಟ್ಟಿದ್ದ ಕೊಂಗ್ರೆ ಸಿನ ಗೌರವವು ಕಡಿಮೆಯಾಯಿತು. ಇದನ್ನು ಗಾಂಧೀಜೀ ಯವರು ಕಂಡರುಸಲಿತರು. ಒಡನೆ "ಸಾವಿರ ಜನ ಅವಿ ವೇಕಿಗಳಿಗಿಂತ ಇಬ್ಬರು ವಿವೇಕಿಗಳು ನನಗೆ ದೊರೆತರೆ ಸಾಕು" ಎಂದು ನಿರ್ಧರಿಸಿ ಕೊಂಗ್ರೆಸ್ ಸಂಸ್ಥೆಗಳನ್ನು ರದ್ದುಗೊಳಿಸಿದರು. ಸಮಸ್ತ ಹಿಂದೂಸ್ಥಾನದೇ ಅವರಕ್ಷೆಯಲ್ಲಿರುವಂತೆ ಅವರು ತನ್ನ ನಿಷ್ಕೇಪಣೆಯನ್ನು ಕಾರ್ಯತಃ ಕೊನೆಗಾಣಿಸಿದರು. ಅವರ ಧರ್ಮಪ್ರೇಮಕ್ಕತಿಶಯವಾದ ಸಹನೆ, ಸ್ಥಿರಬುದ್ಧಿ, ಅಪಾರ ಧೈರ್ಯವು ಅ ರೀತಿಯದು.

ಬಾಪೋಜೀಯವರಿಗೆ ಆತ್ಮಶಕ್ತಿಯ ಬೆಲೆಯು ಚೆನ್ನಾಗಿ ಗೊತ್ತು. ಮೊದಲು ಅಂತರಾತ್ಮನನ್ನು ಶುದ್ಧಿಗೊಳಿಸಿದರೆ ಬಾಹ್ಯ ಪ್ರಪಂಚವು ಅದಕ್ಕೆ ಸ್ವಾಧಾವಿಕವಾಗಿಯೇ ತಲೆಬಗ್ಗಿಸುವುದೆಂದು ಅವರು ಚಿಕ್ಕಂದಿನಿಂದಲೂ ಅನುಭವಪೂರ್ವಕ ಅರಿತ ತತ್ವಜ್ಞಾನ. ದೊರೆತನವು ನ್ಯಾಯದಲ್ಲಿ ತಪ್ಪಿ ನಡೆದರೆ ಅದನ್ನು ಆತ್ಮಶಕ್ತಿಯಿಂದಲೇ ಸದ್ಧಾರಿಗೆಳೆಯುವೆನೆಂದು ಮಹಾತ್ಮರಿಗೆ ಚೆನ್ನಾಗಿ ತಿಳಿದಿದೆ. ಅವರ ಉಪವಾಸಗಳು ಅಂತಹ ಆತ್ಮ ಶಕ್ತಿಯ ಪ್ರತಿಬಿಂಬವಾಗಿರುತ್ತವೆ.

ಮಹಾತ್ಮರ ಉಪವಾಸವೆಂದರೆ ಮಹಾ ತಪಸ್ಸು. ಅಂದಿನ ಹಿರಿಯರು ಮಹಾ ತಪಸ್ಸುಗಳಾಗಿ ಸ್ವೋನ್ನತಿ ಪರೋನ್ನತಿಗಳನ್ನು ಮಾಡಿದ್ದರೆ ಇಂದಿನ ಬಾಪೋಜೀಯವರು ಉಗ್ರತಪಸ್ಸುಗಳಾಗಿ ದೇಶ ವಿದೇಶಗಳ ಉನ್ನತಿಯನ್ನು ಸಾಧಿಸುತ್ತಿರುವರೂ. ಅಂದಿನ ಮುನಿಗಳು ದಂಡಕಮಂಡಲವನ್ನು ತೊಟ್ಟು ಊರೂರು ಅಲೆದು ಧರ್ಮ ಸಂಸ್ಥಾಪನೆಯನ್ನು ಮಾಡಿದರಾದರೆ, ಇಂದಿನ ಗಾಂಧಿ ಯವರು ಲಂಗೋಟಿಯುಟ್ಟು ಕೂರಿ ಮಿಲಿಯ ಜನರನ್ನೂ ಅವರ ಅರವೆರನ್ನೂ ರಕ್ಷಿಸಹೊರಟ ಧರ್ಮ ಸಾಮ್ರಾಜ್ಯಾಚಾರ್ಯರು. ಅಂದಿನ ಮುನಿಗಳು ಸ್ವತತ್ಕೋದ್ಧಾರಕ್ಕಾಗಿ ಉಪವಾಸ ಮಾಡಿ ದ್ದರೆ ಇಂದಿನ ಗಾಂಧಿಯವರು ಅನ್ಯರ ಅನ್ಯಾಯಕ್ಕಾಗಿ ನಿರಶನ ವ್ರತವನ್ನು ಕೈಕೊಳ್ಳುವವರು.

ತನ್ನದೇ ಆದ ಕೊಂಗ್ರೆಸ್ಸಿನ ಸುತ್ತಮುತ್ತಲಿನ ವಾತಾ ವರಣವು ದುಷ್ಟವಾದೊಡನೆ ಅವರು ಸ್ವಾತ್ಮ ಪರಾತ್ಮಗಳ ಪರಿ ಶುದ್ಧಿಗಾಗಿ ಏಳು ದಿನಗಳ ಉಪವಾಸವನ್ನಾರಂಭಿಸಿ ಯಶಸ್ವಿಗಳಾ ದರು—ಸಂಪ್ರದಾಯವಾದಿಗಳ ಮುಚ್ಚಿದ ಕಣ್ಣನ್ನು ತೆರೆದು ಅಸ್ಪೃಶ್ಯತೆಯ ಸರ್ವದ ಮರ್ದನಕ್ಕೆ ತೊಡಗಿದರು. ಸರಕಾರವು ತನಗೆ ಹಿರಿಜನ ಸೇವಾರ್ಥವಾಗಿ ಯೋಗ್ಯ ಸೌಲಭ್ಯಗಳನ್ನೊದ ಗಿಸಿ ಕೊಡದಿದ್ದುದಕ್ಕೆ ನ್ಯಾಯ ಸಾಧನೆಗಾಗಿ ಪುನಃ ಅಮರ ಶಾಂತಿಕ ಉಪವಾಸವನ್ನಾರಂಭಿಸಿ ತನ್ನ ಹುಟ್ಟಲ್ಲಿ ಗೆದ್ದರು.

ಮಹಾತ್ಮರ ಕಾರ್ಯವು ಎಂದು ಮತ್ತು ಹೇಗೆ ಕೊನೆ ಗೊಂಡೀತೆಂದು ಹೇಳಬರುವುದಿಲ್ಲ. ಇತ್ತಿತ್ತಲಾಗೆ ಒಂದರ ಹಿಂದೆ ಅವರ ಸಾಹಸವು ಮೂಡತೊಡಗಿದೆ. ರಾಜಕೀಯವನ್ನೂ, ಧರ್ಮ ಸಂಸ್ಥಾಪನೆಯನ್ನೂ ಬಂಧುಗೊಳಿಸಿ ಬಹಳ ಸಾಹಸ ಪೂರ್ವಕ ಕೆಲಸಕ್ಕೆ ಅವರು ತೊಡಗಿರುತ್ತಾರೆ.

ಅವರ ಉಪವಾಸದಿಂದ ಜನತೆಗೆ ಗೊಚರವಾಗುವ ಯಾವ ಕಾಶ್ವತ ಪ್ರಯೋಜನವೂ ಆಗಿರುವುದಿಲ್ಲವಾದರೂ ಅದರ ಸಂಪೂರ್ಣ ಫಲವು ಅವರ ದಿನಗಳೊಳಗೆ ಹೊರ ಬೀಳದಿರಲಾರದು. ಅಸ್ಪೃಶ್ಯತಾ ನಿವಾರಣೆಯಂತೂ ಅದಮ್ಯ ಧೃರ ದಿಂದಾಗುವುದೆಂಬುದಕ್ಕೆ ಸಂಧೇಹವಿರುವುದಿಲ್ಲ. ಸ್ವದೇಶಿ ಪ್ರಚಾರವೂ ಅದರೊಡನೆ ನಡೆದೇ ನಡೆಯುವುದು. ಇನ್ನು ಹಿಂದೂ ಮುಸಲ್ಮಾನ ವಿಕ್ಯವೂ ಕೂಡಾ ಅವರ ಉಪವಾಸದ ಪರಿಣಾಮವಾಗಿಯೇ ಆಗುವುದೆಂಬುದಕ್ಕೂ ರಾಜಕೀಯದಲ್ಲಿ ನಿದರ್ಶನಗಳವೆ.

ನೊನ್ನೆ ಮಹಾತ್ಮಾ ಗಾಂಧಿಯವರು ಅಶ್ರಮವನ್ನು ರದ್ದು ಗೊಳಿಸಿ ಕಾರಾಗ್ರಹವನ್ನು ಸೇರಿದಾಗ ಅವರು ಇಷ್ಟು ಬೇಗನೇ ಹೊರಬಂದು ಪುನಃ ನಾಡನ್ನೆಚ್ಚರಿಸುವರೆಂದು ಯಾರು ಊಹಿ ಸಿದ್ದರು? ಅವರು ಹೇಳಿರುವಂತೆ God's ways are inscrutable" ಹಿಂದೂಸ್ಥಾನದ ಅದೃಷ್ಟ ದೇವತೆಯು ಮಹಾ ತ್ಮರ ಮೂಲಕ ಕೂರಿ ಮಿಲಿಯ ಜನರ ಧವಿಷ್ಯತ್ತನ್ನು ರೂಪಿಸುವಂತೆ ತೋರುತ್ತದೆ.

ಮಹಾತ್ಮಾ ಗಾಂಧಿಯವರ ಆರೋಗ್ಯವು ದಿನೇ ದಿನೇ ವೃದ್ಧಿಯಾಗುತ್ತಿದೆಂದು ತಿಳಿದು ಬಂದಿದೆ. ಅವರು ಹಾಲನ್ನು ಕುಡಿಯುತ್ತಿರುವರು. ಸರಕಾರ ಮತ್ತು ಗಾಂಧಿಗಳೊಳಗೆ ನಿನೋ ಪತ್ರವ್ಯವಹಾರವು ನಡೆಯುತ್ತಿದೆಯೆಂದೂ, ಮಹಾತ್ಮರ ಒಬ್ಬ ಬ್ರಿಟಿಷ ಮಿತ್ರರು ಕೊಂಗ್ರೆಸ್ಸು—ಸರಕಾರಗಳೊಳಗೆ ಏನಾ ದರೊಂದು ಐಕ್ಯತಾ ಶಾಂತಿಸ್ಥಾಪನೆಯನ್ನು ಮಾಡಲು ಯತ್ನಿ ಸುತ್ತಿರುವರಿಯುವ ತಿಳಿದು ಬಂದಿದೆ.

ವೈಸರಾಯರ ಭಾಷಣ

ತಾ. ೨೦ನೇ ದಿನ ವೈಸರಾಯರಾದ ಲೋರ್ಡ್ ವಿಲ್ಲಿಂಗ್ಡನ್ ರಿಗೂ ಅವರ ಪತ್ನಿಯವರಿಗೂ ಸಿಮ್ಲಾದಲ್ಲಿ ಎಷ್ಟೊಂದು ಮೆಂಬರ್ ರಾದ ಸರ್. ಆರ್. ಕೆ. ಷಣ್ಮುಗಂ ಚೆಟ್ಟಿಯವರು ಒಂದು ವೆಳ್ಳಿ ಮುಟ್ಟಿನ ಒಂದ ಪ್ರೀತಿ ಭೋಜನವನ್ನು ಕೊಟ್ಟರು. ಇದಕ್ಕೆ ಸ್ಥಳಲೂ ಹೆಚ್ಚು ಮಂದಿ ಅತಿಥಿಗಳಿದ್ದರು. ಲೋರ್ಡ್ ವಿಲ್ಲಿಂಗ್ಡನ್ನರನ್ನು ಬಾಯಿ ತುಂಬಾ ಹೊಗಳಿದ ನಂತರ ಚೆಟ್ಟಿ ಯಾರು ಕುಳಿತರು. ಆ ಮೇಲೆ ವೈಸರಾಯರ ಧಾರಣ ವಾಯಿತು. ಪೀಠಿಕೆ ಮೊದಲಾದುವನ್ನು ಚೆನ್ನಾಗಿ ಹೊದೆಸಿ ವೈಸರಾಯರು ಗಾಂಧಿಯ ಚಳವಳ ಕುರಿತಾಗಿ ಎರಡು ಮಾತುಗಳನ್ನಾಡಿದರು. ಅವರು ಹೇಳಿದೆದೇನೆಂದರೆ:—"ನಾನು ಇಪ್ಪತ್ತು ವರ್ಷಗಳ ಮೊದಲು ಹಿಂದೂಸ್ಥಾನಕ್ಕೆ ಬಂದಿದ್ದೆ; ಆಗಿನ ಸೊಬಗೇನು? ದೇಶದಲ್ಲಿ ಶಾಂತಿ ಯೇನು? ಜನರ ಸುಖವೇನು? ಆಗ ಗೋಖಲೆ ಸರ್ ಫಿರೋಜ್ ಮೆಥ್ತಾ, ಸರ್ ಸುರೇಂದ್ರನಾಥ ಬೆನರ್ಜಿ, ಡಾ| ಅನ್ನಿಬಿಸೆಂಟ್ ಮೊದಲಾದ ಪ್ರತಿಭಾಶಾಲಿಗಳು ರಾಜ್ಯರಂಜನೆ ಸುಧಾರಣೆಗಾಗಿ ಹೋರಾಡುತ್ತಿದ್ದರು. ಅವರ ಯತ್ನವು ಸಾಧುವೃತ್ತಯೋಗ್ಯವೂ ಆಗಿತ್ತು. ಅವರೆಲ್ಲರ ಸಹಕಾರದಿಂದಾಗಿ ಬ್ರಿಟಿಷ್ ಸಾಮ್ರಾಜ್ಯವು ಉಳಿಯಿತು; ಆದರೆ ಈಗ ನೋಡಿ, ಅವಸ್ಥೆಯೇ ಬೇರೆ! ನಾನು ಕಳೆದ ವರ್ಷ ಮುಂಬಾಯಿಯಲ್ಲಿ ಳಿದಾಗಲೇ ಧಾವಿಸಿದ್ದೆ—ಈ ಕೊಂಗ್ರೆಸ್ ಎಂಬುದು ರುಶ್ಶಾಳಿಗೆ, ದುರಾಡಳಿತೆಗೆ ಒಬ್ಬನ ಅಧಿಪತ್ಯಕ್ಕೆ ಸೇರಿ ಹಾಳಾಯಿತೆಂದು. ಈಗಿನ ಪರಿಸ್ಥಿತಿಯು ಹೇಗೆಂದರೆ ಕೊಂಗ್ರೆಸ್ ಎಂಬುದು ಶಾಸನ ಧಂಗ ಮಾಡುವ ವಿಕ್ಷ ಕೋಟಲೆಗಾರನೊಬ್ಬನ ವಕ್ತವಾಗಿ ಬಿಟ್ಟಿದೆ.

ವೈಸರಾಯರು ಕೊಂಗ್ರೆಸ್ಸನ್ನೂ ಗಾಂಧಿಯವರನ್ನೂ ನಿರ್ದೇಶಿಸಿ "ನಾನು ಬಂದಾಗ ಹಿಂದೂದೇಶವು ಅಕ್ರಮಗಳಿಂದ ತುಂಬಿಕೊಂಡಿತ್ತು. ಆಫೀಸರರೂ ಜನರೂ ಭಯಗ್ರಸ್ತರಾಗಿದ್ದು ಮುಂದಕ್ಕೇನಾಗಬಹುದೋ ಎಂಬ ಸಂಕೆಯದಲ್ಲಿದ್ದರು. ಹೆಣದ ತಾಪತ್ರಯಗಳು ಕೂಡ ಆಗಲೇ ತಲೆದೋರಿದುವು.

"ಬ್ರಿಟಿಷ ಸಂಕಾರವು ಹಿಂದೂಸ್ಥಾನಕ್ಕೆ ಕೊಡಲಿರುವ ರಾಜ್ಯರಚನೆಯು ಎಂತಹದೇ ಇರಲಿ—ಮುಂದಕ್ಕೆ ಬರಲಿರುವ ರಾಜ್ಯಸೂತ್ರವು ಅಚ್ಚುಮೆಚ್ಚಾಗುವುದು"

ಹೇಗಾದರೂ, ಏನಾದರೂ ಆಗಲಿ, ಹಿಂದೂಸ್ಥಾನವು ಸ್ವತಂತ್ರವಾಗುವುದಕ್ಕಾಗಿ ಬ್ರಿಟಿಷ ಸರಕಾರವು ಸಹಾಯ ಮಾಡುವುದಾಗಿ ವೈಸರಾಯರು ಖಂಡಿತವಾಗಿ ಧಾಸೆಯಿತ್ತರು.

ಹಿಂದೂಸ್ಥಾನವು ಸರ್ವ ಸ್ವತಂತ್ರವಾಗಬೇಕೆಂದು ತಮ್ಮ ಆಶೆಯೆಂದೇ ವೈಸರಾಯರು ನಿಜವಾಗಿ ಹೇಳಿದರು. ತನ್ನ ರಾಜ್ಯದಲ್ಲಿ ಕಾನೂನು ಕ್ರಮಗಳಿಗೆ ಜನರ ವಿಧೇಯತೆಯು ಬೇಕೇ ಬೇಕೆಂದು ತನ್ನ ಆಶೆಯೆಂದು ವೈಸರಾಯರು ಹೇಳಿ ದರು. ಅಲ್ಲದೆ "ಆರ್ಥಿಕ ಸಂಕಷ್ಟವು ಕಾರಾಗಿ, ಕಾಯಿದೆ ಕ್ರಮಗಳು ಜನರಿಂದ ಮಾನಸಿಕವಟ್ಟು ಜನತಾಂಗವು ಸುಕ್ಷೇಮ ವನ್ನು ಹೊಂದುವಂತಾಗುವುದೆಂದೇ ನನ್ನ ಧೊರವಸೆ" ಎಂದು ವೈಸ ರಾಯರ ಮಾತಾಯಿತು. ಶ್ರೀ ವೈಸರಾಯರು ತಮ್ಮುಗಂ ಚೆಟ್ಟಿಯಾರರನ್ನು ತುಂಬಾ ಶ್ಲಾಘಿಸಿ ಅವರು ತನ್ನ ಮೊಮ್ಮಗನ ಅವರ ಜೀವನ ಪಥದಲ್ಲಿ ತನಗೆ ಯಾವಾಗಲೂ ಕಳ್ಳಿರುವುದು ತಾನು ಬದುಕಿರುವಷ್ಟು ಕಾಲ ಮುಖಾಮುಂ ಚೆಟ್ಟಿಯಾರರ ಉನ್ನತಿಯಲ್ಲೇ ತನಗೆ ಆಶೆಯಿರುವುದು ಎಂದು ವೈಸರಾಯರು ಆತ್ಮಾಸನೆಯಿತ್ತರು.

ವೈಸರಾಯರು ತನ್ನ ಹಿರಿಯರ ಕುರಿತೂ ಕೆಲವು ಮಾತು ಗಳನ್ನಾಡಿದರು. ತನ್ನ ಅಜ್ಜನಾದ ಸ್ಲೇಡ್‌ಸ್ಟನ್‌ರವರು ಪ್ರತಿ ಭಾನಂಪನ್ನರಾಗಿದ್ದರೆಂದೂ, ತನ್ನ ಮಾವನವರು ಬಲ್ಲ ಕೋಂ ರೆಲರರಾಗಿದ್ದರೆಂದೂ ಅವರು ಸಭಿಕರಿಗೆ ತಿಳುಸಿದರು. ಹಾಗಿರುವಾಗ ತಾನೂ ಅವರಂತಹ ಗುಣಗಳಿಂದಿರುವೆನೆಂ ವಿಚಿತ್ರವೇ ಎಂಬ ಪ್ರಶ್ನೆಯನ್ನು ಅವರಿಟ್ಟರು.

ಪಂಡಿತ ಜವಾಹರಲಾಲರ ಬಿಡುಗಡೆಯಾಯ್ತು!

ಅಮೆರಿಕಾನ ಟಿಪಿಂಗ್. ಬಸ್ಸಾ ಎಂಬಲ್ಲಿನ ಆಡಳಿತ ಎಂಬಲ್ಲಿನ ಆಡಳಿತಗಾರರ ಬಾಯಿಂದ ಒಬ್ಬ ಸಿಖ್ಖ ತರುಣನು ನೀರು ಎಳೆಯುವ ಬಾವಿಕೆ ಬಿದ್ದನೆಂಬ ಕೂಗು ಕೇಳಿಬಂತು. ಅದನ್ನು ತೆಗೆಯುವ ಪ್ರಯತ್ನಕ್ಕಾಗಿ ಒಬ್ಬನು ಬಾವಿಯೊಳಗಿಳಿದನು. ಸ್ವಲ್ಪವು ಮಿಸಿಟುಗಳ ಮೇಲೆ ಭಾರವು ಮೇಲೆ ಬರಲಿಲ್ಲ. ಅವನು ಇಳದ ಹಗ್ಗವೂ ಕೂಡಾ ಖಾಲಿಯಾಯಿತೆಂಬ ಕೂಗು ಬರಲಿಲ್ಲ. ಇದನ್ನು ಕಂಡು ಅವನ ತಮ್ಮನು ಹಗ್ಗದ ಮೂಲಕ ಕೆಳಗಿಳಿದನು. ಇವನು ಮೇಲೆ ಬರುವುದನ್ನು ಕಾಕ್ಷಿಸುತ್ತಿದ್ದ ಮತ್ತಿಬ್ಬರು ತರುಣರು ಮೇಲೆ ನಿಂತಿದ್ದರು. ಆದರೆ ಎರಡನೆಯವನೂ ಮೇಲೆ ಬರಲಿಲ್ಲ. ಅರ್ಧ ಘಂಟೆಯಾದರೂ ಇಬ್ಬರೂ ಬಾರದಿರಲಾಗಿ ಅವರು ಕೆಳಗಿಳಿದರು. ಇದನ್ನು ಕಂಡು ಈ ಇಬ್ಬರ ಸ್ನೇಹಿತನಾದ ಒಬ್ಬ ಸಿಖ್ಖನಾನು ಕೆಳಗಿಳಿದನು ಇವನೂ ಕೆಳಗಿಳಿದವನು ಮೇಲೆ ಬರಲೇ ಇಲ್ಲ. ಇದರಿಂದಾರ್ಜರ್ಯಭರಿತರಾದ ಕೆಲವರು ಇನ್ನೊಬ್ಬ ಸುಸಲ್ಮಾನ ನನ್ನು ಕೆಳಗಿಳಿದರು. ಆದರೆ ಅವನೂ ಮೇಲೆ ಬರಲಿಲ್ಲ. ಅಷ್ಟರಲ್ಲಿ ಬಾವಿಯ ಬಳಿ ಜನಸಂದಣಿಯು ಸೇರಿತು. ಅವರೆಲ್ಲರೂ ಡಾಕ್ಟರನು ಬಾವಿಯೊಳಗಿನ ವಿಷವಾಯುವನ್ನು ಕೊಂಡು ಮೃತರಾಗಿದ್ದಿರಬಹುದೆಂದು ಹೇಳಿದನು. ಜನರು ಕಂಗಾಲಾದರು. ಸಾಪಿರೆಟ್ಟಿಕೆ ಜನರು ಬಾವಿಯ ಬಳಿ ಸೇರಿದರು. ಒಂದು ನಾಯಿಯ ಸೊಂಟಕ್ಕೆ ಹಗ್ಗ ಕಟ್ಟಿ ಬಾವಿಗಿಳಿಸಲಾಯಿತು. ಮೇಲ್ಗೆ ಗೆಯಲಾಗಿ ಅದು ಸ್ವಸವಾಗಿ ಬಂತು. ಫೋರೇಸರು ಬಂದು ಪತಿಗಳನ್ನು ಬಾವಿಯಿಂದ ತೆಗೆಸಿರುತ್ತಾರೆ. ಅವರಿಂದ ಬಾವಿಯಲ್ಲಿನ ಕೊಳಕು ನೀರಿನಿಂದ ಉಂಟಾಗುವ ಈ ವಿಷವು ಬಹಳ ಅಪಾಯಕರ ವಿಷವೆಂದು ವೈದ್ಯರು ಅಭಿಪ್ರಾಯ ಪಟ್ಟರುರು.

ಡಾ! ಅಂಬೇಡ್ಕರರ ಚರಿತ್ರೆ.

ಡಾ! ಅಂಬೇಡ್ಕರರು ತಾ. ೧೪–೫–೧೮೯೨ರಲ್ಲಿ ಉತ್ತರ ಹಿಂದೂಸ್ಥಾನದ ಮಹು ಎಂಬ ಗ್ರಾಮದಲ್ಲಿ ಜನಿಸಿದರು. ಇವರ ತಂದೆಯವರಾದ ರಾಮಜಿ ಮಾಲೋಜಿ ಸುಬೇದಾರರೆಂಬವರು ಸೈನ್ಯದ ಕೆಲಸದಲ್ಲಿದ್ದರು. ಅಂಬೇಡ್ಕಾರರು ಮಂತ್ರಾಲಯನ್ನು ಇಂಗ್ಲೀಷನ್ನೂ ಸಾಮಾನ್ಯವಾಗಿ ಕಲಿತರು. ೪ ಮೇಲೆ ಅವರ ತಂದೆಯವರು ಮುಂಬಾಯಿಯಲ್ಲಿ ಪಾಸಿಸಹೊಸಿಗಿದುದರಿಂದ ಅಂಬೇಡ್ಕಾರರು ಅಲ್ಲಿಯ ಪ್ರಖ್ಯಾತ ಎಲ್ಫಿನ್ಸ್ಟನ್ ಹೊಡೆಸಿನಲ್ಲಿ ಕಲಿಯುವಂತೆ ಏರ್ಪಡಿಸಿದರು. ಅಂಬೇಡ್ಕ ಎಂಬ ಗ್ರಾಮದವರಾದುದರಿಂದ ಇವರಿಗೆ ಅಂಬೇಡ್ಕಾರರೆಂಬ ಹೆಸರು ಬಂತು. ಅಂಬೇಡ್ಕರಿಂಗೆ ಸಂಸ್ಕೃತವನ್ನು ಕಲಿಯಬೇಕೆಂಬಾತೆಯು ಬಾಲ್ಯದಲ್ಲಿ ಇತ್ತು. ಆದರೆ ಅವರು ಅಸ್ಪೃಶ್ಯರಾಗಿದ್ದುದರಿಂದ ಆ ವಿಷಯವನ್ನು ಕಲಿಯಲು ಅವರಿಗೆ ಉಪಾಧ್ಯಾಯರ ಸಮ್ಮತಿಯು ಸಿಗಲಿಲ್ಲ. ಇದರಿಂದಾಗಿ ಅವರು ತನ್ನ ಆಶೆಯನ್ನು ಬಿಟ್ಟುಬಿಡದ ದೇಶಾಯಿತು. ೧೯೦೪ರಲ್ಲಿ ಅವರು ಸೆಟ್ಟಾರ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ೧೯೧೩ರಲ್ಲಿ ಬಿ. ಎ. ಯಲ್ಲೂ ಉತ್ತೀರ್ಣರಾದರು. ತಂದೆಗೆ ಹೆಚ್ಚಿನ ಸಂಬಳವು ದೊರೆಯುತ್ತಿದ್ದಿಲ್ಲವಾದುದರಿಂದ ಅಂಬೇಡ್ಕರರ ಶಾಲಾ ವಿದ್ಯಾಪ್ರವನ್ನು ತಂದೆಯು ಹೆಚ್ಚು ಹೊರಲಾರದಾದರು. ಇತ್ತಾಗುವಾಗ ಅಂಬೇಡ್ಕಾರರ ಆರಿಕೆಯು ಮೇರೆಗೆ ಅವರಿಗೆ ಬರೋಡೆಯ ಮಹಾರಾಜರಾದ ಸರ್ ಸಯ್ಯಾಜಿರಾವ್ ಗಾಯಕವಾಡರು ತಿಂಗಳಿಗೆ ರೂಪಾಯಿ ೭೫ನ್ನು ರವಾನಿ ಸಹಾಯ ಮಾಡಿದರು. ತನ್ನಲ್ಲಿ, ಅಂಬೇಡ್ಕಾರರ ತಂದೆಯವರು ಮೃತರಾದುದರಿಂದ ಅಂಬೇಡ್ಕಾರರು ಬಿ. ಎ. ಯಾಷೊಡನೆ ಕೆಲಸವನ್ನು ನೋಡಬೇಕಾಯಿತು. ಮಹಾರಾಜರು ಇವರಿಗೆ ತನ್ನ ಸಂಸ್ಥಾನದಲ್ಲೇ ಒಂದು ಕೆಲಸವನ್ನು ಕೊಡಿಸಿದರು. ೪ ಮೇಲೆ ಇವರನ್ನು ಮಹಾರಾಜರು ಕೊಲೊಂಬಿಯಾ ವಿಶ್ವವಿದ್ಯಾಲಯಕ್ಕೆ ಕಳುಹಿಸಿದರು. ೧೯೧೫ರಲ್ಲಿ ಅಂಬೇಡ್ಕಾರರು ಅಮೆರಿಕ್ಕನ್ನು ಕಂಡರು. ಅಲ್ಲಿ ಇವರು ೩ ವರ್ಷಗಳ ತನಕ ಇದ್ದು, ಎಂ. ಎ. ಪಿ. ಎಚ್. ಡಿ. ಪದವಿಗಳನ್ನು ಪಡೆದರು. ಪರೀಕ್ಷೆಯಲ್ಲಿ ವಿಶೇಷ ಯಶಸ್ಸು ಗಳಿಸುವುದರಿಂದ ಇವರನ್ನು ೨೦೦೦ ವಿದ್ಯಾರ್ಥಿಗಳು ಮಹಾಸಭೆ ಸೇರಿ ಅಭಿನಂದಿಸಿದರು. ಅದರಲ್ಲೂ ಅವರು ಅಸ್ಪೃಶ್ಯರಾದುದರಿಂದ ಅವರ ಉತ್ಕರ್ಷಾದಲ್ಲಿ ಹೆಚ್ಚಿನ ಶ್ರಾಮುಖ್ಯತೆಯು ಪರಡಿಕೊಂಡಿತು. ಮಹಾರಾಜರು ಅವರ ಸಾಹಸಗಳನ್ನು ಕಂಡು-ಅವರನ್ನು ಲಂಡನ್ ಯುನಿವರ್ಸಿಟಿಗೆ ಕಳುಹಿಸಿದರು. ಅಲ್ಲಿ ಡಿ. ಎಸ್ಸಿ., ಡಿ. ಎಸ್ಸಿ ಪರೀಕ್ಷೆಗಾಗಿ ಕುಳಿತರು. ಇಷ್ಟರಲ್ಲಿ ಬರೋಡದ ಮಂತ್ರಿಗಳಾದ ಸರ್. ಮಣಿಭಾಯಿ ಮೆಹ್ತಾರವರು ಅಂಬೇಡ್ಕಾರರನ್ನು ಸ್ವದೇಶಕ್ಕೆ ಬರಮಾಡಿಸಿ ಸಂಸ್ಥಾನದಲ್ಲೊಂದು ಕೆಲಸವನ್ನು ಕೊಟ್ಟರು. ಆಫೀಸಿನ ಕೆಲಸ ದಲ್ಲಿ ಅವರು ಹಿಂದೂಗಳಿಂದ ಬಹು ಅಸ್ಪೃಶ್ಯತೆಯನ್ನು ಹೊಂದಿದುದರಿಂದ ಅವರ ಹೃದಯ ಕಲ್ಲಾಗುವಂತಾಯಿತು. ಕೊನೆಗೆ ಹೇಗೂ ಎಂ. ಎಸ್ಸಿ. ಡಿ. ಎಸ್ಸಿ. ಪದವಿಗಳನ್ನೂ ಅವರು ಪಡೆದರು. ಅವರು "Provincial Finance and Problem of Rupee ಎಂಬ ಗ್ರಂಥಗಳನ್ನು ಬರೆದು ಶಿಕ್ಷಣಾಧಿಕಾರಿಗಳ ಪ್ರಶಂಸೆಗೆ ಪಾತ್ರರಾದರು. ೧೯೨೩ರಲ್ಲಿ ಇವರು ಬ್ಯಾರಿಸ್ಟರ್ ಪರೀಕ್ಷೆಯಲ್ಲೂ ಉತ್ತೀರ್ಣರಾದರು. ಇಂಗ್ಲೆಂಡಿನಿಂದ ಬಂದ ನಂತರ ಇವರು ಮುಂಬಾಯಿಯ ಸಿಡೆನ್‌ಹೆಂ ಕಾಲೇಜು ಎಫ್ ಕೊಮರ್ಸ್ ಇವರಲ್ಲಿ ಪ್ರೊಫೆಸರಾದರು. ತಿಂಗಳಿಗೆ ೫೦೦ ರೂಪಾಯಿ ಸಂಬಳವು ದೊರೆಯುತ್ತಿತ್ತು.

ನಮ್ಮ ಗತಿಯೇನು?

ಅಮೆರಿಕಾದಲ್ಲಿ ನಿರುದ್ಯೋಗ ಪ್ರಶ್ನೆಯು ಅಷ್ಟೀಕವಾದುದನ್ನು ಸರಕಾರ್ಯಕ್ಕೆ ತಂದೊಡ್ಡಿತು. ಜರ್ಮನಿಯಲ್ಲೂ ಹಾಗೆಯೇ ಆಯಿತು. ಈ ನಿರುದ್ಯೋಗ ಸಮಸ್ಯೆಯನ್ನು ಹೊಡೆದೋಡಿಸುವುದಕ್ಕಾಗಿ ಅಮೇರಿಕದ ಪ್ರೆಸಿಡೆಂಟರಾದ ರೂಸ್‌ವೆಲ್ಟರು ಟೊಂಕಕಟ್ಟಿನರು. ಜರ್ಮನಿಯ ಹಿಟ್ಲರರೂ ಅವರಂತೆಯೇ ಎದ್ದು ನಿಂತು ತಾವು ಬಾಗುಗಳನ್ನು ಲಕ್ಷಕಳಿದ ಸಾಹಸಕ್ಕೆದರು – ಪರಿಣಾಮವಾಗಿ – ಅಮೇರಿಕದಲ್ಲಿ ೫ ತಿಂಗಳುಗಳೊಳಗೆ ೧,೬೦೦,೦೦೦ ಜನರಿಗೆ ಕೆಲಸವು ದೊರೆಯುತು. ಆನ್ನ ಆಶ್ಚರ್ಯವೆಂದು ಬಾಯ್ಬಿಡುತ್ತಿದ್ದವರ ಹೊಟ್ಟೆ ಕಣ್ಣು ಗಾಯಿತು. ಇದೇ ಸಪ್ಪಂಗರದೊಳಗೆ ಇನ್ನೂ ೨,೦೦೦,೦೦೦ ನರು ದ್ಯೋಗಿಗಳಿಗೆ ಅನ್ನವನ್ನೊದಗಿಸಿ ಕೊಡುವುದಕ್ಕಾಗಿ ಕಾರ್ಖಾನೆಗಳಲ್ಲೂ ನಿರಿಡೆಗಳಲ್ಲೂ ಸಂಬಳವನ್ನು ಹೆಚ್ಚಿಸುವ ಯೋಜನೆಯನ್ನು ಹೂಡಿರುವರು. ಜರ್ಮನಿಯ ಹಿಟ್ಲರರು ಕೂಡಾ ರಾಷ್ಟ್ರವು ಮುಳುಗಿದರೆ ಮುಳುಗಲೆಂದು ದೃಢಗೊಂಡು ೬,೦೦೦,೦೦೦ ನರುದ್ಯೋಗಿಗಳಿಗೆ ಕೆಲಸ ಗಳನ್ನೊದಗಿಸಿ ಕೊಟ್ಟರುತ್ತಾರೆ. ಕೆಲಸ ಕೆಲಸ–ಅನ್ನ ಅನ್ನವೆಂದು ನರಳುತ್ತಿದ್ದವರು ಬದುಕಿದರು. ಅಲ್ಲಿಯವರಿಗೆ ಸ್ವತಂತ್ರ–ಪ್ರಜಾಸ್ವಭುತ್ವವಿದೆ ಅದರಲ್ಲಿ ಅವರಿಬ್ಬರಿಪತ ಸರಕಾರವೇನು ಮಾಡುತ್ತಿದೆ? ನಮ್ಮನ್ನೆ ಒದ್ದೆಯಾಗಿ ಮಲಗಿಬಿಟ್ಟಿದೆ. ತನ್ನ ದೇಶದ ಉನ್ನತಿಯಿಂದಾದೀತು ತನ್ನ ಏಜಾನೆಯು ಹೇಗೆ ತುಂಬೀತು ಎಂಬುದೇ ಅವರ ಯೋಚನೆ. ಹೀಗೆಂದು ಸಂಡೇ ಎಕ್ಸ್‌ಪ್ರೆಸ್ ಪತ್ರಿಕೆಯೊಂದು ಹೇಳುತ್ತಿದೆ.

ಅಮೇರಿಕದ ನಡೆ.

ರೂಸ್‌ವೆಲ್ಟರು ಮಾರ್ಚ್ ತಿಂಗಳಲ್ಲಿ ಪ್ರೆಸಿಡೆಂಟ್ ಪದವಿಗೇರಿದರು. ಅವರು "ಫ್ಲೋಕೆಟ್ ಕೋಡಾ" ಎಂಬ ಸೂತ್ರವನ್ನು ಮುಂದಿಟ್ಟು ತಮ್ಮ ದೇಶದ ಎಲ್ಲಾ ಕೈಗಾರಿಕೆ ಸಂಸ್ಥೆಗಳವರು ಸಂಬಳವನ್ನು ಹೆಚ್ಚಿಸಿ ಕೆಲಸದ ಸಮಯವನ್ನು ಕಡಿಮೆ ಮಾಡಬೇಕೆಂದು ಬರೆದರು. ೫ ಮಿಲ್ಲಿಯ ಪತ್ರಗಳನ್ನು ಭಾಷಿಸಿ ಅವುಗಳಿಗೆ ತನ್ನ ಕೃಮಂದಲೇ ಸಹಿ ಇಟ್ಟು ಅವುಗಳನ್ನು ಕಮಿಷನರುಗಳಿಗೆ ಹಾಕಿ ದೇಶದ ೫ ಮಿಲಿಯ ಕಾರ್ಮಿಕರಿಗೆ ಕಳುಹಿಸಿಕೊಟ್ಟು "ನೀವು ದೇಶಹಿತದೃಷ್ಟಿಯಿಂದ ನನ್ನೊಡನೆ ಸಹಕರಿಸಿ ನಡೆದು, ಬಡಜನಾಂಗವನ್ನುದ್ಧರಿಸಬೇಕೆ"ಂದು ಕೇಳಿಕೊಂಡರು. ಪ್ರಭುವೇ ಆಜ್ಞಾಪಿಸಿದುದು – ಎಲ್ಲಾ ಧನಿಕರೂ ಈ ಪತ್ರಕ್ಕೊಪ್ಪಿದರು. ಮರುದಿನ ಮುಂಜಾನೆಯೊಳಗೆ ರೂಸ್‌ವೆಲ್ಟರ ಕೋಟೆಯು ಮಿಲಿಯಾವಧಿ ಉತ್ತರಗಳನ್ನೊಳಗೊಂಡ ಮಿಲಿಯಾವಧಿ ತಂತಿಗಳಿಂದ ತುಂಬಿಹೋಯಿತು. "ನಾವು ನಿಮ್ಮೊಡನೆ ಅಗತ್ಯವಾಗಿ ಸಹಕರಿಸುವೆವು" ಎಂದೇ ಎಲ್ಲರೂ ಏಕಕಂಠದಿಂದ ಹೇಳಿದರು. 'ಕಡಿಮೆ ಕೆಲಸ ಹೆಚ್ಚು ಸಂಬಳದ' ಈ ಘೋಷಣೆಯನ್ನು ಸಮಸ್ತರೂ ಅನುಮೋದಿಸುವಂತೆ ಸರಕಾರವು ಕಾನೂನು ವಿಧಾನಗಳನ್ನು ಕಾರ್ಯರೂಪಕ್ಕೆ ತರಲು ಮಸೂದೆಯನ್ನು ಸಿದ್ಧಪಡಿಸಿ ಪಾರ್ಲಿಮೆಂಟಿನಲ್ಲಿ ಮಂಡಿಸಿರುತ್ತಾರೆ. ಉಪದೇಶಕರು, ಪ್ರಚಾರಕರು, ಈ ಸೂತ್ರವನ್ನು ಊರೂರು ಸಾರುತ್ತಿದ್ದಾರೆ. ಪತ್ರಿಕೆಗಳಲ್ಲಿ ಇದೇ ಪುಟಗಳ ಪಾಠ. ರಾತುಗಳು ಹೋಟೆಗಳಲ್ಲಿ, ಸಿನಿಮಾಗಳಲ್ಲಿ, ಮೋಟರ್ ಗಾಡಿಗಳಲ್ಲಿ, ರೇಡಿಯೋಗಳಲ್ಲಿ ಪಾಠಗಳಾಗುತ್ತಿವೆ. ಅದರ ಪ್ರಚಾರವು ಗಳಿಗೆಗಳಲ್ಲಿ ಸಾಗುತ್ತಿದೆ. ಅಲ್ಲಿಯ ಸರಕಾರವು ಗಳಿಗೆಗಳ 'ಆಟ'ನ ಮೇಲೆ ನೆಂಬಿದೆ. ಹಿಂದೂಸ್ಥಾನದ ನಮ್ಮ ಗತಿಯೇನು? ಇಬ್ಬರೊಡನೆ ಕೂಡಿ ಇದ್ದವ ಕೆಟ್ಟ!

ಜರ್ಮನಿಯ ಪ್ರಗತಿ

ಮಹಾಯುದ್ಧದ ಮಹಾಘಾತದಿಂದಾಗಿ ಜರ್ಮನಿಯನ್ನು ಧೈರ್ಯ ವನ್ನೂ ಕಳೆದುಕೊಂಡ ಜರ್ಮನಿಯು ಮೂಲೆಪಾಲಾಯ್ತು. ವಿಜಯಿ ರಾಜ್ಯವೆಂದೆನಿಸಿ ಜರ್ಮನಿಯೆಂಬ ಬೇಕಿತ್ತೆ. ಕೊಡಿಸಲು ಎಲ್ಲರಿಗೂ ಎತೆಯತ್ತು. ರಾಷ್ಟ್ರಭಾರದ ಬೋಧೆಯು ಸಾಲಸೋಲಗಳ ಸೆರೆತಕ್ಕೆ ಸಿಕ್ಕಿ ಮುಳುಗುವುದರಲ್ಲತ್ತು. ಆಗ ಒಬ್ಬ ಧೈರ್ಯಶಾಲಿ ಸ್ವಯಂ ಪ್ರಭುವಿನ ಅಗತ್ಯವು ಆ ರಾಷ್ಟ್ರಕ್ಕಿತ್ತು. ಎನೋ ದೈವವಶಾತ್ ಕಿಡಿ ಕಿಡಿ ಕಚ್ಚಿನ ಒಡಿಮಿಡಿ ಮಾತಿನ ತುಂಡು ಮಾನೆಯ ಹಿಟ್ಲರರು ಅವರಿಗೆದಗಿದರು – ಕಳೆದ ಜನವರಿ ೩೦ರಲ್ಲಿ ಇವರು ಪದವಿಗೇರಿದರು. ಅಲ್ಲಸಲ್ಲದ ಭೋಕಿನಾಟಕಗಳನ್ನು ನೆಡಿಸಿ ಎರಡು-ಮಿಲ್ಲಿಯ ಕೆಲಸಗಾರ ರಿಗೆ ಉದ್ಯೋಗಗಳನ್ನೊದಗಿಸಿಕೊಟ್ಟು ಧನ್ಯರಾದರು. ಹಸಿವಿನಿಂದ ಹೊಟ್ಟೆ ತಿಕ್ಕುತ್ತಿದ್ದ ಎರಡು ಮಿಲಿಯ ಜನರು ಈ ಹೊತ್ತು ಊಂಡು ತೇಗಿ ಹಿಟ್ಲರನಿಗೆ ಜೈ! ಎನ್ನುತ್ತಿದ್ದಾರೆ. ಹಿಟ್ಲರರು ೫,೦೦೦ ಮಂದಿ ಗಳನ್ನು ಮಿಲಿಟರಿಯಲ್ಲಿ ಸೇರಿಸಿ ಅವರನ್ನು ರಾಷ್ಟ್ರದ ಸಂರಕ್ಷಣೆಯಲ್ಲಿ ತರಬೇತುಗೊಳಿಸುತ್ತಿದ್ದಾರೆ. ಇನ್ನು ಅನೇಕ ವಿಧದ ಉದ್ಯೋಗಗಳು ಅಲ್ಲಿ ಸೃಷ್ಟಿಯಾಗುತ್ತಿವೆ. ವಾರಂಪ್ರತಿ ಎಂಬಂತೆ ನಿರುದ್ಯೋಗಿಗಳ ಪಡೆಯು ಕ್ಷೀಯಿಸುತ್ತಿದೆ. ದಿನೇ ದಿನೇ ಹೊಸ ಹೊಸ ಉದ್ಯೋಗಗಳಿಗೆ ಸ್ವೀಕಾರಪತ್ರಗಳ ಹೆಸರುಗಳು ಪ್ರಕಟವಾಗುತ್ತಿವೆ. ಪ್ರಭುಯದಿಂದ ಹೊರಡುವ ದಿನ ದಿನ ವಾರ್ತೆಯಂದ ಅಲ್ಲಿ ನಿರು ದ್ಯೋಗಿಗಳು ಕಾಣಸಿಗುವುದು ದುರ್ಲಭವಾಗಿದೆ ಎಂದು ತಿಳಿದು ಬಂದಿದೆ. ಅಲ್ಲಿಯ ಗವರ್ನರಾದ ಹರ್‌ಕೋಚ್ ಎಂಬವರು ನಿರು ದ್ಯೋಗಿಗಳ ಮಹಾಸಭೆಯನ್ನು ಕೂಡಿಸಿ ಅವರಿಗೆ ಹೊಟ್ಟೆಬಾಡಿನ ಅಶ್ವಾಸನೆಯನ್ನು ಕೊಡುತ್ತಿದುವರು. ಸ್ವಚಂಕಿತೆ, ಸ್ವಜಾತಿ ಚಿಂತನೆಯು ಸಂಕುಚಿತ ಸ್ವಭಾವವು ಪ್ರಭುಗಳಲ್ಲಿ ಮೂಡಿ ಸರ್ವರ ಸೇವೆಯೇ ತನ್ನ ಸೇವೆಯೆಂಬ ಅರ್ದಾವ್ಯೋಮಿಂದು ತಲೆಗೆ ಹೊಕ್ಕರೆ ಎಂತಹ ರಾಷ್ಟ್ರದ ಉನ್ನತಿಯನ್ನು ಹೊಂದುವುದು. ಇದಕ್ಕೆ ಹಿಟ್ಲರೇ ಸಾಕ್ಷಿ – ರೂಸ್‌ವೆಲ್ಟರೇ ಹೊಸ ಅರ್ಥನಿಯ ಮಗರ್ಗಗಳ ದುಂಬಿ, ಭೂಮಿ ದುರಸ್ತು ಕೆಲಸಗಳಲ್ಲಿ ೫೦೦,೦೦೦ ಕೆಲಸಗಾರರನ್ನು ನೇಮಿಸಬೇಕೆಂದು ಹಿಟ್ಲರರು ಎಲ್ಲಾ ಮಾನಸಿಪಾಲಿಟಿಗಳಿಗೆ ಆಜ್ಞೆಯನ್ನಿತ್ತಿರುವರು. ಆ ಬಗ್ಗೆ ಬೇಕಾಗುವ ದ್ರವ್ಯವನ್ನು ಏಜಾನೆಯಿಂದ ಹೊರಕಾರ್ಮುತ್ತಿರುವರು. ದೊಡ್ಡ ಯಂತ್ರಗಳನ್ನು ತರಿಸಿ ಕೈಗಾಂಕಗಳನ್ನು ಹೆಚ್ಚಿಸುವ ಸಂಸ್ಥೆ ಗಳಿಗೆ ಸರಕಾರವು ಕರೆರೆದು ಹಣವನ್ನು ಸಾಲಕೊಡುತ್ತಿದೆ. ಕಂದಾ ಯವೂ ಕಡಿಮೆಮಾಡಲ್ಪಟ್ಟಿದೆ. ಹೀಗಾಗಿ ಯಂತ್ರನಿರ್ಮಾಣ ಕಾರ್ಖಾ ನೆಗಳಲ್ಲಿ ಹೊಸ ಹೊಸ ಯಂತ್ರಗಳ ಸೃಷ್ಟಿಯನ್ನು ಮಾಡಲು ಹೆಚ್ಚಿಚ್ಚು ಜನರ ಅಗತ್ಯವಿದೆ. ಸ್ಪರ್ಧೆಯ ನಿಮಿತ್ತವಾಗಿ ಅಲ್ಲದೆ ಸಂಸ್ಥಾಪಿಸಲ್ಪಡುವ ದೊಡ್ಡ ದೊಡ್ಡ ಸಂಸ್ಥೆಗಳ ಮೇಲೆ ಕಂದಾಯದ ಹೊರೆಯೇ ಇರುವುದಿಲ್ಲ. ಸುಂದರ ಮತ್ತು ಭವ್ಯವಾದ ಮಾಂದಿರ ಗಳನ್ನು ಕಟ್ಟಿಸಬೇಕೆಂದು ವಿಶ್ವಯುದ್ಧಾನಂತರವನ್ನು ಸರಕಾರವು ಪ್ರೇರೇ ಪಿಸುತ್ತಿದೆ. ಹಾಗೆ ಕಟ್ಟಲು ಇಚ್ಛಿಸುವವರಿಗೆ ಎಲ್ಲಾ ಸೌಲಭ್ಯಗಳು ಸರಕಾರದಿಂದ ದೊರೆಯುತ್ತಿವೆ. ಸಂಸ್ಥಾನಗಳ ರೈಲ್ವೆಗಳು ಹೊಸ ರೈಲುದಾರಿಗಳನ್ನು ಹಾಕಿಸಿ ನಂಬಾರ ಸೌಲಭ್ಯಗಳನ್ನೊದಗಿಸುವುದಕ್ಕಾಗಿ ನವಿನ ಸಾಮಗ್ರಿಗಳನ್ನು ತಂಸುತ್ತಿವೆ. ಬರ್ಲಿನ್ ಮತ್ತು ಹೇಂಬರ್ಗ್ ಗಳಲ್ಲಿ ಭೂಗರ್ಭ ಮಾರ್ಗಗಳ ರಚನಾ ಕೆಲಸವು ಭರದಿಂದ ಸಾಗುತ್ತಿದೆ

1–9–33

RESERVED FOR

MESSRS.

PAI PHARMACY,

Car-Street,

MANGALORE.

ಮಂಗಳೂರಿನ ಮೇ ೧೫ ಶನಿವಾರದಿಂದ ೨೨ ಶನಿವಾರದ ವರೆಗಿನ ಪಂಚಾಂಗ

(ಶ್ರೀಕಾಕನೆಯ ಸಿಂಹ – ಸೋಮ).

ತಾರೀಖು	ವಾರ	ತಿಥಿ	ನಕ್ಷತ್ರ	ಕರಣ	ಯೋಗ	ಸೂರ್ಯೋದಯ	ಸೂರ್ಯಾಸ್ತ
2	ಶನಿ	ಗಿಸ	ಪುಷ್ಯ	ತೈತಿ	ಧೃ	6.20	6.41
3	ರವಿ	ಗಿಳ	ಪುಷ್ಯ	ಧನಿಷ್ಠಾ	ತೈಶ	6.20	6.41
4	ಸೋಮ	ಗಿಇ	ಪುಷ್ಯ	ಶತಭಿಷಾ	ವಿಷ್ಕ	6.20	6.40
5	ಮಂಗ	೧	ಪುಷ್ಯ	ಪೂರ್ವಾ	ಗಿಷ	6.20	6.40
6	ಬುಧ	೨	ಪುಷ್ಯ	ಉ.ಭಾ.	ಬಿಷ	6.21	6.39
7	ಗುರು	೩	ಪುಷ್ಯ	ರೇವತಿ	ವಿಷಿ	6.21	6.39
8	ಶುಕ್ರ	೪	ಪುಷ್ಯ	ಅಶ್ವಿನೀ	ತೈಬಿ	6.21	6.39

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು)		Rainfall. ಮಳೆ	
	Maximum ಹೆಚ್ಚಿನ ಪದವಿ	Minimum ಅಲ್ಪಾಂಶ	ದಿನದ ಮಳೆ	ಜುಮಲಾ ಮಳೆ
24	81— 3	75— 2	0—10	—
25	81— 9	74— 2	0—72	—
26	82— 9	73— 9	0—08	—
27	82— 7	76— 1	—	—
28	83— 7	76— 8	—	—
29	83— 9	74— 4	0—40	—
30	84— 4	74— 9	—	129-63

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ		ನಲಿಗೆ	
	ರೂ.	ಆ.	ರೂ.	ಆ.
ರಾಶಿ ಅಕ್ಕಿ ...	3—	8	4—	0
ಪಚ್ಚಕ್ಕಿ ...	4—	4	4—	10
ಗುಡ್ಡು ...	3—	10	4—	2
ಸುಗ್ಗಿ ...	3—	8	3—	15
ಊರ ಆವ್ಲಲ್ ದೆಲ್ಲಿಗೆ ...	4—	6	5—	0
ರಂಗೂನು ಬೆಲ್ಲಿಗೆ ಗೋಣಿ ೧ಕ್ಕೆ ...	5—	0	5—	12
ಎಲ್ಲೂರು ದೆಲ್ಲಿಗೆ ಮುಡಿ ೧ಕ್ಕೆ ...	4—	0	4—	4
ಗೋದಿ ಗೋಣಿ ೧ಕ್ಕೆ ...	11—	0	12—	8
ತೊಗರಿ ಗೋಣಿ ೧ಕ್ಕೆ ...	9—	8	12—	0
ಹುರುಳಿ ಗೋಣಿ ೧ಕ್ಕೆ ...	5—	12	6—	0
ಕಡಲೆ ಗೋಣಿ ೧ಕ್ಕೆ ...	8—	8	12—	4
ತೊಗರಬೇಳೆ ಗೋಣಿ ೧ಕ್ಕೆ ...	11—	0	20—	0
ಉದ್ದು ಗೋಣಿ ೧ಕ್ಕೆ ...	8—	8	9—	0
ಹೆಸರು ಗೋಣಿ ೧ಕ್ಕೆ ...	8—	0	9—	0
ಊರುಬೆಲ್ಲ ಖಂಡಿ ೧ಕ್ಕೆ ...	50—	2	55—	0
ಉಪ್ಪು ಗೋಣಿ ೧ಕ್ಕೆ ...	5—	8	6—	0
ಖೊಪ್ರ ಖಂಡಿ ೧ಕ್ಕೆ ...	52—	0	55—	0
ಖೊಪ್ರಿ ಖಂಡಿ ಖಡಿ ೧ಕ್ಕೆ ...	20—	0	21—	0
ಎಳ್ಳಿಂದ ಖಂಡಿ ೧ಕ್ಕೆ ...	21—	4	21—	8
ಹೊಪ್ರಿ ಎಣ್ಣೆ ಮಣ ೧ಕ್ಕೆ ...	3—	12	4—	12
ಎಳ್ಳಿಗೆ ಮಣ ೧ಕ್ಕೆ ...	5—	8	6—	0
ಟಿಮಿಣಿಎಣ್ಣೆ ಪೆಟ್ಟಿಗೆ ೧ಕ್ಕೆ ...	7—	4	8—	12
ಮೋಸದ ಸಕ್ಕರೆ ಮಣ ೧ಕ್ಕೆ ...	4—	0	4—	2
ಹೊಸ ಮಣಸು ...	5—	0	6—	4
ಸಾಸಿವೆ ಮುಡಿ ೧ಕ್ಕೆ ...	4—	12	5—	0
ಕಾಳುಮೆಣಸು ಖಂಡಿ ೧ಕ್ಕೆ ...	140—	0	160—	0
ಯೆಲಕ್ಕಿ ಮಣ ೧ಕ್ಕೆ ...	19—	0	22—	8
ಗೇರುಬೀಜ ಮುಡಿ ೧ಕ್ಕೆ ...	3—	2	3—	4
ಅಚ್ಚಿನ ಖಂಡಿ ೧ಕ್ಕೆ ...	35—	0	35—	8
ತಾಮ್ರ ತಗಡು ಮಣ ೧ಕ್ಕೆ ...	10—	12	11—	0
ತಾಮ್ರ ಪಾತ್ರೆಗಳು ಮಣ ೧ಕ್ಕೆ ...	15—	0	16—	0
ಬಿಳಿಬೆಳ್ಳ ಸೇರು ೧ಕ್ಕೆ ...	14—	12	15—	0
ಒಟ್ಟಾಲೆ ತಗಡು ಮಣ ೧ಕ್ಕೆ ...	9—	0	9—	8
ಕನಸು ೧ಕ್ಕೆ ...	20—	0	20—	2
ಹುಣಸೆ ಹುಳಿ ಖಂಡಿ ೧ಕ್ಕೆ ...	35—	0	42—	8
ಕೇಟಿನ ಕಾಳು ಖಂಡಿ ೧ಕ್ಕೆ ...	200—	0	225—	0
ಕೆಸೀರು ಕಾಳು ಖಂಡಿ ೧ಕ್ಕೆ ...	260—	0	270—	0
ಹೆಸರು ಕಾಳು ...	130—	0	140—	0
ಹೊಸ ಅಕ್ಕಿ ...	120—	0	130—	0

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವಯನ್ಸ ಕಂಪನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯ ಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನ್ ಕೊಡಾ ಇರುವುದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬಯಸುವವರಿಗೆ ಪ್ರತಿದಿನವೂ ನಾಲ್ಕು ಸಾರಿ ಕಾರ್ಕಳ ಮಾರ್ಗವಾಗಿಯೂ, 4 ಸಾರಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಉಡುಪಿಗೆ ತಲುಪಿರಿ. ಒಂದೇ ಶಿಲೆಯಲ್ಲಿ ನಿಂದ ರಚಿತವಾಗಿ, 37, ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ, ಕಾರ್ಕಳ ಗೋಮಟೇಶ್ವರನ ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು 4 ಸಲ ಹೊರಟು ಎರಡೂವರೆ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತಪುಣ್ಯ ಸ್ಥಳವನ್ನು ನೋಡಬೇಕಾದರೆ, ಮಂಗಳೂರಿನಿಂದ ಕುಂದಾಪುರ ಮಾರ್ಗವಾಗಿ ತಲ್ಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಮಧ್ಯಾಹ್ನ ಒಳಗೆ ತಲುಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನ ಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಬೇಲೂರಿನ ನೋಮನಾಥ ದೇವಾಲಯವನ್ನು ನೋಡಲು, ನೋಡಲಿಚ್ಛಿಸುವವರು, ಬೆಳಿಗ್ಗೆ ಮಂಗಳೂರಿನಿಂದ ಹೊರಟು ಉಪ್ಪಿನಂಗಡಿ, ಶಿರಾಡಿ ಮಾರ್ಗವಾಗಿ ಸಾಯಂಕಾಲ ತಲಪಬಹುದು.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದೂಸ್ಥಾನ, ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳಲ್ಲಿ ಪ್ರಯಾಣ ಮಾಡಿದರೆ, ಮಂಗಳೂರಿನಿಂದ ಮಡಿಕೇರಿಗೆ 7 ಘಂಟೆಗಳೊಳಗೂ, ಕಡೂರಿಗೆ 12 ಘಂಟೆಗಳೊಳಗೂ, ಮೈಸೂರಿಗೆ 12 ಗಂಟೆಗಳೊಳಗೂ, ಸಕಲೇಶಪುರಕ್ಕೆ 8 ಗಂಟೆಗಳೊಳಗೂ, ಹಾಸನಕ್ಕೆ 10 ಗಂಟೆಗಳೊಳಗೂ, ಚಿಕ್ಕಮಗಳೂರಿಗೆ 8 ಗಂಟೆಗಳೊಳಗೂ, ಕೊಲ್ಲೂರಿಗೆ ಮತ್ತು ಗೋಕರ್ಣಕ್ಕೆ ೧॥ ದಿವಸದೊಳಗೂ ಶಿವಮೊಗ್ಗಕ್ಕೆ 12 ಗಂಟೆ ತಲಪಬಹುದು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Company Ltd., Mangalore

Chkmagalur Public Conveyance Motor Service

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು.

ಮುಂಬಾಯಿಯಿಂದ – ಮಂಗಳೂರಿಗೆ.

ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ

ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು – ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ

ಕೂಲಿಕಾರರನ್ನು ತರಲಕ್ಕೂ ಅಲ್ಲಿಂದ ಕೊಂಡುಹೋಗಲಕ್ಕೂ

ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ.

ಚಿಕ್ಕಮಗಳೂರಿನಿಂದ – ತಿನಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ.
—ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರಿಗೆ, ವುತ್ತೂರಿಗೆ, ಮೂಲ್ಕಿಗೆ.
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿಕಾಯಾಸದ ಪ್ರಯಾಣ! ಉತ್ಸಾಹದ ಸೌಲಭ್ಯ

ಬೇರಾದ ವಿವರಕ್ಕಾಗಿ ನಮ್ಮ ಆಫೀಸಿಗೆ ಬರೆದು ತಿಳಿಯಿರಿ.

ಸತ್ತ್ವವಿಚಾರ.

ಬ್ರಾಹ್ಮಣರು ಅಧ್ಯಾಯಗಳಿಗೆ ನಾವು ಜನಾಬ್ಜರಲ್ಲ. ಎಲ್ಲಾ ಜಾತಿಯ ಕಿಮ್ಮ ಸಂಘವೂ ಹೆಸರು ವಿಲಾಸಗಳನ್ನು ತೋರಿಕೊಳ್ಳದು ಸಾಧ್ಯ. ಲೇಖನಗಳಿಗೆ ಏನೆ ತೊಡಲಾಗುವುದಿಲ್ಲ. ಲೇಖನಗಳು

ಸಾರ್ವಜನಿಕ ಒಳ್ಳಿತ್ತಿನಿಂದಿಷ್ಟು ಯುಕ್ತ ವೈಂ

ಯುಲ್ಲಿರಬೇಕು ಮಿ. (ಸಂ ಸ)

ಶ್ರೀಮತ್ ''ವಿ. ಸತ್ಯಾರ್ಥಿ ನಿಧ್ಯಾಂತ ವಿಚಾರದ ಮುಂಬಯಿ''

ಯವರು ಗತ ಸ್ವದೇಶಾಭಿಮಾನಿಯ ತಾ. ೨೮-೭-೩೩ ಮತ್ತು ೫-೮-೩೩ ನಂಬಕೆಗಳಲ್ಲಿ ಪ್ರಾಣಿರುವ ಕಂಠಾ ಪ್ರಶ್ನೆಗಳಿಗೆ ಸವಾಧಾನೋತ್ತರಗಳು:—

ಪ್ರಶ್ನೆ ೧—''ಸೈನು ಬ್ರಾಹ್ಮಣರಿಂದ ಬರೆಯಲ್ಪಟ್ಟು ನೇದನವನ್ನು ಒಪ್ಪ ವಿಶ್ವಿಲ್ಲ'' ಎಂದರೆ — ''ಬ್ರಾಹ್ಮಣರು ವೇದವನ್ನು ಬರೆದರು'' ಎನ್ನುವ ಪಕ್ಷಕ್ಕೆ ಆಧಾರವೇನು?

ಉತ್ತರ—''ನಮಃ ಬ್ರಾಹ್ಮಣೇಭ್ಯಃ ವೇದನಾದುಭ್ಯೇಯಂ'' ಎಂಬ ಪ್ರಸಿದ್ಧ ಶಾಸ್ತ್ರಾಯನ ಸೂತ್ರದಿಂದ ವೇದವು ಬ್ರಾಹ್ಮಣ ಸಂಬಂಧಿಯೆಂದು ಸಿದ್ಧವಾಗುತ್ತದೆ.

ಪ್ರಶ್ನೆ ೨ — ಯಾವಾಗ್ಗೆ ಯಾವ ಬ್ರಾಹ್ಮಣರು ಬರೆದರು? ಹೆಸರು ಗಳೇನು?

ಉತ್ತರ—(ವೇದನನ್ನು) ಯಾವಾಗ್ಗೆ ಯಾವ ಬ್ರಾಹ್ಮಣರು ಬರೆದರೆಂಬುದನ್ನು ಈಶ್ವರ ಯಾ, ಬ್ರಹ್ಮಲಿಖಿತ ವೇದಗ್ರಂಥವು ಇಲ್ಲವೇ ಆ ಗ್ರಂಥದ ಒಂದು ಮುರುಳು ಪಾಲೆಯಾದರೂ ಎಲ್ಲಿ ಯಾವ ಶಿಕ್ಷಣ ಭಂಡಾರ (Library)ದಲ್ಲಿರುವುದೆಂಬುದೂ ಬಿತ್ತಿ ಪಾಸಿಕ ತೀರ್ಥನೆಯು ನೆಲಿಗೆ ಇದುವರಿಗೂ ತಿಳಿಯದಿರುವ ವಿಷಯವಾಗಿದೆ. ಆದರೆ—ಶ್ರೀಮಾನ್ ಆ. ಟಿ ಮುಂ ರಾಲದಲ್ಲಿ

ಯೋಸ್ಪೆ ಬ್ರಾಹ್ಮಣಾಂ ವಿದಧಾತಿ ಪೂರ್ವಂ ಯೋ ನೈವೇದಾಂಶ್ಚೈ ಎಂದು ಹೇಳಿರುವುದನ್ನು ನೋಡಿದರೆ ಬ್ರಹ್ಮನಿಯೊಗಿಂದ ವೇದವು ಬರೆಯಲ್ಪಟ್ಟಿದೆಯೆಂಬುದು ಸಿದ್ಧಾಂತವಾಗುತ್ತದೆ. ಬ್ರಹ್ಮನು ಯಾವಯುಗಗಳಿಗೆ ಬ್ರಾಹ್ಮಣರೆಂದು ಹೆಸರು. ವೇದದ ಸೂಲ ವೇದೋಕ್ತ ಕ್ರಿಯಾ ಆದರ ಭಾಷೆ ಮೊದಲಾದ ವಿಚಾರಗಳನ್ನು ಸವಿಸ್ತರವಾಗಿ ವಿಮರ್ಶಾರ್ಹ ದೃಷ್ಟಿಯಿಂದ ಈಯಂತ ಗೋವಿಂದ ದಾಸರವರು ಅಂಗ್ಲ ಭಾಷೆಯಲ್ಲಿ ಬರೆದಿರುವ ಹಿಂದೂಇಸಂ' (Hinduism) ಎಂಬ ಗ್ರಂಥದಲ್ಲಿ ನೋಡಿ ವೇದವನ್ನು ಬರೆದವರು ಯಾರೆಂಬುದನ್ನು ತಿಳಿಯಬಹುದು.

ಪ್ರಶ್ನೆ ೩—ಇತರ ಧರ್ಮಾವಲಂಬರನ್ನು ಜೈನರು 'ಪ್ರತಿಪಂಥಿ' (ಇತರರು ಪ್ರತಿಪಂಥರು) ಶ್ರೇಷ್ಠರಿಂದ ನೋಡುತ್ತಾರೆಂಬುದು ಸ್ಪಷ್ಟ. ಕೀಯತ್ತು. ಆದರೆ ಕಿಮತ್ತರ್ವೇಷಾಂಧತೆಯಿಂದ ನರಳುತ್ತಿರುವ''ರೆಂದು ಹೇಳುವ ಮಹಾಶಯರು ಹಿಂಸಾತ್ಮಕರೇ? ಯಸ ಅಹಿಂಸಾತ್ಮಕರೇ

ಉತ್ತರ—ಇಂತಹ ವಿಚಾರ ಬೀಸ್ಯ ಪ್ರಶ್ನೆಗಳನ್ನು ನನ್ನೊಡನೆ ಹಲವರು ಹಲವು ಬಾರಿ ಬಾಯಿವರೆಯಾಗಿ ಕೇಳಿರುವುದುಂಟು. ಬೌದ್ಧಿಕ ಜಾಗಿಯೇ ಉತ್ತರವನ್ನು ಸದ ಅಂಥವರಿಗೆ ಕೊಟ್ಟಿರುವುದುಂಟು. ಆದರೆ ಈ ಸಂಬಂಧವಾಗಿ ಪ್ರಶ್ನೆಗಳ ಲೇಖ ಒಂದನ್ನು ಬರೆಯುವ ಉದ್ದೇಶ ವಿತ್ತು. ಅಷ್ಟ ಉದ್ದೇಶವು ಸಕಾರಣ-ನೆರವೇರುವುದು ಪರ್ಯಾಸ್ತದ! ಅಸ್ತು!

ಶ್ರೇಯದೇ! ಅಹಿಂಸಾತತ್ವದ ಅಮೋಘಮಯವಮರ್ಯಾದನ್ನು ಕಾರ್ಯತಃ ತೋರಿಸುವುದು ಈ ಧರ್ಮ ಸ್ಥಾಪಿತ್ಯಕ್ಕದ ಕಾಲದಲ್ಲಿ. ಆದರಲ್ಲೂ ಸಂಸಾರಿಗಳಾದ ನಮ್ಮ ನಿಮ್ಮಂಥವರಿಗೆ ಸಾಧ್ಯವೇ ಇಲ್ಲ. ಅಹಿಂಸಾತತ್ವವು ಜೈನರ ವೈಯಕ್ತಿಕ ಧರ್ಮವಲ್ಲವೆಂದೂ ಅದು ಪ್ರಾಣಿ ಮಾತ್ರರ ಸರ್ವೋತ್ಕೃಷ್ಟ ಹಾಗೂ ಸರ್ವವ್ಯಾಪಕ ಧರ್ಮವೆಂಬುದನ್ನೂ ಈ ದೆಹಲಿ ಎನಾನು ಬರೆದಿರುವ ''ಪ್ರಾಚೀನವಿಚಿಹ್ನೆ''ಯೆಂಬ ಬೆಳ್ಳ ಸಂಗ್ರಹ ಗ್ರಂಥದಿಂದ ತಿಳಿಯಬಹುದು. ಆದರೆ ಇತರ ಧರ್ಮಗಳ ಅಹಿಂಸೆಯಿಂದ ಜೈನ ಧರ್ಮವು ಭಿನ್ನವಾಗಿರುವ ಸ್ವರೂಪವನ್ನು ತೋರಿಸಿಕೊಡುವುದೆಂಬುದು ಸರ್ವರೂ ಆರಿತರುವ ವಿಷಯ!

ತನಗೆ ಎಟಿಕದ ಪ್ರಾಣಿ ಹಣ್ಣನ್ನು ಹುಳಿಯೆಂದು ತಿರಸ್ಕರಿಸಿ ಸಿಪ್ಪೆಯಂತೆ - ನನ್ನು ನಿಮ್ಮಂಥವರಿಗೆ ಎಟಿಕದ ಆಫವಾ ಎಟಿಕುವ ಯೋಗ್ಯತೆ ಇಲ್ಲದ ಮಾತ್ರಕ್ಕೆ ಅಹಿಂಸಾತತ್ವವನ್ನೇ ಮಾಡಿಸಿರುವುದೆಂದರೆ ತನ್ನ ಅಸಧ್ಯತೆಯನ್ನು ತಾನೇ ಪ್ರಕಟಿಸಿಕೊಂಡಂತೆಯೇ ಸರಿ! ಜೈಯತ್ಕೃತ ದೋಷವನ್ನು ಧರ್ಮಕ್ಕೆ ಹೊರಿಸುವುದು ಬುದ್ಧಿ ತಲ್ಲಾಗಿದೆ.

ಏನ್ಯಾರವಾಗಿ ಹಿಂಸೆಯೆಂತೇನು? ಹಿಂಸೆಯಲ್ಲಿ ಎಷ್ಟು ವಿಧ? ಹಿಂಸೆಯ ಹಲವು ಯಾರಿಗೆ ಹೇಗೆ ದೊರೆಯುತ್ತದೆ? ಆಚಿಂಸಾವ್ರತವನ್ನು ಯಾವ ರೀತಿ ಪರಿಪಾಲಿಸಬೇಕು? ಎಂಬ ವಿಷಯವಾಗಿ ತಿಯಾವ ಉತ್ತರವಿತ್ತೆಂಬುದನ್ನು ಸಾಪ್ತಸಿದ್ಧ ಜೈನಾಚಾರ್ಯ ಈ ಅಮೃತಚಂದ್ರ ಸೂರಿಗಳ ''ಪುರುಷಾರ್ಥಸಿದ್ಧುಪಾಯ'' ಎಂಬ ಗ್ರಂಥರತ್ನದಲ್ಲಿರುವ ಅಮೂಲ್ಯ ವಿಷಯಗಳ ಅರಿಗೆ ಗಮಿಸಿ ನೋಡಿ ಸತ್ಯಾರ್ಥಿಗಳು ತಮ್ಮ ಸಂಶಯವನ್ನು ನಿವಾರಿಸಿಕೊಳ್ಳಲಿ! ಅವನ್ನೆಲ್ಲ ಇಲ್ಲಿ ಬರೆಯುತ್ತ ಕುಳಿತರೆ ಪ್ರಶ್ನೆಯ ಲೇಖನದ ಗುರಿಯೇ ಬದಲಾಯಿಸಬಹುದು. ಅಗತ್ಯ ಬಿದ್ದಾಗಲೆ ಆ ವಿಷಯವಾಗಿ ಇನ್ನೊಮ್ಮೆ ಪ್ರಸ್ತಾವಿಸಬಹುದು.

''ಸುಪ್ತೆಚೇತಾಂಧತೆಯಿಂದ ನರಳುತ್ತಿರುವ''ರೆಂದಿರುವ ನನ್ನ ಮಿತ್ರರುಗಳ ಒಂಗಾತ್ಮರಿಗೇ ಆಗಬೇಕಾದೀತೆ? ಅಪ್ಪಿಕ್ಕೆ ಸತ್ಕಾರವಾಗಿ ಅವರಿಗೆ ಜೈನಧರ್ಮದ ಸ್ವರೂಪವನ್ನು ಉದಾರಧಾಸ್ತ ಮಾಡಿದವರನ್ನು ಮತ್ತು ಹೊಸ್ತ ಧರ್ಮಾಸ್ಥೆಯೆಂದು ಭಯ ಪಟ್ಟು ಮುಖ್ಯವಿಷಯ ಅಹಿಂಸಾ ತತ್ವವನ್ನೇ ಅಲಕ್ಷಿಸಿ ಮಿಕ್ಕ ಸಿಪ್ಪೆಯಂತಿರುವ ಅಪ್ರಯೋಜನಕರವಾದ ಕಿಮ್ಮ ವಿಷಯಗಳನ್ನು ಕೈಗೆತ್ತಿಕೊಂಡು ಕಾದಾಡಿದವರನ್ನು ಕುರಿತು ಏನೆಂದು ಹೇಳಬೇಕೆಂಬುದು ತೋಚದಾಗಿದೆ. ಅಸ್ತು!

ಪ್ರಶ್ನೆ ೪—ಇತರ ಧರ್ಮಾವಲಂಬರನ್ನು ಜೈನರು ಮಿಥ್ಯಾತ್ವಿಗಳೆಂದು ಹೇಳುವುದು ಸಾಕ್ಷಾತ್ ದೇವರೆಂದೇ ಭಜಿಸುವರು ''ಎಂಬಲ್ಲಿ'' ''ಧರ್ಮ ಶ್ರದ್ಧೇಯ'' ಶಬ್ದದ ಅರ್ಥವನ್ನೇ ಅರಿಯದೇ, ತೀರ್ಥಯಾದರೂ ತೀರ್ಥದ ಆಸರ್ಥರಾದಾವ ವಿಶೇಷಾರ್ಥವನ್ನು ಕಲ್ಪಿಸಿರುವ ಸತ್ಯಾರ್ಥಿಗಳ ಈ ಕೃತ್ಯವನ್ನು ಹೂರನೆಯ ನರಕಕ್ಕೆ ಹೋಗುವನು.' (ವಿಶೇಷಸಾರ ವೃಟ ೧೧೯) ಎಂಬ ಪ್ರಮಾಣ ವಾಕ್ಯಗಳನ್ನು ಹಿಡಿದು ನಗುಬರುವಂತಿದೆ. ಅವರೇ ಯೋಚಿಸಲಿ! ಸ್ವತಃ ಪ್ರಾಕೃತ ಭಾಷಾಜ್ಞಾನವಿಲ್ಲದೆ ಸತ್ಯಾರ್ಥಿಗಳು ಈ ದಯಾನಂದರು ಪ್ರಾಕೃತ ಗಾಥೆಗಳಿಗೆ ಯಥಾತ್ಥ ತಪ್ಪಾ ಅರ್ಥ ಮಾಡಿರುವ ಅರ್ಥವನ್ನು ಅನುಸರಿಸುವರೆಂಬುದು ಈ ಕಿಳಿಗೆ ವ್ಯಕ್ತ ವಾಗುವುದಲ್ಲದೆ ದುಃಖವೂ ಉಂಟಾಗುತ್ತದೆ.

ಬಹುಗುಣಮಿಪ್ಪಾನ್ನಲಿ ಉಸ್ಸುತ್ತಭಾಷಿತ ಹೀನಿ
ಮುತ್ತಬ್ಬೊ।
ಜಹ ವರಮಣಿ ಜಪತ್ಯೂಪಿಯ ವಿಗ್ಗಹೇಣ ವಿಸ
ಹರೋ ಲೋಯೆ॥

ಈ ದಯಾನಂದರ ಮತ್ತು ಸತ್ಯಾರ್ಥಿಯವರ ಆರ್ಷ:—''ವಿಷ ಸರ್ವದ ತಲೆಯಲ್ಲಿರುವ ಮಣಿಯನ್ನು ಹೇಗೆ ತೆಗೆಯಬಹುದು ಯೋಗ್ಯರೋ ಹಾಗೆಯೇ ಜೈನತತ್ವದಲ್ಲಿ ಲ್ಲದಿದನು ಎಂತಹ ಧರ್ಮಾತ್ಮರಾಗಿದ್ದರೂ ಜೈನರು ಆವನ್ನು ತ್ಯಜಿಸಬೇಕು'' ಗಾಡಿಯು ಸಿಶವಾದ ಆರ್ಷ— ಯ್ಯಾರು ಶಾಸ್ತ್ರಿಯಿಂದರೋ (ಜೈನನಾಗಲಿ ಅಜೈನನಾಗಲಿ) ಅವನಲ್ಲಿ ಇರುವ ವಿಷಯೂ ಕೂಡ, ಸರ್ವದ ತರೆಯಲ್ಲಿರುವ ಮಣಿಯಂತೆಯೇ ಅಪಾಯಕರವಾಗಿರುವುದರಿಂದ ಅಂಥವನು ತ್ಯಜಿಸುವುದಕ್ಕೆ ಯೋಗ್ಯನು.

ಈ ಗಾಥೆಯು ಸುಪ್ರಸಿದ್ಧ ಚಾಣಕ್ಯ ನೀತಿಯ—

ದುರ್ಜನಃ ಪರಿಹರ್ತವ್ಯೋ ವಿದ್ಯಯಾಲಂಕೃತೋಪಿಸನ್।
ಮಣಿನಾ ಭೂಷಿತಃ ಸರ್ಪಃ ಕಿಮಸೌ ನ ಭಯಂಕರಃ॥

ಎಂಬ ಶ್ಲೋಕವನ್ನು ಬಹುಮಟ್ಟಿಗೆ ಹೋಲುತ್ತಿದೆ. ದುರ್ಜನನು ವಿದ್ಯಾಲಂಕೃತನಾಗಿದ್ದರೂ ಕಕ್ಷಧೂಪಿತ ಸರ್ಪದಂತೆ ಭಯಂಕರನಾಪ್ತನು. ಅಂಥವನು ಮಾನ್ಯನಲ್ಲವೆಂಬ ನೀತಿಯು ಸರ್ವರಿಗೂ ಅನ್ವಯಿಸುತ್ತದೆ. ''ಜಾತಿಗೆ ಭೇದವಿದ್ದರೂ ನೀತಿಗೆ ಭೇದವಿಲ್ಲಕ್ಕಪ್ಪೆ!

ನಾಮಂ ಒಕಸ್ಸ ಅಸಾಹಂ ದೇಹಾಜಾದಿಯ್ಯ ಈ ಮಿಥ್ಯ
ಪನ್ನಾ ಈ
ಜೇನಿ ಅಣು ಸಂಗತ್ತೋ ಧರ್ಮಾಗಮಿಕೋ ಇ ಪಾವಮು

ಈ ಕೆಯಾಪಂದರ ಮತ್ತು ಸತ್ಯಾರ್ಥಿಯವರ ಆರ್ಷ—ಜೈನ ಧರ್ಮಕ್ಕೆ ವಿರುದ್ಧವಾದ ಧರ್ಮಗಳೆಲ್ಲವೂ ಮನುಷ್ಯರನ್ನು ಪಾಪಿಗಳನ್ನಾಗಿ ಮಾಡುತ್ತವೆ ಆದುದರಿಂದ ಇತರ ಧರ್ಮಗಳನ್ನು ಎಂದಿಗೂ ಆಶ್ರಯಿಸದೆ ಜೈನ ಧರ್ಮವನ್ನೇ ಅಂಗೀಕರಿಸಬೇಕು. ಜೈನಧರ್ಮಕ್ಕೆ ವಿರೋಧಗಳಾದ ಮಿಕ್ಕು ಧರ್ಮದವರು ಏತಕ್ಕೆ ಹುಟ್ಟಿದರು? ಹೇಗೆ ಬೆಳ್ಳಿ ಕೊಂಡಿದರು? ಆರ್ಥಾತ್ ಯಾರು ಏಕೆ ನಾಸ್ತಿಕರಲ್ಲ?

ಗಾದೆಯು ಸರಿಯಾದ ಆರ್ಥ:—ಪಾದಕರವಾದ(ಹಿಂಸಾತ್ಮಕವಾಗಿ ಮೂಡಾದ) ಮಗ್ಗಾ ಮೊದಲಾದ ಸುತ್ಕಾಪಧರ್ಗಗಳನ್ನು ಧಾರ್ಮಿಕ ಧರ್ಮಗಳೆಂದು ಆಚರಿಸಿಸುವರೇ ಹೆಸರಿಗೂ ಕೂಡ ಅಪಾತ್ರವಾದುದು.

ಸ್ನೇಯ ವಾಚಕರೇ! ಈ ಮೇಲಿನ ನನ್ನ ಲೇಖನದಿಂದ ಸತ್ಯಾರ್ಥಿಗಳ ವಿಕ್ಷಾರಣವಾದ ಕಂಠೆಗಳು ಎಷ್ಟು ವಿಶೇಷಪೂರ್ಣವಾದುವು ಗಳೆಂದು ಸ್ಪಷ್ಟ ಭಾವಿಸಿರಿ

ಮಾನ್ಯ—ಈಯುತ ಸತ್ಯಾರ್ಥಿಯವರೇ! ನಾವು ಸತ್ಯಾನ್ವೇಷಕರಾಗಿರುವುದರಿಂದ ಈ ಮೇಲಿನ ಲೇಖನದಲ್ಲಿ ಪ್ರದರ್ಶಿತವಾದಂತೆ ನಮಗೆ ನೋಯುವ ಯಾವ ವಿಚಾರಗಳು ಬಂದಿದ್ದರೂ ಕ್ಷಮಿಸುವರೆಂದು ನಂಬಿ ನಮ್ಮ ಲೇಖನಿಯನ್ನು ತೆಗೆಗಿರುವೆವು.

ಜೆ: ಶಿಶುಪಾಲ ಪಾರ್ಶ್ವನಾಥ ಶಾಸ್ತ್ರಿ,
"ವ್ಯಾಖ್ಯಾನ ವಿಚಕ್ಷಣ"

ಧರ್ಮಸ್ಥಳದ ಪ್ರದರ್ಶನ ಮತ್ತು ಸಮ್ಮೇಳನ.

ಮಳೆನಾಡುಗಳ ಶ್ರಮಿಯು ಈಗ ದಿನೇ ದಿನೇ ವಿಚಾರಾಜನಕ ನಾಗ ಪಡ್ಡಿದೆ. ಇಲ್ಲಿಯ ಮುರವಸ್ಥೆಯನ್ನು ಬಲ್ಲವರೇ ಬಲ್ಲರು. ಇಂತಹ ಕಗ್ಗತ್ತಲೆಯಲ್ಲಿ ಮಾರ್ಗದರ್ಶಕರಾಗಿ ಈಯುತ ಧರ್ಮಸ್ಥಳ ಹೆಗ್ಗಡೆಯವರು ಸರ್ವಜನೋದ್ಧಾರ ಕಾರ್ಯದಲ್ಲಿ ಪ್ರವರ್ತಿಸಿ ಮಹಾ ಸಾಧನೆಯಿಂದಿಷ್ಟು ಸ್ತುತ್ಯರಾಗಿದ್ದಾರೆ. ಈ ಧರ್ಮಸ್ಥಳದಲ್ಲಿಯೇ ಈ ಜಿಗ್ಗಡೆಯವರು ನಡೆಸಿಕೊಂಡು ಬರುತ್ತಿರುವ ಸಂಧಾರಣೆಗಳಿಂದರೆ ಆಮೋಘ ದೀರ್ಘ ತಪಸ್ಸೆಂದರೂ ಸುಳ್ಳಲ್ಲ. ಜನರ ಉನ್ನತಿಯ ವಿಷಯಕವಾದ ಅವರ ಬಲವತ್ತರ ಆಶಯ ಸರ್ವ ವಿಶ್ರುತವಾದುದು.

ಈ ವರ್ಷ ಲಕ್ಷವೀಸ ಜಾತ್ರಾ ಕಾಲದಲ್ಲಿ ಒಂದು ವ್ಯವಸಾಯಿಕ ಮತ್ತು ಔದ್ಯೋಗಿಕ ಪ್ರದರ್ಶನವನ್ನು ಜರಿಗಿಸುವ ಯೋಚನೆಯು ಮಹಾ ತ್ಮನ ಬಹಳ ವಿಶೇಷವಿದೆ. ಅದಕ್ಕಾಗಿ ಈಯುತರಂತಹವರಿಗೆ ಬೇಕಾದ ಪ್ರೋತ್ಸಾಹವನ್ನು ಕೊಡುವುದು ಅಗತ್ಯವಾಗಿದೆಯೆಂದು ಸಕಾಲದಲ್ಲಿಯೇ ನಾವು ಎಚ್ಚರವಾಗಬೇಕು. ಕೃಷಿ ವಿಭಾಗವೆಂದರೆ ಸರ್ವ ಸಿಧವಾದ ಕೃಷಿ ಸಾಧನೆಗಳು, ಉಪಕರಣಗಳು; ಫಲಗಳು, ಬೀಜ ಗಳು, ಹೂಗಳು ಮುಂತಾಗಿ ಅನೇಕ ವಿಷಯಗಳನ್ನು ಸೇರಿಕೊಂಡಿರುವುದು. ಪ್ರದರ್ಶನವೆಂದರೆ "ಎಲ್ಲರೂ ಕಳುಹಿಸುವಂತಹ ಪದಾರ್ಥಗಳನ್ನು ಪ್ರದರ್ಶಿಸುವಂತಹ ಪ್ರದರ್ಶನವಿದು" ಕೇವಲವಾಗಿ ಒಂದೆರಡು ವಿಷಯವಾಗಿ ಪದಾರ್ಥ ಸಂಗ್ರಹಮಾಡಿ ಪ್ರದರ್ಶನ ಮಾಡುವಂತಹ ದಲ್ಲವಾದ ಕಾರಣ ಜನತೆಯೆಲ್ಲವೂ ಆಗಿಂದಾಗ ಪ್ರಕಟಿಸಬಹುದಾದ ಶಿಯಮ, ನಿರೀಕ್ಷಣ, ಸೂಚನೆಗಳ ಕಡೆಗೆ ಲಕ್ಷ್ಯಗೊಟ್ಟು ಸ್ವತಸ್ಸಿದ ಕಸ್ತ ಗಳಿಂದ ಸಹಾಯ ಮಾಡಬೇಕಾಗಿದೆ. ದಿವ್ಯೋಗಿಕ ವಿಭಾಗದಲ್ಲಿ ಒಂಡಿ ಕಲೆಗಳು,—ಚಿತ್ರಲೇಖನ, ಮಣ್ಣು, ಕಲ್ಲು, ಮರ, ಧಾತು ಮುಂತಾ ದುವುಗಳ ಉತ್ಪನ್ನ ಪದಾರ್ಥಗಳಿಗೆ ಬೇರೆ ಬೇರೆ ವಿಭಾಗಗಳಿರಬೇಕು. ಶಾಸ್ತ್ರೀಯ ಮಂತ್ರಗಳು—ಲೇಖ, ಭಗ್ನ, ರೇಸ, ಅಸವ ಮುಂತಾಗಿ— ಕೂಡಾ ಪ್ರದರ್ಶಿಸಲ್ಪಡುವ ಒಂದು ವಿಭಾಗವಿರುವುದು.

ಈ ಪ್ರದರ್ಶನದ ವಿಶಿಷ್ಟತೆಯೆಂದರೆ ಇದು ಶ್ರಮಿಯೊಬ್ಬ ವಿಶಾಗ ದಲ್ಲಿಯೂ ಬಹುದೊಡ್ಡವಲ್ಲದ ಪ್ರದರ್ಶನವಾಗಿರುವುದೆಂಬ ವಿಚಾರ ಮುಂದೆ ಪ್ರಕಟವಾಗಲಿರುವುದು. ಬ್ಯುನಲ್ಲಿ ತೀರುವುದಿದ್ದರೆ ಈ ಯುತ ಹೆಗ್ಗಡೆಯವರು ಕಸ್ತಪಟ್ಟು ಲಕ್ಷವೀಸ ಕಾಲದಲ್ಲಿ ಅನೇಕ ಅಡಚಣೆಗಳನ್ನು ಸಹಿಸಿಕೊಂಡು ಮಾಡುತ್ತಿರುವ ಈ ಪ್ರಯತ್ನದ ಸಾಧು ವಾದ ಮತ್ತು ಉತ್ಕೃತವಾದ ಉದ್ದೇಶವು ಕೈಗೂಡುವಂತೆ ದೇವರನ್ನು ವಿವಿಧ ಭಾಗಗಳಿಂದ ಮಹಾನುಭಾವರುಗಳು ಸ್ವದಸ್ಸರ ಹಸ್ತಗಳಿಂದ ಪ್ರದರ್ಶನಕ್ಕೆ ಯೋಗ್ಯ ಪದಾರ್ಥಗಳನ್ನು ಕಳುಹಿಸಿ ಕೊಡುವ ವಿಚಾರ ವಾಗಿ ಪರಿಪ್ರಕಟಿಸುವುದರಿಂದ ಸಹಕರಿಸಲೇ ಬೇಕಾಗಿದೆ.

ಆದರಿಂದ ಪ್ರದರ್ಶನದ ಯಶಸ್ವಿಗೆ ಸಹಕಾರಿಯಾಗುವುದರ ಜೊತೆಗೆ ಅಲಭ್ಯವಾದ ಸಂಧಿಯೊಂದು ವಸ್ತುಗಳನ್ನು ತಯಾರು ಮಾಡುವವರಿಗೆ ದೊರಕುವುದು. ಈ ಸಂಧಿಯೆಂದರೆ ವಸ್ತುಗಳ ಜಾಹೀರಾತು—ಜಾಹೀರಾತು ಮಾಡುವುದರ ಉಪಯೋಗವೆನೆಸ್ಸಿ ವೇದೇ ತಿಸುವರೆ ಇದು ಸ್ಥಳವಲ್ಲ. ಆದರೆ ಅದರ ಉತ್ಕರ್ಷ ಕೈಗಾರಿಕಾ ಚಾತುರ್ಯಗಳಿಗೆ ಇಂತಹ ಪ್ರದರ್ಶನಗಳಿಂದ ಯೋಗ್ಯ ಚಾಲನ ಸಿಕ್ಕುವ ದೆಂಬುದರಲ್ಲಿ ಅನುಮಾನವಿಲ್ಲ.

ಸರ್ವಧರ್ಮ ಸಮ್ಮೇಳನದ ವಿಚಾರವು ಪ್ರದರ್ಶನಕ್ಕಿಂತಲೂ ಪ್ರೌಢತೆಯ ಗತನಾಗಾಮದೊಡೆ ಆಗಿದೆಯೆಂದರೆ ಕಪ್ಪಲ್ಲ. ಆದರೆ ಆದರ ಯೋಜನೆಯೇ ಈಯುತ ಹೆಗ್ಗಡೆಯವರ ಧರ್ಮಾಭಿಮಾನ ಮತ್ತು ಧರ್ಮಗಳ ಕುರಿತಾದ ಪ್ರೇಮವನ್ನು ಸೂಚಿಸುತ್ತದೆ. ಇದಕ್ಕೆ ಮನಸಿ ಬೇರೆ ಬೇರೆ ಧರ್ಮಗಳ ಪ್ರತಿನಿಧಿಗಳು ಯೋಗ್ಯ ಗಮನ ಕೊಟ್ಟು ಸಾಮಾನ್ಯ ಜನರ ಅಂಧಭಾವನೆಗಳನ್ನು ಮಾಲೋಚಿಸಿ ಮಾಡಿ ಜನರಲ್ಲಿ ಐಕ್ಯ ಮತ್ತು ಪ್ರೇಮವನ್ನು ಸೃಷ್ಟಿಗೆಳೆಯುವಲ್ಲಿ ಸಹಾಯಕ ರಾಗಬೇಕೆಂದು ನಂಬಿಕ್ಕಿಸಲಾಗಿದೆ.

ಈ ಅವರ್ಷ ಕಾಲದಲ್ಲಿ ಜನತೆಯು ಯೋಗ್ಯ ಪ್ರೋತ್ಸಾಹ ಕೊಟ್ಟಾಗಿ ಕೊಡುವುದೆಂದು ನಾವಿಲ್ಲಿ ಆಶಿಸುತ್ತೇವೆ.

ಮೋಸ ಹೋಗಬೇಡಿರಿ

ಒಂದು ಜಾಹಿರಾತಿನ ಮೂಲಕ ಗ್ರಾಮಸ್ಥರಿಗೆ ಸೂಚನೆ ಕೊಟ್ಟಿದ್ದೆನು. ಅದನ್ನು ಓದಿ ಕೆಲವರು ಗ್ರಾಮಸ್ಥರಾದ ನಮಗೆ ಸಹಾಯ ಮಾಡಲು ಬಂದಿದ್ದಾರೆ. ಅವರಿಗೆ ನಾನು ಬಹಳ ಉಪಕೃತನಾಗಿದ್ದೇನೆ. ಆದರೆ ಅವರಲ್ಲಿ ಕೆಲವರು ಮಾಡಿದ ಸಹಾಯವು ಯಾವ ರೀತಿಯದ್ದೆಂದು ಹೇಳಲಿಕ್ಕಾಗುವುದಿಲ್ಲ. ಹೇಗೆಂದರೆ ಒಬ್ಬರು ಮಹಾಗ್ರಾಮ ಕಾನೂನಿನಲ್ಲಿರುವ ಅಲ್ಲ ಈ ರೀತಿ ಮಾಡಿಸುವುದೇ ತಮಗೆ ಅಧಿಕಾರ ವಿದೆಯಲ್ಲ? ನಮ್ಮಿಷ್ಟಕ್ಕೆ ವಿರುದ್ಧವಾಗಿ ಕೆಲಸ ಪಕ್ಷಕ್ಕೆ ಒಂದೀಡು ಗಳನ್ನಾದರೂ ಇರಿಸಿ, ಮಾರಕ್ಕೆರಣವನ್ನೇ ಮಾಡಿದರೂ ಕಾನೂನು ಮಾಡಿಸುವಂತೆ ಮಾಡಿ, ನಮ್ಮಿಂದ ಹಣವಿಂದ ನದುಗುಬಹುದೆಂದು ಹೇಳಿದವರಿದ್ದಾರೆ! ಅಂತೂ ನಮ್ಮಿಂದ ಆರಿಕೆಯು "ಕಳ್ಳನ ಗುಂಡಿಗೆ ಭೂತಿ ಹೊಕ್ಕಿದ ಹಾಗೆ" ಎಂಬಂತಾಗಿದೆ ನಿಜಾಂಶ.

ಇತಿ

ಗ್ರಾಮ ನಿವಾಸಿ.

ಆಯ್ಯಾ ಸ್ವದೇಶಾಭಿಮಾನಿಯೇ, ನಿನ್ನ ಕರ್ತವ್ಯವನ್ನು ಲೋಕಕ್ಕೆ ತೋರಿಸಿಕೊಡುವಂತೆ ನೀನು ಅನೇಕ ಪ್ರಮುಖರಿಯರ ಮನಸ್ಸಿನ ತೋಲಿಕೆಯನ್ನು ಪೂರೈಸಿದಂತೆ ಈ ಕೆಳಗಿನ ನನ್ನ ಪ್ರಶ್ನೆಗಳಿಗೆ ನಿನ್ನ ಪಾಡಿಕರಲ್ಲಾದರೂ ಉತ್ತರ ಕೊಡುವೆಂತೆ ಮನವಿಯಿಸಿ?

೧. ಪಾಸ್ಪೋರ್ಟ್ ಪ್ರಶ್ನೆ, ಜ್ಯಾಸ್ತಿಯರು ಮೂಡಕ್ಕೆ ಕರ್ಚಿಕ್ಕೆ ಗಳು ಯಾವುವು? ೨ ಪಂಚ ಯೆಜ್ಞಗಳೆಂದರೆ ಯಾವ ಯಾವ ಕೋಶಗಳನ್ನು ಹೊರು ಯಾರು ಇದ್ದಾರೆ. ಜವಿಭಾಗವನ್ನು ಯಾರಿಗೆ ಮುಖಾಂತರ ಸಲ್ಲಿಸಬೇಕು. ಸಂದಿಸಿಕೆ ಪ್ರತಿಫಲಗಳು ಯಾವ ಯಾವುವು

ಮೂಡದಿದ್ರಿ, ಗ್ರಾಮ ನಿವಾಸಿ.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P No. 77/1933.

1 ನಾರಾಯಣ, 2 ಈಶ್ವರ (ಮ್ಯಾನೇರರು) ಅರ್ಜಿದಾರರು. ಇವರ ರಕ್ಷಣೆಗಳು ತಾಯಿ ಸೀತು ಹೆಂಗಸು.

ಮತ್ತು

1. ವಿಠುನಾಯ್ಕ, 2 ಚಿನ್ನಯ್ಯನಾಯ್ಕ, 3. ತನಿಯ ನಾಯ್ಕ ಕೂಡಾ—ಎದ್ರಿರು.

ಸದರಿ ಮ್ಯಾನೇರ ಅರ್ಜಿದಾರರ ತಂದೆ ಮೃತಪಟ್ಟ ಕಡಂದಲೆ ಗ್ರಾಮದ ಬಲ್ಲಾಡಿ ಸೋಮಪ್ಪ ನಾಯ್ಕ, ಎಂಬವನು ಧಾರವಾಡ ಸೆಂಟ್ರಲ್ ಬೇಂಕಿನಲ್ಲಿ ಸದರಿ ಬೇಂಕಿನ ವಿಜಿಸ್ಟರ ನಂಬ್ರ 855ಕ್ಕೆ ತಾ 15-9-1930ರಲ್ಲು ರೂಪಾಯಿ 500 ವ ತಾ 6-10-1930ರಲ್ಲು ರೂಪಾಯಿ 500 ಕೂಡಾ ರೂಪಾಯಿ 1000ನ್ನು ಡಿಪೋಜಿಟ್ ಇಟ್ಟಿರುವುದರಿಂದ ಅದನ್ನು ಬಿಡ್ಡಿ ಸಮೇತ ವಸೂಲು ಪಡಿಯುವಲೆ ಸದರಿ ಮ್ಯಾನೇರರ ಕಡೆಯಿಂದ ರಕ್ಷಣೆಕಾರ ತಾಯಿಯು ಈ ಕೋರ್ಟಿಗೆ ಸಕ್ಷೇಶನ್ ಸರ್ಟಿಫಿಕೇಟು ಅಪೇಕ್ಷಿಸಿ ಬರಕೊಂಡ ಅರ್ಜಿಯು ತನಕೆ ಬಗ್ಗೆ ಇದೇ 1933ನೇ ಇಸವಿ ಸಪ್ಟಂಬರ ತಾರೀಕು 14ಕ್ಕೆ ಇಟ್ಟಿರುತ್ತದೆ ಆ ಕುರಿತು ಯಾರಾದಾದರೂ ಆಕ್ಷೇಪಣೆಗಳು ಇರುವ ದಾದರೆ ಸದರಿ ದಿವಸ ಹೆಗಲು 10 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರು ಆಗಿ ಜ್ಞಾಪಿಸಿರಿ ಮಾಡಿಕೊಳ್ಳತಕ್ಕದ್ದು —

ಕಾರ್ಕಳ 18-8-1933

K Vasudeva Kamath,
Advocate for Petitioners

Bombay, 25th August 1933.

ANNOUNCEMENT.

We have great pleasure to announce that effective immediately Messrs Bola Krishna Kamath, Lohar Street, Bombay 2 have been appointed as Chief Distributors for all our Manufactures for the District of South Kanara

ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಾವಿ ನಮ್ಮ ಸರಕುಗಳಿಗೆ ದಕ್ಷಿಣ ಕನ್ನಡ ಜಿಲ್ಲೆಗೆ ಚೀಫ್ ಡಿಸ್ಟ್ರಿಬ್ಯೂಟರ ಕ್ಕಾಗಿ ಮೆಸರ್ಸ್ ಬೋಲ ಕೃಷ್ಣ ಕಾಮತ್, ಲೋಹಾರ್ ಸ್ಟ್ರೀಟ್, ಮುಂಬಾಯಿ 2. ಇವರನ್ನು ನೇಮಿಸಿರುತ್ತೇವೆ

For the CALCUTTA CHEMICAL Co, LTD
S/d N. K. SEN,
Manager, Bombay Branch.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಔಷಧಿಯು

ಸ್ತ್ರೀಯರಿಗೊಂದು ಮಹಾ ವರ!

ಯಾವ ತರದ ಅಥವಾ ಎಲ್ಲಾ ತರದ ಮುಟ್ಟುದೋಷ, ಮುಟ್ಟಾಗುವದರಲ್ಲಿ ನೋವು, ಅಕ್ರಮ ತರದ ಮುಟ್ಟು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಭಂಜಕತನ, ಸೂತಿಕಾವಾಯು, ಅಶುದ್ಧ ರಕ್ತ, ಮೇರೆ ದಾಟ ಅಥವಾ ಬೇಕಾದನ್ನು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ ರೂ 8 ಮತ್ತು ರೂ 1-10-0.

ಕೇಸರಿ ಕುಟೀರ,

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

Sole Agents for South Kanara

ಪೊಪ್ಪುಲರ್ ಸ್ಟೋರ್ಸ್,
ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ
ಶಕ್ತಿವ ಸ್ಫರ್ತಿಕೊಡುವಂತಹ

ಸುಮಧುರ

ಝಂಡು ದ್ರಾಕ್ಷಾಸವ

ಜರೂರು ಉಪಯೋಗಿಸಿರಿ.

ಸೀಯರ ಸಲುವಾಗಿ
ಆರೋಗ್ಯ ವ ಶಕ್ತಿವರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.

ಝಂಡು ಅಶೋಕಾರಿಷ್ಟ

ಬೇಗನೇ ಉಪಯೋಗಿಸಿರಿ.

'ZANDU'

ಝಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬ್ಯಾಗಳ.

ಬೆಂಗಳೂರು ಏಜಂಟ್—ಬಿ ಪೊಪಟ್‌ಲಾಲ ಕಂಪೆನಿ, ೫೧ ಆರ್ಕಟ ಶ್ರೀನಿವಾಸಾಚಾರ ಸ್ಟ್ರೀಟ್.

ವಿಜಾಪುರ ,, ಗೋವಿಂದ ಗೋಪಾಲ ಗಾಡಗೀಳ
ಮಂಗಳೂರು ,, ದಿ ಉಲನ್ ವಾರ್ಟ್ ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ.
ಗದಗ ,, ವಿದ್ಯಾವಿಲಾಸ ಬುಕ್ ಡಿಪೊ ಬೆಳಗಾಂವ ,, ಪೊವಿಜನ್ ಸಪ್ಲ್ಯಾ ಕೊ.
ಹುಬ್ಬಳ್ಳಿ ,, ತಿಪ್ಪಣ್ಣ ಕ್ಷತ್ರಿಯ, ಧನಸೆಟ್ಟಿ ಬೈಲಹೊಂಗಲ್ ,, ಜೆ. ಬಿ ಉದಾಶೆಟ್ಟಿ.

ಬೇರೆ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ

ಆರ್ಯುರ್ವೇದ ಔಷಧಿಗಳ ಸೂಚೀಪತ್ರವನ್ನು ಮುಖ್ಯ ಏಜಂಟರಿಂದ ಪಡೆಕೊಳ್ಳಿರಿ

ಸೇವಿಸಿ ತೃಪ್ತಿಗೊಂಡ ಗಿರಾಕಿಗಳು ಇದನ್ನು

"ಜೀವನೋನ್ನದ ಅನ್ಯೂನ ನಿಜವಾದ ಶಕ್ತಿವರ್ಧಕ ಔಷಧ" "ಶಕ್ತಿ ಹೀನತೆಗೆ ಪ್ರಪಂಚದಲ್ಲಿನ ನಿಷ್ಕಾಷಧ" "ಶಕ್ತಿದಾಯಿನಿ ಔಷಧಗಳ ರಾಜ" "ಸರ್ವ ನಿಷ್ಕಾಷಧ"
"ವ್ಯಾಧಿಗಳಿಂದ ಸಂಕಟ ಪಡುವವರಿಗೆ ವರಪ್ರದಾಯಿನಿ"

ಎಂದೀ ಮೊದಲಾದ ಹೆಸರುಗಳಿಂದ ಕರೆದಿರುತ್ತಾರೆ ಪದಪೋಷ್ಯವು ರೀತಿ ತಯಾರಿಸಿದ ಈ ಔಷಧವು ಯಾವುದೆಂದರೇ ನಿಮಗೆ ಹಿತಕಾರಿಯೂ ಜೀವನಾಕಾರವೂ ಆದ

ಜೀವಾಮೃತವೇ.

ಇದು ಖಂಡಿತ ದಿ ಗೋಪಾಲಾಚಾರ್ಯರವರು ಕಂಡು ಹಿಡಿದಿರುವ ಮಹಾ ಶಕ್ತಿವರ್ಧಕ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲಾ ಸುಪ್ರಸಿದ್ಧವಾಗಿದೆ. ಗರ್ಭಕೋಶ ಇನಿಯಮಿತವಾಗಿರುವುದು ಇದು ಬಳಕೆಯಲ್ಲಿದೆ. ಪ್ರದರ ಲೌಕೋರ್ಯತ್ತ ಮಾಸ್ಕೃಕ್ಯದ ಹೀನತೆ ಪಡೆಯುವ ಆಯಾಸ ರಕ್ತ ಹೀನತೆ, ಪದರಗ ಅಕಶ್ಯಕತೆ, ಮೆದುಳು ಬೈತಕ್ಯಗುಂದಿರುವಿಕೆ, ಕೊಕದಲ್ಲಿ ಕಮಮಯಾಗಿರುವುದು ಇತ್ಯಾದಿಗಳಂತ ಪದರು ಪ್ರತಿಷ್ಠಲ್ಲಿ ಜೀವಾಮೃತವನ್ನು ಸೇವಿಸಲಾರಂಭಿಸಿ. ಇದರಿಂದ ನಮಗೆ ಪರಮಾಶ್ಚರ್ಯಕರವಾದ ಗುಣವುಂಟಾಗುವುದು. ದೊರೆಯಿಸಿ. ಸಾರಿ ಸೇವಿಸಲು ಪ್ರಾರಂಭಿಸಿದಾರಭ್ಯನೇ ಆದರ ಕ್ಷೇಷ್ಮ ಗುಣಗಳು ನಮಗೆ-ಗೋಚ್ಯವಾಗುತ್ತವೆ. ನಮ್ಮ ನೈದ್ಯರು ಅದ್ಭು ಎರಡು ಸೈಜುಗಳಲ್ಲಿ ರೂ. ೩-೮-೦ ಮತ್ತು ರೂ. ೧-೧೫-೦ರಂತೆ ಮಾರುತ್ತಾರೆ. ಅಷ್ಟಲ್ಲ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಆಯುರ್ವೇದಾಶ್ರಮಂ, ಪೋ: ಬಾಕ್ಸ್ ನಂ. ೩೮೭, ಮದ್ರಾಸು.

ಸೋಲ್ ಏಜಂಟರು:- ಸೀಲ್ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ಕಾಳಿಕಾಂಬೇಕಿ ದೇವಸ್ಥಾನದ ಬಳಿ. (ಉಡುಪಿ ಪೋಸ್ಟ್ ಆಫೀಸ್ ಪಕ್ಕ)
ದಕ್ಷಿಣ ಕನ್ನಡದ ಏಜಂಟರು:- ಪೊಪ್ಪುಲರ್ ಸ್ಟೋರ್ಸ್, ಮಂಗಳೂರು. P. No. 104

ಹತ್ತಿರ ಬೀದಿ ಆ ಹೆಂಡತಿಯನ್ನೂ ಬಿಡಿಸಿದಳು. ಹೆಂಡತಿಯೊಡನೆ ಆ ಗೌಡಯ್ಯ ಭೂಲೋಕಕ್ಕೆ ತೆರಳಿದನು. ಆಗ ಪರ್ಸ್‌ಫೋನಿಗೆ ಭೂಲೋಕದ ನೆನಪು, ಪ್ರಕಾಶದ ಹೊಳಪೂ ಅನಳ ನೆನಸ್ಸಿಗೆ ಬಂದಿದ್ದಿತು. ಹೀಗೆಯೇ ಅವಳು ಪಾತಾಳದಲ್ಲಿ ವಾಸಿಸುತ್ತಿದ್ದಳು.

ಈಗಲೂ ವಸಂತಋತುವು ಬರುತ್ತಲೇ ಜನರೆಲ್ಲರೂ ಪರ್ಸ್‌ಫೋನಿನ ನೆನಪನ್ನು ಮಾಡುತ್ತಾರೆ. ಅವಳು ಎಷ್ಟು ಆನಂದ ಪಡುವಳೋ ಎಂದು ಊಹಿಸುತ್ತಾರೆ. ಅವಳ ಆಗಲುವಿಕೆಯಿಂದ ದ್ರುಮ ಪಡುವ ಡಿಮುಟರಳು ಆನಂದದಿಂದ ತುಂಬುವಳು. ಇತರರಿಗೆ ತನ್ನ ಆನಂದದ ಗಂಧವನ್ನು ಹಚ್ಚಿಸುವಳು. ಜನರಿಗೆ ಆಹಾರವನ್ನು ಒದಗಿಸುವಳು.

ಶೋಕ.

ಪ್ರಕಾಶದಾ ತಾರೆ, ಚಂದ್ರಬಿಂಬವ ನೋಡಿ
ತೀರ್ಥ ಹಾಕುತ ನಲಿಯುತಿದ್ದೆ ನಾ ಹಾಡಿ!
ಸಾರ್ಥದಾ ಗಿರಿಯೊಡನೆ ನಲಿದಾಡುವಾ ಮನವು
ತೀರ್ಥದಲಿ ಸೀಳಿರಿದು ನುಗಿದು ಬಿದ್ದಿಹುದು. ॥ ೧ ॥

ಘೋರನಲಿ ತಣ್ಣೆಲ್ಲ! ಸೂರ್ಯನಲಿ ಪ್ರಭೆಯು
ತೋರದೆನಗೀಗ; ಜಗವೆಲ್ಲ ನಿಶೆಯು!
ಸಾರವಿಲ್ಲವು ಸಕಲ ಸಾರಸವಿಚಾರದಲಿ!
ಆರುಗಾರಿಲ್ಲ ಈಗೇಕೋ ಮನದಲ್ಲಿ! ॥ ೨ ॥

ಇಂಪಾದ ಪಕ್ಷಿ ರವ ಇಂಪಾಗಿ ಕೇಳಿಸದು
ತಂಪಾದ ತಂಗಾಳಿ ತಂಪೆನಗೆ ಕೊಡದು
ಇಂಪು ಕಂಪುಗಳೆಲ್ಲ, ಮಿತ್ತಿತರ ಭಾವಗಳು
ತಂಪಾಗಿ ಕಾದಿರುವ ಕಬ್ಬಿಣದ ತೆರವು ॥ ೩ ॥

ಹುಣ್ಣಿಮೆಯ ಚಂದಿರನು ಬೆಳದಿಂಗಳನು ವಿಂರಿ
ಬಣ್ಣಗೊಡುತಿದ್ದ ಹೊಳೆ ನೀರ ತೆರೆಯಲ್ಲ
ಉಸ್ಸತದಿ ಕುಳಿತಿರ್ದ ನಕ್ಷತ್ರಮಾಲೆಗಳು
ಎನ್ನ ಮನ ತಣಿಸುತಿದ್ದುವು ನಲಿದು ನಲಿದು ॥ ೪ ॥

ಕಾಣುತ್ತಲಿದ್ದೆನಾ ಹುಚ್ಚನೊಳಗೂ ಹುರುಳು
ಜಾಣತನವನು ನುತಿ ಕತ್ತೆಯೊಳಗು;
ಕಾಣಿಸದೆನಗೀಗ ಕೋಕ ಹೊಡೆದ ಬಳಿಕ,
ಜಾಣನೊಳಗೂ ಜಾಣತನವು ದೇವಾ! ॥ ೫ ॥

ಬಿ. ನರಸಪ್ಪ, ಮಂಗಳೂರು.

ಸ್ವೀಕಾರ.

ಶ್ರೀ ಯನ್ನುಂಜ ಶಂಕರ ಜೋಯಿಸರಿಂದ ಬರೆಯಲ್ಪಟ್ಟು ಪುಣ್ಕೂರಿನ ಕರ್ನಾಟಕ ಸಾಹಿತ್ಯ ವಿಮರ್ಶಕ ಸಂಘದಿಂದ ಪ್ರಕಟಿಸಲ್ಪಟ್ಟ 'ಗುರುಪೀಠಗಳ ಅವನತಿ ಎಂಬ ೪೪ ಪುಟಗಳ ಪುಸ್ತಕವು ಅಭಿಪ್ರಾಯದ ಬಗ್ಗೆ ತಿಳಿಸುತ್ತದೆ. ಹಿಂದೂಸ್ಥದ ಸಾಮಾಜಿಕ ಶರೀರದೊಳಗಿನ ಗುಪ್ತ ನ್ಯಾಯಿಗೆ ಹಿತೈಷಿಯನ್ನು ಮಾಡುವುದಕ್ಕೆ ಶಿಥಿಲವಾಗಿರುವ ಸಮಾಜದ ನಿಯಂತ್ರಣವನ್ನು ಮಾಡಲು ಯೋಗ್ಯವೂ ಬಲಿಷ್ಠವೂ ಪ್ರಕಾಶಮಾನವೂ ಆದ ಧರ್ಮಾಧಿಕಾರವು ಧರ್ಮ ಪೀಠಗಳಲ್ಲಿ ಉಂಟಾಗ ತಕ್ಕದ್ದು, ಮಠ ಸಂಸ್ಥೆಗಳು ಪುಳುಗ ಕೂಡದು ಎಂಬೀ ಸಂಕಲ್ಪದಿಂದ ಶ್ರೀ. ವಾಸುದೇವರು ಎ. ಸಿ. ದೇವ ಪ್ರಭುರವರಿಂದ ಆಚಾರ್ಯ ಪೀಠಾರೋಹಿ ಅವನತಿ ಎಂಬುದು ಬರೆಯಲ್ಪಟ್ಟಿತ್ತು;ಅದರ ಅನುವಾದವಿದು. ಎಲ್ಲರೂ, ಮುಖ್ಯವಾಗಿ ಗುರಾಧಿಪತಿಗಳು ಇದನ್ನು ಓದಿ ಗ್ರಹಿಸಿಕೊಳ್ಳಬಹುದು.

ಮಿ. ಟಿ. ಸಿ. ಮಹಮ್ಮದ ಕುಂಞ ಕಾಸರಗೋಡು ಇವರು ಶ್ರೀಮತಿ ಗುಲ್ಬಾಣಿ ವಗೈರರಿಗೊಂದು ಪ್ರತ್ಯುತ್ತರವನ್ನು 'ಸತ್ಯಾಸತ್ಯ ವಿವೇಚನೆ' ಎಂಬ ಶಿರೋನಾಮೆಯಿಂದ ಬರೆದಿರುತ್ತಾರೆ. ಈ ಪ್ರತ್ಯುತ್ತರದ ನಕಲು ಒಂದು ನಮಗೆ ತಲಪಿಸುತ್ತದೆ. ಆದರದಿಂದ ಸ್ವೀಕರಿಸಿರುತ್ತೇವೆ.

ಮಂಗಳೂರಿನ ಮಿತ್ರಮಂಡಲಿಯಿಂದ ಪ್ರಕಟವಾದ 'ವಿನೋದ ಚಿತ್ರ'ಗಳೆಂಬ ಗ್ರಂಥವು ಹಸ್ತಗತವಾಗಿದೆ. ಇದು ಅಖಿಲ ಸೇವಾಗ್ರಂಥಮಾಲೆಯ ಆರನೆಯ ಕುಸುಮ. ಬೆಲೆ ಹತ್ತಾಣೆ. ೧೨ ಕತೆಗಳಿವೆ.

ಬೆಳಗಾಂವಿಯ ಒಂದಾಣೆ ಮಾಲೆಯ ೧೧–೧೨ನೇ ಪುಷ್ಪಗಳಾಗಿ ಆದರ್ಶನೊಬ್ಬನೇ 'ಕವಿಕರ್ಮ' ಎಂಬ ಎರಡು ಕತೆ ಪುಸ್ತಕಗಳು ಬಂದಿವೆ. ಮೊದಲನೆಯದ್ದನ್ನು ಶ್ರೀ. ಕುದ್ರಿ ವಾಸುದೇವ ತೀರ್ಥಯವರು ಬರೆದರು. ಎರಡನೇಯದ್ದನ್ನು ಶ್ರೀ. ಕೋ. ವಿಶ್ವರಾಮ ಕಾರಂತರು ಬರೆದರು. ಸಾಚೀಯ ಕತೆಗಳು.

ಧಾರವಾಡ ಜಯ ಕರ್ನಾಟಕ ಪ್ರೆಸ್ಸಿನ ಹೆಸರು ಮೋಹನ ಪ್ರೆಸ್ ಎಂದು ಬದಲಾಗಿದೆ. ನುಸೆಪೀಠರ ಗ್ರಂಥ ಸ್ವಕಾಶನ ಗ್ರಂಥ ಮಾಲೆಯಿಂದ ಮೊದಲನೆಯ ಕುಸುಮವಾಗಿ ಹೊರಡಿರುವ 'ಸುದರ್ಶನ' ಎಂಬ ಕಥೆಯು ತೈಸೇರಿರುತ್ತದೆ. ಇದನ್ನು ಆನಂದ ಕಂದರು ಬರೆದರು. ಶ್ರೀ. ವಿ. ಕೃ. ಗೋಕಾಕರು ಮುನ್ನುಡಿಯನ್ನು ಬರೆದಿರುತ್ತಾರೆ. ಭಾವಗರ್ಭಿತ ಕತೆ, ಭಾಷೆಯು ಮಧುರವಾಗಿದೆ. ಎಲ್ಲರೂ ಓದತಕ್ಕದ್ದಿದೆ. ಬೆಲೆ ೧೨ ಆಣೆಗಳು.

ಶಾರದಾ ಭಾಷಪಾನಿ, ಮಂಗಳೂರು.

ಸಾಹಿತ್ಯ ಸಂಚಿಕೆ

ಸ್ವದೇಶಾಭಿಮಾನಿ

ಸಂಪುಟ ೨ ಸಪ್ಟೆಂಬರ ೧೧—೯—೧೯೫೬. ಸಂಚಿಕೆ ೬

— ಅನುಕ್ರಮಣಿಕೆ —

	ಪುಟ
ಕನ್ನಡ ಉಚ್ಚಾರಗಳು	೪೯
ಕಳೆದು ಹೋದ ಮಗಳು	೫೪
ಶ್ರೀ ಶಾಕಾಣರ್ಯ ಕರ್ಮ	೫೭
ನಮ್ಮ ಮನೆ ಅಷ್ಟಟ	೫೦
ಕೋಕ ಒಂದು ಚಿತ್ರ	
ಹಳ್ಳಿಯ ಹಾಡು. ಬಂಗಳಾನು.	

ಸಪ್ಟಂಬರ ತಾರೀಕು ೧೬ನೇ ಶುಕ್ರವಾರ ೧೯೫೬

ಕನ್ನಡ ಉಚ್ಚಾರಗಳು.

ಭಾಷೆಯ ಅಂತರಾತ್ಮವು ಅದರ ಉಚ್ಚಾರದಲ್ಲಿ ನೆಲೆಯಾಗಿದೆ. ಯಾವುದೊಂದು ಭಾಷೆಯ ಶಬ್ಧ ಸಂಗ್ರಹವು ನಮ್ಮ ಸ್ವಾಧೀನವಾಗಿರಬಹುದು. ಅದರ ವ್ಯಾಕರಣ, ರೂಢಿಗಳು ನಮಗೆ ಸಂಪೂರ್ಣ ತಿಳಿದಿರಬಹುದು. ಆದರ ಉಚ್ಚಾರವು ಅದಿತ ವಿಷಯವಲ್ಲವಾದರೆ ಆ ಭಾಷೆಯ ಸಿಹಿಯು ನಮಗೆ ಸಿಗಲಿಲ್ಲವೆಂದಂತಾಯಿತು. ಇಷ್ಟು ಅತ್ಯಗತ್ಯದ ಅಂಶವಾದರೂ, ಉಚ್ಚಾರವನ್ನು ಕಲಿಸುವುದಾಗಲಿ, ಕಲಿಯುವುದಾಗಲಿ, ಸುಲಭದ ಕೆಲಸವಲ್ಲ; ತಿರಿಗಿ ತಿರಿಗಿ ಕಿವಿಯಿಂದ ಕೇಳಿ, ಬಾಯಿಯಿಂದ ಉಚ್ಚರಿಸಿಯೆ ಸರಿಯಾದ ಉಚ್ಚಾರವು ಬರಬೇಕು.

ಅಕ್ಷರಗಳು ನಮ್ಮ ಮಾತುಗಳನ್ನು ಚಿತ್ರಿಸುವ ಚಿಹ್ನೆಗಳೆಂಬುದು ನಿಜ. ಆದರೆ ಬರೆ ಅಕ್ಷರಗಳಿಂದ ನಮ್ಮ ಮುಖದಿಂದ ಹೊರಡುವ ಶಬ್ಧ ಭೇದಗಳನ್ನು ರೂಪಿಸುವುದು ಕಷ್ಟ. ಇಂಗ್ಲಿಷು ಮೊದಲಾದ ಯುರೋಪಿನ ಭಾಷೆಗಳಲ್ಲಿ ಬರೆದ ಅಕ್ಷರಗಳಿಗೂ ಆಡುವ ಉಚ್ಚಾರಗಳಿಗೂ ಸಂಬಂಧವೇ ಇಲ್ಲವೆಂದರೆ ಅತಿಶಯೋಕ್ತಿಯಾಗದು. ಆದರೆ ಸಂಸ್ಕೃತ ಅಕ್ಷರಮಾಲೆಯನ್ನು ಅನುಕರಿಸುವ ನಮ್ಮ ದೇಶದ ಅಕ್ಷರಮಾಲೆಗಳು ಹೆಚ್ಚಿನ ಸುಟ್ಟಿಗೆ ಶಬ್ಧಗಳನ್ನು ಸರಿಯಾಗಿ ಚಿತ್ರಿಸುತ್ತವೆ.

ಆದರೆ ನಮ್ಮ ಅಕ್ಷರಮಾಲೆಯು ದೋಷರಹಿತವೆಂದು ಹೇಳಲು ಬರುವುದಿಲ್ಲ. ಉದ್ದಾಹರಣೆಗಾಗಿ ಅ ಮತ್ತು ಆ ಎಂಬ ಅಕ್ಷರಗಳನ್ನು ಪರೀಕ್ಷಿಸುವ. ವಾಡಿಕೆಯಲ್ಲಿ ಅ ಎಂಬುದು ಹ್ರಸ್ವ ಅ ಎಂಬುದು ದೀರ್ಘವೆನ್ನುತ್ತಾರೆ. ಆ ಎಂಬ ಶಬ್ಧವನ್ನು ಸಂಸ್ಕೃತ ಆ ಎಂಬಂತೆ ಉಚ್ಚರಿಸಿದರೆ ಅದನ್ನು ಎಷ್ಟು ದೀರ್ಘ ಮಾಡಿದರೂ ಅ ಎಂದಾಗುತ್ತದಲ್ಲದೆ, ಆ ಎಂದು ಆಗುವುದಿಲ್ಲ. ಹಾಗಾದರೆ ಆ ಮತ್ತು ಅ ಸ್ವರಗಳು ಬೇರೆ ಬೇರೆ ಸ್ವರಗಳೆ? ಹಾಗಿದ್ದರೆ ಕಾನ್ನಡಗಳಲ್ಲಿ ಪದಾಂತ್ಯದ ಅ ಕಾರವನ್ನು ಆ ಕಾರವಾಗಿ ಉಚ್ಚರಿಸುವುದೆಷ್ಟು ವೆಲ್ಲಿಯದು? "ಎಂದ ನಾ ಮುನಿಪಾ" ಎಂದು ಅಂತ್ಯವಾದರೆ ಟಮುವಾಗ "ಎಂಡ ನಾ ಮುನಿಪಾ" ಎಂದು ಉಚ್ಚರಿಸುತ್ತೇವೆಯಲ್ಲವೆ? ಮಲಯಾಳ ಭಾಷೆಯವರು ಮಾತಾಡುವಾಗ ಕಿವಿಗೊಟ್ಟು ಕೇಳಿದರೆ ಅವರು ರಾಮ ಎಂಬ ಶಬ್ಧವನ್ನು ರಾಮಾ ಎಂದು ಉಚ್ಚರಿಸುತ್ತಾರೆ. ಅಂತ್ಯದ ಅ ಕಾರವು ಹ್ರಸ್ವ ಅ ಕಾರದಂತಿದೆ. ಕನ್ನಡದಲ್ಲಿ ಸಹ ಅ ಅಕ್ಷರವು 'ಆ'ಕಾರದ ಹ್ರಸ್ವವನ್ನು ಸೂಚಿಸುತ್ತಿದೆಯಲ್ಲದೆ (ಆ ಕಾರವು ಅ ಕಾರದ ದೀರ್ಘವನ್ನಲ್ಲ ಎಂದು ನಮಗೆ ತೋರುತ್ತದೆ. ಇನ್ನೊಂದು ಪ್ರಶ್ನೆ, ಕೆದು ಮತ್ತು ಕೆಳಗೆ ಎಂಬ ಪದಗಳಲ್ಲಿ ಕ ಅಕ್ಷರದ ಉಚ್ಚಾರಕ್ಕೆ ಒಂದೇ ಸ್ವರವಲ್ಲ; ಎಂತೂ ಮಂಗಳೂರಿನವರು ಮಾತಾಡುವಾಗ ಕೆಳಗೆ ಎಂಬ ಪದದ ಕೆ ಕೆದು ಎಂಬ ಪದದ ಕೆ ಸ್ವರಕ್ಕಿಂತ ಅಗಲವಾಗಿದೆ ಎನ್ನ ಬಹುದು.

ಹೀಗೆ ಉದಾಹರಣೆಗಳನ್ನು ಕೊಡುತ್ತ ಹೋದರೆ ಈ ಬರೆಹವು ಅತಿ ದೀರ್ಘವಾಗಬಹುದು. ಒಟ್ಟಾರೆ ಹೇಳುವುದಾದರೆ, ಕನ್ನಡ ಉಚ್ಚಾರಕ್ಕೂ ಅಕ್ಷರಮಾಲೆಗೂ ಸಂಪೂರ್ಣ ವಿಶಮತೆಯಿಲ್ಲ. ಬರೆದಂತೆ ಓದಿದರೆ ಕನ್ನಡವು ಕನ್ನಡಿಗರ ಕಿವಿಗೆ ಕರ್ಕಶವಾಗುತ್ತದೆ. ಬರೆದ ಕನ್ನಡಕ್ಕೂ ಓದುವ ಕನ್ನಡಕ್ಕೂ ಭೇದವಿದೆಯೆಂಬುದು ವಿವಾದವೆಂದು ಎಲ್ಲರೂ ಒಪ್ಪುವ ಅಗತ್ಯವಿದೆ.

ಒಂದೊಂದು ಶಬ್ಧವನ್ನು ಉಚ್ಚರಿಸುವುದರಲ್ಲಿ ಇರುವ ಭೇದಕ್ಕಿಂತ ವಾಕ್ಯಗಳನ್ನು ಉಚ್ಚರಿಸುವಾಗ ಬರ್ಗುನ ಭೇದವು ಹೆಚ್ಚು. ವಾಕ್ಯಗಳನ್ನು ಉಚ್ಚರಿಸುವಾಗ ಆಗುವ ಕಂಠಧಾರದ ವಿರುತ್ತಗಳಿಂದ ಒಬ್ಬನು ಮಂಗಳೂರಿನವನು, ಕುಂದಾಪುರದವನು, ಕಾರವಾರದವನು, ಮೈಸೂರಿನವನು ಎಂದು ಕಂಡು ಹಿಡಿಯಲು ಸಾಧ್ಯವಿದೆ.

ಕನ್ನಡ ಭಾಷೆಯಲ್ಲಿ—ಗ್ರಾಂಥಿಕ ಭಾಷೆಯಲ್ಲಾದರೂ—ಏಕ
ಪುಸ್ತಕವೂ ಪ್ರಚುರ ಬಂದಿದೆ. ಆದರೆ ಉಚ್ಚಾರದಲ್ಲಿಯೂ ಏಕ
ವಾಕ್ಯತೆಯನ್ನು ತರಲು ಪ್ರಯತ್ನಗಳು ಆರಂಭವಾಗಲಿಲ್ಲ. ಇನ್ನಾ
ಆ ವಿಷಯವನ್ನು ಆರಂಭಿಸಬೇಕು. ಕನ್ನಡದಲ್ಲಿ ನುರಿತವರು
ಎಂದು ಕೂಡಿ ಕನ್ನಡ ಸ್ವರ, ವ್ಯಂಜನ, ವಾಕ್ಯಗಳು ಬೇರೆ ಬೇರೆ ಕಡೆಗಳಲ್ಲಿ
ಹೇಗೆ ಉಚ್ಚರಿಸಲ್ಪಡುತ್ತವೆ, ಅಂಥ ಭೇದಗಳಲ್ಲಿ ಯಾವುದನ್ನು
ಸಾಮಾನ್ಯವಾಗಿ ಹೇಗೆದುಕೊಳ್ಳಬೇಕು ಎಂದು ಮುಂತಾದ ಪ್ರಶ್ನೆಗಳನ್ನು
ಮಾಡಿ ಇತ್ಥರ್ಥಿಸುವುದು ಅಗತ್ಯವಲ್ಲವೆ? ಕನ್ನಡದ ಉಚ್ಚಾರ
ವಿಷಯಗಳನ್ನು ಸರಿಯಾಗಿ ಗುರ್ತಿಸುವಂತೆ ಲಿಪಿಯಲ್ಲಿ ಅಗತ್ಯವಿದ್ದ
ಸಂಜ್ಞೆಗಳನ್ನು ಮಾಡಬೇಕು. ಅಲ್ಲಲ್ಲಿ ಉಪಾಧ್ಯಾಯರ ಕೂಟಗ
ಸೇರಿ ಕೂಡಿಸಿ ಸರಿಯಾದ ಉಚ್ಚಾರಕ್ಕಿರುವ ಪ್ರಾಮುಖ್ಯತೆಯನ್ನು
ನಿರ್ಧರಿಸಬೇಕು. ಇಂಥ ಪ್ರಯತ್ನಗಳಿಂದ ಕ್ರಮೇಣ, ಕನ್ನಡದ
ಉಚ್ಚಾರಕ್ಕೆ ಒಂದು ನಿಘಂಟು ಬರುವುದು. ಉಚ್ಚಾರವು ಒಂದೇ
ಆಗುವುದು.

ಹಳ್ಳಿಯ ಹಾಡು.

ಕಂಬಿಳ್ಳಳ್ಳಿಡೆ ಮಿಂಚುಳ್ಳ ಮುಗಿಲಿಡೆ
ಎಳ್ಳಿನ್ನೆ ಮುರನೆಡೆ ಈ ತಿಂಗಳು
ಕಾಯು ಹೆಗರಿಡೆ ॥ ೧ ॥

ಗೊಲ್ಲಗಿರಿಗೆ ತಂಪು ಡಂದ್ರ ಲೋಕಕೆ ತಂಪು
ಹೊನ್ನ ಸೊಸಲಿಗೆ ಓರಿಮಗ
ಕಬ್ಬ ಬಲು ತಂಪೆ ॥ ೨ ॥

ಹೆಣ್ಣಾಟಿಕೆ ತಂದ ಮತ್ತೆ ಯೌವನ ತಂದ
ಸೊಲಿ ತಂದ ತರೆಗಡ್ಡ ಬಾಲೆ
ತೋಡಿದರು ಪಗೆ ತಂದ ॥ ೩ ॥

ಎಲ್ಲಿಯಾದರು ತಂದು ನೆಲ್ಲಿ ಹಣ್ಣಾದಂತೆ
ಗೊಂದು ತಿಳಿ ಹುಟ್ಟಿ ಬೆಳೆದರೆ
ಗಂಡುಮ್ಮಕ್ಕಳಿಗೆ ತಂದ ॥ ೪ ॥

ಮಾಗಿಯ ಮುಳ್ಳು ಪಡೆವುದೆ ಅತಿ ತಂದ
ಮಂದು ಮಧಿಲಲ್ಲಿ ಕೂಪಾಗ
ತಂದೆ ತಂದೆ ಅವಗಿಲ್ಲ ॥ ೫ ॥

ಕಾಯ್ದು ಮುಳ್ಳು ಏಗಳು ನೆನೆಸಲು
ಗ ಮಿಯ ಉಡುವಾಗ ಹತ್ತಿಲ
ಎಲ್ಲಿ ನೆಲೆವು ॥ ೬ ॥

ಳಿ ದಾಕ್ಕೆ ಪಕ್ಕ ಕಟ್ಟಿತು ಗೂಡ
ಬಿಡುಲ್ಲಿ ಬಿಲಿಗಾರ
ತಂದಿಲೆಡೆ

"ನಮ್ಮ ಮನೆ ಅಪ್ಪಮ್ಮ"

— ೨ —

ಲೇಖಕರು ಜಿ. ವೆಂಕಟೇಶ ಭಂಡಾರಿ ಬಿ. ಎ
(ಸಣ್ಣಡೊಂದು ಹರಿಕೆ)

ಅಪ್ಪಮ್ಮ ಎಂಬುದು ನನಗೊಂದು ವಿಚಿತ್ರ ತರದ ಸನುಸ್ಯೆಯಾಗಿ ಕಂಡುಬರುತ್ತಿತ್ತು. ನಮ್ಮ ಮನೆಯ ಶಾಲಾಹುಡುಗರು "ಅಪ್ಪಮ್ಮ-ಗೋಕುಲಾಷ್ಟಮಿ" ಎಂದು ಹೇಳುತ್ತಿದ್ದಾಗ ನನ್ನ ಮೈ ಮುಳ್ಳುಗಳೆಲ್ಲಾ ಎದ್ದು ನಿಲ್ಲುತ್ತಿದ್ದುವು. ಕಾರಣ: ನನಗೆ ಉಪನಯನ ಕಟ್ಟಿ ಏಳೆಂಟು ವರ್ಷಗಳಾದರೂ ಅಪ್ಪಮ್ಮ ಆಚರಿಸುವ ಭಾಗ್ಯವು ನನಗೆ ಬರಲಿಲ್ಲ. ನಮ್ಮದು ದೊಡ್ಡ ಕುಟುಂಬ, ಕುಟುಂಬ ದೊಡ್ಡದಾದ ಮೇಲೆ ಜನನ ಮರಣದ ಸಂಖ್ಯೆಯೂ ಧೊಡ್ಡದು! ಅದ್ಯಪ್ಪದಿಂದಲೋ ದುರಾದ್ಯಪ್ಪದಿಂದಲೋ ಏಳೆಂಟು ವರ್ಷಗಳಿಂದ ಶ್ರಾವಣ ಬಹುಳ ಅಷ್ಟಮಿಗೆ—ಕೃಷ್ಣಾಷ್ಟಮಿಗೆ ನಮಗೆ ಸೂತಕ ಬರುತ್ತಿತ್ತು. ಹಬ್ಬ ತಪ್ಪಿದರೂ ಹೋಳಿಗೆ ತಪ್ಪದು ಎಂಬ ಮಾತಿನಂತೆ, ಆಚರಣೆ ತಪ್ಪಿದರೂ ಲಡ್ಡುಗಳ ನೈವೇದ್ಯ ತಪ್ಪಲಿಲ್ಲಾ ಪುರೋಹಿತ ಭಟ್ಟರೇ ಬಂದು ಎಲ್ಲವನ್ನೂ ಮಾಡಿ ನಮ್ಮ ಹೊಟ್ಟೆಗೆ ಲಡ್ಡುಗಳನ್ನೇ ತುಂಬಿಸುತ್ತಿದ್ದರು; ಅಷ್ಟೇ ಅಲ್ಲದೆ ನಮಗೆ ಆಚರಣೆ ಮಾಡಲು ಅದ್ಯಪ್ಪವಿಲ್ಲದಂತೆ ಕಾಲಚಕ್ರವು ತಿರುಗುತ್ತಿತ್ತೋ?

ಈ ವರ್ಷ ನೂಲುಹುಣ್ಣಿಮೆಯಾದ ನಂತರ, ಶ್ರಾವಣ ಪಕ್ಷಿಯು ಮಳೆಯ ಹನಿಗಳಾಗಿ ಹಾಕೊರೆಯುವಂತೆ, ಅಪ್ಪಮ್ಮಿಗಾಗಿ ಎದುರು ನೋಡುತ್ತಿದ್ದೆವು—ನಾವು. ಏನು? ಅಪ್ಪಮ್ಮಿಗೆ ಸೂತಕ ಬರುವುದೋ ಎಂದು! ಮಹಾಪುಣ್ಯ! ಹಿರಿಯರ ಕಿರಿಯರ ಪುಣ್ಯ! ಸೂತಕದ ಸುಳಿವಿಲ್ಲಾ. ಎಷ್ಟು ಆಶೆ? ಹೆಂಗುಸರ ಕೂಟದಲ್ಲಿ ನನಚೇತನವು ಬಂದಿತ್ತು ಈ ವರ್ಷ.

ಇಂದು ಆದಿತ್ಯವಾರ—ಅಪ್ಪಮ್ಮಿ; ಒಟ್ಟು ನಮಗೆ ಹದಿನೈದು, ಹದಿನಾರು ಸಾವಿರ ತುಳಸೀ ದಳಗಳು ಬೇಕು. ಪಟ್ಟಣದಲ್ಲಾದರೆ ಹಣ ಕೊಟ್ಟರೆ ಸಿಕ್ಕುವುದು. ನಮ್ಮಲ್ಲೇನೂ ತುಳಸಿ ಮೂರಲಿಕ್ಕೆ ಬರುತ್ತಿದ್ದಿಲ್ಲಾ. ಕೂಲಿ ಆಳುಗಳಿಂದ ತುಳಸಿ ತರಿಸಲಿಕ್ಕೆ ಮನಸ್ಸಿಲ್ಲಾ. ಆದುದರಿಂದ ಬೆಳಿಗ್ಗೆ ಎದ್ದು ನಾವು, ಐದಾರು ಜನರು—ಎಲ್ಲರೂ ಹುಡುಗರೇ—ತುಳಸಿ ಒಟ್ಟುಮಾಡಲು ಹೋದೆವು. ನಮ್ಮಲ್ಲಿ ಏರಡು ಮೈಲು ದೂರಕ್ಕೆ ತುಂಬಾ ತುಳಸಿ ಇರುವುವೊಂದು ಸ್ಥಳವಿದೆ. ಊರಿನ ಎಲ್ಲಾ ಜನರು ಅಲ್ಲಿಂದ ತಂದರೆ ನಮ್ಮ ಪ್ರಯತ್ನಕ್ಕೆ ಸೊನ್ನೆ ಸುರ್ಕಾ ಎಂದು ತಿಳಿದು ಸೂರ್ಯನು ಉದಯಿಸುವ ಮುಂಚೆಯೇ ಒಬ್ಬೊಬ್ಬರು ಒಂದೊಂದು ಬುಟ್ಟಿಯನ್ನು ಕೆಗೆದುಕೊಂಡು ಓಡುತ್ತಾ ಬಂದೆವು: ತುಳಸೀ ವನವನ್ನು ಕಂಡಿವು. ಓಡಿಬಂದ ಆಯಾಸವನ್ನು ವಿಶ್ರಮಿಸಿ ಕೊಳ್ಳಲು ಕುಳಿತುಕೊಳ್ಳುವಷ್ಟರಲ್ಲಿ ಇನ್ನಾರೋ ತುಳಸಿ ಕೊಯ್ಯುವುದನ್ನು ಕಂಡಿವು. ಎಷ್ಟೊಲ್ಲಿ ಳಳವಳವಾಗಲಿಕ್ಕೆ ಪ್ರಾರಂಭವಾಯಿತು. ನಮಗೆ ಸಾಕಷ್ಟು ತುಳಸಿ ಸಿಕ್ಕದಿದ್ದರೆ ಎಂಬ ವರ್ಷದ ಆಚರಣೆಯನ್ನು ಇಂದು ಹೇಗೆ ಮಾಡಲಿ? ಹೊಳೆಯಿತು! ಅವರೆಲ್ಲರೂ ಬಹಳ ಶಾಸ್ತ್ರತೆಯಿಂದ ಕೊಯ್ಯುತ್ತಿದ್ದರೆ, ನಾವು ದೊಡ್ಡ ತುಳಸಿ ಗಿಡ

ನೊಬ್ಬನಿರುವನು. ಆತನು ಯಾರಿಗೂ ಹೋಗಗೊಡುವುದಿಲ್ಲ. ಅವನನ್ನು ನೀನು ಹೇಗೆ ತಪ್ಪಿಸಿಕೊಳ್ಳುತ್ತಿ?"

"ಹಾಗಾದರೆ ನನ್ನ ಮಗಳು ಹೋದಳೆ. ಅವಳ ಮೇಲೆ ನನ್ನ ಆಶೆಯು ಮುಗಿಯಿತೆ?" ಎನ್ನುತ್ತಾ ಹುಚ್ಚಳಂತೆ ನಾಶಾಡ ತೊಡಗಿದಳು. ಅಲ್ಲಿಂದ ಮನೆಗೆ ನಡೆದು ದುಃಖದಲ್ಲಿಯೇ ಅವಿತು ಕೊಂಡಳು.

ಡೆಮಿಟರಳು ವ್ಯವಸಾಯದ ಜೀವಕೆಯಲ್ಲವೆ? ಅವಳ ದುಃಖದ ಪರಿಣಾಮವೇನಾಯಿತು ಬಲ್ಲಿರಾ? ಕಿಂಗಳುಗಳು ಕಳೆದಷ್ಟಕ್ಕೆ ಈ ದೇವತೆಯ ವಿಲಾಪವು ಹೆಚ್ಚಾಯಿತು. ವ್ಯವಸಾಯದ ಕಡೆಗೆ ಅವಳ ದೃಷ್ಟಿಯು ಹೋಗಲಿಲ್ಲ. ಜನರು ಭೂಮಿಯನ್ನು ಊಳಿ ಬೀಜ ವನ್ನು ಬಿತ್ತಿದರು. ಡೆಮಿಟರಳ ಆಶೀರ್ವಾದ ಸಿಗಲೆಂದು ಅವಳಿಗೆ ಪ್ರಾರ್ಥಿಸಿದರು. ಆದರೆ ಅವುಗಳು ಡೆಮಿಟರಳಿಗೆ ಕೇಳಿಸಲಿಲ್ಲ. ತನ್ನ ಕಳೆದು ಹೋದ ಮಗಳ ಚಿಂತೆಯೇ ಅವಳಿಗೆ! ಭೂಮಿಯ ಮೇಲೆ ಮಳೆಯು ಜಿನ್ನಾಗಿ ಬೀಳುತ್ತಿತ್ತು. ಆದರೆ ಸೈರು ಹುಟ್ಟ ಲೊಲ್ಲದು. ಹುಲ್ಲು ಬೆಳೆಯದೆ ನೆಲವು ಮರುಭೂಮಿಯಂತೆ ತೋರ ಹತ್ತಿತು. ದನಕರುಗಳು ಆಹಾರವಿಲ್ಲದೆ ಬಳಲಿದವು. ಮನುಷ್ಯ ರಿಗೂ ಉಪವಾಸ ಬೀಳುವ ಸನುಯ ಒದಗಿತು. ಡೆಮಿಟರಳಿಗೆ ಎಷ್ಟು ಪ್ರಾರ್ಥಿಸಿಕೊಂಡರೂ ನಿರರ್ಥಕವಾಯಿತು.

ನಿರಾಶೆಯಿಂದ ಜನರೆಲ್ಲರೂ ಇತರ ದೇವತೆಗಳೊಡನೆ ಮೊರೆ ಇಟ್ಟರು. ಇದನ್ನು ಕೇಳಿದೊಡನೆ ದೇವತೆಗಳಿಗೆ ವ್ಯಸನವಾಯಿತು. ಈ ರೀತಿಯಲ್ಲಿ ನಡೆದುಗೊಟ್ಟರೆ ಲೋಕವು ದುಃಖಮಯವಾದೀತೆಂದು ಅದರು ಬಗೆದು, ಇದನ್ನು ಹೇಗಾದರೂ ಸುಧಾರಿಸಬೇಕೆಂದು ಆಲೋಚಿಸಿದರು. ಡೆಮಿಟರಳ ದುಃಖವನ್ನು ನಿವಾರಿಸದೆ ಬಗೆ ಹರಿ ಯುವುದಿಲ್ಲ. ಅದಕ್ಕಾಗಿ ತಮ್ಮ ದೂತನಾದ ಹರ್ಮಿಸನಿಗೆ ಪಾತಾಳ ಲೋಕಕ್ಕೆ ಕಳುಹಿಸಿದರು. ಆತನು, "ಪ್ಲೂಟೊ ದೇವನೆ, ಪರ್ಸ ಫೋನೆಯನ್ನು ಭೂಲೋಕಕ್ಕೆ ಕಳುಹಿಸು. ಇಲ್ಲದಿದ್ದರೆ ಮಾನವ ಜಾತಿಯು ಅಳಿದುಹೋಗುವುದು. ದೇವತೆಗಳೆಲ್ಲ ಇದನ್ನು ನಿನಗೆ ತಿಳಿಸಲು ನನ್ನನ್ನು ಕಳುಹಿಸಿರುವರು" ಎಂದನು. ಪ್ಲೂಟೊ ದೇವ ನಿಗೆ ಅದನ್ನುಲ್ಲಂಘಿಸಲು ಅಸಾಧ್ಯವಾಯಿತು. ಕೂಡಲೆ ಪರ್ಸ ಫೋನೆಯನ್ನು ಕಳುಹಿಸಿ ಕೊಟ್ಟನು.

ಪರ್ಸಫೋನೆಯು ನನ್ನ ಮುಂದೆ ನಿಂತಿರುವಳು ಎಂದು ಡೆಮಿ ಟರಳು ಮೊದಲು ನಂಬಲಿಲ್ಲ. ಆದರೆ ಕ್ಷಣವೆ ಅವಳನ್ನು ನೋಡಿ ಅನಂದದಿಂದ ಅವಳು ತಬ್ಬಿಕೊಂಡು ಮುದ್ದಿಟ್ಟಳು. "ಇನ್ನು ನಾನು ನಿನ್ನನ್ನು ಬಿಟ್ಟು ಹೋಗಲಾರೆನು" ಎಂದು ಹೇಳುತ್ತಲೇ ಇದ್ದಳು. ತಾಯಿ ಮಗಳ ಈ ಸಂತೋಷವನ್ನು ಕಣ್ಣಾರೆ ಕಂಡು ಹರ್ಮಿಸನು ಆನಂದಭಾಷ್ಪಗಳನ್ನು ಸುರಿಸಿದನು. "ನಿನ್ನ ಉಪ ಕಾರವನ್ನು ನಾನು ಎಂದೂ ಮರೆಯಲಾರೆನು." ಹರ್ಮಿಸನು "ನಾನು ಬರೀ ದೇವತೆಗಳ ಹರಕಾರಿಯಾಗಿರುವೆನು. ಅವಳ ಇಡೀ ಕಥೆಯನ್ನು ಮೊದಲು ತಿಳಿದುಕೊ. ಆಗ ನಿನಗೆಲ್ಲ ತಿಳಿಯುವುದು. ನಿನ್ನ ಮಗಳು ವರ್ಷದಲ್ಲಿ ಆರು ತಿಂಗಳುಗಳು ಮಾತ್ರ ನಿನ್ನೊಡನೆ ಇರುವಳು. ಉಳಿದ ಸಮಯ ಅವಳು ಪಾತಾಳ ಲೋಕದಲ್ಲಿಯೇ ಇರಬೇಕಾಗುವುದು. ಕೆಲವು ವರ್ಷಗಳಲ್ಲಿ ಅವಳು ಪ್ಲೂಟೊ ದೇವನ ರಾಣಿಯಾಗುವಳು" ಎಂದು ಹೇಳಿ ಮಾಯವಾದನು.

"ಅಯ್ಯೊ! ಇದೆಂತಹ ಹೊಸ ಮಾಟ! ಸುಖದ ನಡುವೆ ದುಃಖವೆ? ಅದೇನು? ಹಾಗಾಗಬೇಕೆ?" ಎಂದು ವಿಲಾಪಗೊಂಡಳು.

"ತಾಯಿಯೇ ಗಾಬರಿಯಾಗಬೇಡ. ಈ ವಿಚಿತ್ರ ಘಟನೆಗೆ ಕಾರಣವನ್ನು ತಿಳಿಸುವೆನು. ನಾನೊಮ್ಮೆ ಪಾತಾಳ ಲೋಕದಲ್ಲಿ ಒಬ್ಬಂಟಿಗಳಾಗಿಯೇ ತಿರುಗುತ್ತಿದ್ದೆನು. ಬಾಯಾರಿಕೆಯಿಂದ ಗಂಟಲು ಆರಿಹೋಗಿತ್ತು. ದಾಳಿಂಬದ ಸಮಯೊಂದು ಅಲ್ಲಿದ್ದಿತು. ಅದಕ್ಕಾದ ದಾಳಿಂಬ ಫಲವೊಂದನ್ನು ಕಿತ್ತು ತಿಂದು ಬಿಟ್ಟೆನು. ಆರು ಬೀಜಗಳು ನನ್ನ ಹೊಟ್ಟೆಯೊಳಗೆ ಹೋದುವು. ಆಗ ಥಟ್ಟನೆ ವೆಕ ವಾಯಿತು. ಏನಾದರೂ ಮಾಟವಿರಬಹುದೆಂದು ಸಂಶಯವ್ಯಾಯು ತಿನ್ನುವುದನ್ನು ನಿಲ್ಲಿಸಿ ಬಿಟ್ಟೆನು. ವಿಚಾರಿಸಿ ಕೇಳಿದಾಗ, ನಾನು ತಿಂದ ವ್ಯಕ್ತಿಯೊಂದು ಬೀಜಕ್ಕಾಗಿ ಒಂದೊಂದು ತಿಂಗಳು ಪಾತಾಳ ಲೋಕದಲ್ಲಿ ನಾನು ಇರಬೇಕಾಯಿತು.

ಮಗಳು ಇಲ್ಲದಾಗ ಡೆಮಿಟರಳು ದುಃಖ ಪಡುವಳು. ಜನರ ಪ್ರಾರ್ಥನೆಗೆ ಕಿವಿಗೊಡುವುದಿಲ್ಲ. ಆಗ ವ್ಯವಸಾಯವು ನಿಲ್ಲಬೇಕಾ ಗುವುದು, ಬೆಳೆಯು ಬೆಳೆಯುವುದಿಲ್ಲ. ಭೂಮಿಯು ಗಟ್ಟಿಯಾಗು ವುದು. ಅದೇ ಚಳಿಗಾಲ ಶೀತ ಗಾಳಿಯು ಬೀಸುವುದು. ಭೀರು ಹೆಪ್ಪು ಕಟ್ಟುವುದು. ಅದು ಜನರಿಗೆ ಕಷ್ಟಕಾಲವಲ್ಲವೇ?

ಪರ್ಸಫೋನೆಯು ತನ್ನ ಆರು ತಿಂಗಳನ್ನು ಪಾತಾಳ-ಲೋಕ ದಲ್ಲಿ ಕಳೆದು ಭೂಲೋಕಕ್ಕೆ ಬರುವಳು. ಡೆಮಿಟರಳು ಆಗ ಸಂತೋಷ ಸಾಗರದಲ್ಲಿ ಮುಳುಗುವಳು. ಅವಳು ಪ್ರಸನ್ನತೆಯನ್ನು ಭೂಮಿಯ ಮೇಲೂ ಬೀರುವಳು. ನೆಲವು ಮೃದುವಾಗುವುದು. ಅದೇ ವಸಂತ ಕಾಲವು. ಬೀಜ ಬಿತ್ತುವ ಸಮಯ. ಜನರು ಕೆಲಸ ಮಾಡುವ ಕಾಲ. ಪಕ್ಷಿಗಳು ಹಾಡುವ ಕಾಲ. ಮೃಗಗಳು ಹೊಲಗಳಿಗೆ ಹೋಗುವ ಕಾಲ. ಚೆಲುವಾದ ಹೂವುಗಳು ಪ್ರಫುಲ್ಲ ವಾಗುವ ಕಾಲ. ವಸಂತ ಕಾಲವೇ ಅದಲ್ಲವೆ?

ಸ್ವಲ್ಪ ವರ್ಷಗಳ ಕಾಲ ಪರ್ಸಫೋನೆಗೆ ಪಾತಾಳ ಲೋಕದಲ್ಲಿ ರುವುದು ಕಷ್ಟವೆಂದು ತೋರುತ್ತಿತ್ತು. ಆದರೆ ಮೆಲ್ಲನೆ ಅವಳಿಗೆ ಅಭ್ಯಾಸವಾಯಿತು. ಅಲ್ಲಿಯೂ ಅವಳು ಕರುಣೆಯನ್ನು ತೋರಿ ಸುತ್ತ ತನ್ನ ಇರುವಿಕೆಯನ್ನು ಸಾರ್ಥಕಗೊಳಿಸುತ್ತಿದ್ದಳು. ಒಮ್ಮೆ ಒಬ್ಬ ಗವಾಯಿಯು ತನ್ನ ಹೆಂಡತಿಯನ್ನು ಕಳೆದುಕೊಂಡು ದುಃಖ ದಿಂದ ಬಳಲುತ್ತಿದ್ದನು. ಹೇಗೂ ಮಾಡಿ ಅವನು ತನ್ನ ಹೆಂಡತಿ ಯನ್ನು ಹುಡುಕಲು ಪಾತಾಳ ಲೋಕಕ್ಕೆ ಬಂದು, ಚೆಲುವಾದ ಹಾಡು ಗಳನ್ನು ಹಾಡುತ್ತಾ ಎಲ್ಲರ ಮನಸ್ಸನ್ನು ಒಲಿಸುತ್ತಿದ್ದನು. ಈತನ ದುಃಖವನ್ನು ಮನಸ್ಸಿಗೆ ತೆಗೆದು ಪರ್ಸಫೋನೆಯು ಪ್ಲೂಟೊ ದೇವನಿಗೆ

ಕಳೆದು ಹೋದ ಮಗಳು.

ಗ್ರೀಕರ ಪುರಾಣ ಕಥೆ.

ಪ್ರಾಚೀನ ಕಾಲದ ಗ್ರೀಕರು ಅನೇಕ ದೇವತೆಗಳನ್ನು ಪೂಜಿಸುತ್ತಿದ್ದರು. ಪ್ರತಿಯೊಂದು ಪ್ರಾಕೃತಿಕ ಸ್ವಭಾವಕ್ಕೆ ಒಬ್ಬ ಅಧಿದೇವತೆಯು ಇರುವುದೆಂದು ಅವರ ಭಾವನೆ. ಸೈರುಪಜ್ಜೆಗರಿಗೆ ಡೆಮಿಟರಳೇ ಅಧಿದೇವತೆ. ಇವಳು ಬೀಜವನ್ನು ಬಿತ್ತುವಾಗ ಸೈರುಗಳನ್ನು ಕೊಯ್ಯುವಾಗಲೂ ಜನರಿಗೆ ಸಹಾಯ ಮಾಡುತ್ತಿರುವಳೆಂದು ಎಲ್ಲರೂ ಅವಳನ್ನು ಉತ್ಸಾಹದಿಂದ ಆರಾಧಿಸುತ್ತಿದ್ದರು. ಡೆಮಿಟರಳು ಆನಂದದಿಂದಲೂ ಸೌಖ್ಯದಲ್ಲಿಯೂ ಇದ್ದಳು, ಅವಳು ಬೇರೆ ಬೇರೆ ಪ್ರದೇಶಗಳಿಗೆ ಪ್ರಯಾಣ ಮಾಡಿ ಜನರ ಕಷ್ಟಗಳನ್ನು ಪರಿಹರಿಸಲು ಪ್ರಯತ್ನ ಮಾಡುವಳು. ಈ ದೇವತೆಗೆ ಪರ್ಸಫೋನೆ ಎಂಬ ಒಬ್ಬ ಜೀವವಾದ ಮಗಳಿದ್ದಳು. ತಾಯಿಯು ಹೊರ ಹೋದಾಗ ಪರ್ಸಫೋನೆಯು ಕೆಲವು ಸಂಗಾತಿಗಳೊಡನೆ ಮೈದಾನುಗಳಿಗೆ ಆಡಲು ಹೋಗುವಳು. ಕುಣಿದಾಡಿಯೂ ಪದ್ಯಗಳನ್ನು ಹಾಡಿಯೂ ಅವರೆಲ್ಲರೂ ಸಮಯವನ್ನು ಸಂತೋಷದಿಂದ ಕಳೆಯುತ್ತಿದ್ದರು.

ಇವರ ಈ ತರದ ಸಂತೋಷವು ಬಹಳ ಕಾಲವುಳಿಯಲಿಲ್ಲ. ಒಮ್ಮೆ ತಾಯಿಯು ಹೊರಗೆ ಹೋದಾಗ, ಪರ್ಸಫೋನೆಯು ಎಂದಿನಂತೆ ಆಡಲು ಹೊರಗೆ ಹೋಗಿದ್ದಳು. ಅಲ್ಲಿ ಹೂವುಗಳನ್ನು ಒಟ್ಟು ಮಾಡುತ್ತಾ ಸಮಯವನ್ನು ಕಳೆಯುತ್ತಿದ್ದಳು. ಅಕಸ್ಮತ್ತಾಗಿ ಪಾತಾಳ ಲೋಕದ ಅರಸನಾದ ಪ್ಲೂಟೊ ದೇವನು ಅವರನ್ನು ನೋಡಿದನು. ಪಾತಾಳ ಲೋಕವು ಕಗ್ಗತ್ತಲೆಯಿಂದ ಕವಿದ ಸ್ಥಳ, ಸತ್ತ ಜನರ ಆತ್ಮವು ಆ ಲೋಕಕ್ಕೆ ಹೋಗುವುದೆಂದು ಗ್ರೀಕರ ಭಾವನೆ.

ಪ್ಲೂಟೊ ದೇವನು ಈ ಹುಡುಗಿಯ ಆಟವನ್ನೂ ಹಸನ್ಮುಖ ವದನ್ನೂ ನೋಡಿ ಬೆರಗಾದನು. ಅವಳನ್ನು ತನ್ನ ಲೋಕಕ್ಕೆ ಕರೆದೊಯ್ದು ತನ್ನ ರಾಣಿಯನ್ನಾಗಿ ಮಾಡಿಕೊಳ್ಳಬೇಕೆಂದು ಅವನು ಇಚ್ಛೆ ಪಟ್ಟನು. ಡೆಮಿಟರಳಿಂದಿನೆ ಅವಳೆನ್ನು ತನಗೆ ಕೊಡಬೇಕೆಂದು ಕೇಳಿಕೊಂಡರೆ ಅವಳು ಒಪ್ಪಲಾರಳೆಂದು ಅವನು ತಿಳಿದಿದ್ದನು. ಆದುದರಿಂದ ಯಾರಿಗೂ ತಿಳಿಯದಂತೆ ಅವಳನ್ನು ಕದ್ದೊಯ್ಯ ಬೇಕೆಂದು ಅವನು ಬಗೆದನು. ಭೂಮಿಯನ್ನು ಸೀಳಿ ತನ್ನ ರಥವನ್ನೇರಿ ಅವನು ಅಲ್ಲಿಗೆ ಬಂದೆನು; ಅವನ ರಥವನ್ನು ಕಪ್ಪು ಕುದುರೆಗಳು ಎಳೆದುತ್ತಿದ್ದುವು; ಕ್ಷಣದೊಳಗೆ ಪರ್ಸಫೋನೆಯನ್ನು ಹಿಡಿದು ರಥದ ಮೇಲಿರಿಸಿ ಪ್ಲೂಟ ದೇವನು ತನ್ನ ಲೋಕಕ್ಕೆ ಮಾಯವಾಗಿ ಬಿಟ್ಟನು! ಇತರ ಸಂಗಾತಿಗಳಿಗೆ ಇದಾವುದೂ ತಿಳಿಯಲಿಲ್ಲ. ಹುಡುಗಿಯು ಮಾಯವಾದಳು ಎಂದು ಅವರು ಗಾಬರಿಗೊಂಡರು. ಏನು ಮಾಡುವುದೆಂದು ಅವರಿಗೆ ತೋಚಲಿಲ್ಲ. ಖಿನ್ನಮನಸ್ಕರಾಗಿ ತಮ್ಮ ಮನೆಗಳಿಗೆ ತೆರಳಿದರು.

ಡೆಮಿಟರಳು ಬಂದೊಡನೆ ಅವಳಿಗೆ ನಡೆದ ಸಂಗತಿಯನ್ನು ಅವರು ತಿಳಿಸಿದರು. ಹುಡುಗಿಯು ಎಲ್ಲಿಗೆ ಹೋಗಿರುವಳು ಎಂದು ಮಾತ್ರ ಅವರು ಅರಿತಿರಲಿಲ್ಲ. ತನ್ನ ಬಾಲಕಿಯು ಮಾಯವಾದುದನ್ನು ತಿಳಿದೊಡನೆ ಡೆಮಿಟರಳಿಗೆ ಅತಿರೇಕ ದುಃಖವಾಯಿತು, ಅವಳು ಬಿಕ್ಕಿ ಬಿಕ್ಕಿ ಅತ್ತಳು, ತನ್ನ ಒಬ್ಬಳೇ ಮಗಳು ಹೋದಳಲ್ಲಾ ಎಂದು ಗಾಬರಿಗೊಂಡಳು. ಸಮಯವನ್ನು ಕಳೆಯದೆ, ಮನೆಯನ್ನು ತೊರೆದು ತನ್ನ ಮಗಳನ್ನು ಹುಡುಕಲು ಹೊರಟಳು. ಪಟ್ಟಣಗಳನ್ನು ಸಂದರ್ಶಿಸಿದಳು, ಹಳ್ಳಿಗಳಿಗೆ ಹೋದಳು, ಒಬ್ಬಂಟಿಕಳಾಗಿಯೇ ಗುಡ್ಡಗಳನ್ನು ಹತ್ತಿದಳು, ಕಾಡುಗಳಲ್ಲಿ ಅಲೆದಳು; ನದಿಗಳನ್ನು ದಾಟಿದಳು. ಆದರೆ ಅದೆಲ್ಲವೂ ನಿಶ್ಫಲವಾಯಿತು. ಬೆಳಿಗಿನಿಂದ ಸಾಯಂಕಾಲದ ವರೆಗೆ ಹುಡುಕುವುದೇ ಅವಳ ಕೆಲಸ. ಕೆಲವು ಸಲ ರಾತ್ರಿಯಲ್ಲಿಯೂ ದೀಪವನ್ನು ಹಿಡಿದು ಕೊಂಡೇ ಅಲೆಯುತ್ತಿದ್ದಳು. ಸಿಕ್ಕಿದವರೊಡನೆ ಎಲ್ಲಾ ತನ್ನ ಮಗಳ ವಿಷಯ ಕೇಳುವುದಕ್ಕೆ ಹೇಸುತ್ತಿರಲಿಲ್ಲ.

ಈ ರೀತಿಯಲ್ಲಿ ಆಹಾರ ನಿದ್ರೆಗಳನ್ನು ಅಲಕ್ಷಿಸಿ, ಪರ್ಸಫೋನೆಯನ್ನು ಹುಡುಕುತ್ತಲೇ ಇದ್ದಳು ಸುಖಗಳನ್ನು ತೊರೆದ ಆ ದೇವತೆಯು ದುಃಖದಿಂದ ಕೃಶಳಾಗುತ್ತಾ ಬಂದಳು ಒಂದು ಸಲ ಅವಳಿಗೆ ಒಂದು ಆಲೋಚನೆಯು ಹೊಳೆಯಿತು.

"ನಾನು ಸೂರ್ಯನ ಹತ್ತಿರ ಕೇಳುವೆನು ಅತನು ಆಕಾಶವೆಲ್ಲ ತಿರುಗುವನು; ಭೂಲೋಕವೆಲ್ಲ ನೋಡಿರುತ್ತಾನೆ" ಎಂದು ಅವಳು ನೆನಸಿ ಅವನೆಡೆಗೆ ವಿಚಾರಿಸಿದಳು

"ನಿನ್ನ ಮಗಳು ಪಾತಾಳ ಲೋಕದಲ್ಲಿರುತ್ತಾಳೆ ಪ್ಲೂಟೊ ದೇವನು ಅವಳನ್ನು ಒಯ್ದಿರುವನು" ಎಂದು ಸೂರ್ಯನೆಂದನು

"ಅಯ್ಯೋ! ಅಯ್ಯೋ ನನ್ನ ಮಗಳ ಅವಸ್ಥೆಯೇ, ಅಸಲು ಸತ್ತಿರುವಳೇ? ಅವಳಿಗೆ ಕಪ್ಪ ಬಂದೊದಗಿದೆಯೆ?"

"ಅದನ್ನು ನಾನು ಹೇಳಲಾರೆನು ನನ್ನ ಕಿರಣಗಳು ಪಾತಾಳ ಲೋಕಕ್ಕೆ ಹೋಗಲಾರವು ಅವಳನ್ನು ಭೂಲೋಕಕ್ಕೆ ಬರಲಾರಳು ಎಂದು ದೇವತೆಗಳು ಮಾತಾಡುತ್ತಿರುವುದನ್ನು ಕೇಳಿರುವೆನು" ಎಂದು ಸೂರ್ಯನು ಹೇಳಿದನು

ಡೆಮಿಟರಳ ಗಾಬರಿಯು ಇನ್ನಷ್ಟು ಹೆಚ್ಚಿತು ಒಮ್ಮೆ ಮೂರ್ಚಿತಳಾಗಿ ಬಿದ್ದು ಬಿಟ್ಟಳು. "ಅಯ್ಯೋ! ನಾನೇನು ಮಾಡಲಿ? ನನ್ನ ಮಗಳನ್ನು ಬಿಟ್ಟು ನಾನು ಬದುಕಲಾರೆನು. ಪಾತಾಳ ಲೋಕ ಕ್ಯಾದರೂ ನಾನು ಹೋಗಿ ನನ್ನ ಮಗಳನ್ನು ಕರಕೊಂಡು ಬರುವೆನು ಇಲ್ಲದಿದ್ದರೆ ನಾನು ಅಲ್ಲಿ ಮಗಳೊಡನೆಯೇ ಇರುವೆನು"

"ಅದಾಗದು. ಪಾತಾಳಲೋಕಕ್ಕೆ ನೀನು ಹೇಗೆ ಹೋಗುವಿ? ಅಲ್ಲಿಗೆ ಹೋಗಬೇಕಾದರೆ ಅಗಲವಾದ ನದಿಗಳನ್ನು ದಾಟಬೇಕು ಅಲ್ಲದೆ ಮುಖ್ಯದ್ವಾರದ ಎದುರಿನಲ್ಲಿ ಅನೇಕ ಶಿರಸ್ಸುಗಳಿರುವ ರಾಕ್ಷಸ

ಗಳ ಗೆಲ್ಲುಗಳನ್ನು ಮುರಿಯಬೇಕೆಂದೂ, ಸಣ್ಣ ಸಣ್ಣ ಗಿಡಗಳನ್ನು ಬುದಸಹಿತ ಕೀಳಬೇಕೆಂದೂ, ಆದಷ್ಟು ಬೇಗನೆ ನನ್ನ ಕೆಲಸವನ್ನು ಪೂರ್ತಿಸಬೇಕೆಂದೂ ನಿರ್ಧಾರವಾಗಿತ್ತು ಒಂದು ಫಳಿಗೆಯೊಳಗೆ ನನ್ನ ಬುಟ್ಟಿಗಳು ತುಂಬಿದುವು. ಕತ್ತೆ ಮೇದಲ್ಲಿ ಮತ್ತೆ ಮೇವಿಲ್ಲಾ ಎಂಬ ಮಾತು ನನ್ನ ಕೆಲಸದಲ್ಲಿ ಅದರ ಸತ್ಯತೆಯೆನ್ನು ಹೊಂದಿತೋ?

ಸೂರ್ಯನು ಆಗಲೇ ನನ್ನ ಕ್ರೂರಕೃತ್ಯಕ್ಕಾಗಿ ನನ್ನನ್ನು ದಂಡಿಸಲೆಂದೋ ಎಲ್ಲಾ ಮೋಡಗಳನ್ನು ಝಾಡಿಸಿ ತನ್ನ ಪ್ರಚಂಡ ಕಿರಣಗಳನ್ನು ನನ್ನ ಮೇಲೆಯೇ ಸುರಿಸಲು ಪ್ರಾರಂಭಮಾಡಿದನು ಬೆಳಗಿನಿಂದ ಏನೂ ಬೀಳದ ಹೊಟ್ಟೆ, ಅದರಲ್ಲೂ ಆ ದಿವಸ ಉಪವಾಸ ಮಾಡಬೇಕೆಂಬ ಭೀತಿ ಅಂತೂ ಹೊಟ್ಟೆಯಲ್ಲಿ ಫ ಟಾನಾದಕ್ಕೆ ಪ್ರಾರಂಭವಾಗಿ ಹೊಟ್ಟೆ ಹೋಗಿ ಬೆನ್ನಿಗೆ ತಗಲಿತು ಕಾಲು ಹಿರಿದೆ ಎಳೆಯಲು ಪ್ರಾರಂಭಿಸಿತು. ಉಸಿರು ಭಯಂಕರವಾಯಿತು ಮುಖವು ಬೆವರಿನಿಂದ ಆವರಿಸಿದೆ ಬರುವಾಗ ಇದ್ದ ಉಲ್ಲಾಸವು ಮಾಯವಾಯಿತು ಬಾಯಲ್ಲಿ ಮಾತುಗಳಿಲ್ಲ' ವಾಪ' ನಮ್ಮ ಕಷ್ಟ ಹೇಳಿ ತೀರದು 'ಆಪತ್ತಿಯೋ ಕಷ್ಟವಿಯೋ ಎಂದು ಕೋರಿತು '—

ದಕ್ಷಿಣ ಕನ್ನಡಾ ಬೆಲ್ಲಾ ತಾಲೂಕು ಕಾರ್ಕಳ ತಾಲೂಕು ಕಾರ್ಕಳ ಕಸಬಾ ಗ್ರಾಮದ ವ ಅದಕ್ಕೆ ಸಂಬ್ಯಂಧ ಪಟ್ಟ ಹೋಬಳಿಯ ಗೌಡ -ಸಾರಸ್ವತ ಬ್ರಾಹ್ಮಣರು ಆರಾಧಿಸಿ ಬರುವ ಕಾರ್ಕಳ ಶ್ರೀ ವೆಂಕಟ್ರಮಣ ದೇವಸ್ಥಾನದ ಆಡಳ್ತೆ ಕುರಿತು ಇದೇ ಕಳದ ತಾರೀಕು 7-8-1933ರಲ್ಲು ಜರಗಿದ ಸದರಿ ದೇವಸ್ಥಾನದ ಪೊಕ್ಕೇಸರರ ಸಭೆಯ ತಂರಾವು ಮೇರಿಗೆ ಸದ್ರಿ ದೇವಸ್ಥಾನದ ಆಡಳ್ತೆ ಮೊಕ್ತೇಸ್ತರನ್ನಾಗಿ ಈ ಕೆಳಗೆ ಹೆಸರು ಕಾಣಿಸಿದವರನ್ನು ನೇಮಕಮಾಡೋಣಾಗಿಯದೆ. ಇವರು ಇದೇ ಕಳದ ತಾರೀಕು 28-8-1933ರಿಂದ ಆಡಳ್ತೆ ಕಾರ್ಯವನ್ನು ವಹಿಸಿ ಕೊಂಡಿರುವರು. ಇವರ ಅಧಿಕಾರದ ಅವಧಿ ಮುಗಿಯುವ ತನಕ ಶ್ರೀ ದೇವರ ಧಂಡಾರದ ವಿತ್ತ ಆಡಳ್ತೆಯನ್ನು ಸದರಿ ಮೇಲ್ಕಂಡ ಸಭೆಯ ತಂರಾವುಗಳಿಗೆ ಅನುಸಾರವಾಗಿ ನಡಿಸುವರೆ ಇವರು ಪೂರ್ಣ ಅರ್ಹರು. ಇನ್ನು ಮುಂದೆ ಶ್ರೀ ದೇವರ ಧಂಡಾರಕ್ಕೆ ಆಗತಕ್ಕ ಎಲ್ಲಾ ಲೇವಾದೇವಿಗಳು ಈ ಮೂವರ ಹೆಸರಿನಲ್ಲಿ ಆಗತಕ್ಕದ್ದು. ಮಾತ್ರವಲ್ಲದೆ ಶ್ರೀ ದೇವರ ಧಂಡಾರದಿಂದ ಕೊಡೋಣಾಗುವ ಎಲ್ಲಾ ರಶೀದಿಗಳಿಗೆ ಶ್ರೀ ದೇವರ ಧಂಡಾರದ ಮೊಹರು ವ ಕೆಳಗೆ ಹೆಸರು ಕಾಣಿಸಿರುವ ಆಡಳ್ತೆ ಮೊಕ್ತೇಸರರ ಸೈಕೆ ಇಸ್ಮಿ ಪೆಕ್ಕಕ್ಕೆ 2 ಜನರ ದಸ್ಕತುಗಳ ವಿನಹಾ ಸದ್ರಿ ರಶೀದಿಗಳು ಮಂಜೂರಾಗತಕ್ಕದ್ದಲ್ಲವೆಂಕ ಈ ಮೂಲಕ ಎಲ್ಲರಿಗೂ ತಿಳಿಸೋಣಾಗುತ್ತದೆ.

೧. ಕೆ. ವೆಂಕಟ್ರಾಯ ಪ್ರಭುಗಳು, ೨. ಕಟ್ಟಿಂಗೆರೆ ಅಳ್ಳಮಣಿ ಸಣ್ಣಕರು, ೩. ರಂಗಶಾಲೆ ಗೋವರ್ಧನ ನೈಕಂಠ ಶೆಣೈರು.

ಆಡಳ್ತೆ ಮೊಕ್ತೇಸರರು.

ಒಂದು ಸುಂದರ ಕೂಸು

ಸೆನಿಟರಿ ಇನ್‌ಸ್ಪೆಕ್ಟರರು

"ನಾನು ನಿಮ್ಮ ಹೆಸರುವಾಸಿ

ಲೋಧ್ರವನ್ನು

ನನ್ನ ಪತ್ನಿಗೆ ಉಪಯೋಗಿಸಿದನು. ಆದರಿಂದಾಗಿ ನನಗೆ ಸುಂದರವಾದ ಗಂಡು ಕೂಸು ಹುಟ್ಟಿತು. ನಿಮಗೆ ನನ್ನ ನಮಸ್ಕಾರಗಳು."

ಎಸ್. ನಟರಾಜ ಮುದಲಿಯಾರ್,
ಸಬ್ ಇನ್‌ಸ್ಪೆಕ್ಟರ್,
ಮೂಲೂರು, ಮದುರ.

ನಿಮ್ಮ ಕೆಮಿಸ್ಟರರ ಹತ್ತರ ಕೇಳಿರಿ.

ಆಕ್ಷನಾ

ಕೇಸರಿ ಕುಟೀರ,

ಇಂಡಿಯನ್ ಕೆಮಿಸ್ಟ್ಸ ಮತ್ತು ಡ್ರಗಿಸ್ಟ್ಸ, ಏಗ್ಮೋರ್ ಮದರಾಸು,

Sole Agents for South Kanara

ಪೊಪ್ಯೂಲರ್ ಸ್ಟೋರ್ಸ್,
ರಥಬೀದಿ ಮಂಗಳೂರು.

ಸ್ತ್ರೀ ಪುರುಷರ ಸಲುವಾಗಿ
ಶಕ್ತಿ ವ ಸ್ಫೂರ್ತಿಕೊಡುವಂತಹ

ಸುಮಧುರ
ರುಂಡು ದ್ರಾಕ್ಷಾಸವ
ಜರೂರು ಉಪಯೋಗಿಸಿರಿ.

ಸೀಯರ ಸಲುವಾಗಿ
ಆರೋಗ್ಯ ವ ಶಕ್ತಿನರ್ಧಕ.

ಪ್ರದರಾದಿ ರೋಗಗಳ ಮೇಲೆ
ರಾಮಬಾಣ ಉಪಾಯ.
ರುಂಡು ಅಶೋಕಾರಿಷ್ಟ
ಬೇಗನೇ ಉಪಯೋಗಿಸಿರಿ.

'ZANDU'

ರುಂಡು ಫಾರ್ಮಾಸ್ಯುಟಿಕಲ್ ವರ್ಕ್ಸ್ ಲಿ: ಮುಂಬ್ಯಾಗಳ್ಳು.

ಬೆಂಗಳೂರು ಏಜಂಟ್:—ಬಿ. ಪೊಪಟ್‌ಲಾಲ ಕಂಪೆನಿ, ೨೧೧ ಅರ್ಕಟ ಶ್ರೀನಿವಾಸಾಚಾರಿ ಸ್ಟ್ರೀಟ್.

ವಿಜಾಪುರ ,, ಗೋವಿಂದ ಗೋಪಾಲ ಗಾಡಗೀಳ.
ಮಂಗಳೂರು ,, ದಿ ಉಲನ್ ಫಾರ್ಮ. ಧಾರವಾಡ ಏಜಂಟ್—ದಿ ಧಾರವಾಡ ಫಾರ್ಮಸಿ.
ಗದಗ ,, ವಿದ್ಯಾವಿಲಾಸ ಬುಕ್ ಡಿಪೊ. ಬೆಳಗಾಂವ ,, ಪೊವಿಜನ್ ಸಪ್ಲ್ಯಾ ಕೊ.
ಹುಬ್ಬಳ್ಳಿ ,, ತಿಪ್ಪಣ್ಣಿ ಕೃಷ್ಣಪ್ಪ ಧೂಸಪೇಟೆ. ಬೆಲ್ಲಹೊಂಗಲ್ ,, ಜೆ. ಬಿ. ಉದಾಪುಡಿ.

ದೇಶ ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತದೆ.

ಆರ್ಯುವೇದ ವಿಷಧಿಗಳ ಸೂಚೀಪತ್ರವನ್ನು ಮುಟ್ಟು ವಿಜಂಟರಿಂದ ಪಡಕೊಳ್ಳಿರಿ.

ಸೇವಿಸಿ ತೃಪ್ತಿಗೊಂಡ ಗಿರಾಕಿಗಳು ಇದನ್ನು

"ಜೀವನಮಾನದ ಅಮೃತ. ನಿಜವಾದ ಶಕ್ತಿವರ್ಧಕ ವಿಷಧ" "ಶಕ್ತಿ ಹೀನತೆಗೆ ಪ್ರಸಂಷದಲ್ಲಿನ ನಿದ್ಯೌಷಧ" "ಶಕ್ತಿದಾಯಿನಿ ವಿಷಧಗಳ ರಾಜ" "ಸರ್ವ ನಿದ್ಯೌಷದ"
"ವ್ಯಾಧಿಗಳಿಂದ ಸಂಕಟ ಪಡುವವರಿಗೆ ವರಪ್ರದಾಯಿನಿ"

ಎಂದೀ ಮೊದಲಾದ ಹೆಸರುಗಳಿಂದ ಕರೆದಿರುತ್ತಾರೆ. ಪರಮೋತ್ಕೃಷ್ಟ ರೀತಿ ತಯಾರಿಸಿದ ಈ ವಿಷಧವು ಯಾವುದೆಂದರೇ ನಿಮಗೆ ಹಿತಕಾರಿಯೂ ಜೀವನಾಕಾರವೂ ಆದ

ಜೀವಾಮೃತವೇ.

ಇದು ಪಂಡಿತ ಶ್ರೀ. ಗೋಪಾಲಾಚಾರ್ಯರವರು ತಂಯ ಹಿಡಿದಿರುವ ಮಹಾ ಶಕ್ತಿವರ್ಧಕ ವಿಷಧವಾಗಿ ಹಿಂದೂಸ್ಥಾನದಲ್ಲೆಲ್ಲಾ ಸುಪ್ರಸಿದ್ಧವಾಗಿದೆ. ಇರ್ಪತನೇ ಇಸವಿಯಿಂದಲೂ ಇದು ಬಳಿಕೆಯಲ್ಲಿದೆ. ಪರಗಳ ದೌರ್ಬಲ್ಯವು ಮಸ್ತಕಕ್ಕೆ ಏರಿದ ಮಬ್ಬು, ಅಯಾಸ ರಕ್ತ ಹೀನತೆ, ಪರಗಳ ಅಶಕ್ತತೆ, ಮೆದುಳು ಬೈತಲ್ಯಗುಂದಿದುವಿಕೆ, ಹೊಟ್ಟೆಯಲ್ಲಿ ಆಮ್ಲಮಯಾಗಿದುವುದು. ಇತ್ಯಾದಿಗಳಿಂದ ಪರಳು ಶಿಥಿಲ್ಲಿಗೆ ಜೀವಾಮೃತವನ್ನು ಸೇವಿಸಲಾರಂಭಿಸಿದ ಇದರಿಂದ ನಿಮಗೆ ಪರಮೋತ್ಕರ್ಷಕರವಾದ ಗುಣಾತಿಶಯಾನುಭವವು ಪೊರೆಯಿಸಾರಿ ಸೇವಿಸಲು ಪ್ರಾರಂಭಿಸಿದಾದ್ಯನೇ ಅವರ ಶೈಥಿಲ್ಯ ಗುಣಗಳು ನಿಮಗೆ ಗೊತ್ತಾಗುವುವು. ನಿಮ್ಮ ವೈದ್ಯರು ಅದನ್ನು ಎಂಬು ಗೃಹಿಂಗಳಿಗೆ ರೂ. ೩-೪-೦ ಮತ್ತು ರೂ. ೧೦-೦-೦ ಕಳುಹಿಸುತ್ತಾರೆ. ಆಥವಾ ಈ ಕೆಳಗಣ ವಿಳಾಸಕ್ಕೆ ಬರೆಯಿರಿ—

ಆಯುರ್ವೇದಾಶ್ರಮಂ, ಪೋ: ಬಾಕ್ಸು ನಂ. ೫೦೭, ಮದ್ರಾಸು.

ಸೋಲ್ ವಿಜಂಟರು:— ಸಿಟಿ ಮಾರ್ಕೆಟಲ್ ಮತ್ತು ಜನರಲ್ ಏಜನ್ಸೀಸ್ ೧೦ ಚಿಕ್ಕಪೇಟೆ ಬೆಂಗಳೂರು. (ಮಾತ್ರ ಕೂಡಿಸಿ ಆಕ್ಷನ್)
ಪಟ್ಟಣ ಕನ್ನಡದ ವಿಜಂಟರು— ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು.

P. No. 104.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. No. 37/1933

1. ಮಿಟ್ಟಕ್ಕು, 2. ಸಾಗಮ್ಮ, 3. ಲಾಡು ಯಾನೆ ರುಕ್ಮಾಬೆ ಅಮ್ಮ—ಅರ್ಜಿದಾರರು.

ನಿಮ್ಮ ಅರ್ಜಿದಾರನ ತಮ್ಮ, ತಿ, ನಿನೇ ಅರ್ಜಿದಾರರ ತಂದೆ ಸ್ವರ್ಗಸ್ಥ ಕೃಷ್ಣ ಪ್ರಭುವಿಗೆ-ಹಿರಿಯರ್ಮ ನಂಬ್ರ 11160ನೇ ಸಕಾರಾ ಸುಬ್ರಾಯದಿಂದ ಬರತಕ್ಕ ಅಸ್ಲು ರೂ. 114-0-0 ಮತ್ತು ಅದರ ಮೇಲಣ ಆಂದಾಜು ಬಡ್ಡಿ ರೂ. 10ನ್ನು ಮನೋಲಿ ಬಗ್ಗೆ ನಿ. 8ನೇ ಅರ್ಜಿದಾರರಿಗೆ ವಾದಿಸು ಸರ್ಟಿಫಿಕೇಟು ಕೂಡ ಬೇಕಾಗಿ ಅರ್ಜಿದಾರರು ಕೊಟ್ಟ ಅರ್ಜಿಯು ತಾ. 26-9-33 ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತಮ್ಮಿಗೆ ಇಟ್ಟಿರುತ್ತದೆ. ಆ ತಾರೀಕಿನಲ್ಲಿ ಅರ್ಜಿಗೆ ಅಕ್ಷೇಪವುಳ್ಳವರು ಸದ್ರಿ ಕೋರ್ಟಿನಲ್ಲಿ ಜ್ಞಾಪೀರು ಮಾಡಿಕೊಳ್ಳಬಹುದು.

ಉಡುಪಿ, 09-9-44. } **B Srinivasa Rao,** Advocate for Petitioners.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ಸ್ಮಾಲ ನಂಬ್ರ 213/1933.

ಯಲ್. ಯ. ಮತಾಯಸ್, ಪಿ. ಯಲ್. ಮತಾಯಸ್‌ನರ ವಿಧವೆ, ಮಂಗಳೂರು ಶಕಾರಾ—ವಾದಿಸು.

ಮತ್ತು

ತ್ಯಾಂಪು ಯಾನೆ ದೂಮಪ್ಪ ಶೆಟ್ಟಿ, ಕೊಂಗಶೆಟ್ಟಿ ಅಳಿಯ, ಸುತ್ತೂರು ತಾಲೂಕು ಪುತ್ತೂರು ಮಾಗಣೆ ಪೆರ್ನೆ ಗ್ರಾಮ—ಪ್ರತಿವಾದಿ.

ಸದ್ರಿ ವ್ಯಾಜ್ಯದ ವಾದಿಯು ಪ್ರತಿವಾದಿಯ ಮೇಲೆ ರೂಪ್ಯಾ 69-0-0ಕ್ಕೆ ಮೇಲ್ಕಂಡ ದಾವಾ ದಾಖಲು ಮಾಡಿ ಸದ್ರಿ ನ್ಯಾಜ್ಯವು ತಾ. 28-9-33ಕ್ಕೆ ಪ್ರತಿವಾದಿಯ ಹಾಜರಾತಿ ಬಗ್ಗೆ ಇಟ್ಟಿರುವುದರಿಂದ ಆ ತಾರೀಕಿನಲ್ಲಿ ಹಗಲು 10 ಗಂಟೆಗೆ ಪ್ರತಿವಾದಿಯು ಸದ್ರಿ ಕೋರ್ಟು ಮುಂದೆ ಹಾಜರಾಗಿ ತನ್ನ ಉದಾಹರಣೆಯನ್ನು ದಾಕ್ಲು ಮಾಡತಕ್ಕದ್ದು. ತಪ್ಪಿದರೆ ಸದ್ರಿ ದಿವಸ ಮೇಲ್ಕುಂದ ವ್ಯಾಜ್ಯವು ಪ್ರತಿವಾದಿಯ ಗೈರುಹಾಜರಿಯಲ್ಲಿ ಕೇಳಿ ಕೈಸಲು ಮಾಡೋಣವೆಂದೂ ತಿಳಿದಿರತಕ್ಕದ್ದು.

ಕಾರ್ಕಳ, 13-9-1933. **S. N. Shetty,** ವಾದಿಗೆ ವಕೀಲ.

ನೋಟೀಸು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. No. 323/33.

1. ಕಾನಾಡಿ ಕೃಷ್ಣರಾವ, 2. ಕಾನಾಡಿ ಕೇಶವ ರಾವ—ವಾದಿರು.

ಮತ್ತು

ಚಂದು ಮರಕಾಲ—ಪ್ರತಿವಾದಿ.

ಕಾಪು ಮಾಗಣೆ ಮುಲಿಯರು ಗ್ರಾಮದ ರಂಕ್ಯ ಹೆಂಗಸಿನ ಮಗ ಚಂದು ಮರಕಾಲಗೆ ಈ ಮೂಲಕ ತಿಳಿಸುವುದೇನೆಂದರೆ—

ವಾದಿರು ತಮಗೆ ಬಹಾ ದಿವಾಂಡ ನೋಟ್ಸಿನ ಅಸಲು ಬಾಕಿ ರೂ. 289—11—6ಕ್ಕೆ ಪ್ರತಿವಾದಿ ಮೇಲೆ ದಾವ್ಲು ಮಾಡಿದ್ದ ಸದ್ರಿ ವ್ಯಾಜ್ಯ ತಾ. 13-10-33ಕ್ಕೆ ತಮ್ಮಿಗೆ ಇಟ್ಟಿರುವುದರಿಂದ ಆ ಕುರಿತು ಅಕೇಸ ಇದ್ದರೆ ಪ್ರತಿವಾದಿಯು ಆ ದಿವಸ ಹಗಲ್ಲಿ 10 ಘಂಟೆಗೆ ಕೋರ್ಟು ಮುಂದೆ ಹಾಜರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಪ್ರತಿವಾದಿಯ ಗೈರಹಾಜರಿಯಲ್ಲಿ ಸದ್ರಿ ದಾವ್ಲು ತೀರ್ಮಾನಿಸಲಾದೀತು ಎಂಬ ಸಂಗ್ತಿ ತಿಳಿಸೋಣಾಗಿದೆ.

ಉಡುಪಿ, 09-9-44. } **M. Vittal Kamath,** Pleader for Plaintiffs.

Wanted

A travelling (Saraswat) agent to visit all important towns in Madras Presidency where Sataswats reside and to collect information for All India Saraswat Directory. Apply to:—Manager, Saraswat Agency, Jiji House, 17 Ravelin St. Bombay 1.

ನೋಟೀಸು.

ಕುತ್ತೂರು ತಾಲೂಕು ಪೆರ್ಲ ಬಂಡಾಡಿ ಗ್ರಾಮದ ಕೆಮ್ಮಾ ರಲ್ಲಿ ಇರುವ ತಿಂಮನ ಮಗ ರುಕ್ಮಯ್ಯನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ—

ಕುತ್ತೂರು ತಾಲೂಕು ಕೆಮ್ಮಿಲೆ ಗ್ರಾಮದಲ್ಲಿರುವ ಹಾಜಿ ಅಬ್ದುಬ್ಬಸ್ಸರ್ ಬ್ಯಾರಿಗಳ ಮಗ ಅಬ್ದಾಯ ಬ್ಯಾರಿಯು ಬೇರೆ ಜನರ ಕೂಡುವಿಕೆಯಿಂದ ಬ್ರಹ್ಮಸ್ಥಾನ ನಡಿಸಿ ನನ್ನಿಂದ ಕಳೆದ ಜುಲೈ ತಾ. 17ರಲ್ಲಿ ಎರಡು ಕಾಗದಗಳಿಗೆ ಹೆಬ್ಬೆಟ್ಟು ಪಡೆದ ಕಾರಣ ನಾನು ಕ್ರಿಮಿನಲ್ ವ್ಯವಹಾರ ನಡಿಸುವರೆ ಉದ್ಯುಕ್ತ ನಾಗಿದ್ದಲ್ಲಿ ಗ್ರಹಸ್ಥರು ರಾಜಿಯಾದ ತೀರಿಸುವದಾಗಿ ಹೇಳಿ ಸದ್ರಿ ಕಾಗದಗಳನ್ನು ನನಗೆ ವಾಪಾಸು ಕೊಡಬೇಕಾಗಿ ನಿರ್ಣಯಿಸಿ ದ್ದೆಕ್ಕೆ ಸದ್ರಿ ಅಬ್ದಾಯ ಬ್ಯಾರಿಯು ಒಪ್ಪಿದ ಮೇರೆಗೆ ಈ ವರೆಗೆ ನನಗೆ ವಾಪಾಸು ಕೊಡಿಸಲ್ಲ. ಸದ್ರಿ ಕಾಗದಗಳಲ್ಲಿ ತನ್ನ ಹೆಸರು ಗಾಗಲೆ, ಬೇರೆಯವರ ಹೆಸರಿಗಾಗಲಿ ಏನಾದರು ನೋಟು ಪ ಇತರ ರಿಕಾರ್ಡು ಮಾಡಿದ್ದಾರೆ, ಅಂಥಾ ರಿಕಾರ್ಡು ನನಗೆ ಬಾಧಿಸತಕ್ಕುದ್ದಲ್ಲ. ನಾನು ಈ ವರೆಗೆ ಯಾರಿಗೂ ಏನೊಂದು ನೋಟು ಪ ದಸ್ತಾವೇಜು ಬರಕೊಟ್ಟಿದ್ದು ಇಲ್ಲ. ನನಗೆ ಏನೊಂದು ಸಾಲ ಇರುವುದಿಲ್ಲ. ಆದುದರಿಂದ ಸದ್ರಿ ನನ್ನ ಹೆಬ್ಬೆಟ್ಟುಗಳು ಪಡೆದ ಕಾಗದಗಳಲ್ಲಿ ಏನಾದರೂ ರಿಕಾರ್ಡು ಮಾಡಿ ಸದ್ರಿ ರಿಕಾರ್ಡಿನ ಆಧಾರದ ಮೇಲೆ ಇಬ್ರಾಯಿ ಬ್ಯಾರಿಯ ಬಳಸಂಬಿನಿಂದ ಯಾರೊಬ್ಬರು ಏನೆಂದು ದಾಕ್ಲೆ ಪರಾಜಾರೆ ವಗೈರೆ ಪಡದಿದ್ದಾದರೆ ಅದರಿಂದ ಅವರಿಗೆ ಏನೂ ಪ್ರಯೋಜನ ಸಿಕ್ಕಲಿಕ್ಕಿಲ್ಲವೆಂತಲೂ ನಾನು ಜವಾಬ್ದಾರನಾಗಲಿಕ್ಕಿಲ್ಲವೆಂತಲೂ ಈ ಮೂಲಕ ತಿಳಿಸೋಣಾಗುತ್ತದೆ.

ಈ 'ಇ'ಕಾರ ಮತ್ತು ಎಡಹೆಬ್ಬೆಟ್ಟಿನ ಗುರ್ತು ಸಹಾ ರುಕ್ಮಯ್ಯನ ರುಜು.

ಮೂಳ್ಕಾ, ಕಂದಾರ, ೧೪—೯—೩೩.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. P. No. 87/1933.

ಲಕ್ಷ್ಮಮ್ಮ —ಅರ್ಜಿದಾರರು.

ಮತ್ತು

ನಾರಾಯಣಪ್ಪಯ್ಯ ಕೂಡೆ—ಎದ್ರಿರು.

ಇವರಿಗೆ .

ಅರ್ಜಿದಾರಳ ಗಂಡ ಹಾಕಿ ಮೃತಪಟ್ಟ ಎಲ್ಲೂರು ಶ್ಯಾನುರಾಯರ ಸ್ವಂತದ ಬಾಬ್ತು ಎಲ್ಲೂರು ಗ್ರಾಮದ ಕಲ್ಲಾಪ್ರ ಕೃಷ್ಣಯ್ಯನ ಕೂಡೆ ಅಸಲು ಬಡ್ಡಿಯಿಂದ ವೃದ್ಧಿಸಿಕೊಡುವ ಗೋಸ್ಕರ ಇಟ್ಟಿದ್ದ ರೂ. 100/-ನ್ನು ಪ ಅದರ ಮೇಲಣ ಸಾಲಿ ಯಾನ ಸೇಕಡಾ 10ರ ದರದ ಬಡ್ಡಿ ಸಮೇತ ವಸೂಲು ಮಾಡು ವರೆ ತನಗೆ ವಾರಸು ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾ ರಳು ಕೊಟ್ಟರುವ ಮೇರೆಗಿನ ಅರ್ಜಿಯು ತಾ. 10-10-33ನೇ ದಿನ ಹಗಲು 10 ಗಂಟೆಗೆ ತಮ್ಮಿಗೆ ಇಟ್ಟಿರುವುದರಿಂದ ಆ ಕುರಿತು ಅಕ್ಷೇಪಣೆ ಇರುವವರು ಸದರಿ ದಿವಸ ಸದರಿ ಕೋರ್ಟು ಮುಂದೆ ಹಾಜರಾಗಿ ತಮ್ಮ ಅಕ್ಷೇಪವನ್ನು ಜ್ಞಾಪೀರು ಮಾಡಿಕೊಳ್ಳ ಬಹುದೆಂತ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗುತ್ತದೆ.

ಕಾರ್ಕಳ, 08—೯—೪೩. } **P. V. Upadhyaya,** *B.A.LL.B* ಅರ್ಜಿದಾರಳ ಕಡೆ ವಕೀಲರ್.

Bombay, 25th August 1933.

ANNOUNCEMENT.

We have great pleasure to announce that effective immediately Messrs. Bola Krishna Kamath, Lohar Street, Bombay 2, have been appointed as Chief Distributors for all our Manufactures for the District of South Kanara.

ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಾವು ನಮ್ಮ ಸಂಕುಗಳಿಗೆ ದಕ್ಷಿಣ ಕನ್ನಡ ಜಿಲ್ಲೆಗೆ ಚೀಫ್ ಡಿಸ್ಟ್ರಿಬ್ಯೂಟರ ರನ್ನಾಗಿ ಮೆಸರ್ಸ್ ಬೋಲ ಕೃಷ್ಣ ಕಾಮತ್, ಲೋಹಾರ್ ಸ್ಟ್ರೀಟ್, ಮುಂಬಾಯಿ 2. ಇವರನ್ನು ನೇಮಿಸಿರುತ್ತೇವೆ.

For the CALCUTTA CHEMICAL Co, LTD.

S/d. **N. K. SEN,**
Manager, Bombay Branch.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O. P. No. 81/1933.

ಕೃಷ್ಣ ನೇಮಿ ಅಮ್ಮ, ಅಚ್ಚನಲ್ಲಿ ತಿಂಮಯ್ಯನವರ ವಿಧವೆ, ವೈಮೂರು ಪ್ರಾಂತ್ಯದ ತೀರ್ಥಹಳ್ಳಿ ತಾಲೂಕು ಮಳಲೂರು ಗ್ರಾಮದಲ್ಲಿರುವವಳು—ಅರ್ಜಿದಾರಳು.

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ ಅರ್ಜಿದಾರಳ ಗಂಡ ತೀರ್ಥಹಳ್ಳಿ ತಾಲೂಕು ಮಳಲೂರು ಗ್ರಾಮದ ಅಚ್ಚನಲ್ಲಿ ತಿಂಮಯ್ಯನು ಮೃತಪಟ್ಟಿರುವುದರಿಂದ ಆತನ ಬಾಬ್ತು ಆತಗೆ ಹೆದ್ರಿ ಕಸಬಾ ಗ್ರಾಮದ ಅನಂತಯ್ಯನ ಮಗ ತಿಂಮಯ್ಯ ತ್ಯಾನುಧಾನಗಿನಿಂದ ಬರತಕ್ಕ ರೂಪ್ಯಾ 206—4—0ನ್ನು ವಸೂಲು ಪಡಿಯುವರೆ ಸದ್ರಿ ಮೃತ ತಿಂಮಯ್ಯನಿಗೆ ತಾನೊಬ್ಬಳೇ ವಾರಿಸುದಾರಳಾಗಿ ಹೆಸ್ಕುದಾರಳಾಗಿರುವುದರಿಂದ ಆ ಬಗ್ಗೆ ತನಗೆ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರಳು ದಾಕ್ಲು ಮಾಡಿದ ಮೇಲ್ಕಂಡ ಅರ್ಜಿಯು ತಮ್ಮಿ ಬಗ್ಗೆ ತಾ. 7-10-33ಕ್ಕೆ ಇಟ್ಟಿರುವುದರಿಂದ ಆ ಕುರಿತು ಅಕ್ಷೇಪವುಳ್ಳವರು ತಮ್ಮ ಅಕ್ಷೇಪಣೆಯನ್ನು ಮೇಲ್ಕಂಡ ತಾರೀಕಿನ ದಿವಸ ಹಗಲು 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು.

ಕಾರ್ಕಳ 13—9—1933 } **S. N. Shetty,** Pleader for Petitioner.

ಸ್ವೀಕಾರ

ಗೀತೆಯ ಕೈಗನ್ನಡಿ—ಸರ್ವ ಕನ್ನಡಿಗರೂ ಓದಬೇಕಾದುದು ಹೊಸಕೆರೆ ವೆಂಬಯ್ಯನವರು ಬರೆದುದು. ೪೩೬ ಪುಟಗಳನ್ನೆ, ಬೆಲೆ ನಾಲ್ಕಾಣೆ. ಸಿಗುವ ಸ್ಥಳ-ತುಳುನಾಡ್ ಭಾಷಾನ್ನೆ, ಉಡುಪಿ.

ಕಲಾಚಂದ್ರ—ಸಂಪಾದಕರು ಅರ್. ಜಿ. ಶೆಣೈ. ಕಾರ್ಕಳ. ಕತೆ, ಹಾಸ್ಯ, ಏನೋಜಗಲು ಇದರಲ್ಲಿ ಇದಕ್ಕಾಗಿವೆ. ಎಲ್ಲರೂ ಓದ ತಕ್ಕದಿದೆ. ಮಾಸಿಕ ಪತ್ರಿಕೆ. ವಾ. ಚಂ. ರೂ. ೧. ಅಂಚೆ ಸೇರಿ ಇಚ್ಛೆ ರೂ. ೧—೪—೦. ಬಿಡಿ ಸಂಚಿಕೆ ೦—೬—೦.

PAI PHARMACY,

Car Street, MANGALORE.

ESTABLISHED 1926.

Always ask for:—

Lister Antiseptic & Dressings (1928) Ltd., Calcutta.

Popular known as

'Ludco'

Vegetable Toilet and Washing Soaps

Indian Capital, Indian Labour, Indian Management.

LIBERAL TERMS TO TRATE

Agents:—

Pai Pharmacy, Car Street, Mangalore.

Whole Sole Stockists:—

JAYAVANT SHANTARAM & BROS., *Merchants,*
Bunder, Mangalore, S. K.

1—9—33

ಇಪ್ಪತ್ತೈದನೆಯ ವರ್ಷ. Regd. No. M. 469.

ಸ್ವದೇಶಾಭಿಮಾನಿ

Dasara Issue. ದಸರಾ ಸಂಚಿಕೆ 1933.

ಜಗತ್ತಿಗೆ ಶಾಂತಿ
ಜೀವನಕ್ಕೆ ಕಾಂತಿ
ಬೆಳಗಲಿ!

ನುಡಿಯಿಂದ ಪ್ರೀತಿ
ನಡೆಯಿಂದ ನೀತಿ
ಮೊಳಗಲಿ!

ಸ್ವದೇಶಾಭಿಮಾನಿಯ ವರ್ಷದ ಸಂಚಿಕೆಯು

ದಿಗಿಲೇಕೆ? ಜಿಗಿಯೇಕೆ?
ಮಿಗಿಲೆಂಬ ಮಿಗಿಲೇಕೆ?
ನಮ ಬೆಳಗಲಿ!

ದೇವಿಯಾಶೀರ್ವಾದ
ಕಾವುದೆನ್ನುವ ಜಯದ
ರವ ಮೊಳಗಲಿ!

ದಸರಾ ಸಂಚಿಕೆಯ ವಿನ್ನಪ.

'ಸ್ವದೇಶಾಭಿಮಾನಿ'ಯು ರಜತೋತ್ಸವವನ್ನು ಜರುಗಿಸಿದಂದು,—ಪ್ರತಿ ವಾರವೂ ೧೬–೧೮ ಪುಟಗಳ ಸಂಚಿಕೆಗಳನ್ನು ಹೊರಡಿಸಿಯೂ, ಪ್ರತಿ ಮಾಸವೂ ಒಂದೊಂದು ಸಾಹಿತ್ಯ ಸಂಚಿಕೆಯನ್ನು ಹೊರಡಿಸಿಯೂ ಗ್ರಾಹಕರಿಂದ ನಿಗದಿ ಇಂತಹ ವಾರ ಪತ್ರಿಕೆಗಳಿಗಿಂತಲೂ ಕಡಿಮೆ ಯ್ಯಾಗಿರುವ, ಮೌಲ್ಯವನ್ನು ಪಡೆದು ಸೇವೆ ಮಾಡುತ್ತಿದ್ದುದಕ್ಕೆ ಇನ್ನೊಮ್ಮೆ ಕೊಡಿಸಿ, ವರ್ಷಕ್ಕೊಂದು ವಿಶೇಷ ಸಂಚಿಕೆಯನ್ನು ಅವಿಚ್ಛಿನ್ನವಾಗಿ ನಿಶ್ಚಿತವಾಗಿದ್ದಿತು. ಆದರೆ, ಮತ್ತು ವರ್ಷವೇ, ದಸರಾ ಕಾಲವು ಸಮೀಪಿಸುತ್ತಲಿದ್ದಂತೆಯೆ, 'ಸ್ವದೇಶಾಭಿಮಾನಿ'ಯನ್ನು ಪಿತೃವಿಯೋಗದುಃಖವು ಬಾಧಿಸಲೆಂದು ಕಾಲನ ಕಲ್ಪನೆಯಾಯಿತು. ಅದನ್ನು ಹೊತ್ತು, ವಿಶೇಷ ಸಂಚಿಕೆಯನ್ನು ಎಂಟೆಯಲ್ಲೇ ಮುಗಿಸಬೇಕಾಗಿ ಬಂದಿತೆಂಬುದನ್ನು ಈ ದಸರಾ ಸಂಚಿಕೆಯನ್ನು ನಾಜಕರ ಕೈಯಲ್ಲಿ ಒಪ್ಪಿಸುವಂದು ವಿನ್ನವಿಸಿಕೊಳ್ಳುತ್ತೇವೆ.

ಇದೀಗ ನಮ್ಮ ಮೊದಲನೆ ದಸರಾ ಸಂಚಿಕೆ. ಇಪ್ಪತ್ತೈದು ವರ್ಷಗಳಲ್ಲೂ ವಾಚಕರನ್ನು, ಲೇಖಕರನ್ನೂ, ವಿದ್ವಾಂಸಕಾಪಾರಕ್ಕೂ ಮೊದಲಾಗಿಯೂ ಇತ್ತು, ಕನ್ನಡಿಗರು ನಮ್ಮನ್ನು ಪ್ರೀತಿಸಿ ಪೋಷಿಸಿ ಬಂದುದಕ್ಕೆ, ಇದು ವಿಶೇಷ ಸಂಚಿಕೆಯಾದರೂ ಅಷ್ಟೆಂದು ವಿಶೇಷತ್ವವೇನೂ ಇಲ್ಲದಿರುವುದೂ ಸಂಭವಿಸಬಹುದೆಂದು ನಾವು ಬಲ್ಲೆವು. ಆದರೆ, ನಮ್ಮ ಪತ್ರಿಕೆಯು ಇಷ್ಟಕಾಲದೂ ಸಾಧಿಸಿ, ನಯೋದ್ಯಾರ್ಜಿಸಿರುವ ಮುಂದೊತ್ತಿ ಬರುತ್ತಲಿದ್ದೆ, ಕೈಜಜ್ಞತೆಯನ್ನು ಅರಿತಿದೆ ಎಂದು ತಿಳಿದು ನಮ್ಮ ಕುಂದುಗಳನ್ನು ಕ್ಷಮಿಸುವಿರಾಗಿ ನಿಮ್ಮನ್ನು ಬಲ್ಲ ನಮ್ಮಲ್ಲಿ ಸಂಪೂರ್ಣ ವಿಶ್ವಾಸವಿದೆ.

ಇವು ಮಾತನಾಡುವ ದಿನಗಳು. ಇಡೀ ದೇಶವೆಲ್ಲ ದೇವಿಯ ಚರಣಾಶ್ರಯವನ್ನು ಭಕ್ತಿಯಿಂದ, ಶಕ್ತಿ ದೈನ್ಯದಾರಿದ್ರ್ಯಗಳನ್ನು ಬಿಡಿಸೊತ್ತಿ, ಜೇಡುತ್ತಿರುವ ಇಡೀ ದೇಶದ ದೇವಿಯೆ ಅವಳು; ಇಡೀ ದೇಶವೇ ಅವಳು. ಶಾರದೆ, ಅಕ್ಕಲ್ಲ, ಶಕ್ತಿ ಎಂಬ ತ್ರಿವಿಧ ಸ್ವರೂಪದಿಂದ ಮೂರೆ ನವಳು. ಅವಳನ್ನು ತಿಳಿದೇ ಸರ್ವ ಪರಿಚಿತನಾದ ಕವಿಯು

ಶ್ರೀಂ ಹ್ರೀಂ ಐಮ್ಮಾ ದೇವ್ಯಾಸರಸ್ವಾಮಿನೀ
ಕಮಲೆನೆ ಕಾಮಕಲೆಯಾಶಾಸೀ
ಜಾಡೆ ವಿದ್ಯಾಭಾಮಿಲೀ ನವನವಮಿನ್ಯಾಂ.
ನವರಾತ್ರಿ, ದಾರಿಯಾಮ, ಮೂಕಾಂಬಿಕೆ ೨೦

ಎಂದುದನ್ನು ಮರೆಯಲಾಗುವುದಿಲ್ಲ. ದೇವಿಯ ಆಶೀರ್ವಾದವಿಂದ ಸರ್ವತ್ರವೂ ಅಜ್ಞಾನಾಂಧಕಾರವು ತೊಲಗಿ ನವರೂ ಅಕ್ಷರಜ್ಞರಾಗಿ ದೇಶದ ಸೇವೆಯಲ್ಲೆ ತಮ್ಮ ಭಾಗವನ್ನು ಕರ್ತವ್ಯನಿಷ್ಠೆಯಿಂದ ಪೂರೈಸುವಂತಾಗಲಿ; ಅಂತೆಯೆ ಜಗತ್ತನ್ನು ಮುಚ್ಚಿರುವ ಆರ್ಥಿಕ ದುರವಸ್ಥೆಯು ಮಾಯವಾಗುವಂತೆ ದೇಶದ ಸಂಪದಭಿವೃದ್ಧಿಗೆ ಅನುಕೂಲವಾದ ವ್ಯವಸ್ಥೆಗಳುಂಟಾಗಲಿ; ಜನತೆಯು ದುರ್ಬಲ ದೀನನುಗಳು ಪ್ರಭಲರಿಂದ ಅದನ್ನು ಉಕ್ಕಿಬಿಸಿರುವ ಸಂಕಟ ಅವಿಶ್ವಾಸಗಳನ್ನು ನಿಶ್ಶಮನವನ್ನೆವಿಂದ ಗೆದ್ದುಕೊಂಡು ದೇಶವು ಕ್ಷೋಭರಹಿತವಾಗುವಂತಾಗಲಿ,—ಎಂಬುದೇ ತ್ರಿಕಕ್ತಿಗಳಲ್ಲೂ ನಮ್ಮ ಮತ್ತು ದೇಶಬಾಂಧವರ ಪರವಾಗಿ ನಮ್ಮ ಪ್ರಾರ್ಥನೆ. ಅಂತಾಗಲಿ! ವೆಂದೇ ಮಾತರಮ್.

(All Rights Reserved.)

Canara Bank Limited.

ESTABLISHED 1906.

Authorised capital	10,00,000 0 0
Subscribed capital	6,00,000 0 0
Paid up capital	3,00,000 0 0
Reserves	4,81,000 0 0

Head Office—
Bunder, Mangalore.

Local Office—
City and Bunder.

Branches—Bombay, Cochin, Calicut, Ernaculam Alleppey, Chikmagalur, Ganguli, Coondapoor, Udipi, Karkal, Puttur, Kasaragod, and Buntwal Out-Agency.

Interest is allowed on Current, Fixed and Saving Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

Mangalore,
12—7—33.

A. Madhava Pai,
Secretary.

ಅನುಭವಸಿದ್ಧ ಔಷಧಗಳು

ಧಾತುಪುಷ್ಟಿ ಲೇಹ—ಬಾಲ್ಯತನದ ದುರಭ್ಯಾಸಗಳ ನಿರಿನಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗ ಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕ ಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ರಕ್ತಪಿತ್ತ, ಒಳಜ್ವರ, ಮೆಲಬದ್ಧತೆ, ಕೈಕಾಲು ಬಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದು ಹೋದ ಶಕ್ತಿಯು ಪುನಃ ಕುಂಬಿಕೊಳ್ಳುವುದು.

ಡಬ್ಬಿ 1ಕ್ಕೆ ರೂ. 2-8-0 3ಕ್ಕೆ ರೂ. 7-0-0.

ಆರೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟು ದೋಷಗಳು, ಬುತುಸ್ರಾವವು ಹೆಚ್ಚು, ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸಂತಾನ ಹೀನತೆ, ಮೂರ್ಛೆ, ಮಲಬದ್ಧತೆ, ಚಳಿಜ್ವರ, ರಕ್ತಹೀನತೆ, ಕೈಕಾಲು ನೆರೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನೂ ಗುಣ ಪಡಿಸುವುದು.

ಬಾಟ್ಲಿ 1ರ 1-2-0; 1 ಡಬ್ಬಿ ಮಾತ್ರೆಗೆ 1-0-0; 2 ಬಾಟ್ಲಿ ಔಷಧಕ್ಕೂ 2 ಡಬ್ಬಿ ಮಾತ್ರೆಗಳಿಗೂ 4-4-0.

ಕಸ್ತೂರಿ ಮಿಶ್ರಣ ದಶಮೂಲಾರಿಷ್ಟ—ಹೆಂಗಸರು ಪ್ರಸವಿಸಿದ ನಂತರ ಅವರ ಗರ್ಭಕೋಶಗಳನ್ನು ಆಕುಂಚಿಸಿ ಪ್ರಸವದ ಆಯಾಸವನ್ನು ಹೋಗಲಾಡಿಸಿ, ಗರ್ಭಕೋಶದಲ್ಲಿ ಕೆಡುಕು ರಕ್ತ ನಿಲ್ಲದಂತೆ ಮಾಡಿ, ಗರ್ಭಕೋಶದ ವೇದನೆಗಳನ್ನು ಸಮಾಧಾನ ಪಡಿಸಿ, ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾಭಂಗ ಮೊದಲಾದವುಗಳು ಮಾಯವಾಗಿ ಬಾಣಂತಿಯರು ಪುಷ್ಟಿ ಹೊಂದುವರು. ಮಗುವಿನ ಆರೋಗ್ಯವು ನಿರಾತಂಕವಾಗುವುದು. ಪ್ರಸವಿಸಿದ ತರುವಾಯ 8 ದಿನಗಳ ಮಾತ್ರೆಗೆ ಆ. 8; ದಶಮೂಲ ಬೆಲೆ ಬಾಟ್ಲಿ 1ರ 1-8-0; 2 ಬಾಟ್ಲಿಗಳಿಗೆ 3-0-0.

ಮೇಹ ಕುಠಾರ—ಪ್ರಮೇಹ, ಮೂತ್ರಕೃಚ್ಛ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಲ್ಲಿ ಧಾತು ಹೋಗುವುದು, ಮೂತ್ರ ಆಗಾಗ್ಗೆ ಬಂದು ತಡೆಯಲಿಕ್ಕೆ ಸಾಮರ್ಥ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

1 ಡಬ್ಬಿ ಮಾತ್ರೆಗೆ ರೂ. 2-8-0; 3 ಡಬ್ಬಿಗಳಿಗೆ ರೂ. 4-12-0.

ಮಲೇರಿಯಾ ನಿವಾರಿಣಿ—ಇದರ ಸೇವನೆಯಿಂದ ಮಲೇರಿಯಾ, ಒಂದು ದಿನ ಯಾ ಎರಡು ದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಚಳಿಜ್ವರ, ಜ್ವರಗಡ್ಡೆ, ಮುಂತಾದ ನಾನಾ ತರದ ಜ್ವರಗಳನ್ನು ಹೋಗಲಾಡಿಸುತ್ತದೆ.

ಬಾಟ್ಲಿ 1ಕ್ಕೆ ರೂ. 1-8-0; 2 ಬಾಟ್ಲಿಗಳಿಗೆ ರೂ. 2-12-0.

ಬಾಲಗ್ರಹ ಗುಟಿಕೆ—ಬಾಲಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರುಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧಿ.

ಬಾಟ್ಲಿ 1ರ 0-10-0; 3ರ 1-12-0.

ಮಹಾಮದನಕಾಮೇಶ್ವರಿ ಲೇಹ—ಡಬ್ಬಿ 1ಕ್ಕೆ ರೂ. 2-0-0 2ರ 3-12-0.

ಮಹಾಜ್ವರಾಂಕುಶ—ಇನ್‌ಫ್ಲುಯೆಂಜಾ, ನಿಮೋನಿಯಾ, ಶೀತಜ್ವರ ಇವುಗಳ ಮೇಲೆ ಔಷಧಿ. ಬಾಟ್ಲಿ 1ರ 0-10-0, 3ಕ್ಕೆ 1-12-0.

ಖಾಸಕುಠಾರ ಗುಟಿಕೆ—ಎಲ್ಲಾ ವಿಧದ ಕಫ, ಕೆಮ್ಮು, ಖಾಸಶ್ವಾಸಕ್ಕೆ. ಬಾಟ್ಲಿ 1ರ 0-10-0; 3ಕ್ಕೆ 1-12-0.

ದಂತಕಾಂತಿ ಚೂರ್ಣ—ಪೆಕೆಟ್ 1ರ 0-1-0; 12ಕ್ಕೆ 0-10-0.

ಕೆಟಲಾಗಿಗೆ ಬರೆಯಿರಿ:

ಎಂ. ಗೆಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಶಿಯನ್ಸ್ ನಂ. 373 ರಥಬೀದಿ, ಮಂಗಳೂರು.

ನಮ್ಮೆಲ್ಲಿಯ ಔಷಧಗಳು ಈ ಕೆಳಗಿನ ವಿಳಾಸದವರಲ್ಲಿಯೂ ದೊರೆಯುತ್ತವೆ.

ಕಾಮತ್ ಎಂಡ್ ಕೋ., ತಾರಾಹೌಸ್, ನರಿಗಾಂವ್ ಬೇಕ್ ರೋಡ್, ಮುಂಬಾಯಿ ನಂ. 4. ... ಡಾ ಶ್ರೀನಿವಾಸ ಕೃ, ಪುತ್ತೂರು, ದ. ಕ.

ನಮ್ಮ ಕಾರ್ಖಾನೆಯು ಕಳೆದ ವರ್ಷದಲ್ಲೇ ಸ್ಥಾಪಿತವಾಗಿ ಹನ್ನೊಂದು ತಿಂಗಳು ಕಳೆಯುವಷ್ಟರಲ್ಲಿಯೇ
ನಾವು ತಯಾರಿಸಿದ ಸಾಬೂನುಗಳ ಉತ್ಕೃಷ್ಟತೆಯ ಬಗ್ಗೆ ೧೦ ಸ್ವರ್ಣ ಪದಕಗಳೂ
ಮೊದಲನೇ ತರಗತಿಯ ಪ್ರಶಸ್ತಿ ಪತ್ರಿಕೆಗಳೂ ಇತರ
ಸರ್ಟಿಫಿಕೇಟು ಪತ್ರಗಳೂ ದೊರೆತಿವೆ.



ವೆಜಿಟೆಬಲ್ ಸಾಬೂನುಗಳೆಂದರೆ

ಅಖಿಲ ಹಿಂದೂಸ್ಥಾನದಲ್ಲಿ ಹೆಸರಾದುದು

ಹಿಂದೂಸ್ಥಾನದಲ್ಲಿ ಪ್ರಾಮುಖ್ಯ ಕಾರ್ಖಾನೆ!
ವಿದೇಶಿ ಸಾಬೂನುಗಳನ್ನು ಸೋಲಿಸುವ ಪರಿಮಳ!
ನಮ್ಮ ಸೆಂಡಲ್‌ವುಡ್ ಸಾಬೂನುಗಳು ಪ್ರಥಮ ತರಗತಿಯ ಪ್ರಶಸ್ತಿ ಪತ್ರಿಕೆಗಳನ್ನು ಪಡೆದಿದೆ.
ಶಾಸ್ತ್ರೀಯ ರೀತಿಯಿಂದ ಗಮಗಮಿಸುವ ಸಾಬೂನುಗಳು

ಬೇಕಾದ ಟ್ಯಾಲೆಟ್‌ಗಳು ಇಲ್ಲಿ ಯಾವಾಗಲೂ ಎಲ್ಲರಿಗೂ ದೊರೆಯುತ್ತದೆ.
ರಫಂ ಆಗಿ ಎಲ್ಲಾ ಏಜಂಟರುಗಳಲ್ಲಿ ದೊರೆಯುತ್ತದೆ

ನೀವು ಮೈಸೂರು ದಸರಾ ಸಪ್ತಾಹವನ್ನು ಕಂಡಿಲ್ಲವೇ?

ಮೈಸೂರು ದಸರಾ ಪ್ರದರ್ಶನದಲ್ಲಿ
1988ನೇ ಇಸವಿ ಸಪ್ಟಂಬರ್ ತಾರೀಕು 20ರಿಂದ ಅಕ್ಟೋಬರ ತಾರೀಕು 4ರ ವರೆಗೆ
ಕಲ್ಲಿಕೋಟೆಯ ನಮ್ಮ ಕಾರ್ಖಾನೆಯಲ್ಲಿ ಶುದ್ಧ ಸಸ್ಯಜನ್ಯ ಪದಾರ್ಥಗಳಿಂದ ತಯಾರಿಸಿರುವ ಪ್ರಖ್ಯಾತಪಟ್ಟ
ಮಲಬಾರ ಸೆಂಡಲ್‌ವುಡ್ ಸಾಬೂನು ಮತ್ತು ಇತರ ಸಾಬೂನು ನಮ್ಮ ಸ್ಟಾಲಿನಲ್ಲಿ ಪ್ರದರ್ಶಿಸಲ್ಪಡುವುವು
ಮೈಸೂರು ದಸರಾ ಶುಭ ಪ್ರಸಂಗದಲ್ಲಿ ನಮ್ಮ ಸ್ಟಾಲ್ ಕಡೆಗೆ ಗಮನಿಸಿರಿ.

The Malabar Vegetable Soap Works Calicut.

ದಿ ವೆಜಿಟೇಬಲ್ ಸೋಪ್ ವರ್ಕ್ಸ್‌ನ

'ಮಲಬಾರ' ಸಾಬೂನುಗಳನ್ನೆ ಉಪಯೋಗಿಸಿರಿ



ಶೇವಿಂಗ ಸ್ಟಿಕ್‌ಗಳೂ, ಸೆಂಡಲ್ ಊಡ್, ಜಸ್ಮಿನ್, ಲಿಲಿರೋಜ, ಕೊಲಟಾರ,
ರೋಸ್, ಲಿಮ್ಬಾ, ಲಿಲಾ, ಬೊರಿಕ್ಸ, ಟರ್ಕಿಷ್ ಬಾತ, ಲಿಕ್ವಿಡ
ಸೆಂಡಲ್ ಸಾಬೂನುಗಳು. ಇವುಗಳು
ಮುಖ್ಯವಾದ ಟ್ಯಾಲೆಟಗಳು.

ಉಡಿಗೆ ತೊಡಿಗೆಗಳ ಬಗ್ಗೆ ಮಲಬಾರ ಟ್ವೀನ್, ಟೆಬಲೆಟ್ಟು 4 ಮತ್ತು 8 ಔನ್ಸು
ಕ್ಯೂಟ, 101 ನಂಬ್ರದ ಗುಜರಾತ ವಾಶಿಂಗ ಸೋಪು ವಸ್ತ್ರಗಳನ್ನು
ಚಲೋದಾಗ್ಗಿ ಬಿಳುಪು ಮಾಡುವ ಗುಣವುಳ್ಳ ನೀಲಮ
ಸೋಪುಗಳು, ಬಾರ ಸೋಪುಗಳು.

'ಸನ್' ಗುರುತಿನ (ಸೂರ್ಯಛಾಪಿನ) ಕೊಡೆಗಳನ್ನು ತಯಾರಿಸುವ

ನೇಟ್ ನಾಗಜೀ ಪುರುಷೋತ್ತಮ ಕಂಪನಿ, ಕಲ್ಲಿಕೋಟೆ.

ಇವರಲ್ಲೂ ಮ ರಫಂ ಕುಕ್ಕು ಜಿಲ್ಲೆಕಿ ವ್ಯಾಪಾರಿಗಳಲ್ಲಿಯೂ ಯಾವಾಗಲೂ ಸಿಗುವುದು.
ಕ್ರಯವನ್ನು ಬದಲಾಯಿಸಿದ ಹೊಸ ಕೆಟಲಾಗಿಗೆ ಕೂಡಲೇ ಬರೆದುಕೊಳ್ಳಿರಿ.

ದಕ್ಷಿಣ ಕನ್ನಡಾ ಜಿಲ್ಲೆಗೆ ಪ್ರವರ್ತಕರು:-

ರಾಘವೇಂದ್ರ ರಂಗ ಷ್ಟೋ, ರಥಬೀದಿ, ಮಂಗಳೂರು.

ನಮ್ಮ ಎಪ್ಪತ್ತೇಳು ವರ್ಷಗಳು!

ಅನಂತ್ಯಾತಿಶಾಕ ನಮ್ಮ ಗಿರಾಕಿಗಳ ಸೇವೆ ಮತ್ತು ಅನುಕೂಲತೆಗಳನ್ನು ಇದೇ
ಮೊತ್ತಾಲು ತಕ್ಷಣಾನದಿಂದ ತಂದು, ಅವರಿಗೆ ಸುಲಭ ದರದ ಯೋಗ್ಯ
ಜಾಗೂ ಬಹುಕಾಲ ಬಾಳುವ ಸರ್ವ ತರದ ಉಡುಪುಗಳನ್ನು ಒದಗಿ
ಸುವ ನಮ್ಮ ಎರಡು ಶತಾಂತರಗಳ ಅನುಭವವು ಮುಂದಕ್ಕೂ
ಸಂತೃಪ್ತಿಯನ್ನೇ ಕೊಡುವುದಲ್ಲವೇ?



ಸ್ವದೇಶೀ

ಕೌರ್ಟಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್‌ಶೀಟ್, ಬಾತ್
ಟುವಾಲುಗಳೂ ಧೋತಿ ಸೀರೆ - ಬೈರವಾಸು - ಚೆಕ್ಕು - ಚೀಟು ಇತ್ಯಾದಿ
ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗ ಪೈ, ಸಾಹುಕಾರ ಮಹಾಲ್, ರಥಬೀದಿ, ಮಂಗಳೂರು.

Srinivasa Ranga Pai,
Representative for
SOUTH KANARA & MALABAR.

FOR

A. & F. Harvey,
Managers —
MADURA MILLS CO LTD

---

27 ವರ್ಷಗಳ ಅವಿಚ್ಛಿನ್ನ ವಾಙ್ಮಯ ಸೇವೆ ಮಾಡಿದ
ಕನ್ನಡ ರಾಷ್ಟ್ರೀಯ ವಾರಪತ್ರಿಕೆಯೆಂದರೆ ದಕ್ಷಿಣ ಕನ್ನಡದಲ್ಲಿ

ಸ್ವದೇಶಾಭಿಮಾನಿ

16 ಪುಟಗಳು

ಪ್ರತಿವಾರವೂ ವಾಚನೀಯ ವಾರ್ತೆ, ಸ್ವಾರಸ್ಯ ಪರಪ್ರಾಂತ್ಯ ವಾರ್ತೆ, ದೇಶ ವಿದೇಶ ವಾರ್ತೆ, ಪತ್ರಸ್ಫವಹಾರ, ಮೈಂಗ್ಯನುಡಿಸರಣಿ
ಗಳಿಂದೊಪ್ಪಿ ಹೊರಡುವಂತಹುದು ಮಾಸಾಂತ್ಯದಲ್ಲಿ 'ಸಾಹಿತ್ಯ ಸಂಚಿಕೆ'ಯು ಧರ್ಮಾರ್ಥ!

ಎಲ್ಲರೂ ಓದಬೇಕೆಂದು ವಾರ್ಷಿಕ ಚಂದಾ ಆಂಟೆವೆಚ್ಚ ಸೇರಿ
ರೂ. 2-13-0 ಸ್ಥಳೀಯರಿಗೆ ರೂ. 2-0-0.

ಯೋಚಿಸಿ ಫಲವಿಲ್ಲ — ತರಿಸಿಯೇ ನೋಡಿರಿ! ಮಾದರಿ ಸಂಚಿಕೆಗೆ ಬರೆದುಕೊಳ್ಳಿರಿ.

ಮೆನೆಜರ್,
ಸ್ವದೇಶಾಭಿಮಾನಿ,
ಮಂಗಳೂರು, ದ ಕ

ಚಂದಾದಾರರಾಗಲಿಚ್ಛಿಸುವವರು ಕೆಳಗಿನ ಕೂಪನನ್ನು ಹರಿದು ನಮಗೆ ರವಾನಿಸಿರಿ.

ಶಾರದಾ ಛಾಪಖಾನೆ ಮಂಗಳೂರು.
Sharada Press Mangalore.

For all kinds of efficient printing, please call at our office at Car Street.

ಎಲ್ಲಾ ತರದ ವಿವಾಹ ಆಮಂತ್ರಣ, ಪುಸ್ತಕ ಮುದ್ರಣಗಳಿಗಾಗಿ
ಶಾರದಾ ಛಾಪಖಾನೆಗೆ ಬನ್ನಿರಿ.

ಮೆನೆಜರ್ ಸ್ವದೇಶಾಭಿಮಾನಿ,
ಮಂಗಳೂರು.

ದಯವು ಮಾಡಿ ನನ್ನ ಈ ಕೆಳಗಿನ ವಿಳಾಸಕ್ಕೆ ನಿಮ್ಮ ಪತ್ರಿಕೆಯನ್ನು ಒಂದು ಈ ವರ್ಷಕ್ಕೆ
ವಿ ಪಿ ಮಾಡಿರಿ
ಮಾದರಿಯಾಗಿ ರವಾನಿಸಿರಿ

ಇಂತಿ ಭಾಷಾ ಪ್ರೇಮಿ

ನನ್ನ ಹೆಸರು ವಿಳಾಸ —

ದೇಶ ಭಕ್ತ ಟಿಲ್!

ವಾಸುದೇವನು ಬರೆದಿದ್ದು

ಸ್ವಿಟ್ಸರ್ಲೆಂಡ್ ಎಂಬುದು ಚಿಕ್ಕ ದೇಶ. ಸುತ್ತಲೂ ಹಿಮ ಮುಚ್ಚಿದ ಬೆಟ್ಟಗಳ ತೊಟ್ಟಿಲು; ಅದರೊಳಗೆ ಸ್ವತಂತ್ರ ನಾಡಿಗರ ಬೀಡು ಇದು. ಅಲ್ಲೊಂದು ಸಂತೆಯೂರು. ಅಂದಲ್ಲಿಗೆ ಬಂದವನು ಟಿಲ್,—ದೀರ್ಘ ದೇಹ, ಆಜಾನು ಬಾಹು; ಆ ಎತ್ತರ ಮೈಕಟ್ಟಿಗೆ ಸರಿಯಾಗಿ ಅಗಲವಾದ ಎದೆ, ಧೀರ ಪುರುಷಾಕೃತಿ, ನಗು ಮೊಗ, ಗಡ್ಡದ ಸಿಂಗಾರ, ಎತ್ತಿ ಹಿಡಿದ ಕಲೆ, ವೀರರ ನಡಿಗೆ, ಕಣ್ಣಲ್ಲಿ ಆನಂದ, ಬಾಯಲ್ಲಿ ವಿನೋದ, ನೋಡಿದವರೆಲ್ಲ,—ಇವನೆ ನಮ್ಮೂರ ವನರಾಜ, ನಿಜ ಬಿಲ್ಲುಗಾರ ಎನ್ನುತ್ತಿದ್ದರು.

ಸ್ವಿಟ್ಸರ್ಲೆಂಡಿನಲ್ಲಿ ಪರ್ವತಾರಣ್ಯಗಳ ರಾಜನೇ ಈತನು. ಅವನ ಬಿಲ್ಲಿನೆದುರು ನಿಂತವರಿಲ್ಲ, ನಿಂತುದಿಲ್ಲ. ವನಭಾಗದಲ್ಲೊಕ್ಕೆದು ಕರಿ, ಕರಿಯ ಬಳಿ ಇವನ ಗುಡಿ. ಅವನೆದೆಯೊಳಗಣ ಶ್ವಾಸವೇ ತನಗೆ ಪ್ರಾಣಾಧಾರವೆಂಬಂತೆ ಅನುಕೂಲೆಯಾದ ಅವನ ಹೆಂಡತಿಯೂ, ಯಾರಿಗಾಗಿ ಟಿಲ್ಲನ ಬಾಳೋ ಅಂತಹ ಮಕ್ಕಳು, ಇದೆಲ್ಲ ಅವನ ಕುಟುಂಬ ಮೃಗಬೇಟೆಯಿಂದಾಗಿ ಅವನ ಜೀವನ ನಡೆವುದು, ಬಲು ಗಟ್ಟಿಗ ಮಿನುಗಾರನೂ ಅಹುದು. ಇದರಿಂದ ಅನ್ನಬಟ್ಟೆಗಳಿಗೆ ಕಡಿಮೆ ಇರಲಿಲ್ಲ. ಮನೆ ಜೊಕ್ಕವಾಗಿದ್ದು, ಸುಖಕರವಾಗಿದ್ದಿತು. ಆ ಪ್ರಾಂತ್ಯದಲ್ಲಿ ಶಾಂತಿಯು ನಿತ್ಯ ತೃಪ್ತ ಜೀವನ ಎಂದರೆ ಇವರದೇ.

ಜಿಂಕೆಯ ಚರ್ಮಗಳ ಅಡೊಂದು ಕಟ್ಟನ್ನು ಮಾರಲು ಟಿಲ್ಲನು ಸಂತೆಗೆ ಬಂದಿದ್ದನು. ಅದನ್ನು ಕೊಟ್ಟು, ಚಳಿಗಾಲದ ಉಡುಪಿಗಾಗಿ ಉಣ್ಣೆ ಬಟ್ಟೆಯನ್ನು ಮಕ್ಕಳಿಗೆ ಕೊಂಡು ಕೊಳ್ಳಬೇಕೆಂದಿದ್ದನು. ಇನ್ನೇನು? ಒಂದು ಗಳಿಗೆಯಲ್ಲೇ ಉಣ್ಣೆ ಬಟ್ಟೆಯನ್ನು ಕೊಂಡು ಮನೆಗೆ ಹೋಗುವ ಗುದ್ದಲ ಹಾದಿಯ ಮೇಲೆ ಆನಂದದಿಂದ ಮುಂದರಿಯುವನು. ಅಷ್ಟರಲ್ಲೇ ಅವನ ಕೈಯನ್ನು ಅದಾರು ಸೆಳೆದರು? ಬಗಿಯಾಗಿ ಅವನನ್ನು ಹಿಡಿದೆಳೆದವರಾರು? ಅವನೊಬ್ಬ ಔಸ್ಟ್ರೀಯದ ಸಿಪಾಯಿ. ಔಸ್ಟ್ರೀಯವು ನೆರೆಯ ರಾಜ್ಯ. ಅಲ್ಲಿನವರು ಈ ಸ್ವತಂತ್ರ ಜೀವಿಗಳನ್ನು ದಾಸರನ್ನಾಗಿ ಮಾಡಲು ಮುಂದರಿದು ಊರು ನುಗ್ಗಿದ್ದರು. ಸಿಪಾಯಿಯು ಅವನನ್ನೆಳೆದು ತಂದು, ಅಲ್ಲೇ ನೆಟ್ಟಿದ್ದೊಂದು ಕಂಬದ ಬಳಿ ನಿಲ್ಲಿಸಿ,—ಇದರ ಮೇಲೆ ನಮ್ಮ ಶ್ರೀಮಂತನ ಟೊಪ್ಪಿಗೆ ಇದೆಯಷ್ಟೆ, ಅದನ್ನು ವಂದಿಸದೆ ಮುನ್ನಡೆದು ಬಡ್ಡುಕಿದವರಿಲ್ಲ ಎಂದನು.

ಸಂತೆಗೆ ಬಂದವರು ಆ ಕಂಬದ ಹಾಗೆಯೆ ನಿಂತಲ್ಲೆ ಮೌನ. ಇನರಿಬ್ಬರ ಸುತ್ತಲು ಇಡೀ ಸಂತೆಯ ನೆರವಿ ಕೂಡಿತು ಇನ್ನು ವ್ಯಾಪಾರವೇ ನಡೆಯಲಿಲ್ಲ, ಮಳಿಗೆಗಳಿಗೆ ಬಾಗಿಲು ಬಿದ್ದಿತು. ವ್ಯಾಪಾರವೆಂದರೆ, ಕೊಂಡು ಕೊಳ್ಳುವುದು ಅಷ್ಟೆ, ಇಲ್ಲಿ,—ಒಬ್ಬನ ಸ್ವಾತಂತ್ರ್ಯದ ಪ್ರಶ್ನೆ ಎದ್ದಿದೆ, ಒಂದು ಜನಾಂಗದ ಆತ್ಮದ ಸ್ವಾತಂತ್ರ್ಯ ಅದನ್ನು ಸಂತೆಗೆ ತರುವರೆ? ತರಲಾಗುವುದೆ? ಅದನ್ನು ಕೊಂಡು ಕೊಳ್ಳುವುದುಂಟೇ? ಟಿಲ್ಲನು, ಕೆಂಪೇರಿದನು. ಕಂಬದ ಮೇಲಿದ್ದ ಟೊಪ್ಪಿಗೆ ಕಂಡನು. ಅವೇ ಕಣ್ಣುಗಳಿಂದ ಸಿಪಾಯಿಯ ಮೊಗವನ್ನೂ ಕಂಡನು. "ನಾನೇನು ಅನ್ಯಾಯ ಮಾಡಿದೆನು?" ಎಂದನವನು; ಮಾತು ಬಲು ನಿಧಾನ.

"ಒಡೆಯನಿಗೆ ಮಾನ ಕೊಡದಾದೆ!"

ಟಿಲ್ಲನು ಕಣ್ಣರಳಿಸಿದನು. "ಛೋ ಬಿಯು ಒಗೆದು ಒಣಗಲೆಂದು ತೂಗಿದ ಅಂಗಿಗಿಂತ ಇದೇನು ಮಹತ್ವದ್ದು? ನಿನ್ನೊಡೆಯನ ತಲೆಯ ಟೊಪ್ಪಿಗೆಗೆ ನಾನು ತಲೆ ಬಾಗಬೇಕಷ್ಟನ್ನವೆಯೆ? ಆ ಟೊಪ್ಪಿಗೆಯು ಯಾರ ತಲೆಯ ಮೇಲೆ ಕುಳಿಯುವುದೋ ಅವನ ತಲೆಯೆ ಅದಕ್ಕೆ ಬಾಗಿರಲಿ" ಎಂದನು.

ಇದಕ್ಕೆ ಉತ್ತರ ಸಿಗರಿಲ್ಲ. ಜನಗಳ ಗುಂಪನ್ನು ಮುರಿದು ಮುಂದೊತ್ತುತ್ತ ಬಂಧನಾ ಒಡೆಯನು! ಅವನ ಹೆಸರು ಗೆಸ್ಲರ್. ಅಂತರಿಕ್ಷದ ಗಾಳಿಯನ್ನು ಗೆದ್ದವನಂತೆ, ಔಸ್ಟ್ರೀಯದ ಅರಸು ಸ್ವಿಟ್ಸರ್ಲೆಂಡಿನ ಸ್ವತಂತ್ರ ಜನತೆಯನ್ನು ಗೆದ್ದಿದ್ದನು; ಅವನ ಪ್ರತಿನಿಧಿಯಾಗಿ ಅತ್ತ ಬಂದವನೇ ಈ ಗೆಸ್ಲರಾಸುರ. ಇವನ ಕಣ್ಣು ಕಂಡದ್ದೆಲ್ಲ ಮಣ್ಣಾ ಪಾಲಾಗುವುದು; ಆ ಊರವರನ್ನು ಹಣ್ಣು ಮಾಡಿದನಿವನು. 'ಔಸ್ಟ್ರಿಯವು ನಿಮ್ಮನ್ನಾಳುವುದೆಂದು ತೋರುವ ಈ ಟೊಪ್ಪಿಗೆಗೆ ಮುಂಡಿಯೂರಿ ಬಾಳಿರಿ, ಇಲ್ಲವೆ ಝಂಡ ಉರುಳಿಸುವೆ ಎಂದನವ ರಾಯಸ. ಟಿಲ್ಲನು ಈ ಅಸುರನ ಮೋರೆ ಕಂಡು ಧೀರನಾಗಿ ನಿಂತನು; ಬೆದರಲ್ಲ, ಬೆಚ್ಚಲ್ಲ. ಕಾಡಿನಲ್ಲಿ ತಿರುಗುತ್ತ ಬೇಟೆಯಾಡುವಾಗ,—ತನ್ನನರನ್ನು ಕಟ್ಟಿ ಬಿಗಿದಿದ್ದ ಈ ಔಸ್ಟ್ರಿಯದ ಪಾಶವನ್ನು ಎಂದು ಕುಂದರಿಸುವೆನೋ ಎಂದು ಅವನು ಉಪಾಯ ಹುಡುಕುತಿದ್ದನು. ನಾಲ್ಕು ಮಂದಿ ಜೀವದ ಗೆಳೆಯರೊಡನೆ ವಿಮರ್ಶೆ ಮಾಡಿದ್ದನು. ದಾಸ್ಯವನ್ನೊತ್ತುವ ಈ ಮೊಹರನ್ನು ಅವನೆಂದಿಗೂ ಮುದ್ದಿಡುವವನಲ್ಲ, ಮನ್ನಿಸುವವನಲ್ಲ.

"ಸಂತೆಗೆ ಬಂದೆಯೆಂದು ವಿನೋದವೆ?" ಎಂದು ಗೆಸ್ಲರನು, ಸುತ್ತಲು ಸಲಾಮು ಮಾಡುತಿದ್ದ ಸಿಪಾಯರ ನಡುವೆ ಗಂಭೀರವಾಗಿ ಟೆಲ್ಲನನ್ನು ಅಡಿಸಿದನು. "ಅಪ್ಪಾ, ಅಪ್ಪಾ" ಎಂದೊಂದು ಕರಿ ಕೇಳಿಸಿತು. ನುಗ್ಗಿ ಮುಂದೆ ಬಂದು ನಿಂತುದೊಂದು ಎಳಗೂಸು. ಕಂದಯನ್ನು ಮುದ್ದಾಡಲು ಮುಂಕೊಂಡಿತು ಗೆಸ್ಲರನು ಮಗುವನ್ನು ಕಡೆಹಿಡಿದನು, "ಈ ಪ್ರಾಣಿಯ ಮರಿಯೆ ಇದು?" ಎಂದು ತಿಳಿಯ ಕೇಳಿದನು.

"ಕೈದೂರವಿಡು. ಮುಟ್ಟದಿರಾತನೆನ್ನ ಹೊಟ್ಟೆಯ ಮಗು" ಎಂದನು ಟೆಲ್.

"ನಾನೇಕೆ ಮುಟ್ಟುವೆನು? ಅವನಿಗೇನೂ ಹಾನಿಯಾಗುವುದಿದ್ದರೆ ನಿನ್ನಿಂದ, ನನ್ನಿಂದಾಗದು" ಗೆಸ್ಲರನು ನಗುತ್ತಾ ಇಂತೆಂದನು. ಅದು ಸುಳ್ಳು ನಗು. ನಾಗರ ಹಾವಿನ ನಗು; ಮೊಸಳೆಯ ನಗು. 'ಈ ಪೋರನನ್ನು ಆ ನಿಂಬೇ ಗಿಡಕ್ಕೆ ಕಟ್ಟಿ ನಿಲ್ಲಿಸಿರಿ, ಅವನ ನೆತ್ತಿಯ ಮೇಲೊಂದು ಸೇಬಿನ ಹಣ್ಣಿಡಿರಿ' ಎಂದು ದೂತರಿಗೆಂದನು. ಯಮ ದೂತರು ಅಂತೆಯೆ ಮಾಡಿದರು.

"ಇದೇತಕ್ಕೆಂದೆ?" ಎಂದನು ಟೆಲ್.

"ನಿನ್ನಂತಹ ಬಿಲ್ಲುಜಾಣನನ್ನು ಕಾಣೆನು. ಬಿಲ್ಲುಗಾರಿಕೆಯನ್ನು ಈ ಸಂತೆಯ ನುಂದಿಗೆ ತೋರಿಸು ನಿನ್ನ ಪ್ರಾಣವು ಔಸ್ಟ್ರಿಯದ ಖಜಾನೆಗೆ ಸಾರಖಾವಣಿಯಾಗಬೇಕು. ಅದನ್ನು ಮಾಫು ಬಿಡುವೆನು; ನಿನ್ನ ಕರುಣೆಯನ್ನು ನೀನೆ ನೋಡುವೆ. ನಿನ್ನ ಬಿಲ್ಲಿಗೊಂದು ಅಂಬನ್ನು ತೊಡು; ಆ ಸೇಬನ್ನು ಅದು ತುಂಡರಿಸಲಿ, ಹಾಗೆ ಮಾಡದೆ, ಸೇಬಿನೆ ಗುರಿ ತಪ್ಪಿದರೂ, ಪೋರನಿಗೆ ಬಾಣ ಅಂಟಿದರೂ, ಆಗ ತಾನೆ ನಿನ್ನ ಜೀವನದ ಋಣ ತೀರಿತು. ನಿಂತಲ್ಲೆ, ನಿಂತಂತೆ, ನಿನಗೆ ಮರಣ, ನಿನ್ನಾಣೆ!" ಎಂದು ಗೆಸ್ಲರನೆಂದನು

"ಮಗನ ಹಾನಿ ತಿಳಿದು, ನಾನು ಬದುಕುವಾಕನೆ? ಪಾಪಿಯ ಕಣ್ಣಾ ಎದೆಯೂ ಬತ್ತಿವೆ ಎಂದು ನನ್ನ ಹೊಟ್ಟೆ ಬತ್ತಿಲ್ಲ, ತೋಳು ಬತ್ತಿಲ್ಲ,—ಒಂದು ಕೈ ನೋಡುವೆನು" ಎಂದನು ಟೆಲ್.

"ನೋಡಿದೆಯಾ ನಿನ್ನ ಕರುಣೆಯ ಪ್ರಭಾವವೆನ್ನು' ಕೃತಜ್ಞನಾಗುವೆಯೇಕೆ? ಒಂದು ಬಾಣ ಹೊಡೆ, ಎರಡು ಪ್ರಾಣ ಪಡೆ" ಎಂದನು ಗೆಸ್ಲರಾಸುರ.

ಟೆಲ್ಲನ ಕೈ, ತಂದೆಯ ಕೈ. ದುಡುಕುವ ಮೊದಲು ನಡುಗಿತು. ಮಗುವಿನ ನೆತ್ತಿಯ ಮೇಲಣ ಹಣ್ಣಗೆಂದು ಗುರಿಯಿಟ್ಟು, ಕುತ್ತಿಗೆ ಕಡಿದರೋ' ಘಾತವಾಯಿತು. ಬಾಲನನ್ನು, ಕೋಮಲನನ್ನು, ನೋಡು ಅಸುರನೆ! ತಂದೆಯ ಹೃದಯದ ಪದ್ಮಪೀಠದಲ್ಲಿ ಆಸೀನವಾಗಿರುವ ಸ್ವಾತಂತ್ರ್ಯ ದೇವಿ ಬೇರೆಯಲ್ಲ, ಈ ಸುಕುಮಾರನ ಲೀಲೆ ಬೇರೆಯಲ್ಲ. ಅವನ ಕಣ್ಮೋಟ ಕಂಡರೆ, ತಂದೆಯ ಕಣ್ಮೋಟ ಕೆಡುವುದು. ಅವನ ಮೋರೆಯನ್ನು ಒರೆಯಾಗಿ ತಿರುಗಿಸಿ ಅವನು ನಿಂತರಾಗದೆ, ಗೆಸ್ಲರ್?

ಗೆಸ್ಲರನು ನಗುವನು, ಪಿಶಾಚದಂತೆ ನಗುವನು. "ಬಾಣ ಬಿಡು, ಇಲ್ಲವೆ ಜೀವ ಕೊಡು" ಎಂದಿಷ್ಟೆ ಅವನ ಮಾತು.

—"ಹಾಗಿದ್ದರೆ, ನಾನೇ ಸಾಯುವೆನು! ಅಪ್ಪಕ್ಕೆ ಮೊದಲೇ, ಆ ಹುಡುಗನ ಮೋರೆ ತಿರುಗಿಸುವ ಬದಲು, ಅವನ ಕತ್ತನ್ನೇ ತಿರುಗಿಸಿ ನೆತ್ತರು ಹಿಂಡುವುದನ್ನು ನೋಡಬೇಕಾದೀತು; ಜೋಕೆ!" ಎಂದನಾ ಗೆಸ್ಲರನು!

ಮುಂದೇನು? ಬಾಣವು ಓಡುವಷ್ಟು ಹಾದಿಯನ್ನು ಜನರ ಹಿಂಡು ಬಿಟ್ಟುಕೊಟ್ಟಿತು. ಜನಸಾಗರವು ಇಬ್ಭಾಗವಾಯಿತು. ಮಗುವಿಗೆ ಮೋಕ್ಷವೊ ವಿಮೋಚನೆಯೊ? ಅದೇನೋ ಮೋರೆಯನ್ನು ಗಿಡಕ್ಕೆ ತಿರಿಗಿಸಿ ನಿಂತಿದೆ. ಕಲ್ಲು ಗೊಂಬೆಯೋ? ಆದರೆ ಅದರ ತಲೆಯ ಮೇಲಿಟ್ಟ ಹಣ್ಣು, ಹುಣ್ಣಿಗೂ ಕರಿನ ನೋವು ಕೊಡುತ್ತಿದೆ. ಎಲ್ಲವೂ ಮೌನ. ಉಸಿರಿಲ್ಲ, ಗಾಳಿಗೂ ಉಸಿರಿಲ್ಲ! ಗುಲ್ಲಿನ ಸಂಚೆ ಎಂಬುದು, ಹುಲ್ಲುರಿದ ಮಸಣದಂತಿದೆ. ಟೆಲ್ಲನೇನು ಮಾಡಿದನು? ಎರಡು ಬಾಣಗಳನ್ನೆತ್ತಿಕೊಂಡನು, ಒಂದನ್ನು ಸೊಂಟದ ಪಟ್ಟಿಯಲ್ಲಿ ಸಿಕ್ಕಿಸಿಟ್ಟನು. ಮತ್ತೊಂದನ್ನು ಬಲಗೈಯಲ್ಲಿ ಹಿಡಿದು, ತಲೆ ಬಾಗಿ, ಸುಮ್ಮನೆ ನಿಂತನು. ಅದೇನು ಪ್ರಾರ್ಥನೆ ಮಾಡುತ್ತಿರುವನೇ? ಸಾಯಲಹುದಾದ ಮಗನಿಗಾಗಿ ಮೊದಲೇ ಕಣ್ಣೀರು ಮಿಡಿವನೇ? ಅಥವಾ ಸಂದೇಹಗೊಂಡಿರುವನೇ? ಜನರಿಗೊಂದೂ ತಿಳಿಯದು. ಗೆಸ್ಲರನೂ ಈಗ ಮುಗ್ಧನಾಗಿರುವನು. ಅಲ್ಲೇನು ಸಿಡಿಲು ಬಡಿವುದಕ್ಕಿದೆಯೆ? ಅಥವಾ ಭೂಕಂಪವಾಗುವುದಂತೆಯೆ? ಟೆಲ್ಲನು ತಲೆಯೆತ್ತಿದನು ಆಗ ಅವನ ಕಣ್ಣುಗಳು ತಾರೆಗಳಂತೆ ಹೊಳೆಯುತಿದ್ದುವು, ತೋಳುಗಳು ವಜ್ರದಂಡಗಳಂತಾದುವು, ಬಿಡು ಕೆಚ್ಚಿ, ಬಿಲ್ಲಿಗೆ ಬಾಣ ಹೂಡಿದನು. ಎಡ ಬಲವೆಂದಿಲ್ಲ, ಮುಷ್ಟಿಗಳೆರಡೂ ವಜ್ರಮುಷ್ಟಿಗಳೇ ಸರಿ. ಗುರಿ ಹಿಡಿದನು, ಹೊಡೆದನು—ಠೇಂಕಾರ!

ಬಾಣವು ಥರ್ರನೆ ಹಾರಿದುದನ್ನು ಕಂಡವರಿಲ್ಲ, ಅದು ಹಣ್ಣಿನೊಳಿದೆ ಹಾದು, ಗಿಡಕ್ಕೆ ಮೊಳೆಹೊಡೆದಂತೆ ನಾಟಿ ಕಂಪಿಸುತಿದ್ದಿತು ಹಕ್ಕೆರಡು ಹೋಳಾಗಿ, ಕೆಳಕ್ಕುರುಳಿತು. ಆಗ ಅದೇನು? ಗೋಳಾಟಕ್ಕೆಂದು ಬಾಯ್ತೆರೆಯಲಿದ್ದ ಜನ ಸ್ತೋಮವು ಜಯಘೋಷವನ್ನೆ ಮಾಡಿತು ಗೆಸ್ಲರನಲ್ಲಿ ಇಲ್ಲಂದಿದ್ದರೆ, ಟೆಲ್ಲನ ವಿಜಯಯಾತ್ರೆಯಾಗುತಿತ್ತು.

"ಒಳ್ಳೇ ನೆಟ್ಟಗೆ ಗುರಿ ಹೊಡೆದೆ, ನಿಜ. ಅದೇಕೆ, ಸೊಂಟದಪಟ್ಟಿಯಲ್ಲಿಟ್ಟ ಆ ಬಾಣ?" ಎಂದೇ ಗೆಸ್ಲರನು ಬಾಯ್ತೆರೆದನು.

ಟೆಲ್ಲನಿಗೆ ಆಗ ತಾನೆ ಆ ಬಾಣದ ನೆನ "ಮೊದಲನೆ ಬಾಣವು ಮಗುವಿಗೆ ತಗಲಿದ್ದರೆ, ಇದು ನಿನ್ನೆದೆಯಲ್ಲಿ ಬಿಗಿಯುತಿತ್ತು" ಎಂದನವನು.

"ಓಹೋ, ಹಾಗೆ! ನನಗೆ ಇನ್ನೂ ಪ್ರಾಣಾಪಾಯ ತಪ್ಪಿಲ್ಲವೆ? ಇರಲಿ, ಮಾತಿತ್ತಂತೆ, ನಿನ್ನ ಪ್ರಾಣವನ್ನು ಉಳಿಸುವೆನು. ಆದರೆ, ಸಾಯುವ ಬದಲಾಗಿ ಬಂದೀಖಾನೆಯಲ್ಲಿ ಬೇಯುತ್ತಿದ್ದು, ಮರಣವನ್ನು ಕಾಯುತ್ತಿರು,—ನಾಯಿ!" ಎಂದು ಗೆಸ್ಲರಾಸುರನೆಂದನು.

ಹತ್ತೆಂಟು ಸಿಪಾಯಿಗಳು ಬೇಟನಾಯಿಗಳಂತೆ ಟೆಲ್ಲನನ್ನು ಮುತ್ತಿ, ಹಿಡಿದೆತ್ತಿ ಹೊಳೆಯ ಕಡೆಗೆ ಕೊಂಡೊಯ್ದರು. ಜನರಲ್ಲಿ ಕೆಲವರು ಅತ್ತುಕೊಂಡರು, ಬಹಳ ಮಂದಿ ಕೈಯೆತ್ತಿದರು. ಆದರೇನು, ಬರಿಗೈಯಿಂದೇನು? ಸಿಪಾಯರೂ ಗೆಸ್ಲರನೂ ಟೆಲ್ಲನೂ ದೋಣಿ ಹತ್ತಿ ಆಚೆಯ ದಡದ ಮೇಲಣ ಕೋಟೆಯ ಕಡೆಗೆ ಪ್ರಯಾಣ ಮಾಡುವರು. ಜನರೆ ನಿಟ್ಟುಸಿರೋ ಎಂಬಂತೆ ಬಿರುಸಾಗಿ ಗಾಳಿ ಬೀಸಿತು ಜನರಿರುವಲ್ಲಿ ಜನಾರ್ದನನಿರುವನೆನ್ನವೈ—ಗಾಳಿ ಬೀಸಿದುದೇ, ದೋಣಿಯಲ್ಲಿ ಗೋಳಾಟ. ದೋಣಿಯು ಉರುಳಹತ್ತಿತು. ಇನ್ನು ಮುಳುಗದೆ ಉಳಿಯುವವರಾರು? ಟೆಲ್ಲನೊಬ್ಬನೇ ಎಂತಹ ತುಫಾನಿನಲ್ಲೂ ದೋಣಿ ನಡೆಯಿಸ ಬಲ್ಲವನು. ನಿರಾಶರು ಇವನಿಂದಲೇ ವಿನಾಶ ಹೊಂದದಂತಾಗುವೆದು. ಗೆಸ್ಲರನು ಅವನನ್ನೆ ನೆರೆಯ ಕೈಕಟ್ಟು ಬಿಡಿಸಿ, ಚುಕ್ಕಾಣಿ ಹಿಡಿಯ ಹೇಳಿದನು. ದೋಣಿಯ ನಿತ್ತಡ ಕುತ್ತವು ಮಾಯವಾಯಿತು. ದಡದ ಕಡೆಗೆ ದೋಣಿ ಹರಿಯುವಾಗ, ಟೆಲ್ಲನ ತಲೆಯು ತಿರುಗಲಾರಂಭಿಸಿತು. ತನ್ನ ಮನೆ; ಹುಟ್ಟುನಾಡು, ಮೃಗ

ಆಗಸೀ ಪುಟವನ್ನು ನೋಡುವುದು

ದಿಲ್ಲಿ ದರ್ಶನ.

ಪ್ರವಾಸಿಯ ಅನುಭವಗಳು.

ಲ್ಲಿ! ನೀನು ಮಾನವರ ರಾಷ್ಟ್ರೀತಿಹಾಸದ ಸುಖಾ ಸ್ಮಶಾನವಾಗಿರುವೆ; ಕಾತೀಯ ಗೌರವಗರಿಮೆಯ ವೈಭಾಮಯ ಸ್ಮೃತಿ ಯಾಗಿರುವೆ; ಅತೀತದ ಉತ್ಥಾನ-ಪತನ ಗಳ ಜ್ವಾಲಾಮುಖಿ ಇತಿಹಾಸ ಗ್ರಂಥ ವಾಗಿರುವೆ; ನೀನು ಅಮರ ಆಶೆಯ ಆಕ್ಷಯ ತೀರ್ಥ ಮೂರ್ತಿ. ನೆಲಲ್ಯಾಂತಕಾರಿಯಾದ ಧ್ವಂಸದ ಹೊಲೆಯಲ್ಲಿ ಯಾವ್ಯಾವ ಹೊಸ -ಹೊಸ ಸೃಷ್ಟಿಯಾಗುತ್ತಿದೆ ಎಂದು ನೋಡುತ್ತಿರುವೆ. ಅಂತೆಯೆ, ಯುಗಾಂತಕಾರಿ ಧ್ವಂಸಗಳ ಮಹಾಸ್ಥಾನವನವನ್ನು ನೋಡಿರುವೆ, ನೋಡುತ್ತಿರುವೆ. ಏತ ಹಾಸಿಕನ ಗವೇಷಣೆಯ ಬ್ರಹ್ಮಾಂಡನೇ ನೀನು, ಕವಿಯ ಕಾವ್ಯವೂ ನೀನೆ ನೀನು ಹಿಂದೂಮುಸಲ್ಮಾನರ ಶುಹಾ ಮಿಲನದ ಸಂಧಿಸ್ಥಳ, ಹಾಗೆಯೆ, ಅವಶೊಳಗಣ ಚಿರವಿಚ್ಛೇದದ ಮಹಾ ಸ್ಮಶಾನದಲ್ಲಿ ಉಳಿದ ಚಿತೆಯ ದಗ್ಧಕಾವ್ಯ ವಾಗಿರುವೆ ! ಯಾರು ಯಾರ ವಿಜಯರಥವು ನಿನ್ನಿದೆಯ ಮೇಲಿಂದ ಹಾದುಹೋಗಿದೆ! ಮೊಗಲ, ಪೆರಾನ, ತಾತಾರ, ಮಹಾರಾಷ್ಟ್ರ ರಾಜಪುತ, ಜಾಟ, ಎಲ್ಲರೂ ನಿನ್ನನ್ನು ಮೆಟ್ಟಿ ನಡೆದಿರುವರು ಎಷ್ಟೋ ಡಂಭ, ಅಹಂಕಾರ, ಸತೀತ್ವದ ತೇಜಸ್ಸು, ವೀರತ್ವದ ಆಸ್ಫಾಲನೆ, ನಿನ್ನೀ ಧ್ವಂಸಸ್ತೂಪದಲ್ಲಿ ಅಂತರ್ಹಿತವಾಗಿವೆ ಎಷ್ಟೋ ವಿರಹಿಣಿಗಳ ದೀರ್ಘನಿಶ್ವಾಸ ಗಳೂ, ನಿರಾಶ್ರಯೇಮಿಳರ ಹಾಹಾಕಾರಗಳೂ, ಸೈನಿಕರ ಆರ್ತನಾದಗಳೂ ನಿನ್ನೀ ಬಂಡೆಗಲ್ಲಿನ ಸನಾಧಿಸ್ತೂಪದೊಳಗೆ ಡಾಗ್ರತಸ್ಸಪ್ತದಂತೆ ಇನ್ನೂ ಇವೆ. ಕೆಲವರು ನಿನ್ನನ್ನು ಡೆಹಲಿ ಎಂದೂ, ಹಸ್ತಿನಾವುರವೆಂದೂ, ಇಂದ್ರಪ್ರಸ್ಥವೆಂದೂ ಕರೆವರಾದರೂ, ನೀನು ನಾಮಹೀನ, ಭಾಷಾಹೀನ, ಅಂತ ಹೀನ, ಛಂದಹೀನವಾಗಿಯೇ ಇರುವೆ ಯಮುನೆಯ ಬಳಿಯಲ್ಲಿ ನಿಂದು ನಿನ್ನನ್ನು ಕಂಡೆನು, ಆಗ ಸೂರ್ಯನು ಅಸ್ತಾಚಲವನ್ನು ಸಾರುತ್ತಿದ್ದನು. ಹೀಗೆಯೆ ಹಿಂದೂ ಮುಸಲ್ಮಾನರ ರಾಜವಂಶಗಳೂ ಅಸ್ತಾಚಲವನ್ನು ಇಲ್ಲಿ ಸೇರಿದುವಲ್ಲವೆ? ಅದೇ ಸೂರ್ಯನ ಕಂಪ್ಯು ಛಾಯೆಯು ಕಹಾಜಹಾನನ ಗಗನಚುಂಬಿತ ದುರ್ಗದ ಮೇಲೆ ಹರಿದಾಗ ಆಗ ಅವನ ಅಂತಃಪುರದಿಂದ ವೀಣೆಯ ಝೇಂಕಾರವು ಎದ್ದಂತೆ ನನಗೆ ಕೇಳಿಸಿತು. ಅಯ್ಯೋ, ಆ ನೀಲಸಲಿಲೆಯಾದ ಯಮುನೆಯೆಲ್ಲಿ, ದಿಲ್ಲೀಶ್ವರೋವಾ ಜಗದೀಶ್ವರೋವಾ ಎಂಬ ಶಹಾಜಹಾನನೆಲ್ಲಿ? ನಿನ್ನನ್ನು ಕಣ್ಣಲ್ಲಿ ಕಂಡರೆ ಸಾಲದು ನಿನ್ನನ್ನು ಕಲ್ಪನೆಯಿಂದ ಭಾವಿಸಿ ಅನುಭವಿಸಬೇಕು. ಬರಿಯ ಐತಿಹಾಸಿಕರ ಗವೇಷಣೆಯಿಂದ ನಿನ್ನನ್ನು ಕಂಡುಕೊಳ್ಳ ಬರುವುದಿಲ್ಲ, ನಿನ್ನನ್ನು ಮನೋವಾಕ್ಕಾಯಗಳಿಂದಲೂ, ಭಾವ ಭಾವೆ ವಾಕ್ಯ ಕಾವ್ಯ ಸಾಹಿತ್ಯ ಅಲಂಕಾರ ಇತಿಹಾಸ ವಿಜ್ಞಾನ ದರ್ಶನ ಸತ್ಯ ನಿತ್ಯೆ ಧರ್ಮ ಕರ್ಮ ಮೊದಲಾದೆಲ್ಲವುಗಳ ಮೂಲಕವೂ ತಿಳಿದುಕೊಂಡರೇ ನಿನ್ನನ್ನು ಕಂಡುಕೊಳ್ಳ ಬಹುದು ಜೋಅನ್ ಒಫ್ ಆರ್ಕಳಂತೆ, ಕೆಥರಿನ್ ಡಿ ಮೆಡಿಸಿಯಂತೆ, ಅಥವಾ ರಿಜಿಯಾ ಸಾಮ್ರಾಜ್ಞಿಯಂತೆ ತನ್ನ ಗೌರವದಿಂದಲೇ ಗೌರವಿತೆಯಾದವಳು ನೀನು, ಅಥವಾ ನೆಪೊಲಿಯನ್, ಕೈಸರ್, ಬಿಸ್ಮಾರ್ಕ್, ಕಾರ್ಮಾಲ್, ಜಾಗಲುಲ್ ರಂತೆ ನೀನು ಅತಿಮಾನವ ವರ್ಗಕ್ಕೆ ಸೇರಿದೆ. ನೀನು ಅನಾದಿ, ಅನಂತವಾಗಿರುವೆ ಚಿರಧ್ವಂಸವೂ ಚಿರಸೃಷ್ಟಿಯೂ ನೀನೆ

ನಾನು ಕುತುಬ ಮಿನಾರನನ್ನು ಹತ್ತಿದೆನು ಮೇಲು ಪ್ರಾಕಾರೆಯಲ್ಲಿ ನಿಂತು ನಿನ್ನನ್ನು ಕಂಡೆನು ನಾಲ್ದಿಕ್ಕುಗಳಲ್ಲೂ ಧ್ವಂಸವಾಗಿರುವೆ ಸ್ತೂಪಗಳೇ ಕಣ್ಣಿಗೆ ಗೋಚರವಾದುವು. ಭಗ್ನದುರ್ಗಪ್ರಾಕಾರಗಳು ಸೃತಿಯ ರೀಪೆಗಳಂತೆ ತೋರಿದುವು ದೂರದಲ್ಲಿ ಒಣಗುತ್ತಿರಿದ್ದ ಯಮುನೆಯ ರೂಪು, ಮಧ್ಯಾಹ್ನ ಸೂರ್ಯನ ಛಗೆಯು ತಪ್ತಮರುವಿನ ಎದೆಯ ಮೇಲೆ ಸ್ನೇಹ ಕರುಣೆಗಳ ಪ್ರವಾಹದಂತೆ ಹೊಳ್ಳಯುತ್ತಿದ್ದಿತು. ಮೇಘಗಳಿಲ್ಲದೆ ನೀಲವಾದ ಆಕಾಶವು ಮೇಲಿರಲು, ದೂರ ವಿಶಾಲಕ್ಕೆ ನೀನು ನೀಡಿ ಬಿದ್ದಿರುವೆ ಪುತ್ರ ನಿಲ್ಲದ ತಾಯ್ತನತೆ, ಪತಿವಿರಹಿಣಿಯಾದ ಹಿಂದೂ ಸತಿಯಂತೆ ನೀನೇಕೆ ನಿಟ್ಟುಸಿರು ಸುಯ್ಯುತ್ತಿರುವೆ? ಯಾವ ಕವಿಯೂ ನಿನ್ನ ರೂಪನ್ನು ವರ್ಣಿಸಲಾರನು. ನಿನ್ನ ಪ್ರತಿಯೊಂದು ಕಲ್ಲು ಹೆಂಟೆಯೂ ಮಾತಾಡುತ್ತಿದೆ. ದುರ್ಗ ಪ್ರಾಸಾದ ಗಳಲ್ಲಿ ಅಶ್ವಾರೋಹಿಗಳ ಸವಾರಿಯ ಸದ್ದು ಕೇಳಿಸುತ್ತಿದೆ ತೋರಣಗಳೆಲ್ಲಿ, 'ಛೇರಿಗಳು ಮಂದವಾಗಿವೆ' ಎಂದುವ ನಿರ್ಜನ ಕೋಣೆಗಳಲ್ಲೂ ಕಾಲುಂಗುರಗಳ ಸಪ್ಪಳು; ರಣಛೇರಿಯ ದೂರಧ್ವನಿ; ನಾದಿರಶಹ, ಅಹಮ್ಮದಶಹ, ಅಬ್ದಾಲಿ, ಅಬ್ದಾವುದ್ದೀನ ಮೊದಲಾದವರು, ಅಲ್ಲಲ್ಲಿ ಬಾರ ಸಭೆಯಲ್ಲಿ ಅಬಿಷೇ, ಒಮ್ರಾ, ಜಯಸಿಂಹ, ಯಶೋವಂತಸಿಂಹ, ಮೊದಲಾದೆಷ್ಟೊ ಮಹಾಪುರುಷರ ಸ್ಮೃತಿಚಿತ್ರವು ಚಲಚ್ಚಿತ್ರದಂತೆ ನನ್ನ ಕಣ್ಣ ಮುಂದೆ ಹೊಳೆಯಿತು! ಅಂತಃಪುರಗಳಲ್ಲಿ ಪ್ರವೇಶಿಸುವಾಗ ಎದೆ ಕಂಗೆಟ್ಟಿತು ಮಾಸ್ ರೋಜ್, ನವರೋಜುಗಳಲ್ಲಿ ಈ ಸ್ನಾನಾಗಾರವು ಹೇಗಿದ್ದಿತು? ಈಗ ಇಲ್ಲಿಯೆ ನೂರಾರು ದರ್ಶಕರ ಹಿಂಡು ನಿಂತಿದೆ. ಮೋತಿ ಮಹಾಲನ್ನು ಈಗ ಎಲ್ಲರ ಕಾಲ ಧೂಳು ಮುಚ್ಚುವಂತೆ ತೋರಿತು ಮಯೂರಸಿಂಹಾಸನವಿದ್ದ ಆ ಸ್ಥಳದಲ್ಲಿ, ದೂರದಿಂದ ಬಂದ ಪ್ರೇಕ್ಷಕರ ಕೊಡೆ, ರುಮಾಲುಗಳನ್ನು ಇಡುವಂತಾಗಿದೆ ಒಂದು ಬಾಗಿಲನ್ನು ಮುಚ್ಚುಟ್ಟಿದ್ದು ನಿತಕ್ಕಂದು ಅಲ್ಲಿದ್ದ ಸಿಪಾಯಿಯನ್ನು ಕೇಳಿದೆನು,-"The Delhi gate is closed for ever" (ದಿಲ್ಲಿ ಬಾಗಿಲು ಇನ್ನು ಮುಚ್ಚಿಯೆ ಇರುವುದು) ಎಂದು ಉತ್ತರ ಬಂದಿತು

ದಿಲ್ಲಿ! ನಿನ್ನನ್ನು ಕಂಡು ಕಣ್ಣು ಧನ್ಯವಾಯಿತು ನೀನು ಒಂದು ಬಗೆಯ ಮಹಾ ಶಕ್ತಿ ನಿನ್ನ ಒಂದೊಂದು ಕಲ್ಲು ಒಂದೊಂದು ಪಾಠ ಕಲಿಸುತ್ತಿದೆ. ನೀನು ಲಕ್ಷ್ಮಿಯಂತೆ ಚಂಚಲವಾಗಿದ್ದು ತನಗೆ ಇಚ್ಛೆಯಿರುವಂತೆ ವರ್ತಿಸುವೆ. ನಿನಗೆ ನಾತಿಲ್ಲ, ನಸ್ಸಂತಹ ಪ್ರವಾಸಿಯು, ಮಹಾ ಮಾನವರ ಸಾಗರ ತೀರ್ಥವೆಂದು ರಾಕೂರರು ಹಾಡಿದಂತೆ, ನಿನ್ನ ತೀರ್ಥದಲ್ಲಿ ಮಿಂದೇ ಧನ್ಯನು'

ಇತ್ತಲಿದೆ ಹಸ್ತಿನಾಪುರ ಇಂದ್ರಪ್ರಸ್ಥದ ವಿಶಾಲತೆಯನ್ನು ಕಂಡೆನು ಸುತ್ತಲೂ ಭಗ್ನಮಂದಿರಗಳು ಅತೀತವು ಇಲ್ಲಿ ಮಾತಾಡುತ್ತಲಿದೆ, ಹೊರಗಣ ಜಗತ್ತೇ ಮರೆಯುವಂತಾಯಿತು ಆಹಾರ, ನಿದ್ರೆ, ಶಾಂತಿ, ಅಶಾಂತಿ, ಸುಖದುಃಖಗಳೊಂದೂ ನೆನಪಿಗೆ ಬಾರದೆ, ನಿನ್ನ ವೈಚಿತ್ರ್ಯವೇ ಮನಸ್ಸನ್ನು ಮುಗ್ಧಗೊಳಿಸುವುದಲ್ಲ! ಇದೇ ಆ ಕೌರವ ಪಾಂಡವರ ಹಸ್ತಿನಾವುರವೆ? ಭಾರತ ಸಮ್ರಾಟನಾದ ದುರ್ಯೋಧನನು ಜಲವೆಂದು ನಂಬಿ ಸ್ಫಟಿಕಕ್ಕೆ ಕಾಲೆಡವಿ ಅವಹಾಸ್ಯಕ್ಕೆ ಈಡಾದ ಆ ಸ್ಥಳವೆಲ್ಲಿ? ಭಗವಾನ್ ಶ್ರೀ ಕೃಷ್ಣನು ಭಕ್ತ ವಿದುರನ ವರ್ಣಕುಟೀರದಲ್ಲಿ ಹಾಲು ಕುಡಿದು ಭಕ್ತನ ಮರ್ಯಾದೆಯನ್ನು ಹೆಚ್ಚಿಸಿದುದೆಲ್ಲಿ? ದ್ರೌಪದಿಯ ಲಜ್ಜೆಯನ್ನು ಆತನು ನಿವಾರಿಸಿದುದೆಲ್ಲಿ? ರಾಜೈಶ್ವರ್ಯ ಮದೋನ್ಮತ್ತನಾದ ದುರ್ಯೋಧನನ ಸೃಷ್ಟಿಗೆ ಆಧಾರವಾದ ಆ ರಾಜಸಭೆಯೆಲ್ಲಿ? ಇದನ್ನೆಣಿಸಿದರೆ ಮನಸ್ಸು ನೋಯವಾಗುವುದು ಭೀಷ್ಮ, ದ್ರೋಣ, ಕರ್ಣ ಭೀಮಾರ್ಜುನರು ಎಲ್ಲಿ? ಬಾಲವೀರನನ್ನು ಮರ್ದಿಸಿದ ಆ ಮಹಾರಥಿಗಳೆಲ್ಲಿ? ಎಣಿಸಿದರೆ ಕಣ್ಣೀರು ಸುರಿಯುವುದು ಶಕುನಿಯ ಅಧರ್ಮ ಆಟದ ಪ್ರದರ್ಶನವಾದುದೆಲ್ಲಿ? ಧರ್ಮ ಅಧರ್ಮಗಳ ಯುದ್ಧವು ನಡೆದಾಗೆ, ಲೀಲಾಮಯನಾದ ಭಗವಂತನು ಆ ನಿದರ್ಶನವನ್ನು ಬಿಟ್ಟು ನಡೆದನೆ? ಎಂದು ಪ್ರವಾಸಿಯು ನಿಟ್ಟುಸಿರು ಸುಯ್ಯುವನು

ಮುಂದೆ, ಹ್ಯೂಮಾಯುನನ ಸಮಾಧಿ ಮಂದಿರದ ಕಡೆಗೆ ನಡೆದೆನು. ಇಲ್ಲಿಯೆ ಕೊನೆಯ ಮೊಗಲ ಬಾದಶಹ ಶಾ ಆಲಮನು ಕಾರಾವಾಸಿಯಾಗಿದ್ದನು ಇಲ್ಲೇ ಮೊಗಲರ ಸೂರ್ಯನು ಅಸ್ತಂಗತನಾದನು ಮೊಗಲ! ನಿನ್ನ ತಾಜ್, ನಿನ್ನ ಮಯೂರಾಸನ, ಮೋತಿಮಹಾಲ್, ಖೀಸ ಮಹಾಲ್, ಮಿನಾರ್ ಇವುಗಳ ಮೇಲೆ ಕಂಪಾದ ಅರ್ಧ ಚಂದ್ರನ ಧ್ವಜ, ಇವೆಲ್ಲವೂ ಇಂದು ಕಣ್ಣ ಮುಂದೆ ನಿಂತಿವೆ. ಅಲ್ಲೇ ತಾನಸೇನ, ತೋಡರಮಲ್ಲ, ಧೂರ್ಜಸಿಂಹ, ದಿಲೀರ ಖಾನ, ಸಾಯಿಸ್ತಾಖಾನ್, ಅಕಬರ, ಔರಂಗಜೇಬ, ಶಿವಾಜಿ, ಫೈಜಿ, ಅಬ್ದುಲ್ ಫಾಜಲ್, ರಾಜಸ್ಥಾನ, ಹಿಂದು ಸ್ಥಾನಗಳೆಲ್ಲವೂ ಇಲ್ಲಿ ಕಣ್ಣ ಮುಂದೆ ಹೊಳೆಯುತ್ತಿವೆ. ಇರಲಿ, ಹಿಂದೂ ಮುಸಲ್ಮಾನರೆಲ್ಲರು ಈ ದಿಲ್ಲೀ ಸ್ಮೃತಿಯನ್ನು ನುರಿವುದುಂಟೆ?

ಹಿಂದೂ, ಮುಸಲ್ಮಾನ! ದಿಲ್ಲಿಯು ಕಲಿಸುವುದೇನು? ಅದನ್ನು ಇನ್ನೂ ಕಲಿತುಕೊಂಡಿಲ್ಲವಾದರೆ, ಮನುಷ್ಯನಿಗೆ ಮನುಷ್ಯತ್ವವೆಲ್ಲಿ? ಇದ್ದೂದು ಇಲ್ಲವೆಂದಾಗಿದೆ ದಿಲ್ಲಿಯೆಂದರೆ ಹಿಂದೂ 'ದಿಲ್ಲೀಕಾ ಲಡ್ಡೂ' ಎಂದೇ ನೆನಪೆ? ಬೇರೇನೂ ಇಲ್ಲವೆ ಅಮರವಾದುದು, ಬೋಧಕವಾದುದು?

+—+—+

— ಐದನೇ ಪುಟದಿಂದ ಮುಂದರಿಸಿದ್ಯ —

ಬೇಟಿ, ಕುಟುಂಬ, ಸ್ವಾತಂತ್ರ್ಯ ಇವುಗಳು ಒಂದೊಂದಾಗಿ ಚಿತ್ರಪಟಗಳಂತೆ ಅವನ ಮನಃ ಚಕ್ಷುವಿಗೆ ಗೋಚರಿಸಿದುವು ತನಗಾಗಿ ಮಾತ್ರವೇ ಮುಕ್ತಿಯಲ್ಲ, ತನ್ನ ದೇಶಕ್ಕಾಗಿ,-ಜನ್ಮ ಭೂಮಿಗಾಗಿ ಆದರೆ, ಹೇಗೆ ಸಾಧ್ಯವಾಗುವುದು?

ಹೊಳೆಯ ನಡುವೆ ದೊಡ್ಡದೊಂದು ಬಂಡೆ ದೋಣಿಯು ಬಂಡೆಯ ಕಡೆಗೆ ಸಾರುತ್ತಲಿ, ಟೆಲ್ಲನು ಬಂಡೆಯ ನೆತ್ತಿಗೇ ಹೇಗೆ ಹಾರಿದನೆಂದು ಯಾರೂ ತಿಳಿಯಲಿಲ್ಲ ದೋಣಿಯ ಭಾಗ್ಯದೇವತೆಯೆಂಬಂತೆ ಟೆಲ್ಲನು ದೋಣಿಯ ಚುಕ್ಕಾಣಿಯ ಕೈಬಿಟ್ಟನು ದೋಣಿಯಲ್ಲಿ ನೂರು ದಿವ್ಯಗಳು ಸುಳಿದಂತಾಯಿತು ಅವರವರ ಉಳಿವಿನ ಉಪಾಯವೆ ಅವರವರಿಗೆ ತೋಚದಾಯಿತು ಅತ್ತ, ಬಂಡೆಗೆ ಹಾರಿದ ಟೆಲ್ಲನು, ಬೆಟ್ಟದ ಆಡಿನಮರಿಯಂತೆ, ಕೋಡಿನಿಂದ ಕೋಡಿಗೆ ಹಾರಿ, ಹತ್ತಿ ಎತ್ತಲೋ ನಡೆದು ಮಾಯವಾದನು! ಬೆಟ್ಟಗಳ ಸಂದಿನಲ್ಲಿ ಪೊದೆಗಳ ಹಿಂಡಿನಲ್ಲಿ ಅವಿತುಕೊಂಡನು ಹೆಗಲಲ್ಲಿ ಬಿಲ್ಲು ಇದೆ ಸೊಂಟದ ಪಟ್ಟಿಯಲ್ಲಿ ಸಿಕ್ಕಿಸಿದ ಬಾಣ ವಂತೂ ಇದೆ ಕತ್ತಲಾದರೆ ಬೆದರಲೇಕೆ?"

ಅದಾರ ಕಾಲ ಸದ್ಯ? 'ಊರಿಗೆ ಒಬ್ಬೆ ಸೇರಿದರೆ, ಸಾಯುನ ಮೊದಲು ಅವನನ್ನೇ ಎಂದೇನು, ಅವನ ಹೆಂಡತಿ ವ ಕೈಳಿನ್ನೂ ಒಳದೇ ಸುಹೂರ್ತದಲ್ಲಿ ಕೊಲ್ಲಿಸದಿರುವೆನೆ?' ಎಂದು ಯಾರೋ ಹೇಳುತಿದ್ದಾರೆ

ಪೊದೆಗಳೆಡೆಯಿಂದ ಒಬ್ಬನು ಎದ್ದನು ಎಡೆಗೈಯೆತ್ತಿದನು ಆ ನಸುಕಿನಲ್ಲಿ ಒಂದು ರೇಂಕಾರ ಕೇಳಿಸಿತು 'ಊರಿಗೆ ಒಬ್ಬೆ ಸೇರಿದರೆ!' ಎಂಬ ಪ್ರತಿಧ್ವನಿಯೂ ಕೇಳಿಸಿತು ಗೆಸ್ಲರನಿಗೆಂದಿಟ್ಟ ಬಾಣವು ಅವನ ಎದೆಯಲ್ಲೇ ಭದ್ರವಾಗಿ ನಾಟಿತು, ಗೆಸ್ಲರನ ಟೊಪ್ಪಿಗೆಗೆ ತಲೆ ಬಾಗದ ಟೆಲ್ಲನ ಕಾಲುಗಳ ಬಳಿಯಲ್ಲಿ ಗೆಸ್ಲರನು ಬಾಗಿ ಬಿದ್ದನು'

ಜೀವಿತನಾದ ಗೆಸ್ಲರನ ಬಳಿಯಲ್ಲಿ ನಿಂತ ಅವನ ದೊರರು ಮೃತನಾದ ಅವನನ್ನು ಅಲ್ಲೇ ಬಿಟ್ಟು, ತಮ್ಮ ಜೀವವನ್ನು ಉಳಿಸಿಕೊಂಡರೆ ಸಾಕೆಂದು ಅತ್ತಿತ್ತ ಓಡಿದರು

+ + + +

ಸ್ವಿಝುರ್ಲೆಂಡಿನ ಜನರೊಳಗೆ ಟೆಲ್ಲನು ಹೊಸ ಪ್ರಾಣವನ್ನು ಊದಿದನು ಅವರು ಉಬ್ಬಿ ಎದ್ದರು ಸ್ವಾತಂತ್ರ್ಯ ಪ್ರಾಣರಾದ ಜನಸ್ತೋಮದ ನೆರೆಯಲ್ಲಿ ಟಿಸ್ಕ್ರಿಯದ (ಗೆಸ್ಲರ ನಡಲ್ಲ) ಟೊಪ್ಪಿಗೆಯೇ ತೇಲಿ ಹೋಯಿತು.

ಸ್ವಿಝುರ್ಲೆಂಡಿಗೆ ಟೆಲ್ಲನೇ ಅರಸನಾಗುತಿದ್ದನು ಅದೂ ಅವನ ಸ್ವಾತಂತ್ರ್ಯಪ್ರಿಯತೆಗೆ ಒಪ್ಪದು. ಬೆಟ್ಟದ ಕಿಬ್ಬದಿಯಲ್ಲಿನ ಅವನ ಗುಡಿಯೇ ಅವನ ರಾಜಗೃಹ, ವನರಾಜನಾಗಿದ್ದನು, ಇನ್ನು ಜನರಾಜನಾಗಲೊಪ್ಪಲಿಲ್ಲ. ಕೊನೆಯ ವರೆಗೂ ಅವನು ಅತ್ಯತಿಮನಾಗಿ ಬಾಳಿದನು ಇಂದಿನ ತನಕವೂ ಸ್ವಾತಂತ್ರ್ಯಪ್ರಿಯರಲ್ಲಿ, ತನಗೆ ಮಾತ್ರವಲ್ಲದೆ ತನ್ನ ಜನ್ಮಭೂಮಿಗೂ ಸ್ವಾತಂತ್ರ್ಯವನ್ನು ಸಾಧಿಸಿದವರಲ್ಲಿ ಅವನು ಅವನಂತೆಯೆ ಇರುವನು. ಟೆಲ್ಲನಂತಹನು ಟೆಲ್ಲನೇ,- ಮತ್ತೊಬ್ಬನಿಲ್ಲ!

ವೃದ್ಧ ಪಿತಾಮಹ ವೆಂಕಟಕೃಷ್ಣಯ್ಯನವರು

ಇವರ ಸಂಕ್ಷೇಪ ಜೀವನ ಚರಿತ್ರೆ.

ಬರೆದವರು:—ಸಾಮಮೂರ್ತಿಶ್ಮ

ಸಾವಿರದ ಎಂಟುನೂರು ಸಲ್ಲುತ್ತನಾಲ್ಕನೇ ಇಸವಿ ಆಗಸ್ಟ್ ತಿಂಗಳಲ್ಲಿ ಕೃಷ್ಣಾಷ್ಟಮಿ ದಿವಸ ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಹೆಗ್ಗಡದೇವನ ಕೋಟೆ ತಾಲೂಕು ಮಗ್ಗೆಯಲ್ಲಿ ಇವರು ಜನಿಸಿದರು. ಈ ಗ್ರಾಮವು ಕಪಿನೀ ನದಿಯ ತೀರ. ಇವರ ತಂದೆಯವರು ಕರ್ಷಕರಾಗಿದ್ದರು. ಆಗ ಜನರ ಪರಿಸ್ಥಿತಿಯು ತುಂಬಾ ತೋಚನೀಯವಾಗಿತ್ತು. ವೇದಶಾಸ್ತ್ರ ಪುರಾಣೇತಿಹಾಸಗಳಲ್ಲಿ ನಿರೂಪಿಸಲ್ಪಟ್ಟ ಧರ್ಮಗಳು ಜನರ ಆಚರಣೆಯಲ್ಲಿರಲಿಲ್ಲ. ಪುರಾಣಪುರುಷರ ನಡತೆಗಳು ಹೇಗೆ, ರಾಮಾಯಣ, ಮಹಾಭಾರತ, ಜ್ಞಾನವಾಸಿಷ್ಠ ಮೊದಲಾದ ಗ್ರಂಥಗಳಲ್ಲಿ ನಿರೂಪಿಸಲ್ಪಟ್ಟಿರುವುವೋ, ಅದನ್ನು ನೋಡಿ ಅಗಿನ ಪ್ರಭುಗಳ ಅಧಿಕಾರಿಗಳ, ಗುರುಗಳ, ಮತ್ತು ಜಗದ್ಗುರುಗಳ ಮನೋವಾಕ್ಕರ್ಮಗಳಿಗೆ ಹೋಲಿಸಿದರೆ ಪೂರ್ವದ ಮಹಾ ಜನಗಳು ದೇವತೆಗಳಾಗಿದ್ದರೆಂಬುದಾಗಿಯೂ, ಆ ಕಾಲದ ಜನರು ರಾಕ್ಷಸರಾಗಿದ್ದರೆಂಬುಹಾಗಿಯೂ ತೋರುತ್ತಿತ್ತು. ಈ ಮಹನೀಯರು ಜನಿಸಿದ್ದ ಕಾಲಸ್ಥಿತಿಯು ಈ ರೀತಿಯಲ್ಲಿತ್ತು. ಆದರೆ ಇವರಿ ತಂದೆತಾಯಿಗಳು ಬಹಳ ವರಿಶುದ್ಧಾತ್ಮರಾಗಿದ್ದರು. ಇವರ ತಂದೆಗೆಳು ಸಂಸ್ಕೃತದಲ್ಲಿಯೂ ತೆಲುಗು ಭಾಷೆಯಲ್ಲಿಯೂ ದೊಡ್ಡ ವಂದಿತರಾಗಿದ್ದರು. ಇವರ ಮಾತೃಶ್ರೀಯವರು ಮೈಸೂರು ಅರಮನೆಯ ಮಹಾ ವಿದ್ವಾಂಸರಲ್ಲಿ ಗಣ್ಯರಾಗಿದ್ದ ಒಬ್ಬ ವಂದಿತೋತ್ತಮರ ಪುತ್ರಿಯು. ಆಕೆಯು ಕೂಡ ಸಕಲ ವೇದಶಾಸ್ತ್ರ ಪುರಾಣೇತಿಹಾಸಗಳ ತತ್ವಗಳನ್ನು ಕರಿದುಕೊಂಡಿದ್ದಳು. ಇವರ ಮನೆಯ ಮುಂದುಗಡೆ ಒಂದು ಕೈ ತೋಟವನ್ನು ಮಾಡಿಕೊಂಡು ಇವರ ತಾಯಿಯು ತರಕಾರಿ ಫಲವುಷ್ಪಗಳು ಇವೇ ಮೊದಲಾದುವುಗಳನ್ನು ಬೆಳೆಸುತ್ತಾ, ದೀನರ ಸೇವೆ, ಸಜ್ಜನರ ಸೇವೆ, ಇವುಗಳಲ್ಲಿ ನಿರತಳಾಗಿದ್ದಳು. ವಿರಾಮ ಕಾಲಗಳಲ್ಲಿ ಮನೆಯವರೆಲ್ಲರೂ ತೋಟದಲ್ಲಿ ಕೆಲಸ ಮಾಡುತ್ತಿದ್ದರು ಇವರ ತಂದೆಯು ಜವಿಾನುಗಳಲ್ಲಿ ಭತ್ತ, ರಾಗಿ, ಮೊದಲಾದ ದವಸಗಳನ್ನು ಬೆಳೆಸಿ, ಮುರಳೆ ನೊದಲಾದ ಸಂತೆಗಳಲ್ಲಿ ಬಿಕರಿ ಮಾಡಿ ಕಂದಾಯ ಮೊದಲಾದುವುಗಳನ್ನು ಕೊಟ್ಟು ಕುಟುಂಬಭರಣವನ್ನು ಮಾಡುತಿದ್ದರಲ್ಲದೆ, ಅತಿಥಿ ಅಭ್ಯಾಗತರಿಗೂ ಕೂಡ ಅನ್ನೋದಕಗಳನ್ನು ಕೊಡುತ್ತಿದ್ದರು.

ಹೀಗೆಯೇ ಇವರಿಗೆ ೬ ವರ್ಷಗಳಾಗುವ ವರೆಗೂ ಕುಟುಂಬ ಭರಣಾದಾಯತು. ಆಗ ಇವರ ಜಿಕ್ಕಪ್ಪನವರು ಶಾಲ್ಕದಲ್ಲಿ ಬಹಳ ಪಾಯಿಲೆಯಾಗಿರುವರೆಂದು ವರ್ತಮಾನ ಬಂದಿತು. ಇವರ ತಂದೆಯು ಶಾಲ್ಕಕ್ಕೆ ಹೋದರು. ಅಲ್ಲಿ ಅವರ ತಮ್ಮಂದಿರು ಕಾಲಾಧೀನರಾದರು. ಅವರ ಉತ್ತರಕ್ರಿಯೆಗಳನ್ನು ತೀರಿಸಿಕೊಂಡು ವಾಪಾಸು ಬರುವಾಗ ಅವರು ಗೋಪಿ ಶೆಟ್ಟಿ ಪಾಳ್ಕದಲ್ಲಿ ಕಾಲಾಧೀನರಾದರು. ಆಗ ಇವರ ಸಂಸಾರದಲ್ಲಿ ದುರ್ದೆಶೆಯು ಬಂದಿತು. ಇವರ ತಾಯಿಯು, ಇಬ್ಬರು ಗಂಡುಮಕ್ಕಳೂ, ಮತ್ತು ಇಬ್ಬರು ಹೆಣ್ಣು ಮಕ್ಕಳೊಡನೆ ಮೈಸೂರಿಗೆ ಬಂದರು. ಇವರು ಮಗ್ಗೆಯಲ್ಲಿದ್ದಾಗ ಇವರ ತಂದೆಯವರು ಇವರಿಗೆ ಹಿಂದೂಗಳ ವೇದಶಾಸ್ತ್ರ ಪುರಾಣೇತಿಹಾಸಗಳ ಕಥೆಗಳನ್ನೆಲ್ಲಾ ಹೇಳುತ್ತಿದ್ದರು. ಅನೇಕ ನೀತಿಗರ್ಭಿತವಾದ ಶ್ಲೋಕಗಳನ್ನೂ, ಪದ್ಯಗಳನ್ನೂ ಇವರಿಗೆ ಗಟ್ಟಿ ಮಾಡಿಸಿದ್ದರು. ಓದುಬರಹವನ್ನು ಕಲಿಯುವುದಕ್ಕೆ ಮುಂಚೆಯೇ ಇವರಿಗೆ ಅನೇಕ ಗ್ರಂಥಗಳ ಸಾರಾಂತಗಳು ಗೊತ್ತಾಗಿದ್ದುವು. ಯಾವ ವಿಷಯಗಳು ವ್ಯಸಕ್ತವಾದಾಗ್ಯೂ ಅದಕ್ಕೆ ಅನ್ವಯಿಸತಕ್ಕ ನೀತಿ ಶ್ಲೋಕಗಳನ್ನು ಉದಹರಿಸಿ ಮಾತನಾಡುವ ಶಕ್ತಿಯು ಇವರಿಗೆ ಎಂಟು ವರ್ಷಗಳೊಳಗಾಗಿ ಬಂದಿತ್ತು.

ಮೈಸೂರಿಗೆ ಬಂದ ಕೂಡಲೇ ಶಿವಪೂಜಾಧುರಂಧರರಾದ ಶ್ರೀಮನ್ ಮಹಾರಾಜರವರ ಪ್ರೀತಿಗೆ ಪಾತ್ರರಾಗಿದ್ದ ಮಃ ರಾ। ಭಗವತ ಸುಬ್ಬರಾಯರವರ ಬಳಿಗೆ ಇವರ ಮಾತೃಶ್ರೀಯವರು ಇವರನ್ನು ಕರೆದುಕೊಂಡು ಹೋಗಿ ಭೇಟಿ ಮಾಡಿಸಿದರು. ಮಃ ರಾ। ಸುಬ್ಬರಾಯರವರು ವೇದ ಶಾಸ್ತ್ರ ಪುರಾಣೇತಿಹಾಸಗಳ ರಹಸ್ಯಗಳನ್ನು ತಿಳುಕೊಂಡಿದ್ದರು. ಅವರು ಮಃ ರಾ। ವೆಂಕಟಕೃಷ್ಣಯ್ಯನವರನ್ನು ಮೊತಾಡಿಸಲು, ಇವರು ಕೊಟ್ಟ ಉತ್ತರಗಳು ಕೇವಲ ಯುಕ್ತಿಯುಕ್ತವಾಗಿಯೂ, ಶಾಸ್ತ್ರ ಸಮ್ಮತವಾಗಿಯೂ ಇದ್ದುದನ್ನು ನೋಡಿ ಸಂತೋಷಪಟ್ಟು, ತನ್ನ ಮನೆಯಲ್ಲಿ ಭೋಜನ ಮಾಡಿಕೊಂಡು ಇರಲಿಎಂದು ಹೇಳಿ, ಅವರು ವಿದ್ಯಾಭ್ಯಾಸಕ್ಕೆ ಏರ್ಪಾಡು ಮಾಡಿದರು. ಕ್ರಮೇಣ ಇವರ ವಯಸ್ಸಿಗೆ ಮಿರಿದ ನೈಜ್ಞೆಯನ್ನು ನೋಡಿ ಸಂತೋಷವಟ್ಟು ಇವರನ್ನು ಅರಮನೆಗೆ ಕರೆದುಕೊಂಡು ಹೋದರು.

ಶ್ರೀಮನ್ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರವರ ಭೇಟಿಯನ್ನು ಮಾಡಿಸಿದರು. ಅವರು ಇವರ ಮಾತುಗಳನ್ನು ಕೇಳಿ ಇವರ ತೀಕ್ಷ್ಣವಾದ ಬುದ್ಧಿಯನ್ನು ನೋಡಿ ಇವರಿಗೆ ಸರಿಯಾದ ವಿದ್ಯಾಭ್ಯಾಸವನ್ನು ಮಾಡಿಸ ಬೇಕೆಂದು ಆಜ್ಞೆಮಾಡಿದರು. ಈ ಆಜ್ಞೆಯನ್ನು ಭಾಗವತ ಸುಬ್ಬರಾಯರವರು ನೆರವೇರಿಸಿದರು. ಈಗ ಜಾಮರಾಜೇಂದ್ರ ಒಡೆಯರವರ ಪ್ರತಿಮೆಯು ಇರತಕ್ಕ ಸ್ಥಳದಲ್ಲಿ ಅರಮನೆಯ ಸೌದೇಕೊಪ್ಪಲು ಮತ್ತು ಭಾಗವತ ಸುಬ್ಬರಾಯರ ಲಾಯವೂ ಇತ್ತು. ಈ ಲಾಯದಲ್ಲಿ ಇವರ ತಾಯಿಗೂ, ಇವರ ಸಹೋದರ ಸಹೋದರಿಯರ ವಾಸಕ್ಕೂ ಏರ್ಪಾಡು ಮಾಡಿ ಅವರ ಜೀವನವನ್ನು ನಡೆಸುತ್ತಾ ಬಂದರು. ಇವರ 14ನೇ ವಯಸ್ಸಿನ ವರೆಗೂ ಇವರು ಮಾತಾಪಿತೃಗಳು ಹಾಕಿದ ಮೇಲ್ಬಂಕ್ತಿಯಂತೆ ಸಂಸ್ಕೃತದಲ್ಲಿಯೂ, ತೆಲುಗಿನಲ್ಲಿಯೂ ವಿದ್ಯಾಭ್ಯಾಸವು ನಡೆಯಿತು. ಅನಂತರ ಕನ್ನಡದಲ್ಲಿ ವಿದ್ಯಾಭ್ಯಾಸವಾಯಿತು. ಆಗ ಶ್ರೀಮನ್ ಮಹಾರಾಜರ ಆಜ್ಞೆಯಂತೆ ರಾಜಾ ಫ್ರೀ ಸ್ಕೂಲ್ ಎಂಬುದಾಗಿ ಪ್ರತಿಷ್ಠಿಸಲ್ಪಟ್ಟಿದ್ದ ಪಾಠಶಾಲೆಯಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ಕಳುಹಿಸಲ್ಪಟ್ಟರು. ಅಲ್ಲಿ ಕೆಲವು ವರ್ಷ ವ್ಯಾಸಂಗ ಮಾಡಿ ವೆಸ್ಲಿಯನ್ ಹೈಸ್ಕೂಲಿಗೆ ಕಳುಹಿಸಲ್ಪಟ್ಟರು. ಅಲ್ಲಿ ರಿವೆರೆಂಡ್ ಬ್ಯಾಂಕ್ಸ್, ರಿವೆರೆಂಡ್ ಮ್ಯೂರೆಟ್ಟಾರವರೂ, ರಿವೆರೆಂಡ್ ಹಚ್ಚಿನ್‌ರವರು, ರಿವೆರೆಂಡ್ ಸೈಕ್ಸ್‌ರವರೂ, ರಿವೆರೆಂಡ್ ಹಡ್‌ಸನ್‌ರವರೂ ಇವರೇ ಮೊದಲಾದ ಅನೇಕ ಪಾಧ್ರಿಗಳು ಇವರಿಗೆ ವಿದ್ಯಾಗುರುಗಳಾದರು. ಇವರಲ್ಲಿ ವ್ಯಾಸಂಗ ಮಾಡಿ ಅವರ ಸತ್ಕವೇದವೆಂದು ಭಾವಿಸಲ್ಪಟ್ಟಿರುವ ಬೈಬಲನ್ನೂ ಅದಕ್ಕೆ ಸಂಬಂಧಪಟ್ಟ ಇತರ ಗ್ರಂಥಗಳನ್ನೂ ವ್ಯಾಸಂಗ ಮಾಡಿದರು. ಆ ಕಾಲದಲ್ಲಿ ಈ ಪಾಧ್ರಿಗಳು, ಹಿಂದೂ ವೇದಶಾಸ್ತ್ರಗಳನ್ನು ದೂಷಿಸುತ್ತಾ ಕ್ರಿಸ್ತಮತ ಧರ್ಮಗಳನ್ನು ಭೂಷಿಸುತ್ತಾ ಇದ್ದರು. ಈ ದೂಷಣಗಳನ್ನು ಕೇಳಿ ಮಃ ರಾ। ವೆಂಕಟಕೃಷ್ಣಯ್ಯನವರು ಮೃಸನವಟ್ಟು, ಇವರು ನಿಜವಾದ ಕ್ರೈಸ್ತರಲ್ಲವೆಂಬುದಾಗಿಯೂ, ಕ್ರೈಸ್ತಧರ್ಮಕ್ಕೆ ವಿರೋಧವಾಗಿ ನಡೆಯುವರೆಂಬುದಾಗಿಯೂ, ಹೇಳುವುದಕ್ಕೂ ಉಪನ್ಯಾಸಗಳನ್ನು ಮಾಡುವುದಕ್ಕೂ ಉಪಕ್ರಮಿಸಿದರು. ಈ ಸನ್ನಿವೇತದಲ್ಲಿ ಇವರು ವಿಶಿಷ್ಟರಿಗಳಲ್ಲಿ ಮೊದಲಿಮಾನ ಋಳ್ಳವರನ್ನೆಲ್ಲಾ ಖಂಡಿಸುತ್ತಾ ಬಂದರು. ರಿವೆರೆಂಡ್ ಹಡ್‌ಸನ್‌ರವರು ಮಾತ್ರ ಇವರ ವಾಕ್ಕಾರ್ಥಗಳನ್ನು ಕೇಳಿ ಸಂತೋಷಪಡುತ್ತಿದ್ದರು. ರಿವೆರೆಂಡ್ ಹಡ್‌ಸನ್‌ರವರು ಕ್ರಿಸ್ತನಿಗೆ ಸೆಮಾನರೆಂದು ಇವರೂ ಕೂಡ ಅವರಲ್ಲಿ ನಿಜವಾದ ಗುರುಭಕ್ತಿಯನ್ನು ಇಟ್ಟುಕೊಂಡಿದ್ದರು. ಈ ಮಧ್ಯೆ ಇವರು ಸರ್. ವಿಲಿಯಮ್ ಜೋನ್ಸ್, ಮ್ಯಾಕ್ಸ್ ಮುಲ್ಲರ್ ಮೊದಲಾದವರು ಬರೆದಿರತಕ್ಕ ಗ್ರಂಥಗಳನ್ನೆಲ್ಲಾ ಓದಿದರು. ಅವುಗಳನ್ನು ಓದಿದ ಕೂಡಲೇ ಇವರಿಗೆ ಹಿಂದೂಮತದಲ್ಲಿದ್ದ ಭಕ್ತಿಯು ಹೆಚ್ಚಾಯಿತು. ಸಕಲ ಸಿದ್ಧಾಂತಗಳಲ್ಲಿಯೂ ಶ್ರೀ ಶಂಕರಾಚಾರ್ಯರ ಅದ್ವೈತಸಿದ್ಧಾಂತವು ಸರ್ವೋತ್ತಮವಾದುದೆಂಬ ಭಾವನೆಯು ಇವರಿಗೆ ಉಂಟಾಯಿತು. ಜಾಮರಾಜ ನಗರದ ಶ್ರೀಕಂಠಶಾಸ್ತ್ರಿಗಳನ್ನೂ ಸದ್ವಿದ್ಯಾ ಪಾಠಶಾಲೆಯ ಗುಂಡುಶಾಸ್ತ್ರಿಗಳನ್ನೂ ನಿಯಮಿಸಿಕೊಂಡು ಸುಮಾರು 25 ವರ್ಷಗಳು ವೇದಶಾಸ್ತ್ರ ಪುರಾಣೇತಿಹಾಸಗಳನ್ನು ಅವರ ಕೈಲಿ ಓದಿಸಿ ಅದರ ರಹಸ್ಯವನ್ನು ಅವರೊಡನೆ ಚರ್ಚೆ ಮಾಡಿ ಸಂಗ್ರಹಿಸಿಕೊಂಡರು. ಈ ಮಧ್ಯೆ ವಿಲಾಯತಿಯಲ್ಲಿ ಫ್ರೀ ಥಾಟ್ ಸಂಘಗಳಿಗೆ ಸೇರಿದ ಡಾ। ಬೆಸೆಂಟ್, ಬ್ರಾಡ್‌ಲಾ, ಇಂಗರ್‌ಸಾಲ್ ಮೊದಲಾದವರು ದುರ್ಮತಗಳನ್ನು ಹೇಗೆ ಖಂಡಿಸುತ್ತಲಿದ್ದರೋ, ಅದು ಇವರಿಗೆ ತಿಳಿಯಬಂತು. ಅವರ ಗ್ರಂಥಗಳನ್ನು ತರಿಸಿಕೊಂಡು ಅವುಗಳನ್ನು ಪರಿಶೀಲಿಸಿದರು. ಕ್ರಮೇಣ ಹರ್ಬರ್ಟ್ ಸ್ಪೆನ್ಸರ್, ಹಕ್ಸ್ಲಿ, ಟಿಂಡಲ್ ಮೊದಲಾದವರು ಬರೆದಿರತಕ್ಕ ಗ್ರಂಥಗಳು ಫ್ರೀ ಥಾಟ್ ಪುಸ್ತಕಗಳಲ್ಲಿ ನಮೂದಿಸಲ್ಪಟ್ಟಿದ್ದವು. ಅವರ ಗ್ರಂಥಗಳನ್ನು ಪರಿಶೀಲಿಸಿದರು. ಕ್ರಮೇಣ ಸ್ಟೂಡಂ ಬ್ಲಾವೆಟ್‌ಸ್ಕಿ, ಡಾ। ಬೆಸೆಂಟ್ ಮೊದಲಾದ ಬ್ರಹ್ಮಜ್ಞಾನ ಸಮಾಜದವರ ಗ್ರಂಥಗಳು ತಂಡೋಪತಂಡವಾಗಿ ಹೊರಟವು. ಈ ಸಂಘದ ಸಿದ್ಧಾಂತಗಳನ್ನು ಪರಿಶೀಲಿಸಿದರು.

ಈ ಮಧ್ಯೆ ಪಾಶ್ಚಾತ್ಯರಲ್ಲಿ ಜರ್ಮನಿ, ಫ್ರಾನ್ಸ್, ಇಟಲಿ, ರಷ್ಯಾ, ಅಮೇರಿಕಾ ಮೊದಲಾದ ದೇಶಗಳಲ್ಲಿಯೂ ಜಪಾನ್, ಚೀನಾ ದೇಶಗಳಲ್ಲಿಯೂ ಪ್ರಳಯ ಕರ್ಮಗಳಿಗೆ ಸಾಧಕವಾದ ಗ್ರಂಥಗಳು ಬರೆಯುವುದಕ್ಕೆ ಉಪಕ್ರಮವಾಯಿತು. ಸಕಲ ವೇದ ಶಾಸ್ತ್ರವು ಪ್ರಣೀತ ಹಾಸಗಳಲ್ಲಿಯೂ, ಸೃಷ್ಟಿ ಸ್ಥಿತಿನ್ರಳಯಗಳಲ್ಲಿ ಕಾಲ ದೇಶ ವರ್ತಮಾನಗಳಿಂದ ವ್ಯತ್ಯಾಸವಾಗದೆ ಇರತಕ್ಕ ಧರ್ಮಗಳಿಗೆ ನುನುಷ್ಯರಿಂದ ಮಾಡಲ್ಪಟ್ಟ ಯಾವ ವಿಧಿನಿಷೇಧಗಳು ವ್ರತಿಕೂಲವಾಗಿರುವುವೋ ಅವುಗಳೆಲ್ಲಾ ಅಪಾದೇಯಗಳೆಂಬುದಾಗಿಯೂ, ಸಕಲ ಮತಗಳಲ್ಲಿಯೂ ಸ್ವಾರ್ಥಪರತೆಯುಳ್ಳ ಸಿಶಾಚಿಗಳು ನಿಧಕಕ್ಕೆ ದಾರಿಯನ್ನು ತೋರಿಸ ತಕ್ಕ ಸಂಕೇತಗಳನ್ನು ಮಾಡಿ ಲೋಕಕ್ಕೆ ಕಂಟಕರಾಗಿರುವರೆಂಬುದಾಗಿಯೂ ಅಂಥವರೆಲ್ಲಾ ತನ್ನ ವ್ರತಿಕಕ್ಷಿಗಳನ್ನು ಸಂಹರಿಸುವುದಕ್ಕೆ ವ್ರಯತ್ನ ಮಾಡಿ, ಜಗದೀಶ್ವರನಿಗೆ ಸಮಾನರಾದ ಮಹಾತ್ಮರಲ್ಲಿ ಅನೇಕರನ್ನು ಕಲ್ಲುಗಾಣಕ್ಕೆ ಹಾಕಿ ಅರಿಸಿರುವರೆಂಬುದಾಗಿಯೂ, ಜೀವ ಸಹಿತ ಸುಡಿಸಿರುವರೆಂಬುದಾಗಿಯೂ, ಕೋಟ್ಯಾಂತರ ಜನಗಳನ್ನು ಕೊಲ್ಲಿಸಿರುವರೆಂಬುದಾಗಿಯೂ ಅನಿರ್ವಚನೀಯ ಕಷ್ಟಗಳಿಗೆ ಗುರಿ ಮಾಡಿರುವರೆಂಬುದಾಗಿಯೂ ಅನೇಕ ಮಹಾತ್ಮರು ಅನೇಕ ಗ್ರಂಥಗಳನ್ನು ಬರೆಯುವುದಕ್ಕೆ ಉಪಕ್ರಮ ಮಾಡಿದರು. ಈ ಗ್ರಂಥಗಳನ್ನು ಪರಿಶೀಲಿಸಿ, ಮೋಕ್ಷಮುಲ್ಲರೇ ಮೊದಲಾದ ಅನೇಕ ಮಹಾತ್ಮರು ಇಂಥಾ ಸಿಶಾಚಿಗಳ ಸಿದ್ಧಾಂತವನ್ನು ಮೂಲೋತ್ಪಾಟನೆ ಮಾಡುವುದು ಕರ್ತವ್ಯವೆಂದು ಭಾವಿಸಿ ಅಶಾಸ್ತ್ರೀಯವಾದ ಗ್ರಂಥಗಳನ್ನೆಲ್ಲಾ ಖಂಡಿಸಿ ಲೋಕದಲ್ಲಿ ವ್ರತಿಯೊಬ್ಬರ ಕ್ಷೇಮಕ್ಕೂ ಎಲ್ಲಾ ಜನಗಳ ಕ್ಷೇಮವು ಹೇಗೆ ಅಸ್ತಿಭಾರ ರೂಪವಾದದ್ದೋ ಅದನ್ನು ಪ್ರಕಾಶಪಡಿಸುವುದಕ್ಕೂ ಉಪಕ್ರಮಿಸಿದರು. ಇವುಗಳನ್ನೆಲ್ಲಾ ಪರಿಶೀಲಿಸಿ ವೃದ್ಧ ಪಿತಾಮಹರು ಮನೋವಾಕ್ಕರ್ಮಗಳ ವರಿಶುದ್ಧತೆಯೇ ನಿಜವಾದ ದೇವತಾರಾಧನೆ ಎಂಬುದಾಗಿಯೂ ಮಿಕ್ಕ ಪೂಜೆಗಳೆಲ್ಲಾ ಲೋಕ ವಿಡಂಬನಾರ್ಥವಾಗಿ ಮಾಡತಕ್ಕ ವಂಚನೆಗಳೆಂಬುದಾಗಿಯೂ, "ಸರ್ವೇ ಜನಾಸುಖಿನೋ ಭವಂತು" ಎಂಬ ಕೋರಿಕೆಗೆ ಅನುಸಾರವಾಗಿ ಯಾರ ಮನೋವಾಕ್ಕರ್ಮಗಳಿರುವುವೋ ಅವರು ದೇವರಿಗೆ ಸಮಾನರಾದವರೆಂಬುದಾಗಿಯೂ ಅವರು ಪೂಜ್ಯರೆಂಬುದಾಗಿಯೂ, ಯಾರ ಕ್ಷೇಮಕ್ಕೂ ಪ್ರತಿಬಂಧಕವಾಗದಂತೆ ಯಾರು ಲೋಕಯಾತ್ರೆಯನ್ನು ಮಾಡುತ್ತಾರೋ, ಅವರು ನಿಜವಾದ ಪರಮಹಂಸರೆಂಬುದಾಗಿ, "ಸರ್ವ ದೇವ ನಮಸ್ಕಾರಃ, ಕೇಶವಂ ಪ್ರತಿಗಚ್ಛತಿ" ಎಂಬ ಸಂಧ್ಯಾವಂದನೆಯಲ್ಲಿ ಹೇಳಿರತಕ್ಕ ಮಹಾವಾಕ್ಯ ನಿಜವಾದುದೆಂಬುದಾಗಿಯೂ, ಶಿಷ್ಟವಿತ್ತಾಪಹಾರಕವಾದ ಮಾತುಗಳಿಗೆ ಲೇಶವೂ ಬೆಲೆಯಿಲ್ಲವೆಂಬುದಾಗಿಯೂ ಇವುಗಳೆಲ್ಲಾ, ಸರ್ವ ತಕ್ಕರ ಇಂದ್ರಜಾಲ ಮಹೇಂದ್ರಜಾಲಗಳಿಗೆ ಸಂಬಂಧಪಟ್ಟ ವಂಚನೆಗಳೆಂಬುದಾಗಿಯೂ, ಈ ವರಿಜ್ಞಾನ ಬಂದ ಹೊರತು ಯಾರಿಗೂ ಮೋಕ್ಷವಾಗುವುದಿಲ್ಲವೆಂಬುದಾಗಿಯೂ, ಬರೀ ಜ್ಞಾನವೆಂಬುದು ವ್ರಯೋಜನಕಾರಿಯಿಲ್ಲವೆಂಬುದಾಗಿಯೂ, ಆ ಜ್ಞಾನವು ಅನುಷ್ಠಾನಕ್ಕೆ ಬರುವುದು ಆವಶ್ಯಕವೆಂಬುದಾಗಿಯೂ, ಇಂದ್ರಿಯಗಳು ಮರ್ಮಾವಯಗಳಿಗೆ ಬೀಳದಂತೆ ಮಾಡಿಕೊಂಡು ಅರಿಷಡ್ವರ್ಗಗಳಿಗೆ ಅಧೀನರಾಗದೆ ಯಾರು ಶಾಂತಿಯಿಂದ ಬದುಕುವರೋ ಅವರಿಗೆ ಮಾತ್ರ ಇಹವರ ಸೌಖ್ಯಗಳು ಉಂಟಾಗುವುವೆಂಬುದಾಗಿಯೂ, ಜಿತೇಂದ್ರಿಯರಾಗಿಯೂ, ಅರಿಷಡ್ವರ್ಗಗಳಿಗೆ ಅಧೀನರಾಗಿಯೂ ಇರತಕ್ಕವರಿಗೆ ನಿಜ

— ಎಂಟನೇ ಪುಟವನ್ನು ನೋಡುವುದು —

ಬೆಳ್ಳಿಯ ಪೂರ್ವಕ್ಕೆ ಸರಿಸುಮಾರು 90ಮೈಲು ಅಂತರದ ಮೇಲೆ ಎಂ. ಕೃಷ್ಣ ಎಸ್. ಎಂ. ಕೃಷ್ಣರ ಮೇರೆ ಹೊಸಪೇಟೆ ಯೆಂಬ ಸ್ಟೇಷನ್ನಿದೆ. — ಅಲ್ಲಿಂದ 7-8 ಮೈಲು ಅಂತರದ ಮೇಲೆ 'ಹಂಪೆ' (ವಿಜಯನಗರ) ಎಂಬ ಹಾಳು ಪಟ್ಟಣವಿದೆ. ಅಲ್ಲಿ ಇಣಿ ನಮಸ್ಕಾರ ಅಷ್ಟಕ್ಕೆಸ್ಟೇ: ಎತ್ತ ನೋಡಿದತ್ತ ಬರೀ ಕಲ್ಲುಗಳು, ಗುಡ್ಡೆಗಳೂ ವನರಿದ್ದು ಊರಿಗೆ ಹೋದಿ ತುಂಗಭದ್ರಾ ನದಿಯು ಹರಿಯುತ್ತದೆ. ಅಲ್ಲಿಂದ ಪುರಾತನ ಕಾಲದ ಗುರಿ ಗೋಪುರಗಳೂ ಮುರುಬಾದ ಹಾಳು ಕಟ್ಟಿಡಗಳೂ ಕಾಣಬರುವುವು. ಶ್ರೀ ವಿರೂಪಾಕ್ಷನ ದೇವಾಲಯವು ವಿಸ್ತೀರ್ಣವಾಗಿದ್ದು ಅದರ ಹಿಂದೆಂದಿಸ್ಥಿನ ಉತ್ತುಂಗವಾದ ಗೋಪುರವು ಗಗನವನ್ನು ಹುಂಬಿಸುತ್ತಿರುವಂತೆ ಗಂಭೀರವಾಗಿ ಮೆರೆಯುತ್ತಿರುವುದು.

ಈ ಹಾಳು ಪಟ್ಟಣದಲ್ಲಿ ಹೋದ ಕೂಡಲೆ ಒಡೆದು ಕಾಣುವ ಈ ಗೋಪುರ, ತಿಮ್ಮರ, ಕಟ್ಟಡ, ವಿಸ್ತೀರ್ಣವಾದ ನರ್ಮಾನ ಬೆದಿಗಳು, ರಥಸದಿಂದ ಹರಿಯುವ ನಿಷಿನೀರಿನಿಂದ ತುಳುಕುತ್ತಿರುವ ತುಂಗಭದ್ರೆಯು, ಇಂದಿಗೂ ಸುತ್ತಮುತ್ತಿಲ ಯಲ್ಲಿರುವ ಕಾಲುವೆಗಳು, ಸುತ್ತುಮುತ್ತಲೂ ಕಂಗೊಳಿ ಸುವ ಕಬ್ಬಿನ ತೋಟಗಳು—ಇವೆಲ್ಲವುಗಳ ಮಿಶ್ರಣದಿಂದ ಯುಕ್ತವಾದ ವಿಚಿತ್ರ ನೋಟವು ಪ್ರೇಕ್ಷಕರನ್ನು ಭ್ರಾಂತ ಗೊಳಿಸದಿರಲಾರದು. ಈ ತೆರನಾದ ಸೃಷ್ಟಿಯ ಸೊಬಗಿನಲ್ಲಿ ಅದಕ್ಕೆ ತಕ್ಕ ಜನವನಿತೆಯಿಲ್ಲದೇ ಇರುವ ಈ ಸ್ಥಾನವು ಯಾವುದಿರಬಹುದು? ಇದರ ಇತಿಹಾಸವೇನು? ಎಂಬಿವೇ ಮೊದಲಾದ ಕಲ್ಪನೆಗಳ ತೆರೆಗಳನೇಳ ಏಳುವುವು.

ಆದರೆ ಅಲ್ಲಿ ಈ ಪ್ರಶ್ನೆಗಳಿಗೆ ಉತ್ತರವು ಯಾರಿಂದ ದೊರೆಯಬೇಕು? ಕಲ್ಲು, ಮಣ್ಣು, ಗಿಡ, ಗೋಡೆ, ನದಿ ಗಳು ಮಾತಾಡುವಂತಿದ್ದರೆ ಎಂತೆಂತಹ ರಸಭರಿತ, ಚಿತ್ತಾ ಕರ್ಷಕ, ಕಾರ್ಯೋತ್ತೇಜಕ, ಹೃದಯದ್ರಾವಕ ಸಂಗತಿ

— ಏಳನೇ ಪುಟದಿಂದ ಮುಂದರಿಸಿದುದು —

ವಾದ ಸುಖವು ಸ್ವಪ್ನದಲ್ಲಿಯೂ ದುರ್ಲಭವಾಗುವುದೆಂಬು ದಾಗಿಯೂ, ವೃದ್ಧ ವಿತಾಮಹರು ಆಗಾಗ್ಗೆ ಅವರ ಉಪ ನ್ಯಾಸಗಳಲ್ಲಿಯೂ, ಅವರ ಹಿತೋಪದೇಶಗಳಲ್ಲಿಯೂ ಹೇಳುತ್ತಲಿದ್ದಾರೆ. ಸರ್ವರೂ ಈ ತತ್ವವನ್ನು ವರಿತೀಲಿಸು ವುದು ಕರ್ತವ್ಯ. ಇವರು ಹೇಳತಕ್ಕ ಹಿತೋಕ್ತಿಗಳು ಇವರ ಅನುಷ್ಠಾನದಲ್ಲಿರುವುವು. ತೊಂಭತ್ತು ವರ್ಷಗಳಾದಾಗ್ಯೂ ಇವರು ಬೇಜಾರ್ಲಿದೆ ಲೋಕಹಿತಾರ್ಥವಾದ ಕೆಲಸಗಳಲ್ಲಿ ಹಗಲ್ಲೆಲ್ಲಾ ಕೆಲಸಮಾಡುವರು. ರಾತ್ರಿಯಲ್ಲಿಯೂ ಬಹು ಭಾಗವನ್ನು ಈ ಕೆಲಸಕ್ಕೆ ವಿನಿಯೋಗಿಸುವರು. ಇವರು ಹಾಯಿಲೆ ಬೀಳುವುದು ಅಪೂರ್ವ. ಕಸಿಷ್ಟ ಪಕ್ಷ ದಿನಕ್ಕೆ ಐದು ಮೈಲಿಗಳಿ ನರ್ಮಲವಾದ ವಾಯುಸಂಚಾರವುಳ್ಳ ಪ್ರದೇಶಗಳಲ್ಲಿ ನಡೆಯುವರು. ಬುದ್ಧಾಲಿಗಳಂತೆ ದೇವರು ಕೊಟ್ಟಿರುವುದರಲ್ಲಿ ತೃಪ್ತರಾಗಿ ಕೈಲಾಸದೆ ಪರೋಪ ಕಾರವನ್ನು ಮಾಡುತ್ತಾ, ಕೈಲಾಗದಿದ್ದರೆ ಪರರಿಗೆ ಅವಕಾಶ ಮಾಡದಂತೆ ಇರುವುದೇ ಇವರ ದೀರ್ಘಾಯುರಾರೋಗ್ಯ ಗಳಿಗೆ ಮುಖ್ಯ ಕಾರಣ. ಇವರಲ್ಲಿ ಪ್ರೀತಿಯುಳ್ಳ ಸಕಲ ಜನ ಗಳೂ, ಹೇಗೆ, ನಡೆದರೆ ಇಹಪರ ಸೌಖ್ಯಗಳು ಲಭ್ಯವಾಗು ತ್ತವೋ ಅದನ್ನು ಇವರು ಯಥಾ ಶಕ್ತಿ ತೋರಿಸುತ್ತಾರೆ. ಬುದ್ಧನು ಅಷ್ಟೈಶ್ವರ್ಯಗಳನ್ನೂ, ಅಪ್ರತಿಹತವಾದ ಅಧಿ ಕಾರವನ್ನೂ, ಪತ್ನಿ, ಮಿತ್ರ, ಕಳತ್ರಾದಿಗಳನ್ನೂ ಹೇಗೆ ವರ ತ್ಯಾಗ ಮಾಡಿ ವರಮಹಂಸ ವದವಿಯನ್ನು ಅವಲಂಬಿಸಿ ಈ ಅಖಂಡ ಬ್ರಹ್ಮಾಂಡವೇ ತನ್ನ ಕುಟುಂಬವೆಂದು ತಿಳಿದು ಕೊಂಡು, ಎಲ್ಲರ ಕ್ಷೇಮಾರ್ಥವಾಗಿ ಹೇಗೆ ಲೋಕಯಾತ್ರೆ ಯನ್ನು ಪೂರೈಸಿದನೋ, ಅದನ್ನು ಇವರು ಆಗಾಗ್ಗೆ ಸ್ಮರಿಸಿ ಕೊಂಡು ಈ ಮಹಾತ್ಮನ ವೈರಾಗ್ಯದಲ್ಲಿ ಕೋಟಿಪಾಲಿನಲ್ಲಿ ಒಂದು ಪಾಲನ್ನಾದರೂ ಹೊಂದುವುದಕ್ಕೆ ಆರ್ಹರಾಗ ಬೇಕೆಂದು ಈ ವೃದ್ಧವಿತಾಮಹರು ಪ್ರಯತ್ನ ಮಾಡುತ್ತಲಿ ದ್ದಾರೆ. ಇವರ ಇಷ್ಟಾರ್ಥವಿದ್ಧಿಯಾಗಲೆಂದು ಇವರ ವಿಷ್ಣು ಮಂದಿರಯಾತ್ರೆಯೂ ಕೋರುತ್ತಾರೆ. ದೇವರು ಇವರಿಗೆ ಆರೋಗ್ಯವನ್ನು ಮಾಡುವನೆಂದು ನಾವು ತೋರಿಸೀನೆ.

ಗೆಳೆಯನ್ನು ಒಂದೇ ಸವನೆ ಹೀಳ್ಕೆಕರ ಉತ್ತೊಕಲವನ್ನು ಕೃಪ್ತಿಗೊಳಿಸುತ್ತಲಿದ್ದುವು! ಆದರೆ ನೋಡುವುದೇನು? ಅಲ್ಲಿರುವ ಶಿಲಾಲೇಖಗಳನ್ನು ಓದುವವರಾರು? ಪ್ರೇಕ್ಷಕರಿಲ್ಲರಿಗೂ ಅದು ಸಾಧ್ಯವೇ?

ಮಹಾಮೇರೆ! ಈ ಹಾಳು ಪಟ್ಟಣವು ಇತಿಹಾಸ ಪ್ರಸಿದ್ಧವಾದ, ಸಾಮ್ರಾಜ್ಯ ರಕ್ಷವಾದ, ಕನ್ನಡಿಗರ ಅಭಿಮಾನ ಕ್ಕೆ ಕಾರಣವಾದ, ಎಂದೂ ಮರೆಯದ ಕನ್ನಡಸಾಮ್ರಾಜ್ಯದ ರಾಜಧಾನಿಯಾದ "ವಿಜಯನಗರ" ಪಟ್ಟಣವು. ಈ ರಾಜ್ಯವು ಏಳೆಯಲ್ಲಿರುವಾಗಿನ ರಾಜಧಾನಿಯ ಸಂಪತ್ತು ಸೊಬಗುಗಳಿಗೆ ಸೀಮೆಯುಂಟೆಯೆ? ಕವಿಗಳ ವಾಂಛಿತವೆಷ್ಟು? ಆ ರಾಜಧಾನಿಯ ಐಶ್ವರ್ಯಾತಿಶಯದ ನಿರೀಕ್ಷಣದಿಂದ ಪಾಶ್ಚಿಮಾತ್ಯರಾದಿ ಪೋರ್ತುಗೀಜರು ಸಹ ಬೆಪ್ಪಾಗಿ ಬೆರಳು ಕಚ್ಚುತ್ತಿದ್ದರು.

ಆದರೆ ಈಗ ಅದೆಲ್ಲ ಕನಸಿನಲ್ಲಿಯ ಕಥೆಯಂತಾ ಗಿದೆ. ಲಕ್ಷೋನಲಕ್ಷ ಜನರಿದ್ದ ಆ ಪಟ್ಟಣವೆಲ್ಲ ವಿಧ್ವಂಸ ವಾಗಿ "ಹಾಳು ಹಂಪೆ" ಎಂಬ ತುಚ್ಛ ಹೆಸರಿಂದ ಕರೆಯ ಲ್ಪಡುವ ಸ್ಥಿತಿ ಬಂದಿದೆ. ವಿಜಯನಗರದ ಇತಿಹಾಸದ ಕೊಂಚಮಟ್ಟಿಗಾದರೂ ಜ್ಞಾನವಿದ್ದ ಕನ್ನಡಿಗನು ಈಗ ಆ ಪಟ್ಟಣದ ಸ್ಥಿತಿ ನೋಡಿ ಕನ್ನೀರು ಸುರಿಸದಿರಲಾರನು. ಅವನ ಅಂತಃಕರಣವು ಉಕ್ಕಿ ಉಕ್ಕುರೂವಿದಿಂದ ಹೊರ ಚೆಲ್ಲಿ ದಲ್ಲಿ ಆಶ್ಚರ್ಯವೇನು? ಅಚ್ಚ ಕನ್ನಡಿಗನ ಮನಸ್ಸನ್ನು ಕರ ಗಿಸಿದೆ: ಅವನನ್ನು ಅಗಾಧ ಗಾಢ ನಿದ್ರೆಯಿಂದೆಬ್ಬಿಸಿ, ನವ್ಮಿ ಕರ್ನಾಟಕದೇಳ್ಗೆಗೂ, ಏಕೀಕರಣಕ್ಕೂ, ಪುನರ್ಘಟನೆಗೂ ಸಿದ್ಧವಾಗಿಯೇ ಚಲನೆ ಕೊಡತಕ್ಕ ಒಂದೇ ಒಂದು ಸ್ಥಾನ ವೆಂದರೆ, ಕಲ್ಲುಮನಸ್ಸನ್ನು ಸಹ ಕರಗಿಸುವ ಈಗಿನ ಹಂಪೆ (ಪೂರ್ವದ ವಿಜಯನಗರ) ಯೇ ಸರಿ. ಪ್ರತಿಯೊಬ್ಬ ಕನ್ನ ಡಿಗನು ವಿಜಯನಗರದ ಪುಣ್ಯಭೂಮಿಯಲ್ಲಿ ಕಾಲಿಟ್ಟು ಆ ಹಿಂದಿನ ವೈಭವವನ್ನು ಸ್ಮರಿಸಿ ಅಶ್ರುಗಳನ್ನು ಸುರಿಸಿದ ದಿನವೇ ಕನ್ನಡನಾಡಿನ ಭಾಗ್ಯೋದಯಕ್ಕಾರಂಭವೆಂದು ಧಾರಾಳ ವಾಗಿ ಹೇಳಬಹುದು. ಆದುದರಿಂದ ಅಭಿಮಾನವಿದ್ದ ಕನ್ನ ಡಿಗರ ಅಶ್ರುಗಳು ಕರ್ನಾಟಕಾಭ್ಯುದಯದ ತಳಹದಿಯನ್ನು ನಿಡುವದಕ್ಕಾಗಿ ವಿಜಯನಗರದಲ್ಲಿ ಅವಶ್ಯಕವಾಗಿ ಬೇಕಾಗಿವೆ.

ಈ ಜಗದ್ವಿಖ್ಯಾತ ಸಾಮ್ರಾಜ್ಯ ಸ್ಥಾಪನೆಯಾಗಿ ಸನ್ 1986ಕ್ಕೆ 600 ವರ್ಷಗಳಾಗುವುವು. ಕನ್ನಡಿಗರೆಲ್ಲರೂ ಆ ಸಂವತ್ಸರ ಎಂದರೆ 1986ರಲ್ಲಿ ಯಾದರೂ ವಿಜಯನಗರದಲ್ಲಿ ಕಲೆತು ಆ ಸಾಮ್ರಾಜ್ಯಸ್ಥಾಪನೆಯ "ಷಟ್‌ಶತಸಾಂವತ್ಸರಿ ಕೋತ್ಸವ"ವನ್ನು ವಿಜೃಂಭಣೆಯಿಂದ ನೆರವೇರಿಸಬೇಕೆಂದು ನಮ್ಮ ಸೂಚನೆಯಿದೆ. ಇಷ್ಟುಮಟ್ಟಿಗಾದರೂ ನಾವು ನಮ್ಮ ರಣವಲ್ಲಭರಾದ ಪೂರ್ವಜರ ನೆನಪುಮಾಡಿಕೊಳ್ಳ ಬೇಕಲ್ಲವೇ? ಇದೂ ಬೇಡವೆನ್ನುವ ಪುಣ್ಯಾತ್ಮರೀ ಕನ್ನಡಿಗರು ನಮ್ಮಲ್ಲಿ ಹೊರದಬಹುದಾದರೆ ನಮ್ಮ ಭಾಗ್ಯವನ್ನೆಂತು ಬಣ್ಣಿಸುವುದು? ಸನ್ 1986ರಲ್ಲಿ ಕರ್ನಾಟಕದ ಎಲ್ಲ ಸಮ್ಮೇಲನಗಳೂ, ಪ್ರದರ್ಶನಗಳೂ ಮೇಲಾಟಗಳೂ, ವಿಜಯನಗರದಲ್ಲಿಯೇ ಕೂಡಿ ಆ ಉತ್ಸವವನ್ನು ಸಾಂಗ ಗೊಳಿಸಬೇಕು. ನವರಾತ್ರಿಯು ಹಬ್ಬವು ಕನ್ನಡಿಗರ ನಾಡ ಹಬ್ಬವು. ವಿಜಯನಗರದಲ್ಲಂತೂ ಅದು ಬಹು ವೈಭವ ದೊಂದಿಗೆ ನೆರವೇರಿಸಲ್ಪಡುತ್ತಿತ್ತೆಂಬುದಕ್ಕೆ ಪೋರ್ತುಗೀಜ ಪ್ರವಾಸಿಗರು ಕಣ್ಮುಟ್ಟಿನೋಡಿ ಬರೆದಿಟ್ಟ ಹೃದಯಂಗಮವು ವರ್ಣನೆಯೇ ಸಾಕ್ಷಿ; ಹೀಗಿದ್ದಮೇಲೆ ಆ ವರ್ಷ ನವರಾತ್ರಿ ಯಲ್ಲಿಯೇ ವಿಜಯನಗರದಲ್ಲಿ ಕೂಡುವುದುಚಿತವಲ್ಲವೇ?

ಆ ವರ್ಷದ ಉತ್ಸವದ ವರ್ಚಾರಿಗಾಗಿ ಈಗಲೇ ಒಂದು ಕಾರ್ಯಕಾರೀ ಮಂಡಲವು ಸ್ಥಾಪಿತವಾಗಿ ಆ ವರ್ಷ (೧೯೩೬) ಮಾಡತಕ್ಕ ಕಾರ್ಯಕ್ಷೇತ್ರವನ್ನು ಗೊತ್ತು ಮಾಡತಕ್ಕದ್ದು. ಮತ್ತು ಕರ್ನಾಟಕದ ಎಲ್ಲ ವರಿಷತ್ತು, ಸಭೆ, ಸಮ್ಮೇಲನ ಮುಂತಾದ ಸಂಸ್ಥೆಗಳಿಗೆ ಆ ವರ್ಷ ನವ ರಾತ್ರಿಯಲ್ಲಿ ವಿಜಯನಗರದಲ್ಲಿಯೇ ಕೂಡುವಂತೆ ವಿನ್ನಹ ಮಾಡಿಕೊಳ್ಳತಕ್ಕದ್ದು. ಹೀಗೆ ಮಾಡುವುದರಿಂದ ಕರ್ನಾ ಟಕದ ಪ್ರಮುಖರು, ಕನ್ನಡನಾಡಿನ ಕಳಕಳಿ ಮತ್ತು ಅಭಿ ಮಾನವುಳ್ಳವರೆಲ್ಲರೂ ಒಂದೇ ಕಡೆಗೆ ಕಲೆತು ಕರ್ನಾಟಕದ ಳಿಯ ಪ್ರಶ್ನೆಯನ್ನು ಬಿಡಿಸಲಿಕ್ಕೆ ಹಗುರಾಗುವುದು. ನುಲ್ಲು ರನ್ನು ಬರಮಾಡಿಕೊಳ್ಳಲಿಕ್ಕೆ ಕುಸ್ತಿ ಮೊದಲಾದ ಸಾಧನ ಗಳುಂಟು. ಕತ್ತಿಯ ತರ್ಜುಗಳನ್ನಿಸಬಹುದು. ಕಲಾ ಕೌಶಲ್ಯ ಪ್ರದರ್ಶನಗಳಿಂದ ನನ್ನು ಹೆಂಗಳೆಯರ ವ್ಯಾಪಿಣ್ಯಕ್ಕೆ ಅವಕಾಶ ದೊರೆಯುವುದು.

ಧಾರವಾಡದ ಇತಿಹಾಸ ಸಂಶೋಧನ ಮಂಡಲದಲ್ಲಿ ಕನ್ನಡ ಲಿಪಿಯು ಮೊದಲಿನಿಂದ ಇಂದಿನ ವರೆಗೆ ಹೊಂದುತ್ತ ಬಂದಿರುವ ರೂಪಾಂತರಗಳುಳ್ಳದೊಂದು ನಕಾಶವಿದೆ. ಅದರ ಸಂಪೂರ್ಣ ಅಭ್ಯಾಸದಿಂದ ಕನ್ನಡ ತಿಲಾಲೇಖ, ತಾಮ್ರ ಪಟ್ಟ, ತಾಡವಾಲಿ ಮುಂತಾದ ಪುರಾತನ ಕಾಲದ ಲೇಖ ಗಳನ್ನು ಓದ ತಿಳಿಯಲು ಶಕ್ಯವಿದೆ. ಕಾರಣ, ಈ ನಕಾಶ ವನ್ನು ಮುದ್ರಿಸಿ ಎಲ್ಲ ಶಾಲೆಗಳಿಗೂ ಸಾರ್ವಜನಿಕ ಸಂಸ್ಥೆ ಗಳಿಗೂ ಪುಕ್ಕಟೆಯಾಗಿ ಕಳಿಸಬೇಕು. ಮತ್ತು (1) ತಿಲಾ ಲೇಖಗಳ "ಭಾವ" ತೆಗೆದುಕೊಳ್ಳುವುದು, (2) ಇಂಥ ಭಾವಗಳನ್ನು ಓದುವುದು, (3) ಇನ್ನೂ ವರೆಗೂ ಓದದೆ ಉಳಿ ದಿದ್ದ ತಿಲಾಲೇಖ, ತಾಮ್ರಪಟ, ತಾಡವಾಲಿಗಳ ತೋಧ ಮಾಡಿ ಅವುಗಳ ಅರ್ಥವನ್ನು ಮೂಲಭಾಷೆಯ ಸಹಿತ ಕಳಿಸುವುದು. ಇವುಗಳಿಗೆ ಸಾಕಷ್ಟು ವಾರಿತೋಷಕವನ್ನಿಡ ಬೇಕು. ಅಂದರೆ ಹಳ್ಳಿಗಳಲ್ಲಿರುವ ಪ್ರಾಥಮಿಕ ಶಾಲಾ ಮಾಸ್ತರರು ಕರ್ನಾಟಕದ ಸಂದಿಗೊಂದಿಗಳೊಳಗಿನ ಲೇಖನ ಗಳನ್ನು ಓದಿಬಿಡುವುದರಲ್ಲಿ ಸಂದೇಹವಿಲ್ಲ. ಒಬ್ಬೊಬ್ಬ ನುರಿತ ಕೆಲಸಗಾರರನ್ನು ಸಂಬಳ, ದಾರಿಖರ್ಚಿನ್ನ ಕೊಟ್ಟು ಕಳಿಸಿದರೂ ಸಹ ಇದೀ ಕರ್ನಾಟಕದ ಸಂದಿಗೊಂದಿಗಳಿಗೆ ಹೋಗಿ ಪ್ರಯತ್ನಿಸುವುದು ಬಹಳೇ ತೌಂದರೆಯ ಕೆಲಸವು. ಮೇಲಾಗಿ, ಈ ರೀತಿಯ ಪ್ರಯತ್ನಕ್ಕೆ ಹಣವೂ ಬಹಳ ವೆಚ್ಚ ವಾಗುವುದು. ಆದ್ದರಿಂದ ಮೇಲೆ ಹೇಳಿದಂತೆ ನಕಾಶ ಭಾವೆಯ ಮತ್ತು ವಾರಿತೋಷಕ ಕೃವಸ್ಥೆಯಾದರೆ ಪ್ರಾಥಮಿಕ ಶಾಲೆಯ ಪ್ರತಿಯೊಬ್ಬ ಶಿಕ್ಷಕನು ಸಹ ಮನಮುಟ್ಟಿ ಪ್ರಯತ್ನ ಮಾಡಿ ಕರ್ನಾಟಕದ—ಅದರಲ್ಲೂ ವಿಜಯನಗರದ—ಇತಿ ಹಾಸ ಸಂಶೋಧನದ ಕಾರ್ಯದಲ್ಲಿ ತನ್ನ ಶಕ್ತಿ ವಿಂಠಿ ಸಹಾಯ ನೂಡಬಲ್ಲನಲ್ಲನೇ? ವಾರಿತೋಷಿಕದ ಹಣದ ವೆಚ್ಚವೇ ವೆಚ್ಚ! ಈ ಉಪಾಯದಿಂದ ವಿಜಯನಗರದ ಇತಿ ಹಾಸವನ್ನು ಬರೆಯುವವರಿಗೆ ಮಿತಿಮೀರಿ ಸಾಹಿತ್ಯವು ದೊರೆತು ದೊಡ್ಡದೊಂದು ಸಹಾಯವೇ ಆಗುವುದು.

ವಿಜಯನಗರದ ಇತಿಹಾಸದ ಬಗ್ಗೆ ಆಧಾರಭೂತವಾದ (Authoritative) ಮೇಲ್ಕರಗತಿಯ ಗ್ರಂಥಗಳು ಇಲ್ಲ ವೆಂದರೂ ನಡೆಯಬಹುದು. ಪರಕೀಯರಾರೋ ಬರೆದಿರ ಬಹುದು. ಆದರೆ ಅವು ಸ್ವಯಂಸ್ಫೂರ್ತಿಯಿಂದಲೂ, ಶೋಧನಾತ್ಮಕ ದೃಷ್ಟಿಯಿಂದಲೂ ಬರೆಯಲ್ಪಟ್ಟಿರುವುದು ಶಕ್ಯ. ಸಂದಿಗೊಂದಿಗಳನ್ನು ತೋಧಿಸಿ, ವಸ್ತುಸ್ಥಿತಿಯ ವಿವರ್ಯಾಸ ಮಾಡದೆ, ವಿಜಯನಗರದ ಇತಿಹಾಸವನ್ನು ಬರೆಯತಕ್ಕವ ನೆಂದರೆ ಕರ್ನಾಟಕದ ಸದಭಿಮಾನಭರಿತನಾದ ಕನ್ನಡಿಗ ನೊಬ್ಬನೇ! ವಿಜಯನಗರದ 'ಟೋಕ್ಯ' ಇತಿಹಾಸದ ಗ್ರಂಥ ವೊಂದು ಬೇೇಬೇಕೆಂಬುದು ನರ್ವಿವಾದವು.

ಕಾರಣ, ಇಂಥ ಸಾಧಾರಣವಾದ ಇತಿಹಾಸಗಳಲ್ಲಿ ಶ್ರೇಷ್ಠವೆಂದು ಗೊತ್ತಾಗತಕ್ಕ ಗ್ರಂಥಕ್ಕೆ ರೂವಾಯಿ ೫೦೦ಕ್ಕೆ ಕಡಿಮೆ ಇಲ್ಲದಷ್ಟು ವಾರಿತೋಷಕವನ್ನಿಟ್ಟು ಆ ಬಗ್ಗೆ ಈಗಲೇ ಪ್ರಸಿದ್ಧ ಪಡಿಸಿದಲ್ಲಿ ಇತಿಹಾಸ ಲೇಖಕರು ಮನಃಪೂರ್ವಕ ಪ್ರಯತ್ನಿಸಿ ಸನ್ 1986ರ ಉತ್ಸವದೊಳಗಾಗಿ ವಿಜಯ ನಗರದ ಅತ್ಯುತ್ತಮವಾದ ಇತಿಹಾಸವನ್ನು ಸಿದ್ಧ ಪಡಿಸುವರ್ಷ್ಟೆ ಮಾತ್ರ ಈ ಇತಿಹಾಸ ಗ್ರಂಥವು ಇಂಗ್ಲಿಷಿನಲ್ಲಿರಬೇಕು. ಅಂದರೆ ವಿಜಯನಗರದ ಬಗ್ಗೆ ಪರವ್ಯಾಂತೀಯರಲ್ಲಿಯೂ, ಪರದೇಶದವರಲ್ಲಿಯೂ ಇದ್ದ ಏಷ್ಟೋ ವೃತ್ತ ತಿಳುವಳಿಕೆಯ ಕತ್ತಲೆಯನ್ನು ಚದುರಿಸಲಿಕ್ಕೆ ಅದು ಪ್ರಬಲ ಕೋತೆಯೇ ಆಗುವುದು. ಅದನ್ನು ಆ ಮೇಲೆ ಬೇಕಾದ ಭಾಷೆಗಳಲ್ಲಿ ಅವತರಿಸಬಹುದು. ಇಂಥದೊಂದು ಇತಿಹಾಸವು ಸಿದ್ಧ ವಾಗುವಷ್ಟರಲ್ಲಿ ಅದಕ್ಕೆ ಸಂಬಂಧಿಸಿದ್ದ-ಕಾದಂಬರಿ, ನಾಟಕ, ಕಥೆ, ಕವಿತೆ, ಲಾವಣಿ, ಚಿತ್ರ, ಚಿತ್ರಪರ ಮೊದಲಾದುವು ಗಳೆಷ್ಟೋ ಹೊರಡುವವು. ಮತ್ತು ವಿಜಯನಗರದ ಇತಿ ಹಾಸವೆಂದರೆ ಮನೆ ಮಾತಾಗಿ ಹೋಗುವುದು. ಇದಕ್ಕೆ ಉದಾಹರಣೆಯೆಂದರೆ—ಮರಾಠಿಗರು ಶಿವಾಜಿಯ ಇತಿ ಹಾಸದ ಬಗ್ಗೆ ಮಾಡಿದ ಪ್ರಯತ್ನವು. ಆ ಕಾಲದ ಕಾದಂಬರಿ ಗಳೆ, ಹಾಡು, ನಾಟಕ, ಸಿನೇಮಾ ಮುಂತಾದುವುಗಳೂ ಇವೆ. ಇದರಿಂದ ಶಿವಾಜಿಯ ಇತಿಹಾಸದ ಚಿಕ್ಕ ವೃತ್ತ ಸಂಗತಿಗಳು ಸಹ ಪ್ರತಿಯೊಬ್ಬರಿಗೆ ಅವಗತವಾಗಿ ಅವರಿಗೆ ತಮ ಮಾದರ

ಜರ ಬಗ್ಗೆ ಎಷ್ಟು ಅಭಿಮಾನವುಂಟಾಗಿರುವುದು? ರಾಯರ ಗಡ, ತಿವನೇರಿ ಮತ್ತು ಅಖಿಲ ಮಹಾರಾಷ್ಟ್ರದಲ್ಲಿ ಜರಗುವ ತಿವಜಯಂತ್ಯೋತ್ಸವಗಳೇ ಒಡೆದು ಕಾಣುವುಳ್ಳನೇ?

ಇತಿಹಾಸಕೃಟ್ಟಂತೆ, ಯೋಗ್ಯ ಕಾದಂಬರಿ, ನಾಟಕ, ತಥೆ ಕವಿತೆ ಮುಂತಾದ ತ್ರೀಷ್ಠ ಗ್ರಂಥಗಳಿಗೂ ಇನಾಮು ಇಡತಕ್ಕದ್ದು ಮತ್ತು ಇವೆಲ್ಲ ಪಾರಿತೋಷಿಕಗಳನ್ನು ಸನ್ 1986ರಲ್ಲಿ ವಿಜಯನಗರದಲ್ಲಿಯೇ ಕೊಡತಕ್ಕದ್ದು. ಮುಖ್ಯ ಸುಂಟವೆನ್ನು "ನವರಾತ್ರಿಯ ದಿಬ್ಬ"ದ ಮೇಲೆಯೇ ಏರ್ಪಡಿಸತಕ್ಕದ್ದು. ಅಲ್ಲಿನಿಂದಲೇ ರಾಯರು ಗಳು ವಲ್ಲ ಉತ್ಸವಗಳನ್ನು ನಿರೀಕ್ಷಿಸುತ್ತಿದ್ದರಂತೆ.

ವಿಜಯನಗರದಲ್ಲಿ ಈ ಸ್ಮಾರಕೋತ್ಸವದ ಸ್ಮಾರಕ ವೆಂದು ಒಂದು ಚಿಕ್ಕ ಕಟ್ಟಡ, ಕಮಾನು, ಸ್ತಂಭ ಅಥವಾ ಭೂಪುಟ್ಟೀ ರೀತಿಯಿಂದ ನೆನಪು ಉಳಿಯುವಂತೆ ಒಂದು ಕಟ್ಟಡದ ಯೋಜನೆಯಾಗಲಿಕ್ಕೆ ಬೇಕು.

ಈ ಯಾವತ್ತು ವಿಷಯಗಳ ಏರ್ಪಾಡಿಗಾಗಿ ಒಂದು ಸಮಿತಿಯು ಸ್ಥಾಪಿತವಾಗಿ—ಅಥವಾ ಈ ಮೊದಲೇ (ಸನ್ 1981ರ ನಾಡಹಬ್ಬದಲ್ಲಿ) ಧಾರವಾಡದಲ್ಲಿ ಸ್ಥಾಪಿತವಾಗಿದ್ದುದರಲ್ಲಿಯ ಮೆಂಬರರನೇಕರು ಕಾರಣಾಂತರದಿಂದ ಸ್ವಸ್ಥಾಂತರ ಹೊಂದಿದ್ದು ಅವರ ಜಾಗೆಯಲ್ಲಿ ಹೊಸ ಮೆಂಬರ ರನ್ನು ನೇಮಿಸಿ, ಮಂಡಲವೊಂದನ್ನು ಏರ್ಪಡಿಸಿ, ಅದರ ಮುಖಾಂತರವಾಗಿ ಯಾವತ್ತು ಕಾರ್ಯಕ್ರಮಗಳು ಕೊನೆ ಗಾಣಲಿಕ್ಕೆ ಬೇಕು. ಮೇಲ್ಕಾಣಿಸಿದ ಈ ಮಂಡಲದ ಪರ ವಾಗಿ ಕರ್ನಾಟಕದ ಇತಿಹಾಸ ಸಂಶೋಧನಾಚಾರ್ಯರಾದ ಶ್ರೀಮಾನ್ ರಾಜವುರೋಹಿತರಂಥವರು ಕನ್ನಡಿಗರ ಮತ್ತು ಉಳಿದವರ ಸಹಾನುಭೂತಿಯನ್ನು ದೊರಕಿಸುವುದಕ್ಕೋಸ್ಕರ ಕರ್ನಾಟಕದ ನಂದಿಗೊಂದಿಗಳಲ್ಲಿ ಸಹ ತಿರುಗ್ತೆಡಿ "ಮ್ಯೂಜಿಕ್ ಲ್ಯಾಂಟರ್ನ್"ದ ಸಹಾಯದಿಂದ ಕರ್ನಾಟಕದ ಮತ್ತು ವಿಶೇಷತಃ ವಿಜಯನಗರದ ಇತಿಹಾಸದ ಬಗ್ಗೆ ಭಾಷಣ ಮಾಡಿ ಜನರಲ್ಲಿ ನವಚೈತನ್ಯವನ್ನುಂಟುಮಾಡಬೇಕು. ಇದ ಕ್ಕಾಗಿ ಒಂದು ಉತ್ತಮ ತರಗತಿಯ 'ಮ್ಯೂಜಿಕ್ ಲ್ಯಾಂಟರ್ನ್' ವನ್ನು ಸ್ಥಾಯಿಡಗಳ ಸಹಿತವಾಗಿ ಈಗಲೇ ಕೊಳ್ಳತಕ್ಕದ್ದು.

ಈ ಕೆಲಸಗಾರರು ತಿರುಗಾಡಲಿಕ್ಕೆ ಹಣಬೇಕು, ಅವ ರಿಗೆ ವೇತನವು ಬೇಕು ವಿಜಯನಗರದ ಇತಿಹಾಸವನ್ನೊಳಗೊಂಡ ಚಿಕ್ಕ ಪುಸ್ತಕ (Pamphlets)ಗಳನ್ನು ಅಲ್ಲಲ್ಲಿ ಜನರಿಗೆ ಹಂಚಬೇಕಾಗುವುದು ಮತ್ತು ಎಷ್ಟೋ ಪ್ರಕಟ ಣೆಗಳನ್ನು ಆಗಾಗ್ಗೆ ಮುದ್ರಿಸಬೇಕಾಗುವುದು. ಮೇಲ್ಕುಂದ ವ್ಯಾಖ್ಯಾತರ ಪೂರ್ವ ಸಿದ್ಧತೆಯಗೋಸ್ಕರ ನದ್ಧಕ್ಕೆ ಉಪ ಲಬ್ಧವಿರುವ ವಿಜಯನಗರದ ಇತಿಹಾಸದ ಸಮಗ್ರ ಗ್ರಂಥ ಗಳ ಭಾಂಡಾರವೊಂದು ಧಾರವಾಡ ಇತಿಹಾಸ ಮಂಡಲ ದಲ್ಲಿ ಸ್ಥಾಪಿತವಾಗತಕ್ಕದ್ದು, ಇವೇ ಮೊದಲಾದ ಕಾರಣ ಗಳ ಬಗ್ಗೆ ಒಂದು ನಿಧಿಯ ಏರ್ಪಾಡು ಆಗಬೇಕು ಅದಕ್ಕೆ 'ವಿಜಯನಗರದ ಪರ್ಯಾಕ್ಷ ಸಾಂವತ್ಸರಿಕೋತ್ಸವ ನಿಧಿ' ಎಂದಾಗಲೀ ಬೇರೆ ಯಾವುದೇ ಹೆಸರಿನಿಂದಾಗಲೀ ಕರೆ ದರೆ ನಡೆಯಬಹುದು ಈ ಉತ್ಸವವು ಕೊನೆಗಾಣಬೇಕಾದರೆ ಈಗಿನಿಂದಲೇ ಆಗತಕ್ಕ ವ್ಯಯದ ಕಲ್ಪನೆ ಮಾಡಿದರೆ ಏನಿ ಲ್ಲೆಂದರೂ "ಒಂದು ಲಕ್ಷ ರೂಪಾಯಿಗಳು" ಬೇಕೇ ಬೇಕು ಅಂದರೇನೇ ಇತಿಹಾಸ ವ್ರಚಾರ ಕಾರ್ಯ ಯಾವತ್ತು ಸಭೆ ಸಮ್ಮೇಲನಗಳ ಯೋಗ್ಯ ವ್ಯವಸ್ಥೆ. ವಿಜಯನಗರದಲ್ಲಿಯ ಶಾಶ್ವತವಾದ ಸ್ಮಾರಕ, ಬಹುಮಾನಗಳ ಬಗ್ಗೆ ಹಣ, ಗ್ರಂಥಭಾಂಡಾರ, ಪ್ರಕಟಣಾ ಕಾರ್ಯ ಮುಂತಾದ ಸಹಸ್ರ ಮುಖ ವ್ಯಯತ್ಯಗಳು ಏನೂ ತೊಂದರೆಯಿಲ್ಲದೆ ಸಾಗು ವುವು ಈಗಿದ್ದ ಧಾರವಾಡದ ಕರ್ನಾಟಕ ಇತಿಹಾಸ ಸಂಶೋಧಕ ಮಂಡಲಕ್ಕೆ ತನ್ನ ಸ್ವತಂತ್ರ ಕಟ್ಟಡವಿಲ್ಲ, ನಧಿಯಂತೂ ಇಲ್ಲವೇ ಇಲ್ಲ. ಮತ್ತು ಸಂಶೋಧನ ಕಾರ್ಯಕ್ಕೆ ತಗಲುವ ಗ್ರಂಥಭಾಂಡಾರ, ಪುರಾತನ ವಸ್ತು ಸಂಗ್ರಹ ಮುಂತಾದ ಉಪಕರಣಗಳ ಸಂಖ್ಯೆಯು ತೀರ ಕಡಿಮೆಯಿರುವುದು. (ಮಂಡಲದ ವರದಿ ೧೯೩೧ ಪುಟ ೧೭-೧೮-೧೯) ಸರ್ವಾಂಗಸುಂದರವಾದ ಇತಿಹಾಸ ಮಂಡ ಲದ ಹೊರ್ತು ಈ ಸ್ಮಾರಕೋತ್ಸವವು ಯಥಾಯೋಗ್ಯವಾಗಿ ಉಡೇರಲಾರದು. ಆದ್ದರಿಂದ ನವಿಷ್ಕಿ ಮಂಡಲವನ್ನು ದೃಢ ನಡಿಸಿ ಅದರ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸಲಿಕ್ಕೆ ಬೇಕು. ಒಂದು ಲಕ್ಷ ರೂಪಾಯಿಗಳ ಹೊರ್ತು ಈ ಎಲ್ಲ ಕಾರ್ಯವಾಗಲ್ಕಾರದು

ಆದರೆ ಕರ್ನಾಟಕವೇನು ಸಣ್ಣ ಪ್ರಾಂತವಲ್ಲ. ಮೈಸೂರು, ಹೈದರಾಬಾದ, ಜಮಖಂಡಿ, ಮುಧೋಳ, ರಾಮದುರ್ಗ, ತೊರ್ಗಲ್ಲ, ಸವಣೂರ, ಜತ್ತ, ಅಕ್ಕಲ ಕೋಟ, ಕುರಂದವಾಡ, ಸೊಂಡೂರ, ಡಳಳಾವುರ ಮತ್ತು ಕೊಲ್ಲಾಪುರ, ಸಾಂಗಲಿ, ಮಿರಜ, ಜಿಂಧ ಇವುಗಳ ಕೆಲ ಭಾಗಗಳು—ಇವೇ ಮೊದಲಾದ ಸಂಸ್ಥಾನಗಳಿಕ್ಕೂ ಸಕ್ಕಕ್ಕೆ ಬರಿಸಿಟ್ಟು ಲೆಕ್ಕ ಮಾಡಿದರೂ ಬ್ರಿಟಿಷ್ ಕರ್ನಾಟಕದೊಳಗಿನ ೮ ಜಿಲ್ಲೆ—ಈ ತಾಲ್ಲೂಕುಗಳಲ್ಲಿ ೬೭ ಪಟ್ಟಣಗಳೂ, ೭೭೪೦ ಹಳ್ಳಿಗಳೂ ಸರಾಸರಿ ೬೫,೦೦,೦೦೦ ಜನ ವಸತಿಯೂ ಉಂಟು. ಸ್ಥಳಕಾರ್ ವಸೂಲಿಯು ಸರಾಸರಿ ರೂಪಾಯಿ ೨,೫೬,೯೧,೩೮೫ ಉಂಟು. ಮತ್ತು ಮೈಸೂರ ಸಂಸ್ಥಾನದ ಉತ್ಪನ್ನವೇ ಸರಾಸರಿ ರೂಪಾಯಿ ೩೫೯,೧೦೦ ಉಂಟು. ಅಂದರೆ ಬ್ರಿಟಿಷ ಕರ್ನಾಟಕಕ್ಕಿಂತಲೂ ಹೆಚ್ಚಿಗೆ ಇರುತ್ತದೆ. ಆದ್ದರಿಂದ ವಿಚಾರ ಮಾಡಿ ನೋಡಲು ಈ ಒಂದು ಲಕ್ಷ ರೂಪಾಯಿಗಳೊಳಗಿನ ಅರ್ಧ ಹಣವನ್ನು ಮೇಲೆ ಬರೆದ ಯಾವತ್ತು ಸಂಸ್ಥಾನದವರು ಕೂಡಿಸಬಹುದು. ಮತ್ತು ಇನ್ನುಳಿದ ಅರ್ಧ ಹಣವನ್ನು ಅಂದರೆ ೫೦ ಸಾವಿರ ರೂಪಾ ಯಿಗಳನ್ನು ಬ್ರಿಟಿಷ್ ಕರ್ನಾಟಕಸ್ಥರು ಕೂಡಬೇಕು. ಲೆಕ್ಕದ ಮೇಲಿಂದ ಸರಾಸರಿ ತೆಗೆಯಲಾಗಿ ಕೆಳಗೆ ಕಾಣಿಸಿದಂತೆ ಹಣ ಕೊಡಲಿಕ್ಕೆ ಏನೂ ಸಂದೇಹವಿಲ್ಲೆಂದು ತೋರುತ್ತದೆ

ನಂ.	ಜಿಲ್ಲೆಗಳು	ಕೂಡಿಸತಕ್ಕ ರೂ (ಸಾವಿರದಲ್ಲಿ)
೧	ಧಾರವಾಡ	೧೦
೨	ಬೆಳಗಾವಿ	೮
೩	ವಿಜಾಪುರ	೬
೪	ಉತ್ತರ ಕನ್ನಡ	೨
೫	ದಕ್ಷಿಣ ಕನ್ನಡ	೧೦
೬	ಬಳ್ಳಾರಿ	೮
೭	ಕೊಡಗು	೫॥
೮	ನೀಲಗಿರಿ	೫॥
	ಅಂತೂ ೮೪ ಸಾವಿರ	

ನಂ.	ತಾಲೂಕುಗಳು	ಕೂಡಿಸತಕ್ಕ ರೂ
೧	ಮಡಕಶಿರ (ಅನಂತಪುರ ಜಿಲ್ಲೆ	೨೦೦
೨	ಹೊಸೂರು (ಸೇಲಂ ಜಿಲ್ಲೆ)	೨೦೦
೩	ಕೃಷ್ಣಗಿರಿ (ಸೇಲಂ ಜಿಲ್ಲೆ)	೨೦೦
೪	ಕೊಳ್ಳೆಗಲ್ಲ (ಕೊಯಂಬತ್ತೂರು ಜಿಲ್ಲೆ)	೨೦೦
೫	ಸೊಲ್ಲಾಪುರ	೨೦೦
	ಅಂತೂ ಒಂದು ಸಾವಿರ	
	ಒಟ್ಟು ೫೦ ಸಾವಿರ	

ಮತ್ತು ಕನ್ನಡ ಸಂಸ್ಥಾನಗಳ ಕಡೆಯಿಂದ ಕೂಡತಕ್ಕದ್ದು ೫೦ ಸಾವಿರ ರೂಪಾಯಿಗಳು ಅಂತು ಒಂದು ಲಕ್ಷ ರೂಪಾಯಿಗಳು

ಈ ವಿಷಯವಾಗಿ ನಾಲ್ಕಾಣೆ, ಎಂಟಾಣೆ, ಒಂದು ರೂಪಾಯಿಗಳ ಟಿಕೇಟು ಮುದ್ರಿಸಿ, ಶಾಲೆ, ಕಾಲೇಜುಗಳ ವಿದ್ಯಾರ್ಥಿಗಳಿಗೆ ಕೊಟ್ಟು ಹಣ ತೆಗೆದುಕೊಳ್ಳತಕ್ಕದ್ದು ನಮ್ಮ ಧಾರವಾಡದ ಕರ್ನಾಟಕ ಆರ್ಟ್ಸ್ ಕಾಲೇಜದಲ್ಲಿಯೇ ವಿದ್ಯಾರ್ಥಿಗಳೂ, ಶಿಕ್ಷಕ ವರ್ಗವೂ ಕೂಡಿ ಏನಿಲ್ಲೆಂದರೂ ೧ ಸಾವಿರ ರೂಪಾಯಿ ಕೂಡಿಸಿ ಕೊಡಬಹುದು ಅದ ರಂತೆಯೇ ಕೊಲ್ಲಾಪುರ, ಬೆಳಗಾವಿ, ಪುಣೆ, ಮುಂಬಾಯಿ, ನುದ್ರಾಸ್, ಹೈದರಾಬಾದ, ಬೆಂಗಳೂರು, ಮೈಸೂರ ಮುಂತಾದ ಸ್ಥಳಗಳಲ್ಲಿಯ ಕನ್ನಡ ವಿದ್ಯಾರ್ಥಿಗಳೂ ಶಿಕ್ಷಕರೂ ಕೊಟ್ಟೇಕೊಡುವರು ಎಲ್ಲ ಕಡೆಯಲ್ಲಿಯ ಹೈಸ್ಕೂಲ ಮತ್ತು ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳೂ ಅಧ್ಯಾಪಕರೂ ಈ ನಿಧಿಗೆ ಒಳ್ಳೇ ಉತ್ಸಾಹದಿಂದ ಸಹಾಯ ಮಾಡುವರೆಂದು ನನ್ನ ನಂಬಿಗೆಯಿದೆ ಅಖಿಲ ಕರ್ನಾಟಕದೊಳಗಿನ ಪ್ರತಿ ಯೊಂದು ಪ್ರಾಥಮಿಕ ಶಾಲೆಯು ೧೦ ರೂಪಾಯಿಗಳಂತೆ ಈ ನಿಧಿಗೆ ಸಹಾಯ ಮಾಡುವುದು ತೀರ ಸಹಜವದೆ ಆ ಶಾಲೆಯು ಕನ್ನಡವೇ ಇರಲಿ ಅಥವಾ ಮತ್ತಾವ ಭಾಷೆಯೆದೇ ಇರಲಿ ಕನ್ನಡಮಾತೆಯು ಉಪ್ಪನ್ನುಣ್ಣುತ್ತಿರುವ ಪ್ರತಿಯೊಬ್ಬ ವಕೀಲ, ಡಾಕ್ಟರ, ವ್ಯಾಪಾರಸ್ಥ ಅದರಲ್ಲಿ ಸರಕಾರೀ ಅಧಿಕಾರಿಸ್ಥರು ತಲೆಗೆ ಏನಿಲ್ಲೆಂದರೂ ಹತ್ತು ರೂಪಾಯಿಗಳಂತೆ ಹಣ ಕೊಟ್ಟು ಈ ಮಹಾತ್ಕಾರ್ಯಕ್ಕೆ ನೆರವಾದ ಪುಣ್ಯ ಕಟ್ಟಿಕೊಳ್ಳಬಹುದು ಕರ್ನಾಟಕದ ಪ್ರತಿ ಯೊಂದು ನಾಟಕ, ಸಿನೇಮಾ ಕಂಪೆನಿಗಳು ತಮ್ಮ ಒಂದೊ ದಿನದ ಆದಾಯವನ್ನಂತೂ ಆನಂದದಿಂದ ಕೊಡಬಹುದು ಈ ಮೇಲೆ ವಿವರಿಸಿದ ಸದ್ಗೃಹಸ್ಥರು ವಿದ್ಯಾರ್ಥಿಗಳು ಮತ್ತು ಸಂಸ್ಥೆಗಳು ತಮ್ಮ ಶಕ್ತಿ ವಿೂರಿ ಈ ನಿಧಿಗೂ ಮತ್ತು ಸಾಮ್ರಾಜ್ಯೋತ್ಸವದ ಕಾರ್ಯಕ್ಕೂ ನೆರವಾಗಿ ತಮ್ಮ ಕರ್ತವ್ಯ ಮಾತ್ರವನ್ನು ಮಾಡಬೇಕು.

ಈ ಹಣದ ವ್ಯವಸ್ಥೆಗಾಗಿ ಮೇಲ್ಕಾಣಿಸಿದ ೪ ಜಿಲ್ಲೆಗಳು ೬ ತಾಲೂಕುಗಳು ಮತ್ತು ಸಂಸ್ಥಾನಗಳು. ಇವೆಲ್ಲ ಕಡೆ ಯಲ್ಲಿ "ವಿಜಯನಗರದ ಸ್ಮಾರಕ ಮಂಡಲ"ದ ಒಂದೊಂದು

ಶಾಖೆಯು ಸ್ಥಾಪಿತವಾಗಿ ಅದರ ಮುಖಾಂತರ ಪ್ರಚಾರದ ಮತ್ತು ಹಣದ ವ್ಯವಸ್ಥೆಯಾಗಬೇಕು. ಇನ್ನು ದಿನಗಳು ಬಹಳ ಉಳಿದಿರುವುದಿಲ್ಲವಾದ್ದರಿಂದ ಈ ಶಾಖಾಮಂಡಳ ಗಳು ಸಹ ತೀವ್ರವೇ ಎಲ್ಲ ಕಡೆಯಲ್ಲಿ ಸ್ಥಾಪಿತವಾದರೆ ಕಾರ್ಯವು ಭರದಿಂದ ಸಾಗುವುದು. ಇದಕ್ಕಾಗಿ ಆಯಾ ಊರುಗಳ ಕರ್ನಾಟಕಾಭಿಮಾನಿಗಳು ಟೊಂಕ ಕಟ್ಟಿದ ಹೊರ್ತು ಗತ್ಯಂತರವಿಲ್ಲ ಮತ್ತು ದಿವಾನ್ ಬಹದ್ದೂರ ಕಂಬಳಿ, ರಾ/ಸಾ/ ಹಳಕಟ್ಟಿ, ಶ್ರೀಮರ್ನಾರಾದ ರಾಜಪುರೋ ಹಿತ, ತಾತಾಚಾರ್ಯ ಕರ್ಮ, ಬಿ ಎನ್. ಶ್ರೀಕಂಠಯ್ಯ ನವರು, ರಾಮರಾಯರು ಮುಂತಾದ ಅನೇಕ ಮಹನೀ ಯರು ಮನಃಪೂರ್ವಕವಾಗಿ ಆಶೀರ್ವದಿಸಿದಲ್ಲಿ ಈ ಮಹ ತ್ಕಾರ್ಯವು ಏನೂ ತೊಂದರೆಯಿಲ್ಲದೆ ಕೊನೆಗಾಣುವುದು.

ಮುಖ್ಯವಾಗಿ ಹಣವು ಕೂಡಲೇ ಬೇಕು ಮತ್ತು ಅದಕ್ಕಾಗಿ ಈಗಲೇ ಒಂದು ಮಂಡಲವು ಸ್ಥಾವನೆಯಾಗ ಲಿಕ್ಕೆ ಬೇಕು ಅದರ ಮುಖಾಂತರವಾಗಿ ಒಂದು ಕೇಟೆ ರಯು ತೆರೆಯಲ್ಪಟ್ಟು ಈ ಕಾರ್ಯಕ್ಕೆ ವ್ಯಾರಂಭವಾಗ ಬೇಕು ಯಾವ ಕಾರಣದಿಂದಲೂ ಮಾತ್ರ ಮಂದೆ ಹಾಕ ತಕ್ಕದ್ದಲ್ಲ. ಈ ಕೆಲಸವನ್ನು ನೆರವೇರಿಸಲಿಕ್ಕೆ ನಮ್ಮಲ್ಲೇನು ಉತ್ಸಾಹೀ ತರುಣರ ಕೊರತೆಯಿಲ್ಲ ಇಸವಿ ಸನ್ 1981 ರಲ್ಲಿ ಧಾರವಾಡದಲ್ಲಿ ಜರಗಿದ ನಾಡಹಬ್ಬಕ್ಕಾಗಿ ಸರಾಸರಿ 18 ನೂರು ರೂಪಾಯಿಗಳೆನ್ನು ಅಲ್ಪಾವಧಿಯಲ್ಲಿ ಕೂಡಿಸಿದ ಸ್ವಯಂಸೇವಕರ ಬಂಧುವರ್ಗವು ಕರ್ನಾಟಕದಲ್ಲೆಲ್ಲ ಕಡೆಗೂ ಇರುವುದು ಅಂದಮೇಲೆ ವಿಜಯನಗರದ ಸ್ಮಾರಕೋತ್ಸವದ ನಿಧಿಗಾಗಿ ಅಖಿಲ ಕರ್ನಾಟಕದಲ್ಲಿರುವ ನಮ್ಮ ತರುಣರು ಅವಿಶ್ರಾಂತ ಶ್ರಮವಟ್ಟು ಈ ಒಂದು ಲಕ್ಷ ರೂಪಾಯಿ ಗಳನ್ನು ಹಾ ಹಾ ಎಂಬುವಷ್ಟರಲ್ಲಿ ಕೂಡಿಸಿದರೆ ಶ್ರೇಯಸ್ಸನ್ನು ವಡೆಯಬಹುದು

ಈ ವರ್ಷದ (1988) ನಾಡಹಬ್ಬದಷ್ಟೊತ್ತಿಗಾದರೂ ಈ ನನ್ನ ಸೂಚನೆಯ ಮೇರೆಗೆ ಒಂದು ಮಂಡಲವೂ ನುಕ್ತು ಅಖಂಡ ಕರ್ನಾಟಕದಲ್ಲಿ ಅದರ ಶಾಖೆಗಳೂ ಸ್ಥಾಪಿತವಾಗಿ ಹಣ ಕೂಡಿಸುವ ಕೆಲಸವು ಭರದಿಂದ ಸಾಗಬೇಕು ಮತ್ತು ಆ ಹಬ್ಬದಲ್ಲಿ ಎಲ್ಲ ತಾಲೂಕು, ಜಿಲ್ಲೆ, ಸಂಸ್ಥಾನಗಳ ಪ್ರತಿ ನಿಧಿಗಳು ಕರ್ನಾಟಕದ ಕೇಂದ್ರವಾದ ಧಾರವಾಡದಲ್ಲಿ ಕಲೆತು ಇತಿಹಾಸ, ಕಾದಂಬರಿ, ನಾಟಕ, ಕವಿತೆ, ಲಾವಣಿ ಮುಂತಾದ ವಿಧಾನಗಳಿಗಾಗಿ ಪಾರಿತೋಷಿಕಗಳ ಸಂಖ್ಯೆ, ನಿಯಮ ಮುಂತಾದವುಗಳನ್ನು ಗೊತ್ತುಪಡಿಸಬೇಕು ಮುಂ ದಿನ ಕಾರ್ಯಕ್ಷೇತ್ರದ ಬಗ್ಗೆ ನಿರ್ಧರಿಸಿ ಪ್ರಸಿದ್ಧ ಪಡಿಸಬೇಕು. ಅಂದರೇನೇ ಸನ್ 1986ರೊಳಗಾಗಿ ಮಹತ್ವದ ಗ್ರಂಥಗಳು ರಚಿಸಲ್ಪಡಲಿಕ್ಕೆ ಅನುಕೂಲವಾಗುವುದು ಮತ್ತು ಆ ವರ್ಷ ವಿಜಯನಗರದಲ್ಲಿ ಕೂಡಬಹುದಾದ ಎಲ್ಲ ಸಭೆ, ಸಮ್ಮೇ ಲನ ಪ್ರದರ್ಶನ, ಆಟ, ನಾಟಕ, ಸ್ಪರ್ಧೆಗಳಿಗಾಗಿ ಅಲ್ಲಿಯೇ ಜಾಗ ಮುಂತಾದ ಸೌಕರ್ಯಕ್ಕಾಗಿ ಮೇಲಧಿಕಾರಿಗಳಿಂದ ಅಪ್ಪಣೆಯನ್ನು ಪಡೆಯಲ್ಕನುಕೂಲವಾಗುವುದು

ಮಹನೀಯರೇ, ಈ ವಿಚಾರವಾಗಿ ನಾವು ಸನ್ 1981ನೆಯ ಇಸವಿಯ ಅಗಸ್ಟ ತಿಂಗಳಲ್ಲಿ "ಕರ್ನಾಟಕ ಧುರೀಣ" "ಕರ್ನಾಟಕ ವೈಭವ" 'Hindu' ಮುಂತಾದ ನೈತ್ರ ಪತ್ರಿಕೆಗಳಲ್ಲಿ ಆ ಲೇಖನವನ್ನು ಪ್ರಸಿದ್ಧಿಸಿದ್ದು ಆ ಬಗ್ಗೆ "ಕರ್ಮವೀರ" ಮುಂತಾದ ಪತ್ರಗಳಲ್ಲಿ ಅನುಕೂಲ ಟಿಪ್ಪಣಿ ಗಳು ಬಂದದ್ದು ತಮ್ಮೆಲ್ಲರಿಗೆ ಗೊತ್ತೇ ಇದೆ. ಆಮೇಲೆ ಅದೇ ವರ್ಷ ಧಾರವಾಡದಲ್ಲಿ ಜರುಗಿದ "ನಾಡಹಬ್ಬ" ದಲ್ಲಿ ಈ ವಿಷಯ ವಿಚಾರವಾಗಿ ಒಂದು ಮಂಡಲವು ಸ್ಥಾಪಿತ ವಾಗಿ 'ಒಂದು ಲಕ್ಷ ರೂಪಾಯಿ'ಗಳನ್ನು ಕೂಡಿಸುವಂತೆ ಗೊತ್ತುವಳಿ ಸಹ ಆದದ್ದು ಕಮ್ಮಿ ನೆನಪಿನಲ್ಲಿರಬಹುದು. ಆದರೆ ಯಾವುದೋ ಕಾರಣದಿಂದ ಆ ಕಾರ್ಯವು ಸಾಗ ಬೇಕಾದಷ್ಟು ಭರದಿಂದ ಸಾಗಲಿಲ್ಲ. ಕಾರ್ಯವು ಮಾತ್ರ ಅತಿ ಸುಪತ್ಕಕ್ಕದ್ದು. ಕಾರಣ, ಕರ್ನಾಟಕದ ಅಭಿಮಾನಿ ಗಳಾದ ತಾವುಗಳೆಲ್ಲರೂ ಈ ಬಗ್ಗೆ ವಿಚಾರ ಮಾಡಿ; ಯೋಗ್ಯ ನೆನಿಸಿದಲ್ಲಿ ಇನ್ನಾದರೂ ವಿಲಂಬ ಮಾಡದೆ ಏಕಮನಸ್ಸಿನಿಂದ ಟೊಂಕ ಕಟ್ಟಿ ನಿಂತರೆ ಏನೂ ಆಯಾಸವಿಲ್ಲದೆ ಎಲ್ಲ ಕೆಲಸವೂ ಸುವ್ಯವಸ್ಥತೆಯಿಂದ ಪಾರುಗಾಣುವದರಲ್ಲಿ ಸಂದೇಹವಿಲ್ಲ. ಅದುಕಾರಣ 1981ರಲ್ಲಿ ತನ್ನ ಮುಂದಿಟ್ಟ ಮತ್ತು ತಾವು ಗಳು ಮನ್ನಸಿಯಸ್ಸಿನ ವಿಚಾರಗಳ ಬಗ್ಗೆ ಪುನಃ ನೆನಪು ಕೊಟ್ಟಿರುವ,

ತಮ್ಮೆಲ್ಲರ ವಿಧೇಯನಾದ,

ಪ್ರಲ್ಹಾದ ನಾರಾಯಣ ಜೆಂಗೇರಿ.

(ಕೋ ಮು)

ವರಾಹಾವತಾರ.

(ಚಕ್ರಕೊಂಡು ರೂಪಕ)

ಮೂರನೆಯ ಕಲಾಗುಳ ಕಂಡಿದ ಒಬ್ಬ ಸಮಸ್ಯೆಂದ

(ಅಂತರ್ಧಾನದಿಂದ ಪಿಶಾಚಿ, ಆಮೇಲಾ, ಚೇಷ್ಟಾ, ಮೊದಲಾ ಎಂಬ ನಾಲ್ಕು ಕೆಲ್ಲಿಕಾರರು ಧನುಷ್ಟಂಕಾರ ಮಾಡುವುದು).

(ತೆರೆಯಲ್ಪಡುವಾಗ ಪ್ರಾಣಿಗಳು)

ಎಲ್ಲರೂ:–ಏಳಿರಿ ಶುಕ್ರವಾರವಾಯಿತು. ಯೋಗ್ಯ ಕಾಲದಲ್ಲಿ ತ್ರಿಲೋಕ ಸಂಚಾರಿಗಳಾಗಿರುವ ನಾರದ ಮಹರ್ಷಿಗಳೇ ಇತ್ತ ಭಗವನ್ನಾಮಸ್ಮರಣೆ ಮಾಡುತ್ತ ಬರುವಂತಿದೆ. ಅವರನ್ನು ವಿಚಾರಿಸಿ ತಿಳಿದು ಕೊಳ್ಳೋಣ.

(ನಾಮ ಸಂಕೀರ್ತನೆ ಮಾಡುತ್ತ ನಾರದನ ಪ್ರವೇಶ).

ನಾರದಃ–ನಕ್ಷತ್ರ ರನುಣಿಯರೆ,–ಇದು ಭಾದ್ರಪದದ ಶುಕ್ಲ ಪಕ್ಷದಲ್ಲಿ ತೃತೀಯೆ. ನಿನ್ನಿಗೆ ತಾನೆ ಚಂದ್ರದರ್ಶನವಾಗಿದೆ. ಈ ಹೊತ್ತು ನೀವು ಕೃಷ್ಣಪಕ್ಷದ ಕ್ಷೀಣತೆಯನ್ನು ಕಳೆದು ತೇಜೋ ವೃದ್ಧಿಯನ್ನೈದುತ್ತಿರುವ ನಿನ್ನ ಪ್ರಾಣೇಶ್ವರನಾದ ಚಂದ್ರನನ್ನು ಓಲಗಿಸುವ ಬದಲಾಗಿ ಇಲ್ಲೇನು ಮಾಡುತ್ತಿರುವಿರಿ?

೧ನೆ ನಃ–ನಾವು ತುಂಬಾ ಭಯಭೀತರಾಗಿ ಪ್ರಾಣೇಶ್ವರನನ್ನು ಕಾಣದೆ, ಸ್ಥಾನಕಾಲವೊಂದೂ ಅರಿಯದೆ, ಆಶ್ರಯಕ್ಕಾಗಿ ನಮ್ಮ ಚಿರಕಾಲದ ಸಹಚರಿಯಾದ ಭಾರತಿಯ ಕಡೆಗೆ ಧಾವಿಸಿ ಬಂದು ತಮ್ಮಂತೆ, ಭಗವನ್ನಾಮ ಸ್ಮರಣೆ ಮಾಡಿ, ಅದರ ಪ್ರಭಾವದಿಂದ ಕೊಂಚ ಶಾಂತಿ ಹೊಂದಿದೆವು.

ನಾರದಃ–ಇದು ತೀರ ವಿಚಿತ್ರವಾಗಿದೆ.

೩ನೆ ನಃ–ಇದರಲ್ಲಿ ವಿಚಿತ್ರವೇನು? ಅತ್ಯದ್ಭುತವಾದದ್ದು ಬೇರೆಯೇ ಇದೆ. ಅಂತರಿಕ್ಷದಲ್ಲೆಲ್ಲ ಸುಡಿಲ್ಮಿಂಚು ಕಾಲಮೇಘದ ಅಂಧಕಾರ. ದಾರಿ ಕೆಟ್ಟು ಧೈರ್ಯ ಕುಂದಿದ ಬಳಿಕ ನಾವೇನು ಮಾಡಬಲ್ಲೆವು?

ನಾರದಃ–ಭಾರತಿಗೆ ಚಿರಕಾಲವೂ ಸಹಚರಿಯಾಗಿ ನೀವಿದ್ದುದು ನಿಷ್ಫಲವಾಯಿತು. ಅವಳಾದರೂ ದೂರದ ಪತಿಯನ್ನು ತನ್ನ ಕಡೆಗೆ ಕರೆದುಕೊಂಡಳು. ನೀವು ಪತಿಯನ್ನೇ ಬಿಟ್ಟು ಬಂದಿರಿ.

೫ನೆ ನಃ–ನಾವೇನು ಪತಿ ಪ್ರೇಮದವರಲ್ಲವೆ? ನಾವೂ ಭಾರತಿಯಂತೆ ಏತಕ್ಕೆ ಕೂಗಿಡಬೇಕು?

ನಾರದಃ–ಆದರೆ, ನಿಮ್ಮ ಪ್ರಾಣೇಶ್ವರನು ೭೭ ಮಂದಿ ಸತಿಯರನ್ನು ಹೇಗೆ ಸಮಾಧಾನ ಪಡಿಸುವನು? ಮಹಾವಿಷ್ಣುವಿಗಾದರೊ ಇಬ್ಬರೆ,–ಅಲ್ಲಿ ಶ್ರೀದೇವಿ, ಇಲ್ಲಿ ಭೂದೇವಿ. ಇವಳು ಕೂಗಿದರೆ ಇತ್ತ ಬರುವನು; ಅವಳು ಕರೆಯದೆ ಅಲ್ಲೇ ಇರುವನು.

೨ನೆ ನಃ–ಇರಲಿ, ಭಾರತಿಯಾದರೂ ಏತಕ್ಕೆ ಕೂಗಿಕೊಂಡಳು? ಅಂತರಿಕ್ಷದಲ್ಲಾದ ಭಯಂಕರ ಅದ್ಭುತವನ್ನು ಕಂಡು ನಮ್ಮಂತೆಯೇ ಅವಳೂ ಬೆದರಿ ಕೂಗಿದಳಲ್ಲವೆ?

ನಾರದಃ–ಅವಳು ನಿಮ್ಮಂತೆ ಭಯಂಕರ ಅದ್ಭುತವನ್ನು ಕಂಡು ಬೆದರಿದವಳಲ್ಲ ಮಾತ್ರವೆ? ಅನುಭವಿಸಿ ನೊರೆಯಿಟ್ಟವಳು.?

೪ನೆ ನಃ–ಹಾಗೆಂದರೆ, ಭಾರತಿಗೆ ಇಂದು ಅಂಥ ವಿಪತ್ತೇನು ಸಂಭವಿಸಿತು?

ನಾರದಃ–ಕೇಳಿರಿ. ಆ ವಿಪತ್ತೇ ಇಂದಿನ ಚಳವಳಿಕ್ಕೆ ಕಾರಣವು. ಭಾರತಿಯನ್ನು ಕಶ್ಯಪ ಪುತ್ರನಾದ ಹಿರಣ್ಯಾಕ್ಷನೆಂಬ ದೈತ್ಯನು ಬಲತ್ಕಾರದಿಂದ ಸೆಳೆದುಕೊಂಡು ಪಾತಾಳಕ್ಕೊಯ್ದನೆನು.

ಎಲ್ಲರೂ–ಅಹಹ! ಅದೇಕೆ?

ನಾರದಃ–ಪ್ರಪಂಚದಲ್ಲಿ ಯಾವ ಪುರುಷನೇ ಇರಲಿ, ಅವನ ಯಾವ ಬಂಧುಗಳನ್ನು ನೋಯಿಸಿದರೂ ಅಷ್ಟು ಮರುಗುವುದಿಲ್ಲ. ಬೇಕಾದರೆ ಅವನ ಹೆತ್ತ ತಾಯಿಯನ್ನೆ ಜರೆದಾಡಿದರೂ ಅವನು ಅಷ್ಟು ಚಡವಡಿಸುವುದಿಲ್ಲ. ಆದರೆ ಕೈ ಹಿಡಿದ ಪತ್ನಿಯನ್ನು ಎಳ್ಳಷ್ಟು ಅವಮಾನಿಸಿದರೆ, ಅವನು ತಕ್ಷಣದಲ್ಲಿಯೆ ಹಿಮಾಲಯದಷ್ಟು ಗಾತ್ರವಾದ ಸಿಟ್ಟನ್ನು ತಾಳಿ, ಅವಳ ಅಭಿಮಾನ ಕಾಯಲು ಮುಂದೋಡಿ ಬರುವನು.

೧ನೆ ನಃ–ಹಿರಣ್ಯಾಕ್ಷನು ಭಾರತಿಯ ಮಾನಭಂಗ ಮಾಡಿ ಮಹಾವಿಷ್ಣುವನ್ನು ಕರಳಿಸಿದನೇಕೆ?

ನಾರದಃ–ದೈತ್ಯನಾದ ಅವನು ತನ್ನ ಪಶುಬಲದ ಮದಾಂಧತೆಯಿಂದ ಕಾನು ಸಕಲಲೋಕಗಳಿಗೂ ಏಕಚ್ಛತ್ರಾಧಿಪತಿಯಾಗಿ ಸಾಮ್ರಾಜ್ಯವನ್ನಾಳಬೇಕೆಂದು ಬಗೆದನು. ಆದರೆ, ಭಾರತಿಯ ಆತ್ಮಬಲ ಸ್ವರೂಪವಾದ ಮಹಾವಿಷ್ಣುವನ್ನು ಕೊಲ್ಲದೆ ಅವನು ಏಕಚ್ಛತ್ರಾಧಿಪತ್ಯವಾಗುವುದು ಹೇಗೆ? ಆದುದರಿಂದ ಈ ಪಶುಬಲವು ಭಾರತಿಯ ಆತ್ಮಬಲವನ್ನು ಕರಳಿಸಿ ತನಗೆ ದುರು ಬೀಳುವ ಹಾಗೆ ಮಾಡಲು ಭಾರತಿಯ ಮಾನ ಭಂಗವನ್ನೆ ನೂಡಲೆಳಸಿದನು.

೫ನೆ ನಃ ತನ್ನ ಅಧಿಕಾರವು ನಡೆಯುತ್ತದೆಂದು ಸಾಧ್ವಿಯಾದ ಭಾರತಿಯ ಮೇಲೆ ಈ ಪಶುವಿನ ಹಿಂಸೆ ನಡೆಯಿತೆ? ಅವಳ ಪಾತಿವ್ರತ್ಯಪ್ರಭಾವದಿಂದ ಅವನು ಶಾಪಕ್ಕೀಡಾಗಲಿಲ್ಲವೆ?

ನಾರದಃ–ಕನ್ನಪ್ಪು ನೇಗಿಲಿಂದ ಗಾಯವಡಿಸಿದವರಿಗಾದರೂ ಬಟ್ಟಲು ತುಂಬ ಅಕ್ಷಯವಾದ ಅನ್ನವನ್ನೊದಗಿಸುವ ಸಹನಾಶೀಲೆಯಾದ ಭಾರತಿಯು, ಹಿಂಸೆಗೆ ಪ್ರತಿಹಿಂಸೆ ನೂಡುವಳೆ? ಅವಳ ಸಹನೆಯೆ ಎಂಥ ಕ್ರೋಧವನ್ನೂ ಜಯಿಸುವುದು. ಪೆಟ್ಟಿಗೆ ಪೆಟ್ಟು ಕೊಡುವುದು ರಾಕ್ಷಸ ಸ್ವಭಾವ; ಪೆಟ್ಟಿಗೆ ಮೃ ಬಿಟ್ಟುಕೊಡುವುದು ಭಾರತಿಯ ಗೌರವದ ಗುಟ್ಟು.

೪ನೆ ನಃ–ಆದರೆ ಅವಳ ಅಭಿಮಾನವು ಅದರಿಂದ ರಕ್ಷಣೆ ಹೊಂದಿತೆ?

ನಾರದಃ–ವೇದಗಳಿಗೂ ಅಗೋಚರನಾದ ಮಹಾವಿಷ್ಣುವೇ ಇಂದು ಅಹಿಂಸಾಪರಳಾದ ಅವಳನ್ನು ಅಪೂರ್ವವಾದ ವೈಭವದಿಂದ ಸಪ್ತಾಸಿಸಿರುವನೆಂಬುದನ್ನು ಬ್ರಹ್ಮಾಂಡಕ್ಕೆ ಸಾರಿದ ದೇವದುಂದುಭಿಗಳೇ ಸಾಕ್ಷಿಯಾಗಿಲ್ಲವೆ?

೧ನೇ ನಃ–ಅಂಥ ಅಪೂರ್ವ ವೈಭವವು ಯಾವುದು?

ನಾರದಃ–ಪಶುಬಲದ ಪರಾಜಯ! ಆತ್ಮಬಲ ವಿಜಯ! ಹಿಂಸೆಯ ಪರಾಭವ; ಅಹಿಂಸೆಯ ದಿಗ್ವಿಜಯ! ಕ್ರೋಧದ ನಾಶ, ಪ್ರೇಮದ ವೈಭವ–ಇದೋ ಇಂದಿನ ಭಾರತಿಯನ್ನು ನೋಡಿರಿ. ಕೊಂಡಾಡಿರಿ! ಆ ದಿವ್ಯ ತೇಜೋಮೌರ್ತಿಯ ಆ ಆತ್ಮಬಲದ, ಅಹಿಂಸೆಯ, ಪ್ರಸಾದವನ್ನು ಪಡೆಯಿರಿ!

[ಗಾಯನ—ಅಂತ್ಯದಲ್ಲಿ ಭಾರತಿಯ ಆವಿರ್ಭಾವ]

ಭಾರತಿಃ–ಮಹರ್ಷಿಗಳೆ, ಸಖಿಗಳೆ, ವಂದನವು!

೧ನೆ ನಃ–ಭಾರತಿ! ನೀನು ಪ್ರಮಾದದಲ್ಲಿ ಬಿದ್ದು ನರಳಿದೆಯೆಂದು ಕೇಳಿರುವೆವು. ನಿನ್ನ ಸಹಚರಿಯರ ಸಹಾನುಭೂತಿಯನ್ನು ಸ್ವೀಕರಿಸಬೇಕು. ಅಂಥ ಪ್ರಮಾದವು ಹೇಗೆ ಉಂಟಾಯಿತು? ನಿನ್ನ ಪ್ರಿಯತಮನಿಂದ ಇಂದು ಅನುಗ್ರಹಕ್ಕೆ ಹೇಗೆ ಪಾತ್ರಳಾದೆ?

ಭಾರತಿಃ–ಗೆಳತಿಯರೆ, ಕೇಳಿರಿ. ಹಿಂದೆ ಭಗವಂತನು ಯೋಗಮಾಯಾಲಿಂಗನದಲ್ಲಿ ಏಕಾಂತವಾಗಿರುವಾಗ, ಯಾರೂ ಬಂದು ನನ್ನ ಅಖಂಡ ಸೌಖ್ಯಕ್ಕೆ ಭಂಗ ಬಾರದಂತೆ ವಿಚ್ಛರವಿಡಿರೆಂದು ಜಯವಿಜಯರಿಗೆ ಆಜ್ಞೆ ಮಾಡಿದನು.

ನಾರದಃ–ಆಗ ಯೌವನ ಗರ್ವದಲ್ಲಿದ್ದವರಿಗೆ ಪದವಿಯ ಗರ್ವವೂ ಉಂಟಾಗಿ, ಅವರೊಡನೆ ಅಧಿಕಾರ ಗರ್ವವೂ ತಲೆಗೇರಿತು.

ಭಾರತೀ:–ಬ್ರಹ್ಮನ ಮಾನಸಪುತ್ರರಾದ ಸನಕಸನಂದನಾದಿಗಳು ವೈಕುಂಠಕ್ಕೆ ನಿರಾತಂಕವಾಗಿ ದರ್ಶನಕ್ಕೆ ಬರುವಂತೆ ಯೋಗ್ಯತೆಯುಳ್ಳವರಾಗಿದ್ದರೂ, ಜಯವಿಜಯರು ಅವರನ್ನು ತಡೆದು, ಯಥಾರ್ಥವಾದುದನ್ನು ತಿಳಿಸಿದರೂ ಜರೆದಾಡಿ ಬೈದು ಭಂಗಿಸಿದರು

ನಾರದಃ–ಅಯೋಗ್ಯರಾದವರಿಗೆ ಪ್ರವೇಶಗಳಲ್ಲಿ ಜಾಗ್ರತೆ ನೋಡುವ ಅಧಿಕಾರ ಕೊಟ್ಟಲ್ಲಿ, ಯೋಗ್ಯರಾದ ಪ್ರವೇಶಗಳಾದರೂ ಅನ್ಯಾಯವಾಗಿ ದಂಡಿಸಲ್ಪಡುವುದು ನಿಜಿತ್ರವಲ್ಲ

ಭಾರತೀ:–ಅವರು ಶಪಿಸಲು ಜಯವಿಜಯರು ವೈಕುಂಠ ಸ್ಥಾನದಿಂದ ಸ್ಥಾನಭ್ರಷ್ಟರಾಗಿ ಭೂಲೋಕದಲ್ಲಿ ಹುಟ್ಟುವ ಹಾಗಾಯಿತು

ನಾರದಃ–ವರಪೀಡಕರಾದ ಅಹಂಕಾರಿಗಳು ತಮ್ಮ ದುರ್ವರ್ತನೆಗಾಗಿ ಹೀಗೆ ನರಕ ಕಷ್ಟಗಳನ್ನು ಸಹಿಸಬೇಕಾಗಿರುವುದು ಯೋಗ್ಯ ಪ್ರಾಯಶ್ಚಿತ್ತವು ಆಗ ತಾನೆ ಅವರ ಗರ್ವವು ಅಡಗಿ, ಅವರ ನಿಜಸ್ಥಿತಿಯು ಅವರಿಗೆ ಚೆನ್ನಾಗಿ ಗೊತ್ತಾಗುವುದು

ಭಾರತೀ:–ಅದಕ್ಕಾಗಿ ಭಗವಂತನನ್ನು ಅವರು ಪ್ರಾರ್ಥಿಸಿಕೊಳ್ಳಲು, ಏಳು ಜನ್ಮಗಳಲ್ಲಿ ಮಿತ್ರರಾಗಿ ಅಥವಾ ಮೂರು ಜನ್ಮಗಳಲ್ಲಿ ಹಗೆಯಾಗಿ ಹುಟ್ಟುವುದಕ್ಕೆ ಭಗವಂತನು ಅವರಿಗೆ ಸ್ವಾತಂತ್ರ್ಯವನ್ನು ಕೊಟ್ಟನು ವೈಕುಂಠ ವಿಯೋಗವನ್ನು ಕಡಿಯಲಾರದೆ, ಮೂರು ಜನ್ಮಗಳ ತನಕ ಜಯವಿಜಯರು ಭಗವಂತನ ಹಗೆಗಳಾಗಿ ಹುಟ್ಟುವುದನ್ನೇ ಅಂಗೀಕರಿಸಿದರು

ನಾರದಃ–ಅಧಿಕಾರ ಪ್ರೀತಿಯ ಮಹಿಮೆ! ಆದಷ್ಟು ತ್ವರೆಯಲ್ಲಿ ತಮ್ಮ ಸ್ಥಾನವನ್ನು ಸೇರೋಣವೆಂದು

ಭಾರತೀ:–ಈಗ ಇವರೇ ಹಿರಣ್ಯಾಕ್ಷ ಹಿರಣ್ಯಕಶಿಪುಗಳಾಗಿ ಕಶ್ಯಪ ದಿತಿಯರಲ್ಲಿ ಹುಟ್ಟಿರುವರು ವಿಷ್ಣು ದ್ವೇಷವನ್ನು ಮಾಡಿ ಮಾಯಾವಿಯಾದ ಭಗವಂತನು ಎದುರು ಬಿದ್ದು ಕಾದಾಡಲೆಂದು ಹಿರಣ್ಯಾಕ್ಷನು ನನ್ನನ್ನು ಭಂಗಿಸಿ ಪಾತಾಳಕ್ಕೆ ಸೆಳೆದೊಯ್ದನು ನಾನು ಕೂಗಲು, ಭಗವಂತನು ಅವನನ್ನು ಕೊಂದು ನನ್ನನ್ನು ಉದ್ಧರಿಸಿದನು

ನಿನೆ ನು–ವೈಕುಂಠದಲ್ಲಿದ್ದ ಭಗವಂತನು ಪಾತಾಳದಲ್ಲಿ ಳಿದು ನಿನ್ನನ್ನು ಉದ್ಧರಿಸಿದುದು ಹೇಗೆ?

ಭಾರತೀ:–ಸಮುದ್ರದಲ್ಲಿ ನುಸುಳಿದ ತಮಾಸುರನನ್ನು ಕೊಲ್ಲುವುದಕ್ಕೆ ಭಗವಂತನು ಮತ್ಸ್ಯಾವತಾರವನ್ನು ಧರಿಸಿರಲಿಲ್ಲವೆ? ಮಹಾ ಸಾಗರದಲ್ಲಿ ಪರ್ವತವು ಮುಳುಗದ ಹಾಗೆ ಅದನ್ನು ಎತ್ತಲು ಕೂರ್ಮನಾಗಿರಲಿಲ್ಲವೆ? ಹಾಗೆ ಪಾತಾಳ ಲೋಕದ ಕೆಸರು ಜವುಗಿನಲ್ಲಿ ಪತ್ನಿಯಾದ ನನ್ನನ್ನು ಉದ್ಧರಿಸಲು ಅವನು ವರಾಹ ಮೂರ್ತಿಯಾದನು

ಎಲ್ಲರುಃ–ಅಹಹಹಹಹ ದಿನಕ್ಕೊಂದು ವಿಕಾರವುಳ್ಳ ಪತಿಗೆ ನಾವು ಹೆಂಡಿರೆಂದು ನಮ್ಮನ್ನು ಹಾಸ್ಯ ಮಾಡಿದ್ದಿರಲ್ಲವೆ? ಮಹರ್ಷೇ, ನೋಡಿದಿರಾ, ನಿಮ್ಮ ತೇಜೋಮೂರ್ತಿಯಾದ ಭಾರತಿಯು ಕೊನೆಗೆ ಹಂದಿಗೆ ಹೆಂಡತಿಯಾದಳು! ಹ ಹ ಹ ಹ ಹ

ಭಾರತೀ:–ಪತಿವ್ರತೆಯಾದವಳು ತನ್ನ ಪತಿಗೆ ಎಂಥ ಅವಸ್ಥೆಯೆ ಬಂದರೂ ಅವನೇ ತನಗೊಬ್ಬ ಪತಿಯೆಂಬುದನ್ನು ಸರ್ವಥಾ ಮರೆಯಳು ಅವಳಿಗೆ ಅದರಿಂದ ನ್ಯೂನತೆಯಿಲ್ಲ, ದೈನ್ಯವೂ ಇಲ್ಲ ಏಕೆಂದರೆ, ಅವನೇ ಅವಳನ್ನು ದೈನ್ಯದಿಂದ ಉದ್ಧರಿಸುವವನು ನೀವು ಮಾತ್ರ ಆ ಭಗವಂತನನ್ನು ದೂಷಿಸಿದಿರಿ

ನಾರದಃ–ಲೋಕೋದ್ಧಾರಕ್ಕಾಗಿ, ಜಗತ್ತಿನ ಸೇವೆಗಾಗಿ ಕೆಲ ವೇಳೆ ಭಗವಂತನೂ ಕೂಡ ಎಂಥೆಂಥ ಹೀನ ಸ್ಥಿತಿಯನ್ನಾದರೂ ಅನುಭವಿಸಬೇಕು' ನಮ್ಮಂತಹರ ಪಾಡೇನು! ಲೋಕೋದ್ಧಾರದ ಆ ಹೀನತೆಯೆ ಲೋಕೋತ್ತರವಾದ ಗೌರವವು

ಭಾರತೀ:–ಕೇಳಿರಿ,

ನಾರದಃ–ಆದರೆ ನಿಮ್ಮಂಥ ಧೂರ್ತರು ಸ್ವಾಭಿಮಾನ ಮತ್ತರಾಗಿ ಲೋಕೋದ್ಧಾರದ ತತ್ವ ತಿಳಿಯದೆ ದೀನರಾದ ಜಗದ್ಭತೇಚ್ಛುಗಳನ್ನು ಹೇಗೆ ನಿಂದಿಸುವರು, ಹಿಂಸಿಸುವರು' ಭಾರತಿಯೆಡುರಿಗೆ ಅವಳ ಪತಿಯನ್ನು ನೀವು ನಿಂದಿಸಿದ ಪಾವಕ್ಕೆ ನಿಮ್ಮ ದೃಷ್ಟಿಯನುಗ್ರಹದಿಂದ ಹುಟ್ಟುವ ಹೆಮ್ಮಕ್ಕಳಿಗೆ ಅವರ ಪತಿಕುಲದ ಸಂಬಂಧದಲ್ಲಿ ತಿಂಬಿತ್ತು ಬಾಧಕಕರವಾದ ವರಣಾನುವುಂಟಾಗುವುದು ಇದಕ್ಕಾಗಿ ಭಾರತೀಯರು ನಿಮ್ಮನ್ನು ನಿಂದಿಸುವರು

ಎಲ್ಲರುಃ–ಹಾ, ಹಾ, ಘಾತವಾಯಿತು ದೀನರಾದ ಲೋಕೋದ್ಧಾರಕರನ್ನು ನಿಂದಿಸಿದವರಿಗೂ ಅವರ ಸಂತಾನಕ್ಕೂ ಈ ರೀತಿಯ ದುಃಖವುಂಟಾಗುವುದನ್ನು ನಾವೂ ಮರೆತೆವಲ್ಲ!

ನಾರದಃ–ಭಗವಂತನ ನಿಮ್ಮ ಶಾಪಗಳನ್ನು ದೂರ ಮಾಡುವನು ಜಯವಿಜಯರಲ್ಲೊಬ್ಬರಾದ ಹಿರಣ್ಯಾಕ್ಷನ ಮರಣದಿಂದ ಒಂದು ಕಂಟಕ ದೂರವಾಯಿತು ಇನ್ನು ಹಿರಣ್ಯಕಶಿಪುವಿನ ಕಂಟಕದಿಂದ ಹೇಗೆ ಪಾರಾಗುವುದೊ ತಿಳಿಯದಲ್ಲ' ಅವನನ್ನು ಭಗವಂತನು ಹೇಗೆ ವಿನಾಶಗೊಳಿಸುವನೊ?

ಭಾರತೀ:–ಭಗವಂತನ ಲೀಲಾಭಿನಯಕ್ಕೆ ನೀವೇ ಸೂತ್ರಧಾರಿಯಾದ ಬಳಿಕ, ಅಂಥ ಸಂಕಷ್ಟಗಳೆಷ್ಟಿದ್ದರೂ ನಾನು ತೀರ ಸುಲಭದಲ್ಲಿ ಪಾರಾಗುವೆನು ನನ್ನನ್ನು ಉದ್ಧಾರ ಮಾಡಿದ ಮಹನೀಯರು ನೀವೇ ಅಲ್ಲವೆ?

ನಾರದಃ–ಹಾಗಿದ್ದರೆ, ವಿಳಂಬವಿಲ್ಲದೆ, ಭಗವಂತನ ನುಂದಣ ಅಭಿನಯಕ್ಕೆ ಸಿದ್ಧರಾಗುವ ಹಾಗೆ ತಕ್ಕ ಅನುಜ್ಞೆಯಾದಲ್ಲಿ ಭಗವಂತನಿಂದಲೆ ಆಜ್ಞೆ ಪಡೆದು ಹಾಗೆ ವರ್ತಿಸೋಣ

[ಭಗವಂತ—ವರಾಹಮೂರ್ತಿ]

ಎಲ್ಲರೂ:–(ಗಾನ ಮಾಡಿ ನರ್ತಿಸುವರು)

ನಾರದಃ–ದಿವ್ಯ ವರಾಹ ಮೂರ್ತಿ' ಭಾದ್ರಪದ ಶುಕ್ಲ ತೃತೀಯೆಯು ವರಾಹ ಜಯಂತಿಯೆಂಬ ವರನು ಪಾವನವಾದ ತಿಥಿಯಾಗಿರಲಿ ಭಗವಾನ್, ಲೋಕೋದ್ಧಾರಕ್ಕಾಗಿ ವಹಿಸಿದ ನಿನ್ನೀ ದೀನ ವೇಷವನ್ನು ಮರೆಯಲ್ಲಿಟ್ಟು ಮುಂದೆ ಈ ಬಾಲಕನು ವರ್ತಿಸಬೇಕಾದ ರೀತಿಯನ್ನು ಅನುಗ್ರಹಿಸಲು ಇನ್ನು ವಿಳಂಬವೇಕೆ?

ಭಾರತೀ:–ನಾನೇನು ಮಾಡಿದ್ದಲ್ಲಿ ಭಗವಂತನ ಮನಃ ಸಂಕಲ್ಪವು ನೆರವೇರುವುದೋ, ಅದನ್ನು ಅನುಗ್ರಹಿಸಬೇಕು

ವಿಷ್ಣುಃ–ನಾರದಾ, ನಿನ್ನಂಥ ಭಕ್ತರ ಇದಿರಲ್ಲಿ ನನ್ನ ಮನೋ ಸಂಕಲ್ಪಕ್ಕೆ ಮಾರ್ಗವೆಲ್ಲಿದೆ? ಪರಮ ಭಾಗವತನಾದ ನೀನು ಕುಣಿಸುವಂತೆ ನಾನೂ ಕುಣಿಯಬೇಕಾಗಿರುವಾಗ, ನಾನು ಅನುಜ್ಞೆ ಕೊಡಲೇನಿದೆ?

ನಾರದ.–ಭಗವನ್ನಾಮಸ್ಮರಣೆ ಮಾಡುತ್ತಾ ಕೃಷ್ಣನೂ ವಿರಾಮವಿಲ್ಲದೆ ಆಲೆದಾಡುವವನು ನಾನು, ಬ್ರಹ್ಮಾಂಡೋದರನನ್ನು ನಾನು ಕುಣಿಸುವುದೆಂದ ರೇನು?

ವಿಷ್ಣುಃ–ನಾನು ಮಾಯಾವಿಯಾದುದರಿಂದ ಸಮರಂಗದಲ್ಲಿ ಯುದ್ಧ ಮಾಡುವವನಲ್ಲವೆಂದು ಹಿರಣ್ಯಾಕ್ಷನಿಗೆ ಯಾರು ತಿಳಿಸಿದರು?

ನಾರದಃ–ಹಾಗೆ ನಾನೆ ಹೇಳಿದ್ದು ನಿಜ

ವಿಷ್ಣು–ಮಾಯಾವಿಯಾದ ನಾನು ಇದಿರು ಬರಬೇಕಾದರೆ ಪತ್ನಿಯಾದ ಭಾರತಿಯ ಮೇಲೆ ಕೈಮಾಡಬೇಕೆಂದಾದರೂ ಅವನಿಗೆ ಯಾರು ಸೂಚಿಸಿದವರು?

ನಾರದಃ–ಹೂಂ' ಪತ್ನಿಗೆ ಸಮಾನವಾದ ಪ್ರಿಯವಸ್ತು ಬೇರೆ ಇಲ್ಲ, ಅದರಿಂದ ಪತ್ನಿಯನ್ನು ಸೆಳೆದರೆ ಪತಿಯು ತಾನಾಗಿ ಹೊರಬೀಳುವನು.

ಭಾರತೀ–ದುಷ್ಟರು ನನ್ನನ್ನು ಎಳೆದಿಸಿ ಭಂಗಗೊಳಿಸಿದರಿಂದ ನಿಮಗೆ ವ್ಯಯೋಜನವುಂಟಾಯಿತು.

ನಾರದಃ–ಸಾಧ್ವಿಯರನ್ನು ಹಿಂಸೆ ಮಾಡಿದವರು ಎಷ್ಟೋ ಪ್ರಬಲರಾದರೂ ವಿನಾಶ ಹೊಂದುವರೆಂದು ಜಗತ್ತಿಗೆ ಸಾರುವ ಹಾಗಾಯಿತು.

ವಿಷ್ಣು–ಅದರಲ್ಲೂ ಕೆಸರು ಜವುಗಾದ ಪಾತಾಳಕ್ಕೆ ಭಾರತಿಯನ್ನು ಕದ್ದೊಯ್ಯುವ ಹಾಗೆ ನಿತಕ್ಕೆ ಸಾಧಿಸಿದಿರಿ?

ನಾರದಃ–ಜಗದುದ್ಧಾರಕ್ಕೆ ಸಾಧನೆ ನೂಡುವವನು ಎಷ್ಟೆ ಹೀನ ಸ್ಥಿತಿಯನ್ನು ತಳೆದರೂ ಹೀನನೆನಿಸುವುದಿಲ್ಲವೆಂದು ಭಾರತ ಸಂತಾನಕ್ಕೆ ಚಿರಕಾಲವೂ ಬೋಧಿಸಬೇಕೆಂದು!

ಭಾರತೀ–ಹೀಗಾದರೆ, ಈ ಹಂಚಿಕೆಯಿಂದ ಜಗದುದ್ಧಾರದ ತತ್ವವು ನನ್ನವರಿಗೆ ತಿಳಿವಂತಾಯಿತು ನಾರದ, ನೀವೇ ಧನ್ಯ!

ನಾರದಃ–ಆ ದುಷ್ಟರಿಂದ ಹಿಂಸೆಯಾಗುವ ಹಾಗೆ ಹಂಚಿಕೆ ಮಾಡಿದ್ದಕ್ಕೆ ನನ್ನನ್ನು ಕ್ಷಮಿಸಬೇಕು

ಭಾರತೀ–ನಾನು ಕ್ಷಮಿಸುವುದಕ್ಕೇನಿದೆ?

ನಾರದಃ–ಹಾಗಿದ್ದರೆ, ಇನ್ನೀಗಲೆ ನನ್ನೊಡನೆ ಅಮರಾವತಿಗೆ ಬರಬೇಕು

ವಿಷ್ಣುಃ–ಏನಃ ಇದೇಕೆ? ಪಾತಾಳ ನೋಡಿದ ಪಾವಕ್ಕೆ ವ್ಯಾಯಶ್ಚಿತ್ತಕ್ಕಾಗಿಯೆ? ಅಲ್ಲ–ಪ್ರಮಾದವಾಯಿತು ವರಪ್ರಾಪ್ತಿಯಾದ ಕೂಡಲೆ ಹಿರಣ್ಯಕಶಿಪುವು ಅಮರಾವತಿಯಲ್ಲಿ ಕುಮುಲ ಯುದ್ಧವನ್ನು ಮಾಡುವನಲ್ಲವೆ?

ನಾರದಃ–ಅಮರಾವತಿಯಂಥ ಆನಂದ ಸಾಮ್ರಾಜ್ಯವನ್ನು ಅನುಭವಿಸುತ್ತಿದ್ದರೂ ಇಂದ್ರನಲ್ಲಿ ವಿಷಯಲಾಲಸೆಯು ವಿಶೇಷ ಅವನ ಅಧಿಕಾರವು ಅದರಿಂದಲೇ ಅಪವಿತ್ರವಾಗಿದೆ ಅವನಿಗೆ ಕೊಂಚ ಬುದ್ಧಿ ಬಂದರೆ, ರಾಜರಾದವರು ಅಂಥದ್ದಕ್ಕೆ ಬೆದರಿ ಜೀವನವನ್ನು ಪರಿಶುದ್ಧವಾಗಿ ಇರಿಸಿಕೊಳ್ಳುವರಲ್ಲವೆ? ಇದೂ ಜಗತ್ತಿಗೊಂದು ಪಾಠ

ವಿಷ್ಣುಃ–ಮತ್ತೊಂದು ಪೀಕಲಾಟವನ್ನು ಹೂಡಿದಂತಾಯಿತು' ಇದಕ್ಕಾದರೂ ಭಾರತಿಯೇಕೆ ಅಮರಾವತಿಗೆ ನಿನ್ನೊಡನೆ ಬರಬೇಕು?

ನಾರದಃ–ಕಯಾದುವು ಗರ್ಭವತಿ ಅವಳ ಪಾತಿವ್ರತ್ಯವು ಕೆಡದ ಹಾಗೆ ಭಾರತಿಯು ಅವಳ ಸಹಚರಿಯಾಗಿದ್ದರೆ, ಅವಳಲ್ಲಿ ಹುಟ್ಟುವ ಕೂಸು ಭಾರತಿಗೆ ಪ್ರಿಯವಾಗಿಯೆ ಬೆಳೆವುದು ನಾನೂ ಭಗವನ್ನಾಮ ಸಂಕೀರ್ತನೆ ಮಾಡಿ ಆ ಕೂಸಿನ ಆತ್ಮದಲ್ಲೇ ಬತ್ತುವೆನು ಆಗ ಶುದ್ಧ ಭಾಗವತ ಕ್ಷಿತೀಶ್ವರುಣಿಯಾಗಿ ಆ ಹರಿ ವಿರೋಧಿಯಲ್ಲಿ ಶಿಶು ಹುಟ್ಟುವುದು ತಂದೆಗೆ ಮಗನು ವಿರೋಧಿಯಾಗುವನು ಪುತ್ರವಾತ್ಸಲ್ಯದಿಂದ ತಂದೆಯ ಮನಸ್ಸು ಮಾರ್ಪಡಬಹುದು ಇಲ್ಲದಿದ್ದಲ್ಲಿ ಮಗನನ್ನು ತಂದೆಯು ಕೊಲ್ಲಬೇಕಾಗುವುದು ಹರಶರಣರು ಮರಣ ಹೊಂದದಂತೆ ಭಗವಂತನೆ ಕಾಯಬೇಕಾಗುವುದು ಇದರಿಂದ, ಎಂದಿಗೂ ಭಾರತಿಗೆ ಹಿಂಸೆ ಮಾಡದ ಭಗವದ್ಭಕ್ತ ಅರಸುಗಳೇ ಮುದೆ ದೈತ್ಯ ಸಿಂಹಾಸನವನ್ನು ಆರೋಹಿಸುವರು ಅದೇ ಜಗತ್ತಿಗೆ ಕಾಂತಿಯಲ್ಲವೆ?

ವಿಷ್ಣುಃ–ಈ ಸ್ತವೀಣತೆಗೆ ನಿನೆನ್ನಬೇಕು ನಾರದಾ, ಧನ್ಯ' ಧನ್ಯ ಇದೆಂಥ ಹೊಸ ನಾಟಕವನ್ನು ಹೂಡಿದೆ'

ಭಾರತೀ:–ನನ್ನ ಭಾವೀ ಕಲ್ಯಾಣಕ್ಕಾಗಿ ಇಷ್ಟೊಂದು ಹಂಚಿಕೆಯನ್ನು ಮಾಡಿ ಜಗತ್ಕಾಂತಿಯನ್ನುಂಟು ಮಾಡುವ ಮಹಾತ್ಮಾ ನಿಮ್ಮುಗೆ ಧನ್ಯವಾದವಿರಲಿ' ಪ್ರಾಣೇಶ್ವರಾ, ಇನ್ನು ಅಮರಾವತಿಗೆ ತೆರಳುವೆನು ನನಗೆ ಅಪ್ಪಣೆ ಪಾಲಿಸಬೇಕು

ವಿಷ್ಣುಃ–ನೀವೆಲ್ಲರೂ ವಿಜಯವನ್ನು ಹೊಂದಿರಿ'

(ತೆರೆ ಇಳಿಯುವುದು)

— ಸಂಪೂರ್ಣ —

ಸರಿಗೆಯಲಿ ನಿಲುಕುತಿದೆ.

ಸರಿಗೆಯಲಿ ನಿಲುಕುತಿದೆ
ಹೃದಯೇಶ್ವರಂ;
ಹೃದಯದಲಿ ಕುಲುಕುತಿದೆ
ವಿರಹೇಶ್ವರಂ;
ಎತ್ತ ನಡೆದವನೆಂದು
ಮತ್ತೆನಗೆ ಬಹನೆಂದು
ಮನನಿತೋಷಂ
ಬಾಗಲೊಳೆ ನಿಲುಕುತಿದೆ
ನಯನ ದೀಪಂ—

ಮರುಳುವೊಸಗೆಯ ಪೇರಿ
ಸುಡುಗು ಮೊಳಗೆ,
ಮನೆಯ ದಾರಿಯ ತೋರಿ
ಮಿಂಚು ತೊಳಗೆ,
ಬಂದರೆಲ್ಲಿದರೆಲ್ಲ;
ನೀನಿನಿಯ ಬಂದಿಲ್ಲ—
ಮಳೆಯ ಹಕ್ಕಿ
ನೀನಿಹಳ್ಳಿದೆಯೂರಿ
ತೇನೊ ಬಿಕ್ಕಿ!

ಬಸಿರೊಳಿಮ್ಮಯ ಕೂಸು
ಬಂದಂದಿನಿಂ
ಹಸುರು ಹಸಿಗಳ ಸೂಸು
ಸಂದಂದಿನಿಂ
ತೆರಳಿನ್ನು ಮರಳಿಲ್ಲ;
ನಿನ್ನೊಸಗೆ ನನಗಿಲ್ಲ
ದೊಲೆವೆನಿಲ್ಲಿ
ಸಂಜೆಸೊಡರೊಲು ಬೀಸು
ವೆಲರಿನಲ್ಲಿ,

ಲನೂಡಿಸೆ ಹುಬ್ಬೆ
ಹಸುಳೆ ತೆನಗೆ,
ಿದ್ಧದೆಯಳಟಬ್ಬೆ
ಗಿಹುದೆ ನನಗೆ?
ದಿಗೆ ಸುದಿ ಮೂಡಿಲ್ಲ,
ಮಗುನಿನಿದಿ ಕೂಡಿಲ್ಲ
ದನಿತರೊಳಗೆ
ನೆಲೆದಳದನಿಳೆ ತಬ್ಬೆ
ತನ್ನ ಬಳಿಗೆ

* * * * * *

೫. ಎಡೆಯ ಕತ್ತಲ ಗನಿಯೊ
ಳೊಗೆದ ರನ್ನ
ವೆವೆಯನೊಲ್ಲದ ಹನಿಯೊ
ಲುದುರಿತೆನ್ನ;
ಇಲ್ಲಿ ನೀನಿರೆ ನಲ್ಲ
ಅಂತಾಗುತಿರಲಿಲ್ಲ—
ಇನನಿಲ್ಲದೆ
ಕಮಲಮದು ಕಮಲಿನಿಯೊ
ಳಿರಬಲ್ಲುದೆ?

೬ ಬರದಿ ನೀರಗೆವಲ್ಲಿ
ಎಟಕಿ ನಿಧಿಯೆ
ನಲಣುಗನೊಗೆದಲ್ಲಿ
ಕಟಕಿ ವಿಧಿಯೆ
ಗಿಡಿಗನೆನೆ ಮಧುಗಿಳಿಯ
ತುಡುಗೆ, ನೀನಿರೆ ಬಳಿಯ
ಲಿಂದು ನಲ್ಲ
ಬಿಲಿಮಿಲಿವ ಗೂಡಲ್ಲಿ
ಮೌನವಲ್ಲ!

ಬಳ್ಳಿಗೆಲ್ಲವ ನಲ್ಲ
ಸುವಳಿ ಧರಣಿ!
ಬೆಳಕವಳಗಳಲ್ಲಿ
ತರದೆ ತರಣಿ!
ಧರನೆಯಳ್ಳಿರೆ ಸವಿಸೆ,
ತರಣಿ ಮೋಕೆಯನವಿಸೆ.
ಬಳ್ಳಿ ತಾರೆ,
ತಂದೆ ತಾಯಿಯರಲ್ಲಿ
ಯಾರ ದೂರೆ?

ಕುರುಡನರಗಿನಸಂತೆ
ಬಗೆದು ಬೇಯೆ,
ಗರಿ ಮುರಿದ ಖಗದಂತೆ
ನೆನೆದು ನೋಯೆ,
ನಿನ್ನಕಟ ಬಾಳಿನಿಸೆ?
ಹೆಣ್ಣು ಹುಳುವಿನ ತನಿಸೆ?
ಎದೆಯ ತಿರುಳು
ಕೊರೆಯೆ ನೋರುವ ಚಿಂತೆ
ಹಗಲು ಇರುಳು.

* * * * * *

೯ ಸರಿಡೊಮ್ಮೆ ಬರಸಲ್ಲ
ದಲರಿನಳಿವೊ?
ಪರಿದಂತೆ ಬರ ಬಲ್ಲ
ಉಡುವ ಸುಳಿವೊ?
ತೆರಳಿ ಮರಳುವ ತರಿಯೊ?
ಹುಳು ಪತಂಗಿಪ ಪರಿಯೊ?—
ಮರಳಿ ಚೆನ್ನ
ಬಹನೆ, ಬಾರನೆ, ನಲ್ಲ,
ಬಸಿದೊಳೆನ್ನ?

೧೦ ವೀಸೆಯಲಿ ಮಾರುಲಿಯೆ
ಕಂದಿದುಲಿಯೆ,
ಸೊಡರಿನಲಿ ಮಾರುರಿಯೆ
ನಂದಿದುರಿಯೆ,
ಮರಳಿ ನನ್ನೊಳೆ ಬಹನೆ?
ಅರಳಿ ನಿನ್ನೆಸೆಯಹನೆ?
ಕೋರಲಳವೆ?—
ಸ್ವಾತಿ ಹನಿಯೂರದೆಯೆ
ಮುತ್ತು ಮೊಳವೆ?

೧೧. ಕೋರಿಕೆಯೊಳಡಿ ಮೆಟ್ಟಿ
ಮುಂದೆ ಪಾರೆ,
ಕಂಕೆ ಹಾವಸೆಗಟ್ಟಿ
ಮನಸು ಜಾರೆ,
ಮೇದ ಮೇವನೆ ಮೇವ
ಕಟ್ಟುಕಂಬದ ಗೋವ
ತೆರದೊಳೆನ್ನ
ನೆನದ ನೆನವೊಳೆ ದಿಟ್ಟಿ
ಗೊಳುವೆ ನಿನ್ನ.

೧೨. ಬಲೆಯ ನೀರಲಿ ಸುತ್ತ
ಬರುವ ತನ್ನ
ನೆಳಲನಿನೆಯಂ ಗೆತ್ತ
ಮಿನಾಲೆನ್ನ
ಮನದಿ ಸುಳಿಯುವೆ ನಿನ್ನ
ನೆನವೆ ನೀನೆನುತೆನ್ನ
ಸೆರೆಯ ತಳಿವೆ—
ತರೆಯೆತ್ತ ತೆರೆಯತ್ತ
ಮರಳದೊಳ್ಳವೇ?

ಗೋವಿಂದ ಪೈ

ಕಾವ್ಯ ಕವಿ.

ವಿದ್ಯಾರ್ಥಿ

ಕವಿ, ಕಾವ್ಯ ಬರೆವವನು, ಕಾವ್ಯಕಾರನೇ ಅವನು ಕಾವ್ಯನೆಂದರೆ,—ಶಕುಂತಲಾ, ಮೇಘದೂತ, ಟೆಂಪೆಸ್ಟ್, ಲಿಯರ್ ಇಂಥ ಹವು ಕಾವ್ಯಗಳು ಇವುಗಳಲ್ಲಿ ಕಾವ್ಯವಸ್ತುವು ಎಲ್ಲಿದೆ? ಛಂದಸ್ಸಿನಲ್ಲೊ, ವಾಕ್ಯದಲ್ಲೊ? ಅರ್ಥದಲ್ಲೊ, ಆಖ್ಯಾನ ವ್ಯಾಖ್ಯಾನಗಳಲ್ಲೊ? ಕಲ್ಪನಾಕೌಶಲದಲ್ಲೊ, ಸದ್ಭಾವನಾವಿಕಾಸದಲ್ಲೊ? ಅಥವಾ ಇವೆಲ್ಲವುಗಳ ಸಹಯೋಗದಲ್ಲೊ? ಅಥವಾ ಅಂತಹ ಸಹಯೋಗಕ್ಕೂ ಮಿಗಿಲಾಗಿ ಆವುದೊಂದು ಚಿತ್ತಚಮತ್ಕಾರ ಅನುಭೂತಿಯಲಾಸದಲ್ಲೊ?

ಕಾವ್ಯ ರಚಿಸಿಲ್ಲದವನು ಕವಿಯಲ್ಲ ಯಾವನನ್ನು ಕವಿ ಎನ್ನುವೆವೊ ಅವನೇ ಕವಿಯಲ್ಲ, ಅವನು ಕಾವ್ಯರಚಿಸುವಾಗ ಆತನೊಳಗಿಂದ ಆತ್ಮಪ್ರಕಾಶನಮಾಡುವ ಸುತ್ತೊಬ್ಬನು ಪ್ರೇಕ್ಷಕನಾಗುವನು, ಅವನು ಕವಿ

ಭಾವುಕನಾಗಲಿ ರಸಿಕಪ್ರೌತ್ರನಾಗಲಿ ಕವಿಯಲ್ಲ ಕಾವ್ಯದ ಭಾವನೆ ಮಾತ್ರ ಇರುವಾತನು ಕವಿಯಲ್ಲ ಇವನಿಗೆ ಅಥವಾ ರಸಿಕನಿಗೆ ಕಲ್ಪನೆಯಿದೆ, ಆದರೆ ಅವನ ಕಲ್ಪನೆ ಬಂಜೆಯಾಗಿದೆ. ದೈವೀ ಪ್ರೇರಣೆಯಿಂದ ಆ ಕಲ್ಪನೆಯು ಕಾರ್ಯಸೃಷ್ಟಿಯಲ್ಲಿ ರೂಪವನ್ನು ತಳೆಯುವುದು, ಆದರೆ ಅಂತಹ ಪ್ರೇರಣೆಯು ಎಲ್ಲರ ಭಾಗ್ಯದಲ್ಲಿಲ್ಲ, ಯಾರ ಭಾಗ್ಯದಲ್ಲಿರಬಹುದೊ ಅತನು ವಾಣೀ ಪುತ್ರ, ಅತನು ಕವಿ

ಇಂತಹ ದೈವೀ ಪ್ರೇರಣೆಯ ಲೀಲೆಯು ಯಾವನಲ್ಲಿ ತೋರುವುದೊ ಅಂತಹನ ಸಾಧಾರಣ ಜೀವನವು ಒಂದು ರೀತಿ; ಅವನ ಕವಿ ಜೀವನವು ಬೇರೇ ರೀತಿ ಅವನ ಕಾವ್ಯಗತ ಪರಿಚಯವು ಸ್ವತಂತ್ರವಾಗಿದೆ ಕವಿಯ ಜೀವನದಲ್ಲಿ ಈ ದ್ವೈತಭಾವವು ಇದೆ ಕಾವ್ಯದಲ್ಲಿ ನಮ್ಮ ಕಣ್ಣಿಗೆ ಗೋಚರನಾಗುವ ಕವಿಯು, ಸಮಾಜದಲ್ಲಿ ನಮಗೆಕಾಣುವ ಕವಿಯು,—ಇಬ್ಬರೂ ಬೇರೆ ಬೇರೆ ವಿಗ್ರಹಗಳು ಕಾವ್ಯದಲ್ಲಿ ಕಾಣುವ ಕವಿಯ ವ್ಯಕ್ತಿತ್ವವು ಸಾಮಾನ್ಯರಿಗೆ ತಿಳಿದು ಬಾರದು, ಸಮಾಜದಲ್ಲಿ ಕಾಣಬರುವ ಕವಿಯು ಸ್ವಪ್ನನು

ಕಾವ್ಯದ ಗೌರವವು, ಯುದ್ಧ ಜಯದ ಕೀರ್ತಿಯಂತಿಲ್ಲ, ಸಾಮ್ರಾಜ್ಯ ಸ್ಥಾಪನೆಯದೂ ಅಲ್ಲ, ಪತಿತೋದ್ಧಾರದ್ದೂ ಅಲ್ಲ ಕವಿಯ ಕೀರ್ತಿಯು ಇವೆಲ್ಲವುಗಳಿಂದ ಅಧಿಕ, ಬಹು ಗುಣ ಅಧಿಕವಾಗಿದೆ

ಯಾವುದನ್ನು ನಾವು ಚಿಂತಾಕೃತಿ ಎನ್ನುವೆವೊ, ಕಾವ್ಯವು ಅಂತಹ ಕೃತಿಯ ಫಲವೂ ಅಲ್ಲ

ಕವಿಯ ಯಾವ ಸಹೃದಯತೆಯ ಪರಿಚಯವನ್ನು ಕಾವ್ಯದಲ್ಲಿ ಕಾಣುವೆವೂ ಯಾವ ಸಹಾನುಭೂತಿಯನ್ನು ಸಕ್ಕವೂ ಕವಿಧರ್ಮ ಎಂದು ತಿಳಿಯುವೆವೊ, ಅದು ಲೌಕಿಕ ಹೃದಯವೃತ್ತಿಯಲ್ಲ ಕವಿಯು, ಹೃದಯವು ವಿದೀರ್ಣವಾಗುವ ವರ್ಣನೆಯನ್ನು ಮಾಡಬಲ್ಲನು, ಸೈತಾನನೂ ನಮ್ಮ ಕಣ್ಣಿಗೆ ಮಹಿಮಾಮಂಡಿತನಾಗಿ ಕಾಣುವ ಹಾಗೆ ಕಲ್ಪಿಸಬಲ್ಲನು

ಕಾವ್ಯರಚನೆಯ ಕಾಲದಲ್ಲಿ ಮನುಷ್ಯನು ಎಂದಿನಂತಿರಲಾರನು, ಯಾವುದೋ ಒಂದು ಮಹಾ ಚೇತನದ ಆವೇಶದ ಫಲವಾಗಿ ಅವನ ಪ್ರಾಣದಲ್ಲಿ ಕಡೆಯದ ಸ್ಫೂರ್ತಿಯುಂಟಾಗುವುದು ಕಲ್ಪನೆಯು ಉನ್ಮತ್ತವಾಗುವುದು ಆಗ ಕವಿಯು ಸಾಮಾನ್ಯ ಮನುಷ್ಯ ಜೀವನದ ಸ್ತರವನ್ನು ಬಿಟ್ಟು, ಊರ್ಧ್ವತರ ಸ್ತರಕ್ಕೇರುವನು, ಇಂತಹ ಭಾವಾವಸ್ಥೆಯೇ ಕಾವ್ಯದ ಜನನ ಆಗಲಿ, ಅತನ ಜೀವನವು ಅನುಸಂಧಿತ ಕರ್ಮಬಂಧನದಿಂದ ಮುಕ್ತವಾಗುವುದು, ಲೌಕಿಕತೆಯ ಸರ್ವ ಸಂಸ್ಕಾರಗಳೂ ಅಳಿದು ಹೋಗುವುವು, ಮಹತ್ತರವಾದೊಂದು ಸತ್ಯಕ್ಕೆ ಅವನ ಕ್ಷುದ್ರ ಜೀವನವು ಅಧೀನವಾಗುವುದು ಆಗ ಆತನು ಹೊಸ ಜನ್ಮನನ್ನು ತಳೆವನು, ಅವನಿಗೆ ದ್ವಿಜತ್ವವು ಪ್ರಾಪ್ತವಾಗುವುದು ಇಂತಹ ಉಲ್ಲಾಸದಲ್ಲಿ ಯಾವ ಮನುಷ್ಯನಿಗೂ ಅಹಂಭಾವ ಉಳಿಯದು ಅಹಂಜ್ಞಾನವು ಸರ್ವ ಅಶಕ್ತಿ ಅಜ್ಞಾನಗಳಿಗೆ ಮೂಲವಾದುದು ಹೀಗೆ ಕಾವ್ಯ ಸೃಷ್ಟಿಕಾಲದಲ್ಲಿ ಅಹಂ ಮುಕ್ತಿಯುಂಟಾಗುವುದು ಆಗ ಸಮಾಜ ಠೀಕ ಮೊದಲಾದ ಹೊರ ಆವರಣಗಳು ಕಳಚಿ ಬೀಳುವುವು ಅವನು ಆಗ ಶಿಶುವಿನಂತೆ ಸರಲ ಹೃದಯನಾಗಿ ಆನಂದಮಯನಾಗುವನು. ನವಜನ್ಮಧಾರಿಯಾದ ಕವಿಯ ಪರಿಚಯವನ್ನು ಮಾತ್ರ ನಾವು ಕಾವ್ಯದಲ್ಲಿ ನಿಲ್ಲಲ್ಲಿಯೂ ಕಾಣುತ್ತಿರುವೆವು

ಒಂದು ಚಿತ್ರ.

ಕುದೆಪೂರು ರಾಮಚಂದ್ರಯ್ಯ, ಮುಂಬಯಿ

ನಾನು ಕಚೇರಿ ಮೆಟ್ಟಲು ಹತ್ತಿದವನೇ ಅಲ್ಲ ಆದರೆ, ಅಂದು ಹೀಗಾಯಿತು,—ಕೈಯ ಮೇಲೆ ಭಾರವಾಗಿ ಸಮುದುವು ಬಿದ್ದಿತ್ತು; ಕಿಸೆಯಲ್ಲಿ ಭಾರವಾಗಿ ಗದಿಯಾರವು ಇದ್ದ ಕಾಗೆ ಸರಿ, ಹೊರಟೆ ಇದಿಷ್ಟಲ್ಲೇ ಕಚೇರಿಯ ಕಟ್ಟಡ ಒಳ ನುಗ್ಗಿದೆ

ನಾನಾ ಪಾತಕಕರ್ಮಗಳನ್ನು ತೊಳೆದು ಬಿಡುವ ನ್ಯಾಯ ಮಂದಿರವೇ ಅದು ಗಂಗೆಯು ಫೇನವಾಗಿ ವಿಗ್ರಹವಾಗಿ ನಿಂತಂತೆ, ಇದೊಂದು ಮಂದಿರ. ಇಲ್ಲಿ ಮಾನವನನ್ನು ನಿರ್ಮಲನಾಗುವನಂತೆ

ಳಲ್ಲೇನಾಗುತಿತ್ತು? ನೋಡಬೇಕೆಂದೆನು

ಬೆದರಿ ಬೆದರಿ ಅಲ್ಲೇ ನಿಂತೆನು ಮನುಷ್ಯನ ಮನಸ್ಸನು ಬಯಲಿಗೆ ತಂದು, ಅದರ ಕೊಳೆ ಧುಮಾಡಿಸುವ ಈ ಹೊಸ ಬಗೆಯ ಮಾನಸಿಕ ಶಸ್ತ್ರಕ್ರಿಯೆಯ ನಿಯಮಗಳನ್ನೂ ಕರ್ಮವನ್ನೂ ನೋಡುವುದು ನಿಜವಾಗಿಯೂ ಭಯಾನಕವಲ್ಲವೆ?

ಒಂದು ಕಿಟಕಿಯ ಬಳಿ ನಿಂತೆನು ಮೆಲ್ಲನೆ ತಲೆಯೆತ್ತಿ ನೋಡಿದೆನು ಒಂದು ಕಡೆ ಒಂದು ಹಿಂಡು ಕೂಡಿರುವುದು

ಪೋಲೀಸರ ನಡುವೆ ಒಬ್ಬ ಕೈದಿ ಇರುವನು ಅವನು ಒಬ್ಬ ಮುದುಕ, ನಡುಗುತ್ತಿರುವನು

ಕೆಲವರು ಅವನು 'ಕೇಡಿ' ಎಂದರು ಕೆಲವರು 'ಖೂನಿ ಮಾಡಿದನಂತೆ' ಎಂದರು

ಆದರೆ ನಾನು ಅವನೆನ್ನು ಕಂಡಾಗ, ನನಗೆ ಹಾಗೇನೂ ತೋರಲಿಲ್ಲ ನನ್ನ ವಿಶ್ವಾಸವೇ ಬೇರೆ

"ಇವನೇ ಕೊಲೆ ಮಾಡಿದವನು?" ಎಂದು ಹತ್ತಿರ ದವರೊಡನೆ ವಿಚಾರಿಸಿದೆನು

"ಹೌದು"

"ಇವನನ್ನು ಯಾರೋ ಬೈದಂತೆ, ಇವನು ತಿವಿದ ನಂತೆ ಕೊಲೆಯಾಯ್ತು, ಈಗ ಫಾಸಿಗೆ ವಿಚಾರ"

ನನಗಮ ಒನ್ನೆಲಿಲ್ಲ 'ಇವನೇ ಕೊಲೆ ಮಾಡಿದನು?

'ಹೌದಪ್ಪಾ ಹೌದು ಕಂಡರೆ ತಿಳಿಯದೆ? ನಿನುಗೇನು ದೃಷ್ಟಿ ಮಂದವೆ? ಹಲವರು ಹೇಳಿದರೂ ಕೇಳದೇ? ಕಿವಿಯೂ ದೂರವೇ?" ಎಂದೆಲ್ಲರೂ ಸಿಡುಮೋರೆಯಿಂದ ದೂರಿದರು

ಆಗ ನಾನು ಮರಳಿ ಆ ಕೈದಿಯನ್ನೇ ಚೆನ್ನಾಗಿ ನಿರೀಕ್ಷಿಸಿದೆನು ಆದರೂ, ನಾನು ಅವನನ್ನು ಕೊಲೆ ಮಾಡಿದವ ನೆಂದು ತಿಳಿಯಲಿಲ್ಲ

ಈ ಅಭಿಪ್ರಾಯವೇ ನನಗೆ ಸರಿತೋರಲಿಲ್ಲವೆಂದು, ಅಲ್ಲಿ ನಿಂತವರೊಡನೆ ಇರಲಾರದೆ, ಬೇರೊಂದು ಗೋಡೆಯ ಬದಿ ಸೇರಿದೆನು

"ಸಖಾರಾಮ ಪಾಂಡೂ" ಎಂದೊಂದು ಕರೆ,—ಗಟ್ಟಿಯಾಗಿ ಕೂಗುವ ಕರ್ಕಶ ಡೊತನ ಧ್ವನಿಯಲ್ಲಿ

"ಸಖಾರಾಮ ಪಾಂಡೂ ನೀನು ಕಳ್ಳನು"

'ನೀನು ಈ ವಸ್ತುಗಳನ್ನು ಕದ್ದವನಲ್ಲವೆ?"

"ನಿನ್ನ ಕೈಗೆ ಈ ವಸ್ತುಗಳು ಹೇಗೆ ಸೇರಿದುವು? ಹೇಳು!"

"ಹಗಲಲ್ಲಿ ಕೆಲಸವೆಲ್ಲಿ ಎಂತ ಹುಡುಕುತ್ತಾ, ರಾತ್ರಿಯಲ್ಲಿ ಕದಿಯುವುದೇ ನಿನ್ನ ಕೆಲಸವೆ?"

"ಏನೂ ಹೇಳಲಿಕ್ಕಿಲ್ಲವೆ? ಸುಮ್ಮನೆ ಬಾಯಿ ಮುಚ್ಚಿರ ಬೇಡ"

ಇವಿಷ್ಟೂ ಪ್ರಶ್ನೆಗಳೇ, ಪಾಂಡುವಿನ ಉತ್ತರವೇ ಇಲ್ಲ

ಒಬ್ಬ ಸಿಪಾಯಿ (ಪೋಲಿಸು ಜವಾನ) ಅಲ್ಲೇ ಸಾಕ್ಷಿ ನುಡಿಯುತಿದ್ದನು.

"ಸಖಾರಾಮ ಪಾಂಡುವಿನ ಕೋಣೆಯಲ್ಲಿ ಏನೇನು ದೊರೆಯಿತು?"

ಸರಕಾರೀ ವಕೀಲರ ಸವಾಲುಗಳಾದುವು.

ಎದುರಿನ ಮೇಜಿನ ಮೇಲೆ ಹಲವು ಆಭರಣಗಳಿದ್ದುವು ಅರೋಪಿಯ ವಕ್ತರದಲ್ಲಿ ಪಾಂಡುವಿದ್ದನಷ್ಟೆ, ಅವನ ವಯಸ್ಸು ೫೮, ದೇಹ ಮಾತ್ರ ೬೦ರದ್ದು

"ಪಾಂಡೂ, ಅವರಾಧನನ್ನು ಒಪ್ಪುತ್ತಿಯೋ"

"ಹ್ಞಾದು" ಪಾಂಡು ಆಡಿದ್ದು ಇದೊಂದೇ ಶಬ್ದ ಅದೂ ನಡುನಡುಗಿ ತುಟಿಯಂದ ಹೊರಬಿದ್ದಿತು

ಹೇಗೋ, ಸಖಾರಮ ಪಾಂಡುವು ನನ್ನ ಮನಸ್ಸನ್ನು ಸೆಳೆದುಕೊಂಡಿದ್ದನು ಅವನ ಕಣ್ಣುಗಳಲ್ಲಿ ಉತ್ತಮ ಬೇಸಾಯಿಯ ವಂಶದ ತೇಜಸ್ಸನ್ನು ಹೊಳೆಯುತಿದ್ದಿತು

ಇನ್ನೂ ಕೈಲಿಗೊಯ್ಯುವ ನೋಟರು ಬಂದಿರಲಿಲ್ಲ ಹೇಗೂ ಮಾಡಿ, ಅವನ ವೃತ್ತಾಂತವನ್ನು ತಿಳಿಯಬೇಕೆಂದೇ ನನ್ನ ಕುತೂಹಲವಿದ್ದಿತು ಹಾಗೆಯೆ ಮೆಲ್ಲನೆ ಮುಂದರಿದು ಅವನ ಬಳಿಗೆ ಬಂದೆನು

ಅವನು ತನ್ನ ಚರಿತ್ರೆ ಹೇಳುತಿದ್ದನು, ಕನ್ನಲ್ಲಿಯೆ, ಆದರೆ ನಾನು ಕೇಳುವ ಹಾಗೆ

"ಆಗ ನನ್ನ ವಯಸ್ಸು 20 ನಾನು ಮುಳಶೀ ಪೇಟೆಯ ಮೆನುಷ್ಯ ಆ ಊರು ಈಗ ನಿಮ್ಮ ಕಣ್ಣಿಗೇ ಕಾಣುವ ಹಾಗಿಲ್ಲ

'ಎಷ್ಟೋ ವರ್ಷಗಳಿಂದಲೂ ನನ್ನ ಹಿರಿಯರ ಮನೆ ಅಲ್ಲಿತ್ತು ಆ ವರ್ಷ ತಾನೆ ಕಂಪೆನಿಯೊಂದು ಅತ್ತ ಬಂತು

'ಆದರ ದೆಸೆಯಿಂದ ಸಾವಿರ ಕುಟುಂಬಗಳು ನಾಶ ಹೊಂದಿದುವು ಏಕಕ್ಕಾಗಿ?

'ಈ ವಿದ್ಯುಚ್ಛಕ್ತಿಯ ದೀವಗಳಿಗಾಗಿ

'ಯಾವ ನೀರನ್ನು ನಮ್ಮ ಸಾವಿರಾರು ಕುಟುಂಬಗಳ ತಿಹಾರ ಬೆಳೆಸಲು ನಾವು ಗದ್ದಿಗಳಿಗೆ ತರುತಿದ್ದೆವೊ, ಆ ನೀರೇ ನಮ್ಮ ಮೃತ್ಯುವಿಗೆ ಕಾರಣವಾಯಿತು

'ದೊಡ್ಡ ಅಣೆಕಟ್ಟು ಕಟ್ಟಿಸಿ, ನನ್ನು ಊರಿಗೇ ಪ್ರಳಯ ತಂದೊಡ್ಡಿದರು

'ಅದನ್ನು ನೋಡುವುದಕ್ಕೆ ಲಕ್ಷಗಟ್ಟಲೆ ಜನರು ಅತ್ತ ಹೋಗುತ್ತಾ ಬರುತ್ತಾ ಇದ್ದಾರೆ

'ಅವರು ಈ ಕಂಪೆನಿಯ ಕಾರ್ಯಕಲಾಪಗಳನ್ನು ನೋಡಿ ಕಂಪೆನಿಯ ಸ್ತೋತ್ರ ಭಜನೆ ಹಾಡುತ್ತಿದ್ದಾರೆ

'ಆದರೆ, ಅದೇ ಅಣೆಕಟ್ಟಿನ ಜಲಸಾಗರದ ತಿಯಲ್ಲಿ

'ನೀತಿ' ಎಂಬುದು ಮುಳುಗಿರುತ್ತಿದೆ

'ನನ್ನ ವಿಷಯವೇನು? ಹಣ ಬೇಕಾಗಿದ್ದಿತು ಹಣ ಮುಗಿಯಿತು

'ಅದನ್ನು ಹುಟ್ಟಿಸಲು ಉಪಾಯವೇ ಇಲ್ಲ, ಗೊತ್ತಿಲ್ಲ

'ಮುಂಬಾಯಿಗೆ ಒಂದೆನು ನ್ಯಸನ ಬೇರೆ ಗಿರಣಿ ಕೆಲಸದ ಭಂಗ ಬೇರೆ

'ನಾಚಿಕೆ ಬೇರೆ, ಅಳುವೆನೋ ಎನಿಸುತ್ತಿದೆ

'1918ರಲ್ಲಿದ್ದ ಸಖಾರಾಮ ಪಾಂಡುವು ಸತ್ತನು, 1988ರಲ್ಲಿ ಕಳ್ಳ ಸಖಾರಮ ಪಾಂಡು ಹುಟ್ಟಿದನು ಕೃಷಿಕನು ಮವಾಳಿಯಾದರು ಬಂಡಖೋರ, ಕಳ್ಳ ದಕಾಯಿತ ಕೊಲೆಗಾರ ಏನು ಬೇಕೊ ಅದು

'ಅಂದು ಸತ್ತ ಸಖಾರಮ ಪಾಂಡುವಿನ ಭೂತವು ಈಗ ಹೀಗೆನ್ನುವುದು, ಅವ್ಯೆ"

ಇವ್ಪತ್ತರಲ್ಲಿ ನೋಟರು ಅತ್ತ ಬಂದಿತು ಅದು ಮರಳಿತು

ಹದಿನಾಲ್ಕು ವರ್ಷಗಳಲ್ಲಿ, ಮುಳಶೀ ಪೇಟೆಯ ಪಾಂಡುಗಳೆಷ್ಟೊ ಮಂದಿ ಸತ್ತು, ಕೇಡಿಗಳಾಗಿ ಸುತ್ತುತ್ತಿರುವರು

ಆ ಜಲಸಾಗರದಲ್ಲಿ ಇವರು ಸತ್ತಿದ್ದರೆ?

ಮುಂಬಾಯಿಗೆ ವಿದ್ಯುದ್ದೀವಗಳೆಲ್ಲ ದಿದ್ದರೆ?

ಆ ಅಣೆಕಟ್ಟು ಕಟ್ಟಿರದಿದ್ದರೆ?

ಸಖಾರಾಮನು ಸುಖವಾಗಿ ಆರಾಮವಾಗಿ ಇರುತ್ತಿದ್ದನು.

ಕಳಕಿಗೆಂದು ಹೋಗರೆ!

ಲಂಕೇಶ್...ಹೋಗಿಬಂದವರು

ಸರಿ ಬಂತು ಎಂದರೆ ಬಂದೇ ಬಿಟ್ಟಿತು ಕರ್ನಾಟಕ ಸಾಮ್ರಾಜ್ಯದ ನೈಋತ್ಯ ಸೂಚಕವಾದ ದಸರೆಯುತ್ಸವವನ್ನು ನಾನೆಂದಿಗೆ ನೋಡಲಿ? ಎಂದು ಕ್ಷಣಕ್ಕೊಂದು ಪ್ರಶ್ನೆ ನನ್ನಲ್ಲಿ. ಅಂತೂ ಹೋಗಬೇಕೆಂಬ ಆತುರ; ಹೋಗ ದಿರಬಾರದು- ಎಂದು ನಿರ್ಧಾರ; ಹೋಗಿಯೆ ಬಿಡುವುದು ಎಂದು ಶ್ವಾಸನವನ್ನೂ ಬಿಟ್ಟು, ಮೇಜನ್ನು ಬಡಿದು, ಪೆನ್ಸಿಲು ಮೊನೆ ಮೊರೆದು, ದೀವಟಿಕೆಯನ್ನು ನಡುಗಿಸಿ, ಇಷ್ಟು ಅಪಶಕುನಗಳನ್ನು ಉಂಟು ಮಾಡಿಕೊಂಡೆನು. ಇನ್ನು ಹೋಗಲೇ ಬೇಡವೇ, ಎನಿಸುತ್ತಿದೆ; ಅಥವಾ ಹೋಗಲೇ, ಬೇಡವೇ? ಎಂದು ತರ್ಕಕ್ಕೆ ಪ್ರಾರಂಭವಾಗಿದೆ.

ಯಾವುದೊಂದು ನವನಿರ್ಧಾರವಾಗುವ ಮೊದಲು ಪೂರ್ವ ನಿರ್ಧಾರಕ್ಕೂ ನವ ನಿರ್ಧಾರಕ್ಕೂ ನಡುವೆ ಒಂದು ಸಂಕ್ರಮ ಬೇಕಾಗಿದೆಯಲ್ಲ! ಯಾವ ಸಂಕೋಚತೆಯನ್ನೆ ಹಾಡು ಹೋಗಲು ಯಾವ ಭಗೆಯ ಸಂಕವನ್ನು ಕಟ್ಟಿಸುವುದೆಂದು ವಿಚಾರ ಮಾಡಿದೆನು; ಮನಸ್ಸಿನಲ್ಲಿ ಸಂದೇಹವಾಗುವುದೇ ತಡ, ಕನಸಿನಲ್ಲಾ ನೆನೆಯದ ಸಂತಯ ಛಾಯೆಗಳು ಕೂಡಲೆ ದೇಹ ಧರಿಸಿಕೊಂಡು ಮೆರವಣಿಗೆಯಾಗಿ ಬರುವುವು. ಹೋಗಬೇಕೆಂದಾಡ ನಿರ್ಧಾರವೆಲ್ಲಿ? ಈ ಸಂದೇಹ ಛಾಯೆಗಳ ತಾಂಡವವೆಲ್ಲಿ? ಇವುಗಳ ನಡುವೆ ನಿರ್ವಾಣ ಸೂತ್ರಗಳನ್ನು ಹುಡು ಹಿಡಿಯೆ ಧ್ಯಾನಮಗ್ನ ನಾಗಿದ್ದ ಗೌತಮನಂತೆ, ನಾನೇನು ಮಾಡಬಲ್ಲೆನು ಎಂದೇ ಹೊಸ ಬೆದರಿಕೆ. ಅದರೆ, ಕೂಡಲೆ, ನಮ್ಮ ಸಾಹಿತಿಗಳೊ ಬ್ಬರು ಎಂದರು:- "ಮಂಗಳೂರು, ಬೆಂಗಳೂರು ಎಷ್ಟು ಸವಿಯವವಿವೆ, ಧ್ವನಿಯಲ್ಲಿ? ಮಂಗಳೂರು ಮುನ್ನಡೆಯ ಬೇಕೆಂದಿದ್ದು, ಮುದ್ದಣನ ಕಾಲದಿಂದಲೂ ಚಡವಡಿಸುತ್ತಿದೆ; ತನಗೆ ಬೆನ್ನು ಹಾಕಿ ಕೂತ ಬೆಂಗಳೂರಿನ (ಅರ್ಜುನ ಧ್ವಜ ದಲ್ಲಿದ್ದ ಹನುಮನ ಮುಖ ತಿರುಗುವರೆಗೆ ಭೀಷ್ಮಾಚಾರ್ಯನು ಬಾಣ ಬಿಟ್ಟಂತೆ) ವ್ಯಸನ ವದನವನ್ನು ತನ್ನ ಕಡೆಗೆ ತಿರುಗು ವಂತೆ ಮಾಡಲು ಮಂಗಳೂರು ಸಾಹಸ ಪಡುತ್ತಲೇ ಇದೆ. ನಮ್ಮದೂ ನಿಮ್ಮದೂ ಭಾಷೆಯೊಂದೇ ಇರಲಿ; ಅಲ್ಲುದಿರಲಿ, ನಾವೂ ನೀವೂ ಒಂದೇ ದಸರೆಯನ್ನಾದರೂ ಆಚರಿಸುವವರು ಎಂದೇ ಮಂಗಳೂರಿನ ವಿಸ್ಮಿತ. ಹಿಂದೆಯೂ ಮುಂದೆಯೂ ಕರ್ನಾಟಕ ರಾಷ್ಟ್ರವು ನಿಸ್ಸುದಿರಲಿ, ಕರ್ನಾಟಕ ಪ್ರಾಂತ್ಯ ದಲ್ಲಿ ನಾವೂ ನೀವೂ ಸಮಾನ ಪ್ರಜೆಗಳಲ್ಲವೆ? "ನಿಮ್ಮ ನಮ್ಮ ಪೇಚಾಟಗಳು ಸ್ಪರ್ಧೆಗಳು ಭಾಷಾಧಿವೃದ್ಧಿಗಾಗಿ ಸಾಗುತ್ತಿರಲಿ, ಜ್ಞೇಷಾಧಿವೃದ್ಧಿಗಾಗಿ ಸಾಗದಿರಲಿ," ಎಂದು ನಾವು ದೇವಿಯೊಡನೆ ವಿಸ್ಮವಿಸುವಾಗ ನೀವೂ ನಮ್ಮ ಗಾನ ದಲ್ಲಿ ಸಮತಾನತೆಯಿಂದ ಕೂಡಿದರೇನು? ಆಗ ನಮ್ಮಂತಹ ದೀನರು ದೂರದಿಂದಲೆ ಆದರೂ ದಸರೆಯುತ್ಸವ ವನ್ನು ತಮ್ಮ ಬಳಿಯಲ್ಲಿದ್ದು ಮುಗ್ಧರಾಗಿ ನೋಡಿದಂತೆ ನೋಡುವೆವು. ಇದು ಬೇಡವಾದುದೇ? ಅನಕ್ಯವಾಗಿಯೂ ಬೇಕಾದುದು!" ಎಂದರವರು. ಹೊರಡುವುದಕ್ಕೆ ಒಂದು ಗುಣ ಹಾಕಿಕೊಂಡೆನು. ಆದರೆ ನನ್ನ ಆಕ್ಷೇಪ ಬೇರೆ.

"ಮೈಸೂರು-ಮಂಗಳೂರು ನಕ್ಷೆಯಲ್ಲಿ ಎಷ್ಟು ಸವಿಯವವಿವೆ? ಮನಸ್ಸಿನಲ್ಲಿ ಭಾವಿಸಿದರೆ ಅದಕ್ಕೂ ಸವಿಯವ ವಿರುವುವು. ಆದರೆ, ಪ್ರತ್ಯಕ್ಷ ದೇಹಧಾರಿಯಾಗಿ ಸ್ವಯಂ ಅತ್ತ ಚಲಿಸುವುದೆಂದರೆ, ಅದೊಂದು ಪ್ರಾಬ್ಲೆಮ್ ಎನ್ಕುತ್ತಾ ರ್ಲ್ಲ, ಹಾಗೆ ಒಂದು ಸಮಸ್ಯೆ. ಗಟ್ಟದಾಚೆಯ ಗೌಡರು ಸಾಲುಗಾಡಿಗಳಲ್ಲಿ ಸಾಮಾನು ತಂದು ಇಲ್ಲಿ ಒಡ್ಡುತ್ತಾ, ಮರಳುವಾಗ, ಬಾಡಿಗೆ ತಿವ್ಯಾ ಅವರ ಗಾಡಿ ಹತ್ತಿ ಹೋಗೋಣ ಎಂದರೆ,-ಪುಣ್ಯಾತ್ಮರು ಈ ತಿಂಗಳ ಅಂತ್ಯದ ತನಕ ಮಾಲುಗಾಡಿಗಳ ಸಾಲುಗಾಡೀ ಗೌಡರು ಇತ್ತ ಸುಳಿ ಯುವುದಿಲ್ಲ. ಇನ್ನೂ ಕಂಬಳಿ ದುರುಸ್ತಿಯಲ್ಲಿದ್ದಾರಪ್ಪ; ಅಥವಾ ಕೊರಳ ಧ್ವನಿಯು ತುಡ್ಡವಾಗುವ ಹಾಗೂ ಗಂಭೀ ರವಾಗುವ ಹಾಗೂ 'ಸಾರೀಗ್ರಾಮ'ಗಳ ತರ್ಕಕ ಮತ್ತು ಕಠಿಣ ಪ್ರಯತ್ನಗಳಲ್ಲಿದ್ದಾರೆಂದರೂ ಆಗಬಹುದು. ಅವರು ಹೊಡೆವ ಗಾಡಿಗಳು ಬರುತ್ತಿವೆ ಎಂಬುದಕ್ಕೆ ನೂರು ತಾಸಿನ ನೊದಲೇ,-ಕಾಫಿಯ ವಾಸನೆ, ಎತ್ತು ಕೊರಳ ಗಂಟೆಗಳ ಜಣ ಜಣ, ಎತ್ತು ನಡೆಯುವ ಮ್ಹಾಲಿಕರ ಧವಲಕ್ತಿನ ಹೊಯ್ದಾಟ, ಇರಲಿ, ನನ್ನಂತಹ ಬಡವರನ್ನು ಎತ್ತಿ ಕೊಂಡೊಯ್ಯುವ ಭಾಡಿಗೆ ತಿವ್ಯಾ ಕಚೂರಿನ ಮಹಾತ್ಮ ರಿರವರು. ಇರಬೇಕು, ಬರುತ್ತಾ ಇರಬೇಕೂ ಅಂತವರು ಅಂತ.

"ಎತ್ತಿನ ಗಾಡಿ ಹೋಗಲಿ, ಮೋಟರು ಹತ್ತಿದರೇನು? ಅಂತ. ಮೋಟರು ಹತ್ತಿದರೇನೂ ಇಲ್ಲ, ಅದರಿಂದ ಇಳಿಯುವಂತಾದರೆ ಸರಿ ಅಂತ. ಮೊದಲು ಕಂಡಕ್ಟರಿಂದ್ದರು, ಒಂದೊಂದು ಸಲ ಮೈಸೂರು ಕಡೆಗೆ, ಅಥವಾ ಮೈಸೂರಿಂದ ಈ ಕಡೆಗೆ ಓಟಕ್ಕೆ ಮಾತ್ರ;- ಭಾಡಿಗೆ ತಿವ್ಯಾ ಪ್ರಯಾಣಿಕ ರಿರರು. ಈಗ ಹಾಗಿಲ್ಲ, ಎಲ್ಲಾ ಕೊಂಬಾಯಿನ್ ಆಗಿ ಕೊಂಬು ಎದ್ದಿದೆ. ಮೊದಲು ಇದ್ದ ಕಂಡಕ್ಟರರಲ್ಲಿ ಹಲ ವರು ತ್ಯಾಗ ಬಾಡಿಗೆ ತೆತ್ತು ಪ್ರಯಾಣ ಮಾಡಬೇಕು; ಎಂದರೆ ಕೆಲಸವೂ ತಿವ್ಯಾ ಆಗಿದೆ ಅಂತ ಇನ್ನೂ ತಿವ ತಿವಾ ಅನ್ನುತ್ತಾರೆ. ಹೀಗಾದರೆ ಭಾಡಿಗೆ ತಿವ್ಯಾ ಹೋಗು ವುದೆಂತು? ತ್ಯಾಗ ಇರುವ ಕಂಡಕ್ಟರರನ್ನು ಪುಸಲಾಯಿ ನೋಣವೆ? ಇವರು ಸ್ವತಃ ಕಣ್ಣು ಕಟ್ಟುವವರು; ಇವರ ಕಣ್ಣು ಕಟ್ಟುವವರು ಬೂರು? ದುಡ್ಡು ಕೊಟ್ಟು ಟಿಕೇಟು ಪಡೆವವರನ್ನು ಸಹ ತಮ್ಮ ಮುಂದೆ ಕೈಕಟ್ಟಿ ನಿಲ್ಲಿಸಲು ಇವರು ಹಿಂತೆಗೆವುದಿಲ್ಲ ಎಂದು ಜನರ ಅಂಬೋಣವಿದೆ. ನೆನಗಿದೆಲ್ಲ ಅಸಾಧ್ಯ. ಹೀಗಾಗಿ ಮೋಟರಿಲ್ಲ. ಹಾಗೆಂದು ಜನರು ದೂರುವುದನ್ನು ನಾವೇಕೆ ನಂಬಬೇಕು? ಅವರವರ ದಿನ ಹಾಗೆ ಹಾಗೆ ಮಾಡುತ್ತಾರೆ. ನಾಳೆ ವಿಮಾನಗಳು ಓಡಾಟಕ್ಕೆ ಬಂದವೂ ಅಂದರೆ, ಇವರೇ ಕೈ ಕಟ್ಟಿ ಆಕಾಶ ನೋಡ್ಕಾರು,-ಅದು ವರೆಗೆ ಕಂಡಕ್ಟರರಾಗಿ ಉಳಿದರೆ! ಕೊಂಬಾಯಿನಿನ ಕೊಂಬಿನ ಮೇಲೇ ಇವರಿಗೆ ಶೂಲಕ್ಕೆ ಹಾಕಿದಂತಾಗದಿದ್ದರೆ ಒಳಿತು.

"ಇನ್ನು ವಿಮಾನಗಳನ್ನೇರಿ ಹೋಗೋಣ. ಆಗದೆ? ಮೊದಲು, ವಿಮಾನಗಳಿಲ್ಲ. ಇದ್ದರೂ ಅಭ್ಯಾಸವಿಲ್ಲ. ಅಭ್ಯಾಸವೇ ಇದ್ದರೂ, ಈಗಲೂ ಪ್ರಕಟ ಮಾಡಿದ್ದಾರೆ,-ಗೂಳೂರು ಕರೆಯಲ್ಲಿ ವಿಮಾನವೊಂದು ಸರಕ್ಕನೆ ಇಳಿದ ಕೂಡಲೆ ಕರೆ ಅದನ್ನು ಗುಳುಂ ಮಾಡಿತು ಎಂದು. ವಿಮಾನ ಬಿದ್ದು ಸತ್ತರೆ ಮೋಕ್ಷ; ಅದೂ ನೀರಿಲ್ಲದ ಕರೆಯಲ್ಲಿ ಮುಳುಗಿದರೆ, ಅದೆಂತಹ ಮೋಕ್ಷ ಸದವಿ? ಅಥವಾ ಅಮ್ಮು ಸಾಹಸದಿಂದ ಎಲ್ಲರೂ ಹುಡುಕಿದರೂ ಸಿಗದ ಈ ವಿಮಾ ನವು ಸಾಗಲೋಕದಿಂದ ಪುನಃ ಮರಳಿ, ಕರೆಯಿಂದ ಮೇಲ ಕೈದ್ದು ನೆಗೆದು ಹಾರುವ ವರೆಗೆ ಕಾದಿದ್ದರೆ ಸುಲಭವಾಗದೆ? ವಿಮಾನವು ಸುತ್ತತೆಂದು ಎಲ್ಲರೂ ನಂಬಿರುವಾಗ, ಅದರ ಮೇಲೆ ಬಾಡಿಗೆ ತಿವ್ಯಾ ಹತ್ತಿ ಹೋಗುವುದು ಸುಲಭ. ಆದರೆ, ದಸರೆಯ ನಂತರ ಅಲ್ಲಿಗೆ ತಲಪಿದರೆ? ಬೇಡ,-ಅಂತೂ ಈ ವಿಮಾನವೆ ಬೇಡ.

"ಸುಲಭ ಉಪಾಯ;-ಹಡಗು ಹತ್ತಿ ಹೋಗುವುದು. ಅಜ್ಜನ ಕಾಲದಿಂದಲೂ ಒಳಗೆ ಬಿದ್ದಿರುವ ಕನ್ನಡ ಗ್ರಂಥ ಗಳಿರೊಂದು ದೊಡ್ಡ ನನಗನ್ನು ತಯಾರಿಸಿ, ಹಡಗಿಗೆ to pay ಸರಕಾಗಿ ಬರೆಯಿಸುವುದು; ಅದನ್ನು ಹೊರುವ ಎತ್ತಿ ಡುವ ಕೂಲಿಯಾಗಿ ನಾನೇ ಹೋಗುವುದು; ಹಡಗಿಗೆ ತುಂಬಿಸಿದ ಬಳಿಕ, ಸರಕಿನ ಜತೆಯಲ್ಲಿ ನಾನೂ ಬೆರೆತು ಕೂತಿರುವುದು; ಹಡಗು ಬಂದರು ಬಿಟ್ಟು ಕೂಡಲೆ, ನನ್ನನ್ನು ಒಯ್ಯುತ್ತಾರಯ್ಯಾ ಎಂದು ಕೂಗುವುದು; ಹಡಗಿನವರು ನಡು ಕಡಲಲ್ಲಿ ಕೈ ಬಿಡಲಾರದು; ಪುನಃ ಇಲ್ಲಿಗೆ ಬರುವಾಗ ತಂದು ಬಿಟ್ಟಾರು; ಅದು ನರೆಗೆ ಊಟ ಮೊದಲಾದುವಕ್ಕೆ ಅಲ್ಲಿ ನನಗೆ ತಿಳಿದಂತೆ ಮಾಡಬಹುದಾಗಿರುವ ಕಾಯ ಕವ್ಯವೇ ವಜಾ. ಉಪಾಯವೇನೋ ಬಹಳ ಉತ್ತಮ, ದಿವ್ಯ ದೃಷ್ಟಿಗೂ ಸಿಲುಕದು. ಆದರೆ,-ಮೈಸೂರಿನ ಸೌಭಾಗ್ಯ ನೋಡಬಾರದೆ? ಸಮುದ್ರ ದಂಡೆಯೇ ಆ ರಾಜ್ಯಕ್ಕೆಲ್ಲ! ಇದ್ದಿದ್ದರೆ, ಉತ್ತರಕಾನಡಾ, ದಕ್ಷಿಣಕನ್ನಡಾಗಳಂತೆ ತೀರ ತುಳು ಕನ್ನಡವೇ ಗ್ರಂಥಸ್ಥವಾಗಿ ಬಾಯಿ ಮಾತಾಗಿ ಅಲ್ಲಿಯೂ ಹಾವಳಿ ಎಬ್ಬಿಸುತ್ತಿತ್ತು; ಅಚ್ಚು ಕನ್ನಡಕ್ಕೆ ತಾಯ್ನುಡಿ ಇರುತ್ತಿರಲಿಲ್ಲ ಮಾತ್ರವಲ್ಲ, ಕಾಲೂರಲೂ ನೆಲೆ ದೊರೆಯುತ್ತಿರಲಿಲ್ಲ. ಕನ್ನಡಕ್ಕೂ ಕಡಲಿಗೂ ಸಂಬಂಧ ವುಂಟಾದರೆ, ಜಾತಿಗೆಡುವುದು. ಇತರ ರೀತಿಯಲ್ಲಿ ಉತ್ತಮ ಕ್ಷೇಮಕರ ಎನ್ನಬಹುದಾಗಿರುವ ಕಡಲ ಗಾಳಿ ಕನ್ನಡ ಭಾಷೆಯ ಜೀವನಕ್ಕೊಂದು ಶಾಪ.

"ಹೀಗಿರುವಾಗ, ಅತ್ತ ಹೋಗುವುದೇ ಕಷ್ಟವಲ್ಲ, ನನ್ನಂತಹನು ಅತ್ತ ಹೋಗುವುದು ಹೇಗೆ? "ಹೋಗುವುದೇ" ಕಷ್ಟ ಎಂದನೇಕೆಂದು ತಿಳಿಯುತೆ? ಹೋಗುವುದು ಮಾತ್ರ ಕಷ್ಟ, ಬರುವುದು ತೀರ ಸುಲಭ.

"ಪ್ರತಿಯೊಂದೂ ರಾಷ್ಟ್ರವೆ 'ತಾನು ತನಗಾಗಿ' ಎಂಬ ಸೂತ್ರವನ್ನು ಎತ್ತಿ ಹಿಡಿದು, ಸ್ವಯಂನಿರ್ಧಾರಿ ತತ್ವವನ್ನು ಅಂಗೀಕರಿಸಿ (ಅಂಗಿಯನ್ನಾಗಿ ಮಾಡಿಕೊಂಡು) ಅದನ್ನು ಹೊದೆದುಕೊಂಡಿರುವ ಕಾರಣ, ಮೈಸೂರು ನನ್ನನ್ನು ಗೆಳೆತನ ದಿಂದ ಕಂಡರೆ ನಾನು ಗಣ್ಯ, ಕಾಣದಿದ್ದರೆ ನಾನು ಅಗಣ್ಯ ನಲ್ಲವೆಂದು ನನಗೆ ಗೊತ್ತಿರುವುದಷ್ಟೆ ನನ್ನ ಪುಣ್ಯ. ಹೊರಡು ಎಂದು ಅವರೆನ್ನರು; 'ಮಹಾಸ್ವಾಮಿ, ನಾಲ್ಕು ದಿನ ಇರ್ತೀಬೇಕು ಅದರೆ ಊರ ನೆನಪಾಗದೇ ಪಾವ?' ಎಂದಾರು; 'ಮಹಾಸ್ವಾಮಿ' ಎನ್ನದೆ ಕನ್ನಡ ಮಾತಾಡಿದರೆ, ಮೈಸೂರಲ್ಲಿ ಭಂಡಾರದ್ರೋಹ ಮಾಡಿದ ಪಾಪವುಂಟೆಂದು ಕನ್ನಡಿಗರಿಗೆ ಅದರಿಂದ ತಿಳಿದುಬರುವುದು. ಅಖಿಲ ಭಾರತದ ಭಾಷೆ ಯಾಗಲಿರುವ ಹಿಂದೀಯ 'ಜೀ' ಗ್ಗಾನಿ ಈ ಮೈಸೂರು ಕನ್ನ ಡದ 'ಮಹಾಸ್ವಾಮಿ'ಗೂ ಬಹಳ ಸವಿಯವದ ಸಂಬಂಧವಿದೆ; ಅದು ಕಾರಣವೇ ಅಖಿಲ ಭಾರತಕ್ಕೆ ಹಿಂದೀಯಂತೆಯೆ, ಮೈಸೂರು ಕನ್ನಡವೇ ಅಖಿಲಕರ್ನಾಟಕದ ಕನ್ನಡವಾಗಲಿದೆ. ನನಗೆ ನನ್ನ ಪ್ರಿಯ ಕುಟುಂಬದ ನೆನಪು ಹುಟ್ಟಿಸಿದರೆಂದರೆ, ಆ ಸೂಜಿಗಲ್ಲಿನ ಸೆಳೆತದಿಂದ ತಪ್ಪಿಸಿಕೊಳ್ಳುವರಾರು? ಓಡುತ್ತ ಗಟ್ಟಕ್ಕೂ ಬಂದು ತಲಪುವೆನು. ಗಟ್ಟಕ್ಕೆ ತಲಪಿದೆ ನೆಂದರೆ, ಮನೆಗೆ ಮುಟ್ಟಿದ ಹಾಗೆಯೆ. ಮೈಸೂರಿನ ಕೀರ್ತಿಯ ಕಸ್ತೂರಿಯು ಹೇಗೆ ವಾಯುಮಂಡಲದಲ್ಲಿ ವರಿ ಮಳವನ್ನು ತುಂಬುವುದೋ, ನಾನು ಅಷ್ಟೆ ಹಗುರನಾಗು ವೆನು. ಗಟ್ಟದಾಚೆಯ ಗ್ರಂಥಗಳೂ ಮಾದರಿಗಳೂ ನಾಟಕ ಕಂಪೆನಿಗಳೂ ಅಥವಾ ತಂಣ ಭಿಕ್ಷುಕರೂ ಹೇಗೆ ನಮ್ಮ ಕಡೆಗೆ ಬಲು ಸುಲಭವಾಗಿ ಉರುಳಿ ಬರುವರೋ, ಹಾಗೆಯೆ ಗಟ್ಟದಿಂದೀಚೆಗೆ ಉರುಳಿ ಮನೆ ಸೇರುವುದು ಸುಲಭ. ಹೀಗಾಗಿ, ನನ್ನ ಪುಸ್ತಕಾದಿಗಳಂತೆ, ಗಟ್ಟ ಹತ್ತುವುದು ಕಷ್ಟ ವಲ್ಲದೆ, ಇತ್ತ ಉರುಳುವುದು ತೀರ ಸುಲಭ.

"ಹಾಗೆ ಹೀಗೆಂದು ದಸರೆ ಬಂತೇ ಬಂತು. ಹೋಗಲೇ ಬೇಡವೆ? ಎಂಬ ಪ್ರಶ್ನೆಗೆ ಇನ್ನೂ ಉತ್ತರ ದೊರೆತಿಲ್ಲ. ಕಳೆದ ದಸರೆ ಕಾಲದಲ್ಲಿ ಏನೋ ಒಂದು ಗೆಲುಭೆಯಾಗಿದ್ದುದರ ತೀರ್ಮಾನವು ಇನ್ನೂ ಆಗಿಲ್ಲ; ಅದು ಸಂಪೂರ್ಣ ತಿಳಿದು ಬಾರದೆ ನಾನು ಅತ್ತ ಹೋಗಲೆಳಸುವುದೂ ಸರಿಯಲ್ಲ. ಇದು ಒಂದು ಮುಖ್ಯ ಕಾರಣ. ಗೌಡರ ಗಾಡಿ, ಮೋಟರು, ಹಡಗು, ವಿಮಾನಗಳೇ ನನ್ನನ್ನು ಕುಟುಂಬಿಯ್ಯಲಾರವು. ಕೈಲು ಮೂಲಕ ಹೋಗೋಣ ಎಂದಿದ್ದೆ; ತರೀಕರೆ ಅವಘಡ ತಿಳಿದೂ (ಅದರ ವಿಚಾರಣೆಯೂ ಸಾಗುತ್ತಲೇ ಇದ್ದು ಇನ್ನೂ ತೀರ್ಮಾನವಾಗಿಲ್ಲ) ಯಾರಾತ ಕೈಲು ಹತ್ತುವವ? ಹತ್ತು ಸಾವಿರಕ್ಕೆ ಇನ್ಯೂರ್ ಆರ್ಜ ಮಾಡಿಯೂ ಒಂದೂ ಪ್ರಿಮಿ ಯಮ್ ತೆರದೆ ಇರುವ ನನ್ನಂತಹರಿಗೆ ಇದು ಸಾಧ್ಯವೇ?"

ಸಾಹಿತಿಗಳು ಹೀಗೆಂದು, ಇನ್ನು ಮಾತಾಡಲಾರದೆ ಸುಮ್ಮನಾದರು. ಇದು ತೀರ ವಿವರೀತ ವಕ್ಷ. ನನಗೆ, ನನ್ನ ನರೆತ ತಲೆಗೆ, ಇಷ್ಟೆಲ್ಲವು ಸರಿ ಹೋಗಲಿಲ್ಲ. ಹಾಗೆಂದು ನನಗೆ ಏನೊಂದು ಬೇರೆ ಸೂಚನೆ ಕೊಡುವವರು ಸಿಗಲಿಲ್ಲ. ಇನ್ನೇನು ಮಾಡೋಣವೆಂದು ನರೆ ಕೂದಲಿನ ಮರ್ಯಾದೆಯು ಕರಿಗೂದಲಿನ ಸನ್ನಿಧಿಯಲ್ಲಿ ಈ ಕಲಿಗಾಲದಲ್ಲಿ ಉಳಿಗಾಲ ವಿಲ್ಲದೆ ಮಾಯವಾಗುವುದೆಂದು ತಿಳಿದೇ ಇದ್ದೆನಾದರೂ, ನಾಲ್ಕು ಮಾತಾಡಿ ನೋಡುವೆನೆಂದೆನು. ನನ್ನಲ್ಲಿ ದಸರೆಗೆ ಹೋಗಬೇಕೆಂಬ ಲವಲವಿಕೆಯು ಉಕ್ಕಿ ಭರಿತಿಪ್ಪುದ ರಿಂದಲೂ, ಯಾವುದೊಂದು ಪಕ್ಷಕ್ಕೆ ನಾಲ್ಕು ಮಾತುಗಳನ್ನು ಎದುರಾಡದೆ; ತರ್ಕದ ತಿಕ್ಕಾಟವು ಸರಿಯಾಗದೆಂಧೂ ಮಾತ್ರ ನಂಬಿ, ಕೆಲವು ಮಾತುಗಳನ್ನಾಡಿದೆನು. "ರಾಯರೆ, ನಿಮ್ಮ ಮಾತುಗಳೇನೋ ನಿಜವೆ. ಹೊಟ್ಟೆಯಲ್ಲಿ ಬಿಟ್ಟು ಕೊಳ್ಳಲಾರದೆ ನೀವು ಹೇಳಿದಿರಿ, ಅದೂ ನೃಂಗವಾಗಿ ಇರಲಿ. ನಿಮ್ಮ ಅಭಿಪ್ರಾಯವು ತಿಳಿಯಿತು. ಈಗ ನಾನೂ ಕೆಲವು ಅಭಿಪ್ರಾಯಗಳನ್ನು ಹೇಳಲೇ?

ಪದಿನೈದನೇ ಪುಟಕ್ಕೂ ನೋಡಿರಿ

ನಿದ್ರಾವಸ್ಥೆ; ನಿದ್ರೆಯ ಅವಸ್ಥೆ.

ಶ್ರೀ ಎಮ್. ವಿ. ಶ್ರೀಕಂಠ, ಎಮ್. ಎ. ಎಲ್. ಟಿ.

ನಮ್ಮಲ್ಲಿ ನಿದ್ರೆಯಿಲ್ಲದವರು ಹಲವರು; ನಿದ್ರಾದಾನವನ್ನು ನೂಡುವವರು ಕೆಲವರು! ಪತ್ರಿಕೆಗಳಲ್ಲಿ ಬರುವ ಪ್ರಕಟಣೆಗಳನ್ನು ಓದಿದರೆ ಇದು ತಿಳಿಯುವುದು. ಯಾವ ಯಾವ ಬಗೆಯ ಔಷಧಗಳು! ಸೇವಿಸಿದ ಅರ್ಧ ತಾಸಿನಲ್ಲಿಯೇ ನಿದ್ರೆಯನ್ನುಂಟು ಮಾಡುವಂತಹವು ಗಳು. ಇಂತಹ ಮದ್ದನ್ನು ಹೊಸ ಹೊಸ ವಿಧದಲ್ಲಿ ತಯಾರಿಸುವುದರಲ್ಲಿಯೂ, ಅವುಗಳಿಗೆ ತಕ್ಕುವಾದ ನವೀನ ಹೆಸರು ಗಳನ್ನು ಕಲ್ಪಿಸುವುದರಲ್ಲಿಯೂ ಮದ್ದು ಮಾಡುವವರಿಗೆ ಸಹ ನಿದ್ರೆಯಿಲ್ಲ, ಕೆಗೆದುಕೊಳ್ಳುವವರಿಗೆ ಹೇಗೂ ನಿದ್ರಾ ಧ್ಯಾನವನ್ನು ಮೊಡುತ್ತ ನಿದ್ರೆಯು ಹತ್ತುವುದಿಲ್ಲ. ರಾತ್ರಿ ಯಿಲ್ಲ ಹಾಸಿಗೆಯಲ್ಲಿ ನಿದ್ರೆಯು ಜಪವನ್ನು ಮಾಡುವುದು, ನಿದ್ರೆಯಲ್ಲದೆ ತಪಿಸುವುದು ಇವೇ ಈಗಿನ ನಿದ್ರಾವಸ್ಥೆ.

ಈ ಹಾಳು ಸ್ಥಿತಿಗೆ ಕಾರಣವಾವುದು? ನಗರವಾಸಿ ಗಳಾದ ನಾಗರಿಕರು ಇದೆಲ್ಲಾ ತಮ್ಮ ಸ್ವಂತ ಅನುಭವದಿಂದ ತಿಳಿದಿರುವ ವಿಷಯ ಬೇಸಿಗೆಯ ಕಾಲದಲ್ಲಿ ವೈಯನ್ನು ಬೇಯಿಸುವ ಬೇಗೆ, ಅದರ ನಡುವೆ ಮಕ್ಷಿಕಗಳ ಆಟ, ತಲೆಯಲ್ಲಿ ಇಪ್ಪತ್ತು ಬಗೆಯ ಆಲೋಚನೆಗಳು, ಅಥವಾ ಯೋಚನೆಗಳು; ಇವುಗಳ ಯೋಚನೆಯಿಂದ ಎಂತಹ ಮದ್ದುಗಳನ್ನು ಕುಡಿದರೂ ಪ್ರಯೋಜನವಿಲ್ಲ. ಪ್ರಯೋಜ ನವು ಮದ್ದನ್ನು ತಯಾರಿಸುವವರಿಗೆ;—ಕಿಸೆ ತುಂಬಾ ಹಣ.

ಪಟ್ಟಣಿಗರಿಗೆ ತಲೆಯು ಯಾವಾಗಲೂ ಬಿಸಿ; ತಲೆಯ ಭಾರವು ಯಾವಾಗಲೂ ಕಡಿಮೆಯಾಗುವಂತಹುದಲ್ಲ; ಎಂತಹ 'ಕ್ಲೋಸ್ ಕ್ಯೂಸ್' ಮಾಡಿಸಿದರೂ ಭಾರವು ಅಷ್ಟೇ ಹೀಗಿರುವಾಗ ಮಳೆಗಾಲದಲ್ಲಾದರೂ ಈ ಬಿಸಿಯು ಸ್ವಲ್ಪ ತಣ್ಣಗಾಗಿ ನಿದ್ರೆಯು ಬರುವ ಹಾಗಿದೆಯೇ? ಅದೂ ಇಲ್ಲ, ವೆಸ್ಟಾಕಾಲವು ಹೊರಗಲ್ಲ; ಮನೆಯೊಳಗೆ, ಯಾವ ಮಾಡುಗಳಲ್ಲೂ ಓಡುಗಳು ನಿಲ್ಲುವುದಿಲ್ಲ, ಇಲ್ಲವೆ ನಂರಿ ಕೇಳ ಪತನ, ಇಲ್ಲವೆ ತಿನಾತ್ರಿಯ ಕಲ್ಮಳೆ ಅದುಕಾರಣ ಓಡುಗಳ ಓಟ ಕೋಣೆಯಲ್ಲಿ ಅಥವಾ ಜಗುಲಿಯಲ್ಲಿ ನಿದ್ರೆಯ ತಪಸ್ಸನ್ನು ಮಾಡುವವನಿಗೆ ಮೇಳೆ ತೀರ್ಥ ಭಿಷೇಕ. ಹೀಗಾಗಿ ನಿದ್ರೆಯ ಪಲಾಯನ

ಹಳ್ಳಿಗರ ಅವಸ್ಥೆಯು ಹೇಗೆ? ಅಲ್ಲಿಯವರಿಗೆ ಬಿಸಿ ಲಿನ ಕಾಟವು ಕಡಿಮೆ; ಇದ್ದರೂ ಅದನ್ನು ಅವರು ಲೆಕ್ಕಿಸು ವುದಿಲ್ಲ, ಮಳೆಯ ಹೆದರಿಕೆಯೂ ಹಳ್ಳಿಯವರಿಗೆ ವಿಶೇಷ ವಿಲ್ಲ ಕೊಡೆಯ ಅಂಗಡಿಗಳಲ್ಲಿ ಒಂದು ದಿವಸ ನಿಂತು ನೋಡಿದರೆ ಇದು ತಿಳಿಯುವುದು; ಹಳ್ಳಿಯವರಿಗೆ ಒಂದು ಕೊಡೆ ಹತ್ತು ವರ್ಷಗಳಿಗೆ ನಿರಾಯಾಸವಾಗಿ ಬರುವುದು; ಪಟ್ಟಣಿಗರಿಗೆ ವರ್ಷಕ್ಕೊಂದು ಬೇಕೇ ಬೇಕು; ದೊಡ್ಡವರಿಗೆ ಒಂದು; ಮಕ್ಕಳಿಗೆ ಆರು ಎಂದೇ ಕೊಡೆಯ ಲೆಕ್ಕ ಪಟ್ಟ ಣಿಗರು ಮಳೆಯಲ್ಲಿ ನೆನೆಯುತ್ತ ಹೋದರೆ ತಮಾಷೆ ಅಥವಾ ಕುಚೇಷ್ಟೆ ಮಾಡುವವರು ಅನೇಕರು ಹಳ್ಳಿಯಲ್ಲಿ ಅದರ ಭಯವಿಲ್ಲ.

ಆದರೆ ಕ ಹಳ್ಳಿಯವರಿಗೂ ಈಗ ನಿದ್ರೆಯು ಕಡಿ... ನಿದ್ರೆಯ ಮದ್ದುಗಳನ್ನು ಇವರಲ್ಲಿಯೂ ತರಿಸಿಕೊಳ್ಳುವ ವಾಡಿಕೆಯು ಇತ್ತೀಚೆಗೆ ಬಂದಿರುವುದು; ಅವುಗಳಿಂದ ಪ್ರಯೋಜನವು ತೀರಾ ಕಡಿಮೆಯೆಂದು ತಿಳಿಯುವ ಸಮಯವು ಅವರಲ್ಲಿ ಬೇಗ ಬರುವಂತಿಲ್ಲ. ಪಟ್ಟಣಿಗರಲ್ಲಿ ಇಂತಹ ಮದ್ದುಗಳಲ್ಲಿನ ಭರವಸೆಯು ಸ್ವಲ್ಪ ಸ್ವಲ್ಪ ಕಡಿಮೆಯಾಗುತ್ತಾ ಇದೆ. ಆದರೆ ಮದ್ದಿನ ಘರ್ಚು ಕಡಿಮೆಯಾಗುವಂತಿಲ್ಲ. ಸಾರಂಭ ದಲ್ಲಿ ರೋಗಕ್ಕೋಸ್ಕರವೆಂದರೆ ರೋಗ ನಿವಾರಣೆಗಾಗಿ ಮದ್ದನ್ನು ಸೇವಿಸುವುದಾಗಿತ್ತು; ಈಗ ಅಭ್ಯಾಸದಿಂದಲೇ ಮದ್ದನ್ನು ಬಿಡುವುದು ಕಷ್ಟವಾಗಿದೆ. ಮದ್ದೇ ಒಂದು ದೊಡ್ಡ ರೋಗವಾಗಿದೆ.

ಜನರಿಗೆ ನಿದ್ರೆಯು ತೀರಾ ಕಡಿಮೆಯೆಂಬುವುದಕ್ಕೆ ಒಂದೇ ಒಂದು ನಿದರ್ಶನವನ್ನು ಕೊಟ್ಟರೆ ಸಾಕಾಗುವುದು. ರಾತ್ರಿಯ ಜನಸಂಚಾರ. ಹಕಳೆಯ ಜನರು ಇವರನ್ನು ನಿಶಾಚರರೆಂದು ಕರೆಯುತ್ತಿದ್ದರು. ಈಗ ಜನರಲ್ಲಿ ಅರ್ಧಾಂಶವು ನಿಶಾಚರರೇ! ಚಲಚಿತ್ರ ದರ್ಶನ, ದೇವ ದೇವಿಯರ ದರ್ಶನ, ಬೀದಿ ಬೀದಿಗಳಲ್ಲಿ ತಿರುಗಾಟದ ಪ್ರದರ್ಶನ ಅಲ್ಲದೆ ಬೇರೆ ಬೇರೆ ನೈದಾನುಗಳಲ್ಲಿ ಬಿದ್ದು ಹೊರಳಾಡು ವುದು, ಜಗಳ ನ್ಯಾಡುವುದು, ಕಂಡ ಕಂಡವರನ್ನು ಗದರಿ ಸುವುದು,—ನಿದ್ರೆಯೆಂಬುದಿದ್ದರೆ, ಇಂತಹ ಕೀರ್ತಿ ಕರುವ ಉದ್ಯೋಗಗಳಲ್ಲಿ ರಾತ್ರಿಯನ್ನೆಲ್ಲಾ ಕಳೆಯುವವರ ಸಂಖ್ಯೆಯು ದಿನೇ ದಿನೇ ಹೆಚ್ಚಾಗಲಿಕ್ಕೆ ಬೇರೆ ಕಾರಣ ವಾವುದು?

ಆರೋಗ್ಯಕ್ಕೆ ಮುಖ್ಯವಾದ ಸಹಾಯವು ನಿದ್ರೆಯೇ; ಒಳ್ಳೆಯ ನಿದ್ರೆಯಿರುವವನಿಗೆ ರೋಗಗಳು ಬರುವುದಿಲ್ಲ. ನಿದ್ರಾಭಂಗದಿಂದ ಅನೇಕ ವಿಧದ ವಿಪತ್ತುಗಳು ಸಹಜ ವಾಗಿ ಬೆರುವುವು. ಚೆನ್ನಾಗಿ ಆಲೋಚಿಸಿದರೆ ಈಗಿನ ನಿದ್ರಾ ನಾಶಕ್ಕೆ ಮುಖ್ಯಕಾರಣವು ಒಳ್ಳೆಯ ಗಟ್ಟಿ ಯಾದ ಆಹಾರವನ್ನು ಭಕ್ಷಿಸದಿರುವುದೇ. ಸ್ಥೂಲಶರೀರಕ್ಕೆ ಸ್ಥೂಲವಾದ ಆಹಾರವು ಅತಿ ಅಗತ್ಯ. ಕೈಯಲ್ಲಿ ಹಣ ಕಾಸು ತೀರಾ ಕಡಮೆಯಾಗಿ, ಮುಕ್ಕಾಲುವಾಸಿ ಜನರಿಗೆ ಸಿಕ್ಕುವ ಆಹಾರವು ದ್ರವರೂಪವಾಗಿಯೇ. ಇದರಿಂದ ಹೊಟ್ಟೆಯು ಉಬ್ಬುವುದಲ್ಲದೆ ತುಂಬುವುದಿಲ್ಲ, ಹೊಟ್ಟೆಯಲ್ಲಿದ್ದ ಯಂತ್ರ ಗಳಿಗೆ ಕೆಲಸವು ಬಹು ಕಡಿಮೆ ಅದುಕಾರಣ ದೇಹವು ದುರ್ಬಲ; ಮನಸ್ಸು ಬಲಹೀನ. ಇಂತಹ ಜನರಿಗೆ ನಿದ್ರೆ ಹತ್ತುವುದು ಹೇಗೆ?

ನಿದ್ರೆಯು ಸರಿಯಾಗಿ ಹಿಡಿಯಬೇಕಾದರೆ ಮದ್ದಿನ ಸೇವನೆಯಿಂದ ಪ್ರಯೋಜನವಿಲ್ಲ. ಕೈಕಾಲುಗಳಿಗೆ ಕೆಲಸ ಕೊಡಬೇಕು. ಈಗಿನ ಜನರಿಗೆ ಕೈಕಾಲುಗಳು ನಡುಗುವ ವಲ್ಲದೆ ನಡೆಯುವುದಿಲ್ಲ. ಕೈಕಾಲುಗಳಿಂದ ಕೆಲಸ ಮಾಡಿ ಸುವುದೆಂದರೆ ಬಹು ನಾಚುಗೆ ಅಥವಾ ಆಲಸ್ಯ. ನುನೆಯ ಕೋಟಕ್ಕೆ ನೀರು ಹಾಕುವುದು, ಪೇಟೆಯಿಂದ ಸಾಮಾನು ಗಳನ್ನು ಕರುವುದು, ಅಥವಾ ಆಸ್ಪತ್ರೆಯಿಂದ ಮದ್ದು ಕರು ವುದು ಇವಕ್ಕೆಲ್ಲಾ ಜನರು ಪ್ರತ್ಯೇಕ ಬೇಕು ತೋಟಕ್ಕೆ ನೀರು ಹಾಕುವುದು ಬಾವಿಯಿಂದಲ್ಲ, ನಡೆಯುವುದು ಜಟ್ಕಾ ದಲ್ಲಿ, ಸಾಮಾನುಗಳನ್ನು ತರುವುದು ನಸ್ಯ ಅಥವಾ ಪೆಪ್ಪರ್ ಮಿರಾಯಿ. ಹೀಗಾಗಿ ಕೈಕಾಲುಗಳಿಗೆ ಶ್ರಮವಿಲ್ಲ, ಕಣ್ಣಿಗೆ ನಿದ್ರೆಯಿಲ್ಲ.

ಮಕ್ಕಳಿಗೆ ಬೆಳಗ್ಗೆ ಬೇಕು ಕಾಫಿ; ಅರ್ಧರಾತ್ರಿಯಲ್ಲಿ ಪೆಪ್ಪರ್ ಮಿರಾಯಿ ಅಥವಾ ಚಾಕಲೇಟ್. ಅದನ್ನು ತರ ಲಿಕ್ಕೆ ಯಾವಾಗಲಾದರೂ ಮರೆತುಬಿಟ್ಟರೆ ರಾತ್ರಿ ನಿದ್ರಾ ಭಂಗ. ಹಾಗೆ ಒಂದೊಂದು ಮನೆಯಲ್ಲಿಯೂ ಒಂದಲ್ಲ ಇದ್ದರೆ ಮತ್ತೊಂದು ಕಾರಣದಿಂದ ನಿದ್ರೆಯು ಅವ ರೂಪ.

ನಿದ್ರೆಯಿಲ್ಲದಿದ್ದರೆ ಜೀವಿಸುವುದು ಸಾಧ್ಯವೇ? ಸುಲಭ ಸಾಧ್ಯ. ಏಕೆಂದರೆ, ರಾತ್ರಿಯಲ್ಲಿ ನಿದ್ರಿಸಲಾರದವರೆಲ್ಲಾ ಬೇರೆ ಬೇರೆ ಸಮಯಗಳಲ್ಲಿ ನಿದ್ರೆ ಮಾಡುವ ಅಭ್ಯಾಸವನ್ನು ಮಾಡಿಯೇ ಇರುವರು. ಕೆಲವರು ಬಂದವರ ಕೂಡ ಮಾತ ನಾಡುವಾಗಲೇ ನಿದ್ರೆ ಮಾಡುವರು; ಮತ್ತೆ ಕೆಲವರು ನಿಂತಲ್ಲಿಯೇ ನಿದ್ರೆ ಹೋಗುವರು. ಮೊನ್ನೆ ಸುಬ್ಬ ಭಾಗ ವತರು ಪದವನ್ನು ಹಾಡುವ ನಡುವಿನಲ್ಲಿಯೇ ನಿದ್ರೆಯನ್ನು ಅವಲಂಬಿಸಿದರು. ಕಣ್ಣುಗಳು ತೆರೆದೇ ಇದ್ದುವು; ಶಬ್ದ ಮಾತ್ರ ಹೊರಡಲಿಲ್ಲ. ಕೆಲವರು ಊಟದ ನಡುವಿನಲ್ಲಿ; ಕೆಲವರು ಪುಸ್ತಕವನ್ನೋದುವ ಮಧ್ಯದಲ್ಲಿ.

ಪತ್ರಿಕೆಗಳು ಕೆಲವು ಸಾರಿ ತಾವೇ ಪ್ರಕಟಿಗೊಳಿಸುವ ನಿದ್ರೆಯ ಮದ್ದುಗಳನ್ನು ಸ್ವೀಕರಿಸುವುದುಂಟು; ಆಗ ಅವು ಗಳಿಗೆ ದೀರ್ಘ ನಿದ್ರೆಯು ಹತ್ತುವುದು.

+++++

— ಪದಿನಾಲ್ಕನೇ ಪುಟದಿಂದ ಮುಂದುವರಿದುದು —

ಸತ್ಯವಾಗಿಯೂ ಕನ್ನಡದ ಸೇವೆಯನ್ನು ಯಥಾಮತಿ ಯಾಗಿ ಮಾಡಬೇಕೆಂದವಸಿಗೆ, ಇತರರ ಅಭಿಪ್ರಾಯದ ಹಂಗೇನು? ಸೂರ್ಯನ ಬೆಳಕಿನಂತೆ, ಯಥಾಕಾಲಕ್ಕೆ ಮೂಡಿ ಲೋಕವನ್ನು ಬೆಳಗುವ ಶಕ್ತಿ ಅವನಲ್ಲಿರುವಾಗ, ಯಾರೇ ಹೊಗಳಬೇಕೆಂದು ಸೂರ್ಯನು ಅಪೇಕ್ಷಿಸಿಲ್ಲ ಯಾರೊಬ್ಬನ ಸರ್ಟಿಫಿಕೇಟಿನ ಆಧಾರದಿಂದ ಆತನೇನೂ ಆತ್ಮಚ್ಚನಾಗಿ ಮೆರೆವುದಿಲ್ಲ; ಯಾರೊಬ್ಬರ ವಿಮರ್ಶೆಯಿಂದ ಅವನೇನೂ ಕಂಗೆಟ್ಟಿಲ್ಲ. ಅವನಿಗೆ ಗ್ರಹಣ ಹಿಡಿಯುವು ದುಂಟು; ಕೇತುವಿನ ಬಾಧೆಯುಂಟು, ಮೋಡಗಳು ಮುಸುಕುವುದುಂಟು. ಆದರೇನು, ಅವನು ಅವನೇ ಆಗಿ ಬಾಳುವುದಿಲ್ಲವೆ? ಭೂಮಿಯಂತಹ ಲೋಕಗಳು ಅವ ನನ್ನು ಸುತ್ತಿ ಬಳಲಿ ಬೆಂಡಾಗಿ ಸತ್ತೇ ಹೋಗಬಹುದಾದರೂ, ಅವನು ಮತ್ತೂ ಇದ್ದಾನು ನೀವು ಸೂರ್ಯನಂತಾಗಲು ಯತ್ನಿಸಿರಿ ಬರೀ ಮಿಣುಕು ಹುಳುಗಳಂತಾಗಿಯೂ ಸೂರ್ಯನು ನಮ್ಮನ್ನು ಹೊಗಳುವುದಿಲ್ಲವೆಂದು ಅವನನ್ನು ದೂರಬೇಡಿರಿ ಸೂರ್ಯನ ಗುಣ ಬೇರೆ ಇದೆ. ಒಂದು ಉಸಿರು ಬಿಸಿ ಗಾಳಿ ಹರಿದರೆ, ಬತ್ತಿ ಹೋಗುವಂತಹ ಒಂದು ಹಸಿ ಇಬ್ಬನಿಯನ್ನಾದರೂ ಕಂಡರೆ, ಅದರ ಹೊಟ್ಟೆಯೊಳಕ್ಕೆ ಕನ್ನ ಕಿರಣದಿಂದ ಪ್ರವೇಶಿಸಿ ಅದಲ್ಲನನ್ನೂ ಕನ್ನಂತ ಬೆಳಗು ವಂತೆ ಮಾಡುವನಲ್ಲವೆ? ನಿಜವಾದ ಯೋಗ್ಯತೆಯುಳ್ಳ ಕನ್ನಡಿಗರು, ಇತರ ತಿರಸ್ಕಾರಪುರಸ್ಕಾರಗಳನ್ನು ಲೆಕ್ಕಿಕ್ಕೆ ತಂದುಕೊಳ್ಳದೆಯೂ, ಇತರ ಕನ್ನಡಿಗರು ಅಲ್ಪರೆಂದು ಬಗೆ ಯದೆಯೂ ತಮ್ಮ ಪ್ರಭೆಯನ್ನು ಅವರೊಳಗೆಯೂ ಮೂಡಿಸಿ ಅವರನ್ನು ಕಮ್ಮಂತೆಯೇ ಬೆಳಗಿಸುವರು ಸುಮ್ಮನೆ ನೊಂದು ಮುಂದೆ ಮಾಡಬಹುದಾದುದನ್ನು ಮಾಡದೆ, ಮುಂದರಿಯದೆ ಇತರರೊಡನೆ. ಅವರ ಸಂಕೋಚವೃತ್ತಿಗಾಗಿ ಜಗಳ ಹೂಡಿ, ಜನ್ಮವನ್ನು ಹಾಳು ಮಾಡಿಕೊಳ್ಳುವುದೇಕೆ? ಭಾಸನಾಗಲಿ, ವ್ಯಾಸನಾಗಲಿ ಇಷ್ಟೂ ದನ ಬಾಳಿರುವುದಕ್ಕೆ ಅವರಲ್ಲಿನ ತೇಜಸ್ಸೇ ಕಾರಣವಲ್ಲದೆ, ಇತರರನ್ನು ಅವರು ಟೀಕಿಸಿ ನಿಂದಿಸಿದರೆಂದಾಗಲಿ ಇತರರ ಟೀಕೆ ನಿಂದೆಗಳಿಂದ ನೊಂದರೆಂದಾಗಲಿ ಕಾರಣಗಳಲ್ಲ ಕನ್ನಡಿಗನೆಂದಿರಬೇಕಾ ದರೆ, ಎಲ್ಲ ಕನ್ನಡಿಗರೂ ತನ್ನವರೇ ಎಂದು ನುಡಿಯುವ ಅಭ್ಯಾಸ ಮಾಡಿರಿ ಗುಜರಾಥದ ನರ್ಮದಾಶಂಕರನ ಶತಾಬ್ದಿಯುತ್ಸವ ಮೊನ್ನೆ ಜರುಗಿತು ಅವನು ಅಷ್ಟು ಬಾಳಿಯೂ ಗೌರವ ಕುಂದದೆ ಇರುವನೇಕೆ? "ಎಲ್ಲರೂ ಗುಜರಾತಿಗಳು" ಎಂಬುವ ಅವನ ಆ ಕವಿತೆಯೆ ಇದಕ್ಕೆ ಕಾರಣವೆನ್ನಬಹುದು ಯಾವನು ಎಂತಹನು ಎಂಬುದಿಲ್ಲ, ಎಲ್ಲರೂ ಕನ್ನಡಿಗರೇ ಎಂದು ಪ್ರತಿಯೊಬ್ಬ ಕನ್ನಡಿಗನೂ ಭಾವಿಸಿಕೊಂಡರೆ, ಮತ್ತೆ ಮೇಲುಕೀಳೆಂದರಿಲಾರದು. ದೇವಿಯ ಆರಾಧನೆಗೆ ಇದೇ ಸುಮುಹೂರ್ತವಾಗಿರುವಾಗ ಅವಳ ಪಾದಪೀಠದ ಬಳಿ ನಮ್ರತೆಯಿಂದ, ನಾವೆಲ್ಲ ಕನ್ನಡಿ ಗರು ಒಂದೇ ಸಮನಾಗಿ ತೊಡಕಿಲ್ಲದೆ ಅವಳ ಸೇವೆಯನ್ನು ಮಾಡುವಂತೆ ಅವಳ ಅಶೀರ್ವಾದವನ್ನು ಬೇಡಿಕೊಂಡರಾಗದೆ? ಅದಕ್ಕೆ ಒಡಲಾಗಿ, ನಾನೇ ಎಲ್ಲರಿಗೂ ಮೇಲು ಏಂಬಂತೆ ಎಲ್ಲರೂ ನನ್ನನ್ನು ಖಂಡಿತವಾಗಿ ಹೊಗಳತಕ್ಕ ದೆಂದು ಅವಳ ಕೈಯಿಂದ ಘರ್ಮಾನನ್ನು ಸಹಿ ಹಾಕಿಸಿ ಕೊಳ್ಳುವುದೂ ಬೇಡ. ನಾನೆಲ್ಲದ ನನ್ನವರೆಲ್ಲವೆ ಇತರರಿಲ್ಲರು ಕೆಳತರಗತಿಯವರಾಗಲೆಂದು ಅವಳ ಶಾವವನ್ನು ಬರಿಸಿ ಕೊಳ್ಳಲೆತ್ನಿಸುವ ಹವ್ಯಾಸಕ್ಕ ಬಲಿ ಬಿದ್ದು, ಆತ್ಮನಾಶವನ್ನು ಮಾಡಿಕೊಳ್ಳದಿರೀ. ಇಷ್ಟಕ್ಕಾಗಿಯಾದರೂ ಅತ್ತಹೋಗಲು ಇಷ್ಟ ಪಡಬೇಡವೆ? ರಾಯರೆ, ರಾಯರೆ. . . . "

ಎಲ್ಲಿ ರಾಯರಿಲ್ಲ. ನಾನು ನನ್ನ ಹೇಳಿಕೆಯನ್ನು ರಾಯರ ಮುಂದಿಡುತ್ತಿದ್ದು, ಕಣ್ಣು ಮುಚ್ಚಿ ದೇವಿಯ ಧ್ಯಾನ ಮಾಡುತ್ತಿದ್ದಂತೆ ಕೊನೆಯ ಮಾತುಗಳನ್ನು ಹೇಳಿದೆನು. ಆದರೆ, ರಾಯರು ಎಂದೋ ನನ್ನೊಬ್ಬನನ್ನೆ ನನ್ನ ಧ್ಯಾನಕ್ಕೆ ಬಿಟ್ಟು ಎತ್ತ ಹೋಗಿದ್ದರೋ ತಿಳಿದಿಲ್ಲ.

ಅವರನ್ನು ಕಟ್ಟಿಕೊಂಡೆಲ್ಲದೆ ನಾನು ದಸರೆಗೆ ಹೋಗು ವುದಿಲ್ಲ ದಸರೆಗೆ ಹೋಗಲಾರೆನಾದರೆ, 'ದೇವಿಯ' ಪಾದ ಪದ್ಮಗಳಲ್ಲಿ, ನನ್ನ ಕೊನೆಯ ಮಾತುಗಳೇ ನನ್ನ ಪ್ರಾಣ ಗಾರತಿಯೆಂದು ನಿಮ್ಮ ಪತ್ರಿಕೆಯ ಮೂಲಕವಾಗಿ ಬಿನ್ನವಿಸಿ ಮಾಡು ವಿರಮಿಸುವೆನು.

ಅಖಿಲಭಾರತನಾಸಾಸುಗಳ ಸಮ್ಮೇಲನ.

ಶ್ರೀಮತ್ಸೌಮ್ಯನಾಮ ಸೂರ್ಯಗ್ರಹಣದಂದು; ಅಖಿಲ ಭಾರತದ ನಾಸಾಸುಗಳ ಸಮ್ಮೇಲನ, ಬಹಳ ವಿಜೃಂಭಣೆಯಿಂದ ನೆರವೇರಿತು. ಇತಿಹಾಸ ಪ್ರಸಿದ್ಧವಾದ ಮತ್ತು ಪ್ಲೇಗು ರೋಗವು ಮೊದಲನೆ ಸಾರಿ ಈ ಊರನ್ನು ಸಂದರ್ಶಿಸಿದಾಗ ತಾನೆ ನೋಂಕು ತಗಲಿದವರನ್ನು ಪ್ರತ್ಯೇಕಿಸಲು ಕಟ್ಟಿಸಲಾದ, ಆದರೆ ಈಗ ಬಿಡಿನಾಯಗಳನ್ನು ಹಿಡಿದು ಕೊಲ್ಲುವ ಮೆದಲು ಕೂಡಿಸಿಡುವುದಕ್ಕೆ ಅತ್ಯುಪಯುಕ್ತವಾಗಿಯೂ ವೇಳೆ ಅವೇಳೆಗಳಲ್ಲಿ ಇಸ್ಪೇಟಲೆಗಳಿಂದ ಜುಗಾರಾಡುವುದಕ್ಕೆ ಅತ್ಯನುಕೂಲವಾಗಿಯೂ ಇರುವ, ಒಂದಾನೊಂದು ಕೊರಂಟಾಯಿನ್ ಮಂದಿರಗಳಲ್ಲಿ ಈ ಸಮ್ಮೇಲನವು ಸೇರಿದ್ದಿತು. ಸಭಾ ಮಂಟಪದ ಅಲಂಕಾರಕ್ಕಾಗಿ ಎಲ್ಲೆಲ್ಲಿಯೂ ಜೇಡರ ಹುಳುಗಳು ಬಹು ಸೂಕ್ಷ್ಮವಾಗಿಯೂ ಬಲು ದಟ್ಟವಾಗಿಯೂ ಬಲೆಗಳನ್ನು ಹೆಣೆದು, ದೀರ್ಘೋದ್ಯಮ ಧೀರ ವ್ಯವಸ್ಥೆಗಳ ಆ ಮಾದರಿಗಳನ್ನು ತೂಗ ಹಾಕಿದ್ದು, ಪರೀಕ್ಷಕರ ಕುತಂತ್ರಗಳ ಹಾಗು ಪರೀಕ್ಷಾರ್ಥಿಗಳ ಹಿಂಸೆಗಳ ನಿದರ್ಶನವನ್ನು ಅತಿ ಕುಶಲ ರೂಪದಿಂದ ಪ್ರದರ್ಶಿಸಿದ್ದುವು. ಹತ್ತೆಂಟು ವರ್ಷಗಳಿಂದಲೂ ಕಟ್ಟದದ ಗೋಡೆಗಳ ಮೇಲೆ, ಸಾವಿರಾರು ಶಿಕ್ಷಿತ ವ್ಯಕ್ತಿಗಳು ಮನಸಿಯಂದ ಅಂಕಿಸಿದ ಅಮೋಘವಾದ ಲೋಕವ್ಯವಹಾರ ಸೂಚಕ ವಾಕ್ಯಗಳೂ ಚಿತ್ರಗಳೂ ಚಿತ್ರಿತವಾಗಿದ್ದುವು. ಪರೀಕ್ಷೆಗಳ ಸುಧಾರಣೆಯಾಗದೆ ಕ್ಷೇತ್ರವು ಹೇಗಿದೆ ಎಂದು ಸೂಚಿಸುವುದಕ್ಕೆ ಮೂವತ್ತು ವರ್ಷಗಳ ಕಸ, ಡೂಳು, ಬೀಡಿ ತುಂಡುಗಳೂ, ಅಲ್ಲಲ್ಲಿ ಗೆದ್ದಲು ಗೂಡುಗಳೂ ಕಂಗೊಳಿಸುತಿದ್ದುವು. ಅತಿ ಮಂಜುಳವಾದ ಸೊಳ್ಳೆಗಳ ವಾದ್ಯ ರವದಿಂದಲೂ, ಮಾದಿನ ಹೆಜ್ಜುಗಳ ಎಡೆಯಿಂದ ಕೀಟಗಳ ಗಾನದಿಂದಲೂ ಕಿವಿಗಳಿಗೆ ಬಹಳವಾಗಿ ಇನಿದಾಗಿದ್ದಿತು. ಸಾಲುಮರಗಳು ಮುಸಿಸಿವಾಲಿಟಿಯವರಿಂದ ಮೊದಲೇ ನೆಡಲಾಗಿದ್ದುದರಿಂದ, ಬೇರೆ ತಳಿರು ತೋರಣಗಳ ಅಗತ್ಯವೇ ತೋರಲಿಲ್ಲ. ಇಂತಹ ಸಂಪೂರ್ಣಾಲಂಕೃತವಾದ ಭವ್ಯವಾದ ಮಂದಿರದಲ್ಲಿ ಬೆಳಗ್ಗೆ ಒಂಭತ್ತು ಗಂಟೆಯಿಂದಲೂ, ನಾಪಾಸುಗಳ ಪ್ರತಿನಿಧಿಗಳು ಬಂದು ಸೇರಿದರು. ಬರುತ್ತಾ ದಾರಿಯುದ್ದಕ್ಕೂ ಒಂದೊಂದು ಶಾಲೆಗೆ ನೂರೊಂದರಂತೆ ಹರದಿದ್ದ ಹೊಟೇಲುಗಳಿಂದ ವರಮತ್ತಿನ ಲಿಕ್ಕಕ್ಕೆ ಆತಿಥ್ಯ ಸ್ವೀಕಾರವನ್ನು ಮಾಡಿಕೊಂಡು ಪ್ರತಿನಿಧಿ ವಿದ್ಯಾನಿಧಿಗಳು, ಗೃಹಣದ ಬಿಡುಗಡೆಯ ತ್ವನಕ ಹೊಟ್ಟೆಗೆ ಹಸಿವು ತಿಳಿಯದಷ್ಟು ಚೆನ್ನಾಗಿ ತಿಂದು ತೀರ್ಥಗಳಿಂದ ಸನ್ನಾಸಿಕೊಂಡರು.

ಮೊದಲೇ ವಂಚಾಂಗದಲ್ಲಿ ಪ್ರಕಟವಾದಂತೆ, ಗೃಹಣ ಹಿಡಿಯುವ ಕ್ಷಣಕ್ಕೆ ಸರಿಯಾಗಿ ಸ್ವಾಗತಾಧ್ಯಕ್ಷರು ಪ್ರತಿನಿಧಿಗಳನ್ನು ಸ್ವಾಗತ ಮಾಡಿಕೊಂಡರು. ಇವರ ಹೆಸರೇನೊ ಇದ್ದರೂ, ಬಕರಥಶರ್ಮರಿಂದೇ ಇವರು ಪ್ರಖ್ಯಾತರು. ಹತ್ತು ದಿಕ್ಕುಗಳಿಗೂ ಹತ್ತು ಸಲ ಸಂಚಾರ ಮಾಡಿಯೂ ಇವರು ದಿಗ್ವಿಜಯ ಹೊಂದದೆ ಪರೀಕ್ಷೆಯಿಂದ ಹಿಂದಿರುಗಿದವರು; ಪರೀಕ್ಷೆಯು ನಡೆವ ಹತ್ತು ಕೇಂದ್ರಗಳಲ್ಲಿ ಹತ್ತು ವರ್ಷ ಛಲ ಹಿಡಿದು ಪರೀಕ್ಷೆ ಕೊಟ್ಟವರು. ಇವರ ಭಾಷಣವು ಬಹಳ ಉದ್ದವಾಗಿರಲಿಲ್ಲ. ಆದರೆ ವಾಕ್ಯ ವಾಕ್ಯಕ್ಕೂ, ಪರೀಕ್ಷೆಯಲ್ಲಿ ಮಾರ್ಕು ದೊರೆತಿಲ್ಲದ ಇವರಿಗೆ ಈಗ ಜಯಕಾರದ ರಿಮಾರ್ಕುಗಳು ದೊರೆಯುತ್ತಲಿದ್ದು, ಗಿದ್ದ ಭಾಷಣವು ಉದ್ದವಾಯತು. "ಈ ನುಂದಿರವು ಈಗಣ ವಿದ್ಯಾಕ್ಷೇತ್ರದ ಸದ್ಯ ಸ್ಥಿತಿಯನ್ನು ಬಹಳ ಚೆನ್ನಾಗಿ ವಿವರಿಸಿ ವ್ಯದರ್ಶಿಸಿರುವುದು. ಇದನ್ನು ಕುದ್ದಗೊಳಿಸುವುದೇ ನಮ್ಮ ಕರ್ತವ್ಯ. ನಾವು ಭಾವೀ ಜನಾಂಗವೆಂದು ತಿಳಿಯದೆ, ನಮ್ಮನ್ನು ಸ್ಲೈಲುಗಳೆಂಬ ಬಾವಿಯಲ್ಲಿ ತಳ್ಳಿರುತ್ತಾರೆ, ಉದ್ಧರೇತ್ಮಾನಾತ್ಮಾನಂ ಎಂಬಂತೆ, ನಮ್ಮ ಉದ್ಧಾರವನ್ನು ನಾವೇ ಮಾಡಿಕೊಳ್ಳತಕ್ಕುದು. ಈ ಜೇಡರ ಹುಳು, ಕೀಟಗಳು, ಸೊಳ್ಳೆಗಳು, ಗೆದ್ದಲು, ಕಸ, ಡೂಳು, ಬೀಡಿ ತುಂಡು ಮೊದಲಾದುವೂ ಗೋಡೆ ತುಂಬ ಮನಸಿಯಲ್ಲಿ ಗೀರಿದ ವಾಕ್ಯಗಳೂ ಏನನ್ನೆಲ್ಲ ಸೂಚಿಸುತ್ತಿವೆ? ಇಷ್ಟನ್ನೆ ವಿಚಾರಿಸಿದರೆ ಎಲ್ಲವೂ ಸ್ಪಷ್ಟವಾಗುವುದು. ಪರೀಕ್ಷಾ ಕರ್ಮವನ್ನು ಹೂಡುವ ಕುತಂತ್ರಿಗಳೇ ಈ ಜೇಡರ ಹುಳುಗಳು; ನಾನಾ ಬಗೆಯ ಸವಾಲು ಪುಸ್ತಕಗಳನ್ನು ಬರೆವುವೇ ಈ ಕೀಟಗಳು; ಇದು ಮುಖ್ಯ ಅದು ಮುಖ್ಯ ಎಂದು ಸಾರುವವರೇ ಈ ಸೊಳ್ಳೆಗಳು; ಬಲೆಯೊಳಗೆ ಬಿದ್ದು ಕೈಕಾಲು ಬಡಿದು ಸಿಲ್ಕಿಕೊಂಡವರೇ ನಮ್ಮ ಅಣ್ಣ ತಮ್ಮ ಅಕ್ಕತಂಗಿಯರು; ನಮಗೆ ಅಲ್ಲಲ್ಲಿಂದ ಸೆಳೆವ ವಿದ್ಯಾನಿಧಿಗಳಿಂತೆ ಕಾಣುವ ತಾಲಿಗಳೇ ಈ ಗೆದ್ದಲು ಗೂಡುಗಳು; ಇವುಗಳಲ್ಲಿ ಇನ್ನೂ ಕಿದ್ದುವಡಿಯಾಗದೆ ಬಿದ್ದಿರುವ ಹಳೆಯ ಶಿಕ್ಷಣ ಕ್ರಮವೇ ಈ ಕಸದೊಳು ಬೀಡಿ ತುಂಡುಗಳು; ನಾಸಾದರೆ ಮುಂದೆ ದೊಡ್ಡ ಕೆಲಸವಾಗುವುದಾಗಿ ಸಾರುವ ವಿದ್ಯಾಪನೆಗಳಂತಿರುವುದೇ ಈ ಮನಿ ಅಕ್ಷರದ ವಾಕ್ಯಗಳು. ಇವನ್ನು ಕಣ್ಣ ನುಂದೆ ಇಟ್ಟುಕೊಂಡೇ ನಾವು ಇಂದಿನ ಕಾರ್ಯಕ್ರಮವನ್ನು ನೆರವೇರಿಸಿ, ಮುಂದೆ ನಾಪಾಸುಗಳೆಂಬವೇ ಇರದಂತೆ ಬೇಕಾದ ಸಾಧನೆಯನ್ನು ಮಾಡಿ, ಬರ್ನಾರ್ಡ ಶೋ ಅಥವಾ ರವೀಂದ್ರನಾಥ ಠಾಕೂರರ ಮೊದಲಾದವರಂತೆಯೇ, ಅತ್ಯುತ್ತಮ ಶಿಕ್ಷಿತರಾಗಿ ಬೆಳೆಯ ಬೇಕೆಂದೇ ನನ್ನ ಲಕ್ಷ್ಯವು" ಎಂದು ಮೊದಲಾಗಿ ಇವರ ವಿನ್ನವಗಳಾದುವು.

ನಂತರ ಸಮ್ಮೇಲನದ ಅಧ್ಯಕ್ಷರ ಚುನ್ನಾವಣೆಯಾಯಿತು. ಇವರು ಎಲ್ಲಿಯವರೋ ಯಾವ ಜಾತಿಯವರೋ ತಿಳಿಯಲಿಲ್ಲ. ಆದರೂ, ಇವರನ್ನು ವೇದವ್ಯಾಸವರ್ಮರಿಂದೇ ಸಂಬೋಧಿಸಲಾಯಿತು. ನಾಲ್ಕು ವೇದ, ಆರು ಶಾಸ್ತ್ರ ಹದಿನೆಂಟು ಪುರಾಣಗಳು, ಮಹಾಭಾರತಾದಿ ಗ್ರಂಥಗಳು ಮೊದಲಾದೆಲ್ಲವನ್ನು ವ್ಯಾಸನು ಬರೆದಂತೆ ಇವರು ಕೋಟಿ ಗ್ರಂಥಗಳವರನ ಮಾಡಿಯೂ ಜಿಜ್ಞಾನವ್ಯದ್ಧರಾಗದೆ ನಾವಾಸು ವೃದ್ಧರಾಗಿದ್ದರೆಂದು, ಸಭಿಕರಲ್ಲಿ ಇವರೇ ಅಗ್ರಗಣ್ಯರೆನಿಸಿದರು. ಇವರ ಮಹಾಭಾಷಣವೂ ಮಹಾಭಾರತದಂತಾಯಿತು; ಆದರೆ ಕೆಲವೇ ವಾಕ್ಯಗಳು ಮಾತ್ರ.

"ಪ್ರತಿ ವರ್ಷವೂ ಕುರುಕ್ಷೇತ್ರದ ಅಭಿನಯವನ್ನು ನಮ್ಮಿಂದ ಮಾಡಿಸುತ್ತಾರೆ. ಕೌರವರು ಭೀಷ್ಮದ್ರೋಣಾದಿ ಮಹಾ ಪರಾಕ್ರಮಿಗಳನ್ನು ಕಟ್ಟಿಕೊಂಡು ನಮ್ಮನ್ನು ಗೆಲ್ಲ ಬರುತ್ತಾರೆ. ನಾವು ಕೇವಲ ಭಗವಂತನೊಬ್ಬನೇ ಗತಿಯೆಂದು ನಂಬಿ ಯುದ್ಧಾಭಿನಯ ಮಾಡುತ್ತೇವೆ. ಅವರ ಪ್ರಶಾಸ್ತ್ರಗಳನ್ನು ನಮ್ಮ ಉತ್ತರಾಸ್ತ್ರಗಳಿಂದ ಖಂಡಿಸುತ್ತೇವೆ. ಎಷ್ಟೋ ವೇಳೆ ನಮ್ಮ ಉತ್ತರಾಸ್ತ್ರಗಳನ್ನು ತಡೆಯಲಾರದೆ, ಭೀಷ್ಮಾದಿಗಳು ಸರಳಮಂಚ ಹಿಡಿದುದುಂಟು; ದ್ರೋಣವಧೆ, ಕರ್ಣಾವಸಾನ ಎಲ್ಲವೂ ಸಾಗಿದೆ. ಆದರೆ, ನಾವೆಂತೂ ಪಾಂಡವರು. ಗೆದ್ದರೆ, ಉದ್ಯೋಗವಿಲ್ಲ; ಸೋತು ಕಂಗೆಡುವುದಕ್ಕೆ ಭಗವಂತನು ಬಿಡುವುದಿಲ್ಲ. ಭಗವಂತನೂ ಈಗ ಈ ಅಭಿನಯ ಪರಂಪರೆಯನ್ನು ನೋಡಿ ನಿರಾಕರನಾಗಿದ್ದಾನೆ. ಇನ್ನು ಯುದ್ಧಗಳಾಗದಂತೆ ನೋಡಲು ವಿಲಾಯತಿಯಲ್ಲಿ ಹಲವು ಪರಿಷತ್ತುಗಳಾಗಿ ಕೃತಾರ್ಥವಾಗಿಲ್ಲವಾದರೂ, ಭಾರತೀಯರಾದ ನಾವು, ಇನ್ನು ಯುದ್ಧಗಳಾಗದಂತೆ ಬಹಳವಾಗಿ ಪ್ರಯತ್ನಿಸಿ ಕುರುಕ್ಷೇತ್ರದ ಕುರುಹೂ ಉಳಿಯದಂತೆ ಸಾಧಿಸಿ, ಜಗತ್ತಿಗೊಂದು ಮಾದರಿ ತೋರಿಸಿ ಕೊಟ್ಟು, ನಮ್ಮ ದೇಶದ ಗೌರವನನ್ನು ಮೆರೆಯಿಸಬೇಕು" ಎಂಬುದಷ್ಟೆ ಅವರ ಭಾಷಣದ ಸಾರಾಂಶವು.

ನಂತರ, ವಿಷಯನಿಯಾಮಕ ಕಮಿಟಿಯ ನುಂಡನೆಯಾಯಿತು. ಪರೀಕ್ಷೆಗಳಲ್ಲಿ ಜಯ ಹೊಂದಿದರೆ, ಏನನ್ನೆಲ್ಲ ನೂಡಬೇಕೆಂದಿದ್ದರೋ ಅಂತಹ ಮನಸ್ಸಿನ ಮಂದಿಗೆಯ ವ್ಯಾಪಾರಿಗಳೇ ಈ ಮಂಡನೆಯಲ್ಲಿ ಸೇರಿದ ಮೆಂಬರರು.

ಇನ್ನು ಸೂಚನೆಗಳು ಹೊರಟುವು.

1) ಪರೀಕ್ಷೆಗಳೆಂಬವೇ ಇರಬಾರದು. ಬಳೇಕಾಗದವನ್ನು ಛಾಪಾಯಂತ್ರಕ್ಕೆ ಕೊಟ್ಟರೆ, ಅದೆಂತು ಯಂತ್ರದೊಳಗಿಂದ ಹಾದುಬರುತ್ತ, ಗ್ರಂಥದ ಹಾಳೆಯಾಗುವುದೋ ಹಾಗೆಯೆ, ಶಾಲೆಯನ್ನು ಹೊಕ್ಕು ಹೊರಬೀಳುತ್ತಲೇ ಪಾಸೆಂಬುದು ನಿಶ್ಚಿತವಾಗಿರತಕ್ಕುದು ಎಂಬುದು ಮೊದಲನೆಯ ಸೂಚನೆ.

ಆದರೆ, ಪರೀಕ್ಷೆಗಳೇ ಇಲ್ಲದಿದ್ದರೆ, ಅವರಂಜಿಯಾವುದು ಟಕಾರಿ ಯಾವುದು ಎಂದು ಬಣ್ಣಾ ತಿಳಿಯುವ ಒರಿಗಲ್ಲೇ ಮಾಯವಾಗುವುದೆಂದು ಆಕ್ಷೇಪ ಎದ್ದಿತು. ಎಲ್ಲರೂ ನಾಪಾಸಾಗಿ ಸಮಾನರಾದರಬಹುದು; ಪಾಸಾಗಿ ಸ್ವಾನಸೂಚಕ ಕುರುಹುಗಳಿಲ್ಲದಿದ್ದರೆ ಯೋಗ್ಯತೆಗೆ ಸರಿಯಾದ ಬೆಲೆ ಬಾರದು ಎಂದು ಈ ಸೂಚನೆ ನಾವಾಸಾಯಿತು.

2) ಕೊನೆಯ ಪಕ್ಷ ಏಳು ಸಲವಾದರೂ ಪರೀಕ್ಷೆಯಲ್ಲಿ ನಾಪಾಸಾದವರ ಒಂದು ಮಂಡಲವು ಯಾರ ಯೋಗ್ಯತೆಯನ್ನು ನಿರ್ಧಾರ ಮಾಡಬಹುದೋ ಅಂತಹರೇ ಮಾತ್ರ ಪರೀಕ್ಷಕರಾಗತಕ್ಕುದು; ಪರೀಕ್ಷೆಯಲ್ಲಿ ನಾಪಾಸು ಎನ್ನುವ ಪರೀಕ್ಷಕರೆಲ್ಲರು ಪುನಃ ಸಾಲೆಗೆ ಸೇರಿ, ಶಾಲಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗತಕ್ಕುದು.

ಇದು ಮಂಜೂರಾಯಿತು.

3) ವಿದ್ಯಾರ್ಥಿನಿಯವರು, ಹಿಂದುಳಿದ ತರಗತಿಯವರು, ಅಲ್ಪಸಂಖ್ಯಾಕರು ಮೊದಲಾದವರು ನಾಪಾಸಾಗಲೇ ಕೂಡದು; ಪಾಸಾದಲ್ಲಿ, ಅವರನ್ನು ಸರ್ವೋತ್ತಮ ತರಗತಿಗಳಲ್ಲೇ ಅಗತ್ಯವಾಗಿಯೂ ಪಾಸು ಮಾಡತಕ್ಕುದು.

ಇದಕ್ಕೆ ಕೆಲವು ಆಕ್ಷೇಪಗಳೆದ್ದುವು. ಆದರೆ, ಅಬಲೆಯರ ಕಡೆಗೆ ಭಾರತೀಯ ಸುಶಿಕ್ಷಿತರ ಧನ್ಯ, ಅಲ್ಪಸಂಖ್ಯಾಕರ ಕಡೆಗೆ ತೋರಿಸಬೇಕಾದ ಏಕ್ಯ ಸಾಧಕ ಬುದ್ಧಿ, ಹಿಂದುಳಿದವರನ್ನು ಮುಂದೆ ತಾರದೆ ಜನಾಂಗದ ಉದ್ಧಾರವಾಗದೆಂಬ ದೂರದೃಷ್ಟಿ, ಇವೆಲ್ಲವನ್ನು ಮನಸ್ಸಿಗೆ ತಂದುಕೊಂಡು ಈ ಸೂಚನೆಯು ಮಂಜೂರಾಯಿತು.

4) ಮೂರು ಸಲ ನಾಪಾಸಾದವರು ಉತ್ತಮ ಪಾಸಾದವರೆಂದು ಶಿಫಾರಸು ಪತ್ರಕ್ಕೆ ಅರ್ಹರಾಗಬೇಕೆಂದೂ ಅವರು ಮಕಾನುಭವರೆಂದು ಬಿರುದು ಪಡೆಯಬೇಕೆಂದೂ ಈ ಸಮ್ಮೇಲನವು ಶಿಫಾರಸು ಮಾಡುತ್ತಿದೆ.

ಹೊಸ ವೈದ್ಯನಿಗಂತ ಹಳೇ ರೋಗಿಯೆ ವಾಸಿಯೆಂದು ಆ ಪುರಾತನ ಗಾದೆಯ ಆಧಾರದಿಂದ ಈ ಸೂಚನೆಯು ನಿರಾಕ್ಷೇಪವಾಗಿ ಕೂಡಲೆ ಮಂಜೂರಾಯಿತು.

5) ಯಾವ ಶಾಲೆಯಿಂದ ವಿದ್ಯಾರ್ಥಿಗಳು ಅತಿ ಹೆಚ್ಚು ಸರಿವಾಣದಲ್ಲಿ ನಾಪಾಸಾಗುತ್ತಾರೆಯೋ ಆ ಶಾಲೆಯನ್ನೆ ಎಲ್ಲ ವಿದ್ಯಾರ್ಥಿಗಳು ಸೇರತಕ್ಕುದು; ಆದರೆ ಅಂತಹ ಶಾಲೆಯು ಎರಡು ಸಲವಾದರೂ ನಾಪಾಸಾದ ವಿದ್ಯಾರ್ಥಿಗಳನ್ನು ಖಂಡಿತವಾಗಿಯೂ ಸಂಬಳ ಮಾಫಿಯಾಗಿ ಸೇರಿಸಿಕೊಳ್ಳತಕ್ಕುದು. (ಮೂರನೆ ಸಲ ನಾಪಾಸಾದರೆ ಹೇಗೂ ಇವರು ಪಾಸೆಂದು ಅವರ ಪಾಸಿನ ಕೀರ್ತಿಯು ಸದರಿ ಶಾಲೆಗೆ ಸೇರುವ ಕಾರಣ ಆ ಗುಣಕ್ಕೆ ಇದೊಂದು ರಿಯಾಯಿತಿ.)

ಮಂಜೂರಾಯಿತು.

6) ಪರೀಕ್ಷೆಗೆ ಓದುವ ವಿದ್ಯಾರ್ಥಿಗಳಲ್ಲಿ ಪರೀಕ್ಷೆಗೆ ಅನರ್ಹರೆಂದು ಹಲವರನ್ನು ಯಾವ ಶಾಲೆಯು ಮೊದಲೆ ಹಿಂದೆಗೆಯುವುದೋ, ಆ ಶಾಲೆಯ ಮಂಜೂರಾತಿಯನ್ನು ರದ್ದು ಪಡಿಸಬೇಕು; ಹಿಂದೆ ಮೂನತ್ತು ವರ್ಷಗಳಿಂದಲೂ ಆ ಶಾಲೆಗೆ ಸಂದ ಗ್ರಾಂಟನ್ನು ವಸೂಲ್ಮಾಡಬೇಕು; ಎಂದು ಸರಕಾರಕ್ಕೆ ವಿನ್ನವಿಸಿಕೊಳ್ಳಬೇಕು.

ಮಂಜೂರು!

7) ಪರೀಕ್ಷೆಗೆ ಓದದೆ ಇದ್ದರೂ, ವಿದ್ಯಾರ್ಥಿಯ ಶೀವಿ,—ಕ್ರೊಪ್, ಕಚ್ಚೆ, ಕೊಲ್ಲರುಗಳೆನ್ನೂ ನೋಡಿಯೆ ಪಾಸು ಮಾಡತಕ್ಕುದು, ದೇಶಭಾಷೆಗಳಲ್ಲಿ ನಾಪಾಸಾದರೆ ಅದು ನಾಪಾಸಿನ್ನ ಬಾರದು; ಆಟಗಳಲ್ಲಿ ಪ್ರವೀಣರು ಪಾಠಗಳೆಲ್ಲೂ ಜಾಣರೆಂದು ಕೂಡಲೆ ನಿರ್ಧಾರವಾಗತಕ್ಕುದು. ಇದು ಮಂಜೂರಾತಿಗೆ ಇಡಲಾಯತು. ಅವ್ವರಲ್ಲೇ ಕೆಲ ಜವಾನರು, ಮೂವತ್ತು ಬೇರೆ ಬೇರೆ ನಾಯಿಗಳನ್ನು ಸಂಕೋಲೆಗಳಿಂದ ಬಿಗಿದು ಓಡಿಸಿ, ಸಭಾಮಂಟಪಕ್ಕೆ ಬರಲು,—ಆ ನಾಯಿಗಳ ಕೂಗಾಟಕ್ಕೂ ಜವಾನರ ಭೀಕರತೆಗೂ ಕಂಗಾಲಾಗಿ, ಈ ತರಾವು ಮಂಜೂರಾಯಿತೋ, ಇಲ್ಲವೊ ಎಂದು ಆ ಗಲಿಬಿಲಿಯಲ್ಲಿ ತಿಳಿದುಬರಲಿಲ್ಲ.

ಶ್ರೀಯುತ ಸಮ್ಮಾಚಿಯವರು ಅಧ್ಯಕ್ಷರಿಗೆ ಧನ್ಯವಾದಗಳನ್ನು ಕಾಲೋಚಿತ ಭಾಷಣದೊಂದಿಗೆ ಅರ್ಪಿಸಲು, ಅವರು ಸಮಸ್ತ ಮಾಂಡಲಿಕರನ್ನು ವುಂಡಲಿಕನಧ್ವಾನ ಜಯಕಾರಗಳಿಂದೊಡಗೂಡಿಯೇ ಸಭೆಯನ್ನು ಮುಕ್ತಾಯ

ಪದನೀಳಕೇ ಪುಟವನ್ನು ನೋಡುವುದು.

ಹನಿ ಕೂಡಿ ಹಳ್ಳ

'ಕ್ರಾಂತಿಕಾರರ ಅನ್ಯಾಯಗಳನ್ನು ಗಾಂಧಿಯವರೇ ಮೊದಲಾದವರು ಖಂಡಿಸುತ್ತಾರೆ ನಿಜ, ಆದರೆ ಅಂತರಂಗದಲ್ಲಿ ಸಹಾನುಭೂತಿ ಇದ್ದಂತೆ ತೋರುತ್ತಿದೆಯಲ್ಲ,' ಎಂದರು ನಮ್ಮ ಇಂಡಿಯಾ ಸರಕಾರದ ಹೋಮ್ ಮೆಂಬರರು.

ಂ ಂ ಂ ಂ ಂ ಂ

ನಮ್ಮ ಇಂಡಿಯಾ ಸರಕಾರಕ್ಕೂ ಅತ್ಯುತ್ತಮರಾದ ಸೆಕ್ರಿಟರಿ ಒಫ್ ಸ್ಟೇಟ್ ಒಬ್ಬರಿದ್ದರು ಅವರಂಥವರು ಇದುವರೆಗೆ ಮತ್ತ್ಯಾರೂ ಇಲ್ಲ, ಮುಂದೆ ಹೇಗೋ! ಅವರ ಪತ್ರಗಳು ಪ್ರಕಟವಾಗಿವೆ ಆ ಪತ್ರಗಳು ಗಾಂಧಿಯವರು ಮಿಡ್ನಾಪುರ ಅತ್ಯಾಚಾರವನ್ನು ಕುರಿತು ಅಭಿಪ್ರಾಯ ಹೇಳಿ ಸ್ಪಷ್ಟತೆಯೇ ಹೇಳಿವೆ ಆ ಸೆಕ್ರಿಟರಿಯವರು ಈಗಲೂ ಬದುಕಿಕೊಂಡಿದ್ದಾರೆ, ಅವರೂ ಅಂತರಂಗ ಸಹಾನುಭೂತಿಯುಳ್ಳವರೆಂದು ಸರ್ ಹೇಗಡ್ಡು ಹೇಳುತ್ತಿದ್ದರೇ?

ಂ ಂ ಂ ಂ ಂ ಂ

ಆ ಸೆಕ್ರಿಟರಿಯವರು, ಆಗಿನ ವೈಸರಾಯರಿಗೆ ಬರೆದ ಗುಪ್ತಪತ್ರದಲ್ಲಿ,-'ರಾಜದ್ರೋಹಿಗಳಿಂದಲೇ ಮಾತ್ರವಲ್ಲದೆ, 'ಕಾನೂನುಕ್ರಮ'ಗಳ ನಿಮ್ಮನಿಂದಲೂ ನಿಮ್ಮನ್ನು ಕಾಪಾಡುವುದಕ್ಕೆ ನನ್ನ ಬೆಂಬಲವು ನಿಮಗೆ ಬೇಕಾದೀತು. ಈ ಕಾನೂನು ಕ್ರಮಗಳ ಜನರೇ ಇತಿಹಾಸದಲ್ಲಿ ಕೊನೆಯ ಪಕ್ಷ ಕ್ರಾಂತಿಕಾರರಷ್ಟೆ ಹುಚ್ಚಾಬಟ್ಟೆ ಕೆಲಸ ಮಾಡಿರುವರು. 'ಕಾನೂನು' ಭಂಗವಾಗದಂತೆ ನಾವು ನೋಡಲೇ ಬೇಕು, ಆದರೆ ಕಠಿನತೆಯು ಅತಿರೇಕವು ಮಾತ್ರ 'ಕ್ರಮ'ವನ್ನು ಉಳಿಸದೆ, ಬೊಂಬುಗಳ ಕಡೆಗೆ ನಡೆಸುವ ಉಪಾಯವಾಗಿದೆ!' ಎಂದಿರುವರು ಇದೂ ಒಂದು ಯಥಾರ್ಥಾಭಿಪ್ರಾಯವೆ? ಅಲ್ಲವೆ?

ಂ ಂ ಂ ಂ ಂ ಂ

ಉತ್ಪನ್ನಗಳ ಮೇಲೆ ಸುಂಕ, ಆದಾಯಗಳ ಮೇಲೆ ತೆರಿಗೆ, ಇವೆರಡನ್ನೂ ವರಿಷ್ಠ ಸರಕಾರವು ತನ್ನ ಖಜಾನೆಯಲ್ಲೇ ಕೂಡಿಸುವುದು ಮುಗಿಯುವ ತನಕ, ಯಾವ ಪ್ರಾಂತಿಕ ಸರಕಾರವೂ ತನ್ನ ಗಡಿಯೊಳಗಣ ಕೈದಾರಿಕೆಗಳ ಅಭಿವೃದ್ಧಿಗೆ ಯಾವ ಪ್ರಯತ್ನಗಳನ್ನೂ ಮಾಡಲಾರದು, ಅದು ಸಾಧ್ಯವಾಗಿಲ್ಲ

ಂ ಂ ಂ ಂ ಂ ಂ

ಹೀಗಿರುವಾಗ, ಪ್ರಾಂತಿಕ ಸ್ವರಾಜ್ಯ ಸ್ಥಾಪಿಸಿ ಪುಣ್ಯವೇನು? ಅಸ್ಪಾವಿನಂತಹ ಈಗಲೆ ದಿವಾಳಿ ಪ್ರಾಂತ್ಯವು, ಮೇಲಾಧಿಕಾರಿಗಳ ಸಂಬಳದಲ್ಲಿ ಕಾಸನ್ನೂ ಕಳೆಯಲಾರದು, ಹುದ್ದೆಗಳನ್ನು ಕಡಿಮೆ ಮಾಡಲಾರದು, ಸ್ವರಾಜ್ಯವೆಂದು ಖರ್ಚು ಹೆಚ್ಚಾಗುವುದು, ಹೀಗಾದರೆ ಇನ್ನಂಟೇಕ್ಸ ಮತ್ತು ಕ್ಯೂಟಗಳು ಇಂಡಿಯಾ ಸರಕಾರಕ್ಕೆ ಸಲ್ಲಲಾಗಿ, ಇನ್ನಷ್ಟು ದಿವಾಳಿಯಾಗುವುದರಲ್ಲಿ ಸಂದೇಹವಿಲ್ಲ. ಇದನ್ನು ತಿಳಿದು ನಮ್ಮ ಡ್ಯಾಹಾರ್ಡ್ ಹಿತಚಿಂತಕರು ಸ್ವಧಾರಣೆಗಳ ವಿರುದ್ಧ ಮತ್ತೊಂದು ಅಸ್ತ್ರ ಬಿಡಲು ಅನುಕೂಲವಾಗುವುದು ಅಕ್ಕ ಖರ್ಚಾಗಬಾರದು, ಅಕ್ಕನ ಮನೆ ಬಡವಾಗಬಾರದು ಎಂದರೆ ಹೇಗಾಗುವುದು?

ಂ ಂ ಂ ಂ ಂ ಂ

ಕೆಲವು ಶ್ರೀಮಂತರು, ಕೆಲವು ಜೋಹುಕುಂವಾಲರು,-ಇವರೆ ಸಲುವಾಗಿ ಒಂದೊಂದು ಶ್ರೀಮಂತ ಮಂದಿರವು ಒಂದೊಂದು ಪ್ರಾಂತ್ಯದಲ್ಲಿರಬೇಕು ಎಂದು ಅವರವರೇ ಸೂಚನೆಯ ಗುಲ್ಲೆಬ್ಬಿಸಿರುವರು ಬಂಗಾಳ ಬಿಹಾರ ಗಳಲ್ಲಿ ಈ ವರಿಷ್ಠ ಸಭೆಗಳ ಅರಿಷ್ಟವು ಬೇಡವೆಂದು ಮುಸ್ಲಿಮ ಕೊನ್ಸರೆನ್ಸು ಸೂಚಿಸಿಕೊಂಡಿದೆ. ಆದರೂ ಅಧಿಕಾರಿಗಳಿಗೆ ಬೆನ್ನು ಮೂಳೆಯ ಬಲಕ್ಕೆ ಈ ಘನಿಷ್ಠವಾದ ಅನಿಷ್ಟವೇ ಬೇಕಾಗಿದೆಯಂತೆ. (ದುಷ್ಟ ಪ್ರಾಸಗಳು ಯಥೇಷ್ಟವಾದುವು ಇನ್ನು ಟೀಕೆ ಅಗತ್ಯವಿಲ್ಲ.)

ಂ ಂ ಂ ಂ ಂ ಂ

ಅದರೆ ಮಾಡುವುದೇನು? ಪೋಷ್ಟು ಇಲಾಖೆಯದೆಯಲ್ಲ? ಅದರ ಸ್ಟ್ಯಾಂಪು ದರಗಳನ್ನು ಏರಿಸಿದರೆ, ಲಾಭ ಕಡಿಮೆಯಾದೀತು ಎಂದ ದೇಶೀಯ ಪತ್ರಿಕೆಗಳು ಎಚ್ಚರಿಸಿದುವು ಕೇಳಲಿಲ್ಲ ದರ ಹೆಚ್ಚಿ, ಲಾಭ ಇಳಿದಿದೆ ಲಾಭ ಹೆಚ್ಚುವಂತೆ ದರ ಕಡಿಮೆ ಮಾಡಲು ಇನ್ನಾದರೂ ಒಪ್ಪುವಾರದೇ?

ಂ ಂ ಂ ಂ ಂ ಂ

ಯುದ್ಧಕಾಲದಲ್ಲಿ, ಹೇಗೆಂದರೂ ಟಪ್ಪಾಲು ಮೂಲಕ ನಪಿವಾಟುಗಳು ಸಾಗಲೆ ಬೇಕಾಗಿದ್ದುವು, ದರ ಹೆಚ್ಚಿಸಿದರೂ ನಿರುಪಾಯವಾಗಿ ತೆತ್ತುದರಿಂದ, ಲಾಭವೂ ಹೆಚ್ಚಿತು. ಈಗ ಲೇಖನಿ ಕ್ರಯಕ್ಕೆ ತಗೆದುಕೊಳ್ಳಲು ಕಾಸಿಲ್ಲದವರು ಕಾಸು ಲಾಭವೂ ತೋರದ ವ್ಯಾಪಾರ ನಡೆಸುವುದಕ್ಕೆ, ಯಾವ ಹೆಚ್ಚಿನ ದರದ ಸ್ಟಾಂಪು ಪಡೆದು, ಪತ್ರ ವ್ಯವಹಾರ ನಡೆಸುವರು? ಅಂದಿನ ಪೌಂಟನ್ ಪೇನುಗಳಷ್ಟು ಮಾರಿ, ಕಾರ್ಡು ಕವರುಗಳನ್ನು ಕೊಂದರೆ, ಬರಿವುದಾವುದರಿಂದ?

ಂ ಂ ಂ ಂ ಂ ಂ

ನಾವು ಬಣ್ಣಲ್ ಬೇಪಿ ದೊಡ್ಡ ಅಂಗಡಿ ಹಮ್ಮದಿಬ್ಯಾರಿ ಹೆಸರಿನ ಬ್ಯಾರಿ ಎಂಡ್ ಕೋ ಎಂಬ ಪಾಲಿಕೆಯನ್ನು ಬಹಳ ವರ್ಷ ಗಳಾಗ್ಯಾತು. ವ್ಯಾಪಾರ ನಡಿಸಿ, ಮತ್ತು ಹೆಕ್ಕುದೆ ಬ್ಯಾರಿಯೆಂಬ ವರು ತೀರಿಹೋದ ನಂತರ ನಾವು ಎ ಹುಸೆನಬ್ಯಾರಿ, ಇದ್ದಿನೆ ಬ್ಯಾರಿಎಂಡ್ ಕೋ ಎಂಬುವಾಗಿ ಇಟ್ಟು ಇದುವರೆಗೆ ವ್ಯಾಪಾರ ನಡೆಸಿ ನಮಗೆ ಸರಿಬೀಳದೆ ಪಂಚಾಯಿತರ ಮುಂದೆ ತಾರೀಕು 19—7—1933ರಲ್ಲು ನಾವು ಪಾಲು ಅಗಲಿಕೆ ಮಾಡಿ ಸದ್ರಿ ಯದ್ದಿನೆ ಬ್ಯಾರಿ, ಇತರ ಮಗ ಹಾಮದು ಬ್ಯಾರಿ ಮತ್ತು ಸದ್ರಿ ಯದ್ದಿನೆ ಬ್ಯಾರಿ ಅಳಿಯ ಹೆಮ್ಮದಿ ಬ್ಯಾರಿ ಕೂಡಾ 3 ಜನರು ಸದ್ರಿ ಜಂಗಡಿ ಪಾಲು ಬಿಟ್ಟು ಹೋಗಿರುತ್ತಾರೆ ಇವರಿಗೆ ಯಾವ ಹಕ್ಕು ಸಂಬಂಧವೂ ಸದ್ರಿ ಅಂಗಡಿಯಲ್ಲಿರುವುದಿಲ್ಲ. ಸದ್ರಿ ದೊಡ್ಡ ಅಂಗಡಿಗೆ ಹೊರಗಿನಿಂದ ಒಟಕ್ಕುದ್ಯಾಗೇ ಹೋಗೆ ಸಲತಕ್ಕು ದ್ಯಾಗಲೇ ಯಾವ ಹಕ್ಕು ಸಂಬಂಧಕ್ಕೂ ನಾನೇ ಜವಾಬ್ದಾರ ನಾಗಿರುತ್ತೇನೆ.

ಬಣ್ಕಲ್ ದೊಡ್ಡ ಅಂಗಡಿ ಎ ಹುಸೆನಬ್ಯಾರಿ

ಪ್ರಕಟಣೆ.

ಕಾಪಡಗೋಡು ತಾಲೂಕಿನ ವರಕಾಡಿ ಮಾಗಣೆ ಕಸಬಾ ಗ್ರಾಮದಲ್ಲಿರುವ ರಾಮಯ್ಯ ನಾವಡರ ಮಗ ನಲ್ಲಪ್ಪಯ್ಯ ನಾವಡನು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇ ನೆಂದರೆ:—

ಮಂಗ್ಲೂರಿನ ಗ್ರಾಮದ ಗುರುವರೆ ಕೃಷ್ಣಯ್ಯ ಹೊಳ್ಳರ ಮಗ ನಾರಾಯಣ ಹೊಳ್ಳ 1, ಈತನ ಪಾಸಾ ಭವನೆಂಟು ಕುದ್ರಿಕಾಡೆ ವೆಂಕಟೇಶ ವಿತಾಳರ ಮಗ ನಾರಾಯಣ ವಿತಾಳರ 1 ಕೂಡಾ 2 ಜನರು ನನ್ನಿಂದ ಪಡೆದ ಪ್ರತಿಫಲದ ರೂಪಾಯಿ 300ಕ್ಕೆ ಸೇಕಡಾ 8ರ ದರದ ಬಡ್ಡಿ ಕೂಡಿಸಿ ಕೇಳಿದಾಗ್ಗೆ ಮತೂಲು ಕೊಡುವ ಶರ್ತ ನಮೂದಿನಿಂದ ನನಗೆ ತಾರೀಕು 3—11—1931ರಲ್ಲು ಬರಕೊಟ್ಟ ಡಿಮಾಂಡ್ ಪ್ರೊಮಿಸರಿ ನೋಟು ಗ್ಯೆರುವಿಲೆ ಯಾನೆ ಕಾಣೆಯಾಗಿರುತ್ತದೆ. ಸದ್ರಿ ನೋಟಿನ ಅಸಲು ಬಡ್ಡಿ ಪೂರಾ ನನಗೆ ಬರಬೇಕಾಗಿರುತ್ತದೆ. ಸದರಿ ನೋಟು ಯಾರಿಗಾದರೂ ಸಿಕ್ಕಿದರೆ ಅ ನ್ನು ನನಗೆ ತಂದುಕೊಟ್ಟಲ್ಲಿ ಅಂಥವರಿಗೆ ರೂ. 15ನ್ನು ನಾನು ಕೊಡುವರೆ ಸಿದ್ಧನಿದ್ದೇನೆ.

ಪೊರ್ಕಾಡಿ 23—9—'33 } ನಲ್ಲಪ್ಪಯ್ಯ ನಾವಡನ ರುಜು

ನೋಟೀಸು.

ಮೂಡುಪೆರಾರ ಪಂಚಾಯಿತಿ ಕೋರ್ಟಿನಲ್ಲಿ.

C S. No 47/1933

ಮೀರ್ ಯುಸೂಫ್ ಸಾಹೇಬ—ವಾದಿ

ಪಟೇಲ್ ಅಬ್ಬು ಸಾಹೇಬ—ಪ್ರತಿವಾದಿ.

ಮೂಡುಪೆರಾರ ಗ್ರಾಮದ ಗುರುಕಂಬಳದಲ್ಲಿರುವ ಪಟೇಲ್ ಹಮ್ಮದ್ ಸಾಹೇಬರ ಮಗ ಅಬ್ಬು ಸಾಹೇಬರಿಗೆ — ನಿಮ್ಮ ಮೇಲೆ ರೂ 13—5—4ಕ್ಕೆ ನಾವಿ ಮಾಡಿದ ಈ ದಾವೆಯು ತನಕೆಯು ತಾ. 28—10 33ಕ್ಕೆ ಇಡಲ್ಪಾಗಿದೆ ಅಂದು ಹಾಜರಾಗಿ ಉದಾಹರಣೆ ಕೊಡದಿದ್ದರೆ ಇದು ಏಕಪಕ್ಷ ವಿಚಾರಣೆಯಿಂದ ತೀರ್ಮಾನಿಸಲಾಗುವದು ಎಂದು ಈ ಮೂಲಕ ತಿಳಿಸೋಣವಾಗುತ್ತದೆ.

ಕೆನ್ನಿಕಂಬಳ, 28—9—33. } R. S. Baglodi, ಪ್ರೆಸಿಡೆಂಟ್.

ನೋಟೀಸು

ಕುಂದಾಪುರ ಡಿ. ಮು ಕೋರ್ಟಿನಲ್ಲಿ.

ಕ್ರಮ ನಂಬ್ರ 258/1933

ಇಸೂಫಬ ವೈದಿನ ಸ್ಯಾಬ—ವಾದಿ.

ಮಹಮ್ಮದ ಸ್ಯಾಬ, ಕಪ್ಪಾರು ಹೆಮ್ಮದ ಅವಿಾನ ಸ್ಯಾಬನ ಮಗ, ಹಾಲಿ ಬೈಂಡೂರ ಅಥವಾ ಪೊನ್ನಾನಿಯಲ್ಲಿರುವವ—ಪ್ರತಿವಾದಿ

ಸದ್ರಿ ಪ್ರತಿವಾದಿಗೆ—

ವಾದಿಯು ನಿಮ್ಮ ಮೇಲೆ ಮೂಲಗೇಣಿ ಬಾಕಿ ಬಾಬ್ತು ರೂ. 81—14—0ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ದಾವೆ ದಾಕ್ಲು ಮಾಡಿರುತ್ತಾನೆ ನಿಮ್ಮ ಆಕ್ಷೇಪವೇನಾದರೂ ಇದ್ದರೆ ಸದರಿ ಕೋರ್ಟು ಮುಂದೆ ತಾ. 14—10—33ರಲ್ಲು ಸ್ವತಹ ಯಾ ವಕೀಲರ ಮುಖಾಂತರ ಜವಾಬ್ದಾರು ಮಾಡಬಹುದು. ತಪ್ಪಿದ್ದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು

ಕುಂದಾಪುರ, 28—9—33. } ಕೆ. ಎಲ್. ಭಂಡಾರಿ, ವಾದಿ ಪರ ವಕೀಲ

+++ +++

INSIST ON USING ONLY.

KOHINUR INK

For All Your Pens.

The A I nk that will Suit your taste.

Ask your Stationer to supply you a bottle and you will never accept ANY other Substitute.

Wanted agents in all principal Towns.

Apply to —

The Kohinur Industrials, (India)
Kallianpur P. O. (S India)
or
The General Stores, Hospital Road, Udipi

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

S. C S. No. 193/1933.

ಇನಾಸ ಕ್ರಿಕೇರಿ—ವಾದಿ

ಮತ್ತು

ಜಾಕೋಬ ಕಾಸ್ತಲಿಯಾನ—ಪ್ರತಿವಾದಿ

ಇವರಿಗೆ

ಕಾರ್ಕಳ ಕಸಬಾ ಬೈಲಿಡಕ ಅಂತೋನ ಕಾಸ್ತಲಿಯಾನನ ಮಗ ಸದ್ರಿ ವ್ಯಾಜ್ಯದ ಪ್ರತಿವಾದಿ ಜಾಕೋಬ ಕಾಸ್ತಲಿಯಾನನಿಗೆ ಈ ಮೂಲಕ ತಿಳಿಸೆ ವುದೇನೆಂದರೆ, ನಿಮ್ಮಿಂದ ವಾದಿಯಿಂದ ಬಹಿಮಾಂಡ ಪ್ರೊಮಿಸರಿ ನೋಟಿನ ಬಾಬ್ತು ರೂ 10೮—2—0, ಕೋರ್ಟು ಕರ್ಚು, ೬ಡ್ಡಿ ವಗೈರೆಗೆ ವಾದಿಯು ಮೇಲ್ಕಂಡ ದಾವಾ ದಾಕ್ಲು ಮಾಡಿರುತ್ತಾನೆ ಸದ್ರಿ ದಾವೆಯು ಇದೇ ಬರುವ ತಾರೀಕು 16—10 33ನೇ ಸೋಮವಾರ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಪ್ರತಿವಾದಿಯು ಹಾಜರಾಗಿ ತನ್ನ ಬಗ್ಗೆ ಇಟ್ಟಿರುತ್ತದ ಸದ್ರಿ ತಾರೀಕಿಗೆ ಪ್ರತಿವಾದಿಯು ಕೋರ್ಟಿಗೆ ಹಾಜರಾಗಲಿಕ್ಕೆ ತಪ್ಪಿದರೆ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲಾದೀತೆಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸೋಣವಾಗುತ್ತದೆ

ಕಾರ್ಕಳ, 27—9—'33 } H. S. Hussain, ವಾದಿ ಪರ ವಕೀಲ

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O P. 71/1933

ಲಕ್ಷ್ಮೀಬಾಯಿ ಕೂಡಾ 3 ಜನರು—ಅರ್ಜಿದಾರರು

ಮತ್ತು

ನಾಗಪ್ಪ ಹೆಕ್ಕಾರ ಕೂಡಾ 2 ಜನರು—ಎದ್ರಿರು

1ನೇ ಅರ್ಜಿದಾರರ ಗಂಡ, 2, 3ನೇ ಅರ್ಜಿದಾರರ ತಂದೆ ಮೃತಪಟ್ಟ ಪದ್ಮನಾಭ ಹೆಕ್ಕಾರಿಗೆ ಹೊರಗಿನಿಂದ ಬರಕ್ಕ ಹಣ ಗಳನ್ನು ವಸೂಲು ಮಾಡಲಿಕ್ಕೆ ತವು ಹಕ್ಕುದಾರರೆಂತಲೂ ಆ ಬಗ್ಗೆ ತಮಗೆ ವಾರಿಸು ಸರ್ಟಿಫಿಕೇಟು ಕೊಡಬೇಕೆಂತಲೂ ಕೊಟ್ಟ ಮೇರ್ಪಾಡಿನ ಅರ್ಜಿಯು ತಾ. 25—10—33ಕ್ಕೆ ತನ್ನಿಗೆ ಇದೋಹಾಗಿದೆಯೆಂತ ಈ ಮೂಲಕ ತಿಳಿಸೋಣವಾಗುತ್ತದೆ.

ಕುಂದಾಪುರ, 27—9—33 } G. Sanjiva Rao, B A, LL B. Pleader for Petrtioners

+ +++

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

O S. No. 304/1933.

ಕಾರೀರ ಸಾಹೇಬ—ವಾದಿ

ಮತ್ತು

ಮಹಮ್ಮದ ಕೊಯ—ಪ್ರತಿವಾದಿ

ಪ್ರತಿವಾದಿಯು ತಾ 18—8—1930ರಲ್ಲು ವಾದಿಯ ಪೂರ್ವಾಧಿಕಾರಿ ಖಲೀಫ ಬಾತ್ಯಾ ಸಾಹೇಬರಿಗೆ ಬರಕೊಟ್ಟ ಡಿಮಾಂಡ್ ನೋಟಿನ ಅಸ್ಸು ಬಡ್ಡಿ ಹಣ ರೂ 340/—ನ್ನು ಬರ ಮಾಡಿ ಕೊಳ್ಳುವರೆ ಮಾಡಿದ ದಾವೆಯು ತಾ 10—10—33ಕ್ಕೆ ಮೇಲೆ ಕಾಣಿಸಿದ ಕೋರ್ಟಿನಲ್ಲಿ ತನ್ನಿಗೆ ಇಡೋಣವಾಗಿಯದೆ. ಪ್ರತಿವಾದಿಯು ಸದ್ರಿ ದಿವಸ ಹಗಲು 11 ಘಂಟೆಗೆ ಕೋರ್ಟು ಮುಂದೆ ಹಾಜರಾಗಲಿಕ್ಕೆ ತಪ್ಪಿದರೆ ಆತನ ಗೈರುಹಾಜರಿಯಲ್ಲಿ ಸದರಿ ವ್ಯಾಜ್ಯವು ತನ್ನಿಯಿಂದ ತೀರ್ಮಾನವಾಗುವುದು ಎಂತ ಈ ಮೂಲಕ ತಿಳಿಸೋಣವಾಗುತ್ತದೆ

ಕುಂದಾಪುರ, 24—9—33 } G. Sanjiva Rao, B A, LL B Pleader for Plff.

+ ++ ++

ಬೇಕಾಗಿದ್ದಾರೆ

ದಿ ಟ್ರೊಪಿಕಲ್ ಇನ್ಶೂರೆನ್ಸ್, ಕಂಪೆನಿ ಲಿಮಿಟಿಡ್, ದಿಲ್ಲಿ ಇದಕ್ಕೆ ದಕ್ಷಿಣ ಕನ್ನಡ ಜಿಲ್ಲೆಗೆ ಒಬ್ಬ ಚೀಫ್ ಏಜಂಟರೂ, ಸಬ್ ಏಜಂಟರೂ ಬೇಕಾಗಿದ್ದಾರೆ. ಉದಾರ ಮತ್ತು ಯೋಗ್ಯ ಶರ್ತಗಳು ಕೂಡಲೇ ಕೆಳಗಿನ ವಿಳಾಸದಾರರಿಗೆ ಬರೆಯಿರಿ

ಕೆ ಸುಬ್ರಹ್ಮಣ್ಯ ಅಯ್ಯರ್, ಬ್ಯುಸಿನೆಸ್ ಮೆನೇಜರ್, C/o ಸ್ವದೇಶಾಭಿಮಾನಿ ಮಂಗಳೂರು.

++ ++

PAI PHARMACY,

Car Street, MANGALORE.

ESTABLISHED 1926

Always ask for:—

Lister Antiseptic & Dressings (1928) Ltd., Calcutta.

Popular known as

'Ludco'

Vegetable Toilet and Washing Soaps

Indian Capital, Indian Labour, Indian Management.

LIBERAL TERMS TO TRATE

Agents:—

Pai Pharmacy, Car Street, Mangalore.

Whole Sole Stockists:—

JAYAVANT SHANTARAM & BROS., *Merchants,*
Bunder, Mangalore, S. K

1—9—33

ಮಹಾತ್ಮಾ ಗಾಂಧಿಯವರ ಬಿಡುಗಡೆಯ ಪ್ರಶ್ನೆ ಅಸ್ಪಷ್ಟವಾಗಿಯೇ ಉಳಿದಿತ್ತು.

ಗಾಂಧೀಜಿಯವರ ಆಮರಣೋಪವಾಸ ಹೇಳಿಕೆಯ ಪ್ರಕಟಣೆಯೊಂದಿಗೆ ಅವರ ಬಿಡುಗಡೆ ಜನ್ಮ ದಿನೋತ್ಸವವು ಇಂದೀಗ ಬಂದು ಗೂಡಿದೆ. ಪ್ರಕೃತದ ದಿಕ್ಕುಟ್ಟಿನ ಪರಿಸ್ಥಿತಿಯಲ್ಲಿ ಅವರು ಕಾರಾಗೃಹದ ಹೊರಗಿರದೆ ಸರ್ವರಿಗೂ ನಿರ್ವಹಿಸಲ್ಪಡಬಹುದಾಗಿ, ತಾನು ಬಂದು ವರ್ಷ ಕಾಯದೆಧಂಗವನ್ನು ಕೈಕೊಳ್ಳುವುದಿಲ್ಲೆಂಬ ಅವರ ನಿರ್ಧಾರವು ಹಿಂದೀ ವಾತಾವರಣವನ್ನು ಕವಿದಿರುವ ಕಗ್ಗತ್ತಲನ್ನು ಇಂದೀಗ ನಾಶಮ್ಮು ಚೆದರಿಸಿರುವುದು. ಈ ನಿರ್ಧಾರಕ್ಕೆ ಬರುವ ಮೊದಲು ಅವರ ಅಂತರ್ಯವು ತೀವ್ರ ಯಾತನೆಯ ಅಗ್ನಿಪರೀಕ್ಷೆಗೊಳಗಾಗಿರಬೇಕೆಂಬುದು ಸ್ಪಷ್ಟವಿದೆ. ಆದರೆ, ಈಗ ಹಿಂದೀ ಹೃದಯವನ್ನು ತೊರೆದು ಸತ್ಪಥಗುಂದಿಸಿ ಹಾನಿಕಾರಕನಾಗಿರುವ ಓರ್ವನಿಸ್ಸ್ಸ ಅಳ್ಳಕೆಯ ದುಷ್ಪರಿಣಾಮವನ್ನು ಅವರಿಗೆ ಮಾತ್ರ ತಡೆಗಟ್ಟಲು ಸಾಧ್ಯವಿದೆ. ಆರ್ಥಾತ್, ಈ ಸನ್ನಿವೇಶದಲ್ಲಿ ಅವರು ಮಾತ್ರವೇ ದೇಶಕ್ಕೆ ಸರಿಯಾದ ಸಲಹೆಯಿತ್ತು ರಾಷ್ಟ್ರೀಯ ಚಳವಳಿಯ ತಪ್ಪುದಾರಿ ಹಿಡಿಯದಂತೆ ಮಾಡಲು ಶಕ್ತರು. ಮಹಾತ್ಮರೇಗ ತನ್ನ ಮೇಲೆ ಹಾಕಿಕೊಂಡಿರುವ ಈ ನಿರ್ಬಂಧದ ಸಂಪೂರ್ಣ ಉಪಯೋಗವನ್ನು ಕರ್ನಾಟಕವು ಪಡೆಯುವುದಾದರೂ ಹೇಗೆ? ಈ ಜನ್ಮ ದಿನ ಸಮಾರಂಭಗಳು ಮುಗಿದರೂ ಅವರಿಗೆ ತನ್ನ ದುಃಖದ ಬಟ್ಟಲು ಸಹನೀಯವಾಗುವಂತೆ ಮಾಡುವುದೆಂತು? ಪೂನಾ ಪರಿಷತ್ತು ಮುಗಿದ ಮೇಲೆ ಗಾಂಧಿಯವರಿತ್ತ ಹೇಳಿಕೆಯಲ್ಲಿ ಕೊಟ್ಟ ಸಲಹೆಗನುಗುಣವಾಗಿ ಕರ್ನಾಟಕವು ಈ ಸಂದರ್ಭದಲ್ಲಿ, ಅಸ್ಪೃಶ್ಯತಾ ಕಳಂಕವನ್ನು ಹಿಂದುಸನಾತನದಿಂದ ತೊಡೆದುಹಾಕಲು, ನಿರೋಧಿಸಲಸಾಧ್ಯವೆನಿಸುವ ಆಂದೋಲನವನ್ನು ಹೂಡುವುದರೊಂದಿಗೆ ಕಾಂಗ್ರೆಸ್ಸಿನ ವಿಧಾಯಕ ಕಾರ್ಯಕ್ರಮವನ್ನು ಮುಂದೊತ್ತುವುದರಲ್ಲಿ ನಿರತವಾಗದೇಕು. ಹರಿಜನ ಸೇವೆ, ಖಾದಿ ಮತ್ತು ಹಿಂದೀ ಪ್ರಚಾರವೇ ಮಹಾತ್ಮರ ಪ್ರಾಜ್ಞರುಸಿರು.

ಸ್ವತಂತ್ರ್ಯ ಸಮರದಿಂದ ಇದೀ ದೇಶದಲ್ಲೀಗ, ಸ್ವರಾಜ್ಯಕ್ಕಾಗಿ ಯಾವ ತ್ಯಾಗಕ್ಕೂ, ಎಂತಹ ಕಷ್ಟಸಹನೆಗೂ ಸಿದ್ಧರಿರುವ ಯೋಧರು ತಲೆಯೆತ್ತಿರುವರು. ಅವರ ಶಕ್ತಿಯು, ರಾಷ್ಟ್ರವನ್ನು ಸಂಘಟಿಸಿ ಬಲಗೊಳಿಸಲು ಸಂಪೂರ್ಣವಾಗಿ ಈಗ ಉಪಯೋಗಿಸಲ್ಪಡದೇಕು. ಈ ವೀರ ಕೆಲಸಗಾರರು, ಜಾತೀಯ ಒಕ್ಕಟ್ಟು ಮತ್ತು ಸಮಾಜಗಳೊಳಗೆ ಸೌಹಾರ್ದವನ್ನುಂಟು ಮಾಡಿ, ಈಗ ದಿಕ್ಕುಪಾಲಾಗಿರುವ ರಾಷ್ಟ್ರೀಯ ಶಕ್ತಿಯನ್ನು ಒಂದುಗೂಡಿಸಿ ಸಂಘಟನೆ ಮಾಡಲು ಇದೀಗ ಸುವರ್ಣ ಸಂಧಿಯು. ಸ್ವದೇಶಿ, ಹಿಂದಿ ಮತ್ತು ಹರಿಜನ ಸೇವೆಯ ಸಂದೇಶವನ್ನು ಹಳ್ಳಿ ಮೂಲೆಗಳಲ್ಲಿ ಹಬ್ಬಿಸುವುದೇ ಈ ಉದ್ದೇಶ ಸಾಧನೆಯ ಒಂದು ಮಾರ್ಗವು. ಈ ತ್ರಿವಿಧ ಕಾರ್ಯಕ್ರಮವನ್ನು ಮುಂದೊತ್ತಲು ಸಾಕಷ್ಟು ಜನೋತ್ಸಾಹವೂ ದೊರೆಯದಿರದು. ಆದರೆ ಯಾವ ಕೆಲಸವನ್ನಾದರೂ ವ್ಯವಸ್ಥೆಯಿಂದ ನಡಿಸಲು ಧನಭಾವವೇ ಪ್ರಬಲ ಕೊರತೆಯಾಗಿರುವುದು. ಆದುದರಿಂದ ಉಳಿದವರು ಈ ಸಂಸ್ಥೆಗಳಿಂದ ಪ್ರಕಾಶದಾಗಿ ಕಾರ್ಯನಡಿಸಿ ಮುಕ್ತಿಯಿಂಬಂತೆ ದೇಶಾದ್ಯಂತ ಹಿಂದೀ ಸಂಚಾರವನ್ನು ಒಡನೆಯೇ ಉದಾರಬುದ್ಧಿಯಿಂದ ಒದಗಿಸಿಕೊಡುವುದು ಕರ್ನಾಟಕ ಶ್ರೀಮಂತರ ಪ್ರತಿಯೊಬ್ಬ ದೇಶಾಭಿಮಾನಿಯ ಕರ್ತವ್ಯವಿದೆ.

ಗಾಂಧಿದಿಯವರ ಜೀವನವು ಪ್ರತಿಯೊಬ್ಬ ಹಿಂದೀಯನನ್ನೂ ಹುರಿದುಂಬಿಸುವ ಏಕತಃ ಮಾದರಿಯುದಾಗಿರುವುದೆಂದು ಹೇಳುವ ಅವಶ್ಯವೇ ಇಲ್ಲ. ಕಷ್ಟ ಸಹನೆ ಮತ್ತು ತ್ಯಾಗದ ನಿರಂತರ ಗೀತೆಯೇ ಅದು. ಈ ಜನ್ಮ ದಿನೋತ್ಸವದ ಪುಣ್ಯದಿನಗಳಲ್ಲಿ ಪ್ರತಿಯೊಬ್ಬನೂ ಮಹಾತ್ಮರ ಬೋಧಾಮೃತ ಸೇವನೆ ಮಾಡಿ ಅವರ ಜೀವನದಿಂದ್ದಿಪಾತ ಶಕ್ತಿಯಲ್ಲಿ, ಪ್ರತಿಯೊಬ್ಬ ಹಿಂದೀಯನ ಗೃಹವೂ ಖಾದಿಯಿಂದ ಅಲಂಕೃತವಾಗಲಿ. ಸ್ವದೇಶಿ ಸ್ವಾತಿಸ್ಯದ ದೇಶದಲ್ಲೆಲ್ಲಾ ಹಬ್ಬಿ ನೆಲೆಗೊಳ್ಳಲಿ. ನಾವೆಲ್ಲರೂ ಹಿಂದೊಸ್ಮೆ ಮಹಾ ಪ್ರಯತ್ನ ತೂಪಿ ನಮ್ಮೊಪವಿತ್ರ ಭೂಮಿಯಿಂದ ಅಸ್ಪೃಶ್ಯತೆಯನ್ನು ನಿರ್ಮೂಲಿಸುವ. ಹಿಂದಿಯೇ ನಮ್ಮ ರಾಷ್ಟ್ರೀಯ ಏಕ್ಯದ ಹೆಗ್ಗುರುತಾಗಿ ಶೋಭಿಸಲಿ. ನಾವೆಲ್ಲರೂ, ಗಾಂಧಿಜಿಯವರು ಚಿರಕಾಲ ಬಾಳಲೆಂದು ನಿಶ್ಚಕಂರದಿಂದ ಪ್ರಾರ್ಥಿಸುವ.

ಮಂಗಳೂರು, 20-9-'33. } ಸದಾಶಿವರಾವ್ ಕಾರ್ನಾಡ್.

ಮೂರನೇ ಹರಿಜನ ದಿನಾಚರಣೆ.

ಹರಿಜನಸೇವೆ, ಖಾದಿಪ್ರಚಾರ ಮತ್ತು ಹಿಂದೀ ಪ್ರಚಾರವೇ ಮೊದಲಾದ ಕಾರ್ಯಗಳನ್ನು ಕುಳ್ಕೆಹಳ್ಳಿ, ಪೆರ್ಡೂರು, ಬೈರಂಪಳ್ಳಿ, ತಿರೂರು ಮತ್ತು ಬೆಳ್ಳಾರ್ಡಿ ಈ ಐದು ಗ್ರಾಮಗಳಲ್ಲಿ ಸಾಧಿಸುವ ಉದ್ದೇಶದಿಂದ ಇದೇ ತಿಂಗಳ ಆರಂಭಕ್ಕೆ ಸ್ಥಾಪಿಸಲ್ಪಟ್ಟ ಗ್ರಾಮಸೇವಾ ಸಂಘದ ಆಶ್ರಯದಲ್ಲಿ ಬೈರಂಪಳ್ಳಿ ಗ್ರಾಮದ ದೊಡ್ಡೇರಂಗಡಿಯಲ್ಲಿ ತಾ. ೩೦ನೇ ಆದಿತ್ಯವಾರ ಮೂರನೇ ಹರಿಜನ ದಿನವು ಆಚರಿಸಲ್ಪಟ್ಟಿತು. ಸಂಘದ ಅಧ್ಯಕ್ಷರಾದ ಶ್ರೀ ಸಾಂತಾಕ್ಕಾರು ಅನಂತ ಪದ್ಮನಾಭ ಭಟ್ಟರು ತಮ್ಮ ಸ್ವಂತ ಖರ್ಚಿನಿಂದ ಸುಮಾರು ೩೦೦ ಮಂದಿ ಹರಿಜನರಿಗೆ ಒಡಕರಮಾನ್ನ ಸಮೇತ ಭೋಜನ ಮಾಡಿಸಿದರು. ಬಳಸಲಿಕ್ಕೆ ಬ್ರಾಹ್ಮಣ ಸ್ವಯಂಸೇವಕರೇ ಇದ್ದರು. ಊಟದ ನಂತರ ಸಾಯಂಕಾಲ ೫ ಗಂಟೆಗೆ ದೊಡ್ಡೇರಂಗಡಿ ರಾಷ್ಟ್ರೀಯ ಶಾಲೆಯ ಎದುರು ಸಾರ್ವಜನಿಕ ಸಭೆ ಸೇರಿತು. ಗ್ರಾಮಸ್ಥರಲ್ಲಿ ಹೆಚ್ಚಿನವರು ಸಭೆಗೆ ಬಂದಿದ್ದರು. ಸಭಾಧ್ಯಕ್ಷರಾದ ಶ್ರೀ ಅನಂತ ಪದ್ಮನಾಭ ಭಟ್ಟರು ಹರಿಜನರಿಗೆ ಅವಲ್ಲಿ ಆಗ ಬೇಕಾದ ಸುಧಾರಣೆಗಳ ಕುರಿತು ಸ್ವಲ್ಪ ಹೇಳಿ ನೆರೆದಿದ್ದ ಗ್ರಾಮಸ್ಥರಿಗೆ ಹರಿಜನ ಸೇವೆಯ ಅವಶ್ಯಕತೆಯನ್ನು ವಿವರಿಸಿದರು. ಮೂರು ಮಂದಿ ಹರಿಜನ ಬಾಲಕರನ್ನು ರಾಷ್ಟ್ರೀಯ ಶಾಲೆಗೆ ಸೇರಿಸಲಾಯಿತು, ಮತ್ತು ಈ ಮೂವರಿಗೆ ಉಡುವರೆ ಖಾದಿ ಬಟ್ಟೆಯು ಕೊಡಲಾಯಿತು.

ಎಮ್ ಲಕ್ಷ್ಮೀನಾರಾಯಣ ಬಲ್ಲಾಳ
ಕಾರ್ಯದರ್ಶಿ, ಗ್ರಾಮಸೇವಾಸಂಘ ಪೆರ್ಡೂರು.

"ಅಳಿಯ ಸಂತಾನ ಮಸೂದೆ"

ತೀರ್ಥಳ್ಳಿ ಸ—ರ—ಗಾರರವ್ಲು ಬೆಳ್ಳಾರೆ ಡೋರ್ಡ್ ಜಾಯರ್ ಎರಿಮೆಂಟರಿ ಶಾಲೆಯಲ್ಲಿ ಅಳಿಯ ಕಟ್ಟು ಅಡಿಕೆಯ ಮಜಾತಿನರ ಸಭೆಯು ನಡೆಯುತು. ಮ. ರಾ. ಶೆಣೈ ಮಂಜಪ್ಪ ರೈಗಳ ಸೂಚನೆಯ ಮೇರೆಗೆ ಅಗಲ್ವಾಡಿ ದೇರಣ್ಣ ಶೆಟ್ರು, ಅನಮತೋದಿಸಿದ ಮೇರೆಗೆ ಬೆಳ್ಳಾರೆ ಕಸಬಾ ಗ್ರಾಮದ ಪಟೇಲ್ ಬಿ. ತ್ಯಾಂಪಣ್ಣ ಶೇಕರನ್ನು ಸರ್ವಸಮ್ಮತವಾಗಿ ಸಭಾಧ್ಯಕ್ಷರನ್ನಾಗಿ ಆರಿಸೋಪಾಯಿತು.

ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಶ್ರೀಯುತ ಎ. ಬಿ. ಶೆಟ್ರು ತರುವುದಾಗಿ ನೋಟೀಸು ಕೊಟ್ಟಿರುವ "ಅಳಿಯ ಸಂತಾನ ಮಸೂದೆಯ" ಕುರಿತು ಕಂಡಿತ ಬಿ. ನಾರಾಯಣ ಶೇಕರು ಸಭಿಕರಿಗೆ ವಿವರಿಸಿ ಹೇಳಿದ ನಂತರ ಈ ಕೆಳಗಿನ ಠರಾವು ಸರ್ವ ಸಮ್ಮತದಿಂದ ಪಾಸಾಯಿತು. ಶ್ರೀ ಎ. ಬಿ. ಶೆಟ್ರು ಮದ್ರಾಸು ನ್ಯಾಯ ವಿಧಾಯಕ ಸಭೆಯಲ್ಲಿ ತರುವುದಾಗಿ ನೋಟೀಸು ಕೊಟ್ಟಿರುವ, "ಅಳಿಯ ಸಂತಾನ ಮಸೂದೆಯನ್ನು ಪೂರ್ತಿಯಾ ತಾಲೂಕಿನ ಬೆಳ್ಳಾರೆ ಹ್ಯಾತ್ಯಾದ ಅಳಿಯ ಕಟ್ಟುನಾಚರಿಸುವ ಮಹಾಜನರ ಈ ಸಭೆಯು ಸಮರ್ಥಿಸುತ್ತದೆ. ಸದ್ರಿ ಬೀಲು ಅಳಿಯ ಕಟ್ಟುಗಳಿಗೆ ಅತೀ ಅಗತ್ಯದ್ದು, ಹಜ್ಜಿನ ಪ್ರಯೋಜನದ್ದು ಮತ್ತು ಆದರೆಲ್ಲಿರುವ ಎಲ್ಲಾ ತತ್ವಗಳು ಸ್ವೀಕಾರ್ಯವಾದ್ದು ಕೂಡಾ ಆಗಿರುವುದರಿಂದ ಅದನ್ನು ಆದಷ್ಟು ಬೇಗನೇ ಕೌನ್ಸಿಲ್ನಲ್ಲಿ ಮಂಡಿಸಿರುವಂತೆ ಪ್ರಯತ್ನ ವ್ಯಾಡಬೇಕಾಗಿ ಶ್ರೀ ಎ. ಬಿ. ಶೆಟ್ರುರನ್ನು ಮತ್ತು ನಮ್ಮ ಜಿಲ್ಲೆಯ ಇತರ ಮಾನ್ಯ ಕೌನ್ಸಿಲು ಮೆಂಬರರನ್ನು ಈ ಮಹಾಸಭೆಯು ಕೇಳಿಕೊಳ್ಳುತ್ತದೆ. ಅನಂತರ ಮ. ರಾ. ಕಳಂಜಾ ಗುತ್ತಿನ ತಿಮ್ಮಪ್ಪ ರೈಗಳು ಅಳಿಯ ಸಂತಾನ ಮಸೂದೆಯ ಪರಿಚ್ಛೇದ IV ಸೆಕ್ಷನು ೩೦ ರ ೧. ೨ನೇ ಕ್ಲೋಸಿನ.

೩೦ (೧) ಕುಟುಂಬದ ಅವಶ್ಯಕತೆ ಮತ್ತು ಪ್ರಯೋಜನ ಕ್ಕಾಗಿಯಲ್ಲದೆ ಬಹು ಪಕ್ಷೀಯ ಕ್ರಿಯಾಸ್ಥ ಮೆಂಬರರ ಬರಹ ನಿತ ಸಮ್ಮತಿಯ ಹೊರತು ಯಜಮಾನ ವ ಯಜಮಾನ್ತಿಗೆ ಕುಟುಂಬದ ಸ್ಥಿರ ಸೊತ್ತನ್ನು ಧೋಗ್ಯಾದಿ ಅಡವು ಮಾಡಲಿಕ್ಕೂ ಪಿಟ್ಟಿದೆ ಗೇಣಿಗೆ ಕೊಡಲಿಕ್ಕೂ ಹಕ್ಕಿರದು.

೨. ಯಜಮಾನನಾಗಲೀ ಯಜಮಾನ್ತಿಯಾಗಲೀ, ಕುಟುಂಬದ ಯಾವ ಆಸ್ತಿಯನ್ನಾದರೂ ಕುಟುಂಬದ ಅವಶ್ಯಕತೆ, ಅಥವಾ ಪ್ರಯೋಜನಕ್ಕೆಂದು ಧೋಗ್ಯಾದಿ ಅಡವು ಮಾಡಿದರೆ ಅಥವಾ ಸಂಪೂರ್ಣವಾಗಿಯಾಗಲೀ ಅಂಶವಾಗಿಯಾಗಲೀ, ವ್ಯಯದೇಗೇನಿಗೆ ಕೊಟ್ಟರೆ, ಅದು ಸಿಂಧುವಾಗಲಾರದು.

೩. "ಅಗತ್ಯವಿಲ್ಲ"

ಎಂದು ತಿದ್ದುಪಡಿಯಾಗಬೇಕಾಗಿ ಸೂಚಿಸಿದ್ದನ್ನು ಮ. ರಾ. ಮುಪ್ಪಿರ್ಯ ದೇವಪ್ಪ ರೈಗಳು ಅನುಮೋದಿಸಿದರು. ಆ ವಿಷಯ ಸಭಿಕರು ತುಂಬಾ ಚರ್ಚಿಸಿ ಅಧ್ಯಕ್ಷರ ಹಿತೋಕ್ತಿಯಂತೆ ಒಪ್ಪಿ ತಿದ್ದುಪಡಿ ಮಾಡುವರೆ ಮಾನ್ಯ ಎ. ಬಿ. ಶೆಟ್ರನ್ನು ಕೇಳಿಕೊಳ್ಳಬೇಕೆಂದು ನಿರ್ಣಯಿಸಿ ತಾಂಬೂಲಾದಿಗಳ ಸ್ವೀಕೃತವಾಗಿ ಸಭಾಕಾರ್ಯವಾಯಿತು.

ಬೆಳ್ಳಾರೆ 5-9-'33 } ಪಟೇಲ್ ಪದ್ಮಗುತ್ತು ಬಿ. ತ್ಯಾಂಪಣ್ಣ ಶೇಕ್, ಸಭಾಧ್ಯಕ್ಷ.

ಮಹಿಳೆಯರಲ್ಲಿ ಮಾತೃತ್ವ.

ಮಕ್ಕಳ ಪೋಷಣೆಯು ತಾಯಂದಿರ ವಶವೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಪ್ರಾಚೀನ ಕಾಲದಲ್ಲಿನ ಇತಿಹಾಸಗಳನ್ನು ನೋಡಿದರೆ ಅಂದಿನ ಮಾತೆಯರು ತಮ್ಮುಲ್ಲಿನ ಸದುಪದೇಶಗಳಿಂದ ತಮ್ಮ ಪುತ್ರರನ್ನು ವೀರರನ್ನಾಗಿ ಮಾಡಿರುವರೆಂದು ತಿಳಿದುಬರುತ್ತದೆ. ಆದುದರಿಂದಲೇ ಶ್ರೀ ರಾಮ, ಕೃಷ್ಣ, ಯುಧಿಷ್ಠಿರ, ಭೀಮ, ಅರ್ಜುನ ಮೊದಲಾದ ಪ್ರಾಚೀನ ಪುರುಷರು. ರಾಣಾಪ್ರತಾಪಸಿಂಹ, ಪಂಜಾಬ ಕೇಸರಿ, ರಣಜಿತಸಿಂಹ, ಆರ್ಯ ಸಾಮ್ರಾಜ್ಯ ಸಂಸ್ಥಾಪಕನಾದ ಛತ್ರಪತಿ ಶಿವಾಜಿ ಮುಂತಾದ ಅರ್ವಾಚೀನ ವೀರ ಶಿರೋಮಣಿಗಳನ್ನು ಹೆತ್ತಂಥ ಮಾತೆಯರು ಮಹತ್ತಾದ ಯಶಸ್ಸನ್ನು ಸಂಪಾದಿಸಿದರು. ಆದರೆ ವರ್ತಮಾನಕಾಲದ ಪರಿಸ್ಥಿತಿಯು ತೀರಾ ಭಿನ್ನವಾಗಿದೆ; ಈಗಿನ ತಾಯಂದಿರಿಗೆ ಮಕ್ಕಳ ಪೋಷಣೆಯ ಸರಿಯಾದ ತಿಳುವಳಿಕೆಯು ಇಲ್ಲವೆನ್ನಬಹುದು. ಸ್ತ್ರೀಯರಲ್ಲಿರುವ ಜ್ಞಾನದ ಕೊರತೆಯೇ ಇದಕ್ಕೆ ಕಾರಣವಾಗಿರುತ್ತದೆ. ಹತ್ತು ಯ ಹನ್ನೆರಡು ವರ್ಷ ಪ್ರಾಯದೊಳಗಾಗಿ ತಂದೆತಾಯಿಗಳು ಹುಡುಕಿಟ್ಟು ಯಾರಾದರೊಬ್ಬನ ಕೈ ಹಿಡಿದು ಪತಿಗೃಹವನ್ನು ಸೇರುವುದೇ ಈಗಿನ ಮಹಿಳೆಯರಾದ ನಮಗೆ ದೊಡ್ಡಕುವ ಶಿಕ್ಷಣ. ಹೀಗಿರುವಲ್ಲಿ ಮಕ್ಕಳ ಪೋಷಣೆಯ ತಿಳುವಳಿಕೆಯು ಬಾಲದಿರುವುದೇನೂ ವಿಶೇಷವಲ್ಲ. ಯಾವ ದೇಶದಲ್ಲಿ ಮಕ್ಕಳ ಪೋಷಣೆಯು ವಿಚಾರವಂತೆಯರಾದ ಮಾತೆಯರಿಂದಲೇ ಆಗುತ್ತದೋ ಆ ದೇಶದ ಪ್ರಜೆಗಳೂ ಸ್ವಾವಲಂಬಿಗಳೂ ಆಗುತ್ತಾರೆ. ಯಾವ ಜನಾಂಗದಲ್ಲಿ ಮಹಿಳೆಯರನ್ನು ಅಜ್ಞಾನದ ನಿರ್ಬಂಧದಲ್ಲಿ ಇಡಲಾಗುತ್ತದೋ ಆ ಜನಾಂಗವು ಎಂದಿಗೂ ಉನ್ನತಿಯ ಮಾರ್ಗವನ್ನು ಪಡೆಯಲಾರದು. ಈ ತತ್ವವನ್ನು ತಿಳಿದ ಅನೇಕ ರಾಷ್ಟ್ರ ಮಹಿಳೆಯರು ತಮ್ಮ ಉನ್ನತಿಗಾಗಿ ಯಾವ ಸುಧಾರಣೆಯ ಕ್ರಾಂತಿಗಳನ್ನು ಹರಡಿಸುತ್ತಿರುವರೆಂದು ಬಾಹ್ಯ ಪ್ರಪಂಚವಾವ ಲೇಖನದಿಂದ ತಿಳಿಯಬಹುದು. ಇದೇ ಪ್ರಕಾರ ಹಿಂದುಸ್ಥಾನದ ಸ್ಥಿತಿಗತಿಗಳನ್ನು ನೋಡಿದರೆ ಈಗಿನ ಮಹಿಳೆಯರಲ್ಲಿ ಮೊದಲಿನವರಿಲ್ಲದ್ದಿಂಥ ಮಾತೃತ್ವದ ಗಾರವವು ಸಂಪೂರ್ಣವಾಗಿ ಮಾಯವಾಗಿದೆ ಎನ್ನಬಹುದು. ಮತ್ತು ಆ ಕೊರತೆಯನ್ನು ಹೋಗಲಾಡಿಸಲಿಕ್ಕೆ ಸ್ತ್ರೀಸಮಾಜದಲ್ಲಿ ತಕ್ಕ ಸುಧಾರಣೆಯ ಅಗತ್ಯವಿದೆಯೆಂದು ಕಂಡುಬರುತ್ತದೆ. ಮುಂದಿನ ಸಮಾಜ ವ್ಯವಸ್ಥೆಯಲ್ಲಿ ಮಕ್ಕಳ ಪೋಷಣೆಯು ಹೇಗಾಗ ಬಹುದೆಂಬುದರ ಪ್ರಶ್ನೆಯು ಮುಖ್ಯವಾಗುತ್ತದೆ. ಇನ್ನು ಮುಂದಕ್ಕೆ ಮಹಿಳೆಯರು ತಮ್ಮ ಜೀವನ ಸ್ವಾತಂತ್ರ್ಯಕ್ಕೆ ಯಾವ ದಾರದೊಂದು ಕುದ್ಯೋಗವನ್ನು ಕೈಕೊಳ್ಳುವರೆಂಬುದರಲ್ಲಿ ಸಂದೇಹವಿಲ್ಲ. ಅಂಥಾ ಸಂದರ್ಭದಲ್ಲಿ ಮಕ್ಕಳ ಕಾಲನಿ ಪೋಷಣೆಯು ಹೇಗಾಗುವುದೆಂಬುದನ್ನೂ ನಾವು ಆಲೋಚನೆ ಮಾಡಬೇಕಷ್ಟು. ವಿವಾಹದ ಕ್ಯಾರಿತು ಜನರಲ್ಲಿ ಯಾವ ಯಾವ ಮೂಢ ನಂಬಿಕೆಯು ನೆಲೆಗೊಂಡಿರುವುದೋ ಅದೇ ಪ್ರಕಾರ ವಿಚಾರವು ಇದರಲ್ಲಿ ಬೇರೂರಿಕೊಂಡಿದೆ. ಧನವ್ಯಯದಲ್ಲಿ ಮಕ್ಕಳ ಪೋಷಣೆಯು ರಹಸ್ಯದ ಆಥವಾ ಸರಕಾರದವರೇ ನೋಡಿಕೊಳ್ಳುವರೆಂದು ಯಾರಾದರೂ ಹೇಳಿದರೆ, ಮಕ್ಕಳನ್ನೆಲ್ಲಾ ಒಂದು ಅನಾಥಾಲಯಕ್ಕೆ ಸೇರಿಸಿ ಅಲ್ಲಿ ಅವುಗಳನ್ನು ಸಾಕಲಾಗುವುದು ಎಂಬ ತಪ್ಪು ತಿಳುವಳಿಕೆಯು ಜನರಲ್ಲಿ ತಲೆದೋರಿರುವುದು. ಆದರೆ ಹೀಗೆಂದಿಗೂ ಆಗಲಾರದು. ಪ್ರಕೃತಿಯರೆ ಹೆಣ್ಣು ಮಕ್ಕಳನ್ನು ಅವರ ಮಾತೆಯರ ಪ್ರೇಮದಿಂದ ಅಗಲಿಸುವುದರಿಂದ ಮಕ್ಕಳಿಗೂ ತಾಯಂದಿರಿಗೂ ಹೆಚ್ಚಿನ ಹಾನಿಯು ಒದಗುತ್ತದೆ. ಈಗಿನ ಕಾಲದಲ್ಲಿ ಚಿಕ್ಕ ಪ್ರಾಯದ ಮಕ್ಕಳನ್ನು ಎಲ್ಲಿಯಾದರೂ ಬಿಟ್ಟು ತಾವೆಲ್ಲಿಯಾದರೂ ಇನ್ನೊಂದು ಕಡೆಯಲ್ಲಿ ವಾಸಮಾಡುತ್ತಿರುವ ತಾಯಂದಿರು ಎಷ್ಟೋ ಮಂದಿ ಇದ್ದಾರೆ. ಇನ್ನು ಕೆಲವರು ತಮ್ಮ ಈಗಿನ ಸ್ವತಂತ್ರ ಬೇವನಕ್ಕೆ ತಡೆಯಾಗದಂತೆ ತಮ್ಮ ಮಕ್ಕಳನ್ನು ಶಿಕ್ಷಣ ಅಥವಾ ಇನ್ನಿತರ ನೆವನಗಳಿಂದ ದೂರಕ್ಕಿಟ್ಟು ಬಿಡುತ್ತಾರೆ. ಇದರಿಂದ ಆ ಮಕ್ಕಳಲ್ಲಿ ಅನೇಕ ತರದ ದುರ್ನಡತೆಗಳೂ ಸ್ವೇಚ್ಛಾ ವರ್ತನೆಯೂ ತಲೆದೋರಿ ಅವರ ಮುಂದಿನ ಜೀವನವು ಕೆಟ್ಟುಹೋಗುವುದು. ಪಶ್ಚಿಮ ದೇಶಗಳಲ್ಲಿ ಮಕ್ಕಳ ಅನ್ನುತ್ಪತ್ತಿಗಾಗಿ ಸರಕಾರವೇ ಹೆಚ್ಚಿನ ವ್ಯವಸ್ಥೆಯನ್ನು ಮಾಡಿರುತ್ತದೆ. ಅಲ್ಲಿ ಪ್ರತಿಯೊಬ್ಬರೂ ತಮ್ಮ ಮಕ್ಕಳನ್ನೂ ಚಿಕ್ಕ ಪ್ರಾಯದಲ್ಲಿದ್ದೋ, ಸಾಕಾಕಾಲಗಳಿಗೆ ಕಳುಹಿಸಲೇಬೇಕೆಂಬ ಕಾನೂನನ್ನು ಅಲ್ಲಿಯ ಸರಕಾರಗಳು ಮಾಡಿರುತ್ತವೆ. ಅಲ್ಲಿ ಮಕ್ಕಳಿಗೆ ಶಿಕ್ಷಣವನ್ನು ಧರ್ಮಾರ್ಥವಾಗಿ ಕೊಡುವುದಲ್ಲದೆ, ಹಾಲು, ಬೆಣ್ಣೆ, ಖಾದ್ಯಾದಿ ಆಹಾರ ಸಾಮಾನ್ಯಗಳನ್ನೂ ಒದಗಿಸಿ ಕೊಡುತ್ತಾರೆ. ಈ ಕುರಿತು ಹೆಚ್ಚಿನ ತಿಳಿಯತಂದೆಗಳು ಹೆಚ್ಚು ಪ್ರಚಾರಮಾಡಬೇಕಾಗುವುದಿಲ್ಲ.

ಎಡೂರು ಕಾರಂತ ಗಾಯಿ.

ಕಾರದೆಯ ಸಂಸಾರ ಅಥವಾ ಭಾಷಾ ಶಾಸ್ತ್ರ— ಬರೆದವರು, ಶ್ರೀ ರಂಗನಾಥ್ ವಾ ಜಾಗಿರದಾರ್, ಎಂ. ಎ. (ಲಂಡನ್) M. R. A. S. ಅಸಿ ಸ್ಟಾಂಟ್ ಸಂಸ್ಕೃತ ಲೆಕ್ಚರರ್, ಕರ್ನಾಟಕ ಕಾಲೇಜ್, ಧಾರವಾಡ. ಸಂಸಾರ ವನ್ನು ಶ್ರೀ ಆಲೂರ ವೆಂಕಟರಾಯರು. ಕಾರದೆಯ ಸಂಸಾರವೆಂದೊಡನೆ ಇದು ಕಥೆಯೆಂಬ ಭಾವನೆಯಾಗುವುದು; ಆದರೆ, ಇದು ಕಥೆಯಲ್ಲ—ಭಾಷಾ ಶಾಸ್ತ್ರ ವಿಷಯವನ್ನು ಶಾರದೆಯೆಂದು ಕರೆದಿರುವರು. ಆದರ ಸ್ವರೂಪ, ಭಾಷಾ ಶಾಸ್ತ್ರ ಅದರ ಪರಿವರ್ತನ, ಭಾಷೆಯ ಜನ್ಮ, ಜಳವಳ—ನಿಯಮ, ಕ್ರಮ, ಶೃಂಗಾರ ಮೊದ ಲಾದ ಅಂಶ ಉದಾತ್ತ ಭಾವನೆಗಳನ್ನು ಕೊಟ್ಟಿರುತ್ತಾರೆ. ಭಾಷೆಯೆಂದರೇನು, ಅದರ ಮಹತ್ವವೆಷ್ಟೆಂದು ತಿಳಿಯಲಿಚ್ಛಿಸುವವರು ಈ ಗ್ರಂಥವನ್ನು ಅಗತ್ಯ ಓದಬೇಕು. ಬೆಲೆ ರೂ. ೧.

ರಾಜಾರಾಜಸಿಂಹ—(ಯಕ್ಷಗಾನ ಪ್ರಬಂಧ) ಪ್ರಥಮ ಭಾಗ, ಅಂಕ ೧—೨. ರೇಬಗರು ಪಂಡಿತ ಕೆ. ಪಿ. ವೆಂಕಪ್ಪ ಕೆಟ್ಟಿ, ಕವಿಭೂಷಣ ಬೆಳ್ತಂಗಡಿ, ಪ್ರಕಾ ಶಕ ಪಿ. ಲಕ್ಷ್ಮಣರಾವ್ ವಿದ್ಯಾರ್ಥಿ, ೫೬ ಪುಟಗಳು, ಬೆಲೆ ೫ ಆಣೆ, ವಿಷಯವು ಯಕ್ಷಗಾನ ಪ್ರಬಂಧವಿದು. ಕಂದ ಪದ್ಯಗಳೂ, ತರತರದ ಪದ್ಯಗಳೂ ಇದರಲ್ಲಿ ಪಡಿಸಲಾಗಿವೆ. ಯಕ್ಷಗಾನವು ಕನ್ನಡ ವಾಙ್ಮಯಕ್ಕೆ ದೊಂಬಲವಾಗಿ ನಿಂತಿರುವ ಈ ವೇಳೆಯಲ್ಲಿ ಶ್ರೀ ಕ್ಷೇತ್ರ ಯಕ್ಷವು ಬಹು ಪ್ರಯೋಜನಕಾರಿಯಾಗಿದೆ.

ಮಳೆಗಾಲದ ಮಲೆನಾಡು—ರಾಜಹಂಸ ಗ್ರಂಥಮಾಲೆಯಿಂದ ಹೊಸ ತಾಗಿ ಹೊರಟಿದೆ. ಬರೆದವರು, ಶ್ರೀ ದಿವೇಕರ ಕೃಷ್ಣರಾಯರು ಭದ್ರಾವತಿ. ಬೆಲೆ ಮೂರಾಣಿ, ಧಾರವಾಡದಲ್ಲಿ ಕನ್ನಡ ಗ್ರಂಥಮಾಲೆಗಳು ಹೆಚ್ಚಿದ್ದುತ್ತಿದ್ದುಕರ್ನಾಟಕ ಮಾತೆಯ ದೆಳವಣಿಗೆಯ ಚಿಹ್ನೆಯು ತೋರುತ್ತಿದೆ. ಮಳೆಗಾಲದ ಮಲೆನಾಡು ಎಂದರೆ ಹೃದ ಯಂಗಮವಾದ ಪತ್ತೇದಾರಿ ಕಥೆ. ಕಥಾ ವಸ್ತುವು ಉತ್ತಮವಿದೆ. ಭಾಷಾಶೈಲಿಯು ಮಧುರವೆಕ್ಕೆಬಹುದು. ಸಾಮಾಜಿಕ ವಾತಾವರಣದ ಅರಿವಿದ್ದೇ ಈ ಕಥೆಯನ್ನು ಕೈಗೂಡಿಸಿರುತ್ತಾರೆ. ಎಲ್ಲರೂ ಪ್ರೋತ್ಸಾಹಿಸುವುದು ಧರ್ಮವಿದೆ.

ಭಾವನಾತ್ರಯಂ— ರಾಜಯೋಗ, ಕೋಕಶೋಕ, ಜೀವತತ್ವಗಳು ಅಡಕವಾಗಿರುವ ಪದ್ಯ ಪುಸ್ತಕ. ಬರೆದವರು, ಶ್ರೀ ಹನುಮಾನ್ ನೆಂಕಟರಾಯ ತಲಗಳು. ಇದರಲ್ಲಿರುವ ಹಿತೋಕ್ತಿಗಳ ಮಾದರಿಯೊಂದನ್ನು ಕೊಟ್ಟಿದೆ:—

ಫಲಸಿದ್ಧಿ ಕರ್ಮಂ-
ಫಲಮಿಶ್ರಿತಂ ದೇವೆಪ್ಪ ಕರ್ಮಂಧರೆಯೊಳ್
ಫಲಮಂ ಪೆರಕುಬಕ್ಕತಿಗ್ಯೆದನು
ಫಲಮುಂಬಾಕರ್ಮಮವನೆ ಪೂಜೆಗೆನಿಕುಂ

ಈ ಗ್ರಂಥವು ಪಂಡಿತರ ಮನೋರಂಜನೆಗಾಗಿ. ಸಾಮರರಿಂದ ತಿಳಿಯಕೊಳ್ಳಲು ಕಬ್ಬಿಣದ ಕಡಲೆ. ಬೆಲೆ ೬ ಆಣೆ.

ಜ್ಞಾನಾನ್ಮುಕ್ತ—ಬರೆದವರು ಹಂದಾಸ ಕುಕ್ಕಜೆ ವಕಪ್ಪ ಯಾನೆ ರಾಮಯ್ಯ ನ್ಯಾಕ್ಕ, ಪ್ರಥಮ ಭಾಗ. ಕಾರಣ, ಕರ್ಮ, ಜನ್ಮ, ಮಾಯೆ, ನಾಶ, ಕ್ಲೇಶ, ಭಾವ ಹೇತು ಎಂಬ ಶತ್ರುಗಳನ್ನು ಭಾಮಿನಿಷಟ್ಪದಿಯಲ್ಲಿ ಪ್ರಕಿಪಾದಿಸಿ ದೋಷಾತ್ಮತೆಯನ್ನೇ ಯಂಬ ಈ ಗ್ರಂಥವು ಮಾತ್ರೆ, ಭಾಷೆ, ಶೈಲಿಗಳಲ್ಲಿ ಶ್ರೀಯಶ್ಶರವಾಗಿದೆ. ಸರಳ ಭಾಷೆಯು ಗ್ರಂಥದ ಸೊಬಗನ್ನು ಹೆಚ್ಚಿಸಿದೆ. ಪ್ರಾತಿಕ ಗ್ರಂಥಗಳ ಸಾಲಿನಲ್ಲಿ ನ್ಯಾಕರ ಯತ್ನವು ಒಂದೆ ನಿಲ್ಲದು. ೫೫೫ ಪುಟಗಳವೆ. ಬೆಲೆ ರೂ. ೧—೮—೦.

ವಿನೋದ ಚಿತ್ರಗಳು—ಬೆಲೆ ಹತ್ತಾಣೆ. ಮಂಗಳೂರಿನ ಮಿತ್ರಮಂಡಳಿ ಯವರು ಪ್ರಕಟಿಸಿದುದು. ಶ್ರೀಗಳಾದ ಪಂಜೆ ಮಂಗೇಶರಾವ್, ಕಡೆಂಗೋಡ್ಲು ಶಂಕರ ಭಟ್, ಪಿ. ರಮಾನಂದರಾವ್, ಎಂ. ಎಸ್. ಕಾಮತ್ ಮೊದಲಾದ ನುರಿತ ಹಿರಿಯ ಬರೆಹಗಾರರೂ, ಪೇಜಾವರ ಸಧಾಶಿವರಾವ್, ಟಿ. ನಾರಾಯಣ ಭಟ್, ಕುದ್ರಿ ವಾಸು ದೇವ ಕಿಣ್ಣಿ ಮೊದಲಾದ ಕಿರಿಯರೂ ಕೂಡಿ ಚಿತ್ರಗಳನ್ನು ಚಿತ್ರಿಸಿದರು. "ಅಧ್ಯಕ್ಷೆ ಅ-ಮೆ," ಎಂಬ ಶಿರೋನಾಮೆಯಿಂದಲೇ ವಿನೋದ ಚಿತ್ರದಲ್ಲಿನ ವಿನೋದವು ಕಂಡು ಬರು ವುದು. ಭಾಷೆಯ ಮಾಧುರ್ಯವನ್ನೂ, ಸುಧಾರಿಯನ್ನೂ ಮಂಡಳಿಯವರೆ ಇನ್ನಿತರ ಗ್ರಂಥಗಳಂತೆ ಇದರಲ್ಲೂ ಕಾಣಬಹುದು. ಫ್ಲೈದುಗರನ್ನು ದೇಸರಗೊಳಿಸದ ಗ್ರಂಥ ವೊಂದು ಬೇಕೆಂದಾದರೆ ಇದನ್ನು ಕರಿಸಿಕೊಳ್ಳಲೇಬೇಕು.

ಸ್ವರಾಜ್ಯೋತ್ಸವ ಅಥವಾ ಶಿವಾಜಿ—ಬೆಲೆ ಹತ್ತಾಣೆ. ಬರೆದ ವರು ಶ್ರೀ ಎಂ. ರಾಘವೇಂದ್ರರಾವ್, ಶಿವಮೊಗ್ಗ. ವಿಷಾಸಿಕ ಕಾದಂಬರಿ. ಮೊಗಲ ರೆದುರು ಶಿವಾಜಿಯು ಹೇಗೆ ಸ್ವಾತಂತ್ರವನ್ನು ಗಳಿಸಿದನೆಂಬುದನ್ನು ಇವರಿಸುತ್ತದೆ. ಲೇಖಕರು ಮೊಗಲ ಸಮ್ರಾಟನಾದ ಔರಂಗಜೇಬನನ್ನು 'ಧೂರ್ತ'ನೆಂದು ಕರೆಯುತ್ತಿರು ವುದು ಸರಿಯಲ್ಲ. ಭಾಷೆಯಲ್ಲಿ ತೊಡಕುಗಳಿವೆ. ಮುದ್ರಿಸುವ ಮೊದಲು ಹೊಸ್ಕ ರೊಬ್ಬರ ಸಮಯನ್ನು ಬರೆಸಿ ತಿದ್ದಿಕೊಳ್ಳುತ್ತಿದ್ದರೆ ಗ್ರಂಥದ ರೂಪಕ್ಕೆ ಪುಟಕೊಟ್ಟಂತಾಗು ತ್ತಿತ್ತು. ಕಥಾ ಸಂವೇದನೆಯು ಹೃದಯವನ್ನು ಬ್ಬಿಸುವಂತಿದೆ.

ಅದೇನೆ ಇರಲಿ—ಬರೆದವರು ರಾ. ಭಿ. ಮನ್ನಿಕ್ಕಾರ. ಜಯಕರ್ನಾಟಕ ಗ್ರಂಥಮಾಲೆಯ ಹನ್ನೊಂದನೆಯ ಪುಷ್ಪ. ಬೆಲೆ ಏಂಟಾಣೆ. ಅವಿದ್ಧ ಜಾತಿಯ ನಾಟಕವಿದು. ಸ್ಥೂಲಮಾನದಿಂದ ನೋಡಲಾಗಿ ಇದರಲ್ಲಿನ ಕಥಾಭಾಗವು ವಿಷಾದಾಂತ ವಾಗಿದೆ. ಲೇಖಕರು ನಿಜಾಂ ಕರ್ನಾಟಕದವರು. ಆದರೂ ಭಾಷೆಯು ಎಲ್ಲರಿಗೂ ಮನನೀಯವಾಗುವಂತಹುದೆ. ಯತ್ನವು ಫಲಕಾರಿಯಾಗಲೆಂದು ಹಾರೈಕೆ. (ಮ. ಜಾ.)

ಸ್ವದೇಶಾಭಿಮಾನಿಗೆ ವಿನಿಮಯವಾಗಿ ಬರುತ್ತಿರುವ ಸಾಹಿತ್ಯ.

೧. ವಿಶ್ವಬಂಧು—ಮೈಸೂರು. ೨. ತಾಯಿನಾಡು—ಬೆಂಗಳೂರು. ೩. ಮೈಸೂರ್ ಸ್ಪಾರ್—ಮೈಸೂರು. ೪. ಅರ್ಥಸಾಧಕ ಪತ್ರಿಕೆ—ಬೆಂಗಳೂರು. ೫. ಲೋಕ ಸಮಾಚಾರ—ಬೆಂಗಳೂರು. ೬. ಜೇಸು ನಾಥರ ತಿರುಹೃದಯದ ದೂತ—ಮೈಸೂರು. ೭. ಸುಬೋಧ—ಬೆಂಗ ಳೂರು. ೮. ಕೆಲಾ—ಬೆಂಗಳೂರು. ೯. ರಂಗ್ಗಭೂಮಿ—ಬೆಂಗಳೂರು. ೧೦. ಅಧ್ಯಾತ್ಮ ಪ್ರಕಾಶ—ಬೆಂಗಳೂರು. ೧೧. ಪ್ರಬುದ್ಧ ಕರ್ನಾಟಕ—ಮೈಸೂರು. ೧೨. ಸತ್ಯವಾದಿ—ಮೈಸೂರು. ೧೩. ಜಯಕರ್ನಾ ಟಕ—ಧಾರವಾಡ. ೧೪. ಕನ್ನಡಿಗ—ಧಾರವಾಡ. ೧೫. ಅರುಣೋ ದಯ—ಬೆಳಗಾಂವಿ. ೧೬. ಸಂಯುಕ್ತ ಕರ್ನಾಟ—ಬೆಳಗಾಂವಿ. ೧೭. ಕರ್ನಾಟಕ ವೈಭವ—ವಿಜಾಪುರ. ೧೮. ಭಾರತಿ—ಮೂಲ್ಕಿ. ೧೯. ಕಲಾಚಂದ್ರ—ಕಾರ್ಕಳ. ೨೦. ತೊದಲ್ನುಡಿ—ಮುಂಬಾಯಿ. ೨೧. ಶ್ರೀ ಕೃಷ್ಣ ಸಂದೇಶ—ಉಡುಪಿ. ೨೨. ನವಯುಗ—ಮಂಗಳೂರು. ೨೩. ಧಾಪ್ಪಬಂಧು—ಮಂಗಳೂರು. ೨೪. ಕಂಠೀರವ—ಮಂಗಳೂರು. ೨೫. ಬಡವರ ಬಂಧು—ಮಂಗಳೂರು. ೨೬. ಸ್ವದೇಶೀ ಪ್ರಚಾರಕ—ಮಂಗಳೂರು. ೨೭. ಇಂಡಿಯನ್ ಮೆಗಜಿನ್—ಮಂಗಳೂರು. ೨೮. ಸಂಡೆ ನ್ಯೂಸ್—ಮಂಗಳೂರು.

ಶಾರದಾ ಭಾಷಾಖಾನೆ, ಮಂಗಳೂರು.

ಸ್ವದೇಶಾಭಿಮಾನಿ

ಸಾಹಿತ್ಯ ಸಂಚಿಕೆ.

ಸಂಪುಟ ೨ ಒಕ್ಟೋಬರ ೬—೧೦—೧೯೩೬. ಸಂಚಿಕೆ ೮

— ಅನುಕ್ರಮಣಿಕೆ —

	ಪುಟ
ಎರಡು ಬಗೆ	೫೭
ಪೂಜೆ	೫೭
ಕಾಣದ ತಾಣಕೆ	೫೮
ಕತೆಯ ಹುಟ್ಟು	೫೮
ಪ್ರತೀಕಾರ	೫೯
ಅಸ್ಪೃಶ್ಯತೆ-ಅಥವಾ ಪಶ್ಚಾತ್ತಾಪ	೬೦
ಜಳವಳನಂಜಿ ? ?	೬೨
ಪತ್ರಿಕಾ ಪ್ರಪಂಚ	೬೩
ಸ್ವೀಕಾರ ವಿಮರ್ಶೆ	೬೪

ಒಕ್ಟೋಬರ ತಾರೀಕು ೬ನೇ ಶುಕ್ರವಾರ ೧೯೩೬.

ಎರಡು ಬಗೆ!

ಮರುಗುವರು—ಬಡತನದ ಬಲೆಯಲ್ಲಿ ಸಿಕ್ಕಿಹರು.
ಸುರಿಸುವರು ಕಣ್ಣೀರು ಹಸಿವಿಂದ ಜನರು.
ಉಡಲಿಕ್ಕೆ ಉಡುಪಿಲ್ಲ; ಉಣಲಿಕ್ಕೆ ಉಣಿಸಿಲ್ಲ.
"ಕೂಡಿಕೊಡಿರಿ ಎಂದೊರೆದು ಬೇಡುತಿಹರೆಲ್ಲ.

ನಿಡುಸುಯ್ಲು ಬಿಡುತವರು ಬೆವರಿಳಿಸಿ ದುಡಿಯುವರು.
ನಡುಗುವರು ಧನಿಗಳಿಗೆ ಬಡಹೊಟ್ಟೆ ಹೊರಲು.
ಕಡುಕಷ್ಟ ಬಡುತಿಹರು—ಬದುಕು ತೊಡೆಯುವರು.
ದುಡಿದುದಿಡು ಬಲವಿಲ್ಲ ಸೊರಗಿಹರು ಅವರು.

೧

ಅಡಿಗಡಿಗೆ ಕಿನ್ನವರು—ಕುಡಿಯುವರು ಸಿರಿಜನರು.
ಮಡದಿ ಮಕ್ಕಳನಪ್ಪಿ ಸುಖದಿ ಜೀವಿಪರು.
ಬೆಂದಿರುವ—ಬಳಲಿರುವ—ಬಡಜನರ ಕಣಿಸುವರು.
ಕೊಂದಾದರೂ ಅವರ—ಇವರು ತಣಿಯುವರು.

ನೋವಿಂದ—ಹಸಿವಿಂದ—ಬಡಜನರು ಕೂಗುವರು.
ನೋವು—ಹಸಿವುಗಳಿಲ್ಲದಿರುವ ಸಿರಿಜನರು.
"ನಾವೇನ ಮಾಡಲಿದೆ ಬಡ ಜನಕೆ? ಸಕ್ತಿರಲಿ!
ಅವ ಉಪಕಾರವವರಿಂದ!"ಲೆನ್ನುವರು.

೨

ಸಿರಿತನವು—ಬಡತನವು. ನೀಡುವುದು—ಬೇಡುವುದು.
ಹಿಂ—ತಿರಿದು, ಇವುಗಳೆಲ್ಲಕೆ ಕರ್ತರಾರು?
ಸಿರಿತನವು ಸ್ಥಿರವಲ್ಲ ಬಡತನವು ಬಹುದಲ್ಲ.
ನರರಿದನು ತಿಳಿದೆಲ್ಲ ಮುಂದರಿಸಿ ಮೆಲ್ಲ.

ಕಂದಕ ಈಶ್ವರ, ಮಂಗಳೂರು.

ಪೂಜೆ!

ಪ್ರಾರ್ಥನೆ!! ಭಕ್ತಿ!!!
ಎನ್ನಯ ಭಕ್ತಿಯ ಬತ್ತಿ
ದೃಢತೆ ಜ್ವಲನಿಂ ಹುಟ್ಟಿ;
ನಿನ್ನ ಪಾದಕೆ ಆರತಿಯ ಬೆಳಗೆ ಎತ್ತಿ.
ಎಲ್ಲೆಲ್ಲಿಯೂ ಸುತ್ತಿ,
ದೇವ ನಿನ್ನನು ಮುತ್ತಿ;
ಬಂದಿಹೆನು ಕಾಪಾಡು ಎನ್ನ ನೀತಿತಿ.
ಧರ್ಮವೀರನು ನೀನು,
ಕರ್ಮಹೀನನು ನಾನು;
ನೈದಾವರಾಧಗಳ ಕ್ಷಮಿಸೆಲ್ಲೆ ದೇವಾ!
ಮಂತ್ರಹೀನನು ನಾನು,
ಸ್ವತಂತ್ರಯುಕ್ತನು ನೀನು;
ಮರೆ ಹೊಕ್ಕೆ ನಿನ್ನ ನೀ ಸಲಹೆಲ್ಲೆ ಶಾವಾ
ನಿನ್ನವರು ನನಗಿಲ್ಲ,
ವೆಂಬ ಯೆನ್ನಯ ಸೊಲ್ಲ;
ನಾಲಿಸುತ ರಕ್ಷಿಸೆ ಸರ್ವ ಬಲ್ಲ!
ಪೂಜೆ ಪ್ರಾರ್ಥನೆಗಳಿವು,
ಭೀನು ಭಕ್ತಿಯ ಸುಳಿವು;
ಎನಗೆ ಅಕ್ಷಯ ಭಕ್ತಿ ಪಡೆದೆ ಗೆಲವುಳ್ಳ!

ಕಾಪು ಮಂಜುನಾಥ ಶೆಟ್ಟಿ.

ರಾಣ್ಣದ ತಾಣಕೆ

(೧)

ಬಾನೊಳು ಸೂಡುವ ಚಂದಿರನ
ಬಯಸುವ ಜನರಿಹರೆ?
ಬಾನನ ಚಂದ್ರನು ಅಂಗಳ ಕೈಕರೆ
ಬಯಸುವ ಜನರಿಹರೆ?
ಚಂದ್ರನ ಜೆಲುವಿದೆ ದೂರದ್ದೊಳು ।
ಮಂದಿಯ ಬುದ್ಧಿಯ ತೀರದೊಳು ।

(೨)

ದೂರದ ನಲ್ಲಿಯ ಸವಿಮಾತು
ಸುಗ್ಗಿಯ ಸವಿ ಸೊಬಗು
ತೋರುವ ತರಳೆಯ ನುಸ್ನೊರಲು
ಬಗ್ಗಿದ ಬರಿ ಬೆಡಗು
ನಲ್ಲೆಯ ಸೊಲಿಗದೆ ದೂರದ್ದೊಳು
ಮೆಲ್ಲದೆ ಸವಿಯುದೆ ಒರೆಯೊಳು

(೩)

ತೋರದೆ ತೋರುವ ತಾರೆಗಳು
ಮೆಚ್ಚಿನ ಮೇರೆಗಳು
ಕಾಣದ ತಾಣವೆ ಸೆಳೆಹರು
ನಚ್ಚಿನ ಅರಸುಗಳು
ದೂರದ ಮೇರೆಯ ಮೀರಿಹರು ।
ತೀರದ ಕೀರ್ತಿಯ ಗಳಿಸುವರು ॥

"ರಾಘವ" ಮಿತ್ರಮಂಡಲಿ, ಮಂಗಳೂರು.

ಕತೆಯ ಹುಬ್ಬು.

ಒಮ್ಮೆ ಮಧ್ಯಾಹ್ನ ಹನ್ನೊಂದು ಗಂಟೆಯ ಸಮಯ. ನಾನು ಮನೆಯಲ್ಲಿ ಸುಮ್ಮನೆ ಕುಳಿತುಕೊಂಡಿರುವಾಗ ಒಂದು ಕತೆ ಬರೆಯಬೇಕೆನಿಸಿತು. ಕೂಡಲೇ ದೊಡ್ಡ ಕತೆಗಾರನೆಂದು ನನಗೆ ಹೆಮ್ಮೆಯಾಯಿತು. ಕಾಗದಗಳನ್ನು ಹುಡುಕಲೆಂದು ಮನೆಯ ಕೋಣೆಯೊಳಗೆ ಹೋದೆ. ಒಂದು ಬದಿಯಲ್ಲಿ ಒಂದು ಕವಾಟು ಇತ್ತು. ಬಾಗಿಲು ತೆರೆದು ನೋಡಿದೆ. ಒಂದು ಕಟ್ಟು ಕಣ್ಣಿಗೆ ಬಿತ್ತು. ಬಿಡಿಸಿ ನೋಡುವಾಗ ನಾನು ಸಣ್ಣವನಾಗಿರುವಾಗ ಉಪಯೋಗಿಸಿದ ಪುಸ್ತಕಗಳೇ ಕಣ್ಣಿಗೆ ಬಿದ್ದುವು. ಕತೆಗೆ ಒಂದು ಪುಸ್ತಕವನ್ನು ಕೈಯಲ್ಲೆತ್ತಿಕೊಂಡು ಎಮ್ಮೆಯಿದೆ, ಪಟವನ್ನು ಮಗುಚಲಾರಂಭಿಸಿದೆ. ನಾನು ಎತ್ತಿಹಿಡಿದ ಪುಸ್ತಕ ಪ್ರಬಂಧ ಪುಸ್ತಕವಾಗಿತ್ತು. ಕೆಲವು ಪ್ರಬಂಧಗಳನ್ನು ಓದಿಯೂ ಮುಗಿಸಿದ್ದೆನು. ಆದರೆ ಯಾವ ತರದ್ದಕ್ಕೆ ಕೈಹಚ್ಚಬೇಕೆಂಬುದು ನನಗೆ ಹಿಂಡುಗಾಡದಾಯಿತು. ಕೀಡಾ ಪಿಚ್ಚೆರಡರಷ್ಟು ಮಾರ್ಕು ಸಿಕ್ಕಿರುತ್ತಿದ್ದ. ಈಗ ನಾನೊಬ್ಬ ಉಪಾಧ್ಯಾಯ. ನನ್ನ ವಿದ್ಯಾರ್ಥಿಗಳೂ ಹೀಗೆಯೇ ಪ್ರಬಂಧದಲ್ಲಿ ಹಿಂದುಳಿಯಬಾರದು. ಅವರು ವರ್ಗಕ್ಕೆಯಲ್ಲಿ ತೇರ್ಗಡೆಯಾಗುವಂತೆ ಹುಶಾರು ಮಾಡಿ ನಾನು ಒಂದು ಹೆಸರನ್ನು ಪಡೆಯಬೇಕು'' ಹೀಗೆ ಯೋಚಿಸಿ ಮನಸ್ಸಿನಲ್ಲಿ ನನ್ನನ್ನೇ ಹೊಗಳಿಕೊಂಡೆನು. ಹಾ! ನೆನಪಾಯಿತು. ನನ್ನ ಕತೆಯು ಆತ್ಮಶ್ಲಾಘನೆಯಲ್ಲಿಯೇ ವರ್ಯವಸಾನವಾಯಿತು. ಕೂಡಲೆ ನನ್ನ ಕೈಯಲ್ಲಿದ್ದ ಪುಸ್ತಕವನ್ನು ಕಳಗರಿಸಿ, ಏನನ್ನೋ ಬರೆದು ಸ್ವಲ್ಪ ಜಾಗವು ಖಾಲಿಯಾಗಿರುವ ಎರಡು ನೋಟ್ಸುಬೂಕುಗಳನ್ನು ತೆಗೆದು ಕೊಂಡೆ. ಒಡನೆಯೇ 'ಪೇನಾ'ಗೆ ಕೈ ಹಾಕಿ ಹೊರಟೆ.

ನಮ್ಮ ಮನೆಯನ್ನು ಮೂಡುದಿಕ್ಕಿಗೆ ಮೋರೆ ಮಾಡಿ ಕಟ್ಟಿರುತ್ತಾರೆ. ಎಡಗಡೆಯಲ್ಲಿ ಪ್ರತ್ಯೇಕವಾದ ಒಂದು ಸಣ್ಣ ಕಟ್ಟೋಣವಿತ್ತು. ಅದರ ವೇದಿಕೆಗೆ ಹೋಗುವುದೆಂದು ಹೊರಟೆ. ಆ ನೆಲವು ಜೀನ್ಯಾಗಿರಲಿಲ್ಲ. "ನಾನು ನಿನ್ನೆ ತಾನೆ ಬಟ್ಟೆಯನ್ನು ಒಗದಿದ್ದೆ. ಈಗಲೂ ಕೊಳೆಯಾಗಿಲ್ಲ. ಆ ಹಾಳು ನೆಲದಲ್ಲಿ ಕುಳಿತುಕೊಂಡರೆ ನಸ್ತ್ರಕ್ಕೆ ಮಣ್ಣು ಹಿಡಿದು ಹೋದೀತೆ"ಂದು ನೆನಸಿ, ಮುಂದುವರಿಸಿದ ನಡಕೆಯನ್ನು ನಿಲ್ಲಿಸಿದೆ. ಇನ್ನೊಂದು ಸ್ಥಳಕ್ಕೆ ಹೋಗುವುದೆಂದು ದೃಢ ಮಾಡಿ ಮನೆಯ ಕೆಂಕು ದಿಕ್ಕಿನಲ್ಲಿ ಒಂದು ಹರಕು ಜಾಪೆಯನ್ನು ಹಾಸಿ ಕುಳಿತುಕೊಂಡೆ. ಒಂದೊಂದಾಗಿ ಅಲೋಚನಾತರಂಗವೇ ನನ್ನ ಕಲೆಯ ಸುತ್ತಲೂ ಸುತ್ತಿಕೊಂಡಿತು.

ಕತೆಗೆ ಯಾವ ವಸ್ತುವನ್ನು ಆರಿಸಲಿ. ಚರಿತ್ರಾತ್ಮಕ ನಿಷೆಯ ವನ್ನೆತ್ತಿ ಬಡಿಯಲೆಂದರೆ ನಾನು ಯಾವ ಚರಿತ್ರೆಯನ್ನೂ ಕಿಂಡವನಲ್ಲ. ಒಂದಿಪ್ಪು ಸಂಸ್ಕೃತವನ್ನು ಕಲಿತ ಗೊದ್ದುವಂಡಿತನಿಗೆ ಚರಿತ್ರೆಯ ವಾಸನೆಯಾದರೂ ಎಲ್ಲಿಂದ ಬರಬೇಕು.

ಪತ್ತೇದಾರಿ ಕಾದಂಬರಿಯನ್ನು ಬರೆಯಲೋ ಎಂದರೆ, ಅದಕ್ಕೆ ಯೋಗ್ಯನಾದ 'ಡಿಟೆಕ್ಟಿವ್'ನ್ನು ಎಲ್ಲಿಂದ ತಂದುಬಿಡಲಿ. ಒಂದುವೇಳೆ ಯಾವ ಕಾದಂಬರಿಕಾರರಿಗೂ ಸಿಕ್ಕದ ಪತ್ತೇದಾರಿಯು ನನಗೆ ಸಿಕ್ಕರೆ ಅವನಿಗೆ ಯಾವ ಹೆಸರನ್ನು ಇಡುವುದು. ಹೆಸರಿನಿಂದಲೇ ಸುಪ್ರಸಿದ್ಧ ಪತ್ತೇದಾರಿಯೆಂದು ತಿಳಿಯಬೇಕು. ಹೆಸರಿನಿಂದಲೇ ಕಳ್ಳರು ಹೆದರಿ ಕೈಗೆ ಬರಬೇಕು. ಅಂಥಾ ಹೆಸರು ದೊರಕುವುದಿಲ್ಲ. ಈ ಕತೆಯನ್ನು ಬರೆಯುವ ಗೊಡವೆಯೇ ಬೇಡ.

ಈಗ ಎಷ್ಟೊ ಜನರು ಕತೆ, ಕವಿತೆಗಳನ್ನು ಬರೆದು, ಪತ್ರಿಕೆಗಳಲ್ಲಿ ತಮ್ಮ ತಮ್ಮ ಹೆಸರನ್ನಾಗಲೀ ಕತೆಗಾರ, ಚಕ್ರಪಾಣಿ ಶಾಂತಿನಾಥ ಮೊದಲಾದ ಅಂಕಿತಗಳನ್ನಾಗಲೀ ಕಂಡು ಸಂತುಷ್ಟರಾಗುವರು. ನಾನು ಕವಿತೆಯನ್ನೇ ಬರೆಯುವೆನು. ನಾಲ್ಕು ಪಾದಗಳಾದರೆ ಒಂದು ಪದ್ಯವಾಯಿತು. ಇಂತ ಹತ್ತಿಪ್ಪತ್ತು ಪಾದಗಳಿಂದಲೇ ಕೆಲವು ಪದ್ಯಗಳಾಗಬಹುದು. ಕತೆಯನ್ನು ಬರೆಯುವಷ್ಟು ಪೇಜಾಟವು ಕವಿತೆಗಳನ್ನು ಬರೆಯುವುದರಲ್ಲಿರುವುದಿಲ್ಲ. ಓಹೋ! ನಾನು ಆಲೋಚನೆ ಮಾಡಿದ್ದು ಹಳೆಯ ನಮೂನೆಯ ಕವಿತೆಗಳನ್ನು; ಈಗಿನ ರಸಿಕರು ಅಂಥವುಗಳನ್ನು ಮೆಚ್ಚುವುದೇ ಇಲ್ಲ. ನಾನು ವ್ಯಕಟಿಸಬೇಕೆಂದು ನೆನಸಿದ ಪತ್ರಿಕೆಯು ಸಂಪಾದಕರೂ ಹೊಸ ದಾರಿಯವರಾದರೆ ನನ್ನ ಕವಿತೆಯನ್ನು ಕಣ್ಣೆತ್ತಿ ಸಹಾ ನೋಡಲಿಕ್ಕಿಲ್ಲ. ಆದ್ದರಿಂದ ಹೊಸ ರೀತಿಯ ಪದ್ಯಗಳನ್ನೇ ಬರೆಯುವೆನು. ಯಾವ ತರದ್ದಕ್ಕೆ ಕೈಹಚ್ಚ ಸ್ಥಿರ ಪ್ರವಾಹವಾಗಿ ವರಿಣಮಿಸಿ ವಿರಕ್ತಿಯ ವೈರಾಗ್ಯದ ಕಡೆಗೆ ಹಾದು ಹೋಗಲು ಹಾತೊರೆಯುವುದು; ವರಿಣಾಮದಲ್ಲಿ ವಿರಕ್ತಿಯ ನಿವೃತ್ತಿಯನ್ನೇ ಹುಡುಕಿಕೊಂಡು ಅಚಲವಾಗಿ ನೆಲೆಗೊಂಡ ಮೇಲೆ ಸಾಮಾನ್ಯವಾಗಿ ವ್ಯಾವಹಾರಿಕ ಜಗತ್ತಿನ ಕಡೆಗೆ ಅದರ ದೃಷ್ಟಿಕೋನವಿರದು. ಹೀಗೆಂದ ಮಾತ್ರಕ್ಕೆನೇ ಶಾಂತಿಯು ಚಿಲವಳಿದಿಂದ ಛಿನ್ನವೆಂದ ಹಾಗಾಯಿತು.

ಹೀಗೆ ನಾವು ಹೇಳಹೋಗುವುದರಿಂದ ಏನನ್ನೂ ಹೇಳಿದ ಹಾಗಾಗಲಿಲ್ಲವೆಂದು ನೀವು ತಿಳಿಯಬಹುದು; ಆದರೆ ಇದು ಅರ್ಥವಿಲ್ಲದ ಅನರ್ಥ ವಚನವಲ್ಲ; ಸತ್ಯಾರ್ಥ ಪ್ರಕಾಶವು ಸಮಾಧಿಯ ಸ್ಥಿರ ಬುದ್ಧಿಯಲ್ಲಿ ಹೊಳೆಹೊಡನೆಯೇ ನಿಜವಾದ ಚಿಲವಳಿ ಶಬ್ದದ ಅರ್ಥವು ಕಾರ್ಯರೂಪೀ ಮಾನುಷಕತೆಯಲ್ಲಿ ಗಮುಕವಾಗುವುದು. ಹಾಗೂ ಸಂಕುಚಿತ ರೀತಿಯಲ್ಲಿ ವಿವರಿಸುವುದಿದ್ದರೆ, ಕ್ರಾಂತಿಮೂಲಕ ವಾಗಿ ಹುಡುಕುವ ಶಾಂತಿಯು ಚಿಲವಳಿವಲ್ಲ; ಶಾಂತಿ ಮೂಲಕವಾದ ಕ್ರಾಂತಿಯೇ ಚಿಲವಳಿದ ಧ್ಯೇಯವು. ಶಾಂತಿಯ ಲೋಕಾತೀತನೀರ ಸವಾಗಲಿ, ಕ್ರಾಂತಿಯ ಪ್ರಕ್ಷುಬ್ಧ ಯಾಂತ್ರಿಕತೆಯ ಮಾಟವಾಗಲಿ—ಚಿಲವಳಿವಿನ್ನಲಾಗುವುದಿಲ್ಲ; "ವಿಶಾಲವಾದ ಜಗತ್ತಿನ ವಿಶೇಷವಾದ ಮಾಹಿತಿಯ ಪರಿಸ್ಥಿತಿಯನ್ನೂ ಮನನ ಮಾಡಿ—ಅದನ್ನೂ ಶಾಂತಿಯ ವಿಚಾರದ ತಳಹದಿಯ ಮೇಲೆ ಕಟ್ಟಿಲುದ್ಯೋಗಿಸುವ; ಮಾನವೀಯ ತೆಯ ಸಹಜವಾದ ಕ್ರಾಂತಿಯೇ ಚಿಲವಳಿ"ವೆಂದು ಹೇಳಿ, ಬಯಸುವೆವು.

"ದುರ್ಗಾದಾಸ"

ಪತ್ರಿಕಾ ಪ್ರಪಂಚ.

ಪ್ರಬುದ್ಧ ಕರ್ಣಾಟಕದ ಈ ಸಲದ ವಿನಾಯಕನ ಸಂಚಿಕೆಯಲ್ಲಿ ತೀ. ನಂ. ಶ್ರೀ ಕಂಠಯ್ಯನವರು 'ಕಾಳಿದಾಸನ ನಾಟಕಗಳಲ್ಲಿ ದುರಂತ ವಸ್ತುವಿನ್ಯಾಸ'ದ ಕುರಿತು ಸವಿಸ್ತಾರವಾದ ಲೇಖನವನ್ನು ಬರೆದಿರುವರು. ಇದರಲ್ಲಿ ನಮ್ಮ ದೇಶದಲ್ಲಿ ದುರಂತ ನಾಟಕದ ಈ ಅತ್ಯಂತಾ ಭಾವಕ್ಕೆ ಏನು ಕಾರಣವೆಂಬುದನ್ನು ಚರ್ಚಿಸಿ, ಕಾಳಿದಾಸನ ಪ್ರಥಮ ನಾಟಕವು 'ಮೂಲವಿಕಾಗ್ನಿಮಿತ್ರ'ವೆಂಬುದನ್ನು ಸಾಧಾರವಾಗಿ ಸೂಚಿಸಿರುವರು. ಕಾಳಿದಾಸನ 'ಅಭಿಜ್ಞಾನ ಶಾಕುಂತಲ'ದಲ್ಲಿ ಶೃಂಗಾರ ರಸವೇ ಪ್ರಧಾನರಸವೆಂದೂ, ಈ ಶಾಕುಂತಲಾ ನಾಟಕಕ್ಕೆ ಮಹಾ ಭಾರತದ ಶಾಕುಂತಲೋಪಾಖ್ಯಾನವೇ ಮೂಲವೆಂದು ಕೆಲವರೂ, ಪ್ರೊ. ಎಚ್ ಶರ್ಮಾ ಎಂಬವರು ಬಂಗಾಳದಲ್ಲಿ ಪ್ರಚುರವಿರುವ ಪದ್ಮ ಪುರಾಣದ ಮಾತ್ರಕಗಳಲ್ಲಿ ಶಾಕುಂತಲೋಪಾಖ್ಯಾನದ್ದು ಬೇರೊಂದು ಪಾಠವೇ ಮೂಲವಾಗಿ ಪರಿಷ್ಕರಿಸಿದ್ದರೆಂದೂ, ಪರಂತು ಪ್ರೊ. ಎಚ್. ಶರ್ಮರು ಸೂಚಿಸುವ ಸಾಮ್ಯವೇ ಸರಿಯಾಗಿರಬಹುದೆಂದೂ ಉಲ್ಲೇಖಿಸಿರುವರು. ಕಾಳಿದಾಸನಿಗೆ ದುರಂತ ದೃಷ್ಟಿಯೇ ಇರಲಿಲ್ಲವೆಂದು ಲೇಖಕರು ನಿಷ್ಪಕ್ಷಪಾತವಾಗಿ ಸಮಾಲೋಚಿಸಿರುವರು. ಊರ್ವಶೀ ಪುರೂರವರ ಪ್ರಣಯ ಪ್ರಸಂಗವು ಋಗ್ವೇದದಲ್ಲಿಯೂ, ಶತಪಥ ಬ್ರಾಹ್ಮಣದಲ್ಲಿಯೂ, ಪದ್ಮ ಪುರಾಣ (ಅನಂದಾಶ್ರಮದ ಪರಿಷ್ಕರಣ—ಸೃಷ್ಟಿಖಂಡ. ೧೭)ದಲ್ಲಿಯೂ, ಮತ್ಸ್ಯಪುರಾಣದಲ್ಲಿಯೂ ಭಿನ್ನರೀತ್ಯದಿಂದಿರುವರೆಂದಿರುವರು. ಇವುಗಳಲ್ಲಿ ಋಗ್ವೇದದಿಂದ ಶತಪಥ ಬ್ರಾಹ್ಮಣಕ್ಕೆ ಕತೆಯು ಮೂಲಸೂತ್ರವು ಕೊಂಚ ಕೊಂಚ ಬದಲಾಯಿಸುತ್ತಾ ಹೋಗಿದೆಯೆಂದೂ, ಕಾಳಿದಾಸನ ವಿಕ್ರಮೋರ್ವಶೀಯವು ಅದರ ವಸ್ತುವಿನಿಟನೆಗೂ, ತಕ್ಷಶಿಸ್ಥಿತಿಗೂ ಒಳಗಾಗಿ, ಈಗ ರಚಿತವಾಗಿರುವ ರೀತಿಯಲ್ಲೇ ಅದರ ಪರ್ಯವಸಾನವು ಅಸಮಂಜಸವಾಗಿದೆಯೆಂದೂ ವ್ಯಸ್ತಾಪಿಸಿರುವರು. ಸಂಸ್ಕೃತ ನಾಟಕಗಳಲ್ಲಿ ದುರಂತ ದೃಷ್ಟಿವೈಶಾಲ್ಯವು ತಪ್ಪಿಹೋಗಿದೆಯೆಂದೂ, ಇದು ವರೆಗೆ ದೊರೆತಿರುವ ನಾಟಕಗಳಲ್ಲಿ ಭಾಸನ 'ಊರುಭಂಗ'ವೇ ದುರಂತ ನಾಟಕವೆಂಬ ಹೆಸರಿಗೆ ಅರ್ಹವೆಂಬುದೆನ್ನು ಸೂಚಿಸಿರುವರು. ಈ ಎಲ್ಲಾ ವಿಷಯಗಳಿಂದ ಕಾಳಿದಾಸನ ಗ್ರಂಥಗಳ ವಿಮರ್ಶೆಯಾಗಿದೆಯೆಂದರೂ ಎನ್ನಬಹುದು.

ಇದೇ ಸಂಚಿಕೆಯಲ್ಲಿ ಖ್ಯಾತ್ಯ ಧರ್ಮ ಪ್ರಚಾರಕರಲ್ಲಿ ಪ್ರಸಿದ್ಧರಾದ ಬೋಧಿ ಧರ್ಮನು ಚೀನಾ ದೊರೆಯಾದ ಪರದೇಶಗಳಿಗೆ ಪ್ರಯಾಣ ಮಾಡಿ ಅಲ್ಲಿಯ ರಾಜ ಮನೆತನದವರನ್ನೂ, ಇತರರನ್ನು ಬೌದ್ಧ ಮತಕ್ಕೆ ಸೇರಿಸಿಕೊಂಡುದನ್ನು, ಅಲ್ಲಿ ಅವನು ಸ್ಥಾಪಿತ ಪ್ರಚಲಿತವಿದ್ದು ಮಹತ್ಪಕ್ಷಿಕೆಯನ್ನೂ ನಾ. ಕಸ್ತೂರಿಯವರು ಅರ್ಥಪೂರ್ಣವಾಗಿಯೂ, ಭಾವಗರ್ಭಿತವಾಗಿಯೂ ಬರೆದಿರುವರು. ಬೋಧಿ ಧರ್ಮನು ದಕ್ಷಿಣ ಭಾರತದ ದಕ್ಷಿಣ ಸಮುದ್ರ ತೀರದ ಒರೆದು ಬ್ರಾಹ್ಮಣ ರಾಜ ಮನೆತನದವನೆಂದು ಚೀನದ ಊಟೆ ಚಕ್ರವರ್ತಿಯು ತಿಳಿದು ಖಚಿತಮಾಡಿರುವನೆಂದೂ, ಆ ಕಾಲದಲ್ಲಿ ಅಂದರೆ ಕ್ರಿ. ಶ. ೫೦೦ರ ಸುಮಾನಿನಲ್ಲಿ ದಕ್ಷಿಣಾಪಥದ ರಾಜ ವಂಶದಲ್ಲಿ ಬ್ರಾಹ್ಮಣರು ಅತಿ ವಿರಳವೆಂದೂ, ಬಹುಶಃ ವನವಾಸಿಯ ಕದಂಬರು ಮಾತ್ರ ಬ್ರಾಹ್ಮಣರಾಗಿದ್ದರೆಂದೂ, ಆದುದರಿಂದ ಬೋಧಿ ಧರ್ಮನು ಕದಂಬವಂಶಜಾತನಾಗಿ ಕನ್ನಡಿಗ ನಾಗಿದ್ದಿರಬಹುದೆಂದೂ ಊಹಿಸಿರುವರು.

ಇದೇ ಸಂಚಿಕೆಯಲ್ಲಿ ಎ. ಆರ್. ಕೃ. ಮತ್ತು ಬಿ. ವೆಂ. ಎಂಬವರು ವರಭಣಿಯ ಕಾವ್ಯಶಾಸನ 'ಮತ್ತು ವಂಪಭಾರತದ ಕುರಿತು ಒಂದು ವಾಚ್ಯನೀಯ ಲೇಖನವನ್ನು ಬರೆದಿರುವರು. ಮುಲ್ಲಿಯಿಂದ ಹೊರಡುವ ಭಾರತಿಯ ಅಗೋಸ್ತು ಕಿಂಗಳ ಸಂಚಿಕೆಯಲ್ಲಿ ವರಭಣಿಯ ತಾಮ್ರವಟ್ಟವನ್ನು ಎತ್ತಿ ಶ್ರೀಮಾನ್ ಮಂಜೇಶ್ವರ ಗೋವಿಂದ ಪೈಗಳು ವಂಪನ ದೇಶಕಾಲಗಳ ವಿಚಾರವೆಂಬ ಸಶಿಷ್ಟವಾದ ವಿಮರ್ಶಾಪೂರಿತ ವೊದ ಮನನೀಯ ಲೇಖನವನ್ನು ಬರೆದಿರುವರು. ವಂಪನು ಜಾಳುಕ್ಯವಂಶೋತ್ಪನ್ನನಾದ ಎರಡನೇ ಅರಿಕೇಸರಿಯ ಕಾಲದವನೆಂದು ಕೋರಿ ಬರುತ್ತದೆ. ಈ ಲೇಖನಗಳಿಂದ ವಂಪನ ದೇಶಕಾಲ ವಿಚಾರಗಳನ್ನು ತಿಳಿಯಬಹುದಾಗುತ್ತದೆ.

ಕಾ. ವಾ. ಕೆ.

ಸ್ವೀಕಾರ ವಿಮರ್ಶೆ.

(ಸ್ವದೇಶಾಭಿಮಾನಿಗೆ ಕೆಲವು ಸಮಯದಿಂದ ವಿಮರ್ಶೆಗಾಗಿ ಬರುತ್ತಿರುವ ಸಾಹಿತ್ಯ ಗಳ ಸ್ವೀಕಾರವನ್ನು ಹಾಕುವಷ್ಟು ಅವಸರವಾಗಿರುವುದು. ಈ ಸಾಹಿತ್ಯ ಸಂಚಿಕೆಯಲ್ಲಿ ಕೆಲವುಗಳನ್ನು ಆಯ್ಕೆಮಾಡಿ ಸ್ವೀಕರಿಸಿರುವೆವು. ಮುಂದೆ ಬರುವ ಗ್ರಂಥಗಳ ಸವಿವರ ವಿಮರ್ಶೆಯನ್ನು ಕೊಡಬೇಕೆಂದಿದೆ.)

ಮೂಲಕ, ಅಸ್ಪೃಶ್ಯತೋದ್ಧಾರದಿಂದ ಸರ್ವ ಜನರ, ಹಾಗೂ, ರಾಷ್ಟ್ರದ ಉನ್ನತಿಯ ಬಲಗೊಳ್ಳುತ್ತದೆಂದು ಜನರಲ್ಲಿ ದೃಢ ಪಡಿಸಿದನು. ಸಾವಿರಾರು ಹರಿಜನರನ್ನು ಉದ್ಧಾರಗೈದನು. ಸರ್ವ ಜನರ ವಿಶ್ವಾಸಕ್ಕೆ ಪಾತ್ರನಾದನು. ಸಜ್ಜನರು ದೊಡ್ಡವರು ಪಂಡಿತರು ಪಾಮರರು, ಎಲ್ಲರೂ ಬಲವಂತರಾಯನನ್ನು ಭಕ್ತಿಯಿಂದ ಸ್ತೀಕರಿಸ ಹತ್ತಿದರು.

ಇಂದಿಗೆ ಅಸ್ಪೃಶ್ಯತೆ ಎಂಬ ಪ್ರಬಲವಾದ ನುಡಿಯು ಬಲಹೀನವಾಗುತ್ತಾ, ದಿನದಿಂದ ದಿನಕ್ಕೆ ಕ್ಷೀಣಿಸಹತ್ತಿತು. ಈ ಹೊಸ ಚಳವಳಿಯು ನಮ್ಮ ಗೋವಿಂದ ರಾಯನಿಗೆ ತಿಳಿಯದೇ, ಇಲ್ಲ.

"ದೀನ ದಯಾಳುವಾದ ಪರಮಾತ್ಮನೇ, ನನ್ನನ್ನು ಕ್ಷಮಿಸು. ಅಂತ್ಯಜರಲ್ಲಿ ಅಕ್ಯಂತ ಅಂತ್ಯಜನು ನಾನು. ಬಡ ಪ್ರಾಣಿಗಳಾದ ಹೊಲೆಯರ ಉದ್ಧಾರಕ್ಕೆ ಹೊರಟ ನನ್ನ ಸುಪುತ್ರನನ್ನು ಕಳಕೊಂಡೆನು. ನಾಥ ಹತ ಭಾಗ್ಯನು. ಅವನು ದೀನ ದಯಾಳುವಾದ ನಿನ್ನ ಪ್ರೀತಿಯ ಶಿಷ್ಯನು. ಅವನೆ ಅನುಪಮ ಶಕ್ತಿ, ಅಸಾಯ ಶೂರತೆಯನ್ನು ಕೇಳಿದರೆ ಎಂಥಾ ಧೀರನಾದರೂ, ಅಧೀರನಾಗುವನು. ಇಲ್ಲವೇ ಹೇಡಿಯಾದರೂ, ವಿಷಮ ಪರಾಕ್ರಮಿಯಾಗುವನು. ಇದು ಅವನ ವಾಗ್ಶುಖ ಪ್ರಭಾವವು. ಅವನ ಮನಧನವು ಬಹು ವಿಶಾಲವಾದುದು. ಧರ್ಮ! ಧರ್ಮ!!ವೆಂದು ಹೇಳುತ್ತಿದ್ದ ಶಾಸ್ತ್ರಿಯರೇ ಅವನ ಕೈದೀಪಿಗಳಂತಿರುವರು ಎಂದ ಮೇಲೆ ನನ್ನಂತಹವರ ಪಾಡೇನು? ದೊಡ್ಡ ದೊಡ್ಡ ಹುದ್ದೆಗಳೆಲ್ಲವೂ, ದೂರದಲ್ಲಿ ನಿಲ್ಲುತ್ತಿದ್ದ ಅಸ್ಪೃಶ್ಯ ನೆಂದೇ, ಇವನು ದಾರಿವಿರಿದನು. ಯಾರೊಡನೆ ಮಾತಾಡಿದರೆ ಅಶುದ್ಧ ವಾಗುವುತ್ತೋ ಅಂತಹವರಿಗೆಗ ಸಾಷ್ಟಾಂಗವೆರಗುವ ಕಾಲ ಬಂತು. ದೇವಾ! ಇದು ನಿನ್ನ ವಿಚಿತ್ರವಲ್ಲವೇ?" ಎಂದು ಗೋವಿಂದರಾಯ ನಿಂದು ದುಃಖಿಸ ಹತ್ತಿದನು.

ಕನ್ನ ಧರ್ಮದ ಸೆರಗಿನಲ್ಲಿ, ಪಾಪದ ಗಂಟಿದೆ ಎಂದು ಗೋವಿಂದ ರಾಯನಿಗೀಂದು ತಿಳಿಯುತು. ಈಗ ಇವನಿಗೆ ಹೊಟ್ಟೆಯಲ್ಲೂ ಕಪ್ಪ ವಾಗಿದೆ. ಪಿತ್ರಾರ್ಜಿತವಿದ್ದುದನ್ನೆಲ್ಲಾ ಧರ್ಮದ ದೇವತೆಗೆ ಬಲಿಯಿತ್ತನು. ಕಾನಾಗಿ ಮಾಡಿದುದು ಕ್ಷುದ್ಭಾಚಾರ ಮಾತ್ರವೇ! ಇಂದು 'ಅಸ್ಪೃಶ್ಯತೆ' ಎಂಬ ಹಗ್ಗವನ್ನು ಕಡಿದನು. ನಂದು ಅಗಲಿದ ಮಗನು ಬಳಿಗೆ ಇಂದು ನಡೆದನು.

"ಮಗನೇ! ನನ್ನ—ನ್ನು—ಕ್ಷ—ಮಿ—ಸು—" ಎಂದು ಬಲವಂತ ರಾಯನ ಕಾಲಿಗೆ ಬಿದ್ದು ಗಳಗಳನೆ ದುಃಖಿಸಲಾರಂಭಿಸಿದನು. ಇದನ್ನು ಕಂಡು, ಬಲವಂತ ರಾಯನ ಹೃದಯ ಸಮುದ್ರವು ದುಃಖದ ಅಲೆಗಳನ್ನು ತಡೆಯಲಾರದೆ ಹೊರ ಸೂಸಿದುವು.

"ಅಪ್ಪಾ! ನಿಮ್ಮನ್ನು ಸಂಪೂರ್ಣವಾಗಿ ಪರಮಾತ್ಮನು ಕ್ಷಮಿಸಲಿ! ಜ್ಞಾನಶೂನ್ಯರಾದ ಪ್ರಾಣಿಗಳನ್ನು ದೂರಕ್ಕೆ ಒಗೆಯುತಿದ್ದುದರಿಂದ ನೂಡಿ ಬಂದ ಪಾಪವು ನಿಮ್ಮಲ್ಲಿ ಪ್ರತ್ಯಕ್ಷವಾಗಿ, ಹೀಗೆ ಮಾಡಿತು. ಇಂದಿನಿಂದ ಅಸ್ಪೃಶ್ಯತೆಗೆ ಪವಿತ್ರತೆ ಬರುವಂತೆ ಪರಮಾತ್ಮನನ್ನು ಪ್ರಾರ್ಥಿಸಿರಿ.

ಮ. ಹೂ.

ಚಳವಳವೆಂದರೆ---?

ಸ್ಪೃಶ್ಯತೆಯ ಪ್ರಗತಿ ಮೂಲಕವಾದ ಎಳೆಯುವ ನೆಲೆತದಲ್ಲಿ ಬಳಲಿ ಬೆಂಡಾಗುವುದು ಮಾನವೀಯತೆಯ ಕಾರ್ಯರೂಪೀ ಕರ್ತವ್ಯದ ಭಾರದ ಹೊರೆಯು. ಆದರೆ ಮೇಲೆ ಹೇಳಿದ ಆ ನೆಲೆತವು ಬಲು ಬವಣೆಯನ್ನು ಮಾತ್ರವೇ ತಂದೊಡ್ಡುವುದೆಂದು ಎಂದೂ ಅರ್ಥ ಮಾಡಬಾರದು; ಮತ್ತೇನು? ಒಮ್ಮೆ ಅದು ಸುಡುವ ಗರಳವನ್ನು ಕಾರಬಹುದು; ಮತ್ತೊಮ್ಮೆ ಸವಿಯಾದ ಅಮೃತ ರಸವನ್ನು ಸರಿಯಾಗಿ ಸುರಿಸಬಹುದು. ಅಂತೂ ಸಾಮಾನ್ಯ ಜನತೆಗೆ ಅರ್ಥವಾಗದ ಯಾವುದೋ ಒಂದು ಅನಿಶ್ಚಿತ ಧೋರಣೆಯಿಂದ ಅದು ಮುಂದುನರಿಯುತ್ತಿದೆ ಎಂಬುದು ಸತ್ಯವೇ. ಹಾಗಾದರೆ, ಕರ್ತವ್ಯದಲ್ಲಿರುವ ಸಮತೆಯ ಸಾಮರಸ್ಯದಿಂದ ಸಿಹಿಯಾದ ಸವಿಯನ್ನುತವೂ, ವಿಷಮತೆಯ ವೈರಸ್ಯದಿಂದ ವಿಷಮಯವಾದ ಫಲದ್ರೂಪವೂ—ಕೂನೆಗೆ—ಬಂದೊದಗಬಹುದೆಂಬುದನ್ನು ಯಾರೂ ಮರೆಯಬಾರದು.

ಇನ್ನೀಗ ನಾವು ಹೇಳಹೋಗುವುದು ಚಳವಳಿದ ಕುರಿತು ಮಾತುಗಳನ್ನು. ಹೀಗಿರುವಾಗ ಈ ಸಂದರ್ಭದಲ್ಲಿ ಇದಕ್ಕೆ 'ಚಳವಳಿಕ್ಷ' ಸಿದ್ಧಿಯು ಹೇಗೆ ಸಾಧ್ಯವಾಯತೆಂಬುದನ್ನು ವಿವೇಚಿಸುವುದು ಅಪ್ರಸ್ತುತವಾಗಲಿ, ಅಸಂಗತವಾಗಲಿ ಆಗಲಾರದು, ಆದರೆ—ಈಗಿನ ಕಾಲದಲ್ಲಿ ಚಳವಳಿವೆಂದ ಕೂಡಲೇ ತಿಳಿಯುವುದು ಎಲ್ಲರಿಗೂ ಅದರರ್ಥ. ಆ ಮೂಲಮಂತ್ರದ ಪವಿತ್ರ ಹೆಸರಿನಲ್ಲಿ ಕೆಂಂದನ್ನುಂಟುಮಾಡುವ, ಅಸಹ್ಯ ವೃತ್ತಿಯ ಅನರ್ಥ ಪರಂಪರೆಯ ಕಾರ್ಯಭೋರಣವೂ ಕೂಡ ಅವರ ಮನೋರಾಜ್ಯದ ಭ್ರಾಮಕ ಕಲ್ಪನೆಗಳ ತಳಹದಿಯಲ್ಲಿ ಸ್ಥಿರವಾಗಿ ನೆಲೆಯೂರಿ ಭದ್ರುವುದೀಗ, ತತ್‌ಕ್ಷಣದಲ್ಲಿ ಕುರುಡು ನಂಬಿಕೆಯ ಬರಡು ಜನರು ಭರದಿಂದ ಮುಂದೊತ್ತುತ್ತಾ, ಚಳವಳಿವೆಂಬ ಹೆಸರಿನಲ್ಲಿರುವ ಪವಿತ್ರ ಹಾಗೂ ಪ್ರೇಮಲ ಸೃಭಾವದಸ್ನಿಗ್ಧವಾತಾವರಣದ ನಿಶ್ಚಿತವಾದ ಜ್ಞಾನಾಂಶದ ತಿಳಿವಿಲ್ಲದಿರುವುದೇ ಇದಕ್ಕೆ ಮೂಲ ಕಾರಣವಾಗಿದೆ. ಚಳವಳಿವೆಂದರೇನು?—ಸಾಮಾನ್ಯವಾಗಿ ಕ್ರಾಂತಿ (Revolution) ಎಂದು ಅರ್ಥ ಸೂಡಬಹುದಲ್ಲವೆ? ಆದರೆ ಕ್ರಾಂತಿಯು ಚಳವಳಿದ ಸಂಪೂರ್ಣಾರ್ಥವನ್ನು ಕೊಡಬಹುದೆಂದು ನಮ್ಮ ಸತ್ಪಸಂಕಲ್ಪನಿಲ್ಲ; ಏಕೆಂದರೆ, ಕ್ರಾಂತಿಯು—ಉತ್ಕ್ರಾಂತಿಯಾಗಿ—ಹಬ್ಬಿ ಸ್ಥೈರ್ಯದ ಭದ್ರ ಕವಚವನ್ನೊಡೆದು, ಅಶಾಂತತೆಯ ಮಾಂತ್ರಿಕ ಮಾಟವನ್ನುಂಟುಮಾಡಬಹುದಾಗಿದೆ. ಚಳವಳಿವಾದರೆ ಅಂತಿಲ್ಲ; ಅದರಲ್ಲಿ ಅಶಾಂತತೆಯ ಮಾತಿಲ್ಲ; ಒಮ್ಮೆ ನನ್ನ ಮನೋರಾಜ್ಯದಲ್ಲಿ ಅಶಾಂತತೆಯ ಮಬ್ಬು ಸ್ವಲ್ಪ ಸಾಮ್ರಾಜ್ಯದಂತೆ ಕನವರಿಸಿದರೂ, ಸತ್ಯ—ಅಹಿಂಸೆಗಳಜಿತ್—ಸತ್ ಪ್ರಕಾಶಗಳು ಬೆಳಗಲು ಏಕನಾತ್ರ ಸುಗಮ ಸಾಧ್ಯ ಪವಿತ್ರ ಮಾರ್ಗದ ನೂಲರೂಪವು ಕಾಣಿರಿದು

ಹೀಗೆಂದರೆ ಏನೆಂದು ಹೇಳಿದ ಹಾಗಾಯಿತು. ಚಳವಳಿವು ಕ್ರಾಂತಿಯೂಲಕವಲ್ಲ ವೆಂದಿಪ್ಪೆ ಹಾಗಾದರೆ ಶಾಂತಿಮೂಲಕವೆನ್ನಲೆ? ಈ ಅಭಿಪ್ರಾಯವೂ ಚಿಂತ್ಯವಾಗಿದೆ. ಶಾಂತಿ ಮೂಲಕ ಚಳವಳಿವೆಂದ ಮಾತ್ರಕ್ಕೆ ನಿಶ್ಚಿತಾಭಿಪ್ರಾಯವು ದೊರಕದ ಹಾಗಾಗಲಿಲ್ಲ ಏಕೆಂದರೆ ಶಾಂತಿಯು ಶಮಕ್ಕೆ ನೂಲವು; ದಮದಾಂತಿಯನ್ನು ಹಿಮ್ಮೆಟ್ಟಿ, ಶಮದ ಶಾಂತಿಯು ಮುನ್ನಡೆಯುವುದಾಗಿದೆ; ಶಾಂತಿಯೇ

ಬೇಕು? ಹೊಸ ನಮೂನೆಯ ಒಂದು ವಸ್ತುವೂ ನನಗೆ ಬರುವುದಿಲ್ಲ. ಪತ್ರಿಕೆಗಳಲ್ಲಿ ಹುಡುಕಿ ನೋಡುವಾ ಎಂದರೆ ಒಂದೂ ನನ್ನಲ್ಲಿಲ್ಲ

ಓದುಗಾರರೇ ನನ್ನ ಕತೆಯು ಎಲ್ಲಿಯೋ ಮಾಯವಾಗಿ ಕವಿತೆಯ ರೂಪವನ್ನು ತಾಳಿ, ಕೂಡಲೇ ನಶಿಸಿಹೋಗುವುದೆಂದು ನೆನಸುವಿರಾ' ನೋಡಿ. ನಿಮ್ಮನ್ನು ಕೈಪ್ಪಿಗೊಳಿಸುವ ಒಂದು ಕತೆಯನ್ನೇ ಬರೆದುಬಿಡುವೆನು. ನನ್ನ ಕತೆಯೆಂದು ತಿರಸ್ಕರಿಸಬೇಡಿರಿ. ನನ್ನ ಹೆಸರು ನಿಮಗೆ ತಿಳಿದರೆ ನೀವು ಈ ಕತೆಯನ್ನು ಕಣ್ಣೆತ್ತಿ ಸಹಾ ನೋಡುವವರಲ್ಲ.—

ಒಂದು ಸಾಮಾಜಿಕ ಕಾದಂಬರಿಯನ್ನು ಬರೆಯುವುದೆಂದು ನಿರ್ಧರಿಸಿದ್ದೇ ತಡ ಲೇಖನಿಯೂ 'ಮೈಲ್ ಸ್ಟೀಡಿ'ನಲ್ಲಿ ಮುಂದು ವರಿಯಿತು.

'ಶಾಮರಾಯರೇನೂ ತೀರಾ ಬಡವನಲ್ಲ ಅವರು ಕಷ್ಟಪಟ್ಟರೆ ತನ್ನ ಜಮೀನನ್ನು ಸಾಗುವಳಿ ಮಾಡಿ ಕುಟುಂಬ ಪೋಷಣೆಯನ್ನು ಮಾಡಬಲ್ಲರು. ರಮಾನಾಥ, ಸುರಸೆ ಎಂಬಿಬ್ಬರೇ ಅವರ ಪ್ರೀತಿಯ ಮಕ್ಕಳಾಗಿದ್ದರು. ಸುರಸೆಯು ಚಿಲುವೆಯಾದ ಹುಡುಗಿ. ಮದ್ದುವೆಯಾಗುವ ವ್ಯಾಯವು ದಾಟಿ ಹೋದರೂ ಶಾರದಾ ಕಾನೂನಿಗೆ ಹೆದರಿ ಅವಳ ವಿವಾಹವು ಇನ್ನೂ ಆಗಿರುವುದಿಲ್ಲ. ತಂದೆಯು ಎಷ್ಟು ಹುಡುಕಿದರೂ ತಕ್ಕ ವರನೂ ಸಿಗಲಿಲ್ಲ.

ಅಮಾವಾಸ್ಯೆಯ ದಿನ ರಾತ್ರಿ. ಅದರಲ್ಲೂ ಮಳೆಗಾಲದ ದಿನ. ಹೆನ್ನೊಂದು ಗಂಟೆಯಾಗಿರಬಹುದು. ಈ ಸಮಯದಲ್ಲಿ ಎಂಥಾ ಧೀರನೂ ಮನೆ ಬಿಟ್ಟು ಹೊರಡಲಾರನು. ಹದಿಮೂರು ವರ್ಷದ ಸುರಸೆಯೊಬ್ಬಳೇ ಮನೆಯ ಮುಂದಿನ ಮೆಟ್ಟಲುಗಳನ್ನು ಇಳಿದು ರಸ್ತೆಗೆ ಕಾಲಿಟ್ಟಳು. ಅಲ್ಲಿಯೇ ಸ್ವಲ್ಪ ಹೊತ್ತು ಅರ್ಧ ಮನಸ್ಸಿನಲ್ಲಿ ಏನೇನೊ ನಿರ್ಧರಿಸಿ ಮುಂದುವರಿದು ಹೋದಳು. ತನ್ನನ್ನು ಯಾರಾದರೂ ನೋಡುವರೋ ಎಂದು ಒಮ್ಮೆಮ್ಮೆ ಆತ್ಕಿತ್ತ ನೋಡಿ ಭರದಿಂದ ಸಾಗುವಳು. ಸ್ವಲ್ಪ ಹೊತ್ತು ದಾಟುವಾಗ ಸುರಸೆಯು ನಿಬಿಡವಾದ ಆ ಕಗ್ಗತ್ತಲೆಯಲ್ಲಿ ಮಾಯವಾದಳು.

ನನ್ನ ಕತೆಯು ಜೆನ್ನಾಗಿಯೇ ಇದೆ. ಲೇಖಕನೆಂದು ಬರೆಯುವಾಗ ನನಗೆ ನಾಮನಿರ್ದೇಶವು ಹೇಗಿರಬೇಕು ಇಷ್ಟವಾದ ಹೆಸರುಗಳಲ್ಲಿ ಹತ್ತಿಪ್ಪತ್ತನ್ನು ಮನಸ್ಸಿಗೆ ತಂದುಕೊಂಡು ಇವುಗಳಲ್ಲಿ ಯಾವದನ್ನು ಆರಿಸಬೇಕು ಒಂದು ವೇಳೆ ಈ ಹೆಸರುಗಳನ್ನು ಯಾರಾದರೂ 'ರಿಜರ್ವ್' ಮಾಡಿದ್ದರೆ ನನ್ನ ಗತಿಯೇನು?" ಎಂದು ಚಿಂತಿಸಿ ಆ ನಾಮಗಳನ್ನೆಲ್ಲಾ ಬಿಟ್ಟು ಯಾರೂ ತಿಳಿದಿರಲಿಕ್ಕಿಲ್ಲ. ಇಂಥಾ ಅಂಕಿತವನ್ನು ಎಂದು ಒಂದನ್ನು ನಿಸ್ಪದನ್ನಾಗಿ ಮಾಡಿಕೊಂಡೆ ಹಿಂದೆ ಆರಂಭಿಸಿದ ಕತೆಯನ್ನು ಯಾವ ರೀತಿ ಮುಂದುವರಿಸಿ ಕೊನೆಗಾಣಿಸುವುದೆಂದು ಆಲೋಚಿಸುತ್ತಿರುವಾಗ ಇಂಪಾದ ಗಾಯನವು ನಮ್ಮ ಮನೆಯ ಒಂದು ಮೂಲೆಯಿಂದ ಎದ್ದು ಬಂತು. ಇನ್ನು ಸ್ವಲ್ಪ ಹೊತ್ತು ಕಳೆದ ಮೇಲೆ ಕತೆ ಬರೆಯುವುದೆಂದು ನೆನಸಿ, ಲೇಖನಿಯನ್ನೂ ಪುಸ್ತಕವನ್ನೂ ಅಲ್ಲಿ ಬಿಸುಟು ಗಾನವು ಹೊರಟ ದಿಕ್ಕಿಗೆ ಮೋರೆ ಮಾಡಿ ಹೋದೆ.

ದೇವರು ಮನಸ್ಸು ಮಾಡಿದರೆ ಇನ್ನೊಮ್ಮೆ ಹಿಡಿದ ಕೆಲಸವನ್ನು ಮುಗಿಸಿ ಸಂತೋಷಗೊಳಿಸುವೆನು. ಆ ವರೆಗೆ ಕಾದು ಕುಳಿತು ಕೊಂಡಿರಿ ಬಹಳ ಉಪಕಾರವಾದೀತು ಪಾತಕಿ ಬಹಾಶಯರೇ.

ಆ. ಸೋ. ದಾಸ್

ಪ್ರತೀಕಾರ

ವೇಣುಗೋಪಾಲನು ವಿದ್ಯಾರ್ಥಿಗಳಲ್ಲಿ ಅಗ್ರಗಣ್ಯನು; ಯಾವಾಗಲೂ ಕಷ್ಟಪಟ್ಟು ಕಲಿಯುವನು. ತನ್ನ ಕರಗೆಕೆಯಲ್ಲಿ ಸ್ಥಿರವಿದ್ದರೂ, ಮನೋವಿಕಾರಗಳಿಗೊಳಗಾಗಲಿಲ್ಲ.

ವಿದ್ಯಾರ್ಥಿನಿಯರು ಮುರಳಿಯನ್ನು ತನ್ನ ನಾಯಕಿಯನ್ನಾಗಿ ಮಾಡಿದ್ದರು. ಈಕೆಯು ಒಬ್ಬೆಯಾದರೂ, ವೇಣು ಗೋಪಾಲನಿಂದ ಶ್ರೇಷ್ಠಳೆನಿಸಿಕೊಳ್ಳಬೇಕೆಂದು ಬಹಳವಾಗಿ ಪ್ರಯತ್ನಿಸುತ್ತಿದ್ದಳು; ವೇಣು ಗೋಪಾಲನು ಬಿಡನು.

ಅದೇಕೋ, ವೇಣು ಗೋಪಾಲನನ್ನು ಕಂಡ ಕೂಡಲೇ ಮುರಳಿಯು ನಸು ನಗುತಿದ್ದಳು. ಆದರೆ ಅವನು ಮುಖ ತಿರುಗಿಸುವನು. ಅವನು ಈ ತನಕ ಅವಳೊಡನೆ ಮಾತಾಡಲೇ ಇಲ್ಲ.

ಉಪಾಧ್ಯಾಯರು ಬರುವ ಹೊತ್ತಾಗಿದ್ದಿಲ್ಲ. ಎಲ್ಲಾ ವಿದ್ಯಾರ್ಥಿನಿಯರು ತಂತಮ್ಮ ಸ್ಥಳಗಳಲ್ಲಿ ಕುಳಿತಿದ್ದರು. ವೇಣುವು ಉಪಾಧ್ಯಾಯರ ಸ್ಥಾನಕ್ಕೆ ಬಂದು ಮೇಜಿನ ಬಳಿ ನಿಂತನು. ಬಳಿಕ, "ನಾನು ನನಗೆ ಬರೆದ ಒಬ್ಬಳ ಪ್ರೇಮ ಪತ್ರವನ್ನು ಹರಿದು ಬೆಂಕಿ ಹಚ್ಚುವೆನು. ಇನ್ನು ಮುಂದೆ, ಇದನ್ನು ಎಲ್ಲರೂ ತಿಳಿದಿರಲಿ!" ಎಂದು ಜೇಬಿನಿಂದ ತನ್ನ ಕೈಯಲಿದ್ದ ಪತ್ರವೊಂದನ್ನು ಹರಿದು ಚೂರು ಮಾಡಿದನು; ಮೇಜಿನ ಮೇಲಿರಿಸಿ ಬೆಂಕಿ ಹಚ್ಚಿಸಿದನು. ವಿದ್ಯಾರ್ಥಿನಿಯರು ಏನೋ ತಮ್ಮೊಳಗೇ ಮಾತನಾಡಿಕೊಳ್ಳುತಿದ್ದರು.

ಉಪಾಧ್ಯಾಯರು ಬಂದರು. ಮೇಜಿನ ಮೇಲೆ ತುಂಬಾ ಬೂದಿ! ಇದೇನೆಂದು ಕೇಳಿದರು. ಒಬ್ಬೊಬ್ಬನಿಂದ ಒಂದೊಂದು ತಬ್ಬಿದಂತೆ ಇಡೀ ಕಥೆಯು ಹೊರಬಿದ್ದಿತು. ಉಪಾಧ್ಯಾಯರು ಯಾರ ಪತ್ರವೆಂದು ವೇಣುವನ್ನು ಕೇಳಿದರು. ಉತ್ತರವಾಗಿ "ಕ್ಷಮಿಸಿ ಬೇಕೆ"ಂದು ಮಾತ್ರ ಕೇಳಿಸಿತು. ಮುರಳಿಯು ಕಣ್ಣಿಲ್ಲಿ ಬೆಂಕಿಯನ್ನು ಕಾರುತಿದ್ದಳು.

ಒಂದು ತಿಂಗಳೇನೊ ವೇಣು ಗೋಪಾಲನ ಹೊಗಳಿಕೆಯಲ್ಲೇ ಕಳೆಯಿತು. ಕೂಡಲೇ ವಿಷಾದವು ತಲೆದೋರಿತ್ತು. ನ್ಯಾಯಶ್ಥಾನದಲ್ಲಿ ದಾವೆಯು ಮಾಡಲ್ಪಟ್ಟಿತು.

ವಿಚಾರಣೆಯ ದಿನವು ಸನಿಸಾಪಿಸಿತ. ಇಡೀ ಶಾಲೆಯಲ್ಲಿ ಇದೇ ಸಂಗತಿಯು ತುಂಬಿ ನಲಿದಾಡುತ್ತಿತ್ತು. ವೇಣು ಗೋಪಾಲನೊಡನೆ ಈ ಸಂಗತಿಯನ್ನು ಮಾತಾಡಿದರೆ, ಅವನು ಸಿಟ್ಟಿನಿಂದ ಬೆಂಕಿಯಾಗುತಿದ್ದನು. ಏಕೆಂಬುದು ಯಾರಿಗೂ ಗೊತ್ತಿಲ್ಲ.

ನ್ಯಾಯಸ್ಥಾನದಲ್ಲಿ ವೇಣು ಗೋಪಾಲನು ಗೂಡಿನ ಒಳಗೆ ನಿಂತಿರುವನು. ನ್ಯಾಯಾಧಿಪತಿಯ ಪ್ರತಿ ಪ್ರಶ್ನೆಗೂ ಒಂದೇ ಉತ್ತರ, "ನಾನು ಯಾವ ನಿಂದ್ಯ ಕೆಲಸವನ್ನೂ ಈ ತನಕ ಮಾಡಿಲ್ಲ". ನ್ಯಾಯಾಧೀಶನು ಬೇಸತ್ತನು. ಕಡೆಗೆ "ತೀರ್ಪನ್ನು ನಾಳೆ ಕೊಡಿಸುವೆನೆ"ಂದನು.

ಶನಿವಾರವಾದುದರಿಂದ ಶಾಲೆಗೆ ರಜೆ. ವಿದ್ಯಾರ್ಥಿಗಳೆಲ್ಲರೂ ನೆರೆದಿದ್ದರು. ತೀರ್ಪು ಓದಲಾಯಿತು, ಅದರಲ್ಲಿ

"ಈ ಕೈದಿಯು ನಿಜವಾಗಿಯೂ ಮುರಲಿ ಎಂಬವಳೊಡನೆ ಅಕ್ರಮವಾಗಿ ನಡೆದಿರುವಂತೆ ತೋರುತ್ತದೆ. ಎಷ್ಟೋ ಕಾರಣಗಳು ಇದನ್ನೇ ಸಮರ್ಥಿಸುತ್ತಿವೆ. ಆದುದರಿಂದ ಇವನಿಗೆ ಒಂದು ತಿಂಗಳ ಸಜೆಯನ್ನು ವಿಧಿಸಿರುವೆನು (ವಿದ್ಯಾರ್ಥಿಯಾದುದರಿಂದ) ಸಜೆಯು ಬೇಡವೆಂದಲ್ಲಿ ಒಂದು ನೂರು ರೂಪಾಯಿ ದಂಡ ತೆರಬೇಕು," ಎಂದಿತ್ತು.

ಗೋಪಾಲನು ಮುಂದಿರಿದು ಬಂದನು. ಮುಖವು ಕೆಂಪಾಗಿತ್ತು. ಬಂದು ನ್ಯಾಯಾಧೀಶನ ಮುಂದೆ ನಿಂತುಕೊಂಡನು. ಬಳಿಕ ಗಂಭೀರ, ಕಠೋರ ನುಡಿಯಿಂದ ಹೇಳಿದನು.

"ನಾನು ಅಪಾದಿತನು. ನನ್ನನ್ನು ಎಲ್ಲರೂ "ಸತ್ಯನಾದ ಬಂದಿ" ಎಂದು ಮುಂದೆ ತಿಳಿಯಬಹುದು. ನನ್ನ ಪವಿತ್ರ ಹೆಸರಿಗೆ. ಪವಿತ್ರ ಕುಲಕ್ಕೆ, ಪವಿತ್ರ ಹಿಂದೂಸ್ಥಾನಕ್ಕೆ, ಅಪಕೀರ್ತಿಯನ್ನು ತರುವ ಕೆಲಸವು ನನ್ನಿಂದ ಎಂದೂ ಆಗದು. ಈಗ ಪ್ರಮಾಣ ಮಾಡಿ ಹೇಳುತ್ತೇನೆ; ನಾನು ಈ ಕೆಲಸವನ್ನು ಮಾಡಿಲ್ಲ ಆದರು ನ್ಯಾಯಾಧೀಶರ ಆಜ್ಞೆಯಂತೆ ಒಂದು ತಿಂಗಳುಗಳ ಕಾಲ ಕಾರಾಗೃಹದಲ್ಲಿ ಕುಳಿತು ಕೊಳ್ಳುವೆನು. ಆದರೆ . . . (ಸಿಟ್ಟಿನ ಭರದಲ್ಲಿ ಮಾತು ಅಸ್ಪಷ್ಟ) ಪರಮ ಪೂಜ್ಯ ಭರತ ಮಾತೆಯ ಋದರಲ್ಲಿ ಹುಟ್ಟಿದ್ದ ನಾನು ನನ್ನ ಪ್ರತಿಜ್ಞೆಯನ್ನು ಪೂರೈಸುವೆನು. ಕೇಸರಿ! ನಾನು ಕಾರಾಗೃಹದಿಂದ ಹೊರ ಬಿದ್ದ ಕೂಡಲೇ, ಪ್ರತೀಕಾರವನ್ನು ಮಾಡುವೆನು ಎಂದನು.

ಎಲ್ಲರೂ ಡಂಗು ಬಡಿದು ಕುಳಿತರು. ವೇಣು ಗೋಪಾಲನು ನೆರೆ ಮನೆಯಲ್ಲಿ ಮರೆಯಾದನು.

ಆ ರಾತ್ರಿಯಲ್ಲಿ ನ್ಯಾಯಾಧೀಶನು ತನ್ನ ಮನೆಯ ಕೋಣೆಯಲ್ಲಿ ಏನೇನೊ ಆಲೋಚಿಸುತ್ತಾ ಕುಳಿತಿದ್ದನು. ಆರೋ ಒಳಗೆ ಬಂದಂತಾಗಲು ತಿರುಗಿ ನೋಡಿದನು. ವೇಣು ಗೋಪಾಲನ ಭಯಂಕರ ಮೂರ್ತಿಯು ಕಂಡಿತು. "ಏಕೆ . . ಬಂದೆ?" ಎಂದು ಉಬ್ಬಿದ ಕಂಠದಿಂದ ಕೇಳಿದನು. ವೇಣು ಗೋಪಾಲನು "ನೀನು ನ್ಯಾಯಾಧೀಶರೆಂದು ಏನಾದರೂ ಬರೆದರೆ, ದೇವರು ಸಂತೋಷಪಡನು. ನನ್ನ ಕಪ್ಪು ನಿನ್ನ ಮನಸ್ಸಿಗೆ ನಿಷ್ಕಾರಣವೆಂದು ತೋರದಿರಬಹುದು. ಆದರೆ ನಾನು ಸತ್ಯ ಸಂಗತಿಯನ್ನು ಹೇಳ್ಲ; ಹೇಳುವುದೂ ಇಲ್ಲ. ಈಗ ನಾನು ನಿನಗೆ ಬುದ್ಧಿಗಲಿಸಲು ಬಂದಿರುವೆನು. ನಾನು ಕಪ್ಪಿಕಸ್ಥನಲ್ಲ. ಇನ್ನು ಮುಂದಾದರೂ ಅಂತಹ ದುಷ್ಟ ಕೆಲಸವು ನನ್ನಿಂದ ಎಂದೂ ಆಗಲಾರದು. ನೀನು ನ್ಯಾಯಾಧೀಶನಾಗಿ ಹೀಗೆ ಮಾಡಿದುದು ನಿನ್ನ ನುಟ್ಟಿಗೆ ಸಮರ್ಪಕವೆಂದು ತೋರಬಹುದು. ನಿನ್ನ ಉಪಾಧ್ಯಾಯರು ಒಂದು ವೇಳೆ ಈ ವಿಚಾರಣೆಯಲ್ಲಿ ಕೈ ಹಾಕಿದ್ದರೆ, . . .

ನಾನು ನಿನ್ನನ್ನು ಅಂತ್ಯಗೊಳಿಸಬೇಕೆಂದು ಬಂದಿರುವೆನು. ಆದರೆ, ಬೇಡ ಈ ಸಾರಿ ನಿನ್ನನ್ನು ಸುಮ್ಮನೆ ಬಿಡುವೆನು. ಇನ್ನು ಮುಂದೆ, ಇಂತಹ ಕೆಲಸವನ್ನು "ಮಾಡಿ, ಎಲ್ಲರಿಂದಲೂ ತಿರಸ್ಕೃತನಾಗಬೇಡ. ಇದೇ ನನ್ನ ಕೊನೆಯ ಮಾತು.-"

ಅಲ್ಲಿಂದ ಅವನು ಮುರಲಿಯ ಮನೆಗೆ ಬಂದನು. ಆಗ ಅವಳು ಪರೀಕ್ಷೆಯ ಸಿದ್ಧತೆಯಲ್ಲಿದ್ದಳು. ವೇಣುಗೋಪಾಲನು ಅವಳಿರುವ ಕೋಣೆಗೆ ಹೋದನು. ಅವಳ ಸರ್ವಾಂಗವೂ ನಡುಗ ಲಾರಂಭಿಸಿತು. ಅವನ ಕೈಯಲ್ಲಿದ್ದ ಒಂದು ಚೂರಿಯನ್ನು ದಿಟ್ಟಿಸಿ ನೋಡಲಾರಂಭಿಸಿದಳು. ಬಾಯಿಯಿಂದ ಮಾತು ಹೊರಡಲಿಲ್ಲ. ವೇಣುವೂ ಸುಮ್ಮನಿದ್ದನು.

"ಇದು ನನ್ನ ಪ್ರಥಮದ ನ್ಯಾತ. ನಿನ್ನೊಡನೆ ಈ ತನಕ ಮಾತಾಡದಿದ್ದರೂ ನಾನು ನಿನ್ನಲ್ಲಿ ಆಕ್ರಮವಾಗಿ ನಡೆದೆನೆಂದು ನೀನಾವ ದುಃಖದಿಂದ ಹೇಳಿದೆ? ಸ್ತ್ರೀಯರಿಗೆ ಪವಿತ್ರವಾದ ಪಾತಿವ್ರತ್ಯವು ನಿನ್ನಲ್ಲಿದ್ದರೆ, ನೀನು ಈ ರೀತಿ ಎಂದೂ ಆಚರಿಸುತ್ತಿದ್ದಿಲ್ಲ. ನಿನ್ನ ಪ್ರೇಮ ಪತ್ರವನ್ನು ಕಂಡು ನಾನೂ ಅಹುಳ ಸಂತೋಷಪಟ್ಟಿದ್ದೆನು. ಆದರೆ, . . . " ಮುಂದೆ ಮಾತಿಲ್ಲ.

"ಆದರೇನು?" ಎಂದಳು ಮುರಲಿ.

"ನನ್ನ ಪ್ರತಿಜ್ಞೆಯನ್ನು ನಿರವೇರಿಸಲು ಬಂದಿರುವೆನು".

"ಇಲ್ಲ; ನೀವು ಅಪ್ಪು ಕ್ಯೂರರಲ್ಲ; ನಿಮ್ಮಲ್ಲಿ ಲಂತಹ ಬುದ್ಧಿಯು ಹುಟ್ಟಲಿಕ್ಕಿಲ್ಲ. ನನ್ನನ್ನು ಹೆದರಿಸಲು ಹೀಗಿದಿರಲ್ಲವೆ?"

"ಮುಚ್ಚು ಬಾಯಿ. ಸ್ತ್ರೀಯರ ಕೊಂಕು ಬುದ್ಧಿಯು ನಿನ್ನನ್ನು ಎಂದು ಸೊಂಕಿತೋ ನಾನರಿಯೆ. ನಾನು ನನ್ನ ಪ್ರತಿಜ್ಞೆಯನ್ನು ತೀರಿಸದೆ, ಉಳಿಯೆನು. ನಾನು ನಿನ್ನನ್ನು ಸಂಹರಿಸಬೇಕೆಂದು ಬಂದಿರುವೆನು. ಆದರೆ ಈ ದಿನ ನಾನು ಬೇರೆ ಕೆಲಸವನ್ನು ಮಾಡಿ ಬಳಲಿರುವೆನು. ಆದುದರಿಂದ ಇನ್ನೊಮ್ಮೆ ಬರುವೆನು." ವೇಣು ಗೋಪಾಲನು ಮರೆಯಾದನು.

ಮುರಲಿಗೆ ರಾತ್ರೆ ಸರಿಯಾಗಿ ನಿದ್ದೆಯಿಲ್ಲ.

ಕೆಲವು ದಿನಗಳು ಕಳೆದುವು. ಒಮಾರು ಮಧ್ಯ ರಾತ್ರೆಯು ಸನುಯಕ್ಕೆ ವೇಣು ಗೋಪಾಲನು ಬಾಗಿಲನ್ನು ತಟ್ಟಿದನು. ಮುರಲಿಯು ಒಂದು ಬಾಗಿಲನ್ನು ಕೆರೆದಳು. (ಅವಳು ನಿದ್ದೆಮಾಡಿಲ್ಲ) ಅವಳ ಕೋಣೆಯಲ್ಲಿ ದೀಪವು ಇನ್ನೂ ಉರಿದಿತ್ತು. ಆ ಮಸಕು ಬೆಳಕಿನಲ್ಲಿ ಗೋಪಾಲನ ಚೂರಿಯು ಒಮ್ಮೆ ಹೊಳೆಯಿತು. ಮುರಲಿಯು ಚಿಕಿತಳಾದಳು.

"ಈಗ ನಾನು ಪ್ರತೀಕಾರವನ್ನು ಮಾಡಲು ಬಂದಿರುವೆನು, ಸಿದ್ಧಳಾಗು."' ಎಂದು ನಿಶ್ಯಬ್ದ ರಾತ್ರೆಯಲ್ಲಿ ಎಲ್ಲಿಂದಲೋ ಹೊರಟು ಬಂದಂತೆ ಕೇಳಿಸಿತು! ಪುನಃ ನಿಶ್ಯಬ್ದ!

"ನನ್ನನ್ನು ನಿಷ್ಕಾರಣವಾಗಿ ಕಾರಾಗಾರದಲ್ಲಿ ಕೊಳೆಯುವಂತೆ ಮಾಡಿದೆಯಲ್ಲಾ! ನಾನೇನು ಈ ತನಕ ದೂರಿದ್ದೇನೇ? ನಿನ್ನ ಅಂದಿನ

ಪತ್ರವನ್ನು ನಾನು ಭದ್ರವಾಗಿಟ್ಟಿರುವೆನೆಂಬುದು ನಿನಗೆ ತಿಳಿಯುವುದೆಂತು? ಅಂದು ಶಾಲೆಯಲ್ಲಿ ನಾನು ಹೊನ್ನೊಂದು ಪತ್ರವನ್ನು ಹರಿದು, ಜನರಿಗೆ ನಸ್ಸಲ್ಲಿ ಸಂಖೆಗೆಯನ್ನು ಹುಟ್ಟಿಸಿರುವೆನು. ಅಲ್ಲದೆ ಬೇರೆಯೂ ಇಲ್ಲವೆಂಬುದನ್ನು ನಿನ್ನಂತಹ ಪ್ರಮದೆಯರು ತಿಳಿಯುವ ಬಗೆಯಿದೆಯೇ? ನಿನ್ನನ್ನು ಪ್ರೀತಿಸಿದೆನು; ಮದುವೆಯಾಗಬೇಕೆಂದಿದ್ದೆನು. ಆದರೆ ನೀನು ನ್ಯಾಯಸ್ಥಾನಕ್ಕೆ ನನ್ನನ್ನು ಬರ ಮಾಡಿದ ಕೂಡಲೇ, ನಿನ್ನನ್ನು ಎಂದೂ ವಿವಾಹವಾಗೆನೆಂದು ದೃಢ ಪ್ರತಿಜ್ಞೆ ಮನ್ನು ಮಾಡಿದ್ದೆನು. ನನ್ನ ನಿಶ್ಚಿತಾರ್ಥದಂತೆ ನಾನೀಗ ನಿನ್ನ ರಕ್ತವನ್ನು ಹೀರಲು ಬಂದಿರುವೆನು, ಏನೆನ್ನುವೆ?"

ವೇಣು ಗೋಪಾಲನು ನಾಟಾಡುತಿದ್ದಂತೆಯೇ ಮುರಲಿಯ ಕಣ್ಣಲ್ಲಿ ನೀರು ಸುರಿಯಲಾರಂಭವಾಯಿತು. "ಕ್ಷಮಿಸು" ಎಂದು ಅಗಾಧ ಗುಹೆಯಿಂದ ಹೊರಟಂತೆ ಶಬ್ದವು ಕೇಳಿಸಿತು. "ಇಲ್ಲ" ಎಂಬುದು ಉತ್ತರ.

ಮುರಲಿಯು ವೇಣು ಗೋಪಾಲನ ಮುಂದೆ ಮೊಣಕಾಲೂರಿ ಕುಳಿತಿದ್ದಳು. ಆದರೆ ಅವನು ಕನ್ನ ಚೂರಿಯನ್ನು ಎತ್ತಿ ಹಿಡಿದಿದ್ದನು. ಅವಳ ಕಣ್ಣಿಂದ ಕಂಬನಿಯು ಸುರಿದು ಅವಳ ಎದೆಯನ್ನು ತೊಯಿಸುತಿತ್ತು. ಪ ತರುಣನೂ, ಕಲ್ಯನಾಗಿ ಬಂದಿದ್ದರೂ, ಒಮ್ಮೆ ಕಣ್ಣೀರನ್ನು ಸುರಿಸಿದನು. ಬಳಿಕ "ನನ್ನ ಪ್ರತಿಜ್ಞೆಯನ್ನು ಪೂರೈಸದೆ ಬಿಡೆನು!" ಎಂದು.

ಮಾತು ಮುಗಿಯುವುದರೊಳಗೆ ಅವಳ ಅಧರವು ಗೋಪಾಲನ ಸ್ವರಲ್ಲಾಯಿತು. ಅವನ ಕತ್ತಿಯು ಕೆಳಗಿತ್ತು. ಪ್ರೇಮದ ಪ್ರತೀಕಾರ.

(ಹಿಂದೀ ಕಥೆಯೊಂದರ ಆಧಾರದಿಂದ)

'ಗೋಪಬಾಲ.'

ಅಸ್ಪೃಶ್ಯತೆ ಅಥವಾ ಷಶ್ಟಾತ್ತಾಪ.

"ಹೊರಡು ಮನೆಯಿಂದ ಈ ಕ್ಷಣ"'
"ಏನಪ್ಪಾ! ಇಷ್ಟು ಬಿರು ನುಡಿ"
"ಯಾರೊಂದಿಗೆ ನಿನ್ನೆ ತಿರುಗಾಡುತಿದ್ದೆ,"'
"ಜಲಗಾರನೊಂದಿಗೆ"'
"ಇಳಿ ಮನೆಯಿಂದ!'
"ಅವನೇನು ವಿಷಕಾರಕ ಜಂತುವೇ?"'
"ನಮ್ಮ ಕುಲಕ್ಕೆ ನೀನು!!'
"ದೀನ ಕುಲಕ್ಕೆ ನೀವು!!!"

ಎಂದು ಬಲವಂತನು ಉತ್ತರವನ್ನೆಸೆದನು, ತಂದೆ ಗೋವಿಂದ ರಾಯನಿಗೆ.

ಗೋವಿಂದ ರಾಯನು ಶುದ್ಧ ಸನಾತನಿಯ ಬ್ರಾಹ್ಮಣನು. ಮಗ ಬಲವಂತನು ಮಾತ್ರ ದೀನರಾದ ಅಸ್ಪೃಶ್ಯರ ಪ್ರಿಯನು. ಇವನೀಗ ಹತ್ತನೆಯ ತರಗತಿಯಲ್ಲಿ ಓದುತ್ತಿರುವನು. ಇವನು ಶಾಲೆಯಲ್ಲಿ ಅಸ್ಪೃಶ್ಯರ ಮಕ್ಕಳಿಗೆ ಅಂಗಿ, ವಸ್ತ್ರ, ಪುಸ್ತಕ, ಲೇಖನಿ, ಹಣಕಾಸು ಮೊದಲಾದುವುಗಳಲ್ಲಿ ತನ್ನಿಂದಾದಷ್ಟು ಸಹಾಯವನ್ನು ಮಾಡುವನು. ಅವರೊಂದಿಗೆ ನಡೆಯುವುದು, ಅವರೊಂದಿಗೆ ಸಂಭಾಷಿಸುವುದು, ಬೇರೆಯವರನ್ನು ಅಸ್ಪೃಶ್ಯರೊಡನೆ ಸಂಪರ್ಕ ಮಾಡುವುದು, ಇವೇ ಮೊದಲಾದುವು ಇವನ ದಿನನಿತ್ಯದ ಕೆಲಸಗಳು. ಇದನ್ನು ಕಂಡು ಗೋವಿಂದ ರಾಯನಿಗೆ ಬಲವಾದ ದುಃಖವಾಗ ಹತ್ತಿತು. ಎಷ್ಟೋ ರೀತಿ ಮಗನನ್ನು ತನ್ನ ದಾರಿಗೆ ತೆರೆಲು, ಪ್ರಯತ್ನ ಮಾಡಿದನು. ಆದರೆ ಅದು ಬಂಡೆಯ ಮೇಲೆ ಬಿದ್ದ ಮಳೆಯಂತಾಯಿತು. ಇಂದು ಗೋವಿಂದ ರಾಯನು ತನ್ನ ಮಗನ ಮೇಲಿನ ಕೋಪವನ್ನು ತಾನು ತಡೆಯು ಲಾರನು.

"ಬಲವಂತಾ! ನಿನಗೆ ಎಷ್ಟೋ ಸಲ ಹೇಳಿದ್ದಾಯಿತು. ನೀನು ಪುಣ್ಯಕುಲದ ಬ್ರಾಹ್ಮಣ. ಪಾಪ ವೃತ್ತಿಯ ಹೊಲೆಯರೊಡನೆ, ಸಹವಾಸ ಬೆಳೆಯಿಸುವುದು ನಿನ್ನ ಕರ್ತವ್ಯವಲ್ಲ. ಇದು ಧರ್ಮಕ್ಕೆ ಹಾನಿ ಎಂದರೆ ಅದನ್ನು ನೀನು ಕೇಳುವವನಲ್ಲ. ನೀನು ಬ್ರಾಹ್ಮಣಕುಲದಲ್ಲಿ ಜನಿಸಿದರೂ, ಅಸ್ಪೃಶ್ಯನಾಗಿರುವನೆಂ. ನನ್ನ ಹೊಟ್ಟೆಯ ಮಗನಾದರೂ, ಹೊಲೆಯರ ಕುಟುಂಬಿಕನು. ಈಗಲೇ ಅತ್ತ ಸರಿ. ಇಷ್ಟರ ವರೆಗೆ ನಿನ್ನನ್ನು ನಾಕಿ ಸಲಹಿದೆನು. ಇನ್ನು ನನ್ನನ್ನು ಸಲಹುವುದು ನಿನ್ನ ಕೈ ಕೆಲಸ. ಈ ದಿನದಲ್ಲಿ ನಿನ್ನನ್ನು ನಾನು ಅಗಲುವುದು ಬಹು ಕಷ್ಟ, ಅಗಲದೆ ಬೇರ್ಕೆ ಉಪಾಯವಿಲ್ಲ. ಧರ್ಮಕ್ಕಿಂತ ಹೆಚ್ಚಿನದು ಮಗನಲ್ಲ. ಇದು ನನ್ನ 'ಹಟ್ಟೆ ಬರಹ್ಮ."

"ಅಪ್ಪಾ! ನೀವು ಇಷ್ಟು ತೋಕಿಸುವುದಕ್ಕೂ, ನನ್ನನ್ನು ದ್ವೇಷಿಸುವುದಕ್ಕೂ ಸ್ಥಳವಿಲ್ಲ. ಸರ್ವರಿಗೂ ದೇವರು ಒಬ್ಬನೇ ಎಂದೆ ಮೇಲೆ ಬಡವರಾದ ಹೊಲೆಯರನ್ನು, ಪ್ರೀತಿಸುವುದರಿಂದ ಅತನು ಸಿಟ್ಟಾಗನು. ಅಲ್ಲದೆ ನನ್ನನ್ನು ನೀವು ಅಗಲಿದರೂ ನಾನೀ ಕೆಲಸವನ್ನು ಬಿಡುವನಲ್ಲ ಮತ್ತು . . .

"ಸಾಕುಮಾಡು ನಿನ್ನ ಧರ್ಮ ವಕ್ತನ. ಇಂದಿನಿಂದ ನೀನು ನನ್ನ ಮಗನಲ್ಲ. ಅಸ್ಪೃಶ್ಯನು. ಇಳಿ ಮನೆಯಿಂದ, ಮರು ಮಾತಿತ್ತ ಬೇಡ."

"ಅಪ್ಪಾ! ಕ್ಷಮಿಸಿರಿ ಒಂದು . . . "

"ಮಾತಿತ್ತ ಬೇಡ ಎನ್ನುತ್ತೀನಲ್ಲಾ! ಶುದ್ಧ ಬ್ರಾಹ್ಮಣ ಕುಲದಲ್ಲಿ ಹುಟ್ಟಿದ್ದಾನೆ, ಕಕ್ಕಸ ಬಳಿಯುವ ಮಾದಿಗರ ಸಂಗಡ ನಡೆಯುತ್ತಾನೆ. ತಂದೆ ತಾಯಿಗೆ ಅಪಕೀರ್ತಿ ತರಲಿಕ್ಕೆ ಹುಟ್ಟಿದ ನಂಜು."

"ಸರಿ ತಾಯಿ ಮೊದಲೇ ಇಲ್ಲ! ತಂದೆ . . ."

* * * * *

ಇಂದು ಗೋವಿಂದ ರಾಯನ ಒಬ್ಬನೇ ಒಬ್ಬ ಮಗನಾದ ಬಲವಂತನು, ತನ್ನ ಮನೆಯಿಂದ ಹೊರ ಹೊರಟನು. ಹೇಗೊ ಹಲವರ ಉದಾರತ್ವಕ್ಕೆ ಕೈ ಜೋಡಿಸಿ ಬಿ. ಎ. ಪಾಸಾದನು. ಈಗ ಬಲವಂತನು ನವ ತರುಣನು. ಇಷ್ಟಾಗಲು ಕಲಿಯುವಿಕೆಗೆ ಇವನು ಇತಿ ಶ್ರೀಯನ್ನಿಟ್ಟು ಒಬ್ಬ ಬಡ ಜಲಗಾರನ ಮಗಳೊಂದಿಗೆ ವಿವಾಹ ಮಾಡಿಕೊಂಡನು. ಇಂದಿನಿಂದ ಅವನು ಅಸ್ಪೃಶ್ಯೋದ್ಧಾರಕ್ಕೆ ಕೈ ಹಚ್ಚಿದನು. 'ದೀನ ಬಂಧು' ಎಂಬ ಉದ್ಗಲ ಪತ್ರಿಕೆಯನ್ನು ತೆರೆದನು. ಇದರ

ಜನರ ಮರಣ!!!

ಪಾಪ! ಸ್ವತಂತ್ರರಾಗಿ! ವರ್ಷಾಸೀತ್ಕ ಸಂಕಷ್ಟ ವೆ

ಒಮ್ಮೆಲೆ ಸಾವಿರಾರು ಜನರು ಭಿಕ್ಷುಕರಾದರಾ!!!

ಮಂಜುಳೂರು ನಗರವನ್ನು ಅಲ್ಲಿಂದ ಸುಮಾರು ಮೂರು ಮೈಲಿ ದೂರದಲ್ಲಿ ಹರಿಯುತ್ತಿರುವ ಮಂಜುಳಾ ನದಿಯು ಸಂಪೂರ್ಣವಾಗಿ ಸುತ್ತುವರಿದಿದೆ. ಸಮುದ್ರ ಕಿನಾರೆಯಲ್ಲಿ ನಗರವಿರುವ ಕಾರಣ ಇದು ಬಿರುಗಾಳಿಯ ಪ್ರಾಬಲ್ಯದಿಂದ ಮುಕ್ತವಾಗಿದೆ. ನಗರದ ಸುತ್ತಮುತ್ತಲಿನ ಪ್ರದೇಶವು ಸಮೃದ್ಧವಾಗಿ ಹಸಿರಿನಿಂದ ಕೂಡಿದ್ದು ಅಲ್ಲಲ್ಲಿ ಸಣ್ಣ ಸಣ್ಣ ಗುಡ್ಡಗಳಿಂದ ಕೂಡಿದೆ. ಮಂಜುಳೂರಿನ ಸುತ್ತಲೂ ಸುಮಾರು ೬೦೦ ಎಕರೆಗೆ ಅಧಿಕವಿಲ್ಲದಂತೆ ಸಣ್ಣ ಸಣ್ಣ ಕೆರೆಗಳಿವೆ. ಮಧ್ಯಮವರ್ಗದವರು ಸಂಸಾರವನ್ನು ಸಾಕುತ್ತಿದ್ದಾರೆ. ವಿಶೇಷವಾದ ಸಮೃದ್ಧಿಯಿಲ್ಲದಿದ್ದರೂ ಸಂಸಾರ ನಿರ್ವಹಣೆಗೆ ಅಧಿಕಾಭಾವವಿಲ್ಲದಂತೆ ಜನರು ಸುಖವಾಗಿ ಜೀವಿಸುತ್ತಿದ್ದರು. ಮಂಜುಳೂರಿನ ಜನಸಂಖ್ಯೆ ೪೦೦೦ ಮೀರಿರಲಿಲ್ಲ. ಇಂಥ ಸಮಯದಲ್ಲಿ ಅಲ್ಲಿಗೆ ಸಮೀಪದಲ್ಲಿ ಒಂದು ಸಣ್ಣ ಕೆರೆಯನ್ನು ಕಟ್ಟಿಸಲು ಸರ್ಕಾರದವರು ನಿರ್ಧರಿಸಿದರು. ಕೆರೆಯ ಕೆಲಸವು ಪ್ರಾರಂಭವಾಗಿ ಸುಮಾರು ಒಂದು ವರ್ಷವಾಯಿತು. ಕೆರೆಯ ಕೆಲಸವು ಮುಗಿಯುವ ಹಂತಕ್ಕೆ ಬಂದಿತ್

ಉಳಿದ ಉಳಿದ ಎಲ್ಲ ಭಾಗಗಳಲ್ಲಿ ನಿಗದಿಪಡಿಸಲಾದ ಬೆಲೆ ಪಡೆದು ಉಡುಪಿಗೆ ಮತ್ತು ಉಳಿದ ಉಳಿದ ಎಲ್ಲ ಕಡೆಯ ಏಜೆಂಟರುಗಳಿಗೆ ಕಮಿಷನ್ ಇದೆ ವಿಷಯವನ್ನರಿಯಲು ಕ್ರಯ 1-8-0

ಮಂಡ್ಯಾಸಿನಲ್ಲಿ ದಿ ಒರಿಯಂಟಲ್ ರಬ್ಬರ್ ಲೆಟ್ಸ್ ರಿಪೇರಿಯವರಿಂದ ಸಿದ್ಧವಾದುದು

ದಕ್ಷಿಣ ಕನ್ನಡ ಜಿಲ್ಲಾ ಸೇಲ್ ಏಜೆಂಟ್ಸ್

ದಿ ಮಂಗಳೂರು ಟ್ರೇಡಿಂಗ್ ಏಸೋಸಿಯೇಷನ್ ಲಿಮಿಟೆಡ್, ರಥಬೀದಿ, ಮಂಗಳೂರು

WANTED.

Four Organisers to organise the work of the South Indian General Assurance Society, Ltd in the following places noted below Capable organisers can expect to have attractive and encouraging terms with sound footing for their future

(1) South Canara (2) Mysore, Hassan and Coorg, (3) Kadur Shimoga Chitaldroog and Tumkur (4) Mangalore, Kolar

For terms and other particulars please apply to—

The Divisional Manager
The South Indian General Assurance Co Ltd
64 3 d Cross Road Srirampur Extn
Malleswaram Post BANGALORE
OR
The Managing Agents,
The S I G A Co Ltd
55 Poonamallee High Road, Kilpauk, MADRAS.

ಮೂರಾಟಕ್ಕಿವೆ! ಮೂರಾಟಕ್ಕಿವೆ!!

ಕಾಫಿ ಪ್ಲಾಂಟರುಗಳಿಗೂ, ಹೋಟೆಲಿನವರಿಗೂ ವೇಕಾಗುವಂತಹ

ಚಕ್ರೋಲ್‌ಗಳು

ಮೂರು ಸೈಜಿನಲ್ಲಿ ತಯಾರಿಸಲ್ಪಟ್ಟು ಮೂರಾಟಕ್ಕೆ ಸಿದ್ಧವಿವೆ.

ರಮಣ ಹೆಗಡೆಯವರಲ್ಲಿ ವಿಚಾರಿಸಿದರೆ ದೊರಕುವುದು

ಮೆನೇಜರ್,
ಲಕ್ಷ್ಮೀ ಫ್ಲಾಕರಿಸ್,
ಭಟ್ಕಳ, ಉತ್ತರ ಕೆನರಾ ಜಿ.

ಕ್ಷಯ, ಕ್ಷೀಣಾದಿಗಳಿಗೆ

ಚೈವನಪ್ರಾಶಾನ ಲೇಹ,

ಪ್ರಸೂತಿ ರೋಗಾದಿಗೆ

ದಶಮೂಲಾರಿಷ್ಟ,

(ಕಷಾಯ ಸ್ವರೂಪ)

ಸಮಸ್ತ ಪಾಕಸಿದ್ಧಗಳಿಗೆ

ಮಹಾನಾರಾಯಣ ತೈಲ,

ಈ ಔಷಧಿಗಳ ಲಭ್ಯವಿರುವ ಸ್ಥಳ,

ಮಂಗಳೂರು ಟ್ರೇಡಿಂಗ್ ಏಸೋಸಿಯೇಷನ್ ಲಿಮಿಟೆಡ್,
ರಥಬೀದಿ, ಮಂಗಳೂರು.



ಕೆಂಪು ಬಣ್ಣದ ಬಾಲ ಕಪ್ಪು ಬಣ್ಣದ ಮೈ ಬಿಳಿಯ ಮುಖ

ಬೆಲೆ ರೂ. 1-0-0

ಕೆ. ಎಂ. ಅಹಮದ್ ಅಂಡ್ ಸನ್ಸ್,
ಮಂಗಳೂರು.

THE SOUTH INDIA
CO-OPERATIVE INSURANCE SOCIETY,
LIMITED, MADRAS.

LOCAL BOARD:—

THE SOUTH CANARA CENTRAL
CO OPERATIVE BANK, LTD. MANGALORE.

Applications are invited for 'Sub Agents, from capable and energetic persons and Co operative Institutions to canvass business on behalf of the Local Board of the Society at Mangalore

FOR TERMS APPLY TO—

The Secretary,
South Canara Central Co-operative
Bank, Ltd KODIALBAIL P O (Mangalore)
SOUTH CANARA

ಮನೋಹರ ಗ್ರಂಥಮಾಲಾ, ಧಾರವಾಡ.

ಕಥೆ, ಕಾದಂಬರಿ ಕಾದಾಂಬರಿಗಳ ಸುಗ್ಗಿ ಬಂದಿದೆ ಮಾರಾಟ ಪ್ರಾರಂಭವಾಗಿದೆ ಅಲ್ಪ ಬೆಲೆಯಲ್ಲಿ ಅಮೂಲ್ಯ ಪುಸ್ತಕಗಳು. ಅಲ್ಪ ಬೆಲೆಗೆ ಅಮೂಲ್ಯ ಪುಸ್ತಕಗಳು. ಅಲ್ಪ ಬೆಲೆಗೆ ಅಮೂಲ್ಯ ಪುಸ್ತಕಗಳು.

ಹೊಸ ಬಂಡಿಯ ಕುಸ್ತಿಯು

ಹುಡುಗನ (ಶ್ರೀಯುತ ಸದಾಶಿವ ಅಪ್ಪಯ್ಯ) ಮತ್ತಿ ಗ್ರಂಥ. ಬರೆದವರು ಆನಂದಕಂದ ಬೆಲೆ ೦-೧೫-೦.

ವಿವರಕ್ಕಾಗಿ ಕುಸ್ತಿಯು—ಶ್ರೀಮಲ್ಲಿಗೆ.

ಕರ್ನಾಟಕದ ಪ್ರಸಿದ್ಧ ಅಧಿಕಾರಿ ಅಧಿಕಾರಿಣಿಯರ ಲೇಖನ ಹೊಂದಿರುವುದು. ಹೊಂದಿರುವುದು ಶ್ರೀಮಲ್ಲಿಗೆ.

ಅಧಿಕಾರಿ. ಮ ಗ ಹೊಸ ಧಾರವಾಡ

ನವಶಕ್ತಿವರ್ಧಿನಿ

ಶಕ್ತಿಕರವು ಮಂಡಲಾಕಾರ ಶಕ್ತಿ ವರ್ಧಕವಾದ

ನವ್ಯ ಔಷಧ ಸಂಯೋಜನೆಯಿಂದ ಕೂಡಿದ

ಅಭಿನವ ಶಕ್ತಿವರ್ಧಕ ಔಷಧ

ಅಭಿನವ

EDITED, PRINTED & PUBLISHED by V. S. KUDVA AT THE SAMAJA Press, Mangalore